ವಚನ ಚಳುವಳಿ ಮತ್ತು ಪರಿಸರ

431-435

ಸಂಶೋಧಕರು

ಭಾಗ್ಯಶ್ರೀ ಶಿವಲಿಂಗಪ್ಪ

ಸ್ನಾತಕೋತ್ತರ ಕನ್ನಡ ಅಧ್ಯಯನ ಹಾಗೂ ಸಂಶೋಧನಾ ಕೇಂದ್ರ
ಕರ್ನಾಟಕ ಕಾಲೇಜು ಆವರಣ ಬೀದರ

ಮಾರ್ಗದರ್ಶಕರು

ಡಾ. ಶಿವಗಂಗಾ ರುಮ್ಮಾ

ಎಂ.ಎ., ಎಂ.ಫಿಲ್, ಪಿಎಚ್.ಡಿ

ಹಿರಿಯ ಶ್ರೇಣಿ ಉಪನ್ಯಾಸಕರು,
ಸ್ನಾತಕೋತ್ತರ ಅಧ್ಯಯನ ಕೇಂದ್ರ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಲಬರ್ಗಾ

435

ಪಿಎಚ್.ಡಿ. ಪದವಿಗಾಗಿ

ಡ ವಿಶ್ವವಿದ್ಯಾಲಯ, ಹಂಪಿ ಯ
ಶೋಧನಾ ಕೇಂದ್ರ ಕರ್ನಾಟಕ ಕಾಲೇಜು ಬೀದರ ಇವರಿಗೆ
ಸಾದರಪಡಿಸಲಿರುವ ಸಂಶೋಧನಾ ಮಹಾಪ್ರಬಂಧ

೨೦೧೧

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬.

435

7879

'ಸಿರಿಗನ್ನಡ' ಗ್ರಂಥಾಲಯ.
ಕನ್ನಡ ವಿಶ್ವವಿದ್ಯಾಲಯ, ಹಂಪಿ

AKSHARA GRANTHALAYA
ACC.NO. 049327

ವಚನ ಚಳುವಳಿ ಮತ್ತು ಪರಿಸರ

ಕನ್ನಡ ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಶೋಧಕರು

ಭಾಗ್ಯಶ್ರೀ ಶಿವಲಿಂಗಪ್ಪ

ಸ್ನಾತಕೋತ್ತರ ಕನ್ನಡ ಅಧ್ಯಯನ ಹಾಗೂ ಸಂಶೋಧನಾ ಕೇಂದ್ರ
ಕರ್ನಾಟಕ ಕಾಲೇಜು ಆವರಣ ಬೀದರ

ಮಾರ್ಗದರ್ಶಕರು

ಡಾ. ಶಿವಗಂಗಾ ರುಮ್ಮಾ

ಎಂ.ಎ., ಎಂ.ಫಿಲ್, ಪಿಎಚ್.ಡಿ
ಸಹ ಪ್ರಾಧ್ಯಾಪಕರು,
ಸ್ನಾತಕೋತ್ತರ ಕನ್ನಡ ಅಧ್ಯಯನ ಕೇಂದ್ರ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಲಬರ್ಗಾ

ಪಿಎಚ್.ಡಿ. ಪದವಿಗಾಗಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ ಯ

ಕನ್ನಡ ಸಂಶೋಧನಾ ಕೇಂದ್ರ ಕರ್ನಾಟಕ ಕಾಲೇಜು ಬೀದರ ಇವರಿಗೆ
ಸಾದರಪಡಿಸಲಿರುವ ಸಂಶೋಧನಾ ಮಹಾಪ್ರಬಂಧ

೨೦೧೧

294.5513

BHA 6

049327

. ಶಿವಗಂಗಾ ರುಮ್ಮಾ
ಎಂ.ಎ., ಎಂ.ಫಿಲ್, ಪಿಎಚ್.ಡಿ
ಶ್ರೇಣಿ ಉಪನ್ಯಾಸಕರು
ಕೋತ್ತರ ಅಧ್ಯಯನ ಕೇಂದ್ರ,
ಾರಿ ಪ್ರಥಮ ದರ್ಜೆ ಕಾಲೇಜು, ಗುಲಬರ್ಗಾ

ಪ್ರಮಾಣ ಪತ್ರ

ಭಾಗ್ಯಶ್ರೀ ಶಿವಲಿಂಗಪ್ಪ ಇವರು ನನ್ನ ಮಾರ್ಗದರ್ಶನದಲ್ಲಿ **"ವಚನ ಚಳುವಳಿ ಮತ್ತು ಪರಿಸರ"** ಈ ವಿಷಯ ಕುರಿತು ಪಿಎಚ್.ಡಿ. ಸಂಶೋಧನಾ ಅಧ್ಯಯನ ಕೈಗೊಂಡಿದ್ದಾರೆ. ಈಗ ಅವರು ಸಿದ್ಧಪಡಿಸಿದ ಸಂಶೋಧನ ಮಹಾಪ್ರಬಂಧವು ನನ್ನ ಮಾರ್ಗದರ್ಶನ ಹಾಗೂ ಅವರ ಪ್ರಮಾಣಿಕ ಸಂಶೋಧನ ಅಧ್ಯಯನದ ಪ್ರತಿಫಲ. ಇದು ಅವರ ಸ್ವತಂತ್ರ ಸಂಶೋಧನಾ ಬರಹವಾಗಿದ್ದು, ಇದರ ಯಾವುದೇ ಭಾಗವೂ ಎಲ್ಲಿಯೂ ಪ್ರಕಟಗೊಂಡಿಲ್ಲ. ಆದ್ದರಿಂದ ಈ ಸಂಶೋಧನ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ಅಧ್ಯಯನ ಸಂಸ್ಥೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇಲ್ಲಿಗೆ ಸಾದರಪಡಿಸಲು ಯೋಗ್ಯವಾಗಿದೆ ಎಂದು ಈ ಮೂಲಕ ದೃಢೀಕರಿಸಿ ಶಿಫಾರಸ್ಸು ಮಾಡಲಾಗಿದೆ.

ದಿನಾಂಕ : 24-08-11

ಸ್ಥಳ : **ಗುಲಬರ್ಗಾ**

ಮಾರ್ಗದರ್ಶಕರು

ಡಾ. ಶಿವಗಂಗಾ ರುಮ್ಮಾ

ಘೋಷಣಾ ಪತ್ರ

ನಾನು **"ವಚನ ಚಳುವಳಿ ಮತ್ತು ಪರಿಸರ"** ಎಂಬ ಈ ಮಹಾಪ್ರಬಂಧವನ್ನು **ಡಾ.ಶಿವಗಂಗಾ ರುಮ್ಮಾ ಸಹ ಪ್ರಾಧ್ಯಾಪಕರು** ಸ್ನಾತಕೋತ್ತರ ಕನ್ನಡ ಅಧ್ಯಯನ ಕೇಂದ್ರ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಗುಲಬರ್ಗಾ ಅವರ ಮಾರ್ಗದರ್ಶನದಲ್ಲಿ ಮಹಾಪ್ರಬಂಧದ ಸಂಶೋಧನಾ ಅಧ್ಯಯನ ನಡೆಸಿ ಈ ಮಹಾಪ್ರಬಂಧವನ್ನು ಸಿದ್ಧಗೊಳಿಸಿದ್ದೇನೆ. ಪ್ರಸ್ತುತ ಪಿಎಚ್.ಡಿ. ಪದವಿಗಾಗಿ ಕನ್ನಡ ಅಧ್ಯಯನ ಸಂಸ್ಥೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇಲ್ಲಿಗೆ ಸಾದರಪಡಿಸುತ್ತಿದ್ದೇನೆ.

ಈ ಸಂಶೋಧನಾ ಮಹಾಪ್ರಬಂಧವು ನನ್ನ ಸ್ವತಂತ್ರ ಅಧ್ಯಯನವಾಗಿದ್ದು, ಇದನ್ನು ಈ ಮೊದಲು ಯಾವುದೇ ಪದವಿ ಅಥವಾ ಡಿಪ್ಲೋಮಾಕ್ಕಾಗಿ ಯಾವುದೇ ಸಂಸ್ಥೆ ಅಥವಾ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿಲ್ಲ. ಇದನ್ನು ಇಡಿಯಾಗಿ ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಕನ್ನಡ ಗ್ರಂಥಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 24/8/2010

ಸ್ಥಳ : ಗುಲಬರ್ಗಾ

ಭಾಗ್ಯಶ್ರೀ ಶಿವಲಿಂಗಪ್ಪ

ಎಂ.ಎ.

ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ,

ಕ.ವಿ.ವಿ. ಹಂಪಿ

ನಿವೇದನೆ

ಎಮ್.ಎ. ಮುಗಿದ ಮೇಲೆ ಏನಾದರೂ ಮಾಡಲೇ ಬೇಕೆಂದ ಹಂಬಲವಿತ್ತು. ಈ ಮಧ್ಯೆ ವಚನ ಸಾಹಿತ್ಯವು ಅನೇಕ ಜ್ಞಾನ ಶಿಸ್ತುಗಳ ಮೂಲಕ ಅಧ್ಯಯನ ನಡೆಯುತ್ತಿರುವುದು ಗಮನಸಿದ ನನಗೆ ಹೊಸ ರೀತಿಯ ಅಧ್ಯಯನ ಮಾಡಬೇಕೆಂಬ ಆಶಯ ಹೆಚ್ಚಾಯಿತು. ಹೀಗಿರುವಾಗ ಪರಿಸರ ವಿಜ್ಞಾನಿಗಳ 'ಡೂಮ್ಸಡೇ' ಕುರಿತ ಚರ್ಚೆಗಳು ಹೆಚ್ಚು ಹೆಚ್ಚು ಬಂದಾಗ ಪರಿಸರ ಕುರಿತ ಒಲವು ಮತ್ತು ಕಾಳಜಿಗಳು ನನಗೆ ಅರಿವಿಲ್ಲದೇ ನನ್ನಲ್ಲಿ ಸೇರಿಕೊಂಡವು. ಅದರ ಫಲವಾಗಿಯೇ ವಚನ ಚಳುವಳಿ ಮತ್ತು ಪರಿಸರ ಪ್ರಜ್ಞೆ ಎಂಬ ವಿಷಯ ಕುರಿತು ಸಂಶೋಧನೆ ಮಾಡಬೇಕೆಂದು ಆಪೇಕ್ಷೆ ಪಟ್ಟೆ. ಅಷ್ಟರಲ್ಲೇ ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದ ಮಾನ್ಯತೆ ಪಡೆದ ಬೀದರಿನ ಕ.ರಾ.ಶಿ. ಸಂಸ್ಥೆಯ ಕರ್ನಾಟಕ ಕಾಲೇಜು ಸ್ನಾತಕೋತ್ತರ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು ಸಂಶೋಧನಾ ಅಧ್ಯಯನಕ್ಕಾಗಿ ಪ್ರಕಟಣೆ ಬಂದಾಗ ಅರ್ಜಿ ಸಲ್ಲಿಸಿದ್ದೆ, ಅಲ್ಲಿ ನನಗೆ ಸಂಶೋಧನಾ ಅಧ್ಯಯನಕ್ಕೆ ಪ್ರವೇಶ ನೀಡುವ ಮೂಲಕ ನನ್ನ ಅಧ್ಯಯನ ಆಶೆ ಪೂರೈಸಿದವರು ನಿರ್ದೇಶಕರಾದ **ಡಾ.ಜಗನ್ನಾಥ ಹೆಬ್ಬಾಳೆ**ಯವರು ಆರಂಭದಿಂದ ಕೊನೆಯವರೆಗೆ ಅವರು ತೋರಿದ ಪ್ರೀತಿ ಮತ್ತು ಸಹಕಾರಕ್ಕೆ ನಾನು ಯಾವತ್ತು ಕೃತಜ್ಞಳಾಗಿದ್ದೇನೆ.

ಮುಂದೆ ಮಾರ್ಗದರ್ಶಕರಾಗಿ ಅಧ್ಯಯನ ಮುಂದುವರಿಸಲು ಒಪ್ಪಿಕೊಂಡ ಡಾ.ಶಿವಗಂಗಾ ರುಮ್ಮಾ ಅವರು ನನ್ನ ಆಪೇಕ್ಷೆಯಂತೆ **"ವಚನ ಚಳುವಳಿ ಮತ್ತು ಪರಿಸರ"** ಕುರಿತು ಅಧ್ಯಯನ ಮುಂದುವರಿಸಲು ಕೇವಲ ಒಪ್ಪಿಕೊಳ್ಳದೇ ತಿದ್ದಿ ತೀಡಿ ಅಧ್ಯಯನಕ್ಕೆ ಹೊಸ ರೂಪ ನೀಡಿದರು. ಅವರ ನೆರವಿಗೆ ಕೃತಜ್ಞತೆ ತಿಳಿಸಿದರೆ ಔಪಚಾರಿಕವೆನಿಸುತ್ತದೆ. ಅಲ್ಲದೇ **ಶೀ ಚನ್ನಬಸಪ್ಪ ಮಂಗಲಗಿ** ಮತ್ತು ಅವರ ಪರಿವಾರದವರು ನನ್ನ ಎಲ್ಲ ಕಿರಿಕಿರಿಗಳನ್ನು ಸಹಿಸಿಕೊಂಡು ಮನೆಯ ಸದಸ್ಯಳಲ್ಲಿ ಒಬ್ಬರಂತೆ ಕಂಡು ಆತ್ಮಿಯತೆ ತೋರಿದ್ದು ಯಾವುತ್ತು ಮರೆಯಲಾಗದು. ವಿಶೇಷವಾಗಿ ನನ್ನ ಅಧ್ಯಯನಕ್ಕೆ ಪೂರಕವಾಗಿ ಸಲಹೆ, ಸಹಕಾರಗಳನ್ನು ನೀಡಿರುವ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಡೀನರಾದ ಡಾ.ಶಿವಾನಂದ ವಿರಕ್ತಮಠ, ಡಾ.ಬಿ.ಎಮ್.ಪುಟಯ್ಯ ಮತ್ತು ಅಲ್ಲಿನ ಎಲ್ಲಾ ಅಧ್ಯಾಪಕ ವೃಂದದವರಿಗೆ ಮತ್ತು ಗುಲಬರ್ಗಾದ ಡಾ. ಕೆ.ಎಸ್.ನಾಯಕ, ಶ್ರೀ ಎ.ವಾಯ್. ನಾಯಕರವರಿಗೂ ನನ್ನ ಭಕ್ತಿಯ ನಮನಗಳು. ನನ್ನ ಎಲ್ಲಾ ಕೆಲಸಕಾರ್ಯಗಳನ್ನು ಪ್ರೀತಿಯಿಂದ ಹುರಿದುಂಬಿಸುವ ನನ್ನ ಎಲ್ಲಾ ಸ್ನೇಹಿತರಿಗೂ, ಬಂಧು ಬಳಗದವರಿಗೂ ಹಿತೈಷಿಗಳಿಗೂ ನನ್ನ ಅನಂತ ಕೃತಜ್ಞತೆಗಳು.

ಮುಖ್ಯವಾಗಿ ನನ್ನ ಏಳಿಗೆ ಹಿಂದೆ ನಿಂತು ದುಡಿಯುತ್ತಿರುವ ನನ್ನ ಕುಟುಂಬದ ತಂದೆ ಶ್ರೀ ಶಿವಲಿಂಗಪ್ಪ ತಾಯಿ ಲಕ್ಷ್ಮೀಬಾಯಿ ಅಣ್ಣಂದಿರಾದ ಶ್ರೀ ಕ್ಷೇಮಲಿಂಗ ಬಿರಾದರ, ಶ್ರೀ ನಿಜಲಿಂಗಪ್ಪ ಬಿರಾದರ ಹಾಗೂ ಅತ್ತಿಗೆಯವರಾದ ಶ್ರೀಮತಿ ಕೀರಣದೇವಿ, ಶ್ರೀಮತಿ ಕಾಂಚನಾ ಜೊತೆಗೆ ಅಕ್ಕ ರಾಜಶ್ರೀಯವರ ಪ್ರೀತಿಗೆ ಯಾವತ್ತು ನನ್ನ ನಮನಗಳಿರುತ್ತವೆ.

ಪರಿವಿಡಿ

ಅಧ್ಯಾಯ–೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ-೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಈ ವಿಶ್ವದಲ್ಲಿ ಭೂಮಿಯೊಂದೆ ಜೀವಿಗಳ ವಾಸಕ್ಕೆ ಯೋಗ್ಯವಾದ ಪರಿಸರವನ್ನು ಹೊಂದಿದೆ. ಸಮುದ್ರದಾಳದಿಂದ ದಿಗಂತದವರೆಗೆ ಬದುಕುತ್ತಿರುವ ಅನೇಕ ಜೀವರಾಶಿಗಳು ಇದನ್ನು ತಮ್ಮ ತಮ್ಮ ಮನೆಯೆಂದೇ ತಿಳಿದಿವೆ. ಹೀಗೆ ಅನಂತವಾಗಿ ಹಬ್ಬಿರುವ ಜೀವಜಾಲದ ನಡುವಿನ ಸಾಮರಸ್ಯ, ಸಂಘರ್ಷ, ಹೊಸ ವೇಷ, ಹೊಸ ಹಾದಿ, ಇತ್ಯಾದಿಗಳು ಭೂಮಿ ಸೃಷ್ಟಿಯಾದಾಗಿನಿಂದ ರೂಪುಗೊಳ್ಳುತ್ತಾ, ಮುರಿಯುತ್ತಾ, ಕಟ್ಟುತ್ತಾ ಸಾಗಿವೆ. ನಮ್ಮ ಕಣ್ಣಿಗೆ ಕಾಣುವ ಮತ್ತು ಕಾಣದ ಪರಿಸರದ ಬಹುರೂಪವನ್ನು ವಿಶ್ಲೇಷಿಸುವ, ಅರ್ಥೈಸುವ ಶಕ್ತಿ ನಾವಿನ್ನು ಪಡೆದುಕೊಂಡಿಲ್ಲ. ಈಗಾಗಲೇ ಪಡೆದಿರುವ ತಿಳುವಳಿಕೆಯನ್ನು ಗಮನಿಸಿ ಬ್ರಹ್ಮಾಂಡದ ವಿದ್ಯಮಾನಗಳನ್ನು ಅಷ್ಟಷ್ಟು ನಮ್ಮ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳಲು ಹೆಣಗಾಡುತ್ತಿದ್ದೇವೆ. ಈ ಬ್ರಹ್ಮಾಂಡದ ಭಾಗಗಳೇ ಆಗಿರುವ, ಗೆಲಾಕ್ಸಿಗಳು, ತಾರೆಗಳು, ಗ್ರಹ, ಉಪಗ್ರಹಗಳು ಧೂಮಕೇತುಗಳು, ಉಲ್ಕೆಗಳು, ಕಪ್ಪುರಂಧ್ರಗಳು ಇತ್ಯಾದಿಗಳನ್ನೊಳಗೊಂಡ ವಿಶ್ವರೂಪ ಅವುಗಳ ಅಗಾಧತೆಯ ನಡುವೆ ನಡೆಯುವ ವಿದ್ಯಮಾನಗಳು, ಕಾರ್ಯಕಾರಣ, ಸಂಬಂಧ ಮುಂತಾದವುಗಳನ್ನು ಸರಿಯಾದ ರೀತಿಯಲ್ಲಿ ಅರ್ಥೈಸಿಕೊಳ್ಳುವುದು ಕಷ್ಟ ಸಾಧ್ಯವೆ ಸರಿ. ತಮಗೆ ತಾವೇ ಬುದ್ಧಿ ಜೀವಿಗಳೆಂದು ಕರೆದುಕೊಂಡ ನಾವು ಭೂ ಗ್ರಹದ ಮೇಲಿರುವ ಜೀವಜಾಲವನ್ನು ಇದರೊಂದಿಗೆ ಸಾವಯವ ಸಂಬಂಧವನ್ನು ಹೊಂದಿರುವ ಬ್ರಹ್ಮಾಂಡವನ್ನು ಅರಿಯುವ ಅದರ ರಹಸ್ಯವನ್ನು ಬೇಧಿಸಿ ಅದರ ಮೇಲೆ ಅಧಿಪತ್ಯವನ್ನು ಸ್ಥಾಪಿಸುವ ಮರೀಚಿಕೆಯ ಹಿಂದೆ ಓಡುತ್ತಿದ್ದೇವೆ. ಅಭಿವೃದ್ಧಿಯ ಹೆಸರಿನಲ್ಲಿ ಜೀವಾವಾಸಕ್ಕೆ ಯೋಗ್ಯವಾಗಿದ್ದ ಪರಿಸರವನ್ನು ವಿರೂಪಗೊಳಿಸಿ ಈಗ ಅದನ್ನು ವಿನಾಶದ ಅಂಚಿಗೆ ತಂದಿದ್ದೇವೆ.

ಅಧ್ಯಯನದ ಮಹತ್ವ :

ವಚನ ಚಳುವಳಿಯನ್ನು ಕುರಿತು ಇದುವರೆಗೂ ಬಹು ಆಯಾಮಗಳಿಂದ ಚರ್ಚೆಗಳು ನಡೆದಿವೆ. ಹಾಗೆಯೇ ಪರಿಸರವನ್ನು ಕುರಿತು ಪಂಪನಿಂದ ಚಂಪಾರವರೆಗೆ ಸೃಜನ, ಸೃಜನೇತರ ಕೃತಿಗಳು ಬಂದಿವೆ. ಆದರೆ ಆಧುನಿಕ ಸಂದರ್ಭದಲ್ಲಿ ಪರಿಸರದ ಬಗ್ಗೆ ನಡೆಯುತ್ತಿರುವ ಚರ್ಚೆ, ಹೋರಾಟ, ಬರಹ ಮುಂತಾದವುಗಳಲ್ಲಿ ವ್ಯಕ್ತವಾಗುತ್ತಿರುವ ದೃಷ್ಟಿಕೋನವನ್ನು ಅನ್ವಯಿಸಿ ವಚನ ಚಳುವಳಿಯ ಉದ್ದೇಶಗಳೇನಿದ್ದವು ಎಂಬುದು ಈ ಹೊತ್ತು ಮಹತ್ವದ ಸಂಗತಿಯಾಗಬೇಕಿದೆ ಒಂದು ಚಳುವಳಿಯು ತನ್ನ ಒಡಲಲ್ಲಿ ಬಹು ಆಯಾಮಗಳನ್ನಿಟ್ಟುಕೊಂಡು ಹೋರಾಟಕ್ಕೆ ಇಳಿದಿರುತ್ತದೆ. ಹಾಗಿಲ್ಲದೆ ಹೋದಲ್ಲಿ ಆ ಚಳುವಳಿಯ ಪ್ರಭಾವ ಪರಿಣಾಮಗಳು ಬಹು ಬೇಗ ಜನಮಾನಸದಿಂದ ಕಣ್ಮರೆಯಾಗಿ ಚಳುವಳಿ ಅಪ್ರಸ್ತುತವಾಗಿಬಿಡುತ್ತದೆ. ವಚನ ಚಳುವಳಿಯಲ್ಲಿ ಸಾಮಾಜಿಕ, ಧಾರ್ಮಿಕ, ತಾತ್ವಿಕ, ರಾಜಕೀಯ, ಶಿಕ್ಷಣ, ಆರ್ಥಿಕ, ವಿಜ್ಞಾನ, ಮನೋವಿಜ್ಞಾನ, ಇತ್ಯಾದಿ ಬಹುಶಿಸ್ತೀಯ ನೆಲೆಗಳು ಒಂದರೊಳಗೊಂಡು ಹೆಣೆದುಕೊಂಡಿರುವುದರಿಂದ ದಿನೇ ದಿನೇ ಅವುಗಳನ್ನು ಕುರಿತ ಚರ್ಚೆಗಳು ಬೇರೆ ಬೇರೆ ನೆಲೆಯಿಂದ ಬರುತ್ತಿವೆ. ಹೀಗಾಗಿ ಇಂದಿನ ಪರಿಸರವಾದಿಗಳು ಬಯಸುವ ವಸ್ತುಮೋಹದ ನಿರಾಕರಣೆಯನ್ನು ವಚನಕಾರರು ಪ್ರತಿಪಾದಿಸಿದ್ದರು. ಎಂಬುದು ಬಹಳ ಮಹತ್ವದ ಸಂಗತಿಯಾಗಿದೆ. ಬುದ್ಧ ಪೂರ್ವದ ಗಣರಾಜ್ಯಗಳು, ಬುದ್ಧನ ಸಂಘಗಳು, ಜೈನರ ಅಪರಿಗ್ರಹ, ವಚನ ಚಳುವಳಿಯ ಕಾಯಕ, ದಾಸೋಹ, ಪ್ರಸಾದದ ಕಲ್ಪನೆಗಳು ಇಂದು ನಮ್ಮ ಸಂವಿಧಾನ ಹೇಳುವ ಕಲ್ಯಾಣರಾಜ್ಯ ಇವೆಲ್ಲವೂ ಮನುಷ್ಯರು ಈ ನಿಸರ್ಗದೊಂದಿಗೆ ಬಾಳುವುದನ್ನು ಹೇಳಿಕೊಟ್ಟಿವೆ. ನಾವಿಂದು ನಿಸರ್ಗದ ಮಗುವಾಗಿ ಬದುಕದೇ ಮಹಾರಾಜರಾಗಿ ಬದುಕುತ್ತಿದ್ದೇವೆ. ಇದು ಅಂತಿಮವಾಗಿ ಪ್ರಭುತ್ವ ಮತ್ತು ಜನತೆಯ ವಿಷಯವಾಗಿ ಜನರ ಆಶೋತ್ತರಗಳನ್ನು ಹತ್ತಿಡಲು ಬಳಸುವ ಎಲ್ಲಾ ಅಸ್ತ್ರಗಳನ್ನು ಪ್ರಭುತ್ವವು ನಿಸರ್ಗವನ್ನು ಬಳಸುತ್ತದೆ. ಈ ಮನೋಭಾವವು ನಿಸರ್ಗದ ಮೇಲಿನ ಸಾಮೂಹಿಕ ಹಿಡಿತವನ್ನು ವಯಕ್ತಿಕವಾಗಿಸಿ ಅದನ್ನು ಮಾರುಕಟ್ಟೆಯ ವಸ್ತುವನ್ನಾಗಿ ಮಾರ್ಪಡಿಸುತ್ತದೆ. ಈ ಮಾರ್ಪಾಡು ಸಂಪತ್ತಿನ ಕ್ರೋಢೀಕರಣಕ್ಕೆ ನಾಂದಿಯಾಗುತ್ತದೆ. ಸಂಪತ್ತು ಅದರ ಹಿಂದಿನ ಹಿಂಸೆ, ಅದು ತಂದುಕೊಡುವ ಭೋಗಜಿವನ ಇವೆಲ್ಲವೂ ಸೇರಿ ಅಂತಿಮವಾಗಿ ಮನುಷ್ಯರು ದುರಂತಗಳನ್ನು ಸೃಷ್ಟಿಸುತ್ತಾ ಹೋಗುತ್ತಾರೆ.

ಇಂತಹ ದುರಂತಗಳಿಂದ ಹೊರಬರಬೇಕಾದರೆ ಆಧುನಿಕ ಜಗತ್ತು ನಿರ್ಮಿಸುತ್ತಿರುವ ಮಾರುಕಟ್ಟೆ ಕೇಂದ್ರಿತ ಗ್ರಾಹಕ ಆಕರ್ಷಣೆಯ ಉದ್ದೇಶಗಳು ಒವಲಾಗಿ ಮಾನವೀಯ ಕೇಂದ್ರಿತ ಕಲ್ಯಾಣ ರಾಜ್ಯದ ಉದ್ದೇಶಗಳು ನಮ್ಮವಾಗಬೇಕಾಗಿವೆ. ಈ ದಿಸೆಯಲ್ಲಿ ಒಂದು ಐತಿಹಾಸಿಕ ಕಾಲಘಟ್ಟದಲ್ಲಿ ವಚನ ಚಳುವಳಿಯು ನಡೆಸಿದ ಪರಿಸರ ಕೇಂದ್ರಿತ ರಾಜಕಾರಣವನ್ನು ಇಂದು ವಿಶ್ಲೇಷಿಸಬೇಕಾದ ಜರೂರಿಯಿದೆ. ಹಾಗೆಂದಾಕ್ಷಣ ಇಂದು ಪರಿಸರ ವಿಜ್ಞಾನಿಗಳು ಹೇಳುವ ಎಲ್ಲಾ ಪರಿಹಾರಗಳನ್ನು ವಚನಕಾರರು ಹೇಳಿದರೆಂದು ಹೊರಡುವುದಲ್ಲ. ಬದಲಿಗೆ ಅಯಾ ಚಾರಿತ್ರಿಕ ಸನ್ನಿವೇಶದಲ್ಲಿ ಮಾರ್ಗದರ್ಶಿಯಾಗಬಲ್ಲ ವಿಚಾರಗಳು ಇಂದು ನಮ್ಮನ್ನು ಖಂಡಿತವಾಗಿಯೂ ಮುನ್ನಡೆಸಬಲ್ಲವೇ? ಎಂಬ ಪ್ರಶ್ನೆಯನ್ನು ಎದುರಿಗಿಡಬೇಕಾಗಿದೆ. ಈ ಹಿನ್ನಲೆಯಲ್ಲಿ ಇಂದು ಜಾಗತೀಕರಣದ ಸಂದರ್ಭಗಲ್ಲಿ ನಿಸರ್ಗದ ಸಂಪತ್ತೆಲ್ಲಾ ವೈಯುಕ್ತಿಕ ಸಂಪತ್ತಾಗಿ ರೂಪಾಂತರಗೊಳ್ಳುವ ಪ್ರಕ್ರಿಯೆಯ ಹಿಂದಿರುವ ಕರಾಳ ಮುಖಗಳನ್ನು ಪರಿಚಯಿಸಿಕೊಳ್ಳುವುದು ಇಲ್ಲಿ ಮುಖ್ಯವಾಗಿದೆ. ಆದ್ದರಿಂದಲೇ ವಚನ ಚಳುವಳಿ ಮತ್ತು ಪರಿಸರ ಪ್ರಜ್ಞೆ ಎಂಬ ವಿಷಯವು ಮಹತ್ವದ ಹೆಜ್ಜೆಯಾಗಬಹುದೆಂಬ ನಿರೀಕ್ಷೆ ನನಗಿದೆ.

ಇಂದು ನಾವು ಕಾಣುತ್ತಿರುವ ದುರಂತಗಳಿಗೆ, ದೇಸಿಗೆ ಮರಳಬೇಕು, ಪರ್ಯಾಯದ ಹುಡುಕಾಟ ಮುಖ್ಯವೆಂಬ ಕರೆ ಕೇಳಿಬರುತ್ತಿರುವ ಹಿನ್ನಲೆಯಲ್ಲಿ ನನ್ನ ವಿಷಯಕ್ಕೆ 'ಕಾಲದ ಜರೂರಿ'ಯೆಂಬ ಮಹತ್ವವಿದೆಯೆಂದು ಭಾವಿಸಿ ಸಂಶೋಧನೆಗೆ ಆಯ್ದುಕೊಂಡಿದ್ದೇನೆ.

ಅಧ್ಯಯನದ ಉದ್ದೇಶ :

ಮನುಷ್ಯರ ಎಲ್ಲಾ ಚಟುವಟಿಕೆಗಳ ಹಿಂದೆ ಒಂದು ನಿರ್ದಿಷ್ಟ ಉದ್ದೇಶವಿರುವಂತೆ ನನ್ನ ಅಧ್ಯಯನಕ್ಕು ಕೂಡ ಕೆಲವು ಉದ್ದೇಶಗಳನ್ನು ರೂಪಿಸಿಕೊಂಡಿದ್ದೇನೆ. ಈ ಉದ್ದೇಶಗಳು ನನ್ನ ಅಧ್ಯಯನವನ್ನು ನಿರ್ದೇಶಿಸುವುದರಿಂದ ಅವುಗಳ ಹಿಂದಿನ ಜನಪರ, ಜೀವಪರ, ಧೋರಣೆಗೆ ಹೆಚ್ಚು ಒತ್ತುಕೊಡಲು ಪ್ರಯತ್ನಿಸಿದ್ದೇನೆ.

ಸಕಲ ಜೀವಾತ್ಮರಿಗೆ ಲೇಸಬಯಸುವ ವಚನ ಚಳುವಳಿಯ ಉದ್ದೇಶವು ನಂತರದ ಕಾಲಘಟ್ಟದಲ್ಲಿ ಮೆಲ್ಲಮೆಲ್ಲನೆ ಜೀವವಿರೋಧಿ ಜನವಿರೋಧಿ ನಿಲುವುಗಳುಳ್ಳವರ ಕೈಯಲ್ಲಿ ಸಿಕ್ಕಿಬಿದ್ದು, ಆಶಯಕ್ಕಿಂತ ಆಚರಣೆಯೆ ಮುಖ್ಯವಾಗಿದೆ. ತನುಭಕ್ತನಾಗಿ ಮನಭವಿಯಾಗಿರುವ

ಇಂದಿನ ಸಂದರ್ಭದಲ್ಲಿ ಆ ಚಳುವಳಿಯ ಅವೈದಿಕ ನಿಲುವುಗಳು ಇಂದಿಗೂ ಪ್ರಸ್ತುತವಾಗಬೇಕಾದ ಜರೂರಿಯಿದೆ ಎಂಬುದರ ಜೊತೆಗೆ ವಚನ ಚಳುವಳಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಇಂದು ಮಕ್ಕಿಕಾ ಮಕ್ಕಿಯಾಗಿ ಅನುಸರಿಸಬೇಕೆಂಬ ನಿಲುವಿನ ಬಗ್ಗೆಯೂ ಎಚ್ಚರ ವಹಿಸಬೇಕೆಂಬ ಉದ್ದೇಶವು ಈ ಅಧ್ಯಯನಕ್ಕಿದೆ.

ಬೇರೆ ಬೇರೆ ಜ್ಞಾನಶಿಸ್ತುಗಳ ಅಂತರ್ ಸಂಬಂಧವನ್ನು ಇಂತಹ ಆನ್ವಯಿಕ ನೆಲೆಗಳಿಂದಲೇ ಅರ್ಥಮಾಡಿಕೊಳ್ಳಬೇಕಾಗಿರುವುದರಿಂದ ವಚನ ಚಳುವಳಿಯು ಒತ್ತು ಕೊಟ್ಟ ಕ್ಷೇತ್ರಗಳು ಅದರ ಜೊತೆಗೆ ಪರಿಸರ ಎಂಬ ಅರ್ಥವ್ಯಾಪ್ತಿಯ ಒಳಗಡೆ ಬರುವ ಪಂಚಭೂತಗಳು, ಖನಿಜ, ಸಸ್ಯ ಬ್ರಹ್ಮಾಂಡ ಮುಂತಾದವುಗಳನ್ನು ಕುರಿತ ಆದುನಿಕ ಪರಿಸರವಾದಿ ದೃಷ್ಟಿಕೋನದ ಜೊತೆಗೆ ವಚನ ದೃಷ್ಟಿಕೊನವನ್ನು ಇಟ್ಟು ನೋಡುವ ಉದ್ದೇಶ ಈ ಅಧ್ಯಯನಕ್ಕಿದೆ.

ಖಾಸಗಿ ಆಸ್ತಿಯು ವಿಸ್ತರಿಸುತ್ತ ಹೋದಂತೆಲ್ಲ ಮನುಷ್ಯರ ಬದುಕು ಹೆಚ್ಚು ದುರಂತಗಳನ್ನು ಬರಮಾಡಿಕೊಳ್ಳುವ ಕಾರಣಕ್ಕಾಗಿ ನಿಸರ್ಗವನ್ನು ವಸ್ತುವಾಗಿ ಮಾರ್ಪಡಿಸಿ ಅದನ್ನು ವ್ಯಾಪಾರೀ ದೃಷ್ಟಿಯಿಂದ ನೋಡುತ್ತಿರುವ ಇಂದಿನ ಜಾಗತೀಕರಣದ ಭವಿ ಮನಸ್ಸುಗಳೇ ಇಂದು ಹೆಚ್ಚಾಗುತ್ತಿವೆ. ಹೀಗೆ ಭವಿಯಾಗಿರುವ ಚಂದ್ರ, ಸೂರ್ಯ, ಆಕಾಶ, ಭೂಮಿ, ಜಲ, ಹದಿನೆಂಟು ಧಾನ್ಯವೆಲ್ಲವನ್ನು ಭಕ್ತನನ್ನಾಗಿ ಮಾರ್ಪಡಿಸಬೇಕಾಗಿದೆಯೆಂಬ ಜರೂರಿಯನ್ನು ವಚನ ಚಳುವಳಿ ಒತ್ತಿ ಹೇಳುತ್ತದೆ. ತಾಯ ಮೊಲೆವಾಲು ನಂಜಾಗಿ (ತಾಯಿ ಮೊಲೆ ಹಾಲಿನಲ್ಲಿ ಡಿ.ಡಿ.ಟಿ. ಅಂಶ ಪತ್ತೆ) ಕೊಲ್ಲುವ ಈ ದಿನಗಳಲ್ಲಿ ಆ ಹಾಲನ್ನು ಭೂಮಿ ಮೇಲಿನ ಅಮೃತವನ್ನಾಗಿ ಪರಿವರ್ತಿಸಲು ಬೇಕಾದ ಸಾಮಾಜಿಕ ಪರಿಸರ ಅದನ್ನು ತರುವ ಬದ್ಧತೆ ಅವುಗಳಿಂದ ಬದಲಾಗುವ ನೈಸರ್ಗಿಕ ಪರಿಸರ ಇವೆಲ್ಲವುಗಳನ್ನು ಅನಾವರಣಗೊಳಿಸುವ ಉದ್ದೇಶ ಈ ಅಧ್ಯಯನಕ್ಕಿದೆ.

ಇದುವರೆಗಿನ ಅಧ್ಯಯನಗಳು :

ವಚನ ಚಳುವಳಿ ಮತ್ತು ಪರಿಸರ ಪ್ರಜ್ಞೆಯನ್ನು ಕುರಿತು ಇದುವರೆಗೂ ಪ್ರತ್ಯೇಕ ಅಧ್ಯಯನಗಳೇ ಹೆಚ್ಚಾಗಿ ನಡೆದಿವೆ. ಹಿ.ಚಿ. ಶಾಂತವೀರಯ್ಯ ಅವರ 'ಬಸವಣ್ಣನವರ ವಚನಗಳಲ್ಲಿ ವನಸಂಪತ್ತು', ಸುಜನಾ ಅವರ 'ವಚನಗಳಲ್ಲಿ ಪ್ರಾಣಿರೂಪಕ', ಉಷಾಕಿರಣ್ ಅವರ

'ವಚನಗಳಲ್ಲಿ ಪ್ರತಿಮೆಗಳು', ಡಾ. ಪಿ.ಎಸ್. ಶಂಕರ ಅವರ 'ವಚನಗಳಲ್ಲಿ ವೈಜ್ಞಾನಿಕ ಹೊಳಹುಗಳು', ಸಿ.ಕೆ. ನಾವಲಗಿ ಅವರ 'ವಚನ ಸಾಹಿತ್ಯ ಮತ್ತು ಜಾನಪದ' ಮುಂತಾದ ಗ್ರಂಥಗಳು ಬೆಳಕು ಚೆಲ್ಲಿವೆ. ಈ ಗ್ರಂಥಗಳಲ್ಲದೆ ಲೇಖನಗಳು ಕೂಡ ಬಂದಿವೆ. ಬಿ. ವಿರೂಪಾಕ್ಷಪ್ಪ ಅವರ 'ವಚನಗಳಲ್ಲಿ ವಿಶ್ವೋತ್ಪತ್ತಿ ಸಿದ್ಧಾಂತ', ಮಣ್ಣೂರ ಗುರಪ್ಪ ಅವರ 'ಜಗತ್ ಸೃಷ್ಟಿ', ಬಿ.ಎಸ್. ಸಜ್ಜನ ಅವರ 'ಬಸವಣ್ಣನವರ ವಚನಗಳಲ್ಲಿ ಸಸ್ಯ ಸಂಪತ್ತು', ಸಿ.ಡಿ. ಪಾಟಿಲರ 'ವಚನಗಳು ಹಾಗೂ ಪರಿಸರ', ಫ಼ಿ.ವಿ. ಬಾಗಲಕೋಟ ಅವರ 'ಬಸವಣ್ಣನವರ ವಚನಗಳಲ್ಲಿ ವಿಜ್ಞಾನ', ಸವಿತಾ ಸಿರಗೋಜಿ ಅವರ 'ವಚನಗಳಲ್ಲಿ ವಿಜ್ಞಾನದ ಒಳದನಿ', ಎಚ್. ಚಂದ್ರಶೇಖರ ಅವರ 'ಜೇಡರ ದಾಸಿಮಯ್ಯನ ತವನಿಧಿ', ನಾಗರಾಜ ಹೀರಾ ಅವರ 'ವಚನಗಳಲ್ಲಿ ಆರೋಗ್ಯ', ಸತ್ಯನಾರಾಯಣ ಭಟ್ ಅವರ 'ನಾಡೀ ವಿಜ್ಞಾನದ ವಚನಕಾರರ ವೈದ್ಯ ಸಂಗಣ್ಣ', ಬಸವರಾಜ ಮೊದಿ ಅವರ ವಂಶವಾಹಿನಿ ಜೀನಗಳೂ ಅಕ್ಕ ಹೇಳುವ ದ್ರವ್ಯಗಳು, ವಿಜಯಲಕ್ಷ್ಮಿ ಬಾಳೇ ಕುಂದ್ರಿಯವರ 'ಆರೋಗ್ಯಕ್ಕೆ ಶರಣ ಸಂದೇಶ', ಬಿ.ಜಿ.ಎಲ್. ಸ್ವಾಮಿ ಅವರ 'ಬಸವಣ್ಣನವರ ಸಸ್ಯ ಸಂಬಂಧವಾದ ಸೂಕ್ತಿಗಳು', ಮುಂತಾದ ಬಿಡಿ ಲೇಖನಗಳು ಇದುವರೆಗೂ ಪ್ರಕಟಗೊಂಡಿವೆ. ಈ ಮೇಲಿನ ಉಲ್ಲೇಖಗಳೆಲ್ಲವು ವಚನ ಚಳುವಳಿ ಮತ್ತು ಪರಿಸರದ ಅಂಶಿಕ ಭಾಗವೊಂದನ್ನು ಇಟ್ಟುಕೊಂಡು ನಡೆಸಿದ ಅಧ್ಯಯನಗಳಾಗಿವೆ. ಪರಿಸರದ ಸಮಗ್ರ ವಸ್ತು ವಿಷಯವನ್ನು ಕುರಿತು ವಚನಚಳುವಳಿ ಬಿಂಬಿಸಿದ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಅಧ್ಯಯನ ನಡೆಸಬಹುದೆಂಬ ಆಶಯದಿಂದ ಈ ವಿಷಯವನ್ನು ಆರಿಸಿಕೊಂಡಿದ್ದೇನೆ.

ಅಧ್ಯಯನದ ರೂಪುರೇಷೆ :

ಪರಿಸರದ ವಿಸ್ತಾರ ನಮ್ಮ ಕೈಗಿನ್ನೂ ಸಿಕ್ಕಿಲ್ಲ ಅದರಂತೆ ವಚನ ಚಳುವಳಿಯನ್ನು ನಾವು ಇನ್ನೂ ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಈ ನೆಲದಲ್ಲಿನ ವಿಶಿಷ್ಟತೆಗಳ ಬೆಳಕಿನಲ್ಲಿ ಮುಂದಿನ ದಿನಗಳ ಸ್ವಾಸ್ಥ್ಯ ಬದುಕು ಸಾದ್ಯವಾಗಬಲ್ಲುದೆಂಬ ಆಶಯದಿಂದ ಈ ವಿಷಯವನ್ನು ಕುರಿತು ಅಧ್ಯಯನ ಮಾಡಲು ಉದ್ದೇಸಿದ್ದೇನೆ.

ಇಲ್ಲಿಯವರೆಗೂ ನಡೆದ ಚರ್ಚೆಯನ್ನು ಮತ್ತು ವಚನ ಚಳುವಳಿಯ ಆಶಯಗಳನ್ನು ಎದುರಿಗಿಟ್ಟುಕೊಂಡು ನನ್ನ ಪ್ರಬಂಧದಲ್ಲಿ ಅವೆರಡೂ ಕೂಡುವ ಬಿಂದುವನ್ನು ಹುಡುಕಬೇಕಾಗಿದೆ. ಹಾಗೆ ಮಾಡುವುದರ ಮುಖಾಂತರ ನಮ್ಮ ಸಂದರ್ಭದಲ್ಲಿನ ಮಾರುಕಟ್ಟೆಯ ಪ್ರಭುತ್ವ ಮತ್ತು ಅದರ ಹುನ್ನಾರಗಳನ್ನು ಅರ್ಥ ಮಾಡಿಕೊಂಡು ಅವುಗಳನ್ನು ಎದುರಿಸುವ ಪರ್ಯಾಯ

ಪ್ರಾಚೀನ ಮಾದರಿಗಳ ಶೋಧವನ್ನು ಮಾಡಬೇಕಾಗಿದೆ. ಹೊಳೆಯುವುದೆಲ್ಲವೂ ಚಿನ್ನವಲ್ಲ ಹಾಗೆಯೇ, ಹಳೆಯದೆಲ್ಲವೂ ಅನುಸರಿಸಲು ಯೋಗ್ಯವಲ್ಲವೆಂಬ ಸಿದ್ಧ ಚೌಕಟ್ಟನ್ನು ಬದಿಗಿಟ್ಟು ಹಿರಿಯ ಜೀವಿಗಳು, ತಲೆತಲಾಂತರದಿಂದ ನಂಬಿದ್ದ ಪರಿಸರ ಕುರಿತು ದೈವತ್ವದ ನಂಬಿಕೆಗಳನ್ನು ಬದಿಗೆ ಸರಿಸಿ ಅದರೊಳಗೆ ಅಡಗಿ ಕೂತಿರುವ ಜೀವಜಾಲದ ಅಳಿವು ಉಳಿವಿನ ಕಾಳಜಿಗಳನ್ನು ಗುರುತಿಸಬೇಕೆನ್ನುವ ಕಾಳಜಿಯನ್ನು ಈ ಅಧ್ಯಯನದಲ್ಲಿ ಉದ್ದೇಶಿಸಲಾಗಿದೆ.

ಅಧ್ಯಯನಕ್ಕೆ ನಿಗದಿಪಡಿಸಿಕೊಂಡ ಅಧ್ಯಾಯಗಳಲ್ಲಿ ಪರಿಸರದ, ಅರ್ಥ, ಸ್ವರೂಪ, ಇತಿಹಾಸ, ಜಾಗತೀಕರಣದ ಸ್ವರೂಪ, ವಚನ ಚಳುವಳಿ, ಸೃಷ್ಟಿ ಪರಿಕಲ್ಪನೆ, ಪಂಚಭೂತಗಳು, ಸಸ್ಯ ಪರಿಸರ, ಪ್ರಾಣಿ ಪರಿಸರ, ಕೃಷಿ ಪರಿಸರ, ಖನಿಜ ಸಂಪತ್ತು ಇವುಗಳ ಹಿನ್ನಲೆಯಲ್ಲಿ ಅಧ್ಯಯನ ಮಾಡಬೇಕೆಂದಿದ್ದೇನೆ. ವರ್ತಮಾನವನ್ನು ಸುಂದರವಾಗಿಸಲು ಈ ಸಂಶೋದನೆಯ ಫಲಶೃತಿಗಳು ಕಿಂಚಿತ್ ಬೆಳಕನ್ನು ನೀಡಬಹುದೆಂಬ ಆಶಯ ಈ ಅದ್ಯಯನದ ಚೌಕಟ್ಟಿನಲ್ಲಿದೆ.

ಅಧ್ಯಾಯ–೨

ಪರಿಸರ

ಅಧ್ಯಾಯ–೨

ಪರಿಸರ

ಹಿನ್ನೆಲೆ :

ಈ ಲೋಕದಲ್ಲಿ ಕಾಣುವ ಎಲ್ಲ ಚರಾಚರ ವಸ್ತುಗಳು, ವಿಸ್ಮಯಗಳು ಆದಿ ಕಾಲದ ಅಣುವೆಂದು ಕರೆಸಿಕೊಂಡಿದ್ದ, ಬ್ರಹತ್ ಸಾಂದ್ರಗಳಲ್ಲಿ ತುಂಬಿಕೊಡಿದ್ದವು, ಕಾಲಾಂತರದಲ್ಲಿ ಆ ಅಣು ಅಸಂಖ್ಯಾತ ಸೂಕ್ಷ್ಮಕಣಗಳಾಗಿ ಸ್ಪೋಟವಾಯಿತು ಇದನ್ನು ಮಹಾಸ್ಪೋಟ (Big Bang Theory)[1] ಎಂದು ಕರೆವರು ಈ ಮಹಾಸ್ಪೋಟದ ಫಲವಾಗಿ ಆಕಾಶಗಂಗೆ, ನಕ್ಷತ್ರ ಪುಂಜ, ಸೂರ್ಯ, ಚಂದ್ರ, ಭೂಮಿ ಮೊದಲಾದ ಗ್ರಹೋಪಗ್ರಹಗಳು ಒಳಗೊಂಡ ಸೌರವ್ಯಹ ಹುಟ್ಟಿತು ಸೌರವ್ಯೂಹ ಪರಿವಾರದ ಒಂದು ಗ್ರಹವಾದ ಭೂಮಿ ತಣ್ಣಗಾಗಿ ಜೀವೋತ್ಪತ್ತಿಯಾಗಲು ಬಿಲಿಯನ್ ವರುಷಗಳೇ ಬೇಕಾದವು ನಂತರ ಮಾನವನ ವಿಕಾಸಕ್ಕೆ–ವಾಸಕ್ಕೆ ಯೋಗ್ಯವಾದ ಭೂಮಿ ನಿರ್ಮಾಣವಾಯಿತು ಆದ್ದರಿಂದ ಭೂಮಿಯೊಂದೇ ಮನುಷ್ಯನಿಗೆ ವಾಸಿಸಲು ಯೋಗ್ಯವಾದ ನೆಲೆಯಾಗಿದೆ.

ಎಲ್ಲ ಗ್ರಹೋಪಗ್ರಹಗಳು, ನಿಹಾರಿಕೆ ಮೋದಲಾದವೆಲ್ಲ ಸೇರಿ ಅದನ್ನು 'ವಿಶ್ವ ಬ್ರಹ್ಮಾಂಡ'ವೆಂದು ಕರೆಯುತ್ತೇವೆ. ಹೀಗೆ ಇದೆ ವಿಶ್ವದ ಪರಿವಾರವನ್ನು ಮತ್ತು ಅವರ ವಾತಾವರಣವನ್ನು 'ಪರಿಸರ' ಎಂದೂ. ಕರೆಯುವರು.

---

[1] ವಿವರಕ್ಕಾಗಿ ನೋಡಿ ವಚನಗಳಲ್ಲಿ ಖಗೋಳ ವಿಜ್ಞಾನ, ರುದ್ರೇಶ ಗಂಗಾಧರ ಕಿತ್ತೂರು ವಚನಗಳಲ್ಲಿ ವಿಜ್ಞಾನ – ಪು.ಸಂ.–119 ಡಾ. ವೀರಣ್ಣ ರಾಜೂರ, ಬಸವರಾಜ ಹೂಗಾರ.

ಪರಿಸರ :

ಕಾಡು ಬೆಟ್ಟ ಗುಡ್ಡಗಳಿಂದ ಒಳಗೊಂಡ ಹಸಿರು ಪ್ರದೇಶವನ್ನು ಪರಿಸರ ಎಂಬ ಹೆಸರಿನಿಂದ ಗುರುತಿಸುತ್ತೇವೆ. ಅದರೆ ಪರಿಸರವೆಂಬುದು ಬಹುದೊಡ್ಡ ಪರಿಕಲ್ಪನೆಯಾಗಿದ್ದು ವಿಶ್ವದ ಎಲ್ಲ ಚರಾಚರ ವಸ್ತುಗಳು ಗ್ರಹೋಪಗ್ರಹಗಳ ವ್ಯಾಪ್ತಿಗೆ ಒಳಪಡುತ್ತವೆ. ಇತ್ತೀಚಿನ ದಿನಗಳಲ್ಲಿ ಪರಿಸರ ಕುರಿತ ಅಧ್ಯಯನದ ಹರವು ಹೆಚ್ಚಾಗಿದ್ದು ಪರಿಸರವು ಅನ್ಯ ಶಿಸ್ತಿಯ ಅಧ್ಯಯನ ಅಪೇಕ್ಷಿಸಿರುವುದು ಗಮನಿಸಿದರೆ ಅದರ ಮಹತ್ವ ಅರಿವಿಗೆ ಬರುತ್ತದೆ.

ಪರಿಸರ ಅರ್ಥ :

ಅಧುನಿಕತೆ ಹೆಚ್ಚದಂತೆ ಪರಿಸರ ಪ್ರಜ್ಞೆ ಜಾಗ್ರತವಾಗಿದೆ. ಪರಿಸರ ಕುರಿತ ಅಧ್ಯಯನಗಳು ಹೆಚ್ಚಾಗಿವೆ. ಇಂಗ್ಲೀಷಿನ "ಎನ್‌ವ್ಹಿರಾನ್‌ಮೆಂಟ್ (Environment)"[೨] ಗೆ ಸಂವಾದಿಯಾಗಿ ಬಳಸಲಾಗುತ್ತಿದೆ.

ಪರಿಸರವೆಂದರೆ ಶಬ್ದಶಃ ಅರ್ಥ ಸುತ್ತಲೂ ಇರುವ ಸನ್ನಿವೇಶ, ಆವರಣ ಪ್ರದೇಶ, ಜನ ಮಂತಾದವು" ಎಂಬ ಅರ್ಥದೊಂದಿಗೆ ೧) "ಎಲ್ಲೆ," ವಿಲ್ಲಲೆ: ಸರಹದ್ದು ೨) ಇರವು; ಸ್ಥಿತಿ ೩) ಹತ್ತುರ; ಸಾಮಿಪ್ಯ; ಸನಿಹ ೪) ಹರಹು; ವಿಸ್ತೀರ್ಣ ೫) ನಿಯಮ ; ವಿಧಿ ೬) ಸಾವು ; ಮರಣ"[೩]

ಹೀಗೆ ಪರಿಸರ ಹಲವಾರು ಅರ್ಥಛಾಯೆಗಳನ್ನು ಹೊಂದಿದೆ ಪರಿಸರದ ಪರಿಭಾಷೆಯಲ್ಲಿ ಅದರ ಅರ್ಥವೆಂದರೆ, "ಯಾವುದೇ ಜೀವಿಯ ಸುತ್ತಲಿರುವ ಚರಾಚರವಸ್ತುಗಳಿಗೆ ಅವುಗಳ ಭೌತಿಕ ರಾಸಾಯನಿಕ ಮತ್ತು ಜೈವಿಕ ಲಕ್ಷಣ ಸನ್ನಿವೇಶ"[೪] ವೆಂದು ಆರ್ಥೈಸಲಾಗುತ್ತಿದೆ.

ಈ ವ್ಯಾಖ್ಯಾನದ ಪ್ರಕಾರ ಪರಿಸರದ ಹರವು ವ್ಯಾಪ್ತಿ ವಿಧಿತವಾಗುತ್ತದೆ, ಅದರರ್ಥ ಪರಿಸರವು ಭೌತಿಕ ರಾಸಾಯನಿಕ ಜೈವಿಕ ಘಟಕಗಳ ಒಟ್ಟು ಮೊತ್ತವಾಗಿದ್ದು. ಅದು ಜೀವ

---

[2] ಸಂಕ್ಷಿಪ್ತ ಕನ್ನಡ – ಇಂಗ್ಲೀಷ ನಿಘಂಟು ಪು.ಸಂ.856 ಕ.ಸಾ.ಪ., ಬೆಂಗಳೂರು.

[3] ಕನ್ನಡ ನಿಘಂಟು ಸಂ. 5 ಪು 5370–71 ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು 1988.

[4] ಪರಿಸರ ಅಧ್ಯಯನ – ಡಾ.ಎಚ್.ಎಸ್.ನಿರಂಜನ, ಆರಾಧ್ಯ, ಪು.ಸಂ.2

ಸಂಕುಲದ ಅಥವಾ ಸುತ್ತಲಿನ ವಾತಾವರಣದ ಮೇಲೆ ಪ್ರಭಾವ – ಬೀರುತ್ತದೆ. "ಜೀವಿಯ ರಚನೆ ಬಾಳ್ವೆ ನಿರ್ಧರಿಸುವುದೆ ಪರಿಸರ"[೫] ಎಂಬುದು ಬ್ರಿಟಾನಿಕ್ ವಿಶ್ವಕೋಶದ ಅರ್ಥವಾಗಿದೆ.

ಈ ಎಲ್ಲ ಸಂಗತಿಗಳನ್ನು ಅವಲೋಕಿಸಿದ್ದಾಗ ಪರಿಸರವು ಒಂದು ವಿಜ್ಞಾನವೆಂದು ಹೇಳಬಹುದು.

ಪರಿಸರ ವಿಜ್ಞಾನ :

ಪರಿಸರದ ವೈಜ್ಞಾನಿಕ ವಿಶ್ಲೇಷಣೆಯಲ್ಲಿ ಇದನ್ನು ಇಕಾಲಜಿ ಎಂದು ಕರೆವರು. ಜರ್ಮನ್ ಪ್ರಾಣಿ ಶಾಸ್ತ್ರಜ್ಞ ಅರ್ನಸ್ಟ್ ಹೆಕಲ್ ಅವರು ೧೮೬೬ ರಲ್ಲಿ ಮೊದಲಿಗೆ ಇಕಾಲಜಿ ಎಂಬ ಪದ ಸೃಷ್ಟಿಸಿದರು"[೬]

ಇಕಾಲಜಿ ಅಂದರೆ, ಜೀವಗಳ ಅಧ್ಯಾಯನಿಸುವ ವಿಜ್ಞಾನವೆಂದೂ ಕರೆವರು"[೭] (ಇಕಾಲಜಿ ಎನ್ನುವ ಪದವು ಗ್ರೀಕ್ ಮೂಲದ (Oikos Surrounding, Logos = Study) ದಿಂದ ಬಂದಿದೆ"[೮]

ಪರಿಸರ ವಿಜ್ಞಾನವು ಅಧ್ಯಯನದ ದೃಷ್ಟಿಯಿಂದ ಎರಡು ವಿಭಾಗಗಳಾಗಿ ಮಾಡಬಹುದು.

(೧) ಪ್ರಾಣಿ ಪರಿಸರ ವಿಜ್ಞಾನ (Animal Ecology)

(೨) ಸಸ್ಯ ಪರಿಸರ' ವಿಜ್ಞಾನ (Plant Ecology)

ಹಾಗೇ ಮಾನವ ಪರಿಸರ (Human Ecology)ಯನ್ನು ಪ್ರಾಣಿ ಪರಿಸರದಿಂದ ಭಿನ್ನವಾಗಿ ಅಭ್ಯಾಸಿಸಬಹುದುದಾಗಿದೆ. ಈ ಹಿನ್ನೆಲೆಯಲ್ಲಿ ಪರಿಸರವಿಜ್ಞಾನವು "ಒಂದು ಜೀವಿಯ ಅಥವಾ ಜೀವ ಸಮೂದಾಯದ ಮೇಲೆ ಪ್ರಭಾವಕಾರಿಯಾಗುವ ಸಕಲ ಬ್ಯಾಹ್ಯ ಬಲಗಳ

---

[5] ಪರಿಸರ ಅಧ್ಯಯನ – ಡಾ.ಎಚ್.ಎಸ್.ನಿರಂಜನ, ಆರಾಧ್ಯ, ಪು.ಸಂ.2

[6] ಪರಿಸರ ಅಧ್ಯಯನ – ಡಾ.ಎಚ್.ಎಸ್.ನಿರಂಜನ, ಆರಾಧ್ಯ, ಪು.ಸಂ.2

[7] ಪರಿಸರ ಅಧ್ಯಯನ – ಡಾ.ಎಚ್.ಎಸ್.ನಿರಂಜನ, ಆರಾಧ್ಯ, ಪು.ಸಂ.2

[8] ಪರಿಸರ ವಿಜ್ಞಾನ – ಕನ್ನಡ ವಿಶ್ವಕೋಶ, ಸಿ.ಡಿ. ಮೈಸೂರು ವಿಶ್ವವಿದ್ಯಾಲಯ, ಮೈಸೂರು–2006.

ಅಥವಾ ನಿಯಮಗಳ ಮೊತ್ತ. ಆದರೂ ಈ ಪದದ ಹಿಂದಿರುವ ಭಾವನೆ ಬಲು ಸಂಕೀರ್ಣವಾದದ್ದು ಆದ್ದರಿಂದ ಪರಿಸರವೆಂದರೆ, ಇಂತಿಷ್ಟು ಬಲಗಳು. ಇಂತಿಷ್ಟು ಪ್ರಭಾವಗಳ ಸಮುದಾಯವೆಂದು ವಿಶ್ಲೇಷಿಸುವುದು ಬಲು ಕಷ್ಟವೂ ಹೌದು ದೋಷಪೂರಿತವೂ ಹೌದು ಆದರೂ ವಿಜ್ಞಾನದ ಪರಿಭಾಷೆಯಲ್ಲಿ ಒಂದು ಜೀವಿ ಒಂದು ನಿರ್ದಿಷ್ಟ ಸ್ಥಳದ ನಿವಾಸ, ಇಲ್ಲಿ ನಿವಾಸಿ ಪದದ ವ್ಯಾಪ್ತಿ ಆಜೀವಿ ಬದುಕಿರುವ ಪರಿಸರದ ಬಲ ನಿಯಮಗಳಿಗೆ ಅನ್ವಯಿಸುತ್ತದೆ. ಅಭ್ಯಾಸದ ಅನುಕೂಲತೆಗಾಗಿ, ಅಭ್ಯಾಸದ ಸೌಕರ್ಯಕ್ಕಾಗಿ ಈ ನಿಯಮಗಳನ್ನು ಭೌತ, ರಾಸಾಯನಿಕ, ಮತ್ತು ಜೈವಿಕ ಎಂಬ ಮೂರು ಭಾಗಗಳಾಗಿ ವಿಭಾಗಿಸಬಹುದು"[೯] ಈ ರೀತಿ ಪರಿಸರವನ್ನು ಬೇರೆ ಬೇರೆ ರೀತಿಯಲ್ಲಿ ಅರ್ಥೈಸಬಹುದಾಗಿದೆ.

ಪರಿಸರದ ಸ್ವರೂಪ ವ್ಯಾಪ್ತಿ :

ಜೀವ ಜಗತ್ತಿನ ವಿಕಾಸದ ಮೇಲೆ ಪ್ರಭಾವ ಬೀರಿದ ಪರಿಸರವು ಇಂದು ಅಧ್ಯಯನ ಯೋಗ್ಯ ವಿಷಯವಾಗಿ ಬೆಳೆದಿದೆ. ಪ್ರಸಿದ್ಧ ಪರಿಸರ ವಿಜ್ಞಾನಿ ಓಡಮ್ ಅವರ ಅಭಿಮತದಂತೆ, "ಪ್ರಕೃತಿಯ ರಚನೆ ಮತ್ತು ಕಾರ್ಯವನ್ನು ಅಧ್ಯಯನಮಾಡುವ ಶಾಸ್ತ್ರವೆ ಪರಿಸರ"[೧೦] ಎಂದಿದ್ದಾರೆ.

ಈ ಹಿನ್ನೆಲೆಯಲ್ಲಿ ಪರಿಸರವನ್ನು ೪ ಪ್ರಕಾರಗಳಲ್ಲಿ ವಿವರಿಸಬಹುದು;

೧) ಭೌತಿಕ ಪರಿಸರ
೨) ಜೈವಿಕ ಪರಿಸರ
೩) ಆರ್ಥಿಕ ಪರಿಸರ
೪) ಸಾಮಾಜಿಕ ಪರಿಸರ

೧. ಭೌತಿಕ ಪರಿಸರ :

ಭೌತಿಕ ಪರಿಸರದಲ್ಲಿ ನೆಲ, ಜಲ, ಗಾಳಿ, ಬೆಟ್ಟಗುಡ್ಡ, ಪರ್ವತ, ಗ್ರಹ, ನಕ್ಷತ್ರ ಹೀಗೆ ಭೌತವಸ್ತುಗಳನ್ನು ಸಂಬಂಧಿಸಿದ ಇದನ್ನೇ ಭೂಗೋಳ, ವಾಯುಗೋಳ, ಜಲಗೋಳ ಎಂದೂ

---

9 ಪರಿಸರ ಅಧ್ಯಯನ – ಡಾ.ಎಚ್.ಎಸ್.ನಿರಂಜನ, ಆರಾಧ್ಯ, ಪು.ಸಂ.2

10 ಪರಿಸರ ವಿಜ್ಞಾನ – ಕನ್ನಡ ವಿಶ್ವಕೋಶ, ಸಿ.ಡಿ. ಮೈಸೂರು ವಿಶ್ವವಿದ್ಯಾಲಯ, ಮೈಸೂರು–2006.

ವಿಭಜಿಸಬಹುದು ಇವೆಲ್ಲ ಮನುಷ್ಯರ ಜೀವನ ವಿಧಾನದೊಂದಿಗೆ ಸಹ ಸಂಬಂಧ ಹೊಂದಿದ್ದ ಮನುಷ್ಯ ಬದುಕಿನ ಹುಟ್ಟು, ಸಾವು, ಸಮಾಜೋಧಾರ್ಮಿಕ ಸಾಂಸ್ಕೃತಿಕ ಚಟುವಟಿಕೆಗಳ ಮೇಲೆ ಪ್ರಭಾವ ಬೀರುತ್ತವೆ. ಪ್ರಾದೇಶಿಕ ಭಿನ್ನತೆ ಗುಣವಾಗಿ ಪರಿಸರದ ಬದಲಾವಣೆ ಕಾಣಿಸಿಕೊಳ್ಳುತ್ತವೆ. ಆಚಾರ, ವಿಚಾರ, ಉಡಿಗೆ, ತೊಡಿಗೆ ಭೌತಿಕ ಪರಿಸರದ ಪ್ರಭಾವದಿಂದ ಒಡಮೂಡುತ್ತದೆ. ಮಾನವ ಬದುಕಿನ ಒಟ್ಟು ಆಯಾಮಗಳಿಗೆ ಭೌತಿಕ ಪರಿಸರ ಸಂಬಂಧ ಹೊಂದಿದೆ.

೨. ಜೈವಿಕ ಪರಿಸರ :

ಜೈವಿಕ ಪರಿಸರವು ಮನುಷ್ಯರನ್ನು ಒಳಗೊಂಡಂತೆ ಪಶು, ಪಕ್ಷಿ, ಸಸ್ಯ, ಮೊದಲಾದ ಜೀವರಾಶಿ ಹೊಂದಿದ್ದು, ಇದರಲ್ಲಿ ಮಿಲಿಯನ್ ಗಟ್ಟಲೆ ಜೀವ ಸಂಕುಲವಿದೆ ಇವೆಲ್ಲಕ್ಕೂ ಪೋಷಕ ಪರಿಸರಗಳನ್ನು ಉಷ್ಣ ಶೀತ, ಸಮಶಿತೋಷ್ಣ ವಲಯಗಳೆಂದು ವಿಭಜಿಸಬಹುದು ಇವು ಕಾಲದೇಶ ಪರಿಸರ, ಪರಿಸ್ಥಿತಿಗಳ ಪ್ರಭಾವಕ್ಕೊಳಪಡುತ್ತದೆ.

೩. ಆರ್ಥಿಕ ಪರಿಸರ :

ಆರ್ಥಿಕ ಪರಿಸರವು ಆರ್ಥಿಕ ಕ್ಷೇತ್ರವನ್ನು ಅವಲಂಬಿಸಿದ ಮನುಷ್ಯರ ಉತ್ಪಾದನೆ ಆಯವ್ಯಯ, ಅನುಭೋಗಕ್ಕೆ ಸಂಬಂಧಿಸಿದ್ದಾಗಿದ್ದು, ಕಾಡಿನ ಜನರು, ಗ್ರಾಮೀಣರು ಹಾಗೂ ನಗರವಾಸಿಗಳ ಬದುಕಿನ ಮೇಲೆ ಸಾಂಧರ್ಭಿಕ ಪರಿಣಾಮ ಬೀರುತ್ತದೆ.

೪. ಸಾಮಾಜಿಕ ಪರಿಸರ :


ಸಾಮಾಜಿಕ ಪರಿಸರವು ಮನುಷ್ಯರ ಸಾಮಾಜಿಕ ಕ್ಷೇತ್ರವನ್ನು ಒಳಗೊಂಡಿರುತ್ತದೆ. ಮಾನವ ಸಮಾಜ ಜೀವಿ ಆಗಿರುವುದರಿಂದ ಸಾಮಾಜಿಕ ಪರಿಸರವು ನೇರವಾಗಿ ಮನುಷ್ಯರ ಬದುಕಿನ ಮೇಲೆ ಪ್ರಭಾವಬೀರುತ್ತದೆ.

ಇದರಲ್ಲಿ ಜಾತಿ, ಧರ್ಮ ವರ್ಗ ವರ್ಣ ಮೊದಲಾದ ಸಾಮಾಜಿಕ ಸ್ಥರ ವಿನ್ಯಾಸ ಒಳಗೊಂಡಿದ್ದು ಅವುಗಳ ಶುದ್ಧಿಕರಣಕ್ಕಾಗಿ ಅನೇಕ ಮಾಧ್ಯಮಗಳ ನೆರವು ಪಡೆದು ಸಾಮಾಜಿಕ ಪರಿಸರ ರೂಪಿಸಲಾಗಿದೆ.[೧೧]

---

[11] ವಿವರಕ್ಕಾಗಿ ನೋಡಿ – ಪರಿಸರ ಪಕ್ಷಿ – ಪ್ರೊ. ಕೆ. ಬೈರಪ್ಪ

ಪರಿಸರ ಅಧ್ಯಯನ – ಬಹುಶಿಸ್ತೀಯ ವಿಷಯ *



ಇಂಥ ವೈವಿಧ್ಯಮಯವಾದ ಪರಿಸರ ಇಂದು ಮಲಿನವಾಗುತ್ತಿದೆ. ಅದನ್ನು ನಾವು ಪರಿಸರ ಮಾಲಿನ್ಯವೆಂದು ಕರೆಯುತ್ತೇವೆ. ಪರಿಸರ ಹಾಳಾದರೆ ಕೇವಲ ಮಾನವ ಜೀವಿಯೇ ಅಲ್ಲ ವಿಶ್ವದ ಎಲ್ಲ ಚರಾಚರ ವಸ್ತು, ಜೀವಸಂಕುಲ ಅಪಾಯ ಎದುರಿಸಬೇಕಾಗಿದೆ.

* ಪರಿಸರ ಅಧ್ಯಯನ – ಡಾ.ಎಚ್.ಎಸ್.ನಿರಂಜನ, ಆರಾಧ್ಯ

ಪರಿಸರ ಮಾಲಿನ್ಯ :

ಪರಿಸರ ನಾಶದಿಂದ ಜೀವಿ ಸಮುದಾಯಗಳಲ್ಲೂ ಏರುಪೇರುಗಳುಂಟಾಗುತ್ತವೆ. ಮರಗಳ ಆಶ್ರಯ ಇಲ್ಲವಾದಾಗ ಮಂಗಗಳು ಆಶ್ರಯಬಯಸಿ ವಲಸೆ ಹೋಗುತ್ತವೆ. ಹೀಗಾದಾಗ ತಾನೇ ತಾನಾಗಿ ಎಲ್ಲಾ ಪ್ರಾಣಿಗಳು, ಪಕ್ಷಿಗಳು ಆಶ್ರಯಬಯಸಿ ವಲಸೆ ಹೋಗುತ್ತವೆ. ಇದು ಸಂತಾನಾಭಿವೃದ್ಧಿಯ ಮೇಲೂ ತಂತಾನೇ ಪರಿಣಾಮ ಬೀರುತ್ತದೆ. ಅಷ್ಟೇ ಅಲ್ಲದೇ ನಿಸರ್ಗದತ್ತವಾದ ಅದೆಷ್ಟೋ ಹಣ್ಣುಗಳು, ರಾಮಫಲ, ಸೀತಾಫಲ, ಹಳದಿ ಬದನೆ ಅಥವಾ ಗುಳುದಕಾಯಿ, ಕಲ್ಲಸಬಸ್ಸಿಗೆ ಇಂದಿನ ಪೀಳಿಗೆಗಳಾದ ನಮಗೆ ಪುಸ್ತಕಗಳಲ್ಲಿ ಓದಿ ನೋಡಿ ಓ . . ಇಂತಹ ತರಕಾರಿಗಳು ಕೂಡಾ ಇದ್ದುವಾ! ಎಂದು ಬೆಚ್ಚಿಬೀಳುವ ದಿನಗಳು ನಮ್ಮೆದುರಿಗೆ ಬರದಂತೆ ನೋಡಿಕೊಳ್ಳಬೇಕಾಗಿದೆ. ಈ ಪರಿಸರದ ನಾಶ ಹಾಗೂ ಮಾಲಿನ್ಯತೆಯ ಕುರಿತು ಸಮಾಚಾರಗಳು ಕೇಳಿಬರುತ್ತವೆ. ಕೆಲವೊಮ್ಮೆ ಗೊಂದಲಗಳು ಉಂಟಾಗುತ್ತವೆ. ಪರಿಸರವನ್ನು ಕಾಪಾಡಲು ಕೆಲವು ಪರಿಸರವಾದಿ ವ್ಯಕ್ತಿಗಳೂ, ಸಂಘಟನೆಗಳೂ ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಿದ್ದಾರೆ. ಸೈಲೆಂಡವ್ಯಾಲಿ, ತಹರಿ ಆಣೆಕಟ್ಟು, ನರ್ಮದಾ ಸರೋವರ, ಕೈಗಾ ಯೋಜನೆಗಳು 'ಇವತ್ತಿನ ದಿನಗಳಲ್ಲಿ ಪ್ರಚಾರವಾಗುತ್ತಿದ್ದರೂ ಸಹ' ಪರಿಸರನಾಶ ನಿರಾತಂಕವಾಗಿ ನಡೆಯುತ್ತಲೇ ಇದೆ.

ನಮ್ಮ ಸುತ್ತಮುತ್ತಲಿನ ಪರಿಸರವನ್ನು ವೀಕ್ಷಿಸಿದರೆ ನಮಗೆ ಸಜೀವ ಮತ್ತು ನಿರ್ಜೀವ ಎಂಬ ಎರಡು ವಸ್ತುಗಳು ಗೋಚರಿಸುತ್ತವೆ. ಕಲ್ಲು, ಮಣ್ಣು, ನೀರು, ಗಾಳಿ, ಬೆಳಕು ಇತ್ಯಾದಿ ನಿರ್ಜೀವ ವಸ್ತುಗಳು ಇವುಗಳೊಂದಿಗೆ ಪ್ರಾಣಿ ಮತ್ತು ಸಸ್ಯಗಳು ಸೇರಿವೆ. ನಮ್ಮ ಪರಿಸರದಲ್ಲಿ ಒಂದರ ಮೇಲೆ ಇನ್ನೊಂದು ಜೀವಿ ಅವಲಂಬಿಸಿವೆ. ಇದಕ್ಕೆ 'ಆಹಾರ ಸರಪಳಿ' ಎನ್ನುತ್ತೇವೆ. ಕ್ರಿಮಿಕೀಟಗಳು ಸಸ್ಯಗಳನ್ನು ಆಹಾರವಾಗಿ ಉಪಯೋಗಿಸಿಕೊಳ್ಳುತ್ತವೆ. ಕಪ್ಪೆಗಳು ಹಾವುಗಳಿಗೆ ಆಹಾರ, ಹಾವು ಮುಂಗುಸಿಗಳಿಗೆ ಆಹಾರವಾಗಿ ಈ ರೀತಿ ಒಂದು ಜೀವಿಯು ಇನ್ನೊಂದು ಜೀವಿಯನ್ನು ಆಹಾರಕ್ಕಾಗಿ ಅವಲಂಬಿಸಿರುವುದನ್ನು ಕಾಣುತ್ತೇವೆ. ಒಂದು ಪರಿಸರದಲ್ಲಿರುವ ಜೀವಿ ಸಮುದಾಯ ಅವುಗಳ ಸಂಖ್ಯೆ ಮತ್ತು ಆಹಾರದ ಸರಪಳಿ ಅಲ್ಲಿನ ಪರಿಸರದ ಅವಸ್ಥೆಯನ್ನು ನಿರ್ಧರಿಸುತ್ತದೆ. ಕಾಡು, ಹುಲ್ಲುಗಾವಲು, ಸರೋವರಗಳು ಇತ್ಯಾದಿ ತಮ್ಮದೇ ಆದ ಪರಿಸರ ವ್ಯವಸ್ಥೆಯನ್ನು ಹೊಂದಿರುತ್ತವೆ. ಇವುಗಳನ್ನು ಪರಿಸರದ ಪಿರಮಿಡ್‌ಗಳಾಗಿಯೂ

ತೋರಿಸಬಹುದು. ಸಸ್ಯಹಾರಿ ಮತ್ತು ಮಾಂಸಾಹಾರಿ ಪ್ರಾಣಿಗಳೂ ಇಲ್ಲಿ ಜೀವಿಸುತ್ತವೆ. ಸಸ್ಯಗಳನ್ನು ಅವಲಂಬಿಸಿದ ಕ್ರಿಮಿಕೀಟ, ಹಕ್ಕಿಗಳು ಗಿಡಮರಗಳ ಮೇಲಿರುತ್ತವೆ. ಹಕ್ಕಿಗಳು ಮತ್ತು ಕೀಟಗಳು ಮೇಲಸ್ಥರ'ದಲ್ಲಿರುತ್ತವೆ. ಪರಿಸರದ ಪಿರಮಿಡ್ ಪ್ರತಿಯೊಂದು ಜೀವಿಯ ಸಂಖ್ಯೆಯನ್ನು ತೋರಿಸುತ್ತದೆ. ಎರೆಹುಳುಗಳನ್ನು ಪ್ರಕೃತಿಯ ಒಂದು "ಜೈವಿಕ ಕಾರ್ಖಾನೆ" ಎಂದೇ ಕರೆಯಬಹುದು. ಎರೆಹುಳು ರೈತನಮಿತ್ರ ಎಂದು ಕರೆಯಲ್ಪಡುವ ಹುಳು, ಮಣ್ಣಿನ ಜೈವಿಕ ಕ್ರಿಯೆಗಳನ್ನು ಮತ್ತೆ ಜೀವಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಇವು ಮಣ್ಣಿನಲ್ಲಿ ವಾಯು ಸಂಚಾರವುಂಟು ಮಾಡುವುದಲ್ಲದೆ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತವೆ. ಭೂಮಿಯ ಫಲವತ್ತತೆಯನ್ನು ವೃದ್ಧಿಸುವ ಎರೆಹುಳುಗಳ ಸಂಖ್ಯೆ ಈಗ ಕಡಿಮೆಯಾಗಿಬಿಟ್ಟಿದೆ. ನಿರೀಕ್ಷೆಗೂ ಮೀರಿದ ವೇಗದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗೆ ಆಹಾರ ಪೂರೈಸಲು ಆಧುನಿಕ ಬೇಸಾಯ ಕ್ರಮಗಳಾದ ರಾಸಾಯನಿಕ ಗೊಬ್ಬರ ಮತ್ತು ಕೀಟ, ರೋಗ, ಕಳೆನಾಶಕಗಳನ್ನು ಮಿತಿಮೀರಿ ಉಪಯೋಗಿಸಿ ನೈಸರ್ಗಿಕ ಗೊಬ್ಬರಗಳಾದ ಹಟ್ಟಿಗೊಬ್ಬರ ಹಸುರೆಲೆ ಗೊಬ್ಬರಗಳ ಉಪಯೋಗ ಕಡಿಮೆಯಾಗುತ್ತಾ ಬಂದಿದೆ.

ಬ್ರಿಟನನಲ್ಲಿ "೧೯೯೫ರಲ್ಲಿ 'ಲೇಡಿಬರ್ಡ್' ಎಂಬ ಗುಲಗಂಚಿ ಗಾತ್ರದ ಸುಂದರ ಬಣ್ಣದ ಕೀಟಗಳನ್ನು ಹುಡುಕುವ ರಾಷ್ಟ್ರ ವ್ಯಾಪ್ತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು."[೧೩] ಲಕ್ಷಾಂತರ ಎಳೆಯರು, ದೊಡ್ಡವರೂ ಸಹ ವಾರಗಟ್ಟಲೆ ತಮ್ಮ ಸುತ್ತಲ ಗದ್ದೆ ತೋಟ, ಕಾಡು ಮೇಡುಗಳಲ್ಲಿ ನಡೆಸಿದ ಈ ಕೀಟ ಸಂಗ್ರಹಣ ಕಾರ್ಯಕ್ರಮದಲ್ಲಿ ಈವರೆಗೂ ಅಗೋಚರವಾಗಿಯೇ ಉಳಿದಂಥ ಹಾಗೂ ನಿರ್ವಂಶವಾಗುತ್ತಿರುವಂಥ ಸಹಸ್ರಾರು ಪ್ರಭೇಧಗಳ 'ಲೇಡಿಬರ್ಡ' ಪತ್ತೆಯಾದವು. ಪರಿಸರ ಸಮತೋಲನೆಯಲ್ಲಿ ಈ ಕೀಟಗಳ ಪಾತ್ರ ಏನೆಂಬುದರ ಬಗೆಗೂ ಅಧ್ಯಯನ ನಡೆಸಲಾಯಿತಂತೆ! ಇಂದು ಯುರೋಪ, ಅಮೇರಿಕಾ, ಆಸ್ಟೇಲಿಯಾ, ಜಪಾನ್‌ಗಳಲ್ಲಿ ಹಿಂದೆಂದಿಗಿಂತ ಹೆಚ್ಚಿನ ಜನ ಜಾಗೃತಿಯ ಕಾರ್ಯಕ್ರಮಗಳು ನಡೆಯುತ್ತಿವೆ."[೧೪] ಜೂನ್, ೫ ವಿಶ್ವಪರಿಸರ ದಿನಾಚರಣೆಯ ಜತೆಗೆ ಅವರು ಏಪ್ರೀಲ್, ೨೨ ರಂದು ಭೂದಿನ ಆಚರಿಸುತ್ತಾರೆ. ಏಪ್ರಿಲ್, ೨೬ ರಂದು ಚರ್ನೊಬಿಲ್ ದಿನ, ಅಗಸ್ಟ, ೬ ರಂದು ಹಿರೋಷಿಮಾ ದಿನ, ಡಿಸೆಂಬರ್, ೪ ರಂದು ಭೂಪಾಲ್ ದಿನ, ಹೀಗೆ ಭೂಮಿಗೆ ಆಪತ್ತು ಬಂದ ದಿನಗಳನ್ನೆಲ್ಲಾ ನೆನಪಿಸುವ

---

13 ಪ್ರತಿದಿನ ಪರಿಸರ ದಿನ – ನಾಗೇಶ ಹೆಗಡೆ.

14 ಪ್ರತಿದಿನ ಪರಿಸರ ದಿನ – ನಾಗೇಶ ಹೆಗಡೆ.

ಹಾಗೂ ಜನರನ್ನು ಜಾಗೃತರನ್ನಾಗಿ ಮಾಡುವ ಕಾರ್ಯಕ್ರಮಗಳಲ್ಲಿ ಇಂದಿಗಿಂತ ಹೆಚ್ಚಿನ ಸಂಖ್ಯೆಯ ಜನ ಭಾಗವಹಿಸುತ್ತಾರೆ. ಎಷ್ಟೋ ಬಾರಿ ಅಂಥ ದಿನಾಚರಣೆಗಳಿಗೆಲ್ಲಾ ಕಾಯದೆ ಅವಕಾಶ ಬಂದಾಗಲೆಲ್ಲ ಒಂದುಗೂಡುತ್ತಾರೆ. ಮತ್ತೆ ಅಲ್ಲಿಯ ಜನ ಹಾಕಿಕೊಳ್ಳುವ ಕಾರ್ಯಕ್ರಮಗಳು ತೀರ ವಿಶಿಷ್ಟವಾಗಿರುತ್ತವೆ.

ಕಾಡು, ಕಣಿವೆ, ಪೊದರು ಕಲ್ಲುಬಂಡೆಗಳಿಂದ ಕೂಡಿದ ವಿವಿಧ ಪರಿಸರಗಳಲ್ಲಿ ಚಿರತೆಗಳು ವಾಸಿಸುತ್ತವೆ. ಅವುಗಳ ನೈಸರ್ಗಿಕ ಆಹಾರದ ಅಭಾವ ತಲೆದೂರಿದಾಗ ಅವು ಸಾಕುಪ್ರಾಣಿಗಳ ಬೇಟೆಯಾಡುತ್ತವೆ. "೧೯೯೩ರ ಒಂದು ಅಂದಾಜು ಪ್ರಕಾರ ಭಾರತದಲ್ಲಿದ್ದ ಚಿರತೆಗಳ ಸಂಖ್ಯೆ ಸುಮಾರು ೭೫೦೦" ಈಗ ಚಿರತೆಯ ಅದೃಷ್ಟ ಕಳ್ಳಬೇಟೆಗಾರರ ಗುಂಡೇಟಿನಿಂದ ತಪ್ಪಿಸಿಕೊಳ್ಳೊ ಅದರ ಸಾಮರ್ಥ್ಯವನ್ನು ಅವಲಂಬಿಸಿದೆ. ಭಾರತದಲ್ಲಿರುವ ಚಿರತೆಗಳ ಸಂಖ್ಯೆ ಹುಲಿಗಳ ಸಂಖ್ಯೆಯ ಎರಡು ಪಾಲಿನಷ್ಟು ಎಂದು ಹೇಳಲಾಗಿದೆ. ಒಂದು ಹುಲಿ ಕೊಲ್ಲಲ್ಪಟ್ಟಾಗ ಐದು ಚಿರತೆಗಳು ಕೊಲ್ಲಲ್ಪಡುತ್ತವೆ. ಹುಲಿಯನ್ನು "ರಾಷ್ಟಪ್ರಾಣಿ" ಎಂದು ೧೯೭೨ರಲ್ಲಿ ಘೋಷಿಸಲಾಯ್ತು. ಸಂರಕ್ಷಣೆಗೊಳಗಾಗಬೇಕಾದ ಪ್ರಾಣಿಗಳಲ್ಲಿ ಹುಲಿಯೂ ಒಂದು. ಹುಲಿಗಳ ಸಂತತಿಯನ್ನು ಉಳಿಸಲು ವಿಶ್ವವನ್ಯಪ್ರಾಣಿ ನಿಧಿ (World Wildlife Fund)ಯ ಸಹಾಯದಿಂದ ಹುಲಿಸಂರಕ್ಷಣಾ ಯೋಜನೆಯನ್ನು ಆರಂಭಿಸಲಾಯ್ತು. "ಈ ಶತಮಾನದ ಆದಿಯಲ್ಲಿ ಭಾರತದಲ್ಲಿ ೪೦,೦೦೦ ಹುಲಿಗಳಿದ್ದವು. ಈ ಸಂಖ್ಯೆ ೧೯೮೯ರಲ್ಲಿ ೪,೩೩೦ಕ್ಕೆ ಇಳಿಯಿತು"[೧೫] ೧೯೯೫ರಲ್ಲಿ ಭಾರತದಲ್ಲಿದ್ದ ಹುಲಿಗಳ ಸಂಖ್ಯೆ ಸುಮಾರು ೩೦೦೦ ಎಂದು ಸಮೀಕ್ಷೆಗಳಿಂದ ತಿಳಿದುಬಂದಿದೆ. ಒಂದು ಹುಲಿಯ ಚರ್ಮಕ್ಕೆ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ರೂ. ೪ ಲಕ್ಷ ರೂಪಾಯಿಗಳಷ್ಟು ಬೆಲೆ ಇದೆ ಎಂದು ಲೆಕ್ಕಹಾಕಿದರೆ ಒಂದು ಹುಲಿಯ ಬೆಲೆ ರೂ. ೩೪ ಲಕ್ಷ ರೂಪಾಯಿಗಳಷ್ಟು"[೩]. ಇತ್ತೀಚಿನ ದಿನಗಳಲ್ಲಿ ಕ್ಷೀಣಿಸುತ್ತಿರುವ ಪಾಂಡಾಗಳ ಸಂತಾನಾಭಿವೃದ್ಧಿಗಾಗಿ ಕೃತಕ ಗರ್ಭಧಾರಣೆಯ ಪ್ರಯೋಗವನ್ನು ಮಾಡಲು ೧೯೯೧ ರಿಂದಲೂ ಚೀನಾ ಸರ್ಕಾರ ಪ್ರಯತ್ನಿಸಿತು. ಬಂಡೆಗಳೇ ತುಂಬಿದ ಹಿಮಾಲಯ ಪ್ರದೇಶದಲ್ಲಿ ವೈರಿಗಳಿಗೆ ತಕ್ಷಣ ಗೊತ್ತಾಗದಂತೆ ಅಡಗಲು ಸಹಾಯ ಮಾಡುತ್ತವೆ. ಅಲ್ಲದೆ ಮೈಮೇಲೆ ಬೆಳೆದಿರುವ ದಟ್ಟವಾದ ವಾಟರ್ ಪ್ರೂಫ್ ಕೂದಲು ಛಳಿ–ಗಾಳಿಯಿಂದ ಇವುಗಳನ್ನು ರಕ್ಷಿಸುತ್ತವೆ.

---

[15] ಸಾಪ್ತಾಹಿಕ ವಿಜಯ ಪುರವಣಿ – ವಿಜಯ ಕರ್ನಾಟಕ ದಿ: ೦೬.೧೦.೨೦೦೭.

೧೯೯೫ರಲ್ಲಿ ಭಾರತದಲ್ಲಿದ್ದ ಕಾಡಾನೆಗಳ ಸಂಖ್ಯೆ ೨೨೦೦೦ರಷ್ಟು ಎಂದು ಅಂದಾಜು. ನಾಗರಹೊಳೆ, ಬಂಡೀಪುರ, ಮಧುಮತಿ ಕಾಡುಗಳನ್ನು ರಾಷ್ಟ್ರೀಯ ಉದ್ಯಾನಗಳೆಂದು ಸಾರಲಾಗಿದೆ. ಇಲ್ಲಿ ಆನೆಗಳು ಸುರಕ್ಷಿತವಾಗಿ ಜೀವಿಸುತ್ತವೆ. ಆನೆಯ ನಾಶಕ್ಕೆ ಅವುಗಳ ಬೆಲೆಬಾಳುವ ದಂತಗಳೇ ಕಾರಣ. ಆನೆಯ ದಂತಕ್ಕೆ ಜಪಾನ್, ದುಬೈ ಮೊದಲಾದ ರಾಷ್ಟ್ರಗಳಲ್ಲಿ ತುಂಬಾ ಬೇಡಿಕೆಯಿದೆ. ದಂತ ಸೂಕ್ಷ್ಮ ಕೆತ್ತನೆಯ ಕೆಲಸಕ್ಕೆ ಉಪಯೋಗಿಸಲ್ಪಡುತ್ತವೆ. ದಂತಕೊರೆಯುವ ಕೆಲಸ ಭಾರತದಲ್ಲಿ ೪೦೦೦ ವರ್ಷಗಳಷ್ಟು ಹಳೆಯದು. ಕಳ್ಳಬೇಟೆಗಾರರ ಗುಂಡಿಗೆ ಪ್ರತಿ ವರ್ಷ ಸುಮಾರು ೨೦೦ ಗಂಡಾನೆಗಳು ಬಲಿಯಾಗುತ್ತವೆ ಎಂದು ಒಂದು ಅಂದಾಜು.

೧೯೯೭ರ ಮಾರ್ಚ ತಿಂಗಳಿನಲ್ಲಿ ನೀಲಗಿರಿ ಬೆಟ್ಟಗಳಲ್ಲೆ ೧೭ ಆನೆಗಳು ಕೊಲ್ಲಲ್ಪಟ್ಟವೆಂದು ಪತ್ರಿಕೆ ವರದಿ ಮಾಡಿತ್ತು. ಕರ್ನಾಟಕ ಮತ್ತು ಗುಜರಾತ ರಾಜ್ಯಗಳಿಂದ ದಂತಗಳು ಹೊರದೇಶಗಳಿಗೆ ಸಾಗಿಸಲ್ಪಡುತ್ತವೆ. ಪತ್ರಿಕಾ ವರದಿಯಂತೆ ದಂತಚೋರ ವೀರಪ್ಪನ ಪ್ರಥಮ ಬಾರಿಗೆ ೧೯೫೫ನೇ ಇಸವಿಯಲ್ಲಿ ಗೋಪಿನಾಥ ಗ್ರಾಮದಲ್ಲಿ ದಂತ ಸಂಗ್ರಹಕ್ಕಾಗಿ ಕಾಡಾನೆಯೊಂದನ್ನು ಬೇಟೆಯಾಡಿದನಂತೆ![೧೬] ಮುಂದಿನ ಮೂರುದಶಕಗಳಲ್ಲಿ ವೀರಪ್ಪನ ಒಬ್ಬನೇ ಬೇಟೆಯಾಡಿದ ಕಾಡಾನೆಗಳ ಸಂಖ್ಯೆ ೨೦೦ರಷ್ಟು.

ನಮ್ಮ ಪರಿಸರದ ಪರಿಸ್ಥಿತಿ ಬಿಗಡಾಯಿಸುವುದರ ಹೊಣೆ ಸ್ವತಃ ನಮ್ಮ ಮೇಲೆ ಬೀಳುತ್ತದೆ. ನಿಸರ್ಗವು ಪರಿಸರದಲ್ಲಿ ಒಂದು ಸಹಸಂತುಲವನ್ನು ಸ್ಥಿರಗೊಳಿಸಿದೆ. ನಾವು ಅದನ್ನು ಸ್ಥಿರವಾಗಿ ನೋಡಬಲ್ಲೆವು ಮತ್ತು ತಿಳಿಯಬಲ್ಲೆವು. ಈ ಸಂತುಲನವನ್ನು ತಿಳಿಯದೇ ಇರುವ ಕಾರಣದಿಂದಲೇ ಮನುಷ್ಯ ತನ್ನ ಕೃತ್ಯದಿಂದ ಹೆದಗೆಟ್ಟಿರುವ ಪರಿಸರದ ದುರ್ದೆಸೆಗಳನ್ನು ಸಹಿಸಿಕೊಳ್ಳಬೇಕಾಗಿದೆ. ಈ ಅಜ್ಞಾನದಿಂದ ಬಳುವಳಿಯಾಗಿ ಪಡೆವುದೆಂದರೆ ಮನುಷ್ಯ ಕ್ಷಾಮ, ಬರ, ಪ್ರವಾಹ, ಸುನಾಮಿ, ನೆಲ, ಜಲ ವಾಯುಮಾಲಿನ್ಯ ಮತ್ತಿತರ ಮಾರಕ ಕಾಯಿಲೆಗಳನ್ನು ಎದುರಿಸಬೇಕಾಗಿದೆ.

[16] ಸಾಪ್ತಾಹಿಕ ವಿಜಯ ಪುರವಣಿ – ವಿಜಯ ಕರ್ನಾಟಕ ದಿ: ೦೬.೧೦.೨೦೦೭.

ಪರಿಸರ ಪ್ರಜ್ಞೆ ಇತಿಹಾಸ :

ಪರಿಸರ ಕುರಿತ ಅಧ್ಯಯನದ ಇತಿಹಾಸ ತೀರ ಇತ್ತೀಚಿನದಾದರೂ ಪರಿಸರದ ಇತಿಹಾಸ ಮಾನವ ವಿಕಾಸದ ಪೂರ್ವದ್ದು, ಇದರಲ್ಲಿ ಪರಿಸರ ಪ್ರಜ್ಞೆ ಮಾನವ ಪ್ರಜ್ಞೆಯ ಇತಿಹಾಸದೊಂದಿಗೆ ಬೆಳೆದು ಬಂದಿದೆ. ಏಕೆಂದರೆ ಜೀವ ಜಾಲವನ್ನು ಸೃಷ್ಠಿಸಿದವನು ಮನುಷ್ಯನಲ್ಲ ಅವನು ಆ ಜಾಲದಲ್ಲಿಯ ಒಂದು ಎಳೆಮಾತ್ರ.

ಜಗತ್ತಿನ ಬಹುತೇಕ ಎಲ್ಲ ನಾಗರಿಕತೆಗಳು ಪರಿಸರ ಪ್ರೀತಿಯಿಂದ ಹುಟ್ಟಿಕೊಂಡಿವೆ. ಅಲ್ಲೆಲ್ಲ ಪರಿಸರ ಪ್ರಜ್ಞೆ ಕಾಣಬಹುದಾಗಿದೆ. ಮನುಷ್ಯ ನಿರ್ಮಿತ ಕೈಗಾರಿಕೆಯಿಂದಾಗಿ ಉಂಟಾಗುತ್ತಿದ್ದ ಮಾಲಿನ್ಯ ತಡೆಯಲು ಪಶ್ಚಿಮ ರಾಷ್ಟ್ರಗಳು ನಮ್ಮ ಗಮನ ಸೆಳೆದವು. ಕೈಗಾರಿಕೆಗಳು ಬರುವ ಮೊದಲೆ ಮುಂದಾಲೋಚನೆಯಿಂದ ಭಾರತೀಯರಲ್ಲಿ ಪರಿಸರ ಪ್ರಜ್ಞೆ ಕುರಿತು ಚಿಂತನೆಗಳು ನಡೆದವು. ಭೂಮಿಯನ್ನೊಳಗೊಂಡಂತೆ ಪಂಚಭೂತಗಳು ಮಹತ್ವ ಅವುಗಳ ಸಂರಕ್ಷಣೆ ಸಂರಕ್ಷಣೆಗಾಗಿ ಅವುಗಳಿಗೆ ದೈವತ್ವ ಕಲ್ಪನೆ ಸ್ಪರ್ಶ ಇವೆಲ್ಲ ಪರಿಸರ ಪ್ರಜ್ಞೆಯ ದ್ಯೋತಕವೆಂದೇ ಭಾವಿಸಬಹುದು. "ಪರಿಸರ ಕುರಿತ ಕಾಳಜಿಯೇ ಪರಿಸರ ಪ್ರಜ್ಞೆ"

ಐರೂಪ್ಯ ರಾಷ್ಟಗಳ ಮಧ್ಯಯುಗದ ಚರಿತ್ರೆಯಲ್ಲಿ ತತ್ವ, ಶಾಸ್ತ್ರ, ಧರ್ಮ ಶಾಸ್ತ್ರಗಳಲ್ಲಿ ವೈಚಾರಿಕ ಚರ್ಚೆನಡೆದಾಗ ಕ್ರೈಸ್ತ ಧರ್ಮಶಾಸ್ತ್ರ ಮನುಷ್ಯ ಕೇಂದ್ರಿತ ಜಗತ್ ಸೃಷ್ಟಿಯನ್ನು ಚರ್ಚಿಸಿದಾಗ ಯಹೂದಿ ಚಿಂತಕ ವೈಮಾನೆಡ್ಸ್ ಎಂಬುವನು ಹೀಗೆ ಹೇಳುತ್ತಾನೆ "ಸಮಸ್ತ ಜೀವ ಜಾಲವು ಮನುಷ್ಯನಿಗೊಸ್ಕರ ಅಸ್ತಿತ್ವದಲ್ಲಿದೆ ಎಂದು ಭಾವಿಸುವುದು ತಪ್ಪು"[೧೭] ಮುಂದೆ ಅನೇಕ ಕವಿಗಳು ಚಿಂತಕರು, ಸಮಾಜ ಸುಧಾರಕರು, ವೈದ್ಯರು ಹೀಗೆ ಮೊದಲಾದವರೆಲ್ಲ ಔದ್ಯೋಗಿಕ ಕ್ರಾಂತಿ ಅದರ ಸಾಧಕ ಭಾಧಕಗಳ ಮತ್ತು ಕೈಗಾರಿಕಾ ಕ್ರಾಂತಿಯ ಫಲವಾಗಿ ಪರಿಸರದಲ್ಲಾಗುವ ಬದಲಾವಣೆ ಕುರಿತು ಅನೇಕ ರೀತಿಯ ಆತಂಕಗಳನ್ನು ವ್ಯಕ್ತ ಪಡಿಸಿದ್ದಾರೆ. ಶ್ರೇಷ್ಟ ಕವಿ ವಿಲೀಯಂ ಬ್ಲೇಕ್ "ಪೈಶಾಚಿಕ ಮಿಲ್ಲುಗಳ ಮದ್ಯೆ ಜರೋಸಲೇಂ ಕಟ್ಟಲಾಯಿತೆ"[೧೮] ಎಂದು ಉದ್ಗಾರವೆತ್ತಿದ್ದಾನೆ. ಮಿಲ್ಲುಗಳು ಧಾರ್ಮಿಕ ವಾತಾವರಣ ಹಾಳುಮಾಡುವುದೆಂಬ ಸಿಲುವಿನ ಹಿಂದೆ ಆ ನೆಲದ ದೇಶ ಸಂಸ್ಕೃತಿಗಳ ನೇಲನಿಷ್ಟ ಬದುಕಿಗೆ ಮಾರಕವೆಂಬ ಎಚ್ಚರಿಕ್ಕೆ ಅಲ್ಲಿ

---

[17] ಪರಿಸರ ಪಜ್ಞೆ – ಕಥೆ ವ್ಯಥೆ – ಎಮ್. ಮಹೇಶ, ಪು.ಸಂ.೮೯

[18] ಪರಿಸರ ಪಜ್ಞೆ – ಕಥೆ ವ್ಯಥೆ – ಎಮ್. ಮಹೇಶ, ಪು.ಸಂ.೮೯

ಕಾಣಬಹುದಾಗಿದೆ. ಆಂಗ್ಲ ಕಾದಂಬರಿಕಾರ ಚಾರ್ಲ್ಸ್ ಡಿಕ್ಸನ್ ತನ್ನ ಕಾದಂಬರಿ "ಹಾರ್ಡ್ ಟೈಮ್ಸ್" ನಲ್ಲಿ ಕೈಗಾರಿಕೆ ಕರಾಳ ಮುಖಗಳನ್ನು ಕಾಲ್ಪನಿಕವಾಗಿ ಚಿತ್ರಿಸಿದ್ದಾನೆ. ಪ್ರಸಿದ್ಧ ಕವಿ ವರ್ಡ್ಸ್ ವರ್ತ್, ತತ್ವ ಶಾಸ್ತ್ರಜ್ಞಾ ರಸ್ಕಿನ್ ಮೊದಲಾದವರೆಲ್ಲಾ ಪ್ರಕೃತಿಯನ್ನು (ಪರಿಸರವನ್ನು) ಗುರುವೆಂದು ಆರಾಧಿಸಿದ್ದಾರೆ ಅದರಲ್ಲಿ ಉನ್ನತ್ತಿ ಕಂಡಿದ್ದಾರೆ. ಮುಂದೆ ೧೯ನೇ ಶತಮಾನದಲ್ಲಿ ಪರಿಸರ ಕಾಳಜಿ ಸಂಬಂಧಿ ಹಲವಾರು ಸಂಸ್ಥೆಗಳು ಹುಟ್ಟಿಕೊಂಡವು ಆದರೆ ಪರಿಸರ ಚಳುವಳಿ ಸಾರ್ವತ್ರಿಕರಣ ಗೊಂಡದ್ದು ಕಳೆದ ಶತಮಾನದ ೬ನೇ ದಶಕದಲ್ಲಿ ಪರಿಸರ ಪ್ರಜ್ಞೆ ವಿಸ್ತಾರ ಗೊಳಿಸಿ ಇಡೀ ವಿಶ್ವದ ಗಮನ ಸೇಳೆದು ಆಧಾರ ಸಹಿತ ಶಾಸ್ತ್ರಿಯ ಅಧ್ಯಯನ ನಡೆಸಿದ್ದು ರಾಬೇಲ್ ಕಾರ್‌ಸನ್. ೧೯೬೨ರಲ್ಲಿ ಅವರ "ಮೌನ ವಸಂತ" (Sient Paring) ಕೃತಿ ಹೊರಬಂತು.[೧೯]

ಪರಿಸರ ಪ್ರಜ್ಞೆ ಇತಿಹಾಸದ ಸ್ವರೂಪ :

ಪ್ರಾಚೀನ ಕಾಲದಿಂದಲೂ ಮಾನವಸಮೂಹ ವಿವಿಧ ರೀತಿಯಲ್ಲಿ ಬೆಳೆದು ಬಂದಿರುವುದು ಕಂಡುಬರುತ್ತದೆ. ಇದರಲ್ಲಿ ಕೆಲವಷ್ಟು ನಮ್ಮ ಗಮನಕ್ಕೆ ಬಂದರೆ ಇನ್ನೊಂದಿಷ್ಟು ಗಮನಕ್ಕೆ ಬಾರದೇ ಇರುವ ಅದೆಷ್ಟೋ ಸಮೂಹಗಳಿವೆ. ಇವೆಲ್ಲ ನಮ್ಮ ಮೇಲೆ ನಮಗೆ ಗೊತ್ತಿಲ್ಲದಂತೆಯೇ ಪ್ರಭಾವ ಬೀರಿವೆ.

ಮಲೆನಾಡಿನ ಸೀಮೆಯ ಅಲ್ಲಲ್ಲಿ ಹುಲ್ಲಿನ ಮನೆಗಳು ಕಂಡು ಬರುತ್ತವೆ. ಮೇಲೆ ಹಂಚುಹಾಸಿರುತ್ತಾರೆ. ಮನೆಯ ಹುಲ್ಲಿನ ಗೋಡೆಗೆ ಅಲ್ಲಲ್ಲಿ ಸಿಗುವ ಜಿಗಿಯಾದ ಮಣ್ಣಿನಿಂದ ಸಾರಿಸಿ ಮೇಲೆ ಸುಣ್ಣಬಳಿದು 'ಜಾಜದಂತಹ' ಕಡುಗೆಂಪು ಬಣ್ಣದ ಚಿತ್ರಗಳು ಬಿಡಿಸಿದ್ದು ಕಂಡು ಬರುತ್ತವೆ. ಈ ಚಿತ್ರಗಳು ನೋಡಿದಾಗ ಆ ಕಾಡು ಜನರಿಗೆ ಪರಿಸರದೊಂದಿಗಿನ ಅನೋನ್ಯ ಸಂಬಂಧ ಕಂಡುಬರುತ್ತದೆ. ನಮ್ಮಲ್ಲಿ ಬೆಂಗಳೂರು-ಮೈಸೂರು ರಸ್ತೆಯಲ್ಲಿರುವ 'ರಾಮನಗರ' ನಲ್ಲಿರುವ ಜಾನಪದಲೋಕದಲ್ಲಿ ಈ ಬಗೆಯ ಚಿತ್ರ ಕಾಣಬಹುದು!

ಇಂತಹ ಚಿತ್ರಗಳು ನೋಡಿದಾಗ 'ಟೋಟಂ' ಎಂದು ಗುರುತಿಸಲು ಸುಲಭ. ಹೀಗೆಂದರೇನೆಂದು ಒಂದು ಪ್ರಶ್ನೆ ಸಾಮಾನ್ಯವಾಗಿ ಕೆಣಕುತ್ತದೆ. ಅದೇ ಪಂಗಡವೆಂದು ಇದರರ್ಥ. ಆಯಾ ಪಂಗಡದವರು ಎಂದು ಸುಲಭವಾಗಿ ಗುರುತಿಸಲು ಸಾಧ್ಯ.

---

[19] ವಿವರಕ್ಕಾಗಿ ನೋಡಿ ಪರಿಸರ ಪಜ್ಞೆ – ಕಥೆ ವ್ಯಥೆ – ಎಮ್. ಮಹೇಶ.

ಕನ್ನಡಭಾಷೆಗೆ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿದೆ ಎಂದು ನಮ್ಮ ಭಾಷೆಯಿಂದ ತಿಳಿದು ಬರುತ್ತದೆ. ಹೀಗಿದ್ದ ಮೇಲೆ ಬಹಳ ಹಿಂದೆ ನಮ್ಮ ಪೂರ್ವಿಕರು ಹೀಗೆ ಜೀವಿಸುತ್ತಿದ್ದರು. ಅವರ ವಿಚಾರಗಳೇನೆಂದು ನಾವು ತಿಳಿಯಲು ಈ ರೀತಿ ಅಲ್ಲಲ್ಲಿ ಉಳಿದುಕೊಂಡ ಅನಾಗರಿಕ ಅವಸ್ಥೆಯಲ್ಲಿರುವವರನ್ನು ನೋಡಿ ಬರಬೇಕು. ನಾಗರಿಕ ಸಮಾಜದ ಮನುಷ್ಯನ ಗ್ರಹಿಕೆಗಳು ಹಾಗೂ ನಂಬಿಕೆಗಳಲ್ಲಿ ಆದೀಮ ಕಾಲದ ವಿಧಿವಿಧವಾದ ನಂಬಿಕೆಗಳು ಹಾಗೇ ಅಂಟಿಕೊಂಡಿವೆ. ಆದ್ದರಿಂದಲೇ ನಾಗರಿಕತೆಯ ಪ್ರಾರಂಭದ ದೆಸೆಯ ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳಲು ಅನಾದಿಕಾಲದ ಅವಸ್ಥೆಯ ಸನ್ನಿವೇಶವನ್ನು ವಿಶೇಷವಾಗಿ ತಿಳಿದುಕೊಳ್ಳುವ ಅವಶ್ಯಕತೆ ಇದೆ.

ಪ್ರಾಚೀನ ಕಾಲದ ದೇವಿ ದೇವತಾ ಮುಖಗಳನ್ನು ನೋಡುವುದಾದರೆ, ಮುಖ ಒಂದು ರೀತಿ ದೇಹ ಇನ್ನೊಂದು ರೀತಿಯಾಗಿರುತ್ತದೆ. ಅಂದರೆ ಈ ಪ್ರಾಣಿಯನ್ನು ಈತ ವಶಪಡಿಸಿಕೊಂಡಿದ್ದನೆಂದು ಆ ರೀತಿ ಆ ಪ್ರಾಣಿಯನ್ನು ತನ್ನ ವಾಹನವನ್ನಾಗಿಯೇ ಇಲ್ಲವೇ ತನ್ನ ಅರ್ಧ ದೇಹವಾಗಿಯೋ ಮಾಡಿಕೊಂಡಿದ್ದಾನೆಂದು ಅರ್ಥ.

ಇನ್ನೂ ಕೆಲ ಜನ ಅಂದರೆ ನಾಗರಿಕತೆ ಎಲ್ಲೆಲ್ಲಿ ಉದ್ಭವಿಸಿರುತ್ತಿತ್ತೋ ಅಲ್ಲಲ್ಲಿ ದೇವರುಗಳ ಮುಖಮುದ್ರೆ ಒಂದೊಂದು ರೀತಿ ಕಲ್ಪಿಸಿಕೊಂಡು ಪೂಜಿಸುತ್ತಿದ್ದರು.

ಒಂದೇ ಸಾರಿಗೆ ವಿಶ್ವದಲ್ಲಿ ಮನುಷ್ಯಕುಲವೆಲ್ಲ ನಾಗರಿಕರಾಗಿ ಪರಿವರ್ತನೆಯಾಗಲಿಲ್ಲ. ಇಂತಹ ಸಂದರ್ಭದಲ್ಲಿ ಅನಾಗರಿಕ ಜನಾಂಗಗಳು ಜೀವನಸಾಗಿಸಲು ಬಲು ಕಷ್ಟವಾಗಿರಬೇಕು. ಪ್ರಾಚೀನ ಕಾಲದ ಮಾನವ ಅಲೆಮಾರಿ ಜೀವನ ತ್ಯೆಜಿಸಿ ಒಂದೆಡೆ ಬೀಡುಬಿಡಲು ಶುರುಮಾಡಿದನು. ಹೀಗಾಗಿದ್ದು, 'ನೈಲ್‌ನದಿ' ದಂಡೆಯಲ್ಲಿ ಇವತ್ತಿನ ಬರಗಾಲವಿರಲಿಲ್ಲ, ಕೀಟನಾಶಕಗಳ ಹಾವಳಿಯಿಲ್ಲ ರಸಗೊಬ್ಬರಗಳ ಬಳಕೆಇಲ್ಲ. ಇವಾವುದರ ಬಳಕೆಯಿಲ್ಲದೆ ಬಿದ್ದ ಬೀಜವೆಲ್ಲ ಸಸಿಯಾಗಿ ಫಲವತ್ತಾದ ಬೆಲೆ ಆ ಜನಗಳ ಕೈಸೇರುತ್ತಿತ್ತು. ಹೀಗಾದಾಗ ಕಾಲ ಕ್ರಮೇಣ ಅಲೆಮಾರಿಯಂತೆ ಜೀವಿಸುತ್ತಿದ್ದ ಅನಾಗರಿಕ ಜನಾಂಗದವರಿಗೆ ಆ ಫಲವತ್ತಾದ ಜಮೀನಿನ ಬಗ್ಗೆ ತಲೆ ಚುರುಕಾಗಿರಬೇಕಲ್ಲ. ಅಲೆಮಾರಿಗಳಂತೆ ಜೀವಿಸುತ್ತಿದ್ದ ಅನಾಗರಿಕ

ಜನಾಂಗದವರಿಗೆ ಆ ಜಮೀನಿನ ಬಗ್ಗೆ ಸಮಾಚಾರ ಬರಲಾರಂಭವಾಯಿತು. ಹೀಗೆ ಅಲೆಮಾರಿಯಾಗಿದ್ದವರು ನೈಲ್‌ನದಿಯ ಬಳಿ ವಾಸಮಾಡುತ್ತಿದ್ದರು ಅವರಲ್ಲಿ ಎಷ್ಟೋ ಬಗೆಯ ಜನಾಂಗ ಹುಟ್ಟಿಕೊಂಡವು. ಅಂದರೆ ಒಂದೊಂದು ಜೀವ ಜಂತುವಿನೊಂದಿಗೆ, ಸಸ್ಯ ಗಿಡಗಳೊಂದಿಗೆ ತಮ್ಮನ್ನು ತಾವು ಗುರುತಿಸತೊಡಗಿದರು. ಆಯಾ ಪಂಗಡದವರು ಆಯಾ ಸಸ್ಯ, ಪ್ರಾಣಿ, ಪಕ್ಷಿ, ಗಿಡ ಇವೆಲ್ಲ ತಿನ್ನುವಂತಿರಲಿಲ್ಲ, ಕಡಿಯುವಂತಿರಲಿಲ್ಲ.

ಆದ್ದರಿಂದ ಪಂಗಡದವರೆಲ್ಲ ಸಮಾನರು. ರಾಜ ಪ್ರಜೆ ಎಂಬ ಭೇದ ಅವರಲ್ಲಿರಲಿಲ್ಲ. ಸಾಮಾನ್ಯವಾಗಿ ಒಡವ-ಬಲ್ಲಿದ, ಮೇಲು-ಕೀಳುಗಳೆಂಬ ಭಾವನೆ ಇರಲಿಲ್ಲ. ಅವರಲ್ಲಿ ಯಾರೊಬ್ಬರೂ ಯಾರೊಬ್ಬರಿಗೂ ತಲೆಬಾಗುವಂತಿರಲಿಲ್ಲ. ಹೀಗಿದ್ದಾಗ ಎಲ್ಲರೂ ಸಮಾನವಾಗಿ ದುಡಿಯುವುದು ಸಮಾನವಾಗಿ ಉಣ್ಣುವುದು.

ನಮ್ಮ ದೇಶದ ಪುರಾತನ ಕಾಲದ ದೇವಿ-ದೇವತೆಗಳನ್ನು ಗಮನಿಸಿದಾಗ ಆ ಎಲ್ಲ ದೇವ ದೇವತೆಗಳ ವಾಹನ ಒಂದೊಂದು ಪ್ರಾಣಿ-ಪಕ್ಷಿಗಳಿವೆ. ಅಂದರೆ ಅದು ಪ್ರಾಚೀನ ಪ್ರಾಣಿ-ಪಕ್ಷಿಗಳನ್ನು ವಶಪಡಿಸಿಕೊಳ್ಳಲಾಗಿತ್ತೆಂದೆ ಅರ್ಥ. ದೇವತೆಗಳ ಜನ್ಮವೇ ಇನ್ನೂ ಆಗದಿದ್ದಾಗ ಧರ್ಮವೆಂಬುದರಲ್ಲಿ ನಂಬಿಕೆ ಬರಲು ಹೇಗೆ ಸಾಧ್ಯ. ಈ ರೀತಿಯ ಕಲ್ಪನೆ ಕ್ರಮೇಣ ಉಂಟಾಯಿತು.

ಪ್ರಾಚೀನ ಕಾಲದ ಮನುಷ್ಯ ಪ್ರಾಣಿಗಳ ವೇಶಹಾಕಿಕೊಂಡು ನರ್ತಿಸುತ್ತಿದ್ದನೆಂದು ಹೀಗೇಕೆಂದರೆ 'ನಾವೆಲ್ಲ ಜಿಂಕೆಗಳು' ಎಂದು ಅಂದರೆ ಈ ಹಿಂದೆ ಹೇಳಿದ 'ಟೋಟೆಂ' ಹೆಸರಿನ ಆ ಗುಂಪಿನವರು ಎಂದು ಹೇಳುವ ಅರ್ಥಕೊಡುತ್ತದೆ. ಇಂತಹ ಛಾಯೆ ನಾಗರಿಕ ಮನುಷ್ಯ ಕೂಡ ಇಂತಹ ಕೆಲ ಆಚರಣೆಗಳೊಂದಿಗೆ ಇರದ ದೇವರ ಕಲ್ಪನೆ ಮೂಡಿಸಲು ಪ್ರಾರಂಭವಾಯಿತು.

ಪ್ರಾಚೀನ ಕಾಲದ ಜನ ಇವತ್ತಿನ ಪರಿಸರದ ಬದಲಾವಣೆ ಅಂದೇ ಕಂಡುಕೊಂಡಿದ್ದರು. ಏನೆಂದರೆ ನೃತ್ಯವು ಎಷ್ಟು ಸೊಗಸಾಗುತ್ತಾ ಹೋಗುತ್ತದೋ ಅಷ್ಟಷ್ಟು ಬಟಾಟಿ, ಹೆಸರು, ಅಲಸಂದಿ, ಉದ್ದು, ಕಡಲೆ ಇವುಗಳ ಮೊಳಕೆಯಿಂದ ಸಸಿಗಳು ಹುಲುಸಾಗಿ ಬೆಳೆಯುತ್ತವೆಂದು ಅವರು ಅಂದೇ ನಂಬಿದ್ದರು.

ಇವತ್ತು ನಮ್ಮ ಕೇರಳಿಯನರು ಇಂದು ಆಚರಿಸುವ ಹಬ್ಬ ‘ಓಣಂ’ ಈ ಹಬ್ಬದಂದು ಎಲ್ಲ ಹೆಣ್ಣು ಮಕ್ಕಳು ತಲೆ ಸ್ನಾನಮಾಡಿ ಅವರ ಸಂಪ್ರದಾಯಬದ್ಧ ತೊಡಿಗೆ ಉಟ್ಟು ಕೊದಲು ಇಳಿಬಿಟ್ಟು ನರ್ತಿಸುತ್ತಾರೆ, ಪೂಜೆಮಾಡುತ್ತಾರೆ.

ಇದರಂತೆಯೇ ಪ್ರಾಚೀನ ಕಾಲದ ‘ಮೆಕ್ಸಿಕೋ’ ಮಹಿಳೆಯರು ಕೂಡ ಇದೇ ರೀತಿ ನರ್ತಿಸುತ್ತಾರೆ. ಹೀಗೆ ನರ್ತಿಸುವುದರಿಂದ ಹೊಲದ ಫಸಲು ಅಷ್ಟೇ ಘನವಾಗಿ ಸಮೃದ್ಧವಾಗಿ ಬೆಳೆಯುತ್ತದೆಂದು ಅವರ ಆ ನಂಬಿಕೆ. ಪ್ರಕೃತಿಯು ಹೆಚ್ಚಿನ ಮಟ್ಟದಲ್ಲಿ ಅಧೀನಕ್ಕೆ ಬಂದಾಗ ಮನುಷ್ಯನ ಜೀವನದಲ್ಲಿ ಒಂದು ದೊಡ್ಡ ಪರಿವರ್ತನೆ ಉಂಟಾಯಿತು. ಹಿಂದೆ ಇದ್ದ ಸಮಾನತೆ ಕ್ರಮೇಣ ನಶಿಸುತ್ತಾ ಬಂತು. ಇದನ್ನು ಬಹಳ ಸರಳವಾಗಿ ಹೇಳುವುದಾದರೆ ಮಾನವ ಸಮಾಜವು ಎರಡು ಭಾಗಗಗಳಾದವು. ಮೊದಮೊದಲು ಪ್ರಕೃತಿ ಮತ್ತು ಮನುಷ್ಯನ ನಡುವೆ ಮಾತ್ರ ಹೋರಾಟ ಮಾರ್ಪಟ್ಟಿತ್ತು. ನಂತರ ಮನುಷ್ಯ ಮನುಷ್ಯರ ಮಧ್ಯ ಕೂಡ ಇದೇ ಮುಂದುವರೆಯಿತು.

ಈಜಿಪ್ಟಿನ ‘ನೈಲ್‌ನದಿ’ ಪ್ರತಿವರ್ಷ ಒಂದು ನಿಶ್ಚಿತ ಸಮಯದಲ್ಲಿ ಉಕ್ಕಿಹರಿಯತ್ತಿತ್ತೆಂದು ಅಲ್ಲಿಯ ಜನ ಸರಿಯಾಗಿ ತಿಳಿದುಕೊಂಡಿದ್ದರು. ಇದು ಹೆಚ್ಚಾಗಿ ಹುಣ್ಣಿಮೆಯ ದಿನ ಆಗಸವೆಲ್ಲ ಶುಭ್ರವಾಗಿ ನಕ್ಷತ್ರಗಳೆಲ್ಲ ಮಿನುಗುತ್ತಿದ್ದಾಗ ಪೂರ್ಣಚಂದ್ರ ತನ್ನ ತಂಪಾದ ಬೆಳಕು ಭೂಮಿಗೆ ಕಳಿಸುವಲ್ಲಿ ಈ ಸಮುದ್ರ ಉಕ್ಕುವುದು ಮತ್ತು ಹಿಮ ಕರಗಿ ನೀರಾಗುವುದೆಂದು ನಂಬಿದ್ದರು. ಹೀಗೆಯೇ ಚಂದ್ರನನ್ನು ಸೂರ್ಯನನ್ನು ನಕ್ಷತ್ರಗಳನ್ನು ನೋಡಿ ಲೆಕ್ಕಾಚಾರ ಹಾಕಲಾರಂಭವಾಯಿತು. ಹೀಗೆ ಮಂತ್ರಶಕ್ತಿ ಎಂಬ ಕಾಲ್ಪನಿಕ ಶಕ್ತಿಯಿಂದ ಸೂರ್ಯನ ತಾಪದಿಂದ ಹಿಮ ಕರಗಿ ನೀರಾಗಿ ಹರಿಯುತ್ತಿತ್ತು. ಇಂತಹ ಅದೆಷ್ಟೋ ವಿಷಯಗಳು ನಿಜವಾಗುತ್ತಿದ್ದವು.

ಈ ರೀತಿ ಘಟಿಸಿದಾಗ ಇವರೆಲ್ಲ ಪುರೋಹಿತರೆನಿಸಿಕೊಂಡರು ! ಇಂತಹ ಮಂತ್ರ ಒಂದೇ ಆಸ್ತಿಯಾಗಿದ್ದ ಇವರು ಕ್ರಮೇಣ ರಾಜರಾಗಿ ಮೆರೆಯತೊಡಗಿದ್ದರು. ಹೇಗೆ ಯಾವುದಾದರೊಂದು ವಿದ್ಯ ಕಲಿಯಬೇಕಾದರೆ ರಾತೋರಾತ್ರಿ ಸಾಧ್ಯವಿಲ್ಲವೋ ಹಾಗೆಯೇ ಇವರ ಈ ಮಂತ್ರ ವಿದ್ಯ ಕೂಡ ರಾತೋರಾತ್ರಿ ಆದದ್ದೇನಲ್ಲ.

ಹೀಗಾದಾಗ ಆದಿಮ 'ಟೋಟೆಂ' ಪಂಗಡವು ಕ್ರಮೇಣ ಒಡೆಯುತ್ತಾ ರಾಜ-ಪ್ರಜೆ ಎಂಬ ಬೇಧ ಹುಟ್ಟಿಕೊಂಡಿತು. ಭೂಮಿಯ ಅಂಶದಿಂದ ಹುಟ್ಟಿದ ಮನುಷ್ಯ ಕ್ರಮೇಣ ಭೂಮಿಯ ನಿಯಮಗಳನ್ನು ಪಾಲಿಸುತ್ತಾ ಹೊರಟನು. ಮನುಷ್ಯ ಎಷ್ಟು ಚನ್ನಾಗಿ ತಿಳಿದುಕೊಳ್ಳುತ್ತಾನೋ ಅಷ್ಟೇ ಚನ್ನಾಗಿ ಬದುಕಬಲ್ಲವನಾಗಿದ್ದಾನೆ. ಲೌಕಿಕವಲ್ಲದ ಏನನ್ನೂ ಧರ್ಮ ಒಪ್ಪುವುದಿಲ್ಲ. ಮತ್ತು ಅಲೌಕಿಕವಲ್ಲದು ವಿಜ್ಞಾನ ಏನನ್ನೂ ಸ್ವೀಕರಿಸುವುದಿಲ್ಲ ಅಂದರೆ ಮಂತ್ರದಿಂದ ಮಳೆ ಬರುತ್ತದೆಂದು ವಿಜ್ಞಾನ ನಂಬಲು ಸಾಧ್ಯವಿಲ್ಲ. ಹಿಂದೆ ಹೇಳಿದಂತೆ ಸಮುದ್ರ ಉಕ್ಕುವುದು ಗ್ರಹಣ ಸಂಭವಿಸುವುದೆಲ್ಲ ಅವರಿಗೆ ಇಂಥಿಂಥ ದಿನಗಳೆಂದು ಗೊತ್ತಿತ್ತಾದರೂ ಅದಕ್ಕೆ ವಿಜ್ಞಾನವೆಂಬ ಹೆಸರು ಅವರು ಕೊಟ್ಟಿರಲಿಲ್ಲ. ಇದನ್ನು ನೋಡಿದಾಗ ಆಗಿನ್ನು 'ವಿಜ್ಞಾನ ಜನ್ಮವಾಗಿರಲಿಲ್ಲ' ವೆಂದು ಹೇಳಬಹುದಲ್ಲ. ಹೀಗೆ ಹೇಳಲು ಸಾಧ್ಯವಿಲ್ಲ ಕಾರಣ ಅದು ವಿಜ್ಞಾನವೆಂದು ಹೇಳುವ ಮಟ್ಟಕ್ಕೆ ಆ ನಾಗರಿಕರು ಇನ್ನೂ ಬೆಳೆದಿರಲಿಲ್ಲ.

ಭಾರತೀಯ ಪರಂಪಂರೆ : ಪರಿಸರ ಪ್ರಜ್ಞೆ

ಭರತ ಖಂಡವು ಸಾಧು ಸಂತರ ವಾಸಮಾಡುವ ನೆಲೆವೀಡು ಎಂದು ಹೇಳುತ್ತಲೇ ಬಂದಿದ್ದೇವು. ಆದ್ದರಿಂದ ಷಡದರ್ಶನಗಳು ಅತಿ ಮಹತ್ವದ ಸ್ಥಾನ ಪಡೆದಿವೆ. ಅವುಗಳೇ ವೇದ, ದರ್ಶನ, ಸಾಂಖ್ಯ, ಯೋಗ, ನ್ಯಾಯ, ವೈಶೇಷಕ ಪೂರ್ವಮೀಮಾಂಸೆ, ಉತ್ತರಮೀಮಾಂಸೆ ಇವೇ ಷಡದರ್ಶನಗಳು. ಈ ದರ್ಶನಗಳಲ್ಲಿ ಪರಿಸರವನ್ನು ಗಮನಿಸುತ್ತೇವೆ. ಯಾವುದೇರೀತಿಯ ಅಧ್ಯಯನಕ್ಕೆ ಮೂಲ ಆಕರ ಪ್ರಾಚೀನ ಗ್ರಂಥಗಳು ಜಗತ್ತಿನ ಅತೀ ಪ್ರಾಚೀನ ಗ್ರಂಥಗಳೆಂದರೆ ವೇದಾಗಮಗಳು ವೇದಗಳಲ್ಲಿ ಪರಿಸರ ಸಂಬಂಧಿ ಹಲವಾರು ವಿಷಗಳು ಪ್ರಸ್ಥಾಪವಾಗಿವೆ.

ಯಾವುದೆ ರೀತಿಯ ಅಧ್ಯಯನಕ್ಕೆ ಮೂಲ ಆಕಾರ ಪ್ರಾಚೀನ ಗ್ರಂಥಗಳು ಜಗತ್ತೀನ ಅತಿ ಪ್ರಾಚೀನಗ್ರಂಥಗಳೆಂದರೆ ವೇದಾಗಮಗಳು ವೇದಗಳಲ್ಲಿ ಪರಿಸರ ಸಂಬಂಧಿ ಹಲವಾರು ವಿಷಯಗಳು ಪ್ರಸ್ಥಾಪವಾಗಿವೆ.

ವೇದಗಳಲ್ಲಿ ಪರಿಸರ :

ಯಜುರ್ವೇದವು ಯಜ್ಞದ ಮಹತ್ವವನ್ನು ವಿವರಿಸುವಾಗ ನೆಲ, ನೀರು, ಗಾಳಿ, ಮಳೆ, ವನೌಷಧಿ, ಪರಿಶುದ್ಧವಾಗಿರಬೇಕಾದರೆ ಯಜ್ಞ ಮಾಡಬೇಕೆಂದು ವಿವರಿಸುವ ಶ್ಲೋಕ ಹೀಗಿದೆ.

" ವಿಶ್ವ ದೇವಾಶ್ವಮಸೇಷೋನೀತೋ ಸುರ್ಹೋಮಾಯೋದ್ಯಾತೋ
ರುದ್ರೋ ಹೂಮಮನೋ ವಾತೋ ಭ್ಯಾವೃತ್ತೋವೃಚಕ್ಷಾಃ ।
ಪ್ರತಿಖ್ಯಾತೋ ಭಕ್ಷ್ಣಾ ಭಕ್ಷ್ಯಮಾಣಃ ಪಿತರೋ ನಾರಶಂಸಾಃ॥"[೨೦]
(ಯಜುರ್ವೇದ ೮-೫೭)

ಇದರಿಂದ ಪಂಚಭೂತಗಳ ಶುದ್ಧಿಕರಣದ ಜೊತೆಗೆ ಅಯುಷ್ಯ ಆರೋಗ್ಯ ಸುಧಾರಣೆ ಆಗುವ ಕುರಿತು ಉಲ್ಲೇಖಗಳಿವೆ. ಹೀಗೆ ಈ ರೀತಿಯ ಚರ್ಚೆಗಳು ಅಥರ್ವವೇದ (೧೯-೧೫-೩,೪) ರ ಶ್ಲೋಕಗಳಲ್ಲಿ ಪರಿಸರ ಕುರಿತು ಚರ್ಚೆ - ಚಿಂತನೆಗಳಿವೆ. ಯಜ್ಞೆ ಇರುವವರೆಗೆ ರೋಗ ಮುಕ್ತ ವಾತವರಣ ಸಾಧ್ಯ ಎಂಬ ನಿಲುವು ತಳೆಯಲಾಗಿತ್ತು. ಮುಂದೆ ದುರ್ಗಾಸಪ್ತಶತಿ ಎಂಬ ಕೃತಿಯ ಶ್ಲೋಕವೊಂದರಲ್ಲಿ

**"ಯಾವದ್ ಭೂಮಂಡಲಂ ಧತ್ತೆ ಸಶೈಲ ವನಕಾನನಂ ।
ತಾವತ್ ತಿಷ್ಟತಿ ಮೇದಿನ್ಯಾಂ ಸಂತತಿ ಪುತ್ರ ಪಾತ್ರಕೀ॥"[೨೧]**

ಇದರರ್ಥ ಈ ಭೂಮಂಡಲದಲ್ಲಿ ಕಾಡು, ಮೇಡು, ಗುಡ್ಡ ಬೆಟ್ಟಗಳು, ಇರುವವರೆಗೆ ಮಾತ್ರ ಮಾನವ ಒಳಗೊಂಡಂತೆ ಜೀವರಾಶಿಗಳು ಇರಲು ಸಾಧ್ಯ ವೆಂದು ಹೇಳಲಾಗಿದೆ.

ದರ್ಶನಗಳಲ್ಲಿ ಪರಿಸರ :

ಭಾರತೀಯ ಸಾಂಸ್ಕೃತಿಕ ಬದುಕನ್ನು ಕಟ್ಟುವಲ್ಲಿ ದರ್ಶನಗಳ ಪಾತ್ರವು ಮಹತ್ವದಾಗಿದೆ. ಸೃಷ್ಟಿ ಮುಲದ ಶೂನ್ಯದಿಂದ ಹಿಡಿದು ಆಧುಸಿಕ ವಿಶಾಲ ವಿಶ್ವದ ವಿಷಯಗಳೆಲ್ಲಾ ಅಲ್ಲಿ ಚರ್ಚಿತವಾಗಿವೆ. ಅನೇಕ ದಾರ್ಶನಿಕರು ಹಲವಾರು ತಾತ್ವಿಕ ಸಿದ್ಧಾಂತ, ದರ್ಶನವನ್ನು

---

[20] ಪರಿಸರ ಪ್ರಜ್ಞೆ – ಕೆ. ಬೈರಪ್ಪ ಪು.ಸಂ.೧೭

[21] ಪರಿಸರ ಪ್ರಜ್ಞೆ – ಕೆ. ಬೈರಪ್ಪ ಪು.ಸಂ.೨೧

ನೀಡಿದಾರೆ. ಅವುಗಳಲ್ಲಿ ಅತ್ಯಂತ ಪುರಾತನ ಮತ್ತು ಶ್ರೇಷ್ಟವೆಂದರೆ ಷಡ್ದರ್ಶನಗಳು ಈ ಷಡ್ದರ್ಶನಗಳಲ್ಲಿ ನಡೆದ ಅನೇಕ ಚರ್ಚೆಗಳಲ್ಲಿ ಪರಿಸರ ಕುರಿತ ಚಿಂತನೆಕೊಡ ನಡೆದಿದೆ.

ಷಡ್ದರ್ಶನವೆಂದರೆ ಆರು ದರ್ಶನಗಳು ಅವುಗಳೆಂದರೆ.

೧. ಸಾಂಖ್ಯ ೨. ಯೋಗ ೩. ನ್ಯಾಯ

೪. ವೈಶೇಷಿಕ ೫. ಪೂರ್ವಮಿಮಾಂಸೆ ೬. ಉತ್ತರ ಮಿಮಾಂಸೆ

ಸಾಂಖ್ಯದರ್ಶನದಲ್ಲಿ ಪರಿಸರ :

ಇದು ಕಪಿಲ ಮುನಿಯಿಂದ ನಿರ್ಮಾಣವಾದ ಈ ಶಾಸ್ತ್ರ ೨೫ ತತ್ವಗಳನ್ನು ೬೪ ವಸ್ತುಗಳನ್ನು ಪ್ರತಿಪಾದಿಸಿರುವುದರಿಂದ ಅದಕ್ಕೆ ಆ ಹೆಸರು ಬಂದಿದೆ. ಆ ೨೫ ಅಂಶಗಳು ಸಾಂಖ್ಯರು ಹೀಗೆ ಪ್ರತಿಪಾದಿಸಿದ್ದಾರೆ.

ಪಂಚಜ್ಞಾನೇಂದ್ರಿಯಗಳು ಅಂದರೆ ಘಾಣ, ಜಿಹ್ವೆ, ನೇತ್ರ, ತ್ವಕ್, ಶೋತ್ರ
ಪಂಚಕರ್ಮೇಂದ್ರಿಯಗಳು, ಪಾಣಿ, ಪಾದಿ, ವಾಕ, ಪಾಯು (ಗುದಿ) ಉಪಸ್ಥ
ಪಂಚತನ್ಮಾತ್ರೆಗಳು, ಗಂಧ, ರೂಪ, ರಸ್, ಸ್ಪರ್ಶ, ಶಬ್ದ, ಗುಹ್ಯ
ಪಂಚಭೂತಗಳು, ಪೃಥ್ವಿ, ಅಪ್ಪ, ತೇಜ, ವಾಯು, ಆಕಾಶ,
ಅಂತಃಕರಣಪಂಚಕ, ಪ್ರಕೃತಿ, ಮಹಲ್, ಅಹಂಕಾರ, ಮನಸ್ಸು, ಜೀವಾತ್ಮ"[೨೨]

ಈ ಅಂಶಗಳೆಲ್ಲ ಪ್ರಕೃತಿಯಲ್ಲಿಯೇ ಹುಟ್ಟಿ "ಅಲ್ಲಿಯೇ ಲಯ ಹೊಂದುತ್ತವೆ" ಪ್ರಕೃತಿಯಿಂದ ಬುದ್ಧಿ, ಬುದ್ಧಿಯಿಂದ ಅಹಂಕಾರ, ಅಹಂಕಾರದಿಂದ ಮನಸ್ಸು ಹಾಗೂ ಇತರ ಹತ್ತು ಇಂದ್ರಿಯಗಳು ಹುಟ್ಟಿಕೊಂಡುವು ಅಹಂಕಾರದಿಂದ ಪಂಚತನ್ಮಾತ್ರೆಗಳ ಜನನ. ಪಂಚತನ್ಮಾತ್ರೆಗಳಿಂದ ಪೃಥ್ವೀ ಅಪ್, ತೇಜ, ವಾಯು, ಆಕಾಶಗಳೆಂಬ ಪಂಚಭೂತಗಳು, ನಿಷ್ಪನ್ನವಾಗುವವು. ಬುದ್ಧಿಯಿಂದ ತನ್ಮಾತ್ರೆಗಳ ವರೆಗಿನ ೧೭ ತತ್ವಗಳು ಪ್ರತಿಯೊಂದು ಪ್ರಾಣಿಯ ಲಿಂಗವೆನಿಸಿವೆ. ೨೪ ತತ್ವಗಳನ್ನು ಸಾಂಖ್ಯರು ಪ್ರತ್ಯಕ್ಷ ಹಾಗೂ ಯುಕ್ತಿ ಪ್ರಮಾಣಗಳಿಂದ ಸಾಧಿಸುವರು.

---

[22] ಮಹಾಯಾತ್ರೆ – ಡಾ. ಆರ್.ಸಿ. ಹಿರೇಮಠ – ಷಡ್ ದರ್ಶನಗಳು.

ನಂತರ ಪ್ರಕೃತಿಯು ಪುರಷ ಸಾನಿಧ್ಯದಲ್ಲಿ ಸಮಸ್ತ ಸೃಷ್ಟಿಯನ್ನು ನಿರ್ಮಿಸುತ್ತದೆ. ಆತ್ಮನಿಗೆ (ಪುರುಷ) ಪ್ರಕೃತಿಯ ವಸ್ತುಗಳ ದೃಕ ಸಂಬಂಧ ಸಹಜವಾಗಿ ಸಾಕ್ಷಾತ್ತಾಗಿ ಇದ್ದರೆ ಇಂತಹ ಪುರಷನಿಗೆ ಮೊಕ್ಷವಿಲ್ಲ. ಮೊಕ್ಷವೆಂದರೆ ಸರ್ವದುಖದ ನಿವೃತ್ತಿ ಎಂದೇ ಅವರ ಅಭಿಪ್ರಾಯ.

ಯೋಗದರ್ಶನದಲ್ಲಿ ಪರಿಸರ:

ಯೋಗದರ್ಶನದ ಮೂಲ ಪುರಷ ಹಿರಣ್ಯಗರ್ಭಯೋಗೀಶ್ವರ. ಆದರೂ ಸೂತ್ರಕಾರರಾದ ಪತಂಜಲ ಋಷಿಗಳ ಹೆಸರಿನಿಂದ ಇಂದು ಪತಂಜಲಯೋಗ ಪ್ರಸಿದ್ಧವಾಗಿದೆ. ಜೀವಾತ್ಮ, ಪರಮಾತ್ಮರ ಸಂಯೋಗವೇ ಯೋಗವೆನಿಸಿದರೆ ಅವರ ಸಾಮ್ಯತೆಯೇ ಸಮಾಧಿ ಎನಿಸುತ್ತದೆ. ಪಾತಂಜಲಯೋಗವು 'ಅಷ್ಟಾಂಗ' ಯೋಗವೆನಿಸಿದೆ.[23] ಯಮ – ನಿಗ್ರಹಿಸುವುದು ಅಂದರೆ ದುರಾಚಾರಗಳು ಬಿಡುವುದು.

ನಿಯಮ : ಕರ್ತವ್ಯ ಮಾಡತಕ್ಕದ್ದು. ಶೌಚ, ಸ್ವಾಧ್ಯಾಯ ಮುಂತಾದವು. 'ಅಹಿಂಸೆ' ಸಿದ್ಧಿಯಾಗಬೇಕಾದರೆ ಯಮ, ನಿಯಮಗಳಿಂದ ಮಾತ್ರ ಸಾಧ್ಯ ಇದರಿಂದ ಇಂದ್ರಿಯಗಳಿಗೆ ಯೋಗ ಸಾಧನೆಯ ಸಾಮರ್ಥ್ಯವು ಪ್ರಾಪ್ತವಾಗುತ್ತದೆ. ಯೋಗದಲ್ಲಿ ಪುರುಷ–ಆತ್ಮ, ಪುರಷಾತ್ಮ ಅಥವಾ ಈಶ್ವರ ಎಂದು ಎರಡು ವಿಧವಾಗಿವೆ. ಯೋಗಸಾಧನೆಯಿಂದ ಆತ್ಮ ಪರಿಶುದ್ಧವಾಗಿ ಪರಮಾತ್ಮನ ಸಾಕ್ಷಾತ್ಕಾರದೊಂದಿಗೆ ಪ್ರಕೃತಿಯು ಸೃಷ್ಟಿಕಾರ್ಯ ಪೂರೈಸುವುದು.

ನ್ಯಾಯದರ್ಶನದಲ್ಲಿ ಪರಿಸರ: ನ್ಯಾಯಶಾಸ್ತ್ರದಲ್ಲಿ ಆತ, ಶರೀರ, ಇಂದ್ರಿಯ, ಅಧರ್ಮ, ಬುದ್ಧಿ, ಮನಸ್ಸು, ಪ್ರವೃತ್ತಿ, ದೋಷ, ಪ್ರತಿಭಾವ ಫಲ, ದುಃಖ ಅಪವರ್ಗವೆಂದು ಹನ್ನೆರಡು ವಿಧವಾದ ಪ್ರಮೆ ವಿವರಿಸಿದ್ದು 'ಆತನೆ' ಮೊಕ್ಷಕ್ಕೆ ಅಧಿಕಾರಿ.[24] ಅಂದರೆ ಸೃಷ್ಟಿ ಸಾಮರ್ಥ್ಯ ಈಶ್ವರನ ಧರ್ಮಫಲ ಇವನೆ ತಂದೆ ತಾಯಿ, ಬಂದು ಬಳಗ ದೃಷ್ಟಾ ಬೋದ್ಧಾ ಸರ್ವಜ್ಞತಾ ಎಂಬುದು ಈಶ್ವರನ ಸ್ವರೂಪ. ಇವನ ಸ್ವರೂಪ ಜ್ಞಾನವೇ ಬುದ್ಧಿ.

---

23 ಮಹಾಯಾತ್ರೆ – ಡಾ. ಆರ್.ಸಿ. ಹಿರೇಮಠ.

24 ಮಹಾಯಾತ್ರೆ – ಡಾ. ಆರ್.ಸಿ. ಹಿರೇಮಠ.

ವೈಶೇಷಿಕ ದರ್ಶನದಲ್ಲಿ ಪರಿಸರ:

'ವೈಶೇಷಿಕ ದರ್ಶನವುರ್ಕರಾದ' ಋಷಿಯಿಂದ ಪ್ರತಿ ಪಾದಿತವಾಗಿದ್ದು'[೨೫]. ಜ್ಞಾನ ಮೂಲಕವಾಗಿ ಫಲಾಪೇಕ್ಷೆಯಿಲ್ಲದೆ ಮಾಡಿದ ಕರ್ಮದಿಂದ 'ಷಟ್ ಪದಾರ್ಥಗಳ ಜ್ಞಾನವುಂಟಾಗುತ್ತದೆ. ಇದರಿಂದ ಅಜ್ಞಾನ ನಿವೃತ್ತಿಯಾಗುತ್ತದೆ. ವೈರಾಗ್ಯದಿಂದ ರಾಗದ್ವೇಶಗಳನ್ನು ಜಯಿಸಲಾಗುತ್ತದೆ. ಇದರಿಂದ ಸಂಕುಚಿತಭಾವನೆ ಹೋಗಿ ವಿಶಾಲಭಾವನೆ ಉಂಟಾಗುತ್ತದೆ. ಅದೇ ಮೋಕ್ಷ! ಆದ್ದರಿಂದ ನ್ಯಾಯದರ್ಶನದ ಪ್ರಕಾರ ದುಃಖವಿಲ್ಲದಿರುವ ಸ್ಥಿತಿಯನ್ನೇ ಸ್ವಾಭಾವಿಕ ಸುಖಾನುಭವವೆನ್ನುವರು. ಇವರ ಮತದಂತೆ ಪರಮೇಶ್ವರ ಸಕಲಕಾರಣನಾಗಿರುವನು.

ಪೂರ್ವಮೀಮಾಂಸಾ ದರ್ಶನದಲ್ಲಿ ಪರಿಸರ:

'ಕರ್ಮಕಾಂಡದ(ವೇದಪೂರ್ವ)[೨೬] ಭಾಗ ಪರಿಶೀಲಿಸಿ ವಿವರಿಸುವುದು ಪೂರ್ವಮೀಮಾಂಸೆಯೆನಿಸಿದೆ. 'ಪೂರ್ವಮೀಮಾಂಸೆಯ ಪ್ರತಿಪಾದಕ ಜೆಮಿನಿ ಉತ್ತರ ಮೀಮಾಂಸೆಗೆ ಬಾದರಾಯಣರು ಸೂತ್ರಗಳನ್ನು ರಚಿಸಿರುವರು. ಇದಕ್ಕೆ ಬ್ರಹ್ಮಸೂತ್ರವೆನ್ನುವರು. ಪೂರ್ವಮೀಮಾಂಸೆ 'ಯಜ್ಞಯಾಗಾದಿಗಳನ್ನು ಆಚರಿಸುವುದು. ವಿಶಿಷ್ಟದೇವತೆಗಳನ್ನು ಸಂತುಷ್ಟಗೊಳಿಸಿ ಫಲದೊರಕಿಸಬೇಕೆಂಬ ವಿಚಾರದಲ್ಲಿ ವಿಶೇಷವಾದ ಒಂದಂಶ ಗುರುತಿಸಬಹುದು. ಯಜ್ಞದ ಆಚರ'ಣೆಯಲ್ಲಿ ಸ್ವಲ್ಪ ವ್ಯತ್ಯಾಸವಾದರೆ ಅನರ್ಥಸಂಭವಿಸುವುದೆಂಬ ಭಾವನೆ ಪ್ರಭಲವಾಗಿದ್ದಿತ್ತು. ಆದ್ದರಿಂದಲೇ ಇದಕ್ಕೆ 'ಕರ್ಮಕಾಂಡ'ವೆಂಬ ಹೆಸರು ಬಂದಿತ್ತು. ಆದ್ದರಿಂದಲೇ 'ಯಜ್ಞಯಾಗಾದಿಗಳು' ಮಾಡತಕ್ಕ ರೀತಿಯನ್ನು ಕ್ರಮವನ್ನು ಮಾಡತಕ್ಕವರ ಯೋಗ್ಯತೆಯನ್ನು ಇವುಗಳಿಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ಪರಾಮರ್ಷಿಸಿ ಪೂರ್ವಮೀಮಾಂಸೆಯಲ್ಲಿ ನಿರ್ಣಯ ಮಾಡಲಾಗಿದೆ. ಇವರು 'ಸನ್ಯಾಸ ಹಾಗೂ ಸರ್ವಕರ್ಮಪರಿತ್ಯಾಗವನ್ನು ಒಪ್ಪುವುದಿಲ್ಲ. ಗ್ರಹಸ್ಥಾಶ್ರಮದಲ್ಲಿದ್ದು ಯಜ್ಞಯಾಗಾದಿ ಕರ್ಮಗಳನ್ನು ವಿದ್ಯುಕ್ತವಾಗಿ ಆಚರಿಸಬೇಕೆಂಬ ಕಟ್ಟು-ನಿಟ್ಟು ಪೂರ್ವ ಮೀಮಾಂಸೆಯಲ್ಲಿದೆ. ಮೀಮಾಂಸಕರ

---

[25] ಮಹಾಯಾತ್ರೆ – ಡಾ. ಆರ್.ಸಿ. ಹಿರೇಮಠ.

[26] ಮಹಾಯಾತ್ರೆ – ಡಾ. ಆರ್.ಸಿ. ಹಿರೇಮಠ.

ಪ್ರಕಾರ ಸೃಷ್ಟಿಪ್ರಳಯ ಎಂದೂ ಸಂಪೂರ್ಣವಾಗಿರುವುದಿಲ್ಲ ಜಗತ್ತಿನಲ್ಲಿ ಈಗಿರುವ ಹಾಗೆಯೇ ಮುಂದೆಕೂಡ ಇರುತ್ತದೆ. ಆದ್ದರಿಂದ ಪ್ರತಿಯೊಂದು ವಸ್ತುವಿಗೆ ಅದರದೇ ಆದಶಕ್ತಿ ಇದೆ ಎಂದು ಹೇಳುತ್ತಾನೆ.

ಉತ್ತರ ಮೀಮಾಂಸೆಯಲ್ಲಿ ಪರಿಸರ:

ಇದರಲ್ಲಿ "ಸಂಹಿತೆ, ಬ್ರಾಹ್ಮಣ, ಅರಣ್ಯಕ"[೨೭] ಎಂದು ಮೂರು ಭಾಗಗಳಾಗಿ ವಿಂಗಡಿಸಿದೆ. ಮೊದಲನೆಭಾಗ ಸಂಹಿತೆಗಳಿಂದ ಕೂಡಿದೆ. ಇವು ಚಂಪೂ ಶೈಲಿಯ ವ್ಯಾಖ್ಯಾನ ಅರಣ್ಯದಲ್ಲಿದ್ದ ಋಷಿಮುನಿಗಳು ಸಾಧಿಸುತ್ತಿದ್ದ ರಹಸ್ಯಭಾಗಕ್ಕೆ ಅರಣ್ಯಕವೆಂದು ಹೆಸರು. ವೇದಗಳ ಕೊನೆಯ ಭಾಗಕ್ಕೆ ಉಪನಿಷತ್ ಎಂದು ಕರೆಯಲ್ಪಡುತ್ತದೆ. 'ಈಶಾವಾಸ್ಯೋಪನಿಷತ್ತು' ಇವುಗಳಲ್ಲಿ ಮೊದಲನೆಯದೆನಿಸಿದೆ.

ಶಂಕರಾಚಾರ್ಯರು ಭಾಷ್ಯ ಬರೆದ ಉಪನಿಷತ್ತುಗಳ ಸಂಖ್ಯೆ ಹತ್ತು, ಈಶ, ಕೇನ, ಕಠ ಪ್ರಶ್ನೆ ಮುಂಡಕ, ಮಾಂಡೂಕ್ಯ ತೈತ್ತರಿಯ ಐತ್ತರೆಯ ಛಾಂದೋಗ್ಯ ಬ್ರಾಹದಾರಣ್ಯಕ[೨೮].

ಶ್ವೇತಾಶ್ವರ ಹನ್ನೊಂದನೆ ಉಪನಿಷತ್ತೆನಿಸಿದೆ. ಈ ಉಪನಿಷತ್ತುಗಳನ್ನು ಪರಾಮರ್ಶಿಸಿ 'ಬಾದರಾಯಣರು ಬ್ರಹ್ಮಸೂತ್ರಗಳ ಗ್ರಂಥವನ್ನು ರಚಿಸಿದರು. ಬ್ರಹ್ಮಸೂತ್ರ, ಉಪನಿಷತ್ತು, ಭಗವದ್ಗೀತಾ ಇವು ಮೂರನ್ನು ಸೇರಿಸಿ ಪ್ರಸ್ಥಾನಿತ್ರಿಯೀ ಎಂದು ಕರೆದರು.[೨೯]

"ಈ ಬ್ರಹ್ಮಸೂತ್ರಕ್ಕೆ ಹಿಂದು ಮುಂದುಗಳಿಲ್ಲ. ಒಳಹೊರಗಿಲ್ಲ ಈ ಬ್ರಹ್ಮವೇ ಆತ್ಮ!.

"ಓಂ ಪೂರ್ಣಮದಂ ಪೂರ್ಣಮಿದಂ
ಪ್ರರ್ಣಾತ್ ಪೂರ್ಣಮುದಚ್ಯತೇ
ಪೂರ್ಣಸ್ಯ ಪೂರ್ಣಮಾದಾಯ
ಪೂರ್ಣಮೇವಾವಶಿಷ್ಯತೆ"

---

[27] ಮಹಾಯಾತ್ರೆ – ಡಾ. ಆರ್.ಸಿ. ಹಿರೇಮಠ.

[28] ಮಹಾಯಾತ್ರೆ – ಡಾ. ಆರ್.ಸಿ. ಹಿರೇಮಠ.

[29] ಮಹಾಯಾತ್ರೆ – ಡಾ. ಆರ್.ಸಿ. ಹಿರೇಮಠ.

ಆತ್ಮ-ಬ್ರಹ್ಮನ ಸಂಬಂಧ ತಿಳಿಸುತ್ತದೆ. ಇದು ಸೃಷ್ಟಿಯ ಭಾರತಿಯಲ್ಲ. ಇದರ ಹಿಂದೆ ಒಂದು ಶಕ್ತಿ ಅದೇ ಏಕದ ಹಿಂದಿರುವ ಅನೇಕ ಇದನ್ನೇ ಪ್ರಕೃತಿಯೆಂದು ಕರೆಯುತ್ತೇವೆ.

ಅದ್ವೈತದರ್ಶನದಲ್ಲಿ ಪರಿಸರ:

"ಬ್ರಹ್ಮಸತ್ಯಂ, ಜಗ್ಮನಿಥ್ಯಾ ಜೀವೋ ಬ್ರಹ್ಮೈವನ್ಯಾಪರಃ
ಸರ್ವಂ ಖಲ್ವಿದ ಬ್ರಹ್ಮ ಜೀವೋಬ್ರಹ್ಮೈವನ್ಯಾಪರಃ"[೩೦]

ಅಂದರೆ ಜೀವಬ್ರಹ್ಮ ಒಂದೇ ಎಂದು ಹೇಳುತ್ತದೆ ಅದ್ವೈತ. ಹೇಗೆ ನದಿಗಳೆಲ್ಲ ಸೇರಿ ಸಮುದ್ರವನ್ನು ಸಮುದ್ರವೇ ಆದಂತೆ 'ಉಪ್ಪು ನೀರಲ್ಲಿ ಬೆರತಂತೆ' ಇಲ್ಲಿ ಅಹಂಬ್ರಹ್ಮಾಸ್ಮಿ ಎಂಬ ಪರೋಕ್ಷ ಜ್ಞಾನವುಂಟಾಗುತ್ತದೆ.

ವಿಶಿಷ್ಟಾದ್ವೈತದರ್ಶನದಲ್ಲಿ ಪರಿಸರ:

ವಿಶಿಷ್ಟಾದ್ವೈತವೆಂದರೇ ಎಲ್ಲವೂ ಒಂದಾಗು ಎಂದರ್ಥ ಒಂದರೊಳಗೆ ಇನ್ನೊಂದು ತಮ್ಮ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿರುತ್ತದೆ.[೩೧] ದಾಳಿಂಬರದ ಹಣ್ಣು ಮೇಲ್ನೋಟಕ್ಕೆ ಒಂದೇಯಾಗಿದ್ದು ಒಳಗೆ ಬೀಜಗಳೆಷ್ಟಿವೆಯೋ ಹಾಗೆಯೇ ನಾವೆಲ್ಲ ಬೇರೆ ಬೇರೆ ರೀತಿಯಲ್ಲಿ ನಿರ್ಮಾಣ ಮಾಡಿದರೂ ಕೂಡ ಮೇಲ್ನೋಟಕ್ಕೆ ಸೃಷ್ಟಿ ಒಂದೆ ಅಲ್ಲವೇ? ಇಲ್ಲಿ ಭಕ್ತಿಗೆ ಪ್ರಧಾನಸ್ಥಾನವಿದೆ. ಭಕ್ತನಾದವನು ಭಕ್ತಿಪಂಥದಲ್ಲ ದೇವರತ್ತ ನಾಲ್ಕು ಹೆಜ್ಜೆ ನಡೆಯುಬೇಕು. ಹಾಗೆಯೇ ಈತನ ಭಕ್ತಿಗೆ ದೇವರೂ ಭಕ್ತನತ್ತ ನಾಲ್ಕು ಹೆಜ್ಜೆ ನಡೆಯುತ್ತಾನೆ. ಜೀವಾತ್ಮನೊಡನೆ ಸಂಬಂಧ ತಾಯಿ ಮರಿಮಂಗಗಳ ಸಂಬಂಧದಂತೆ ಒಂದನ್ನು ಬಿಟ್ಟು ಇನ್ನೊಂದಿಲ್ಲ.

ದ್ವೈತದರ್ಶನದಲ್ಲಿ ಪರಿಸರ:

ಇದು ಭೇದ ತತ್ವದ ಮೇಲೆ ನಿಂತ ದರ್ಶನ, ಈ ದರ್ಶನದಲ್ಲಿ ಸಕಲ ದ್ರವ್ಯಗಳೂ, ಸಖಂಡಗಳು, ಸಾವಯವಗಳು, ಬೇಧಗಳು ಅನಂತ, ಅಸಂಖ್ಯವಾದರೂ ಪಂಚಬೇಧಗಳನ್ನು ದ್ವೈತಸಿದ್ಧಾಂತ ಪ್ರಮುಖವಾಗಿ ಒಪ್ಪಿಕೊಂಡಿವೆ. ಅವು ಹೀಗಿವೆ.

[30] ಮಹಾಯಾತ್ರೆ – ಡಾ. ಆರ್.ಸಿ. ಹಿರೇಮಠ.
[31] ಮಹಾಯಾತ್ರೆ – ಡಾ. ಆರ್.ಸಿ. ಹಿರೇಮಠ.

ಜೀವ–ಈಶ್ವರಬೇಧ, ಜೀವ–ಜೀವರಭೇದ, ಜಡ–ಈಶ್ವರಬೇಧ, ಜಡ–ಜಡಗಳ ಬೇಧ ಜಡ–ಜೀವ ಬೇಧ.[32]

ಪ್ರಪಂಚಕ್ಕೆ ಮೂಲ ಕಾರಣವಾಗಿರುವುದು ಪ್ರಕೃತಿ. ಇದೇ ಮಾಯ ಈ ಪ್ರಕೃತಿಯ ಪರಿಣಾಮಗಳು. ಸತ್ವ, ರಜೆ, ತಮ ಈ ಗುಣಗಳ ವೈಷಮ್ಯದಿಂದ ಸೃಷ್ಟಿ ಸಾಮ್ಯದಿಂದ ಲಯ. ಈ ಗುಣ ಸಮುದಾಯವನ್ನು ದ್ರವ್ಯವೆಂದು ಪರಿಗಣಿಸಲಾಗಿದೆ. ಸತ್ವವೆಂಬ ದ್ರವ್ಯದಿಂದ ಮಹತ್ ತತ್ವ ಉದಯವಾಗುತ್ತದೆ. ಮಹತ್ ತತ್ವದಿಂದ ಅಹಂಕಾರ ತತ್ವುಬದಿಸುವುದು. ಅಹಂಕಾರ ತತ್ವದಿಂದ ಬುದ್ದಿ, ಬುದ್ದಿತತ್ವದಿಂದ ಮನಸ್ಸು ಉದ್ಭವಿಸುತ್ತವೆ.

ಬಂಧವೆಂಬುದು ಎಂದೂ ಇಲ್ಲ. ಈತ ಅಣೋರಣಿಯಾನ್ ಮಹತೋ ಮಹಿಯಾನ್, ಪಂಚಬೇಧ ಜ್ಞಾನ, ಪ್ರಕೃತಿ–ಪುರುಷ ವಿವೇಕ ಜ್ಞಾನ ಸರ್ವಕರ್ಮಸಮರ್ಪಣಭಾವ, ಆತ್ಮಸಮರ್ಪಣವೆಂಬ ಶರಣಾಗತಿಯೇ ದ್ವೈತದರ್ಶನದಲ್ಲಿ ಕಂಡುಬರುತ್ತದೆ.

ಈ ಷಡದರ್ಶನಗಳಲ್ಲದೆ ಜೈನ, ಬೌದ್ಧ ದರ್ಶನಗಳೂ ಪ್ರಪಂಚದ ಪ್ರಭಲವಾದ ಧರ್ಮಗಳು. ಇವು ವೇದವನ್ನಾಗಲಿ, ಆತ್ಮ ಪರಮಾತ್ಮನೆಂಬ ತತ್ವವನ್ನಾಗಲಿ ಒಪ್ಪಿಕೊಳ್ಳುವುದಿಲ್ಲ. ಜೈನಧರ್ಮವೊಂದು ಮಾತ್ರ ತತ್ವ ಒಪ್ಪಿಕೊಂಡರೂ ಪರಮಾತ್ಮ ತತ್ತ್ವವನ್ನು ಒಪ್ಪಿಕೊಂಡಿರುವುದಿಲ್ಲ.

ಶ್ರಮಣದರ್ಶನಗಳಲ್ಲಿ ಪರಿಸರ:

ವೇದ ಪ್ರಮಾಣವನ್ನು ಒಪ್ಪಿದ ವರ್ಣಾಶ್ರಮ ಧರ್ಮವನ್ನು ಸ್ವೀಕರಿಸದ, ಯಜ್ಞಯಾಗಾದಿಗಳ ಆಚರಣೆಯಲ್ಲಿ ನಂಬುಗೆಯಿಲ್ಲದ ಜಾತಿಪದ್ಧತಿಯನ್ನು ಧಿಕ್ಕರಿಸಿದ ಅದೆಷ್ಟೋ ಧರ್ಮಗಳಿದ್ದವು. ಅವುಗಳಲ್ಲಿ ಜೈನ ಮತ್ತು ಭೌದ್ಧಧರ್ಮಗಳು ಪ್ರಮುಖವಾದವುಗಳು. ಆದರೂ ಇತರ ಕೆಲವು ದರ್ಶನಗಳು ಅಪ್ರಸಿದ್ಧವಾಗಿದ್ದವಾದರೂ ಇವುಗಳಲ್ಲಿಯೂ ಪರಿಸರದ ಬಗ್ಗೆ ಮಾತನಾಡಿದ್ದು ಕಂಡು ಬರುತ್ತದೆ. 'ಪುರಾಣ' ಕಸ್ಸಪನ ಅಕ್ರಮ ಸಿದ್ಧಾಂತ'[33] ದಲ್ಲಿ ಇದು

---

[32] ಮಹಾಯಾತ್ರೆ – ಡಾ. ಆರ್.ಸಿ. ಹಿರೇಮಠ.

[33] ಮಹಾಯಾತ್ರೆ – ಡಾ. ಆರ್.ಸಿ. ಹಿರೇಮಠ.

ಹೆಸರೇ ಸೂಚಿಸುವಂತೆ ದಾನಧರ್ಮ ಮಾಡುವುದರಿಂದ, ಇಂದ್ರಿಯ ನಿಗ್ರಹಿಸುವುದರಿಂದ, ಆತ್ಮಪರಿಶುದ್ಧತೆಯಿಂದ ಯಾವುದೇ ಪಾಪ ಪುಣ್ಯವಿಲ್ಲವೆಂದಿದ್ದಾನೆ. ಅವನು ಪರಿಮಿತ ಸೃಷ್ಟಿಯನ್ನು ಅಪರಿಮಿತ ಜ್ಞಾನದಿಂದ ನೋಡಿದನು. ಮರಣದ ನಂತರ ಮತ್ತೆ ಎಲ್ಲೆಲ್ಲಿ ಹುಟ್ಟಿದರೆಂಬುದನ್ನು ತಿಳಿಯುವ ಸಾಮರ್ಥ್ಯ ಆತನಿಗಿದ್ದಿತಂತೆ! 'ಪಕಡ' ಕಚ್ಚಾಯನನ' ಪ್ರಕಾರ ಈತ ಏಳು ಮೂಲ ತತ್ವಗಳನ್ನು ಪ್ರತಿಪಾದಿಸುತ್ತಿದ್ದನು. ಪೃಥ್ವಿ, ಅಪ್, ತೇಜ, ವಾಯು, ಸುಖ, ದುಃಖ ಆತ್ಮ ಈ ಏಳನ್ನು ಕುರಿತು ಹೇಳಿಕೊಟ್ಟಿದ್ದಾನೆ. ಇವುಗಳನ್ನು ಸೃಷ್ಟಿಮಾಡುವುದಾಗಲಿ, ಬದಲಾವಣೆ ಮಾಡುವುದಾಗಲಿ ಯಾರಿಂದಲೂ ಸಾಧ್ಯವಿಲ್ಲ ಇದೊಂದು 'ಅಣುಸಿದ್ಧಾಂತ'ವೆಂದು ಕರೆದಿದ್ದಾರೆ.

ಜೀವರಾಶಿಯು ಮಾತ್ರ 'ಜ್ಞಾನವನ್ನು ಪಡೆದಿರುತ್ತವೆ. ಮಿಕ್ಕವು ಇಲ್ಲ ಅವುಗಳೇ 'ಅನಾದಿ' ಮತ್ತು ಶಾಶ್ವತ. ಮುಂದೆ ಬಂದ ಅಜೀತಕೇಶವ ಕಂಬಲಿನ ಉಚ್ಛೇದವಾದ' ದಲ್ಲಿ ಉಚ್ಛೇದವಾದ ವೆಂದರೆ ಲೋಕಾಯುತ ಅಥವಾ ಚಾರ್ವಾಕರೆಂದು ಹೆಸರು ಪಡೆದವರು. ಈ ಜೀವಜಗತ್ತು ಪೃಥ್ವಿ, ಅಪ್ಪು ತೇಜ, ವಾಯು ಎಂಬ ನಾಲ್ಕು ತತ್ತ್ವಗಳಿಂದಾಗಿದೆ. ಮರಣದ ನಂತರ ಆ ನಾಲ್ಕು ತತ್ತ್ವಗಳು ಮೂಲತತ್ವಗಳೊಡನೆ ಕೂಡಿ ಹೋಗುವುವು. ಈ ಜಗತ್ತಿನಲ್ಲಿ ಪಾಪ-ಪುಣ್ಯಗಳು ಅಸ್ತಿತ್ವದಲ್ಲಿಲ್ಲವೆನ್ನುತ್ತಾರೆ. ಸಂಜಯಬೇಲಠಿತ್ತನ ವಿಕ್ಷೇಪವಾದ. ಬೇಲಠಿ ಎಂಬ ತಾಯಿಯ ಮಗ ಸಂಜಯನು ಗೌತಮಬುದ್ಧನ ಹಿರಿಯ ಸಮಕಾಲೀನ ಈತನೇ ಇದರ ಪ್ರತಿಪಾದಕ.

ಜೈನಧರ್ಮದಲ್ಲಿ ಪರಿಸರ:

ಇಲ್ಲಿ ಸತ್ವವೇ ತತ್ವ ಸತ್ವವೆಂಬುದು ಉತ್ಪತ್ತಿ, ವಿನಾಸ, ಸ್ಥಿರತ್ವವೆಂಬ ಮೂರು ಸ್ವಭಾವವುಳ್ಳದ್ದು. ಆತ್ಮಾದಿ ಸಕಲ ವಸ್ತುಗಳಿಗೆ ಉತ್ಪತ್ತಿ, ಸ್ಥಿರತ್ವ, ವಿನಾಶ ಈ ಗುಣಗಳುಂಟು. ಬೀಜದಿಂದ ಅಂಕುರ ಉತ್ಪತ್ತಿಯಾಗುತ್ತದೆ. ಅಂದರೆ ಬೀಜ ತನ್ನ ಸ್ವರೂಪ ಕಳೆದುಕೊಂಡಾಗಲೇ ಅಂಕುರ ಉತ್ಪತ್ತಿ. ಈತ ತತ್ವಗಳನ್ನು ಎರಡು, ಐದು, ಆರು, ಏಳು, ಒಂಬತ್ತು ವಿಧವಾಗಿ ವಿಭಜಿಸಲಾಗಿದೆ. ಜಿತ್-ಅಜಿತ್ ಎಂಬ ವಿಧಾನವು ಈ ಸಿದ್ಧಾಂತದಲ್ಲಿ ಈಶ್ವರತತ್ವವಿಲ್ಲವೆಂಬುದಕ್ಕೆ ನಿದರ್ಶನ. ಜೀವ-ಅಜೀವ ಇನ್ನೊಂದು ರೀತಿ ವಿಭಜನೆ ಈ 'ಅಜೀವ' ತತ್ತ್ವವು ಧರ್ಮ, ಅಧರ್ಮ, ಆಕಾರ, ಕಾಲ, ಪುದ್ಗಲವೆಂದು ಐದು ವಿಧವಾಗಿವೆ. ಇದಕ್ಕೆ ಜೀವ ಒಂದು ಸೇರಿಕೊಂಡ ಆರುಬಗೆಯಾದವು. ಇದರಲ್ಲಿ ದ್ರವ್ಯಗಳಾಗಿ ಪೃಥ್ವಿ, ಆಪ, ತೇಜ, ವಾಯು, ಆಕಾಶ,

ಮನಸ್ಸು ಎಂದು ಆರು ವಿಧವಾಗಿವೆ. ಇವುಗಳಲ್ಲಿ ಪೃಥ್ವಿ ಅಪ್ ತೇಜ, ವಾಯು, ಮನಸ್ಸು ಇವುಗಳು ಪುದ್ಗಲವೆನಿಸುತ್ತವೆ. ಪುದ್ಗಲವೆಂದರೆ ಅಣುಗಳ ಗುಂಪು ಎಂದರ್ಥ.

"ಜೀವಾಜೀವಾಸ್ರವಸಂವರ ನಿರ್ಜರಬಂಧ ಮೋಕ್ಷ[34]" ವೆಂಬ ಸೂತ್ರದಲ್ಲಿ ಜೈನದರ್ಶನದ ಸಾರ ಅಡಕವಾಗಿದೆ. ಜೀವನು, ಕಾಯಾ, ವಾಚಾ, ಮನಸಾ ಕರ್ಮಗಳನ್ನು ಮಾಡುತ್ತಿರುವನು. ಕಾದಕಬ್ಬಿಣ ಹೇಗೆ ನೀರು ಹೀರಿಕೊಳ್ಳುತ್ತದೆಯೋ, ಹಾಗೆಯೇ ಶುಭಾ ಶುಭಕರ್ಮ ಮಾಡುವ ಜೀವನು ಪುಣ್ಯ-ಪಾಪ ಪುದ್ಗಲಗಳನ್ನು ಎಳೆದುಕೊಂಡು ಬದ್ಧನಾಗುವನು. ಸಂಚಿತ ಕರ್ಮಗಳನ್ನು ದ್ವಾಪರ ವಿಧತಪಸ್ಸು, ಅಣುವೃತ, ಗುಣವೃತಗಳಿಂದ ಜಯಿಸುವುದೇ ನಿರ್ಜರೆ. ನಿರ್ಜರೆಗಳಿಂದ ಕರ್ಮಸಂಪೂರ್ಣವಾಗಿ ಕ್ಷಯವಾದರೆ ಅದೇ ಮುಕ್ತಿ ಎನ್ನುತ್ತಾರೆ.

ಬೌದ್ಧದರ್ಶನದಲ್ಲಿ ಪರಿಸರ :

ಶಾಕ್ಯದೊರೆಯಾದ ಸುದ್ಧೋದ'ನ ಪುತ್ರ ಸಿದ್ಧಾರ್ಥನು ರಾಜವೈಭವವನ್ನು ತೊರೆದು ಹೆಂಡತಿಮಕ್ಕಳನ್ನು ಬಿಟ್ಟು ಈ ಪ್ರಪಂಚವೆಲ್ಲ ವ್ಯಾಪಿಸಿದ ದುಃಖದ ಮೂಲವನ್ನು ಕಂಡು ಹಿಡಿಯಲು ಅರಣ್ಯ ಪ್ರವೇಶಿಸಿದನು. ಯೋಗವನ್ನು ಆಚರಿಸಿ ಬುದ್ಧನೆನಿಸಿಕೊಂಡನು. ಈತನ ಪ್ರಕಾರ ಇನ್ನೊಬ್ಬರ ಅಭಿಪ್ರಾಯ ಹಕ್ಕೊತ್ತಾಯವಾಗದೆ ಬಹಳ ಸರಳವಾಗಿ ಸ್ವೀಕರಿಸಬೇಕು ಎನ್ನುತ್ತಾನೆ.

ಸುವರ್ಣವನ್ನು ಬೆಂಕಿಯಲ್ಲಿ ಕಾಸಿ ಒರೆಗೆ ಹಚ್ಚಿ ಪಂಡಿತರು ಪರೀಕ್ಷಿಸುವಂತೆ ಮಾತುಗಳು ಪರೀಕ್ಷಿಸಿ ನೋಡಬೇಕೆಂದು ಗೌತಮಬುದ್ಧನು ಹೇಳುತ್ತಾನೆ. ನಾನು ಹೇಳುತ್ತೇನೆ ನೀನು ಇದನ್ನು ಮಾಡು ಎಂಬ ವಾಣಿ ಗೌತಮಬುದ್ಧನ ಬಾಯಿಂದ ಬಂದಿಲ್ಲವೆಂದೇ ಹೇಳಬೇಕು. ಆದ್ದರಿಂದಲೇ ಒಬ್ಬವ್ಯಕ್ತಿಯ ನಿಯಂತ್ರಣಕ್ಕೆ ಸಿಲುಕದೆ ಹಲವುಕಾಲದ, ಹಲವು ಪ್ರದೇಶದ, ಹಲವುಬಗೆಯ ಸಮಾಲೋಚನೆಗೆ ಗುರಿಯಾದುದ್ದರಿಂದ ಬೌದ್ಧಧರ್ಮದಲ್ಲಿ ಬಹುಬೇಗನೆ ಅನೇಕ ಶಾಖೆಗಳು ಕಂಡುಬಂದವು. 'ಸುತ್ತಪಿಟಕ' (ಪಾಲಿಭಾಷೆ)ಗಳ ಸೂತ್ರೋಪದೇಶ ಸಂಪ್ರದಾಯಕ್ಕೆ ಸೇರಿದ ಸಾಂಘಿಕರು ಸಾತ್ರಾಂತಿಕರೆನಿಸಿದರು. 'ವಿನಯಪಿಟಕವನ್ನು' ಅನುಸರಿಸಿದವರು. ವೈಜ್ಞಾನಿಕರೆನಿಸಿದರು. ಇವರು ಅಂತರ್ ಬಾಹ್ಯ ಸರ್ವವಸ್ತುಗಳನ್ನು ಒಪ್ಪಿ ಅವುಗಳಿಗೆ

---

[34] ಮಹಾಯಾತ್ರೆ – ಡಾ. ಆರ್.ಸಿ. ಹಿರೇಮಠ.

ಕ್ಷಣಿಕತೆಯನ್ನು ಕಲಿಸಿದರು.[35] 'ಯಾವ ಅತ್ಯಂತ ಕಿರಿಯ ಕಾಲಾಂಶವನ್ನು ಪುನಃ ವಿಭಜಿಸಲು ಸಾಧ್ಯವಿಲ್ಲವೋ ಅದಕ್ಕೆ ಕ್ಷಣವೆಂದರು. ಅಂದರೆ ಪ್ರತಿಕ್ಷಣವೆಂದರೆ ಸೃಷ್ಟಿಯಲ್ಲಿ ಪ್ರತಿಯೊಂದು ಹುಟ್ಟಿದ ಮೇಲೆ ವಿನಾಶಹೊಂದಲೇಬೇಕು. ಅದುವೇ ಸೃಷ್ಟಿ.

ಬೌದ್ಧಧರ್ಮದಲ್ಲಿ ಪರಮಾರ್ಥದೃಷ್ಟಿಯಲ್ಲಿ ಶೂನ್ಯವೆನಿಸಿದರೂ ವ್ಯವಹಾರ ದೃಷ್ಟಿಯಲ್ಲಿ ಸತ್ಯವೆಂಬ ವ್ಯವಸ್ಥೆ ಉಂಟಾಯಿತು. ಈ ವ್ಯವಹಾರ ಮಾರ್ಗವೇ ಪರಮಾರ್ಥಕ ದಾರಿ. ಇದೇ ಅಸತ್ಯದಿಂದ ಸತ್ಯಸಿದ್ದಿಯೆಂಬ ವಾಕ್ಯಕ್ಕೆ ಮೂಲವೆನಿಸಿತು. ಇದನ್ನೇ ಮಾಹೆ ಅವಿದ್ಯ, ಬ್ರಾಂತಿ, ಅಜ್ಞಾನವೆಂದು ಕರೆದರು. ಬೌದ್ಧರು ಆರ್ಯ ಸತ್ಯವೆಂಬ ನಾಲ್ಕು ಸತ್ಯಗಳನ್ನು ಹೇಳಿದರು. ದುಃಖ ದುಃಖ ಸಮುದಯ ದುಃಖನಿರೋಧ ಮಾರ್ಗ. ದುಃಖನಿರೋಧವೆಂಬವು ಆರ್ಯಸತ್ಯಗಳು. ಈ ಆರ್ಯಸತ್ಯದ ಮೂಲ ಹೆಚ್ಚೆ ದುಃಖವೆನಿಸಿದೆ. ಅದು ರೂಪ, ವಿಜ್ಞಾನ, ವೇದನೆ, ಸಂಜ್ಞೆ ಸಂಸ್ಕಾರ ಐದು ಸ್ಕಂದಗಳಾಗಿದ್ದು (ಗುಂಪು) ಇದನ್ನೇ ಕೆಲವರು ಪ್ರವಾಹವೆಂದರು[36]. ರೂಪಸ್ಕಂದವೆಂಬುದಕ್ಕೆ ಪಂಚಜ್ಞಾನೇಂದ್ರಿಯಗಳು ಎಂದರು. ಅವು ರೂಪ, ರಸ, ಗಂಧ ಶಬ್ದ ಸ್ಪರ್ಶ ಇವು ಸೇರಿ ರೂಪಸ್ಕಂದ ಹತ್ತು ಬಗೆಯಾದವು ಇಂದ್ರಿಯ ಪಂಚಕ, ವಿಷಯಪಂಚಕ ಸಹಕಾರಿಕಾರಣವೆಂಬ ಅರ್ಥಕೊಟ್ಟು ಬೀಜದಿಂದ ಅಂಕುರ, ಅಂಕುರದಿಂದ ಎಲೆ, ಎಲೆಯಿಂದ ಕಾಂಡ, ಕಾಂಡದಿಂದ ಹೂ, ಕಾಯಿ, ಹಣ್ಣು ಈ ಪ್ರಕ್ರಿಯೆಗೆ ಹೇತುರೂಪ ನಿಬಂಧನೆ ಎಂದು ಕರೆದರು.

ಎರಡನೆ ವಿಧದಲ್ಲಿ ಪೃಥ್ವಿ ಬೀಜ ಧರಿಸುತ್ತದೆ. ಆಲ ಅದನ್ನು ಮೃದುಮಾಡುತ್ತದೆ. ತೇಜ ಅದನ್ನು ಹದಗೊಳಿಸುತ್ತದೆ. ವಾಯು ಹೊರಗೆ ತರುತ್ತದೆ. ಇದಕ್ಕೆ ಪ್ರತ್ಯೋಪ ನಿಬಂಧನೆ ಎಂದು ಇದನ್ನು ವಿಜ್ಞಾನಕ್ಕೆ ಹೊರತಾಗಿ ಒಪ್ಪುವುದಿಲ್ಲ. ಇವೆಲ್ಲ ದೇಹ-ಇಂದ್ರಿಯ ವಿಜ್ಞಾನದ ಸಂಘಿತ, ಪ್ರಕೃತಿ-ಪುರುಷ ಈಶ್ವರ ಆತ್ಮ ಮೊದಲಾದ ನಿತ್ಯವಸ್ತುಗಳಿಗೆ ಬೌದ್ಧದರ್ಶನದಲ್ಲಿ ಸ್ಥಾನವೇ ಇಲ್ಲ. ಸರ್ವವೂ ಜನ್ಯ, ಕ್ಷಣಿಕ ಬೌದ್ಧ ಸಿದ್ಧಾಂತದಲ್ಲಿ ಮುಖ್ಯವಾಗಿರಬೇಕಾದ ಭಾವನೆಗಳು ನಾಲ್ಕು ಸರ್ವಂ ಸ್ವಲಕ್ಷಣಂ, ಸ್ವಲಕ್ಷಣಂ, ಕ್ಷಣಿಕಂ ಕ್ಷಣಿಕಂ, ದುಃಖಂ ದುಃಖಂ ಶೂನ್ಯಂ ಶೂನ್ಯಂ. ಈ ಭಾವನೆ ಬಲಿತರೆ ಸಂಸಾರದ ದುಃಖಕ್ಕೆ ಕಾರಣವಾದ ಬ್ರಾಂತಿ, ಅವಿದ್ಯ ತೊಲಗಲು ಸಾಧ್ಯ. ಆದ್ದರಿಂದ ವೈಜ್ಞಾನಿಕ ದೃಷ್ಟಿಕೋನ ಬುದ್ಧನಲ್ಲೂ ಎದ್ದುಕಂಡಿತ್ತು.

---

[35] ಮಹಾಯಾತ್ರೆ – ಡಾ. ಆರ್.ಸಿ. ಹಿರೇಮಠ.

[36] ಮಹಾಯಾತ್ರೆ – ಡಾ. ಆರ್.ಸಿ. ಹಿರೇಮಠ.

ಅಧ್ಯಾಯ - ೨

ಜಾಗತೀಕರಣ- ಪರಿಸರ

ಅಧ್ಯಾಯ – ೩

ಜಾಗತೀಕರಣ– ಪರಿಸರ

ಹಿನ್ನೆಲೆ :

ಪರಿಸರವೆಂದರೆ ನಾಗರಿಕತೆ ಎಂದೇ ಅರ್ಥ. ಸ್ವಚ್ಛ ಪರಿಸರ ಉತ್ತಮ ನಾಗರಿಕತೆ ಲಕ್ಷಣ. ಆದರೆ ನಾಗರಿಕತೆ ಹೆಸರಲ್ಲಿ ಇಡೀ ಜಗತ್ತು ಆಧುನೀಕರಣಕ್ಕೆ ತೆರೆದುಕೊಂಡಿರುವುದರ ಫಲವಾಗಿ ಇಡೀ ಜಗತ್ತು ಕಿರಿದಾಗಿದೆ. ಮಾಹಿತಿ–ತಂತ್ರಜ್ಞಾನದ ಬೆಳವಣಿಗೆಯಿಂದ ವಿಶಾಲ ಜಗತ್ತು ಒಂದು ಪುಟ್ಟ ಹಳ್ಳಿಯಾಗಿ ಮಾರ್ಪಟ್ಟಿದೆ. ಜೀವನದ ವಿಧಾನ ಉನ್ನತೀಕರಣಗೊಂಡಿದೆ ಎಂಬ ಭ್ರಮೆಯಲ್ಲಿದ್ದರೂ ವಾಸ್ತವ ಸಂಗತಿಯೇ ಬೇರೆ. ಮನುಷ್ಯ ಬದುಕು ಅಧಃ ಪತನಕ್ಕೆ ಒಳಗಾಗಿದೆ. ಮಾನವೀಯ ಸಂಬಂಧಗಳು ಇಲ್ಲವಾಗುತ್ತಿವೆ. ಇದೆಲ್ಲದಕ್ಕೂ ಜಾಗತೀಕರಣವೇ ಕಾರಣ. ಈ ಜಾಗತೀಕರಣ ನಮ್ಮ ಬದುಕನ್ನು ಆಕ್ಟೋಪಸ್ ರೀತಿಯಲ್ಲಿ ಆಕ್ರಮಿಸಿದೆ ಇದರಿಂದಾಗಿ ಪರ್ಯಾಯ ಮಾರ್ಗಗಳನ್ನು ರೂಪಿಸಿಕೊಳ್ಳುವ ಅಗತ್ಯವಿದೆ. ವಿಶೇಷವಾಗಿ ಪರಿಸರದಲ್ಲಾದ ಬದಲಾವಣೆ ನಿಲ್ಲಬೇಕು ಆದ್ದರಿಂದ ಜಾಗತೀಕರಣದ ಸಂದರ್ಭದಲ್ಲಿ ನಮ್ಮ ಪರಿಸರದ ಸ್ಥಿತಿಗತಿಗಳ ವಿವೇಚನೆ ಅಗತ್ಯವಾಗಿದೆ.,

ಜಾಗತೀಕರಣದ ಅರ್ಥ :

"ಆರ್ಥಿಕ ಸಬಲೀಕರಣ" ಹೆಸರಲ್ಲಿ ಹುಟ್ಟಿಕೊಂಡ ಖಾಸಗೀಕರಣ ಹಾಗೂ ಉದಾರೀಕರಣ ನೀತಿಗಳು ಜಗತ್ತಿನಾದ್ಯಂತ ವ್ಯಾಪಿಸುವುದನ್ನು ಜಾಗತೀಕರಣ ಎನ್ನಲಾಗಿದೆ. ಜಾಗತೀಕರಣ ಎಂಬ ಪದವು ಇಂಗ್ಲೀಷನ ಗ್ಲೋಬಲೈಜಷನ್ (Globalization) ಎಂಬ ಪದಕ್ಕೆ ಸಂವಾದಿಯಾಗಿ ಬಳಸಲಾಗುತ್ತಿದೆ. Globalization ಎಂಬುದು ಮಾರ್ಷಲ್ ಮ್ಯೊಹೂಮ್

ಮೊದಲ ಸಲ ಬಳಸಿದ "Global Village"[37] ಎಂಬ ಪದದಿಂದ ಹುಟ್ಟಿಕೊಂಡಿದೆ. ಈ Globalization ಎಂಬುದಕ್ಕೆ ಕನ್ನಡದಲ್ಲಿ ಜಾಗತೀಕರಣ, ಪ್ರಪಂಚೀಕರಣ ಮೊದಲಾದ ಹೆಸರುಗಳಿಂದ ಕರೆಯಾಲಾಗುತ್ತಿದೆ.

ಮೂಲತಃ ವಿಶ್ವದಲ್ಲಿ ವರ್ಗರಹಿತ ವ್ಯವಸ್ಥೆ ರೂಪುಗೊಳ್ಳಲು ಬೇಕಾದ ಆರ್ಥಿಕ ಸಬಲೀಕರಣದ ಉದ್ದೇಶದಿಂದ ಹುಟ್ಟಿದ ಜಾಗತೀಕರಣದ ಪರಿಕಲ್ಪನೆ ಇಂದು ಪ್ರಬಲ ರಾಷ್ಟ್ರಗಳು ಮುಖವಾಣಿಯಾಗಿ ಮಾತ್ರ ಕೆಲಸ ನೀರ್ವಹಿಸುತ್ತಿವೆ. ಆದರಿಂದ ಅದನ್ನು ಡಾ॥ ಯು.ಆರ್.ಅನಂತಮೂರ್ತಿ ಅವರು "ಅಮೇರಿಕೀಕರಣ"[೩೮] ಎಂದು ಕರೆದಿರುವರು

ರಾಬರ್ಟಸನ್ ಅವರು ಜಾಗತೀಕರಣವನ್ನು ವ್ಯಾಖ್ಯಾಸಿಸುತ್ತಾ "ಸಾಮಗ್ರಿಗಳ, ಸೇವೆಗಳ, ಬಂಡವಾಳದ ರಫ್ತು, ಆಮದು ಚಟುವಟಿಕೆಗೆ ಸಂಬಂಧ ಪಟ್ಟ ಪ್ರಕ್ರಿಯೆ"[೩೯] ಎಂದಿದ್ದಾರೆ. ಡಿಕ್ಸನ್ ಅವರ ಅಭಿಪ್ರಾಯದಂತೆ ಜಾಗತೀಕರಣ ಎಂದರೆ "ಜಾಗತೀಕವಾಗಿ ಹರಡಿರುವ ಆರ್ಥಿಕ ಚಟುವಟಿಕೆಗಳನ್ನು ಏಕೀಕರಣ ಗೊಳಿಸುವುದೇ ಪ್ರಪಂಚೀಕರಣ"[೪೦] ಎಂದಿದ್ದಾರೆ ಅಂದರೆ ಜಗತೀನ ಯಾವುದೇ ಮೂಲೆಯಲ್ಲಿ ಉತ್ಪಾದನೆ ಯಾಗುವ ವಸ್ತು ಇಡೀ ಜಗತ್ತಿಗೆ ತಲುಪಿಸುವ ಉದ್ದೇಶವುಳ್ಳದ್ದೇ ಜಾಗತೀಕರಣ. ಅಂತಿಮವಾಗಿ ಅದರ ಸಾರವೆಂದರೆ "ರಾಷ್ಟ್ರ ರಾಷ್ಟ್ರಗಳನ್ನು ಬೇರ್ಪಡಿಸುವ ಅರ್ಥಿಕ ಗಡಿ ಗೇರೆಗಳನ್ನು ಅಳಿಸಿ ವಿವಿಧರಾಷ್ಟ್ರಗಳ ಅರ್ಥವ್ಯವಸ್ಥೆಯನ್ನು ಜಾಗತೀಕ ಅರ್ಥವ್ಯವಸ್ಥೆಯೊಂದಿಗೆ ಸಮೀಕರಿಸಿ ಗಡಿ ರಹಿತ ಜಾಗತೀಕ ಮಾರುಕಟ್ಟೆ ಅರ್ಥವ್ಯವಸ್ಥೆಯನ್ನು ಸ್ಥಾಪಿಸುವುದು"[೪೧] ಇದರಿಂದ ಜಗತ್ತಿನ ಎಲ್ಲಾ ದೇಶಗಳು ಆರ್ಥಿಕ ರಾಜಕಿಯ, ಸಾಂಸ್ಕೃತಿಕ ಸುಭದ್ರತೆಯ ಆಶೋತ್ತರಗಳನ್ನು ಇಟ್ಟುಕೊಂಡು ಈ ಜಾಗತೀಕರಣ ಹುಟ್ಟಿಕೊಂಡಿದೆ. ಆದರೆ ಇದರ ಫಲಿತ ಪರಿಸರದ ಮೇಲೆ ವ್ಯತಿರಿಕ್ತವಾಗಿದೆ.

---

[37] ದಲಿತರು ಮತ್ತು ಜಾಗತೀಕರಣ – ಮೊಗಳ್ಳಿ ಗಣೇಶ ಪು.ಸಂ.೧೦

[38] ಆಶಯ ಭಾಷಣ ಡಾ. ಯು.ಆರ್. ಅನಂತಮೂರ್ತಿ ಜಾಗತೀಕರಣ ಒಂದು ಸಮಗ್ರ ಮಂಥನ – ಸಂ. ರಾಜೇಂದ್ರ ಚೆನ್ನಿ ಪು.ಸಂ.೧೨.

[39] ಜಾಗತೀಕರಣ – ಮ ಮಹೇಶ ಪು.ಸಂ.೧೨

[40] ಜಾಗತೀಕರಣ – ಮ ಮಹೇಶ ಪು.ಸಂ.೧೨

[41] ಜಾಗತೀಕರಣ – ಮ ಮಹೇಶ ಪು.ಸಂ.೧೩

ಜಾಗತೀಕರಣದ ಸ್ವರೂಪ :

ಜಾಗತೀಕರಣ'ವೆಂಬುವುದು ಸಮಾಜದಲ್ಲಿ, ಮಾನವನ ವಿಚಾರದಲ್ಲಿ ಅಡೆತಡೆಗಳಿಲ್ಲದೇ ಪ್ರಪಂಚದಾದ್ಯಂತ ಪ್ರಸಾರ, ಪ್ರಚಾರ ಮಾಡುವುದೇ ಜಾಗತೀಕರಣ. ಹೀಗೆ ಹರಿಬಿಟ್ಟ ವಿಚಾರಗಳು ಆಯಾ ರಾಷ್ಟ್ರಗಳು ಅವುಗಳನ್ನು ತಮ್ಮಂತೆ ಮಾಡಿಕೊಂಡು, ತಮ್ಮ ಬದುಕಿಗೆ ಪೂರಕವಾಗುವ ರೀತಿಯಲ್ಲಿ ಅಳವಡಿಸಿಕೊಳ್ಳುವುದಾಗಿದೆ.

ಒಂದು ಕಡೆ ಬಹುಪಾಲು ಜನ ತಮ್ಮ ಉತ್ಪಾದನಾ ಸಾಮರ್ಥ್ಯವನ್ನ ಅದುಮಿಟ್ಟುಕೊಂಡು ಅಧಿಕಾರ ಶಾಹಿ ವ್ಯವಸ್ಥೇಯ ಅಡಿಯಲ್ಲಿ ಸಾಗಿಸುತ್ತಿದ್ದಾರೆ. ಇಡೀ ಉತ್ಪಾದನಾ ವ್ಯವಸ್ಥೆಯೇ, ಸಂಪನ್ಮೂಲಗಳನ್ನು ಅನಾವಶ್ಯಕವಾಗಿ ಪೋಲು ಮಾಡುವ, ಇಡೀ ಜಗತ್ತನ್ನೇ ಕೈಗೆ ತೆಗೆದುಕೊಳ್ಳುವ ಹುನ್ನಾರದಿಂದ ತನಗೆ ಗೊತ್ತಿಲ್ಲದಂತೆಯೇ ತನ್ನ ರಕ್ತವನ್ನು ತಾನೇ ಹೀರಿಕೊಳ್ಳುವ ಅಪಾಯಕಾರಿ ವ್ಯವಸ್ಥೆಯಾಗಿ ರೂಪಾಂತರ ಹೊಂದತೊಡಗಿದ್ದು, ತೃತೀಯರಂಗದ ಮಾರುಕಟ್ಟೆಯನ್ನು ವಿದೇಶಿ ಬಂಡವಾಳ ಹಾಗೂ ಸರಕುಗಳಿಗೆ ಬೇಷರತ್ತಾಗಿ ತೆರೆದಿಡಬೇಕು.[೪೨] ಹೀಗಾದಾಗ ಧಿಡೀರನೆ ಶ್ರೀಮಂತರಾಗುತ್ತೇವೆಂದರೆ ಯಾರುತಾನೆ ಒಪ್ಪಿಕೊಳ್ಳೋದಿಲ್ಲ. ಭಾರತ ಕೂಡ ಹೀಗೆ ಬಲು ಸಂತೋಷದಿಂದ ಒಪ್ಪಿಕೊಂಡಿತ್ತಾದರೂ ಈಗ ಚೆನ್ನಾಗಿಯೇ ಅನುಭವಿಸುತ್ತಿದೆ.

ಜಾಗತೀಕರಣವು ಮುಕ್ತ ವ್ಯಾಪಾರ-ವ್ಯವಹಾರಗಳ ನೆಪ ಮಾಡಿಕೊಂಡು, ವಿದೇಶಿ ಸಂಸ್ಕೃತಿಗಳು ಒತ್ತಾಯದಿಂದ ಹರಿಬಿಡುತ್ತಿರುವ, ಇಡೀ ಜಗತಿನಾದ್ಯಂತ ಭಾರತೀಯರನ್ನು ದೇಶಿ ಸಂಸ್ಕೃತಿಯಿಂದ ಗುರುತಿಸುತ್ತಿರುವ ರಾಷ್ಟ್ರಗಳೆಲ್ಲ ಭಾರತ ಕೂಡ ನಮ್ಮಿಂದ ಹೊರತಾಗಿಲ್ಲವೆನ್ನುವಂತಾಗತೊಡಗಿದೆ ಇದು ನಮ್ಮ ಮೇಲಿನ ಆಕ್ರಮಣವೆಂದೇ ಹೇಳಬೇಕು.

ಭಾರತದಲ್ಲಿ ಕಂಪ್ಯೂಟರ್‌ಯುಗ ಪ್ರಾರಂಭವಾದಾಗಿನಿಂದ ಸಾಫ್ಟ್‌ವೇರ್ ತಂತ್ರಜ್ಞಾನ ಯಾರ ಕಲ್ಪನೆಗೂ ನಿಲುಕದಷ್ಟು ವೇಗವಾಗಿ ಬೆಳೆದಿದೆ. ಮುಂದುವರಿದ ರಾಷ್ಟ್ರಗಳಲ್ಲಿ ಕಾರ್ಮಿಕರು ಕೂಡ ಕಾರು ಹೊಂದಿಕೊಂಡಿದ್ದಾರೆ. ಅಂದರೆ ಅದು ಉನ್ನತ ಮಟ್ಟದ ರಾಷ್ಟ್ರ ಶ್ರೀಮಂತರೆಂಬ

---

[42] ಜಾಗತೀಕರಣ ಮತ್ತು ಗ್ರಾಮ ಭಾರತ ಡಾ. ಎನ್ ಜಗದೀಶ್ ಕೊಪ್ಪ - ಪು.ಸಂ.೯.

ಭಾವನೆ ನಮ್ಮಲ್ಲಿದೆ ಅದನ್ನು ಕಂಡು ನಾವು ಕೂಡ ಹಾಗೆಯೇ ಓಡಾಡಬೇಕೆಂಬ ಹಪಹಪಿತನ ಮನೆ ಮಾಡತೊಡಗಿದೆ. ಮಿಂಚುಹುಳ ಕಂಡು ನರಿ ಬಾಲ ಬ್ಯಾನಿಮಾಡ್ಕೊಂಡಿತ್ತಂತೆ ಅನ್ನೋ ನಮ್ಮ ಹಿರಿಯರ ಮಾತು ನೆನಪಿರಲಿ.

ನಾವೆಂದೂ ಯೋಚಿಸದಷ್ಟು ಹೊಸ ಹೊಸ ಕ್ಷೇತ್ರಗಳಲ್ಲಿ ಉದ್ಯೋಗ ಸೃಷ್ಟಿಯಾಗುತ್ತಿವೆ. ಅದೆಷ್ಟೋ ಜನರ ಮೊಗದಲ್ಲಿ ಮಂದಹಾಸವಿದೆ ಇದೆಲ್ಲ ಜಾಗತೀಕರಣದಿಂದಲೇ ಎಂಬ ಮಾತದೆ. ಹೊಸ ಹೊಸ ಉದ್ಯೋಗ ಸೃಷ್ಟಿಯಾಗುತ್ತಿದೆ ನಿಜ. ಅದರೆ ಆ ಉದ್ಯೋಗಗಳಿಂದ ಭದ್ರತೆ ಒದಗಿತ್ತೇ. ಎಂಬ ಭಯ ಒಂದು ಕಡೆ ಆವರಿಸಿಕೊಂಡಿದೆ.

ಹೀಗೆ ಹೊಸ ಹೊಸ ಖಾಸಗಿ ಉದ್ಯೋಗ ಕೇಂದ್ರಗಳಲ್ಲಿ ಸಂಪಾದನೆ ಮಾಡಿದ ಹಣವೆಲ್ಲ 'ಜೂಜಿನ ಅಡ್ಡೆ' ಎಂದೆ ಕರೆಯುವ ಶೇರುಮಾರುಕಟ್ಟೆಯಲ್ಲಿ ತಮ್ಮ ಹಣ ತೊಡಗಿಸಿದವರು ಅದೆಷ್ಟೋ ಜನ. ಗೂಳಿ ಕಾಲು ಕೆದರಿ ಕುಸಿದಾಗ ಹಣ ತೊಡಗಿಸಿದ ಅದೆಷ್ಟೋ ಜನ ರಾತೋ ರಾತ್ರಿ ಅಧಿಕಾರಿಗಳಾಗಿದ್ದು, ಬಹಳ ವರ್ಷಗಳೆನಾಗಿಲ್ಲ । ಈ ರೀತಿ ಬಹುರಾಷ್ಟ್ರೀಯ ಕಂಪನಿಗಳ ಬಂಡವಾಳದ ಜೊತೆ ನಮ್ಮ ಸಣ್ಣ ಕೈಗಾರಿಕೆಗಳು ರೈತರು ತಮಗೆ ಜೀವನಾಧಾರವಾದ ಚಿಕ್ಕ ಚಿಕ್ಕ ಉದ್ಯೋಗಗಳು ಸರ್ವನಾಶವಾಗಿ ನಿರ್ಗತಿಕರ ಸ್ಥಿತಿಗೆ ತಲುಪಿದ್ದಾರೆ.

ಮನುಷ್ಯ ಮತ್ತು ಪ್ರಕೃತಿ ಇವುಗಳ ಮಧ್ಯ ಶಕ್ತಿಯುತವಾಗಿ ಒಳನುಗ್ಗಿರುವ ಬಂಡವಾಳ ಚರಾಚರವೆಲ್ಲ ಹಣವಾಗಿ ಮೌಲ್ಯೀಕರಿಸುವ ನಾಶಮಾಡುವಂತೆ ಮನುಷ್ಯನನ್ನು ಪ್ರಚೋದಿಸುತ್ತದೆ. ಅಂದರೆ ಪರಿಮಿತ ಚೌಕಟ್ಟಿನಲ್ಲಿ ಅಪರಿಮಿತ ಹುಚ್ಚುತನಕ್ಕೆ ಮನುಷ್ಯನನ್ನು ದೂಡುತ್ತಿವೆ. ಒಂದು ಮಾತ್ರ ನೆನಪಿಡಬೇಕು. ನಿಸರ್ಗವನ್ನು ಕೂಡ ಜಾಗತೀಕರಣಗೊಳಿಸುವ ಪ್ರವೃತ್ತಿ ಪರಿಸರದ ಸ್ಥಾನದ ಮೇಲೆ ಅಪರಿಮಿತ ಪರಿಣಾಮ ಬೀರುತ್ತದೆ.

ಈ ಮೇಲಿನದನ್ನು ನೋಡಿದರೆ ಕೃಷಿಗೆ ಸಂಬಂಧಿಸಿದ ಚಟುವಟಿಕೆಯಲ್ಲೂ ಕೂಡ ತೀವ್ರತಮ ವ್ಯತ್ಯಾಸಗಳು ಆಗುತ್ತಿವೆ. ಪರಿಸರ ಪ್ರಜ್ಞೆಯನ್ನು ಕಾಪಾಡಲು ಮೀಸಲಿರಿಸಿರುವ ದಿನಗಳಾದ ಭೂ ದಿನ, ಪರಿಸರದ ದಿನ, ಇಂತಹ ಬಹುರಾಷ್ಟ್ರಿಯ ಕಂಪನಿಗಳು, ಡಾಲರ್ ಗಟಲೇ ರೊಕ್ಕ ಖರ್ಚು ಮಾಡುತ್ತಿದ್ದಾರೆ. ಇದರ ಹಿಂದಿನ ಉದ್ದೇಶ ಮೂಗಿಗೆ ತುಪ್ಪ ಸವರುವ ಕಾರ್ಯವೆಂದೇ ಹೇಳಬೇಕು.

ಇವತ್ತಿನ ದಿನಗಳಲ್ಲಿ ಅಮೇರಿಕೆದಂತಹ ರಾಷ್ಟ್ರ ಗೋಮೂತ್ರ 'ಪೇಟೆಂಟ್' ಕೇಳುತ್ತಿರುವುದು ಜಾಗಾತೀಕರಣದಿಂದ ಹೊರತಾಗಿಲ್ಲವೆಂದೇ ಹೇಳಬೇಕು.[೪೩] ಬಂಡವಾಳ ಗಾರರಂತವರು ಮಾರಿ ಹುಣ್ಣು(ಕ್ಯಾನ್ಸರ್)ಗೆ ಹೆದರದ ದೇಹ ಬಗೆದು ಗಡ್ಡೆ ತೆಗೆಸಿಕೊಳ್ಳುತ್ತಾರೆ. ಅದರೆ ನಮ್ಮನೆಲದ ರೈತರಿಗೆ ಅದೆಲ್ಲಿಂದ ಸಾಧ್ಯ ಮತ್ತೆ ಅವರು ಗೊಮ್ಮೂತ್ರ ಸೇವನೆ ಮಾಡಿಯೇ ಆರೊಗ್ಯ ಕಾಪಾಡಿಕೊಳ್ಳಬೇಕಲ್ಲ.

ಇದಕ್ಕೂ ಕೂಡ ಶ್ರೀಮಂತ ರಾಷ್ಟ್ರಗಳು ಬಿಡುತ್ತಿಲ್ಲ. ಎಂತಹ ವಿಪರ್ಯಾಸ ಈ ಸ್ವಾಮ್ಯದ ಹಕ್ಕು ಅಂದರೆ ಚಾಲ್ತಿಯಲ್ಲಿರುವ ವಸ್ತುವಿನ ಬಳಕೆಯಲ್ಲಿ ಹೊಸತನವನ್ನು ತಂದರೆ ವಸ್ತುವನ್ನು ಉಪಯೋಗಿಸಲು ಒಂದು ನಿರ್ದಿಷ್ಟ ಕಾಲಾವಧಿಗೆ ಏಕಸ್ವಾಮ್ಯವಾಗಿ ಕೊಟ್ಟ ಹಕ್ಕು ಪತ್ರ ಪೇಟೆಂಟ್ ಒಂದು ಮಾದರಿಯ ಆಸ್ತಿ ಎಂದೇ ಹೇಳಬೇಕು. ಇದು ಬೌದ್ಧಿಕ ಆಸ್ತಿ ಎಂದೇ ಹೆಸರು. ಇದರ ಒಡೆಯ ಯಾರಿಗೆ ಬೇಕಾದವರಿಗೆ ಮಾರಾಟ ಮಾಡುವಂತಹ ಹಕ್ಕು ಹೊಂದಿದ್ದಾನೆ. ನಂತರ ತಾನು ಬಳಕೆ ಮಾಡುವ ಹಕ್ಕು ಕೆಳೆದುಕೊಳ್ಳುತ್ತಾನೆ.

ಪ್ರತ್ಯೇಕ ಮಾರಾಟದ ಹಕ್ಕನ್ನು ಕೊಟ್ಟಿರುವುದರಿಂದ ಪೇಟೆಂಟ್ ಬೇಡಿರುವ ವಸ್ತುಗಳನ್ನು ತಕ್ಷಣದಿಂದಲೇ, ಎಳ್ಳಷ್ಟು ಪ್ರಯತ್ನವಿಲ್ಲದೆ, ಮಾರಾಟ ಮಾಡುವ ಅವಕಾಶವನ್ನು ನಾವೇ ಕಲ್ಪಿಸಿಕೊಟ್ಟಂತಾಗುತ್ತದೆ. ಹೀಗೆ ಕಲ್ಪಿಸಿಕೊಟ್ಟ ಮೇಲೆ ಅದರ ವಿರುದ್ಧ ವ್ಯಾಜ್ಯ ಹೂಡುವ ಅವಕಾಶವನ್ನು ಸಂಪೂರ್ಣ ಕಳೆದುಕೊಳ್ಳುತ್ತವೆ. ಹೀಗಾದಾಗ ನಮ್ಮ ಜನರ ಆರ್ಥಿಕ ಚಟುವಟಿಕೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ.

ತಂತ್ರಜ್ಞಾನದ ಬೆಳವಣಿಗೆಯಿಂದ ಕೃಷಿ ಸಮುದಾಯವನ್ನು ಸಾಮಾನ್ಯ ಮಧ್ಯಮವರ್ಗವನ್ನು ಅತ್ಯಂತ ಸಂಧಗ್ದ ಪರಿಸ್ಥಿತಿಯಲ್ಲಿ ಸಿಲುಕಿಸಿದೆ. ಎರಡನೆಯ (ಹೈಬ್ರಿಡ್) ಯ ಪೀಳಿಗೆಯ ಬೀಜೋತ್ಪಾದನೆಯನ್ನು ಅಸಾದ್ಯವಾಗಿಸುವ ಈ ತಂತ್ರಜ್ಞಾನ ಸಾರ್ವಜನಿಕ ಬೀಜೋತ್ಪಾದಕ ಸ್ಥಾನವನ್ನು ಅಭ್ಯುದಯಗೊಳಿಸಿವೆ. ಬೀಜೋತ್ಪಾದನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಅದೆಷ್ಟೋ ರೈತರು ನಿರುದ್ಯೋಗಿಗಳಾಗಿದ್ದಾರೆ. ಸಣ್ಣ, ಬಡ ರೈತರಿಗಾಗಿ ಬೀಜೋತ್ಪಾದನೆ ಅಸಾಧ್ಯವಾಗಿ ಅಷ್ಟೋ ಇಷ್ಟೋ ಕೃಷಿಯನ್ನು ಅವಲಂಬಿಸಿದ ರೈತರು ಕೃಷಿಯಿಂದ ಕಾಲು ಕಿತ್ತಬೇಕಾದಂತಹ ಸಂದ'ರ್ಭ ಬಂದಿದೆ.

43 ಜಾಗತೀಕರಣ ದಕ್ಷಿಣದೃಷ್ಟಿಯಲ್ಲಿ – ಮ. ಮಹೇಶನ್ ಪು.ಸಂ. ೧೪೬

ಜಾಗತೀಕರಣ–ಪರಿಸರ :

ಇತ್ತಿಚಿನ ದಿನಗಳಲ್ಲಿ ಆಧುನಿಕತೆಗೆ ಮತ್ತೋಂದು ಹೆಸರು ಜಾಗತೀಕರಣ ವೆನ್ನಲಾಗುತ್ತಿದೆ. ಆದರೆ ಪರಿಸರ ನಾಶಕ್ಕೂ ಜಾಗತೀಕರಣಕ್ಕೂ ಅನನ್ಯ ಸಂಬಂಧವಿದೆ.

ಪರಿಸರ ನಾಶದಿಂದ ಮನುಕುಲ, ಪ್ರಾಣಿಪಕ್ಷಿ, ಸಸ್ಯಸಂಕುಲಗಳೆಲ್ಲ ಅಳಿದು ಹೋಗುತ್ತಿರುವುದು ಸತ್ಯಸಂಗತಿ. ಇದನ್ನು ಗೊತ್ತಿದ್ದು ಕೂಡ ಅಮೂಲ್ಯವಾದ ನಮ್ಮ ಪರಿಸರ ನಾಶಕ್ಕೆ ಕಾರಣಗಳೇನು ? ಇದರಿಂದ ನಮ್ಮ ಮೇಲೆ ಎಂತಹ ಕೆಟ್ಟ ಪರಿಣಾಮ ಬೀರುತ್ತಿವೆ. ಎಂಬುದು ಅರಿತುಕೊಳ್ಳಲು ಸಾಧ್ಯವಾಗಬೇಕು ಮನುಕುಲದ ರಕ್ಷಣೆಗೆಂದೆ ನಿಸರ್ಗವೇ ನಿರ್ಮಿಸಿಕೊಂಡ ಗಿರಿಶಿಖರಗಳು ಅಲ್ಲಿರುವ ಅದೆಷ್ಟೋ ಜೀವಿಗಳು ಇಂದು ನಾಶವಾಗುತ್ತಿವೆ. ರಕ್ಷಣೆಗೊಳ್ಳಬೇಕಾದ ಪ್ರಾಣಿ–ಪಕ್ಷಿ, ಸಸ್ಯಗಳು ಸಂಕಟದಲ್ಲಿ ಸಿಲುಕಿಕೊಂಡಿವೆ. ಇದಕ್ಕೆ ಪ್ರಮುಖವಾದ ಕಾರಣ ವಿವೇಕ ರಹಿತ ಚಟುವಟಿಕೆಗಳೇ ಪರಿಸರ ನಾಶಕ್ಕೆ ಮೂಲಕಾರಣ 'ನಾ ನಿನಗಿದ್ದರೆ ನೀ ನನಗೆ' ಎಂಬ ಮಾತು ಜನಪದರಲ್ಲಿ ಇಂದು ಕೂಡ ಪ್ರಚಲಿತವಾಗಿದೆ ಪ್ರಕೃತಿಯನ್ನು ನಾವು ಗೌರವಿಸಬೇಕು ಇಲ್ಲದಿದ್ದರೆ ಅದು ನಮ್ಮನ್ನು ರಕ್ಷಿಸಲಾರದು.

ದಿನದಿಂದ ದಿನಕ್ಕೆ ಏರುತ್ತಿರುವ ಜನಸಂಖ್ಯೆ, ನಗರೀಕರಣ, ಕಾರ್ಖಾನೆಗಳ ಸ್ಥಾಪನೆ, ಜಲವಿದ್ಯುತ್ ಯೋಜನೆಗಳು ರಾಸಾಯನಿಗಳ ಉಪಯೋಗ ದಿನದಿನಕ್ಕೆ ತಲೆ ಎತ್ತುವ ಉದ್ದಿಮೆಗಳು, ಮನೆಯಿಂದ ವಿಸರ್ಜಿಸಿದ ತ್ಯಾಜ್ಯಗಳು ಅರಣ್ಯನಾಶ ಇವೆಲ್ಲಾ ಪರಿಸರನಾಶಕ್ಕೆ ಕಾರಣವಾಗಿವೆ.

ಪರಿಸರದ ಅವನತಿಗೆ ಮಿತಿಮೀರಿದ ಜನಸಂಖ್ಯೆ, ಜನಸಂಖ್ಯೆ ಹೆಚ್ಚಾಗಿ ಮರಣದರದಲ್ಲಿ ಇಳಿಮುಖ ಇವತ್ತಿನ ದಿನಗಳಲ್ಲಿ ಗ್ರಾಮೀಣ ಪ್ರದೇಶದ ಜನರು ಉದ್ಯೋಗಕ್ಕಾಗಿ ಹಳ್ಳಿಯಿಂದ ಪಟ್ಟಣಕ್ಕೆ ವಲಸೆ ಹೋಗುತ್ತಿರುವುದು ಹೆಚ್ಚಾಗಿದೆ. ಹೀಗೆ ವಲಸೆ ಬಂದ ಹಳ್ಳಿಯ ಜನರಿಂದ ಪಟ್ಟಣ ಪ್ರದೇಶದಲ್ಲಿ ಏರುತ್ತಿರುವ ಜನಸಂಖ್ಯೆ ಪರಿಸರ ರಕ್ಷಣೆಗೆ ಒಂದು ಸವಾಲಾಗಿದೆ.

ವಲಸೆ ಬರುವುದಕ್ಕೂ ಪರಿಸರ ನಾಶಕ್ಕೂ ಏನಪ್ಪಾ ಸಂಬಂಧವೆಂದರೆ ಹೆಚ್ಚುತ್ತಿರುವ ಜನಸಂಖ್ಯೆ, ಆಹಾರ, ವಸತಿ ಸೌಕರ್ಯ ಉದ್ಯೋಗಗಳನ್ನು ಒದಗಿಸುವ ಕಾರ್ಯಕ್ರಮಗಳಿಂದಾಗಿ ಪರಿಸರ ನಾಶ ಅನಿವಾರ್ಯವಾಗುತ್ತಿದೆ.

ಹೀಗೆ ವಲಸೆ ಬಂದ ಜನರನ್ನು ಮುಂದಿಟ್ಟುಕೊಂಡು ಪಟ್ಟಣ ಪ್ರದೇಶದ ಜನರು ತಮ್ಮ ಇದ್ದ ಸ್ಥಳವನ್ನು ಚೆನ್ನಾಗಿ ಬಳಸಿಕೊಂಡು ಸೂರ್ಯ ಕಿರಣ ಸಹಿತ ಇಣುಕದಂತೆ ಬಹುಮಹಡಿ ಕಟ್ಟಡಗಳು ನಿರ್ಮಾಣ ಮಾಡಿದಾಗ ಗಿಡಮರ ಬೆಳೆಸುವುದೆಲ್ಲಿಂದ ನೈರ್ಮಲ್ಯ ಕಾಪಾಡುವುದೆಲ್ಲಿ ಇಲ್ಲೆಲ್ಲ ಬರೇ ಕಾಂಕ್ರೀಟ್ ಕಟ್ಟಡಗಳದ್ದೇ ಕಾರುಬಾರು.

ಇತ್ತೀಚಿಗೆ ಕರ್ನಾಟಕವೆಲ್ಲ ಸುತ್ತಾಡಿ ಬಂದಾಗ ಪ್ರತಿಯೊಬ್ಬರೂ ಗಮನಿಸುವಂತಹದು ಹಾಳಾದ ನದಿ, ಸಮುದ್ರ ತಟ, ಪ್ರೇಕ್ಷಣೀಯ ತಾಣ, ಪ್ರಾಣಿಸಂಗ್ರಾಲಯ ಇವೆಲ್ಲ ಹಾಳಾಗಿ ಗಬ್ಬೆದ್ದು ನಾರುತ್ತಿವೆ. ಇಲ್ಲೆಲ್ಲ ಅಂದರೆ ಗಾಣಗಾಪೂರ, ಮಂತ್ರಾಲಯ, ಮಂಗಳೂರು(ಕಾರವಾರ) ಮದ್ರಾಸನ ಸಮುದ್ರ ಕಿನಾರೆ, ಇಲ್ಲಿನ ನೀರೆಲ್ಲ ಗಬ್ಬೆದ್ದು ನಾರುತ್ತಿವೆ. ಇಲ್ಲಿ ಪ್ರತಿದಿನ ಸಾವಿರಾರೂ ಜನರು ಬಂದು ಹೋಗುವ ಪ್ರೇಕ್ಷಣೀಯ ಸ್ಥಳಗಳು ಜನರು ವಿಸರ್ಜಿಸಿದ ಮಲ-ಮೂತ್ರದಿಂದ ಮತ್ತು ತಿಂದು ಕುಡಿದು ಬಿಸಾಡಿದ ಪ್ಲಾಸ್ಟಿಕ್ ಬಾಟಲಿಗಳು, ಊಟದ ಕಾಗದ ಪ್ಲೇಟು ಪ್ಲಾಸ್ಟಿಕ ಗ್ಲಾಸು, ಇಲ್ಲೆಲ್ಲ ಹರಕೆ ಹೊತ್ತ ಜನರು ತಲೆಕೂಡ ಬೋಳಿಸಿ ಕೂದಲುಗಳು ನೀರಿನಲ್ಲಿಯೇ ಬಿಡುತ್ತಾರೆ. ಹೀಗೆ ಬಿಟ್ಟಂತಹ ಪದಾರ್ಥಗಳು ತಳ ಸೇರದೆ ತೇಲಾಡುತ್ತವೆ. ಇದೆಲ್ಲ ನಿಲ್ಲಬೇಕಾದರೆ ಪ್ರತಿಯೊಬ್ಬರೂ ಸ್ವಚ್ಚತೆ ಕಾಪಾಡಿಕೊಂಡು ಬರಬೇಕು ಇಂತಹ ಪ್ರೇಕ್ಷಣೀಯ ಸ್ಥಳಗಳಲ್ಲಿ ಸ್ವಚ್ಚತೆಗೆ ಹೆಸರಾದವು ಬೇಕಾದಷ್ಟೂ ದೇವಸ್ಥಾನಗಳು ಕೊಡ ಇವೆ. ಆದರೆ ಅತಿ ಸೂಕ್ಷ್ಮವಾಗಿ ಸ್ವಚ್ಚತೆ ಇರುವುದು ಕರ್ನಾಟಕದಲ್ಲಿ 'ಶ್ರವಣಬೆಳಗೊಳ' 'ಹೊರನಾಡು' ಇವತ್ತಿಗೂ ಸ್ವಚ್ಚತೆ ಕಾಪಾಡಿಕೊಂಡು ಬಂದಿರುವುದು ವಿಶೇಷ ಹಾಗೂ ವಿಶಿಷ್ಟ.

ಹೀಗೆ ಮೇಲೆ ಹೇಳಿದಂತೆ ಜನಸಂಖ್ಯೆ ಹೆಚ್ಚಾದಂತೆ ಜನರ ಅವಶ್ಯಕತೆಗಳು ಹೆಚ್ಚಾಗುತ್ತವೆ. ಕಾರ್ಖಾನೆಗಳು ಉದ್ಯೋಗಕ್ಕಾಗಿ ಜನರನ್ನು ನಗರಗಳತ್ತ ಆಕರ್ಷಸಿಸುತ್ತವೆ. ನಗರಗಳಲ್ಲಿ ನಿರ್ಮಾಣಗೊಳ್ಳುತ್ತಿರುವ ಅಪಾರ್ಟಮೆಂಟಗಳು ಸಾಮಾನ್ಯವಾಗಿ ನಗರಗಳು ಬೆಳೆದಂತೆ ಅರಣ್ಯ-ಕೃಷಿಭೂಮಿಯಲ್ಲಿ ಕಾರ್ಖಾನೆಗಳಿಗೆ ಮತ್ತು ವಸತಿ ಕಲ್ಪಿಸಲು ಬಳಸಿಕೊಳ್ಳುತ್ತಿವೆ. ಇವತ್ತು

ಕಣ್ಣೆದುರಿರುವ ನ್ಯಾನೋ ಕಾರ ಕಾರ್ಖಾನೆ ಸ್ಥಳಾಂತರ, ಬಳ್ಳಾರಿ ವಿಮಾನ ನಿಲ್ದಾಣದ ಕುರಿತು ಹೋರಾಟ ಇಲ್ಲಿ ಫಲವತ್ತಾದ ಭೂಮಿಗಳು ಬಳಸಿಕೊಂಡರೆ ಮುಂದೊಂದು ದಿನ ಹೊಟ್ಟೆಗೆ ಆಹಾರ ಬೇರೆ ರಾಷ್ಟ್ರದಿಂದ ತರಿಸಿಕೊಳ್ಳುವ ಪರಸ್ಥಿತಿ ನಿರ್ಮಾಣವಾದೀತು.

ಹೀಗಾದಾಗ ಸಾಮಾನ್ಯವಾಗಿ ಕೃಷಿಯೊಗ್ಯ ಭೂಮಿ, ಗುಡ್ಡ–ಗಾಡು ಪ್ರದೇಶವೆಲ್ಲ ಮಾಯಾವಾಗಿ ಆಗಸದೆತ್ತರ ಕಟ್ಟಡಗಳೇ ತಲೆ ಎತ್ತುತ್ತವೆ. ಹಿಂದಿನ ಕಾಲದಲ್ಲಿ ಊರಿನ ಕೆರೆಗಳೂ ಕೃಷಿಕ್ಷೇತ್ರಕ್ಕೆ ದನಕರುಗಳಿಗೆ ನೀರಿನ ಪೂರೈಕೆಗಾಗಿಯೇ ಇದ್ದವು. ಈ ಕೆರೆಗಳು ಸುತ್ತಲಿರುವ ಬಾವಿಗಳಿಗೆ ಅಂತರ್ಜಲವಾಗಿ ನೀರು ಪೂರೈಸುತ್ತಿದ್ದವು ಕೆರೆಗಳ ಸುತ್ತ ಬೆಳೆದ ಹಸಿರು ಮರಗಿಡಗಳು ಪ್ರಾಣಿ, ಪಕ್ಷಿಗಳಿಗೆ ಆಶ್ರಯ ತಾಣಗಳಾಗಿದ್ದವು ಇಂಥ ಪರಿಸರದಲ್ಲಿ ಬದುಕುವ ಜನರ ಆರೋಗ್ಯವೂ ಚೆನ್ನಾಗಿರುತಿತ್ತು.

ಇವತ್ತು ಊರು ಕೇರಿಗಳ ಸ್ಥಿತಿ ಚಿಂತಾಜನಕವಾಗಿದೆ. ಎಲ್ಲ ರೀತಿಯ ಕೊಳೆಗಳಿಂದ ತುಂಬಿ ಕೆರೆ ಎನ್ನುವುದೇ ಗುರುತಿಸದ ಸಂದಿಗ್ದ ಪರಿಸ್ಥಿತಿ ಎದುರಾಗಿದೆ. ನೀರು ಬತ್ತಿದ ಕೆರೆಗಳಲ್ಲಿ ಕಟ್ಟಡ ನಿರ್ಮಾಣವಾಗಿವೆ. ನಮ್ಮ ಭಾಗದಲ್ಲಿ ಗುಲಬರ್ಗಾ ನಗರವೊಂದರಲ್ಲೇ ಏಳು ಕೆರೆಗಳಿದ್ದುವಂತೆ ! ೨೦೦೮ರಲ್ಲಿ ಬಂದ ಜಿಲ್ಲಾಧಿಕಾರಿ ಹರ್ಷಾ ಗುಪ್ತ ತುಂಬಾ ತಲೆಕೆಡಿಸಿಕೊಂಡದ್ದುಂಟು ಈ ಸ್ಥಳಗಳಲ್ಲಿ ದೈತ್ಯಗಾತ್ರದ ಕಟ್ಟಡಗಳು ತಲೆಎತ್ತಿವೆ. ಒಂದು ವೇಳೆ ನೀರಿದ್ದ ಕೆರೆಗಳಿದ್ದರೂ ನೀರಿನ ಮೇಲೆ ಹೇಳಲು ಅಸಹ್ಯವಾದ ಕೊಳೆಗಳೆಲ್ಲ ಈಸಾಡುತ್ತಿವೆ !

ಹೀಗೆ ಜನರಿಗೆ ಉದ್ಯೋಗ ದೊರಕಿಸುವ ಸಲುವಾಗಿ ಜೀವನಾವಶ್ಯಕತೆಗೆ ಬೇಕಾಗುವ ವಸ್ತುಗಳ ಉತ್ಪಾದನೆಗೆ ಪರಿಸರ ನಾಶವೂ ಆಗುತ್ತಿದೆ. ಕಾರ್ಖಾನೆಗಳಿಂದ ಹೊರಬಂದ ಹೋಗೆಯಿಂದ ಉಸಿರಾಡುವ ಗಾಳಿ ಕಲುಷಿತವಾಗಿ ಅಸ್ತಮಾ, ಕಾಮಾಲೆಯಂತಹ ರೋಗಗಳ ಜೊತೆಗೆ ಬುದ್ದಿಮಾಂದ್ಯ, ಅಂಗವಿಕಲ ಮಕ್ಕಳ ಜನನಕ್ಕೂ ಕಾರಣವಾಗುತ್ತಿದೆ. ಕಾರ್ಖಾನೆಯಿಂದ ಹೊರಹಾಕಿದ ಮಲಿನ ಪದಾರ್ಥಗಳು ನದಿ ನೀರಿನ ಬಣ್ಣ ಬದಲಾಯಿಸುತ್ತದೆ. ಜಲಚರಗಳು ಸಾಯುತ್ತವೆ. ಹೀಗೆ ಕಾರ್ಖಾನೆಗಳಿಂದ ಹೊರ ಬರುವ ಕಲ್ಲಿದ್ದಲು ತಾಜಮಹಲಗೆ ಹಾನಿಯಾಗುವುದೆಂದು ಅಲ್ಲಿರುವ ಸುತ್ತಲಿನ ಕಾರ್ಖಾನೆ'ಗಳನ್ನು ಮುಚ್ಚುವಂತೆ ನ್ಯಾಯಾಲಯ ಆದೇಶ ಹೊರಡಿಸಿದ್ದು ಈ ಸಂದರ್ಭದಲ್ಲಿ ನೆನಪಿಸಬಹುದು ಜೊತೆಗೆ ಮಾಲಿನ್ಯ ನಿಯಂತ್ರಕ ಸಾಧನಗಳು ಅಳವಡಿಸಲಾಯಿತು.

ಪಶ್ಚಿಮ ಬಂಗಾಳದಲ್ಲೂ ಕೂಡ ಗಂಗಾ-ಯಮುನೆಗೆ ಹರಿಯುವ ಕಲುಸಿತ ನಿಲ್ಲಿಸಲು ಅಲ್ಲೂ ಕೂಡ ನ್ಯಾಯಾಲಯ ಇಂತಹ ತೀರ್ಪು ಕೊಟ್ಟಿದ್ದು ಇದರ ಜೊತೆಗೆ ಜನತೆ ಕೂಡ ಕಾರ್ಯತಂತ್ರ ರೂಪಿಸಿ ಪರಿಸರ ಉಳಿಸಿಕೊಳ್ಳಬೇಕಾದ ಜವಾಬ್ದಾರಿ ಹೆಚ್ಚಿದೆ ಎಂಬುದು ಮರೆಯುವಂತಿಲ್ಲ.

ಇವತ್ತು ದೇಶಾದ್ಯಂತ ತೀವ್ರತರ ವಿದ್ಯುತ್ ಅಭಾವವಿದೆ. ವಿದ್ಯುತ್ ಉತ್ಪಾದನೆಗಾಗಿ ಹಲವಾರು ಯೋಜನೆಗಳನ್ನು ರೂಪಿಸುತ್ತಿದ್ದು ಥರ್ಮಲ್ ಪವರ ಪ್ಲಾಂಟುಗಳ ನಿರ್ಮಾಣದಿಂದಾಗಿ ಕಲ್ಲಿದ್ದಲ್ಲಿನ ಗಣಿಗಳ ಸಮುದ್ರ ಲೂಟಿಯಾಗುತ್ತಿದೆ. ಇದರಿಂದ ಖನಿಜ ಸಂಪತ್ತಿನ ಲೂಟಿಯಾಗುತ್ತಿದೆ. ಖನಿಜ ಸಂಪತ್ತಿನ ಲೂಟಿ ಆದರೆ ಜಲವಿದ್ಯುತ್ ಯೋಜನೆಗಳು ಹೀಂಗಲ್ಲ ಇದರಿಂದ ವಿದ್ಯುತ್ ಉತ್ಪಾದನೆಯೊಂದಿಗೆ ಕೃಷಿಕಾಯಕ್ಕೆ ನೀರಿನ ಸಹಾಯವೂ ದೊರೆಯುತ್ತದೆ. ಎಲ್ಲೆಲ್ಲ ನೀರಿನ ವ್ಯವಸ್ಥೆ ಇದೆಯೋ ಅಲ್ಲಲ್ಲಿ ನದಿಗಳಿಗೆ ಆಣೆಕಟ್ಟು ನಿರ್ಮಿಸಿ ವಿದ್ದುತ್ ಉತ್ಪಾದಿಸಲಾಗುತ್ತಿದೆ.

ಕೃಷಿಯಲ್ಲಿ ರಾಸಾಯಸಿಕಗಳ ಬಳಕೆಯಿಂಡಲೂ ಪರಿಸರ ನಾಶವಾಗುತ್ತಿದೆ. ಅಧಿಕ ಉತ್ಪನ್ನ ಪಡೆಯಲು ಇವತ್ತು ಆಧುನಿಕ ಬೇಸಾಯ ಕ್ರಮಗಳನ್ನು ಅನುಸರಿಸುತ್ತಿದಾರೆ. ಬೆಳೆಗಳನ್ನು ಕೀಟಗಳಿಂದ ರಕ್ಷಿಸಲು ಕೀಟನಾಶಕ, ಕಳೆನಾಶಕಗಳನ್ನು ಶಿಲೀಂದ್ರನಾಶಕ ಮೂದಲಾದ ರಾಶಾಯನಿಕ ವಸ್ತುಗಳನ್ನು ಬೆಳೆಗಳ ಮೇಲೆ ಸಿಂಪರಿಸಲಾಗುತ್ತದೆ. ಬೆಳೆಯಿಂದ ಮಣ್ಣಿಗೂ ಸೇರುತ್ತದೆ. ಇದರಿಂದ ಪರಿಸರದ ಜೀವಿಗಳಿಗೆ ಬಹಳಷ್ಟು ಹಾನಿಯಾಗುತ್ತದೆ. ಹಳ್ಳಕೊಳ್ಳಗಳಲ್ಲಿ ಗದ್ದೆಗಳಲ್ಲಿ ಅಲ್ಲಲ್ಲಿ ಕಪ್ಪೆಗಳ ಮೊಟ್ಟೆಗಳ ಹಿಂಡು ಹಿಂಡಾಗಿ ಓಡಾಡುವ ಕಪ್ಪೆ ಮರಿಗಳಾಗಲಿ ಕೆರೆಯ ಅಕ್ಕಪಕ್ಕ ಹಳದಿ ದಂಡೆಗೊಂಡ ಚಿಕ್ಕ ಚಿಕ್ಕ ತೂತೂಗಳಲ್ಲಿ ಏಡಿಗಳು ಮರಿಹಾಕುತಿದ್ದವು. ಕಪ್ಪೆಯ ಆಹಾರ ಕೀಟಗಳು ಅಂದು ಗುರುತಿಲ್ಲದೆ ಕಪ್ಪೆಗಳಿಗೆ ತುಳಿದರೆ ಅವುಗಳನ್ನು ಕೊಂದರೆ ಮೂಕ ಮಕ್ಕಳು ಹುಟ್ಟುತ್ತವೆಂದು ಹೆದರಿಸುತ್ತಿದರು. ಅಂದರೆ ಕಪ್ಪೆಗಳನ್ನು ರಕ್ಷಿಸುವಲ್ಲಿ ಈ ರೀತಿ ಹೇಳುತಿದ್ದರು.

ಹೀಗೆ ರಾಸಾಯನಿಕ ಕೀಟನಾಶಕದಿಂದ ಚಿಟ್ಟೆಗಳ ಜೊತೆಗೆ ಕಪ್ಪೆಗಳು ಇಲ್ಲ. ಹೀಗೆ ಸಿಂಪರಿಸಿದ ದಿನ ಇಲ್ಲವೆ ಮರುದಿನ ಮಳೆಬಂದರೇ ಬೆಳೆಯಿಂದ ಹರಿದ ನೀರು ಹಳ್ಳಸೇರಿ ಇದ್ದ ಬಿದ್ದ ಜಲಚರಗಳು ನಾಶವಾಗುತ್ತಿವೆ.

ಅಭಿವೃದ್ಧಿಯ ಹೆಸರಲ್ಲಿ ಪರಿಸರ ನಾಶಕ್ಕೆ ಕಾರಣವಾಗುತ್ತಿರುವ ಉದ್ದಿಮೆಯೆಂದರೆ ಗಣಿಗಾರಿಕೆ ಕೂಡ ಒಂದು. ಈ ಬಂಡೆಕಲ್ಲುಗಳನ್ನು ತೆಗೆಯುವ ಗಣಿಗಳ ಪರಿಸರ ಮಲೀನವಾಗಿರುತ್ತದೆ. ಈ ಬಂಡೆಗಳು ಒಡೆಯಲು ಜಿಲೆಟಿನ್‌ನಂತಹ ಸ್ಫೋಟಕಗಳು ಬಳಸುವುದುಂಟು. ಇದರಿಂದ ಸಣ್ಣಧೂಳು ನಿರ್ಮಾಣವಾಗಿ ಓಡಾಡುವ ರಸ್ತೆಯ ಮೇಲೆಲ್ಲಾ ಹಾರಿಬೀಳುತ್ತದೆ. ಇದೆ ರಸ್ತೆಯಿಂದ ವಾಹನಗಳ ಓಡಾಟದಿಂದ ಉಸಿರಾಟದಲ್ಲಿ ಧೂಳು ಗಿಡಮರಗಳೆಲ್ಲ ಧೂಳು ಧೂಳಾಗಿ ವಾತಾವರಣವೆಲ್ಲ ಧೂಳಾಗಿ ಉಸಿರಾಟದಲ್ಲಿ ಹೋಗಿ ಉಸುರಿನ ತೊಂದರೆಗಳು ಉಂಟಾಗುತ್ತವೆ. ವಯಸ್ಸಾದವರು ಚಿಕ್ಕಮಕ್ಕಳು ಇಂತಹ ರೋಗಕ್ಕೆ ಹೆಚ್ಚಾಗಿ ಬಲಿಯಾಗುತ್ತಾರೆ.

ಹೀಗೆ ಗಣಿಗಾರಿಕೆಯಿಂದ ತೆಗ್ಗುಬಿದ್ದ ಪ್ರದೇಶದಲ್ಲಿ ಅಗೆದ ಮಣ್ಣೆಲ್ಲ ಪುನಃ ತಂಬಬೇಕು ಇದರಿಂದ ಮಳೆಬಂದಾಗ ನೀರುನಿಲ್ಲದೆ ಇಂಗುತ್ತದೆ. ಅಂತರ್ಜಲ ಹೆಚ್ಚಾಗುತ್ತದೆ. ಒಂದು ವೇಳೆ ತೆಗ್ಗುಗಳೆಲ್ಲ ಹಾಗೇ ಬಿಟ್ಟರೆ ಸುತ್ತಮುತ್ತಲಿನ ಕೊಳೆ ಕೊಚ್ಚಿಕೊಂಡು ತೇಲಾಡುತ್ತದೆ. ಆದ್ದರಿಂದ ತಗ್ಗು ಮತ್ತೆ ತುಂಬಬೇಕು.

ಗಣಿಗಾರಿಕೆ ಹೆಸರಲ್ಲಿ ಅರಣ್ಯಕೂಡ ನಾಶವಾಗುತ್ತಿದೆ. ಪರಿಸರದಲ್ಲಿ ಹಣ್ಣುಕೊಡುವ ಗಿಡ-ಮರಗಳಿವೆ ಸುಂದರ ಪುಷ್ಪಗಳು ಬಿಡುತ್ತವೆ. ಇಂತಹ ಪುಷ್ಪಗಳಿಂದ ಮಕರಂದ ಹೀರಿದ ಜೇನುನೋಣಗಳು ಜೇನು ತಯಾರಿಸುತ್ತವೆ. ಇಂತಹ ಸ್ಥಳದಲ್ಲಿ ಸ್ವಲ್ಪಹೊತ್ತೇ ವಾಯುವಿಹಾರ ಮಾಡಿದರೆ ಮನಸ್ಸು ಉಲ್ಲಸಿತವಾಗುತ್ತದೆ. ಇಂತಹ ಕೆಲವೃಕ್ಷಗಳಲ್ಲಿ ಕೆಲವಕ್ಕೆ ಪೂಜಿಸುತ್ತಿದ್ದರು ಇಲ್ಲಿ ಮೂಢನಂಬಿಕೆಯಲ್ಲಿ ವೃಕ್ಷಗಳನ್ನು ಪೂಜೆ ಭಾವನೆಯಿಂದ ನೋಡಿಕೊಳ್ಳುತ್ತಿದರು.

ಈ ರೀತಿ ಪೂಜಿಸುವ ಮರಗಳಲ್ಲಿ ಅಶ್ವತ ಮರಕೂಡ ಒಂದು, ಹೆಚ್ಚಾಗಿ ದೇವಾಲಯಕ್ಕೆ ನೆರಳಾಗುವಂತೆ ದೇವಸ್ಥಾನದ ಸಮೀಪವೇ ಇರುತ್ತದೆ. ಇದು ವಿಷ್ಣುವಿನ ವಾಸಸ್ಥಳವಂತೆ ಈ ಮರವನ್ನು ಸುತ್ತಿ ಬಂದರೆ ವ್ರತ ಪ್ರಾಪ್ತಿಯಾಗುತ್ತದೆಂದು ನಂಬಿಕೆ. ಸೃಷ್ಟಿಯಲ್ಲಿ ಎಲ್ಲವೂ ವಿಚಿತ್ರವಾದ ಕ್ರಿಯೆ ಒಂದು ಬೀಜ ಮೊಳೆದೋರಿ ಸಸಿಯಾಗಿ ಗಿಡವಾಗಿ ಹೆಮ್ಮರವಾಗುವುದೆಂದರೆ ನಿಸರ್ಗದ ಅದ್ಭುತ ಚೋದ್ಯ ಅಷ್ಟೇ ಅಲ್ಲ ನದಿ, ಬೆಟ್ಟ, ಗುಡ್ಡ, ಪರ್ವತಗಳ ಪೂಜೆ ಕೂಡ

ಇದ್ದವು. ಕಾರಣ ಪರಿಸರದ ಸಾಂಕೇತಿಕ ಪೂಜೆಯದಾಗಿತ್ತು.[44] ಈ ನೆಪದಲ್ಲಿ ಪರಿಸರವನ್ನು ಗೌರವಿಸುವ ಮತ್ತು ಅದನ್ನು ಸಂರಕ್ಷಿಸುವ ಆಶಯ ಇತ್ತು.

ಹಿಂದೊಂದು ಕಾಲದಲ್ಲಿ ಹೆಸರಿನಿಂದ ಕಂಗೊಳಿಸುತಿದ್ದ ಗ್ರಾಮೀಣ ಪ್ರದೇಶಗಳಲ್ಲಿ ಇಂದು ಅರಣ್ಯ ಸಂಪತ್ತಿನ ಹೇಳ ಹೆಸರಿಲ್ಲ ಕೃಷಿಯೋಗ್ಯವಾದ ಜಮೀನು ಬಂಜರು ಭೂಮಿಯಾಗಿ ಪರಿವರ್ತಿತಗೊಂಡಿದೆ. ಹಳ್ಳಿಯ ಹಳ್ಳ ಕೊಳ್ಳ, ಕೆರೆ-ಬಾವಿಗಳೆಲ್ಲ ಬತ್ತಿಹೋಗಿ ಬೇಸಿಗೆಯಲ್ಲಿ ನೀರೆ ಇಲ್ಲದಂತಾಗಿ ಜನ ಜಾನುವಾರ ಹನಿ ನೀರಿಗೆ ಹಂಬಲಿಸುವಂತಾಗಿದೆ. ಹಸಿರು ಮಾಯಾವಾದಂತೆ ವಾಯುಮಾಲಿನ್ಯದ ದುಷ್ಪರಿಣಾಮ ಕಾಣಿಸಿಕೊಳ್ಳುತ್ತದೆ. ಅರಣ್ಯನಾಶ ಕೃಷಿಯ ಮೇಲೆ ಪರಿಣಾಮ ಬೀರುತ್ತದೆ.

ನಾವು ಪ್ರತಿನಿತ್ಯ ಬಳಸುವ ಕಾಗದಕ್ಕೆ ಮರಗಳನ್ನು ಕಡಿಯಲೇಬೇಕು. ಸ್ವಲ್ಪ ಈ ಮಟ್ಟಿಗೆ ಕಡಿಮೆ ಮಾಡಬಹುದು ಬಳಸಿದ ಕಾಗದ ಪುನಃ ಕಾಗದ ತಯಾರಿಕೆಯಲ್ಲಿ ಬಳಸಿಕೊಂಡಾಗ ಸ್ವಲ್ಪ ಪ್ರಮಾಣದಲ್ಲಿ ಕಾಡು ಉಳಿಸಿಕೊಳ್ಳಬಹುದು.

ನಗರಗಳಲ್ಲಂತೂ ಪರಿಸರ ಯಾವ ಸ್ಥಿತಿಯಲ್ಲಿದೆ ಎಂದು ಸಾಮಾನ್ಯ ಮನುಷ್ಯನೊಬ್ಬನನ್ನು ಪ್ರಶ್ನಿಸಿದಗೆ ಸಾಕು ಅಯ್ಯೋ ಹೇಳೋದೇನ್ರಿ ಕಾಲೋನಿ ತುಂಬ ಕಸಕಡ್ಡಿ, ಮುಸುರೆ, ರಾಶಿರಾಶಿ ಬಿದ್ದಿದೆ ಎನ್ನುತ್ತಾರೆ ನಗೆಚಲ್ಲಿ ! ಇದು ಪಟ್ಟಣಗಳಲ್ಲಿ ಗಲ್ಲಿ ಗಲ್ಲಿಯಲ್ಲಿ ಸಾಮಾನ್ಯವಾಗಿದೆ. ಪ್ರತಿಯೊಬ್ಬರೂ ಮನೆಯನ್ನು ಶುಚಿಗೊಳಿಸಿ ಕಸದ ತೊಟ್ಟಿಯವರೆಗೂ ಕಸ ತೆಗೆದು ಕೊಂಡು ಬಂದು ತೊಟ್ಟಿಯಲ್ಲಿ ಹಾಕದೆ ಅದರಪಕ್ಕ ರಸ್ತೆಯಲ್ಲೇ ಹಾಕಿ ಹೋಗುತ್ತಾರೆ. ವಾಹನಗಳ ಓಡಾಟದಿಂದ ಕಸವೆಲ್ಲ ರಸ್ತೆಯ ಮೇಲೆಲ್ಲ ಚಲ್ಲಾಪಿಲ್ಲಿಯಾಗಿ ಗಾಳಿಗೆ ಪ್ಲಾಸ್ಟಿಕ ಚೀಲಗಳೆಲ್ಲ ನಾಮುಂದು ತಾಮುಂದು ಎಂಬಂತೆ ಓಡಿ ತೆರೆದ ನಾಲೆಗಳಲ್ಲಿ ಬಿದ್ದು ಕಸದಿಂದ ತುಂಬಿದ ನಾಲೆ ನೀರು ಮುಂದೆ ಹೋಗದೆ ರಸ್ತೆಯ ಮೇಲೆಯೋ ತನ್ನ ಸವಾರಿ ಪ್ರಾರಂಭಿಸುತ್ತದೆ. ಮನೆಯಿಂದ ಹೊರಹಾಕಿದ ತ್ಯಾಜ್ಯವಸ್ತುಗಳು ಪುನಃ ಮಕ್ಕಳ ಕಾಲಿನಿಂದ ವಾಹನಗಳ ಗಾಲಿಗಳಿಂದ ನೋಣಗಳಿಂದ ನಮ್ಮ ಮನೆಯನ್ನು ಮತ್ತೆ ಸೇರುತ್ತವೆ.

---

[44] ಏರುವ ಬಾರ ಕೇದಾರ ಶಿಖರ – ಪ್ರವಾಸ ಕಥನ ಶ್ರೀಮತಿ ಲೀಲಾವತಿ ಎಸ್. ರಾವ್.

ಉದ್ಯೋಗಸ್ಥರೆಲ್ಲ ನಗರಪ್ರದೇಶಗಳಲ್ಲಿ ವಾಸಿಸುವುದು ಸರ್ವೆಸಾಮಾನ್ಯವಾಗಿದೆ. ದಿನನಿತ್ಯದ ವಸ್ತುಗಳಿಗೆ ಖರೀದಿಗೆ ಹೋದರೆ ಕಾಲಿಡಲು ಕೂಡ ಸ್ಥಳವಿರದೆ ನಡು ರಸ್ತೆಯಲ್ಲೆ ಎಲ್ಲಾ ದಿನಸಿ ಅಂಗಡಿ ಕೈ ಗಾಡಿಯಲ್ಲಿ ರಸ್ತೆಗೆ ಇಳಿಯುತ್ತವೆ.

ಇನ್ನೂ ತರಕಾರಿಯ ವಿಷಯ ಕೇಳಕೂಡದು ಎಲ್ಲಿ ಬೇಕೆಂದರಲ್ಲಿ ತರಕಾರಿ ಮಾರಾಟ ಜೊತೆಗೆ ಕೊಳೆತು ಗಬ್ಬೆದ್ದು ನಾರುವ ತಿಪ್ಪೆ ಕೂಡ ಪಕ್ಕದಲ್ಲಿಯೇ ಅಸಹ್ಯ ವಾಸನೆ ಮೂಗಿಗೆ ಬಡಿಯುತ್ತದೆ. ಕೋಳಿಮಾಂಸ ಮೀನು, ಕುರಿಮಾಂಸ ಇವಲ್ಲದೆ ಇಂದಿನ ಜನರಿಗೆ ದನದ ಮಾಂಸ ಕೂಡ ತಿನ್ನಲು ಸಾಲುತ್ತಿಲ್ಲ.

ವಾರದ ಸಂತೆಯೆಂದು ಜನರ ಸಂತೆ ಸುತ್ತಾಡಿ ದನದ ಸಂತೆಗೂ ಒಂದಿಷ್ಟು ಹೋಗಿ ನೋಡಿದರೆ ಆಗತಾನೇ ಹುಟ್ಟಿದ ಕರುಗಳಿಂದ ಹಿಡಿದು ಆಕಳ ಕರುಗಳು ಕಸಾಯಿಖಾನೆಗೆ ಗೊತ್ತಿಲ್ಲದೇ ಹೋಗುವ ತವಕ ಅವುಗಳ ಕಣ್ಣುಗಳು ಹೇಳುತ್ತವೆ. ಇತ್ತೀಚಿಗೆ 'ನೊಯಿಡಾ'ದಲ್ಲಿ ಮಕ್ಕಳನ್ನು ಕೊಂದು ಕರುಳುಗಳನ್ನೇ ತಿಂದ ಭೂಪನೊಬ್ಬ ದರಿದ್ರರನ್ನು ನೋಡಿದೇವೆಲ್ಲ ! ಈತಕೂಡ ಮಕ್ಕಳನ್ನು ಕೊಂದು ಬಂಗಲೆ ಹಿಂದೆ ನಗರದ ಚರಂಡಿ ಸೀರಿನ ನಾಲೆಗೆ ಚೀಲಗಳಲ್ಲಿ ಕಟ್ಟಿ ಎಸೆದಿದ್ದು ಅಲ್ಲಿ ಕೂಡ ಅಪರಾಧಿಯನ್ನು ಹಿಡಿಯಲು ದುರ್ನಾತವೇ ಕಾರಣವಾಯ್ತು.

ಇಂತಹ ಹೊಲಸು ವಾಸನೆಯಿಂದ ಜನರ ಬದುಕು ಕಾಯಿಲೆಯಿಂದ ಹೊಸ ಹೊಸ ರೋಗಗಳಿಗೆ ತಮ್ಮ ದೇಹವೊಡ್ಡುತ್ತಿದ್ದಾರೆ.

ಇವತ್ತು ಉದ್ಯೋಗಸ್ಥರೆಲ್ಲ ಸಮಯ ಪಾಲನೆಗಾಗಿ ವಾಹನಗಳನ್ನು ಹೆಚ್ಚಾಗಿ ಬಳಸುತ್ತಿದ್ದಾರೆ. ಇದರಿಂದ ವಾತಾವರಣದಲ್ಲಿ ಕಲುಸಿತವಾಗಿ ಜೊತೆಗೆ ವಾಹನಗಳ ದಟ್ಟಣೆ ಜೊತೆಗೆ ರಸ್ತೆಪಕ್ಕದಲ್ಲ ಪಾನ ಬೀಡಾದ ಅಂಗಡಿಗಳು ರಸ್ತೆಗೆ ಬಂದು ಇಳಿದಿವೆ.

ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ರಸ್ತೆ ಅಗಲಿಕರಣ ಮಾಡಬೇಕು ಬೆಳೆಯುತ್ತಿರುವ ನಗರಗಳಿಗೆ ಚಿಕ್ಕರಸ್ತೆ ಅವ್ಯವಸ್ಥೆಯ ಆಗರವಾಗುತ್ತದೆ. ಈ ರೀತಿ ಕಾಪಾಡಿಕೊಂಡು ಬರಲು ಕಾನೂನುಗಳು ಜಾರಿಯಾಗಬೇಕು ಅಂದಾಗ ಶುದ್ದ, ಸ್ವಚ್ಛ ನಗರ ನಿರ್ಮಾಣ ಸಾಧ್ಯ.

ತಿಂಗಳ ಆದಾಯ ಹೆಚ್ಚಾದಂತೆಲ್ಲ ದಿನನಿತ್ಯದ ಬೇಡಿಕೆಗಳು ಕೂಡ ಹೆಚ್ಚಾಗುತ್ತಿವೆ. ಲಾಟರಿ, ಗುಟಕಾ, ಪ್ಲಾಸ್ಟಿಕ್ ಚೀಲಗಳ ನಿಷೇಧ ಅತಿ ಅವಶ್ಯಕವಾಗಿದೆ. ಎಲ್ಲಿಯವರೆಗೆ ಇವು ಜಾರಿಯಲ್ಲಿರುತ್ತವೆ ಪರಿಸರದ ಅರ್ಥ ಕೆಟ್ಟಂತೆಯೆ. ಗುಟ್ಕಾ ತಿನ್ನುವುದು ಇಂದಿನ ಯುವ ಜನಾಂಗದಲ್ಲಿ ಹೆಚ್ಚಾಗಿದೆ ದಿನವೊಂದಕ್ಕೆ ೫೦/- ರೂಪಾಯಿಗಳಿಂದ ೨೦೦/- ರೂಪಾಯಿಗಳವರೆಗೆ ಗುಟ್ಕಾ ತಿನ್ನುವ ಚಟ ಯುವಕರಲ್ಲಿ ದಿನೇ-ದಿನೇ ಸಂಖ್ಯೆ ಹೆಚ್ಚಾಗುತ್ತಿದೆ. ಬೇಕಾಬಿಟ್ಟಿ ತಿಂದು ನುಂಗಿದರೆ ಕರುಳು ಸುಟ್ಟು ಹೋಗುತ್ತದೆ. ಕ್ಯಾನ್ಸರ್ ನಂತಹ ರೋಗಗಳಿಗೆ ಬಲಿಯಾಗುತ್ತಾರೆ. ಇದನ್ನರಿತ ಕೆಲವರು ಚಟಕ್ಕಾಗಿ ತಿಂದು ಎಲ್ಲೆಂದರಲ್ಲಿ ಉಗಿದು ಪರಿಸರ ಹಾಳುಮಾಡುತ್ತಾರೆ. ಇನ್ನೂ ಇಂದಿನ ದಿನಗಳಲ್ಲಿ ದಿನನಿತ್ಯದ ಪದಾರ್ಥಗಳೆಲ್ಲ ಪ್ಲಾಸ್ಟಿಕ ಚೀಲಗಳಲ್ಲೆ ಖರೀದಿಸುತ್ತಿದ್ದು ಮನೆಗೆ ಬಂದಾಕ್ಷಣ ಅವುಗಳು ಕಸದೊಂದಿಗೆ ರಸ್ತೆಗೆ ಇಳಿದು ಎಲ್ಲೆಂದರಲ್ಲಿ ಹಾರಾಡುತ್ತಿರುತ್ತವೆ. ನಗರ ಪ್ರದೇಶದ ಕೆಲ ದನ-ಕರುಗಳು ಪ್ಲಾಸ್ಟಿಕ ತಿಂದೇ ಪ್ಲಾಸ್ಟಿಕ ಸಗಣಿ ಇಡುತ್ತಿವೆ !

ಪ್ಲಾಸ್ಟಿಕ ಬಗ್ಗೆ ಇಷ್ಟೊಂದು ಚರ್ಚೆ ಎಕೆಂದರೆ ಅವು ಇತರ ತ್ಯಾಜ್ಯ ವಸ್ತುಗಳಂತೆ ಪ್ಲಾಸ್ಟಿಕ್ ಮಣ್ಣಲ್ಲಿ ಸೇರಿಕೊಳ್ಳದೆ ಮಾಲಿನ್ಯಕ್ಕೆ ಕಾರಣವಾಗುತ್ತವೆ. ಇವುಗಳನ್ನು ಸುಟ್ಟರೆ ವಾಯು ಮಾಲಿನ್ಯವಾಗುತ್ತದೆ. ಚರಂಡಿಗಳಲ್ಲಿ ನೀರಿನ ಹರಿವು ತಡೆಗಟ್ಟುತ್ತವೆ. ಸಮುದ್ರ ದಂಡೆಯಲ್ಲಿ ಬಂದು ನಿಂತು ಸೌಂದರ್ಯ ಹಾಳುಮಾಡುತ್ತವೆ.

ಜನರ ಆರೋಗ್ಯವನ್ನು ಕಾಪಾಡುವ ಸಾರ್ವಜನಿಕ ಆಸ್ಪತ್ರೆಗಳೂ ಪರಿಸರ ಮಲಿನತೆಯಲ್ಲಿ ಕೈಸೇರಿಸಿವೆ. 'ಆಸ್ಪತ್ರೆಯ ವಸ್ತುಗಳಾದ ಸೂಜಿ, ಸಿರಿಂಜ್, ಬ್ಲೇಡ್, ಹತ್ತಿಯೊಂದಿಗೆ ರಕ್ತ ಇತ್ಯಾದಿಗಳು ಸೇರಿರುತ್ತವೆ'.[೪೫] ಇವುಗಳನ್ನು ಶುದ್ದೀಕರಿಸದೆ ಹಾಗೆಯೇ ಹೊರ ಹಾಕುವುದರಿಂದ ಸುತ್ತಮುತ್ತಲಿನ ಪರಿಸರಕ್ಕೂ ಜನರಿಗೂ ಹೇಳ ತೀರದಷ್ಟು ಅಪಾಯ ಉಂಟಾಗುತ್ತದೆ. ಇಂತಹ ತ್ಯಾಜ್ಯವಸ್ತುಗಳು ಅದರಲ್ಲಿ ಏಡ್ಸರೋಗಿಗೆ ಚುಚ್ಚಿದ ಸೂಜಿ ಸಿರಿಂಜ್‌ನಂತಹ ಚೂಪಾದವು ಮನುಷ್ಯರಿಗೆ ಚುಚ್ಚಿದರೆ ಇಲ್ಲವೆ ನೀರಿನೊಂದಿಗೆ ಸೇರಿಕೊಂಡರೆ ಹೆಪಟೈಟಿಸ್-ಬಿ ಮತ್ತು ಕರುಳ ಸಂಬಂಧಿ ವ್ಯಾದಿಗಳು ಬಂದು ಸೇರುತ್ತವೆ.

---

[45] ಪರಿಸರ ಮಾಲಿನ್ಯ – ನಾಗೇಶ ಹೆಗಡೆ (ಅನು) ಪು.ಸಂ.೧೦೨

ಇವು ಮನುಷ್ಯರ ಮೇಲೆ ಪರಿಸರದ ಮೇಲೆ ಎಂತಹ ಪರಿಣಾಮ ವೆಸಗುತ್ತವೆಂಬುದು ಗೊತ್ತಿದ್ದು ಕೂಡ ಆಸ್ಪತ್ರೆಗಳ ಕಸ ವಿಲ್ಲೇವಾರಿಯವರಾಗಿರಬಹುದು, ನಗರಪಾಲಿಕೆಯವರು ಇವತ್ತಿಗೂ ಇದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಈ ತ್ಯಾಜ್ಯದಲ್ಲಿ ತಾಯಿಗೆ ಬೇಡವಾದ ಹುಟ್ಟಿದ ಒಂದೋ ಎರಡು ಗಂಟೆಯ ಮಗುಕೂಡ ಈ ತ್ಯಾಜ್ಯದಲ್ಲಿ ನಾಯಿಗಳಿಗೆ ಆಹಾರವಾಗುತ್ತವೆ. ಇವತ್ತು ಇಂತಹ ಆಸ್ಪತ್ರೆಗಳ ಎದುರಿಗೆ ವಿಶೇಷವಾಗಿ ಗಂಡಸರು ರಾಜಾರೋಷವಾಗಿ ಎಲ್ಲೆಂದರಲ್ಲಿ ಮೂತ್ರವಿಸರ್ಜಿಸಿ ಸಮೀಪ ಓಡಾಡುವವವರಿಗೆ ಮುಜುಗರ ಹುಟ್ಟುತ್ತದೆ. ಆದರೆ ಇಂಥವರು ತಾವು ಹಾಳಾದವರೇ ಇನ್ನೂ ಅಳಿದುಳಿದ ಪರಿಸರ ಕೂಡ ಹಾಳು ಮಾಡುತ್ತಿದ್ದಾರೆ. ಸರ್ಕಾರದವರು ಇಂದು ಎಲ್ಲ ಸರ್ಕಾರಿ ಆಸ್ಪತ್ರೆ ಮತ್ತು ಬಸನಿಲ್ದಾಣಗಳಲ್ಲಿ ಶೌಚಾಲಯ ವ್ಯವಸ್ಥೆಮಾಡುತ್ತಿದ್ದಾರೆ.

ನೀರಿನ ಬಗ್ಗೆ ಹೇಳುವುದಾದರೆ ನಾವು ಪ್ರಾಥಮಿಕ ಶಾಲೆಯಲ್ಲಿ ಓದಿದಂತೆ ಸಾಗರ, ನದಿಗಳ ನೀರು ಆವಿಯಾಗುತ್ತವೆ. ಆವಿಯಾದ ನೀರು ಮೋಡದ ರೂಪದಲ್ಲಿ ಆಗಸದಲ್ಲಿ ಸಂಗ್ರಹವಾಗುತ್ತದೆ. ಈ ನೀರು ತಂಪಾಗಿ ಮಳೆಹನಿಗಳ ರೂಪದಲ್ಲಿ ತಂಪುಕೊಡುತ್ತವೆ. "ಮಲೆನಾಡ ಸೀಮೆಗಳಲ್ಲಿ ಬೀಳುವ ಮಳೆನೀರು ಹೀಗೆ ಒಳಪದರ ಸೇರಿ ಕಾಡಿಗೆ ಸಹಾಯವಾಗುತ್ತದೆ ಮತ್ತು ಅಂತರ್ಜಲ ಕೂಡ ಹೆಚ್ಚಾಗುತ್ತದೆ".[೪೬] ನಮ್ಮಲ್ಲಿ ಅತಿ ಹೆಚ್ಚಿನ ನೀರು ಪೋಲಾಗುತ್ತದೆ. ಎರಡನೇ ಸ್ಥಾನ ಕೈಗಾರಿಕೆ, ಮೂರನೆ ಸ್ಥಾನ ಕೃಷಿ, ನಾಲ್ಕನೆ ಸ್ಥಾನ ದಿನದ ಅವಶ್ಯಕತೆಗೆ ಮೊದಲು ನೀರನ್ನು ಪೋಲು ಮಾಡದೇ ಮಿತವಾಗಿ ಬಳಸಬೇಕು ಮಳೆಗಾಲದಲ್ಲಿ ಅಂತರ್ಜಲದ ಮಟ್ಟ ಹೆಚ್ಚಿಸುವಂತಹ ಕಾರ್ಯಗಳು ಹಮ್ಮಿಕೊಳ್ಳಬೇಕು.

ನಮ್ಮಲ್ಲಿ ಕೃಷಿಗೆ ನೀರಿನ ಕೊರತೆಯಾಗುತ್ತಿದೆ ಎಂದು ಮಾತಾಡುತ್ತೇವೆ. ಜನರಿಗೆ ಕುಡಿಯಲೂ ಶುದ್ಧ ನೀರಿನ ಕೊರತೆ ಎದುರಾಗಿದೆ ಎಂಬ ಕಹಿಸತ್ಯ ಎಲ್ಲರೂ ಅರಿತು ನೀರನ್ನು ಬಳಸಬೇಕಾಗುತ್ತದೆ.

ನಮ್ಮ ದೇಶದಲ್ಲಿ ಮೊದಲು ಮೂಲಭೂತ ಅವಶ್ಯಕತೆಗಳಾದ ಕಲಬೆರಕೆ ರಹಿತ ಆಹಾರ, ನೀರು, ಶುದ್ಧಗಾಳಿ ಇವಿಷ್ಟು ಮೊದಲು ಬೇಕೆ ಬೇಕು ಹಿಂದೊಂದು ದಿನ ಆಹಾರದ

---

[46] ಬತ್ತಿದ ಭಾವಿ ತುಂಬಿತು – ಬೇಂದ್ರೆ ಎನ್. ಮಂಜುನಾಥ, ಅಕ್ಷರ ಪ್ರತಿಷ್ಠಾನ– ಬೆಂಗಳೂರು.

ಕೊರತೆಯಾಗಿ ನ್ಯಾಯಬೆಲೆ ಅಂಗಡಿಗಳ ಮುಂದೆ ಜನರು ಸಾಲುಗಟ್ಟಿ ಆಹಾರಕ್ಕಾಗಿ ಪರಿತಪಿಸುತ್ತಿದ್ದ ದೃಷ್ಟಿ ಮರೆಯಾಗುವ ಮುಂಚೆಯೇ ಈಗ ನೀರಿಗಾಗಿ ಸಾಲಾಗಿ ನಿಲ್ಲುವ ದೃಷ್ಟಿ ಎದುರಾಗುತ್ತಿದೆ. ಹೀಗಾದರೆ ಮುಂದೊಂದು ದಿನ ನೀರಿಲ್ಲದೆ ಬದುಕುವುದು ಕಲ್ಪಸಿಕೊಳ್ಳಲಾಗದು. ಆದ್ದರಿಂದ 'ಹಿತಬುಕ್, ಮಿತಬುಕ್, ಕೃತಬುಕ್' ಎಂಬುವುದು ಎಲ್ಲರೂ ತಿಳಿಯಬೇಕು. ಇದಕ್ಕೆ ಪೂರಕವಾಗಿ ಸರ್ಕಾರ, ಸಂಘ ಸಂಸ್ಥೆಗಳು ಕೆರೆಗಳ, ಬಾವಿಗಳ ಶುದ್ಧಿಕರಣ ಕಾರ್ಯ ಕೈಗೆತ್ತಿಕೊಂಡಿವೆ. ಇತ್ತೀಚಿನ ನದಿ ಜೋಡಣೆ ಕಾರ್ಯಗಳು ಜೊತೆಗೆ ಆಹಾರ, ನೀರು, ವಿದ್ಯುತ್ ಇವುಗಳು ಬಳಸುವಲ್ಲಿ ಮಿತವಿರಬೇಕೆಂಬ ಸ್ಲೋಗನ್ ಎಲ್ಲೆಂದರಲ್ಲಿ ತೂಗುಹಾಕಲಾಗುತ್ತಿದೆ. ಜೊತೆಗೆ ಟಿ.ವಿ. ರೇಡಿಯೋ ಮೂಲಕ ಜಾಗೃತಿ ಮೂಡಿಸುತ್ತಿವೆ.

ಇಷ್ಟೆಲ್ಲ ನಗರಗಳಲ್ಲಿಯೇ ಮಲಿನತೆ ಎಂದು ಹೇಳಿ ಜಾರಿಕೊಳ್ಳುವಂತಿಲ್ಲ ಹಳ್ಳಿಗಳು ಕೂಡ ಮಲಿನತೆಯಿಂದ ಕೂಡಿವೆ ಎಂಬುವುದು ಕೂಡ ಅಷ್ಟೇ ಸತ್ಯ, ಹಳ್ಳಿ ಮತ್ತು ನಗರಗಳ ಮಾಲಿನ್ಯದಲ್ಲಿ ವ್ಯತ್ಯಾಸ ಸಾಮಾನ್ಯ–ನಗರಮಾಲಿನ್ಯ ವಿಶೇಷವಾಗಿ ಮೋಟಾರು ಗಾಡಿಗಳ ಮತ್ತು ಕಾರ್ಖಾನೆಗಳಿಂದ ಎಂದು ಹಿಂದೆ ನೋಡಿದೇವೆ. ಎಲ್ಲರಲ್ಲಿ ಗ್ರಾಮೀಣ ಪ್ರದೇಶದ ಹವಾಮಾನ ಹೆಚ್ಚು ಶುದ್ಧ ಹಾಗೂ ನಿರ್ಮಲವಿರುತ್ತದೆ. ಆಮ್ಲಜನಕದ ಪ್ರಮಾಣ ಅಧಿಕವಾಗಿರುತ್ತದೆ. ಹಳ್ಳಿಗಳಲ್ಲಿ ಕಾರ್ಖಾನೆಗಳಲ್ಲಿ ಮೋಟಾರು ವಾಹನಗಳ ಸಂಖ್ಯೆಯೂ ಹೆಚ್ಚಿರುವುದಿಲ್ಲ ಆದರೆ ಜಲಮಾಲಿನ್ಯ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. "ಊರಿಗೆ ಒಂದು ಚಿಕ್ಕ ಕೆರೆ ಒಂದೇ ಒಂದು ಕೆರೆ ಊರಿಗೆ ನಿರೋದಗಿಸುವ ಮೂಲ, ದನಗಳ ಮೈತೊಳೆಯುವುದು, ಬಟ್ಟೆ ಬರೆಗಳನ್ನು ಒಗೆಯುವುದರಿಂದ ನೀರಿನ ಕೊಳಗಳನ್ನು ಮತ್ತು ಬಾವಿಗಳನ್ನು ಕೊಳಕು ಹಾಗೂ ಅಶುದ್ಧ ಮಾಡಿಬಿಡುತ್ತವೆ."[೪೭] ನಿಂತ ನೀರಿನಲ್ಲಿ ನೊಣ ಮತ್ತು ಸೊಳ್ಳೆಗಳು ಹುಟ್ಟುತ್ತವೆ. ಮಲವಿಸರ್ಜನೆಗೆ ಬಯಲೇ ಉಪಯೋಗಿಸುತ್ತಾರೆ.

ಇಂದು ಹಳ್ಳಿ ಹಳ್ಳಿಗಳಲ್ಲಿ ಸಿ.ಸಿ. ರಸ್ತೆಗಳು, ಡಾಂಬರ್ ರಸ್ತೆಗಳ ನಿರ್ಮಾಣದಿಂದ ಹಳ್ಳಿಯ ಬಚ್ಚಲು ನೀರೆಲ್ಲ ರೋಡಿನ ಮೇಲೆಯೇ ಹರಿಯುತ್ತವೆ. ರಸ್ತೆ ನಿರ್ಮಾಣದಿಂದ ಹೆಣ್ಣುಮಕ್ಕಳಿಗೆ ಮಲ–ಮೂತ್ರವಿಸರ್ಜನೆಗೆ ಸ್ಥಳವಕಾಶವೇ ಇಲ್ಲದಂತಾಗಿದೆ. ಇದು ಒಂದು ಹಳ್ಳಿಯ ಸಮಸ್ಯೆಯಲ್ಲ. ಭಾರತದ ಪ್ರತಿಯೊಂದು ಹಳ್ಳಿಯ ಸಮಸ್ಯೆಯಾಗಿದೆ.

---

[47] ಊರ ಕೆರೆ ಪಿ. ಶಿವರಾಮ ರೈ – , ಅಕ್ಷರ ಪ್ರತಿಷ್ಠಾನ– ಬೆಂಗಳೂರು.

ಇದರೊಂದಿಗೆ ಪಟ್ಟಣ ಪ್ರದೇಶದಲ್ಲಿರುವಂತೆಯೇ ಇಲ್ಲಿ ಕೂಡ ಗಾಳಿ-ನೀರಿನ ಮಲಿನತೆ ಇಲ್ಲೂ ಇದೆ. ಹಳ್ಳಿಗಳಲ್ಲಿ ದನಕರುಗಳು ಮನೆಯ ಅಂಗಳದಲ್ಲಿಯೇ ಕಟ್ಟುತ್ತಾರೆ. ಜೊತೆಗೆ ರೈತರ ವಾಸವೂ ಅಲ್ಲಿಯೆ. ಜಾನುವಾರಗಳ ಸಗಣಿ, ಗಂಜಲ ಮತ್ತಿತರ ಕಸ ಅಂಗಳದ ತುಂಬೆಲ್ಲಾ ಹರಿದಾಡುತ್ತಿರುತ್ತದೆ. ಸ್ವಲ್ಪವೇ ಮಳೆಬಂದರೂ ಮುಗಿಯಿತು ಕೋಳಕು ನೀರು ಹೊಗಲು ನಾಲೆಗಳ ವ್ಯವಸ್ಥೆ ಇರದೆ ರಸ್ತೆ ತುಂಬೆಲ್ಲ ಹರಿದಾಡುತ್ತದೆ ಇದರೊಂದಿಗೆ ಜನರಿಗೆ ಪೌಷ್ಟಿಕಾಂಶ ಆಹಾರದ ಕೊರತೆ ಇದರಿಂದ ಸಾಮಾನ್ಯವಾಗಿ ನಿಶಕ್ತಿ, ರಕ್ತ ಹಿನತೆ ಸಮತೂಕವಿಲ್ಲದೆ ಆಹಾರ ಹೀಗಾದಾಗ ಕಾಯಿಲೆಗಳನ್ನು ಎದುರಿಸುವ ಸಾಮರ್ಥ್ಯ ಕಮ್ಮಿಯಾಗುತ್ತದೆ. ಕಾಯಿಲೆಗಳು ತಂತಾನೇ ಹೆಚ್ಚಾಗುತ್ತವೆ. ಹಳ್ಳಿಗಳಲ್ಲಿ ಅತಿಹೆಚ್ಚಿನ ಅನಾರೋಗ್ಯ ಕಲುಸಿತ ನೀರು ಮತ್ತು ಸ್ವಚ್ಚತೆಯ ಕೊರತೆಯಿಂದಲೆ ಎಂಬುವುದು ಕಂಡುಬರುತ್ತದೆ.

ಹಿಂದಿನ ಕಾಲದಲ್ಲಿ ಮನುಷ್ಯ ಅನ್ನ ಪಾನಕ್ಕೆ ಮಹತ್ವ ಕೊಟ್ಟಷ್ಟೇ ಕಾಡು ಬೆಳೆಸುವಲ್ಲಿ ಸಂರಕ್ಷಿಸುವಲ್ಲಿ ಮಹತ್ವ ಕೊಡುತ್ತಿದ್ದರು. ಇದರ ಹಿಂದೆ ಗಿಡಗಳನ್ನು ಆತ ಉಪಯೋಗಿಸಿಕೊಳ್ಳುತ್ತಿದ್ದನು. ಅರಣ್ಯಗಳಲ್ಲಿ ಹೊಲಗದ್ದೆಗಳಲ್ಲಿ ವಾಸಮಾಡುವಾಗ ತಾನು ಪ್ರಾಣಿಗಳಿಂದ ರಕ್ಷಣೆ ಪಡೆಯಲು ಮರವೇ ತನ್ನ ವಾಸಕ್ಕಾಗಿ ಉಪಯೊಗಿಸುತ್ತಿದ್ದನು. ಇದರಿಂದ ದೇಹಕ್ಕೆ ಮಳೆ ಗಾಳಿ ಛಳಿಗಳಿಂದಲೂ ರಕ್ಷಣೆ ಪಡೆಯುತ್ತಿದ್ದ ಜೊತೆಗೆ ಇದೇ ಮರದ ಒಣಗಿ ಬಿದ್ದ ಚಿಕ್ಕ ಚಿಕ್ಕ ತುಂಡುಗಳು ತರಗೆಲೆಗಳಿಂದ ಚಳಿಗಾಲದಲ್ಲಿ ಮೈಕಾಯಿಸಿಕೊಳ್ಳುತ್ತಿದ್ದ ಕ್ರಮೇಣ ಕ್ರಮೇಣ ಮನೆಗಳ ನಿರ್ಮಾಣಕ್ಕೆ ಕಟ್ಟಿಗೆ ಬಳಸಿಕೊಂಡ.

ಹಿಂದಿನಕಾಲದಲ್ಲಿ ಆಯುರ್ವೇದ ಪದ್ಧತಿಯಲ್ಲಿ ಸಸ್ಯ-ಮರಗಳು ಔಷಧಕ್ಕಾಗಿ ಬಳಸಿಕೊಳ್ಳುತ್ತಿದರು. ಇಂದು ಅತಿ ಹೆಚ್ಚು ಪ್ರಚಾರಕ್ಕೆ ಮತ್ತು ಬಳಕೆ ಕೂಡ ಆಗುತ್ತದೆ. ಸಾಬೂನು, ಮಾರ್ಜಕಗಳು ಔಷಧಿಗಳು ಮಸಾಲೆ ಪದಾರ್ಥ ಹತ್ತಿ, ಕಾಗದ, ಚಾಕೊಲೇಟ್, ಸೌಂದರ್ಯ ವರ್ಧಕ ಸಾಧನ ಸುಗಂಧ ದ್ರವ್ಯ ಇತ್ಯಾದಿಗಳು ಅಂದು ಕೊಡ ಮನುಷ್ಯನಿಗೆ ಮರಗಿಡಗಳೊಂದಿಗೆ ಸಂಬಂಧ ಇತ್ತು, ಇಂದೂ ಇದೆ. ಮುಂದೆ ಕೂಡ ಇರುತ್ತದೆ. ಆದರೆ 'ಹತ್ತು ಮರಗಳನ್ನು ಬೆಳೆಸಬೇಕು ಒಂದು ಮರ ಕಡಿಯಬಹುದು' ಅಂದಾಗ ಪರಿಸರ ಉಳಿಸಬಹುದು.

ನಮ್ಮ ಗ್ರಾಮಗಳು ಮಲಿನತೆಯಿಂದ ಮುಕ್ತವಾಗಬೇಕಾದರೆ ಇರುವ ಮುಖ್ಯ ಮಾರ್ಗ ಶಿಕ್ಷಣ ಅಂದರೆ ಪರಿಸರ ಶಿಕ್ಷಣ ತರಬೇತಿ ಬಹಳ ಅವಶ್ಯಕ. ಪರಿಸರದ ಶುಭ್ರತೆ, ಸ್ವಚ್ಚತೆ, ಮಕ್ಕಳನ್ನು ಬೆಳೆಸುವ ರೀತಿ ತ್ಯಾಜ್ಯಗಳ ವಿಲೇವಾರಿ, ಚರಂಡಿ ನೀರಿನ ಬಗ್ಗೆ ವ್ಯವಸ್ಥಿತ ರೀತಿ ಇತ್ಯಾದಿ. ಪರಿಸರ ನಾಶವಾಗದಂತೆ ತಡೆಗಟ್ಟಲು ಬೇಕಾದಷ್ಟು ಸರ್ಕಾರಿ ಇಲಾಖೆಗಳಿದ್ದರೂ ಪರಿಸರ ನಾಶ ಮತ್ತು ಪರಿಸರ ಮಾಲಿನ್ಯತೆ ಏಕೆ ಮುಂದುವರೆಯುತ್ತಿದೆ. ಎಂಬುದೇ ಕನ್ನಡಿ ಗಂಟಾಗಿದೆ. ಇದಕ್ಕೆಲ್ಲ ಸರ್ಕಾರ ಕಟ್ಟು ನಿಟ್ಟಿನ ಕಾನೂನು ರೂಪಿಸಬೇಕು. ಇದಕ್ಕೆ ಜನರ ಸಹಕಾರಬೇಕು ಅಂದಾಗ ಕಾರ್ಯಕ್ರಮಗಳು ಯಶಸ್ವಿಯಾಗುತ್ತವೆ. ನಮ್ಮ ದೇಶ ಎಷ್ಟು ಸ್ವಚ್ಚವಾಗುತ್ತದೆಯೋ ಅಷ್ಟೆ ನಿರ್ಮಲ ರಾಷ್ಟ್ರವೆಂದು ಕರೆಸಿಕೊಳ್ಳುತ್ತದೆ.

ವಿಶೇಷವಾಗಿ ಪರಿಸರದ ಬಗ್ಗೆ ತಿಳುವಳಿಕೆ ಕೊಡಲು ಪ್ರಾಥಮಿಕ ಶಾಲೆಗಳಲ್ಲಿ ಪರಿಸರ ಅಧ್ಯಯನವೆಂಬ ಪಠ್ಯ ಸಹಿತ ತರಗತಿ ನಡೆಸುತ್ತಿದ್ದಾರೆ. ಇದರ ಜೊತೆಗೆ ಜನರು ಕೂಡ ಮೂಲಭೂತ ಅವಶ್ಯಕತೆಗಳತ್ತ ಗಮನ ಹರಿಸಬೇಕು. ಪರಿಸರ ಸಂರಕ್ಷಣೆ ಬಗ್ಗೆ ಪ್ರತಿಯೊಬ್ಬರೂ ಚಿಂತಿಸಬೇಕು. ಹೀಗಾಗದೇ ನಮ್ಮಿಂದ ಏನು ಮಾಡಲು ಸಾಧ್ಯವೆಂದು ಕುಳಿತುಕೊಳ್ಳಬಾರದು. ಇದೇ ಕಾರಣಕ್ಕೆ ಜನರಲ್ಲಿ ಪರಿಸರದ ಕುರಿತು ಕಾಳಜಿ ಇಲ್ಲವೇ ಇಲ್ಲವಾಗಿದೆ. ಅಲ್ಲೋ ಇಲ್ಲೋ ಬೆರಳಣಿಕೆಯಷ್ಟು ಜನರು ಕಾಳಜಿ ಮಾಡಿದರೆ ಸಾಲದು ಎಲ್ಲರೂ ಸರ್ಕಾರದೊಂದಿಗೆ ಕೈ ಜೋಡಿಸಿ ಕೆಲಸ ಮಾಡಬೇಕು.

ಹೀಗಾದಾಗ ಮುಂದಿನ ಪೀಳಿಗೆ ಪರಿಸರ ರಕ್ಷಣೆ ತಮ್ಮ ಹೊಣೆ ಎಂದು ತಿಳಿದು ಉಳಿದವರಿಗೂ ಶಿಕ್ಷಣ ಕೊಡುವಲ್ಲಿ ತೊಡಗಿಸಿಕೊಳ್ಳಬೇಕು. ಈ ಬಗ್ಗೆ ಶಾಲೆಗಳಲ್ಲಿ ಬಾಲಕರಿಗೆ, ಯುವಕರಿಗೆ ಊರಿನ ಜನರಿಗೆ ಪರಿಸರ ಸಂರಕ್ಷಣೆ ಬಗ್ಗೆ ಕುರಿತು ಶಿಕ್ಷಣ ನೀಡಬೇಕಾಗಿದೆ. ಇನ್ನೂ ಸಂಘಸಂಸ್ಥೆಗಳ ಮೂಲಕ ಸುದ್ದಿಮಾಧ್ಯಮಗಳ ಮೂಲಕ ಈ ಕೆಲಸ ಯಶಸ್ವಿಯಾಗಿ ನಿರ್ವಹಿಸಬಹುದಾಗಿದೆ.

ಒಟ್ಟಾರೆ ಪರಿಸರ ನಾಶಮಾಡುವ ಕೆಟ್ಟ ಕೆಲಸ ನಿಲ್ಲಬೇಕು. ಅವರಲ್ಲಿ ಪರಿಸರ ಪ್ರಜ್ಞೆ ಬೆಳೆಯಬೇಕು. ಈ ಶಿಕ್ಷಣ ಈಗಾಗಲೇ ಮೇಲೆ ಹೇಳಿದಂತೆ ಅನುಷ್ಠಾನದಲ್ಲಿದೆ. ಆದರೂ ಆಂದೋಲನ ರೂಪದಲ್ಲಿ ಆಗಬೇಕಾಗಿದೆ ಇದಕ್ಕೆ ಸಂಬಂಧಿಸಿದಂತೆ ಬೇಕಾದಷ್ಟು ಸಮಿತಿಗಳು ಹುಟ್ಟಿವೆ ಪರಿಸರ ಸಂರಕ್ಷಣೆ, ಪರಿಸರ ಜಾಗೃತಿ, ಪರಿಸರಕ್ಕಾಗಿ ಹೋರಾಟ ಅಲ್ಲಲ್ಲಿ ಬೀದಿ ನಾಟಕ,

ಭಾಷಣ ಪತ್ರಿಕಾ ಪ್ರಕಟಣೆ ಇತ್ಯಾದಿ ಈ ರೀತಿಯ ಆಂದೋಲನಗಳು ಯಶಸ್ವಿಯಾಗದಿದ್ದರೂ ಕೂಡ ಜನರಲ್ಲಿ ಜಾಗೃತಿಯುಂಟು ಮಾಡುತ್ತವೆ. ಇದು ಕೂಡ ಬಹಳ ದೊಡ್ಡ ಕೆಲಸ.

ಕೃಷಿ ಕ್ಷೇತ್ರದಲ್ಲಿ ಬಳಸುವ ರಾಸಾಯನಿಕಗಳು ಕ್ರಿಮಿನಾಶಕ ಕೀಟನಾಶ'ಕ ಹೇನುನಾಶಕ ಇತ್ಯಾದಿಗಳು, ಇವುಗಳೊಂದಿಗೆ ಉಪಯುಕ್ತ ಸಂಕುಲಗಳನ್ನು ಕೊಲ್ಲುತ್ತವೆ. ಇಷ್ಟೇ ಅಲ್ಲ ಆಹಾರ ಸರಪಣಿಯಲ್ಲೂ ಸೇರಿಹೋಗುತ್ತಿವೆ. ಕಾರ್ಖಾನೆಯಿಂದ ಹೊರ ಬೀಳುವ ವಿಷ ವಸ್ತು ಜೀವ ಸಂಕುಲದ ಮೇಲೆ ಹೇಳ ತೀರದಷ್ಟು ಪರಿಣಾಮ ಬೀರುತ್ತದೆ. ಇವೆಲ್ಲ ವಂಶನಾಶಕ್ಕೆ ಪ್ರತ್ಯಕ್ಷ ಪರೋಕ್ಷ ಕಾರಣ.

ಆಹಾರ ಸರಪಣಿ ನೋಡಿದಾಗ ಪ್ರತಿ ಜೀವಿ ಒಂದಲ್ಲ ಒಂದು ಎಳೆಯಿಂದ ಬಂಧಿತವಾಗಿರುವ ಸಂಗತಿ ಗೊತ್ತಾಗಿದೆ. ಬದುಕಲು ಅರ್ಹವಾದ ಎಲ್ಲ ಪ್ರಾಣಿ ಪಕ್ಷಿ ಜೀವ ಸಂಕುಲ ಭೂಮಿಯ ಮೇಲೆ ಬದುಕಲು ಹಕ್ಕಿದೆ. ನಿರ್ಮೂಲನ ಮಾಡುವ ಸ್ವಾತಂತ್ರ್ಯ ಮನುಷ್ಯನಿಗಿಲ್ಲ. ಎಲ್ಲ ಜೀವಿಗಳಿಂದ ಸಂಬಂಧಿಸಿದ್ದು ಕೂಡ. ಒಂದೇ ಒಂದು ಸಸ್ಯ ಸಂಕುಲ ನಾಶವಾದರೆ, ಅದರಿಂದ ಅವಲಂಬಿಸಿದ ಅದೆಷ್ಟೋ ಜೀವಕಾಯಗಳು ನಾಶಕ್ಕೆ ಕಾರಣವಾಗುತ್ತವೆ. ಯಾವುದೇ ಒಂದು ಸಂಕುಲದ ನಾಶವಾದರೂ ಅದರಿಂದ ಯಾವ ರೀತಿ ಪರಿಣಾಮ ಬೀರುತ್ತದೆಂದು ಹೇಳುವುದು ಕಷ್ಟ.

049327

ಪರಿಸರದ ಒಂದು ಜೀವಸಂಕುಲ ನಿರ್ಮೂಲವಾದರೆ ಅದು ಆ ಪರಿಸರದಲ್ಲಿ ತನ್ನ ಸ್ಥಳ ಖಾಲಿಯಾದಂತೆ ಹೇಗೆ ನೆರೆಹಾವಳಿ, ಭೂಕಂಪನಗಳಿಂದ ಜನರು ಸತ್ತು ಆಪ್ರದೇಶ ನೀರವ ಮೌನವಾಗುವುದೋ ಹಾಗೆ!

ಪರಿಸರದ ಮೇಲೆ ಜಾಗತೀಕರಣದ ಪ್ರಭಾವ :

ಇವತ್ತಿನ ದಿನಗಳಲ್ಲಿ ಆರ್ಥಿಕವಾಗಿ ಜಗತ್ತು ಎಷ್ಟು ಕುಸಿಯುತ್ತಿದೆಯೋ ಅಷ್ಟೇ ತೀಕ್ಷ್ಣವಾಗಿ ಪರಿಸರದಲ್ಲಿಯೂ ಕುಸಿತ ಕಂಡು ಬರುತ್ತಿರುವುದು ಅಷ್ಟೇ ಸತ್ಯ. ಹಸಿರು ಕಾಣೆಯಾಗಿದ್ದಕ್ಕೆ ಓಝೋನ್ ಪದರ ಹರಿದಿದ್ದಕ್ಕೆ ಅಕಾಲಿಕ ಮಳೆ, ಕುಲಷಿತ ನೀರು, ಜೀವ ಸಂಕುಲಗಳ ನಾಶ, ಇವೆಲ್ಲಕ್ಕೂ ಕಾರಣ ನಗರೀಕರಣವೇ ಕಾರಣವೆಂದರೆ ತಪ್ಪಾಗಲಿಕ್ಕಿಲ್ಲ. ನಗರೀಕರಣದಿಂದಾಗಿ ಇವತ್ತು ನಾವೆಲ್ಲ ಬಳಸಿ ಬಿಸಾಡುವ ಪ್ಲಾಸ್ಟಿಕಗಳು ಇಂಥ ಅದೆಷ್ಟೋ ಪದಾರ್ಥಗಳು ಪರಿಸರ

ಜೀರ್ಣಿಸಿ ಕೊಳ್ಳುತ್ತಿಲ್ಲ. ಇವತ್ತು ಸೂರ್ಯನ ಕಿರಣಗಳು ನೇರವಾಗಿ ಭೂಮಿಯ ಮೇಲೆ ಬೀಳುತ್ತಿರುವುದರಿಂದ ತಾಪಮಾನ ಹೆಚ್ಚುತ್ತಿದೆ. ಮಂಜು ಕರಗಿ ಸಮುದ್ರದಲ್ಲಿ ನೀರಿನ ಮಟ್ಟ ಹೆಚ್ಚಾಗಿ ದ್ವೀಪಗಳು ಮುಳುಗಡೆಯಾಗುವಲ್ಲಿ ಸಂದೇಹವಿಲ್ಲ ಅತಿವೃಷ್ಠಿ ಅನಾವೃಷ್ಠಿ ೨೦-೩೦ ವರ್ಷಗಳಿಗೊಮ್ಮೆ ಆಗುತ್ತಿತ್ತೆಂದು, ಹೀಗಾದಾಗ ಜನಜೀವನದ ಮೇಲೆ ಅಷ್ಟೊಂದು ಪರಿಣಾಮ ಆಗುತ್ತಿರಲಿಲ್ಲ ಆದರೆ ಇಂದು ಒಂದು ಜಿಲ್ಲೆಯಲ್ಲಿ ಅತಿ ಹೆಚ್ಚಿನ ಮಳೆ ಇನ್ನೊಂದು ಜಿಲ್ಲೆಯಲ್ಲಿ ಬರಗಾಲ ಇದಕ್ಕೆ ಕಾರಣ. ಕಾಡುಗಳೆಲ್ಲ ನಾಶ ಮಾಡಿ ಅಂತರಜಲ ಕುಸಿದು, ಇದೆ ರೀತಿ ಮುಂದುವರಿಯುತ್ತಾ ಬಿರುಗಾಳಿ ಅಕಾಲಿಕಮಳೆ, ಅತಿಯಾದ ಸೆಕೆ ಇತ್ಯಾದಿಗಳಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕಾರಣವಾಗುತ್ತಿದೆ.

ಪರಿಸರ, ಕಾಡಿನ ನಾಶ ಎಷ್ಟು ಯಾರಿಂದ ಆಗಿದೆ ಎಂದು ಯೋಚಿಸಿದರೆ ಇದಕ್ಕೆ ಯಾರು ಕಾರಣ ಮತ್ತು ಹೆಚ್ಚಿನ ಪಾಲು ಯಾರದೆಂದು ಹೀಗೆ ನೋಡಬಹುದು. ಭೂಮಿಯ ಮೇಲೆ ಮನುಷ್ಯ ಹುಟ್ಟಿದಾಗಿನಿಂದ ಭಾರತೀಯರು ಎಷ್ಟು ಕಾಡು ನಾಶಮಾಡಿದರೋ ಅಷ್ಟು ಕಾಡು ಬ್ರಿಟಿಷರು ಕೇವಲ ನೂರು ವರ್ಷಗಳಲ್ಲಿ ನಾಶ ಮಾಡಿದರಂತೆ ! ಚಹಾ, ಕಾಫಿ ಪರಿಚಯಿಸಿಕೊಟ್ಟ ಬ್ರಿಟಿಷರು, ಕಾಡುಗಳು ಕಡಿದು ಚಹಾ, ಕಾಫಿ, ಎಷ್ಟೇಟುಗಳು ತಲೆಎತ್ತುವಲ್ಲಿ ಅವರೇ ಕಾರಣರಾದರು. ಇದು ಬ್ರಿಟೀಷರ ಕಾರ್ಯವಾದರೆ ಇನ್ನೂ ಮನುಷ್ಯ ಹುಟ್ಟಿ ೧೯೩೯ನೇ ವರ್ಷದವರೆಗೆ ಲೋಹಗಳನ್ನು ಭೂಮಿಯಿಂದ ಎಷ್ಟು ಬಳಸಿದನೋ ೧೯೩೯ರಿಂದ ೧೯೮೦ ರವರೆಗೆ ಎರಡು ಪಟ್ಟು ಲೋಹ ಬಳಸಿರುವುದು ಗಣಿಗಳಿದಂದಾಗಿ ಗಣಿಗಾರಿಕೆಯಿಂದ ಅದೆಷ್ಟೋ ಕಾಡು ನಾಶವಾಗಬೇಕಾಗುತ್ತದೆ. ಮಾನವರಾದ ನಾವು ಸಹಬಾಳ್ವೆಯನ್ನು ಮಾಡಬಯಸುತ್ತೇವೆ. ಅಂದರೆ ಕಾಡು, ಕಾಡು ಪ್ರಾಣಿಗಳು, ನಿಸರ್ಗದ ಚಲುವಿನೊಂದಿಗೆ ನಾವು ಬದುಕ ಬಯಸುತ್ತಿವೆ.

ಇವತ್ತಿನ ದಿನಗಳಲ್ಲಿ ಮನುಷ್ಯನ ವಾಸನೆ ಕಂಡು ಹಿಡಿದ ಪ್ರಾಣಿ-ಪಕ್ಷಿಗಳೆಲ್ಲ ಹೇಳ ಹೆಸರಿಲ್ಲದಂತೆ ಮಾಯವಾಗುತ್ತಿವೆ. ಅಂದರೆ ಮನುಷ್ಯ ಹೋದಲ್ಲೆಲ್ಲ ಪರಿಸರ ಹಾಳುಮಾಡಿ ಬರುತ್ತಿದ್ದಾನೆ. ಇವತ್ತು ಚರ್ಚೆಯಲ್ಲಿರುವ 'ಪ್ರಳಯ'ದಿಂದ ಪಾರಾಗಬೇಕಾದರೆ ಕಾಡು ಬೆಳಸಿ ಜೀವ ವೈವಿದ್ಯ ಉಳಿಸಿಕೊಂಡಾಗ ಮಾತ್ರ ಸಾಧ್ಯ. ಅದೆಷ್ಟು ಗಿರಿಜನರು ಇವತ್ತು ಕೂಡಾ ಪರಿಸರದೊಂದಿಗೆ ಕಾಡು ಪ್ರಾಣಿಗಳೊಂದಿಗೆ ತಮ್ಮ ಬದುಕು ಕಟ್ಟಿಕೊಂಡಿರುವುದು ಕಂಡು ಬರುತ್ತದೆ. ಇವರಿಗೂ ಶಿಕ್ಷಣ ಅನ್ನುವ ಹೆಸರಿನಲ್ಲಿ ಬದಲಾವಣೆಯಾದರೂ ಆಶ್ಚರ್ಯವಿಲ್ಲ.

ಈಗ ನಮ್ಮಲ್ಲಿ ನಡೆಯುತ್ತಿರುವ ಗಣಿಗಾರಿಕೆ ತೆಗೆದುಕೊಂಡಿದ್ದೆ ಆದರೆ ಬಳ್ಳಾರಿ, ಸೊಂಡೂರು, ಕುದುರೆಮುಖ ಇಂತಹ ಗಣಿಗಾರಿಕೆಯಿಂದ ಪರಿಸರಕ್ಕೆ ಆಗುವ ಹಾಗೆ ಜನರಿಗೆ ಹಾನಿ ಆದ ಹಾಗೆ, ತುಂಗಭದ್ರಾ ನದಿಯ ನೀರನ್ನೇ ನಂಬಿ ಅದೆಷ್ಟೋ ರೈತರು ಬದುಕುತ್ತಿದಾರೆ. ಚಳುವಳಿ ಕೇವಲ ಪರಿಸರ ವಿಷಯಕ್ಕಷ್ಟೇ ಸಂಬಂಧಿಸಿದಾಗದೇ ಅದು ಇಡಿ ಜೀವ ಜಾಲಕ್ಕೆ ಸಂಬಂಧಿಸಿದ್ದಾಗಿದೆ. 'ಪರಿಸರ' ವಿಷಯವಾಗಿ ಮಾತನಾಡುವಾಗ ಸಾಮಾನ್ಯವಾಗಿ ಪ್ರಶ್ನೆ ಉದ್ಭವವಾಗುತ್ತದೆ. ಏನೆಂದರೆ [೩]ಪ್ರಾಕೃತಿಕ ಸಂಪನ್ಮೂಲಗಳು ಬಳಸಿಕೊಳ್ಳಬಾರದೆ ? ಬಳಸಿಕೊಳ್ಳುವಲ್ಲಿ ತಪ್ಪಿಲ್ಲ ಆದರೇ ಸಂಪೂರ್ಣವಾಗಿ ನಾವು ಎಷ್ಟರ ಮಟ್ಟಿಗೆ ಬಳಸಿಕೊಳ್ಳುತ್ತಿದ್ದೆವು! ೩೩ ವರ್ಷಗಳಿಂದ ಸುಮಾರು ೭೦೦ ದಶಲಕ್ಷ ಟನ್ ಅಂದಾಜು ಕಬ್ಬಿಣವನ್ನು ತೆಗೆದು ಕುದುರೆಮುಖ ಕಂಪನಿ ವಿದೇಶಕ್ಕೆ ಮಾರಾಟ ಮಾಡಿದೆ. ನಮಗೆ ಒಂದು ಕೆ.ಜಿ. ಕಬ್ಬಿಣ ಸಹ ಸಿಕ್ಕಿಲ್ಲ. ನಾವು ಕೊಳ್ಳುವ ಹಾಗೆ ಕಿಲೋ ಒಂದಕ್ಕೆ ೫೦/-ರಿಂದ ೧೦೦/-ರೂ.ಗಳಿಗೆ ಲಾಭಕ್ಕೆ ಮಾರಲೂ ಇಲ್ಲ. ಅದು ಕೇವಲ ೪೦-೫೦ ಪೈಸೆಗೆ ಮಾರುತ್ತಿದ್ದಾರೆ. ನಾವು ಗುಜುರಿಗೆ ಹಾಕುವ ಕಬ್ಬಿಣ ೧೦/-ರಿಂದ ೧೧/- ರೂಪಾಯಿ ಇರುವಾಗ ಕೇವಲ ಇಷ್ಟು ಕಡಿಮೆ ರೇಟಿಗೆ ಸಾವಿರಾರು ಟನ ಕಬ್ಬಿಣ ರಫ್ತಾಗುತ್ತಿದೆ[೩]. ಕುದುರೆ ಮುಖ ಕಂಪನಿಯನ್ನು ಮುಂದುವರಿಸಬಾರದೆನ್ನಲು ಕಾರಣವೆಂದರೆ ಆ ಪ್ರದೇಶ ಭದ್ರಾನದಿಯ ಮೂಲಸ್ಥಾನ. ಈ ಒಂದೇ ಪ್ರದೇಶದಲ್ಲಿ ೩೦೦ ಇಂಚು ಮಳೆ ಬೀಳುತ್ತದೆ. ಬಿದ್ದಮಳೆ ೬೦೦ ಲೀಟರ ನೀರು ಒಂದು ಚದರ ಅಡಿಗೆ ಬರುತ್ತದೆ. ಅಂದರೆ ಅತಿ ಹೆಚ್ಚಿನ ನೀರು ಅಂತರ್ಜಲವಾಗುತ್ತದೆ. ಆದ್ದರಿಂದ ಇಂತಹ ಒಳ್ಳೆ ಪ್ರದೇಶ ಈಗಾಗಲೇ ನಾಶವಾಗಿದೆ ಆದರೆ ಈ ರೀತಿ ಅಗೆದು ತೆಗೆದು ಭೂಗರ್ಭದ ಮಣ್ಣು ನದಿಗೆ ಸೇರುವುದರಿಂದ ನೀರು ಸಂಗ್ರಹಣೆಗೆ ತೊಂದರೆಯಾಗುತ್ತದೆ. ತೊಂದರೆ ಏನು? ನದಿಯ ತುಂಬ ಹೂಳು ಬಿದ್ದಿರುತ್ತದೆ. ಇವತ್ತಿನ ರಡ್ಡಿ ಸಹೋದರರ 'ಮೈನ್' ಕಂಪನಿಗಳಿಗೂ ಇದಕ್ಕೆ ಹೊರತಾಗಿಲ್ಲ.

ಸಾವಿರಾರು ವರ್ಷಗಳಿಂದ ಪ್ರಾಣಿ-ಪಕ್ಷಿಗಳೊಂದಿಗೆ ಸಹಬಾಳ್ವೆ ಮಾಡುತ್ತ ಬಂದ ಗಿರಿಜನರ ಮೇಲೆ ಅಪವಾದಗಳು ಕೇಳುತ್ತೇವೆ. ಆ ಪ್ರಾಣಿ ಹತ್ಯಯಾಯಿತು, ಈ ಪ್ರಾಣಿ ಹತ್ಯೆಯಾಯಿತೆಂದು. ಆದರೇ ಆ ಪ್ರಾಣಿಗಳಿಗೆ ವೀರಪ್ಪನನಂತಹ ಪ್ರಾಣಿ ಹಂತಕರು ಹೊಡಿಯಲು ಪ್ರಯತ್ತಿಸಿದರೇ ಆಶ್ರಯ ಬಯಸಿ ಆವುಗಳು ಈ ಗಿರಿಜನರ ಮನೆಗಳಿಗೆ ಬರುವುದುಂಟು.[೪೮]

---

[48] ಜಾಗತೀಕರಣ ಸಮಗ್ರ ಮಂಥನ ಸಂ. ರಾಜೇಂದ್ರ ಚೆನ್ನಿ.

ಅವರೆಲ್ಲ ಬಡತನ ಎದುರಿಸುತ್ತಿರಬಹುದು, ಕೆಲವರಿಗೆ ಹೊರಗೆ ಬರಬೇಕೆಂಬ ಆಸೆ ಕೂಡ ಇರಬಹುದು. ಆದರೆ ಅವರೆಲ್ಲ ಅಲ್ಲಿಯೇ ನೆಮ್ಮದಿಯಿಂದ ಇದ್ದಾರೆಂಬುದು ಅಷ್ಟೆ ಸತ್ಯ. ಆದ್ದರಿಂದಲೇ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರ ನೇತೃತ್ವದಲ್ಲಿ ಅಲ್ಲೇ ಹರಿಯುವ ನೀರಿನಿಂದ ಸುಮಾರು ೨೦ ಮನೆಗಳಿಗೆ ವಿದ್ಯುತ್ ಉತ್ಪಾದನೆಯಿಂದ ಅವರಿರುವಲ್ಲೇ ಬೆಳಕು ಮಾಡಿಕೊಟ್ಟಿದ್ದು ನೆನಪಿರಬೇಕು.

ಎಲ್ಲೆಲ್ಲಿ 'ಸಸ್ಯಕಾಶಿ' ಇದೆಯೋ ಅಲ್ಲೆಲ್ಲ ಮನುಷ್ಯನ ಅಲೋಪತಿ ಮೆಡಿಸಿನ್ ಮತ್ತು ಆಯುರ್ವೇದ ಔಷಧಿಗಳಿಗೆ ಮೂಲ ಮಳೆ, ಕಾಡುಗಳೇ ಕಾರಣ. ರಾಷ್ಟ್ರೀಯ ಉಧ್ಯಾನಗಳಲ್ಲಿ ಔಷಧಿ ಸಸ್ಯಗಳ ಕೇಂದ್ರಗಳಿವೆ. ಅಂದ್ರೇ ಇಡೀ ಕಾಡೇ ಔಷಧಿ ಸಸ್ಯಗಳಿಂದ ಕೂಡಿದೆ. 'ನ್ಯಾಷನಲ್ ಪಾರ್ಕ್' ಅನ್ನುವ ಹೆಸರಿನಲ್ಲಿ ಕಾಡಿಗೆ ಬೇಲಿ ಹಾಕಿ ಅದೇ ಗಿರಿಜನರಿಗೆ ಬೇಕಾಗುವ ಔಷಧಿ ಕೈ ಸಿಗದೇ ಸಾವು ಉಂಟಾಗುವಲ್ಲಿ ಸರ್ಕಾರ ಕೂಡ ಹೊಂಬುತನ ಮಾಡುತ್ತಿದೆ. ಕಾಡು, ನದಿ, ಗಣಿಗಳು ಉಳಿಸಿ ಕೊಂಡಿದ್ದೇ ಆದರೆ ಕರ್ನಾಟಕ ಪೂರ್ಣ ರಾಷ್ಟ್ರಿಯ ಉದ್ಯಾನವಾಗುವಲ್ಲಿ ಸಾಧ್ಯವಿದೆ. ಆದರೆ ಇದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

ಮೊನ್ನೆಯೇ ಉತ್ತರ ಕರ್ನಾಟಕದಲ್ಲಿ ಜಲಪ್ರಳಯದಿಂದ ಬದುಕು ಮೂರಾಬಟ್ಟೆಯಾಗಿದ್ದು, ೨೦೦೮ರಲ್ಲಿ ಹಿಂದೆಂದೂ ಕಂಡಿರದಷ್ಟು ಮಂಜು, ೨೦೦೫ರಲ್ಲಿ ಹಿಂದೆಂದೂ ಆಗಿರದಷ್ಟು ಮಳೆ, ಭೂಮಿಯ ಉಷ್ಣತೆ ಹೆಚ್ಚುತ್ತಿದೆ. ಎನ್ನುವ ಮಾತು ಪ್ರತಿಯೊಬ್ಬರ ಬಾಯಲ್ಲಿ ಕೇಳುತ್ತಿದ್ದೇವೆ. ಭೂಮಿಗೆ ಆಪತ್ತು ಬಂದಿದೆ ಎಂಬ ಮಾತಿನ ಬೆನ್ನಲ್ಲೇ ಬರಗಾಲ, ಅತಿಹೆಚ್ಚು ಮಳೆ ಅಕಾಲಮಳೆ, ಭೂಮಿಯ ಒಂದಲ್ಲ ಒಂದು ಕಡೆ ಕೇಳಬರುತ್ತದೆ. ಇದು ಕಡಿಮೆ ಮಳೆಯೆಂಬಂತೆ ಅಮೇರಿಕಾ ಯುರೋಪ, ಆಸ್ಟ್ರೇಲಿಯಾಗಳಲ್ಲಿ ತಿಂಗಳು ಗಟ್ಟಲೆ ಕಾಳ್ಗಿಚ್ಚು ಉರಿದಿದೆ. ಪರಿಹಾರವಾಗಿ ವಿಶ್ವಸಂಸ್ಥೆ ನೂರಾರು ದೇಶಗಳ ೪೫೦ಕ್ಕೂ ಹೆಚ್ಚು ವಿಜ್ಞಾನಿಗಳು ಸೇರಿ ಸಮೀಕ್ಷೆ ನಡೆಸಿದರು. ವಾಯ ಮಂಡಲದಲ್ಲಿ ಇಂಗಾಲದ ಡೈಆಕ್ಸೈಡ್, ಮಿಥೇನ್ ಮತ್ತು ನೈಟ್ರೋಜನ ಆಕ್ಸೈಡ್‌ಗಳಂಥ ಮಲಿನ ಅನಿಲಗಳ ಪ್ರಮಾಣ ಕಳೆದ ಐವತ್ತು ವರ್ಷಗಳಿಂದ ಹೆಚ್ಚುತ್ತಿರುವುದರಿಂದ 'ಭೂಮಿಯ ಉಷ್ಣತೆಯೂ ಹೆಚ್ಚುತ್ತಿದೆ ನಿಜ' ಎಂದು ಘೋಷಿಸಿದರು. ಇದಕ್ಕೆ ಕಾರಣ ಪೆಟ್ರೋಲನ್ನು ಅತಿದೊಡ್ಡ ಪ್ರಮಾಣದಲ್ಲಿ ಹೈಟೆಕ್ ಕೃಷಿ, ಹೈಟೆಕ್

ಸಂಚಾರ ಹೆಚ್ಚಿನ ವಿದ್ಯುತ ಬಳಕೆ ಇದಕ್ಕೆ ಕಾರಣ ೧೯೯೭ರಲ್ಲಿ ಜಪಾನಿನಲ್ಲಿ ಶೃಂಗಸಭೆ ನಡೆಸಿ, ಕೊಳೆಗಾಳಿ ಕಡಿಮೆ ಮಾಡುವುದಾಗಿ ಘೋಷಿಸಿದರು. ಪ್ರಗತಿಶೀಲ ದೇಶಗಳ ಮೇಲೆ ಯಾವ ನಿಬಂಧನೆಗಳನ್ನು ಹೇರಲಿಲ್ಲ. ಆದರೆ ಅಮೇರಿಕ ಮತ್ತು ಆಸ್ಟೇಲಿಯಾ ಮಾತ್ರ ಜಗಳ ತೆಗೆದವು. ಭಾರತ, ಚೀನದಂಥ ಅಭಿವೃದ್ಧಿ ಶೀಲ ದೇಶಗಳೂ ಒಪ್ಪಂದಕ್ಕೆ ಬದ್ಧವಾಗಬೇಕು ಎಂದು ಹಟ ಹಿಡಿದವು. ಬಲಾಢ್ಯ ತೈಲ ಕಂಪೆನಿಗಳು 'ಭೂಮಿ ಬಿಸಿಯಾಗುತ್ತಿರುವುದು ಮನುಷ್ಯನಿಂದಲ್ಲ ಎಂದವು. ಇದರಿಂದ ಅಮೇರಿಕಾ, ಆಸ್ಟ್ರೇಲಿಯಾ ಕೂಡ ಪರಿಸರ ಸಮಸ್ಯೆಗಳಿಂದ ಹೊರತಾಗಿಲ್ಲ. ಕಾಳ್ಗಿಚ್ಚು, ನೀರಿನ ಅಭಾವ, ರೈತರ ಆತ್ಮಹತ್ಯೆ ಇವುಗಳಿಂದ ತತ್ತರಿಸಿತು. ಇಷ್ಟೆಲ್ಲ ಗೊತ್ತಿದ್ದರೂ ಔದ್ಯಮಿಕ ಪ್ರಗತಿಯಿಂದ ಯಾರೂ ಹಿಂದೆ ಸರಿಯುವವರಲ್ಲ. ಇಂತಹ ರಾಷ್ಟ್ರಗಳಿಂದ 'ಕೊಳೆಗಾಳಿ ಕಡಿತ' ಮಾಡಲು ಯಾರೂ ಮುಂದೆ ಬರುವವರಲ್ಲ. ಬದಲಿಗೆ ಹಿಂದುಳಿದ ರಾಷ್ಟ್ರಗಳಿಗೆ ಅರಣ್ಯ ಬೆಳೆಸಲು ಹಣ ಕೊಡುತ್ತೇವೆನ್ನುವರು ! 'ಮೂಗಿಗೆ ತುಪ್ಪ ಸವರುವ ಕೆಲಸ ಅಮೇರಿಕ, ಆಸ್ಟ್ರೇಲಿಯಾ, ಜಪಾನ್‌ನಂತಹ ರಾಷ್ಟ್ರಗಳು ಹೊಲಸು ಮಾಡುತ್ತವೆ. ನಮ್ಮಂತಹ ರಾಷ್ಟ್ರಗಳು ಹಸನಾಗಿಸುವಲ್ಲಿ ಶತಾಯಗತಾಯ ಶ್ರಮಪಡುತ್ತವೆ.

ಶ್ರೀಮಂತ ರಾಷ್ಟ್ರಗಳು ಹಣಸುರಿದು ಕೋಟಿಗಟ್ಟಲೆ ಬಂಡವಾಳ ಹೂಡಿದವು. ನಮ್ಮಂತಹ ರಾಷ್ಟ್ರಗಳು ಸೇರಿ ಹೂಡಿದ ಹಣ ಕಂಪನಿಗಳು ಪ್ರಗತಿಯತ್ತ ಎಳೆತಂದವು. ಕೋಟ್ಯಾಧೀಶರ ಸಂಖ್ಯೆ ಹೆಚ್ಚಾಗತೊಡಗಿತು. ಶ್ರೀಮಂತರಾದಂತೆ ಕಾರು, ಮೆಟ್ರೋ, ಸ್ಟಾರ್ ಹೋಟೆಲ್ ಬಳಸಿ ಬಿಸಾಡುವ ವಸ್ತುಗಳು ಹೆಚ್ಚ ತೊಡಗಿದವು. ಇಂತಹ ಸಂದರ್ಭದಲ್ಲಿ ನಾವೆಲ್ಲ ಕಠಿಣ ಕ್ರಮ ಕೈಗೊಳ್ಳದಿದ್ದರೆ ಮನುಕುಲಕ್ಕೆ ಉಳಿಗಾಲವೇ ಇಲ್ಲ. ಎಲ್ಲ ರಾಷ್ಟ್ರಗಳು ಒಂದು ತೀರ್ಮಾನಕ್ಕೆ ಬರಬೇಕು. ಕಲ್ಲಿದ್ದಲು, ಪೆಟ್ರೋಲಿಯಂ ಬಳಕೆಗೆ ಒಂದಿಷ್ಟು ಹಿಡಿತ ಸಾಧಿಸಬೇಕು.

ಇಂದು ಚರ್ಚೆಯಲ್ಲಿರುವ ಅಣು ಒಪ್ಪಂದದ್ದು ಇದೇ ಕಿರಿಕಿರಿ ಅಮೇರಿಕ ಭಾರತವನ್ನು ಸಹಿ ಹಾಕಲು ಹೇಳುತ್ತದೆ. ಆದರೆ ಭಾರತ ಇದನ್ನೊಪ್ಪುತ್ತಿಲ್ಲ. ಕಾರಣ ಶ್ರೀಮಂತ ರಾಷ್ಟ್ರಗಳೆಲ್ಲ ಸಂಪನ್ಮೂಲವೆಲ್ಲ ಬೇಕಾಬಿಟ್ಟಿಯಾಗಿ ಬಳಸಿಕೊಂಡು ಪ್ರಗತಿಹೊಂದಿವೆ. ಆದರೆ ಭಾರತ ಇನ್ನೂ ಎರಡೂ ಕಾಲು ಊರಿಲ್ಲ. ಇಂತಹ ಅವಕಾಶಕ್ಕೆ ಕಾಯುವ ಶ್ರೀಮಂತ ರಾಷ್ಟ್ರಗಳು ಸಹಾಯದ ನೆಪದಲ್ಲಿ ಬೇಡವಾದ ತಂತ್ರಜ್ಞಾನ (ಹೊಲಸುಗೊಳಿಸುವ) ಕೊಟ್ಟು ಮಲಿನ ಗಾಳಿ, ನೀರು ಕುಡಿಯಿರಿ ಎಂದು ಹೇಳುವಂತೆ, ಇನ್ನೇನಾದರು ಸಹಾಯ ಬೇಕೆ ಎಂಬಂತೆ ನೋಡುತ್ತವೆ.

ಅಮೇರಿಕೆಯಲ್ಲಿರುವ ಶ್ರೀಮಂತರಷ್ಟೇ ಶ್ರೀಮಂತ ಜನ ನಮ್ಮಲ್ಲಿ ಕೂಡ ಇದ್ದಾರೆ. ಭಾರತದ ೨೦% ಜನ ೮೦% ರಷ್ಟು ಮಾಲಿನಕ್ಕೆ ಕಾರಣರಾಗಿದ್ದಾರೆ. ರಸ್ತೆಯ ಬದಿಯಲ್ಲಿ ಇವರ ಕಾರುಗಳದ್ದೇ ಕಾರೋಬಾರು. ಶ್ರೀಮಂತ ಮತ್ತು ರಾಜಕಾರಣಿಗಳೆಲ್ಲ ವಿಮಾನ, ಹೆಲಿಕಾಪ್ಟರನಲ್ಲಿ ಹಾರಿ ಮಧ್ಯಮ ವರ್ಗದವರಿಗೆ ಕಾರುಗಳ ಆಮಿಷ ಒಡ್ಡುತ್ತಿವೆ. ಸೈಕಲಗಳಿಗೆ ಬಸ್ಸುಗಳಿಗೆ ಜಾಗವೇ ಇಲ್ಲದಂತಾಗಿದೆ. ಆದ್ದರಿಂದಲೇ ಪ್ರಕೃತಿ ಮಾತೆ ಮುನಿಸಿಕೊಂಡಿದ್ದಾಳೆ. ಉರಿದೇಳುತ್ತಿದ್ದಾಳೆ.

ರಾಷ್ಟ್ರೀಯ ಸ್ವಾವಲಂಬನೆಯ ಮತ್ತು ಸಾರ್ವಭೌಮತೆಯ ಸೀಮಾ ರೇಖೆಗಳನ್ನು ಬಲತ್ಕಾರದಿಂದ ಅಳಿಸಿ ಹಾಕುತ್ತಾ ನಡೆಯುತ್ತಿರುವ ಬಂಡವಾಳದ ಜಾಗತೀಕರಣ ಎಂದು ಸ್ಪಷ್ಟವಾಗುತ್ತದೆ. ಜಾಗತೀಕರಣಗೊಳ್ಳುತ್ತಿರುವ ಬಂಡವಾಳವೂ ಆರ್ಥಿಕ ಅಭಿವೃದ್ಧಿಗೆ ಬಳಕೆ ಆಗುತ್ತಿರುವುದು ಕಡಿಮೆಯಾಗುತ್ತಿದೆ. ಷೇರುಗಳ ಮತ್ತು ವಿದೇಶಿ ವಿನಿಮಯಗಳ ಮಾರುಕಟ್ಟೆಗಳ ಏರಿಳಿತಗಳ ಸಟ್ಟಾ (ಒಟ್ಟು ಗುತ್ತಿಗೆ) ವ್ಯವಹಾರಗಳಿಗೆ ಹೆಚ್ಚಾಗಿ ಬಳಸಲಾಗುತ್ತಿದೆ. ಚೋಮಸ್ಕಿ ಅವರ ಒಂದು ಸಮೀಕ್ಷೆಯಂತೆ ೧೯೭೧ರಲ್ಲಿ ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ವ್ಯವಹಾರಗಳಲ್ಲಿ ಶೇಕಡಾ ೯೦ರಷ್ಟು ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿ ವಿನಿಯೋಗವಾಗುತ್ತಿತ್ತು. ಮತ್ತು ಕೇವಲ ಶೇಕಡಾ ೧೦ರಷ್ಟು ಸಟ್ಟಾ ವ್ಯವಹಾರಗಳಲ್ಲಿ ಈ ಬಂಡವಾಳವನ್ನು ವಿನಿಯೋಗಿಸಲಾಗುತ್ತಿದೆ. ಈ ತರಹದ ಬಂಡವಾಳ ವ್ಯವಹಾರದಲ್ಲಿ ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಾ ಬಡವರು ಮತ್ತಷ್ಟು ಬಡವರಾಗಿಯೇ ಉಳಿದರು. ಅಂದರೆ ಒಂದು ಕಡೆ ಶ್ರೀಮಂತಿಕೆ ಜಾಗತೀಕರಣ ಮತ್ತೊಂದೆಡೆ ಬಡತನದ ಜಾಗತೀಕರಣ. ಇವತ್ತಿನ ವಿಜ್ಞಾನ-ತಂತ್ರಜ್ಞಾನಗಳಿಂದ ಜಗತ್ತಿನ ಎಲ್ಲಾ ಜನರಿಗೆ ಬದುಕಲು ಬೇಕಾದ ಆಹಾರ, ವಸತಿ, ಶಿಕ್ಷಣ, ವೈದ್ಯಕೀಯ ನೆರವು, ಕುಡಿಯುವ ನೀರು, ಇವುಗಳೊಂದಿಗೆ ನಿರುದ್ಯೋಗ, ಅನಾರೋಗ್ಯ ಬಡತನ ಹೋಗಲಾಡಿಸಿ ಸಮಾನತೆ ತರುವುದಾಗಬೇಕು. ಉತ್ಪಾದನೆ ಮತ್ತು ವಿತರಣೆಯ ಸಿಂಹಪಾಲು ಬಲಿಷ್ಟ ರಾಷ್ಟ್ರಗಳ ಕಪಿಮುಷ್ಟಿಯಿಂದ ಹೊರತರಬೇಕಾಗಿದೆ. ಅತಿಹೆಚ್ಚು ಉತ್ಪಾದನೆ ಗ್ರಾಹಕರ ಕೊರತೆಯಿಂದ ಆಗಾಗ ತೀವ್ರತರ ಮಾರುಕಟ್ಟೆ ಕುಸಿಯುತ್ತದೆ. ೧೯೯೭-೯೮ರಲ್ಲಿ ಆರ್ಥಿಕ ಹೆಸರು ಗಳಿಸಿದ ರಾಷ್ಟ್ರಗಳು ಆರ್ಥಿಕ ವಿಪ್ಲವದ ದುಷ್ಟ ಪ್ರಭಾವಗಳಿಂದ ಹೊರಬರುವ ಪ್ರಯತ್ನದಲ್ಲಿ ಆ ರಾಷ್ಟ್ರಗಳು ಅಮೇರಿಕದ, ಯುರೋಪಿನ, ಮತ್ತು ಜಪಾನಿನ ದೊಡ್ಡ ಬ್ಯಾಂಕಗಳ

ವಿಶ್ವ ವಿತ್ತನಿಧಿ, ವಿಶ್ವಬ್ಯಾಂಕಗಳ ಮುಂದೆ ಬಿಕ್ಷಾಪಾತ್ರೆ ಹಿಡಿದಿದ್ದು ಎಲ್ಲರಿಗೂ ಗೊತ್ತೆ ! ಅಂದು ಆಗ್ನೆ ಏಷಾ ರಾಷ್ಟ್ರಗಳಿಗೆ ಸಹಾಯ ಮಾಡಿದ ಹುಲಿ ಅಮೇರಿಕೆ ಇಂದು ಶ್ರೀಮಂತ ದೇಶದ ಕರುಣಾಜನಕ ಕಥೆ ಬರಿಗೈ ತಾಯಿಗೆ ಮಗಳ ಸಾಂತ್ವನ ಪ್ರ.ವಾ. ದಿನಾಂಕ ೧೦.೦೧.೨೦೧೦ರ ವರದಿ ಪ್ರಕಾರ ಎಲ್ಲಾ ತಾಂತ್ರಿಕ ಸವಲತ್ತುಗಳಿಂದ ಕೂಡಿದ ರಾಷ್ಟ್ರ ಅಮೇರಿಕೆಯಲ್ಲಿ ಮಧ್ಯಮ ಮತ್ತು ಕೆಳವರ್ಗದವರು, ಹೊಟ್ಟೆಗೆ ಅನ್ನ ಇಲ್ಲದೆ ಅಲಿಯುವ ಪರಿಸ್ಥಿತಿ ಬಂದೊದಗಿದೆ. 'ಕ್ರೆಡಿಟ್' ಕಾರ್ಡಗಳ ಮುಖಾಂತರ ಮನೆಯ ತುಂಬೆಲ್ಲ ಬೇಕಾದ ಬೇಡವಾದ ಸಾಮಾನುಗಳು ತುಂಬಿಕೊಂಡು ಇಂದು ಹೊಟ್ಟೆಗೆ ಹಿಟ್ಟಿಲ್ಲದೆ ಒದ್ದಾಡುತ್ತಿದ್ದಾರೆ ! ಮುಂದೆ ನಮ್ಮಲ್ಲೂ ಇಂತಹ ಪರಿಸ್ಥಿತಿ ತಲೆದೂರಿದರೂ ಆಶ್ಚರ್ಯಪಡಬೇಕಿಲ್ಲ ! ಇದರಿಂದ ಪಾರಾಗಬೇಕಾದರೆ ಕಂಡಿದ್ದೆಲ್ಲ ಕೊಳ್ಳೊಬಾಕುತನ ಕೈಬಿಟ್ಟಾಗ ಮಾತ್ರ ಸಾಧ್ಯ.

ಭಾರತದ ೧೦೦ ಕೋಟಿ ಜನಸಂಖ್ಯೆಯಲ್ಲಿ ಶೇಕಡಾ ೭೫ರಷ್ಟು ಗ್ರಾಮೀಣ ಪ್ರದೇಶಗಳಲ್ಲಿರುವವರು.[೪೯] ಅಂದರೆ ಗ್ರಾಮೀಣ ಪ್ರದೇಶದಲ್ಲಿ ಅತಿಹೆಚ್ಚ ರೈತರು ಮತ್ತು ಕೂಲಿಕಾರರು. ಭಾರತದ ಕೃಷಿ ಮುಖ್ಯವಾಗಿ ಇಲ್ಲಿಯ ನೂರು ಕೋಟಿ ಜನರ ಆಹಾರ ಮತ್ತು ಜೀವನಾವಶ್ಯಕತೆಗಳು ರೈತರು ಒದಗಿಸುತ್ತಾರೆ. ಇದರೊಂದಿಗೆ ಕೃಷಿ ಉತ್ಪಾದನೆ ಕಡಿಮೆಯಾಗುತ್ತಿದೆ. ಜೊತೆಗೆ ರೈತ ಬೆಳೆದ ಬೆಳೆಗಳ ಬೆಲೆ ಏರುವ ಬದಲು ಇಳಿಯುತ್ತಿವೆ. ಕಾರಣ, ನಮ್ಮಲ್ಲಿ ಬೆಳೆದ ಧಾನ್ಯ ಖರೀದಿಸುವ ಬದಲು ಹೊರ ರಾಷ್ಟ್ರಗಳಿಂದ ಆಹಾರ ಧಾನ್ಯ ಖರೀದಿಸುತ್ತಾರೆ. ಶ್ರೀ ಪಿ.ವಿ.ನರಸಿಂಹರಾವ ಪ್ರಧಾನಿಯಾಗಿದ್ದಾಗ ನಮ್ಮಲ್ಲಿ ಬೇಕಾದ'ಷ್ಟು ತೊಗರಿ ಬೆಳೆದರೂ ಕೂಡ ಹೊರ ರಾಷ್ಟ್ರಗಳಿಂದ ತೊಗರಿ ಖರಿದಿಸಿದ್ದು ಎಲ್ಲರಿಗೂ ನೆನಪಿರಬೇಕು. ಕೊಲ್‌ಗೇಟ್, ಸಾಬೂನು, ಔಷಧ ಇತ್ಯಾದಿಗಳ ಮೇಲೆ ಕಂಪನಿಯವರು ನಿಗದಿಪಡಿಸಿದ ರೇಟಿಗೆ ನಾವು ಖರೀದಿ ಮಾಡುತ್ತೇವೆ. ಆದರೆ ನಮ್ಮ ರೈತರು ಬೆಳೆದ ಧಾನ್ಯಕ್ಕೆ ರೈತನೇ ಬೆಲೆ ನಿಗದಿ ಮಾಡುವಂತಿಲ್ಲ ಇದೆಂತಹ ದುರಂತ !

ಒಂದು ಕಡೆ ಶೇಕಡಾ ೪೦ರಷ್ಟು ಬಡತನ ರೇಖೆಯ ಕೆಳಮಟ್ಟದಲ್ಲಿರುವವರ ಗ್ರಾಹಕ ಶಕ್ತಿ ಕುಸಿದು ಇನ್ನೊಂದೆಡೆ ಕೃಷ್ಟಿ ಉತ್ಪಾದನಾ ವೆಚ್ಚಗಳು ಮಾತ್ರ ಬೀಜ, ರಸಗೊಬ್ಬರ, ಕೀಟನಾಶಕ, ವಿದ್ಯುತ್, ಡಿಸೈಲ್, ರೈತರ ಸಾಲದ ಬಡ್ಡಿ (ಇಂದು ಪರವಾಗಿಲ್ಲ ಕಡಿಮೆ ಮಾಡಿದ್ದಾರೆ)

---

49 ಜಾಗತೀಕರಣ ೧೦ ವರ್ಷಗಳು – ಸಿ.ಆರ್.ಭಟ್ ಪು.ಸಂ. ೫೫.

ಏರುತ್ತಲೇ ಇವೆ. ರಾಷ್ಟ್ರೀಯ ಬ್ಯಾಂಕುಗಳು ಕೃಷಿಗೆ ನೀಡುವ ಸಾಲ ಸೌಲಭ್ಯಗಳು ಕಡಿಮೆ ಮಾಡಿವೆ. ಇವತ್ತು ಬ್ಯಾಂಕುಗಳು ಕೃಷಿಗೆ ಸಾಲ ಕೊಡುವಲ್ಲಿ ಕೂಡ ಹೊಲದ ಕಾಗದ ಪತ್ರ ಅಡವಿಟ್ಟುಕೊಂಡು ಕೃಷಿಗೆ ಸಾಲಕೊಟ್ಟಿವೆ ! ಕೃಷಿಗೆ ನೀಡುವ ಸಾಲ ಸೌಲಭ್ಯಗಳ ಪ್ರಮಾಣ ಕಡಿಮೆಯಾಗಿವೆ. ಕೇಂದ್ರ, ರಾಜ್ಯ ಸರ್ಕಾರಗಳು ಕೃಷಿ ಕ್ಷೇತ್ರಕ್ಕೆ ಬೇಕಾದ ಮೂಲ ಸೌಕರ್ಯ ಒದಗಿಸುವಲ್ಲಿ ವಿಫಲವಾಗಿವೆ. ಕೃಷಿ ಉತ್ಪಾದನೆ ವೆಚ್ಚಗಳು ಹೆಚ್ಚುತ್ತಿದ್ದು ಇವುಗಳಿಗೆ ಜಾಗತಿಕ, ಆಂತರಿಕ ಮುಕ್ತ ಮಾರುಕಟ್ಟೆಯಲ್ಲಿ ನ್ಯಾಯ-ಬೆಲೆ ಸಿಗದೆ ಸಾಲದ ಭಾದೆ ತಾಳದೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ಈಗಿನ 'ಡಬ್ಲುಟಿಒ ಒಪ್ಪಂದದಂತೆ ವಿದೇಶಿ ವಿನಿಮಯಗಳ ಶೇಖರಣೆ ಅಸ್ಥಿರವಾಗಿದೆ. ಅದರಲ್ಲಿ ಬಹುಪಾಲು ವಿದೇಶಿ ಸಟ್ಟಾ ಬಂಡವಾಳ, ಸಾಲಗಳು, ನೆರವುಗಳು ಮತ್ತು ಅನಿವಾಸಿ ಭಾರತೀಯರ ಠೇವಣಿಗಳು ಇವೆ. ಬಿಲಿಯನಗಟ್ಟಲೆ ಡಾಲರ್ ಮೌಲ್ಯದ ಈ ಠೇವಣಿಗಳು ಯಾವ ಕ್ಷಣದಲ್ಲಿಯೂ ಹೆಚ್ಚಿನ ಲಾಭ ಗಳಿಕೆಗಾಗಿ ನಮ್ಮ ದೇಶಬಿಟ್ಟು ಹೋಗಬಹುದು[೫೦]. ಮೊನ್ನೆ ಮೊನ್ನೆ ತಾನೇ ವಿದೇಶಿ ಕಂಪನಿಗಳಲ್ಲಿದ್ದ ಭಾರತದ ಉದ್ಯೋಗಿಗಳೂ ನಿರುದ್ಯೋಗಿಗಳಾಗಲಿಲ್ಲವೇ ಹಾಗೆ !.

'ಡಬ್ಲ್ಯುಟಿಒ ಒಪ್ಪಂದದಲ್ಲಿ ಆಮದುಗಳ ಮೇಲಿನ ತೆರಿಗೆ ಹಾಗೂ ಪ್ರಮಾಣಾತ್ಮಕ ನಿರ್ಬಂಧನೆಗಳನ್ನು ಆಯಾ ದೇಶದ ಸರಾಸರಿ ರಾಷ್ಟ್ರೀಯ ಆದಾಯದ ಆಧಾರದಲ್ಲಿ ನಿರ್ಧರಿಸಲು ಒತ್ತಾಯಿಸಬೇಕು. ಅಗ್ಗದ ಆಮದು ಸರಕುಗಳು ನಮ್ಮ ದೇಶದಲ್ಲಿ ನುಗ್ಗಿ ಬಂದು ರಾಶಿ ಬೀಳುವುದರ ವಿರುದ್ಧ ಅವುಗಳ ಮೇಲಿನ ವಿಶೇಷ ತೆರಿಗೆ ವಿಧಿಸಬೇಕು. ಅಭಿವೃದ್ಧಿ ಹೊಂದಿದ ದೇಶಗಳು ಡಬ್ಲ್ಯುಟಿಒ ಒಪ್ಪಂದದಲ್ಲಿ ತಮ್ಮ ಹಿತಾಸಕ್ತಿ ಕಾಪಾಡುವುದಕ್ಕಾಗಿ 'ಗ್ರೀನ್ ಬಾಕ್ಸ್' ಕಾರ್ಯಕ್ರಮ ಇನ್ನೂ ಹೆಚ್ಚು ಹೆಚ್ಚಾಗಿ ಕೈಗೊಳ್ಳಬೇಕಾಗಿ.

ನಿಸರ್ಗದಲ್ಲಿ ಏರಿಳಿತವಾದರೆ ಎತ್ತರ ಪರ್ವತದ ಹಿಮ ಕರಗಿ ಹರಿಯುತ್ತದೆ. ಇಂತಹ ಪ್ರದೇಶ ಸೂರ್ಯನ ಕಿರಣಗಳಿಂದ ಪುನಃ ಆವಿಯಾಗಿ ಆಕಾಶಕ್ಕೆ ಹೋಗುವ ಬದಲಿಗೆ ಭೂಮಿಯೇ ಇನ್ನು ಮುಂದೆ ಹೀರಿಕೊಳ್ಳುತ್ತದೆ. ಇದರಿಂದ ಭೂಮಿಯ ತಾಪಮಾನ ಇನ್ನಷ್ಟು ಹೆಚ್ಚುತ್ತಿದೆ.

---

50 ಜಾಗತೀಕರಣ ೧೦ ವರ್ಷಗಳು – ಸಿ.ಆರ್. ಭಟ್ ಪು.ಸಂ. ೫೫.

ಅಕಾಲಿಕ ಮಳೆಯಿಂದ ದ್ವೀಪ ಪ್ರದೇಶಗಳು ಜಲಾವೃತ್ತವಾಗುತ್ತವೆ. ಜನಕಂಗಾಲಾಗುತ್ತಾರೆ. ಇದರೊಂದಿಗೆ ಸಮುದ್ರ'ದ ನೀರು ಹರಿದು ಅಂತರ್ಜಲಕ್ಕೆ ಸೇರುತ್ತದೆ. ಕೃಷಿಕ್ಷೇತ್ರಕ್ಕೆ ಅನುಕೂಲವಾದ ಪಕ್ಷಿಗಳು-ಪ್ರಾಣಿಗಳು ಬೆರೆಕಡೆ ವಲಸೆಹೋಗುತ್ತವೆ. ಇಂತಹ ಬದಲಾವಣೆಯಿಂದ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ.

ಜಾಗತೀಕರಣಕ್ಕೆ ಪರ್ಯಾಯವಾಗಿ ವಚನ ಚಳುವಳಿ ಮತ್ತು ಪರಿಸರ :

ಜಾಗತೀಕರಣ ಕುರಿತ ಇಂದಿನ ಪರಿಕಲ್ಪನೆ ವಚನಕಾರರಲ್ಲಿ ಸಹ ಇತ್ತು

॥ ಜಗವೆಲ್ಲವ ನೂರು ಮಾಡಿ
ಊರನೊಂದು ಮನೆಯ ಮಾಡಿ
ಹೂಗದೆಸೆಯಿಲ್ಲದ ಸುಳುಹುನೋಡ
ಸುಳುಹಿನ ಭೇದವನರಿಯದ ಕಾರಣ
ದೇವಲೋಕ ಮರ್ತ್ಯ ಲೋಕವೆಲ್ಲ ಭ್ರಮೆಗೊಂಡಿತಲ್ಲ.॥[೫೧]

ಅಲ್ಲಮನ ಈ ವಚನ ಜಾಗತೀಕರಣ ಸ್ವರೂಪವನ್ನು ವಿವರಿಸುತ್ತದೆ.

ಜಾಗತೀಕರಣ ಕುರಿತ ಚಿಂತನ ಕ್ರಮದಲ್ಲಿ ಅಮೇರಿಕ ರೀತಿಯ ಪರ-ವಿರೋಧ ಚರ್ಚೆಗಳ ಹಿನ್ನೆಲೆಯಲ್ಲಿ ಅನೇಕ ಸಾಧಕ ಬಾಧಕಗಳಿವೆ. ಜೀವ ಪರ ಜೀವಕಾರುಣ್ಯದ ದೃಷ್ಟಿಯಿಂದ ಗಮನಿಸಿದಾಗ ಜಾಗತೀಕರಣವು ಜೀವ ವಿರೋಧಿ ನೇಲೆಯಾಗಿದ್ದು ಸ್ಪಷ್ಟವಿದೆ. ಜಾಗತೀಕರಣದಿಂದ ಇಡೀ ವಿಶ್ವವೇ ಒಂದು ಹಳ್ಳಿಯಾಗಿ ಮಾರ್ಪಡಿಸುವ ಮೂಲಕ ಎಲ್ಲ ಸವಲತ್ತುಗಳನ್ನು ಕೊಡುವುದಾಗಿ ಹೇಳಿದರೂ ಉಳ್ಳವರ ಇಲ್ಲದವರ ಮಧ್ಯ ಕಂದರ ನಿರ್ಮಾಮ ಮಾಡಲು ಸಾಧ್ಯವಿಲ್ಲ. ಈ ಕುರಿತ ಆಲೋಚನೆ ವಚನಕಾರರು ೧೨ನೇ ಶತಮಾನದಲ್ಲಿ ನಡೆಸಿದ್ದಾರೆ. ಜಾಗತೀಕರಣ ಕಾರುವ ವಿಷವನ್ನು ಬಸವಣ್ಣನವರು ತನ್ನ ಒಂದು ವಚನದಲ್ಲಿ ಹೀಗೆ ಹೇಳುತ್ತಾರೆ.

---

[51] ಅಲ್ಲಮ ಪ್ರಭುದೇವರ ವಚನ ಸಂಪುಟ-೨, ಸಂ. ಡಾ.ಬಿ.ವಿ.ಮಲ್ಲಾಪೂರ.

"ಹಸಿದು ಎಕ್ಕೆಯ ಕಾಯ ಮೆಲಬಹುದೆ?
ನೀರಡಿಸಿ ವಿಷವ ಕುಡಿಯಬಹುದೆ?
ಸುಣ್ಣದ, ತುಯ್ಯಲ(ದ) ಬಣ್ಣವೊಂದೆ ಎಂದಡೆ
ನಂಟುತನಕ್ಕೆ ಉಣಬಹುದೆ?
ಲಿಂಗಸಾರಾಯ ಸಜ್ಜನರಲ್ಲದವರ
ಕೂಡಲಸಂಗಮದೇವರೆಂತೊಲಿವ?"[೫೨]

ಇಪ್ಪತ್ತೊಂದನೆಯ ಶತಮಾನದ ಪ್ರತಿಯೊಂದು ಆಗು ಹೋಗುಗಳಿಗೆ ಹನ್ನೆರಡನೆ ಶತಮಾನದಲ್ಲೆ ವಚನಕಾರರು ಹೇಗೆ ಚಿಂತಿಸಿದ್ದರು ಎಂಬುದಕ್ಕೆ ಈ ಮೇಲಿನ ವಚನವೇ ಸಾಕ್ಷಿ ।

ಸಾಯುವಂತಹ ಹಸಿವಾದರೂ ಕೂಡ ಎಕ್ಕೆ ಕಾಯಿ ತಿನ್ನಲು ಸಾಧ್ಯವೆ? ಖಂಡಿತವಾಗಿಯೂ ಇಲ್ಲ. ಎಲ್ಲಿ ಎಕ್ಕೆ ಕಾಯಿ ಎಂಬುದಕ್ಕೆ ವಚನಕಾರರು ಕಲಬೆರಕೆ ಆಹಾರ ಎಂಬ ಅರ್ಥ ಕೊಟ್ಟಿದ್ದಾರೆ. ಇವತ್ತಿನ ದಿನಗಳಲ್ಲಿ ಪ್ರತಿಯೊಂದು ವಿಷಯುಕ್ತ ಆಹಾರ ಸೇವಿಸುತ್ತಿದ್ದೇವೆ. ಅದು ಊಟದ ಮೂಲಕ ಆಗಿದಬಹುದು, ಇಲ್ಲವೆ ಗೊತ್ತಿರದ ರೀತಿಯಲ್ಲಿ ಗಾಳಿಯ ಮುಖಾಂತರ ಆಗಿರಬಹುದು. ಹೀಗೆಯೇ ರಾಸಾಯನಿಕವಾಗಿ ಬಳಸುತ್ತಿದ್ದ ವಿಷವೆಂದೇ ಹೇಳುವ ಡಿ.ಡಿ.ಟಿ. ಲೋಕಕ್ಕೆ ಕ್ರಿಮಿ ಕೀಟ ಕೊಲ್ಲುವುದೆಂದು ತಿಳಿದು ಕೃಷಿ ಕ್ಷೇತ್ರದಲ್ಲಿ ಜಗಜ್ಜಾಹೀರಾಯಿತು. ಬೆಳೆ ಯಾವುದೇ ಇರಲಿ ಔಷಧ, ಕೀಟ ನಾಶಕವಾಗಿ ಇದು ಹೆಚ್ಚಾಗಿ ಕೃಷಿ ಕ್ಷೇತ್ರದಲ್ಲಿ ಬಳಸುವ ಕೀಟನಾಶಕ ಇದಾಗಿತ್ತು. ಹೀಗೆ ಸಸ್ಯಕ್ಕೆ ಸಿಂಪಡಿಸಿದ ಡಿ.ಡಿ.ಟಿ. ಇಡೀ ಜೀವಜಾಲದ ಮೇಲೆಲ್ಲಾ ತನ್ನ ಇರುವಿಕೆ ತೋರಿಸಿತು.

ಡಿ.ಡಿ.ಟಿ. ಕೀಟನಾಶಕ ಸಸ್ಯಗಳಿಗೆ ಹೋಗಿ ಮಳೆ ಬಂದು ನೀರಗೆ ಸೇರಿ ನೀರಿನಿಂದ ಮೀನಿನ ಹೊಟ್ಟೆ ಸೇರಿ ಮೀನಿನಿಂದ ಈ ಕೀಟನಾಶಕದ ಅಂಶ ವಿಸರ್ಜಿಸದೆ ಮೀನು ಸೇವಿಸಿದ ಅದೆಷ್ಟೋ ಮಹಿಳೆಯರ ಹೊಟ್ಟೇ ಸೇರಿ ಕೊನೆಗೆ ಡಿ.ಡಿ.ಟಿ. ಹಾಲುಣಿಸುವ ತಾಯಂದಿರ ಎದೆ ಹಾಲಿಗೂ ಸೇರಿ, ಮುಂದೆ ಮಕ್ಕಳಿಗೂ ಕೂಡ ಹಾನಿ ಮಾಡುತ್ತದೆ. ಇದು ಸಂಶೋಧನೆಯಿಂದ ಕೇವಲ ಡಿ.ಡಿ.ಟಿ. ಒಂದರ ಬಗ್ಗೆ ಗೊತ್ತಾಯಿತು. ಅದರೆ ಇಂದು ನಾವು ಪ್ರತಿ ಸೆಕೆಂಡಿಗೂಕೂಡ ವಿಷ ಗಾಳಿಯನ್ನೇ ಸೇವಿಸುತ್ತಿದ್ದೇವೆ.

---

[52] ಬಸವಣ್ಣನವರ ವಚನ ಸಂಪುಟ–೧, ಸಂ. ಡಾ.ಎಮ್.ಎಮ್.ಕಲಬುರ್ಗಿ. ವ.ಸಂ.–೧೨೦ ಪು.ಸಂ.೩೩

ನೀರಡಿಸಿ ವಿಷವ ಕುಡಿಯಬಹುದೇ ನೀರಡಿಸಿ ವಿಷ ಕುಡಿಯಬಹುದೆ? ಇವತ್ತಿನ ತಂಪು ಪಾನಿಯಗಳ ಬಗ್ಗೆ ಕೂಡ ಮಾತನಾಡಿದ್ದಾರೆ. ಟಿವಿಯಲ್ಲಿ ಆಕರ್ಶಕವಾಗಿ ತೋರಿಸುವ ಜಾಹಿರಾತುಗಳು ಇಂದಿನ ಯುವ ಪೀಳಿಗೆಯನ್ನು ಆಕರ್ಷಿಸುತ್ತಿವೆ. ಇದು ನೀರಡಿಸಿ ವಿಷ ಕುಡಿಯದೆ ಇನ್ನೇನು? ಎಂಬ ಪ್ರಶ್ನೆ ವಚನಕಾರರದು.

ಸುಣ್ಣ ಮತ್ತು ಹಾಲು ನೊಡಲು ಎರಡರ ಬಣ್ಣ ಒಂದೆ! ಹಾಗೆಂದು ಸುಣ್ಣದ ನೀರು ಕುಡಿಯಲು ಸಾಧ್ಯವೆ? ಸುಣ್ಣದ ತಯ್ಯಲು ಬಣ್ಣವೊಂದೆ ಎಂದಡೆ ನಂಟುತನಕ್ಕೆ ಉಣ್ಣಬಹುದೆ? ಅಂತರಾಷ್ಟ್ರೀಯ ಕಂಪನಿಗಳೂ ಎಲ್ಲೆಂದರಲ್ಲಿತಲೆಯೆತ್ತಿ ವಿಷಪಾನಿಯ, ವಿಷಯುಕ್ತ ಹವಾಮಾನ ಸೃಷ್ಟಿಸುತ್ತಿರುವಾಗ ಈ ಕಂಪನಿಗಳ ಮೇಲೆ ಯಾವುದೇ ರೀತಿ ಕ್ರಮ ಕೈಗೊಳ್ಳದೇ ಅವುಗಳೊಂದಿಗೆ ನಾವು ಕೈ ಜೋಡಿಸುತ್ತಿದ್ದುವೆ. ಅಂದರೆ ನಮ್ಮ ಶವಸಂಸ್ಕಾರಕ್ಕೆ ನಮ್ಮ ಗೋರಿ ನಾವೆ ತೋಡಿಕೊಳ್ಳುತ್ತಿದ್ದೇವೆ. ಎಂತಹ ವಿಪರ್ಯಾಸ !

ಬಸವಣ್ಣನ ಇನ್ನೊಂದು ವಚನ ನೊಡುವುದಾದರೆ ಇಡೀ ಜೀವಜಾಲವೇಹೇಗೆ ಅಲ್ಲೋಲ ಕಲ್ಲೋಲವಾಗುವುದೆಂಬ ಕಲ್ಪನೆ, ಸತ್ಯಾಸತ್ಯತೆಗಳು ವಚನಕಾರರಿಗೆ ಗೊತ್ತಾಗಿದ್ದವು.

"ಒಲೆ ಹತ್ತಿ ಉರಿದಡೆ
ನಿಲ್ಲಬಹುದಲ್ಲದೆ
ಧರೆ ಹತ್ತಿ ಉರಿದಡೆ
ನಿಲ್ಲಲುಬಾರದು
ಏರಿ ನೀರುಂಬಡೆ
ಬೇಲಿ ಕೆಯ್ಯಮೇವಡೆ
ನಾರಿ ತನ್ನ ಮನೆಯಲ್ಲಿ ಕಳುವಡೆ
ತಾಯ ಮೊಲೆವಾಲು ನಂಜಾಗಿ ಕೊಲ್ಲುವಡೆ
ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ".[೫೩]

ವಚನಕಾರರಿಗೆ ಅದೆಂತಹ ಮುಂದಾಲೋಚನೆಯಲ್ಲವೆ? ಅನ್ನಬೇಯಿಸಿಕೊಂಡ ಒಲೆ ಉರಿಯುತ್ತಿದ್ದರೆ ಆರಿಸಬಹುದು ಏಕೆಂದರೆ ಅದು ನಮಗೆ ನಿಲುಕುವಷ್ಟೇ ಅಂತರದಲ್ಲಿದೆ. ಧರೆ

[53] ಬಸವಣ್ಣನವರ ವಚನ ಸಂಪುಟ–೧ ಸಂ. ಡಾ.ಎಮ್.ಎಮ್.ಕಲಬುರ್ಗಿ.

ಹತ್ತಿ ಉರಿದಡೆ ನಿಲ್ಲಲು ಬಾರದು ಇವತ್ತಿನ ದಿನಗಳಲ್ಲಿ ಮಂಗಳನ ಅಗಳದಲ್ಲಿ ನೀರು ಹರಿದದ್ದು ಕಂಡುಕೊಂಡಿದ್ದೇವೆ. ಚಂದ್ರಲೋಕಕ್ಕೆ ಹೋಗಿ ಬಂದಿದ್ದೇವೆ. ಬಾಹ್ಯಾಕಾಶದಲ್ಲಿ ಏನಾಗುತ್ತಿದೆ ಎಂಬುದು ಕಂಡುಕೊಳ್ಳುತ್ತಿದ್ದೇವೆ. ವಿನಃ ನಮ್ಮ ಮನೆಯಲ್ಲಿ ಏನಾಗುತ್ತಿದೆ ಎಂಬುದರ ಕಲ್ಪನೆಯೂ ನಮ್ಮಲ್ಲಿ ಮಾಡುತ್ತಿಲ್ಲ. ಅಣುಬಾಂಬುಗಳ ಯುದ್ಧವೆನಾದರೂ ಆದರೆ ಇಡೀ ಧರೆಯು ಹತ್ತಿ ಉರಿಯುತ್ತದೆ. ಏರಿ ನೀರುಂಬಡೆ ಬಾವಿಯಿಂದ ನೀರು ಸೇದುವಾಗ ಸೇದಿದ ನೀರು ಏತವೇ ಕುಡಿದು ಬಿಟ್ಟರೆ? ದನಗಳಿಂದ ರಕ್ಷಿಸಲು ಹೊಲಕ್ಕೆ ಬೇಲಿ ಹಾಕಿದಾಗ ಆ ಬೇಲಿಯೂ ಇಡೀ ಸಸ್ಯವನ್ನು ಮೆದ್ದಡೆ ಹೆಣ್ಣಾದವಳ ಮನೆಯ ಎಲ್ಲ ಜವಾಬ್ದಾರಿ ಹೊರಬೇಕು. ಅಂಥದ್ದರಲ್ಲಿ ತಾನೇ ಕಳ್ಳತನ ಮಾಡಿದರೆ ಮನೆ ಮನೆಯಾಗಿರಲು ಹೇಗೆ ಸಾಧ್ಯ. ತಾಯಿಯ ಹಾಲೆ ನಂಜಾದರೆ ಹೇಗೆ ಇವತ್ತಿನ ದಿನಗಳಲ್ಲಿ ಪ್ರತಿಯೊಂದು ವಿಷವಾಗಿಯೇಪರಿಣಮಿಸುತ್ತದೆ. ನಮ್ಮ ಬದುಕಿನಲ್ಲಿ ಸಂತೋಷ ಸಿಗುತ್ತದೆ ಎಂದು ತಿಳಿದು ಭೋಗ ವಸ್ತುಗಳಿಂದ ನಮಗೆ ಸಂತೋಷ ಸಿಗುತ್ತವೆಂದು ತಿಳಿದು ನಮಗೆ ಹುಚ್ಚು ಹಿಡಿಸಲೆಂದೇ ಬಂದ ಅಂತರಾಷ್ಟ್ರೀಯ ಉತ್ಪಾದನಾ ಕಾರ್ಖಾನೆಗಳು ಅಲ್ಲಿಂದ ಕೊಂಡು ತಂದು ಮನೆಯನ್ನೆಲ್ಲ ತುಂಬಿಕೊಂಡಿದ್ದೇವೆ.

ಇಡೀ ನಿಸರ್ಗವೇ ನಮ್ಮ ಅಧೀನತೆಗೆ ತೆಗೆದುಕೊಂಡಿದ್ದೇವೆ. ಅಂದರೆ ಒಂದೇ ಒಂದು ಅಣುಬಾಂಬಿನಿಂದ ಇಡೀ ಮನುಕುಲವೇ ನಾಶವಗುವುದೆಂಬ ಕಲ್ಪನೆಯು ನಮಗಿನ್ನು ಬಂದಿಲ್ಲ. ಇಡೀ ನಿಸರ್ಗವೇ ಬುಡಮೇಲಾದರೆ ಸುನಾಮಿಯಾಗಿರಬಹುದು, ಚಂಡ ಮಾರುತ ಇಲ್ಲವೆ ಭೀಕರ ಭೂಕಂಪ ಇವುಗಳ ಬಗ್ಗೆ ವಚನಕಾರರು ಚಿಂತನ ನಡೆಸಿರುವುದು ನೋಡಿದರೆ ಇವತ್ತಿನ ಸಂದಿಗ್ಧ ಪರಿಸ್ತಿತಿ ವಚನಕಾರರಿಗೆ ಅಂದೇ ಗೊತ್ತಾದಂತೆ ಇತ್ತು ಎನ್ನುವುದಕ್ಕೆ ಇಷ್ಟು ಸಾಕಲ್ಲವೆ?

ಅಧ್ಯಾಯ-೪

ವಚನ ಚಳುವಳಿ

ಅಧ್ಯಾಯ-೪

ವಚನ ಚಳವಳಿ

ಹಿನ್ನೆಲೆ :

ಕರ್ನಾಟಕದಲ್ಲಿ ೧೨ನೇ ಶತಮಾನವು ಬದುಕಿನ ಎಲ್ಲಾ ಕ್ಷೇತ್ರಗಳಲ್ಲೂ ಪರ್ಯಾಯಗಳನ್ನು ಹುಡುಕುವ, ಪ್ರಯೋಗಿಸುವ ಆಶ್ಚರ್ಯಕರ ದಾರಿ ತುಳಿದ ಸಮೂಹಜಾಗ್ರತಿಯ ಕಾಲವಾಗಿದೆ. ಅವ್ಯವಸ್ಥಿತವಾಗಿರುವುದನ್ನು ಮುರಿಯುವ, ಒಳಿತುಗಳನ್ನು ಒಗ್ಗೂಡಿಸಿ ಕಟ್ಟುವ ಕಟ್ಟಿರುವುದನ್ನು ಸ್ಥಾವರವಾಗದಂತೆ ಪರೀಕ್ಷೆಗೊಳಪಡಿಸುವ ಎದೆಗಾರಿಕೆಯನ್ನು ಅದರ ರೂವಾರಿಗಳಾದ ವಚನಕಾರರು ಪ್ರದರ್ಶಿಸಿದರು. ಸಾಮಾನ್ಯವಾಗಿ ಇದನ್ನು ಧಾರ್ಮಿಕ ಪರಿಧಿಯೊಳಗೆ ಅರ್ಥೈಸುವ ಪ್ರಯತ್ನಗಳು ಹೆಚ್ಚಾಗಿ ನಡೆದಿವೆ. ಆ ಧಾರ್ಮಿಕ ಪರಿಧಿಯನ್ನು ಸರಿಸಿದರೆ, ಜೀವ, ಜೀವಿ, ಜಗತ್ತು, ಕುರಿತು ತುಡಿದಿದಾರೆ. ಹೆಚ್ಚೆಚ್ಚು ಇವುಗಳನ್ನೊಳಗೊಂಡ ಸಮೂಹವನ್ನು ಇವುಗಳಲ್ಲಿಯ ಅಂತರ ಸಂಬಂಧಗಳನ್ನು ಸರಿಯಾಗಿ ಗುರುತಿಸಿದರೂ ಅಲ್ಲದೆ ಇವುಗಳ ನಡುವೆಯೂ ಪಡೆಯಬೇಕಾದ ನೆಲಮೂಲದ ಆನಂದವನ್ನೇ ಮುಕ್ತಿಯೆಂದು ಕರೆದರು. ಇಂದ್ರಿಯಗಮ್ಯ ವಾದ ಜಗತ್ತು ಅವುಗಳನ್ನು ಸರಿಯಾದ ವಿವರಣೆ ಮತ್ತು ಇವುಗಳ ಮೂಲಕ ಅಸಮಾನ ಹಿಡಿತಗಳನ್ನು ವಿಶ್ಲೇಷಿಸುವುದರ ಮುಖಾಂತರ ಶ್ರಮದಿಂದಲೇ ವಿಕಾಸವಾಗುವ ಅರಿವಿನ ಮುಖಾಂತರ ಈ ಜಗತ್ತನ್ನು ನೋಡುವ ಸೃಷ್ಟಿಯನ್ನೊದಗಿಸಿದರು.

ಭೋಗ ವಸ್ತುಗಳಿಗೆ ದಾಸರಾಗಿ ಭೌತಿಕ ಶ್ರಮವನ್ನೇ ಅವಲಂಬಿಸಿ ಪರಾವಲಂಬಿಗಳಾಗಿ ಬದುಕುತ್ತಿದ್ದ ನಿಸರ್ಗ ವಿರೋಧಿ ಮೇಲ್ವರ್ಗಗಳ ತಂತ್ರಗಳನ್ನು ಬಯಲಿಗೆಳೆಯುವುದರ ಮುಖಾಂತರ ನಿಸರ್ಗದತ್ತ ಸಂಪನ್ಮೂಲಗಳು ಎಲ್ಲರಿಗೂ ಸೇರಿದವುಗಳು ಎಂಬುದನ್ನು ಪ್ರಸ್ತುತಪಡಿಸಿದರು. ಈ ಎಲ್ಲಾ ಚಟುವಟಿಕೆಗಳ ಭಾಗವೇ ಆಗಿರುವ ಬ್ರಹ್ಮಾಂಡವನ್ನು, ಸೃಷ್ಟಿ

ರಹಸ್ಯಗಳನ್ನು ತಮ್ಮ ಕಾಲದಲ್ಲಿ ಪ್ರಚಲಿತವಿದ್ದ ಎಲ್ಲಾ ಜ್ಞಾನ ಶಾಖೆಗಳನ್ನು ವಿಮರ್ಶಿಸುವುದರ ಮುಖಾಂತರ ಅರಿವಿನ ಸುಗಮವಾದ ದಾರಿಯನ್ನು ಕಂಡುಕೊಂಡರು. ಹೀಗಾಗಿ ನಿಸರ್ಗದ ಭಾಗವೇ ಆಗಿರುವ ಮನುಷ್ಯರು ನಿಸರ್ಗದೊಂದಿಗೆ ಹೇಗೆ ಬದುಕಬೇಕೆಂಬ ದಾರಿಗಳನ್ನು ಶೋಧಿಸಿದರು.

ಚಳುವಳಿ ಅರ್ಥ :

ಚಳುವಳಿ ಎನ್ನುವುದು ಚಲನೆ ಎಂಬ ಪದದಿಂದ ಬಂದಿದೆ.[೫೪] ಅದು ಸಾಮೂಹಿಕ ಆಂದೋಲನವನ್ನು ಸೂಚಿಸುತ್ತವೆ. ಒಂದು ಜನಾಂಗದ, ಸಮುದಾಯದ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳಲು ಹುಟ್ಟಿಕೊಂಡ ಆಂದೋಲನಗಳೆ ಚಳವಳಿ, ಫ್ರಾನ್ಸ" ಕ್ರಾಂತಿ, ವಸಾಹತುಶಾಹಿ ವಿರುದ್ಧಚಳವಳಿ, ಸ್ತ್ರೀವಾದಿ ಚಳವಳಿ, ಮಾರ್ಕ್ಸವಾದಿ ಚಳವಳಿ, ರೈತ ಚಳವಳಿ, ದಲಿತ ಚಳವಳಿ, ಅಲ್ಪಸಂಖ್ಯಾತರ ಚಳವಳಿ, ವರ್ಗ, ವರ್ಣ, ಸಂಘರ್ಷ, ಹೀಗೆ ಹತ್ತಾರು ಚಳುವಳಿಗಳ ಹೋರಾಟದ ಇತಿಹಾಸ ನಮ್ಮಮುಂದಿದೆ. ಇವು ನಿರ್ದಿಷ್ಟ ಉದ್ದೇಶ ಗುರಿ ಹೊಂದಿರುತ್ತವೆ. ಯಾವುದೊ ಒಂದು ಕಾರ್ಯಕ್ಷೇತ್ರ ಅದಕ್ಕೆ ಒಬ್ಬ ನಾಯಕ ಚಳುವಳಿ ಕೇಂದ್ರ ಬಿಂದುವಾಗಿ ಅವಶ್ಯಕತೆ ಈಡೇರಿದ ಕೂಡಲೇ ಅದು ಸ್ಥಗಿತಗೊಳ್ಳುತ್ತದೆ. ಇದಕ್ಕೆ ಸ್ವಾತಂತ್ರ್ಯ ಚಳುವಳಿ ಉದಾಹರಿಸಬಹುದು.

ಈ ಎಲ್ಲಾ ಚಳುವಳಿಗಿಂತ ವಚನ ಚಳುವಳಿ ಭಿನ್ನವಾಗಿ ನಿಂತಿದೆ. ಇದು ಮನುಕುಲದ ಅಭ್ಯುದಯಕ್ಕಾಗಿ ಕೂಡಿದ ಚಳವಳಿಯಾಗಿದ್ದು, ನಿರ್ದಿಷ್ಟ ಜನಾಂಗ, ಸಮುದಾಯ ಕೇಂದ್ರಿತ ಚಳುವಳಿಯಾಗದೆ ಜೀವ ಕೇಂದ್ರಿತ ಚಳುವಳಿಯಾಗಿದೆ. ಸಾಮಾನ್ಯವಾಗಿ ಒಂದೊಂದು ಚಳವಳಿಗೆ ಒಂದೊಂದು ವಿಷಯಗಳು ಮುಖ್ಯವಾಗುತ್ತವೆ. ಆದರೆ ಬಸವ ಚಳುವಳಿಗೆ ಮನುಷ್ಯ ಬದುಕಿನ ಎಲ್ಲಾ ಆಯಾಮಗಳು ಮುಖ್ಯ. ಎಲ್ಲಾ ಸ್ಥರದ, ಎಲ್ಲಾ ಕುಲಕಸುಬುಗಳ, ಎಲ್ಲಾ ಕಾಯಕ ಜೀವಿಗಳು ಈ ಚಳುವಳಿಯ ಭಾಗವಾಗಿರುವುದರಿಂದ ಇದು ಅಕ್ಷರಶಹ ಬದುಕಿಗೆ ಚಲನೆ ನೀಡುವ ಚಳುವಳಿ.

---

[54] ಕನ್ನಡ ನಿಘಂಟು ಸಂ.-೩ ಕ.ಸಾ.ಪ. ಬೆಂಗಳೂರು.

ಚಳುವಳಿಯ ಸ್ವರೂಪ :

ವಚನಕಾರರ ಸ್ಥಾವರ ಮತ್ತು ಜಂಗಮ ಪರಿಕಲ್ಪನೆಗಳನ್ನು ಪರಿಸರಕ್ಕೆ ಅನ್ವಯಿಸಿ ಹೇಳುವುದಾದರೆ, ನಿಸರ್ಗ ಮತ್ತು ಅದರ ಒಂದು ಭಾಗವಾದ ಜೀವಿಗಳು ನಿಸರ್ಗವನ್ನು ತಮ್ಮ ಕೈಗೊಂಬೆ ಎಂದು ತಿಳಿದು ಕರ್ಮಸಿದ್ಧಾಂತ, ಪಾಪ-ಪುಣ್ಯ, ಸ್ವರ್ಗ-ನರಕ, ವಿಧಿ, ಹಣೆಬರಹ, ಫಲಜ್ಯೋತಿಷ್ಯ, ಪಂಚಾಂಗ, ಶಕುನ ಇತ್ಯಾದಿ ಸ್ಥಾವರ ಕಲ್ಪನೆಗಳನ್ನು ಹುಟ್ಟುಹಾಕಿ ಭೋಗ ಜೀವನಕ್ಕೆ ಒತ್ತು ಕೊಟ್ಟು ಒಟ್ಟು ಪರಿಸರವನ್ನು ಹಾಳುಗೆಡವಿದ್ದಾರೆ. ಆದ್ದರಿಂದ ಪರಿಸರ ಸಂರಕ್ಷಣೆ ಇಂದಿನ ತುರ್ತು ಅಗತ್ಯಗಳಲ್ಲಿ ಒಂದಾಗಿದೆ. ಗಾಂಧೀಜಿಯ ಒಂದು ಮಾತಿದೆ. "ಈ ನಿಸರ್ಗಕ್ಕೆ ಮನುಷ್ಯರ ಎಲ್ಲ ಆಸೆಗಳನ್ನು ಪೂರೈಸುವ ಶಕ್ತಿಯಿದೆ. ಆದರೆ ಒಂದೇ ಒಂದು ದುರಾಸೆಯನ್ನಲ್ಲ." ಎಂಬುದು ಇದರರ್ಥ. ನಾವು ಪರಿಸರದೊಂದಿಗೆ ಬದುಕಬೇಕು. ಅದೂ ಸದಾಶಯದೊಂದಿಗೆ, ಅಂದಾಗ ನಮ್ಮ ಎಲ್ಲ ಆಸೆಗಳು ಪೂರೈಕೆಯಾಗುತ್ತವೆ. ಪರಿಸರವೆಂದರೆ ಕೇವಲ ಸುತ್ತಲಿನ ಭೂಮಿ ಮಾತ್ರವಲ್ಲ. ಪಂಚಭೂತಗಳೊಂದಿಗೆ ಚರಾಚರ ವಸ್ತುಗಳೆಲ್ಲ ಸೇರಿದ ಅಖಂಡ ವಿಶ್ವ. ಆದರೆ ದುರಂತದ ಸಂಗತಿಯೆಂದರೆ ನಮ್ಮ ಪಂಚಭೂತಗಳು ಇಂದು ಅತ್ಯಂತ ಕಲುಷಿತವಾಗಿವೆ. ಪರಿಸರ ವಿಜ್ಞಾನಿಗಳು ನಿರಂತರ ಎಚ್ಚರಿಸುತ್ತಿದ್ದಾರೆ. ಭೂಮಿ ಬಿಸಿಯಾಗುತ್ತಿದೆ. ಅಂತರ್ ಜಲ ಪ್ರಮಾಣ ಕಡಿಮೆಯಾಗಿದೆ. ಋತುಮಾನಗಳು ಬದಲಾಗುತ್ತಿವೆ. ಹಿಮ ಕರಗುತ್ತಿದೆ. ಹೀಗೆ ಅನೇಕ ರೀತಿಯ ವ್ಯತ್ಯಯ (ಬದಲಾವಣೆ) ಗಳು ನಮ್ಮ ಪರಿಸರದಲ್ಲಾಗುತ್ತಿವೆ. ಇದಕ್ಕೆ ಮುಖ್ಯ ಕಾರಣವೆಂದರೆ, ಮನುಷ್ಯರ ಅಹಂ ಮತ್ತು ದುರ್ಬಲವಾದ ಮನಸ್ಸು ಹಾಗೂ ಸಂಪತಿನ ಕ್ರೋಢೀಕರಣ, ಬಸವಾದಿ ಶರಣರ ಆಶಯವೆಂದರೆ ಅಹಂ ನಿರಸವಾಗುವುದು ಮನಸ್ಸಿನ ಪ್ರಾಬಲ್ಯ ಹೆಚ್ಚಿಸುವುದು ಮತ್ತು ಅಸಂಗ್ರಹ ತತ್ವವನ್ನು ಜಾರಿಗೆ ತರುವುದಾಗಿತ್ತು.

> "ಎರೆದಡೆ ನನೆಯದು, ಮರೆದಡೆ ಬಾಡದು,
> ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ:
> ಕೂಡಲಸಂಗಮದೇವಾ, ಜಂಗಮಕ್ಕೆರೆದಡೆ ಸ್ಥಾವರ ನೆನೆಯಿತ್ತು."[೫೫]

---

[55] ಬಸವಣ್ಣನವರ ವಚನ ಸಂಪುಟ-೧ ಸಂ. ಡಾ.ಎಮ್.ಎಮ್.ಕಲಬುರ್ಗಿ.

ಜೀವಿಯ ಬದುಕನ್ನು ಸಮಾಜವನ್ನು ಇಂಥ ಪೊಳ್ಳು ಸಿದ್ಧಾಂತಗಳಲ್ಲಿ ಕಟ್ಟಿ ಹಾಕುವ ಮೂಲಕ ಜಡತೆಯನ್ನು ಸಾರುವ ಲಿಂಗಪೂಜೆ ಕೂಡ ಸ್ಥಾವರದ ಕುರುಹುಆಗಬಹುದೆಂಬ ಸೂಚನೆ ಈ ವಚನದಲ್ಲಿದೆ. ಜಂಗಮಕ್ಕೆರೆದರೆ ಸ್ಥಾವರ ನೆನೆಯುವುದೆಂಬ ಅದ್ಭುತ ತಿರುವು ಜೀವಿಗಳ ಒಳಗೆ ಆತ್ಮ ವಿಶ್ವಾಸ ಹೆಚ್ಚಿಸಿ ತಮ್ಮ ಮೇಲೆ ತಾವು ನಿಯಂತ್ರಣ ತಂದುಕೊಳ್ಳಲು ಸಹಾಯ ಮಾಡುತ್ತದೆ. ಜೊತೆಗೆ ಸ್ವಾಂತ್ರಂತ್ರ್ಯ ಹೊರಗಿನ ಲೋಕದಿಂದ ವ್ಯಕ್ತಿಗಳಿಗೆ ವರ್ಗಾಯಿಸುತ್ತದೆ. ಆಗ ಸಮಾನತೆಯ ನನ್ನೊಳಗೆ ನೀನಿರುವೆ ಎಂಬ ಆರ್ದ್ರಭಾವ ನೆಲೆಗೊಂಡು ಯಾರು ಯಾರನ್ನು ಶೋಷಣೆಗೊಳಪಡಿಸಿ ಲಾಭ ಪಡೆಯುವುದಾಗಲಿ ಅದಕ್ಕಾಗಿ ಹಿಂಸೆಗಿಳಿಯುವುದಾಗಲಿ ಸಾಧ್ಯವಾಗದು.

> "ನಾನೊಂದು ಸುರಗಿಯನೇನೆಂದು ಹಿಡಿವೆನು ?
> ಏನಕಿತ್ತೇನನಿರಿವೆನು ?
> ಆನವೆಲ್ಲ ನೀನಾಗಿಪ್ಪ ಕಾಣಾ ! ರಾಮನಾಥ" ॥[೫೬]

ಹೀಗೆ ಜಗತ್ತಿನ ಚರಾವಸ್ತುಗಳಲ್ಲಿ ದೇವರನ್ನು ಕಾಣುವ ದಾಸಿಮಯ್ಯ ಅಹಿಂಸೆಯ ಬಹು ದೊಡ್ಡ ಅಸ್ತ್ರವನ್ನು ನಮ್ಮ ಕೈಗೆ ನೀಡುತ್ತಾನೆ. ಈ ಅಸ್ತ್ರವು ಎಲ್ಲ ಜೀವಿಗಳನ್ನು ತನ್ನಂತೆಯೇ ಪರಿಭಾವಿಸುವ ಜೀವ ಚೈತನ್ಯವನ್ನು ನೀಡುತ್ತವೆ. ಆಗ ಜಡ (ಸ್ಥಾವರ)ವಾದ ಮಾನವ ಮಾನವರ ಮದ್ಯದ ಸಂಬಂಧಗಳು, ಮಾನವ–ಮಾನವೇತರ ಜೀವಿಗಳ ಸಂಬಂಧಗಳು ಹಾಗೇಯೇ ಮಾನವ ಮತ್ತು ನಿಸರ್ಗದ ಸಂಬಂಧಗಳಲ್ಲಿ ಜೀವಶಕ್ತಿಯು ಚಲನಶೀಲಗೊಳ್ಳುವ ಮೂಲಕ ಜಂಗಮ ರೂಪಿಯ ಜೀವಕಾರುಣ್ಯದ ವ್ಯವಸ್ಥೆಗೆ ಮುಂದಾದದ್ದು ವಚನ ಚಳುವಳಿಯ ಬಹುದೊಡ್ಡ ಕಾಣಿಕೆ.

ಭಾರತೀಯ ಸಂದರ್ಭದಲ್ಲಿ ಹೆಣ್ಣಿನ ಮೇಲೆ ಆದ ಆಕ್ರಮಣದಂತೆ ಪ್ರಕೃತಿ ಮೇಲೆಯೂ ಆಕ್ರಮಣ ನಡೆದಿದೆ. ಆರ್ಥಿಕವಾಗಿ ಪುರುಷ ಸದೃಢವಾದಂತೆ, ಅವನ ಆಸೆ ಆಕಾಂಕ್ಷೆಗಳು ಹೆಚ್ಚಾದವು. ಅದರಂತೆ ಹೊಸ ವಸ್ತುವಿನ ಉತ್ಪಾದನೆಯಾದವು. ಇದರಿಂದ ನಿಸರ್ಗದ ಮೇಲೆ ದಾಳಿ ಮಾಡಲು ಅನುವಾಯಿತು.

---

[56] ಜೇಡರ ದಾಸಿಮಯ್ಯನ ವಚನ – ಸ.ವ.ಸಂ.–೭, ಸಂ. ಡಾ.ಎಮ್.ಎಮ್.ಕಲಬುರ್ಗಿ – ವ.ಸಂ.೧೦೩, ಪು.ಸಂ.೨೬೩.

ನಮಗೆ ಒಂದು ಬಿಳಿ ಹಾಳೆ ಯಾವ ಲೆಕ್ಕಕ್ಕೂ ಇಲ್ಲ, ಸಣ್ಣ ತಪ್ಪಾದರೂ ಸರಿ ಹರಿದು ಬಿಸಾಕುತ್ತೇವೆ. ಆದರೆ ಒಂದು ಹಾಳೆ ತಯಾರಾಗಲು ಅರ್ಥ ಮರ ಬೇಕಾಗಬಹುದು. ಮರವೆಂದರೆ ಕೇವಲ ನಾಲ್ಕು ಟೊಂಗೆಗಳ ಒಂದು ಆಕೃತಿಯಲ್ಲ, ನೂರಾರು ಜನರಿಗೆ ನೆರಳಾಗಿ ಆಮ್ಲಜನಕದ ಘಟಕವಾಗಿ ಸಾವಿರಾರು ಪಕ್ಷಿಗಳಿಗೆ ಆಶ್ರಯವಾಗಿ, ಉರುವಲಾಗಿ, ಉಪಯುಕ್ತ ವಸ್ತುವಾಗಿ ಹೀಗೆ ಬಹುಪಯೋಗಿಯಾಗಿ ಬಳಕೆಯಾಗುವ ಒಂದು ಪರಿಸರ. ಹಾಗೇ ಒಂದು ಸಣ್ಣ ಗುಂಡು ಸೂಜಿ ಕೂಡ ಉತ್ಪಾದನೆಯಾಗಲು ಬೇಕಾಗುವ ಕಚ್ಚಾ ಗಣಿ ಅದೆಷ್ಟೋ ಪಾಲು.

ವಸ್ತು ಮೋಹ :

ವಸ್ತುಗಳ ಲೋಕ ವೆಂದು ಕರೆಯುತ್ತೇವೆ. ವಸ್ತು ವ್ಯಾಮೋಹ ಹೆಚ್ಚಾಗಿದೆ. ಹತ್ತು ರೂಪಾಯಿ ಆದಾಯ ಹೆಚ್ಚಾದರೆ ಹೊಸ ವಸ್ತು ತರುವ ಆಲೋಚನೆ ಮಾಡುತ್ತೇವೆ. ಇದರ ಅಡ್ಡಪರಿಣಾಮಗಳ ಬಗ್ಗೆ ಎಂದು ಆಲೋಚಿಸಿಲ್ಲ. ೧೯೮೫ರ ಮೇ ತಿಂಗಳಲ್ಲಿ ಅಂಟಾರ್ಟಿಕ್ ಮೇಲಿನ ವಾತಾವರದಣದ ಓಜೋನ್ ಪದರದಲ್ಲಿ ರಂಧ್ರವೊಂದು ಕಾಣಿಸಿಕೊಂಡಾಗ ವಿಶ್ವದ ವಿಜ್ಞಾನಿಗಳ ಸಮುದಾಯ ತಲ್ಲಣಗೊಂಡಿತ್ತು. ಓಜೋನ್ ಎಂದರೆ ಭೂಮಿಯಿಂದ ಸುಮಾರು ೩೦ ಕಿ.ಮೀ. ಇತ್ತರದಲ್ಲಿ ಭೂಮಿಗೆ ಹಿಡಿದಿರುವ ಒಂದು ಕೊಡೆ ಇದು ಭೂಮಿಯ ಮೇಲಿನ ಎಲ್ಲ ಜೀವ ಸಂಕುಲಗಳನ್ನು ಸೂರ್ಯನ ನೇರವಾದ ಅತೀ ನೇರಳೆ ಕಿರಣಗಳಿಂದ ರಕ್ಷಿಸುತ್ತದೆ. ಇಂಥ ಜೀವ ರಕ್ಷಕ ಓಜೋನ್ ಪದರಿಗೆ ರಂಧ್ರ ಬೀಳುತ್ತಿರುವುದು ಜೀವ ಸಂಕುಲದ ವಿನಾಶದ ಸಂಕೇತವಾಗಿದೆ. ದೈನನಿತ್ಯ ನಾವು ಬಳಸುವ ವೈಭವದ ವಸ್ತು (ಇಂಧನ ಸಾಮಗ್ರಿ, ರೆಫ್ರಿಜಲ್ ಕ್ಲೋರೀನ್, ಫ:ಲೋರಿನ್, ಇಂಗಾಲದ ಕ್ರಿಮಿನಾಶಕ ಇತ್ಯಾದಿ) ಗಳಿಂದ ಓಜೋನ್ ಹಾಳಾಗಿ ಭೂಮಿಯ ಶಾಖ ಹೆಚ್ಚಾಗುತ್ತಿದೆ. ನಗರೀಕರಣದೆ ಇಂದ ಕಾಡು ನಾಡಾಗುತ್ತಿದೆ. ಇದರಿಂದ ಋತುಮಾನವು ಬದಲಾಗಿದೆ. ಇದರಿಂದ ಹಿಮ ಕರಗಿ ಸಮುದ್ರದ ನೀರಿನ ಮಟ್ಟ ಹೆಚ್ಚಾಗುತ್ತಿದೆ. ಕೆಲವೇ ವರ್ಷಗಳಲ್ಲಿ ಕಡಲ ತೀರದ ಊರುಗಳು ಮುಳುಗಿ ಮುಂದೆ ಎಲ್ಲರೂ ಮುಳುಗುತ್ತೇವೆ. ಅದಕ್ಕಾಗಿಯೇ ವಚನಕಾರರು ಖಾಸಗಿ ಆಸ್ತಿಯನ್ನು ವಿರೋಧಿಸಿ ಸಂಗ್ರಹ ತತ್ವದ ದಾಸೋಹವನ್ನು ರೂಢಿಸಿದರು.

ಅನ್ನದೊಳಗೊಂದಗುಳ, ಸೀರೆಯೊಳಗೊಂದೆಳೆಯ ಇಂದಿಂಗೆ ನಾಳಿಂಗೆನೆಂದೆನಾದೊಡೆ ನಿಮ್ಮಾಣೆ ಎನ್ನುವ ಬಸವಣ್ಣನವರ ಮಾತಿನಲ್ಲಿ ಅಸಂಗ್ರಹ ತತ್ವದ ಆಶಯಗಳಿವೆ. ಸರಳ ಬದುಕಿನ ಸೂತ್ರವಿದೆ. ಸರಳ ಬದುಕಿನಿಂದ ಮಾತ್ರ ಜಗತ್ತು ಸುಂದರವಾಗಿಡಲು ಸಾಧ್ಯವಿದೆ. ಅದಕ್ಕಾಗಿ ನಮ್ಮ ಪಂಚಭೂತಗಳು ಶುದ್ಧವಾಗಿರಬೇಕು. ಜೊತೆಗೆ ನಮ್ಮ ಮನಸ್ಸು ಕೂಡ. ಪಂಚಭೂತಗಳಾದ ನೆಲ, ಜಲ, ಅಗ್ನಿ, ಗಾಳಿ ಮತ್ತು ಆಕಾಶಗಳು ಶುದ್ಧವಾಗಿಡುವ ಕುರಿತು ಚೆನ್ನಬಸವಣ್ಣನ ನಿಲುವೆಂದರೆ,

> "ನಾನು ಮೆಟ್ಟುವ ಭೂಮಿಯ ಭಕ್ತನ ಮಾಡಿದಲ್ಲದೆ ಮೆಟ್ಟೆನಯ್ಯ
> ನಾ ನೋಡುತಿಹ ಆಕಾಶದ ಚಂದ್ರ ಸೂರ್ಯರ
> ಭಕ್ತನ ಮಾಡಿದಲ್ಲದೆ ನಾ ನೋಡೆನಯ್ಯ
> ಆಲವ ಭಕ್ತನ ಮಾಡಿದಲ್ಲದೆ ನಾನು ಬಳಸೆನಯ್ಯ
> ನಾನು ಕೊಂಬ ಹದಿನೆಂಟು ಧಾನ್ಯವ ಭಕ್ತನ ಮಾಡಿದಲ್ಲದೆ
> ಕೊಳ್ಳೆನು ಕೂಡಲ ಚನ್ನಸಂಗಾ ನಿಮ್ಮಾಣೆ"[೫೭]

ಭೂಮಿಯನ್ನೊಳಗೊಂಡ ಎಲ್ಲ ವಸ್ತುಗಳನ್ನು ಭಕ್ತಮಾಡೋದು ಎಂದರೆ ಅವನನ್ನು ಪರಿಶುದ್ಧವಾಗಿ ಮಾಡುವುದು, ಭಕ್ತ ಎಂದರೆ ಆರಾಧನೆ, ಪೂಜೆ ಎಂದರ್ಥ. ನಾವು ಯಾವ ವಸ್ತುಗಳನ್ನು ಆರಾಧಿಸುತ್ತೇವೆಯೋ, ಪೂಜಿಸುತ್ತೇವೆಯೋ ಅವುಗಳನ್ನು ಮಲೀನಗೊಳಿಸುವುದಿಲ್ಲ. ದೇವರನ್ನು ಆರಾಧಿಸುತ್ತೇವೆಂದರೆ ದೇವಾಲಯವನ್ನು ಮಲೀನಗೊಳಿಸುವುದಿಲ್ಲ. ದುರಂತವೆಂದರೆ ಭೂಮಿ, ಆಕಾಶ, (ಚಂದ್ರ) ಅಗ್ನಿ, (ಸೂರ್ಯ), ಜಲ, (ಗಂಗೆ) ಮೊದಲಾದವುಗಳನ್ನು ಆರಾಧಿಸಿಯೂ ಅಪವಿತ್ರಗೊಳಿಸಿದ್ದೇವೆ ಹಾಗೆ ನೋಡಿದರೆ ಜನಪದ ಗರತಿಯ ಮೊದಲ ನಮನ ಭೂಮಿಗಿದೆ.

> "ಎದ್ದೊಂದು ಗಳಿಗೆಯ ಯ್ಯಾರ್‍ಯಾರ ನೆನೆಯಲಿ
> ಎಳ್ಳು ಜೀರಗೆ ಬೆಳೆವ । ಭೂದೇವಿಯ
> ಎದ್ದೊಂದು ಗಳಿಗೆ ನೆನದೇನ" ॥[೫೮]

---

57 ಚನ್ನಬಸವಣ್ಣನವರ ವ.ಸಂ. -ಸಂಪುಟ-೩ ಸಂಪಾದಕ :ಡಾ.ಬಿ.ವ್ಹಿ. ಮಲ್ಲಾಪೂರ, ವ.ಸಂ. ೮೮ ಪು.ಸಂ.೨೭.

58 ಗರತಿಯ ಹಾಡು - ಹಲಸಂಗಿ ಗೆಳೆಯರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ನಮ್ಮ ಪೂರ್ವಜನರಿಗೆ ಭೂಮಿಯ ಶಕ್ತಿ ಮತ್ತು ಗುಣ ಗೊತ್ತಿದ್ದವು. ಅದಕ್ಕಾಗಿ ಅದನ್ನು ಆರಾಧಿಸಿದರು, ಪ್ರೀತಿಸಿದರು. ಭೂಮಿಯನ್ನು ಹಾಳು ಮಾಡಲಿಲ್ಲ. ರಾಸಾಯನಿಕ ಗೊಬ್ಬರ, ಕೀಟನಾಶಕ, ಪ್ಲಾಸ್ಟಿಕ್ ಮೊದಲಾದ ಬಳಕೆಗಳಿಂದ ಭೂಮ ಇಯ ಸತ್ವ ನಾಶವಾಗುತ್ತಿದೆ. ಅಲ್ಲದೆ ಸಂಪತ್ತಿನ ದಾಹದಿಂದ ಹೆಚ್ಚು ಇಳುವರಿ ಬರುವ ಹೈಬ್ರಿಡ್ ತಳಿಗಳನ್ನು ಬಳಸಿ ಭೂಮಿಯ ಫಲವತ್ತತೆ ಕಡಿಮೆಯಾಗುತ್ತಿದೆ. ಹಿಂದೆ ಭೂಮಿ ಕಾಯ್ದಿಡುವ ಪದ್ಧತಿ ಇತ್ತು. ನಮ್ಮಲ್ಲಿ ವರ್ಷಕ್ಕೆರಡು ತಿಂಗಳಾದರೂ ಒಮ್ಮೊಮ್ಮೆ ಒಂದೇ ಬೆಳೆ ಪಡೆದು ಸಂತೃಪ್ತರಾಗಿದ್ದೆವು. ಅದಕ್ಕೆ ಚನ್ನಬಸವಣ್ಣನವರು ಭೂಮಿಯ ಭಕ್ತನ ಮಾಡಬೇಕೆಂದಿದ್ದಾರೆ. ಒಂದು ಉದಾಹರಣೆ ಗಮನ ಇಸುವುದಾದರೆ ಗಂಗಾಸ್ನಾನ ತುಂಗಾಪಾ ವೆಂಬ ನಾಣ್ಣುಡಿಯೊಂದಿದೆ. ಇಂದು ಗಂಗೆಯಲ್ಲಿ ಮಿಂದರೆ (ಸ್ನಾನ ಮಾಡಿದರೆ) ಎಲ್ಲ ಚರ್ಮ ರೋಗಗಳು ತಗಲುತ್ತವೆಂದು ವೈದ್ಯ ಲೋಕ ದೃಢಪಡಿಸಿದೆ. ಅಷ್ಟರ ಮಟ್ಟಿಗೆ ಗಂಗೆಯನ್ನು ಅಪವಿತ್ರಗೊಳಿಸಿದ್ದೇವೆ. ಭೂಮಿಯ ಜಲಮಾಲಿನ್ಯಕ್ಕೆ ಒಂದು ಉದಾ: ಎಂದರೆ ಕೇವಲ ಅಮೇರಿಕದ ನೀರಿನಲ್ಲಿ ೫೦ ಸಾವಿರ ವಾಣಿಜ್ಯ, ೬೫ ಸಾವಿರ ಮೀನು ಹಿಡಿಯುವ ಹಡಗುಗಳು, ೧೬೦೦ ಸರ್ಕಾರಿ ಹಡಗುಗಳು ಸುಮಾರು ೮ದಶಲಕ್ಷ ಮನೋರಂಜನಾ ದೋಣಿಗಳು ತೇಲುತ್ತವೆ. ಇವುಗಳ ಹೊಲಸು ವಿಸರ್ಜನೆಯೊಂದಿಗೆ ೫ ದಶಲಕ್ಷ ಜನರ ಮಲಮೂತ್ರ ವಿಸರ್ಜನೆಯೂ ಸೇರಿರುತ್ತವೆ. ಸಾಮಾನ್ಯವಾಗಿ ನಗರ ಪ್ರದೇಶಗಳ ಚರಂಡಿ ನೀರು ಶುದ್ಧ ನೀರಿಗೆ ಬೆರಕೆಯಾಗಿ ಜಲಮಾಲಿನ್ಯ ಉಂಟಾಗುತ್ತದೆ. ನಮ್ಮಲ್ಲಿ ಅನೇಕ ರೋಗಗಳ ತವರು ಅಶುದ್ಧ ನೀರು. ಪಟ್ಟಣಗಳಲ್ಲಿ ಚರಂಡಿ ಮತ್ತು ಕುಡಿಯುವ ನೀರು ಜೊತೆಯಾಗಿಯೇ ಚಲಿಸುವುದರಿಂದ ವರ್ಷಕ್ಕೆ ೧೬,೬೦೦ ಎಳೆಯ ಮಕ್ಕಳ ಸಾವಾಗುತ್ತದೆ. ಮನುಷ್ಯರ ದೇಹದಲ್ಲಿನ ರಕ್ತನಾಳಗಳು ಸಹ ಶುದ್ಧ ರಕ್ತನಾಳ ಅಶುದ್ಧ ರಕ್ತನಾಗಳೆಂದಿವೆ. ಆದರೆ ಮಳೆ ನೀರು, ನಾಲಿ ನೀರು, ಬೆರೆತುಕೊಂಡು ಶುದ್ಧ ನೀರು ಸೇರುವುದು ಜಲ ಮಾಲಿನ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ನೀರಲ್ಲಿದ್ದ ಮೀನುಗಳು ಮಾಯವಾಗಿವೆ. ಭೂಮಿಯ ಮೇಲೆ ಜೀವಿ ಬದುಕಲು ಗಾಳಿಯ ನಂತರ ನೀರೇ ಮುಖ್ಯವಾಗಿದೆ. ಅದಕ್ಕಾಗಿ ಶರಣರು ಜಲವ ಭಕ್ತನ ಮಾಡಬೇಕೆಂದು ಸಾರಿದ್ದಾರೆ.

ನಮ್ಮ ಕಾಳುಗಳೂ ಅಷ್ಟೇ. ಇಂದು ಎಲ್ಲ ಆಹಾರದ ಕಲುಷಿತವಾಗಿದೆ. ರಾಸಾಯನ ಲೇಪಿತ ಧಾನ್ಯಗಳು ವಿಷಪೂರಿತವಾಗಿರುತ್ತವೆ. ಕಾಳುಗಳನ್ನು ಹಸನಾಗಿಸುತ್ತಿಲ್ಲ. ದೇಶಿಯ ಎಲ್ಲ ತಳಿಗಳು ಇಲ್ಲವಾಗಿವೆ. ಬೀಜಕ್ಕಾಗಿ ಸಂಪೂರ್ಣ ಪರಾವಲಂಬಿಯಾಗಿದ್ದೇವೆ. ಇದರಿಂದ ನಿರ್ಬೀಜೀಕರಣ ಸಮಸ್ಯೆ ಎದುರಾಗುತ್ತಿದೆ. ಇದ್ದ ಆಹಾರದಲ್ಲಿ ಪ್ರೋಟೀನ್ ಕೊರತೆಯಾಗಿದೆ.

ಹೈಬ್ರಿಡ್ ಧಾನ್ಯದಲ್ಲಿ ರೋಗ ನಿರೋಧಕ ಶಕ್ತಿಯೇ ಇಲ್ಲ. ಈ ಕುರಿತು ನಾವು ಯಾರೂ ಚಿಂತನೆ ಮಾಡಿಲ್ಲ. ಒಂದು ಜೊತೆ ಬಟ್ಟೆ ಖರೀದಿಸಲು ಕನಿಷ್ಠ ಎರಡು ತಾಸು ವ್ಯಯ ಮಾಡುತ್ತೇವೆ. ಆದರೆ ಫಾಸ್ಟ್-ಫುಡ್ ಸೇವಿಸಲು ಒಂದು ಕ್ಷಣ ಕೂಡ ಆಲೋಚಿಸುತ್ತಿಲ್ಲಾ. ಅದಕ್ಕೆ ಬಸವಣ್ಣನವರು ನಮಗೆ ಉಣಲು ಕಲಿಸಿದ್ದಾರೆ. ಉಡಲು ಕಲಿಸಿದ್ದಾರೆ. ಅಕ್ಕಮಹಾದೇವಿ ಆಹಾರವ ಕಿರಿದು ಮಾಡಿರೆಂದು ಹೇಳುತ್ತಾಳೆ. ನಾವು ಮಾತ್ರ ಯಾವುದನ್ನು ಲೆಕ್ಕಿಸದೆ ಆರಾಮವಾಗಿದ್ದೇವೆ. ಮತ್ತು ಅವಸಾನದತ್ತ ಮುಖ ಮಾಡಿದ್ದೇವೆ. ಯಾಕೆ ಬಸವಾದಿ ಶರಣರು ಇವುಗಳ ಜಾಗೃತಿ ಉಂಟು ಮಾಡಿರುವರೆಂದರೆ ನಮ್ಮ ಆಹಾರ, ನಮ್ಮ ಪರಿಸರ, ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತವೆ. ಸಾತ್ವಿಕ ಪರಿಸರ_ಸಾತ್ವಿಕ ಆಹಾರ-ಸಾತ್ವಿಕ ಮನಸ್ಸಿನ ಮನುಷ್ಯರನ್ನು ನಿರ್ಮಾಣ ಮಾಡುತ್ತದೆ.

ಈ ಎಲ್ಲ ಕಾರಣಗಳಿಂದ ನಾವು ನೆಲ, ಜಲ, ಗಾಳಿ, ಸೂರ್ಯ, ಚಂದ್ರ, ಧಾನ್ಯ ಮೊದಲಾದವುಗಳನ್ನೊಳಗೊಂಡ ಜೀವ ಪರಿಸರ, ಭೌತಿಕ ಪರಿಸರ ಮತ್ತು ಸಾಂಸ್ಕೃತಿಕ ಪರಿಸರ ಸಂರಕ್ಷಿಸಿಕೊಳ್ಳಬೇಕಾದ ಅಗತ್ಯವಿದೆ.

ಕರ್ನಾಟಕದಲ್ಲಿ ರಾಜಕೀಯ ಇತಿಹಾಸ ಕ್ರಿ.ಪೂ. ೨ನೇ ಶತಮಾನದಲ್ಲಿ ಅದು ಶಾತವಾಹನದ ಉದಯದೊಂದಿಗೆ ಆರಂಭವಾಯಿತು. ಇವರ ನಂತರ ಕದಂಬರು ಉತ್ತರ ಕರ್ನಾಟಕದ ವೈಜಯಂತಿಯಲ್ಲಿ ಆಳಿದ ಪ್ರಥಮ ದೊರೆಗಳು, ಆದರೆ ಶಾತವಾಹನರ ಕಾಲದ ಸಾಮಾಜಿಕ ಆರ್ಥಿಕ ಸ್ಥಿತಿಗಳನ್ನು ತಿಳಿಯಲು ನೆರವಾಗುವ ಆಕರಗಳು ಬಹಳ ಕಡಿಮೆ. ಸುಮಾರು ೪೫೦ ವರ್ಷಗಳ ವರೆಗೆ ಆಳಿದ ಬಗ್ಗೆ ಶಾಸನಗಳು ಮಾಹಿತಿ ಕೊಡುತ್ತವೆ. ಇವರ ಪೂರ್ವದಲ್ಲಿದ್ದ ಮೌರ್ಯ ಕಾಲದ ಪದ್ಧತಿಗಳೇ ಸ್ವಲ್ಪ ಮಟ್ಟಿನ ಬದಲಾವಣೆ ಮಾಡಿಕೊಂಡು ಶಾತವಾಹನರ ಕಾಲದಲ್ಲೂ ಇದ್ದವರೆಂದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಆಧಾರ ಸಿಗುತ್ತವೆ. ಅಂದರೆ ಇವರ ಕಾಲದಲ್ಲೂ ಸಾರ್ವಜನಿಕರ ಆಡಳಿತ ವ್ಯವಸ್ಥೆ ಇತ್ತು. ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ ವೈಶ್ಯ, ಶೂದ್ರ, ಎಂಬ ವರ್ಗಗಳೆ ಸಂಪ್ರದಾಯವೇ ಚಾಲ್ತಿಯಲ್ಲಿತ್ತು. ಇನ್ನು ವ್ಯಾಪಾರ ವ್ಯವಹಾರಕ್ಕೆ ಹಲವು ವರ್ಗಗಳು ಇದ್ದವು.

ಆ ಕಾಲದಲ್ಲೂ ಧಾನ್ಯ ವ್ಯಾಪಾರಿ, ಹೂವಾಡಿಗ, ನೇಕಾರ, ಗಾಣಿಗ, ಕಂಚುಗಾರ, ಕಮ್ಮಾರ, ಚಮ್ಮಾರ, ಗಂಧಿಕ, ಬಡಿಗ, ಬೇಸ್ತ ಇತ್ಯಾದಿ ವೃತ್ತಿನಿರತ ಗುಂಪುಗಳಿದ್ದವೆಂದು ತಿಳಿದು ಬರುತ್ತವೆ.[೫೯] ಈ ವರ್ಗಗಳಲ್ಲಿ ಅಧಿಕಾರದ ಹಂತಗಳಿದ್ದು ಮಹಾರಥಿ ಮಹಾಭೋಜ ಇವರು ಸಾಮಂತರಾಗಿದ್ದುಕೊಂಡು ವಂಶಡಪಾರಂಪರ್ಯವಾಗಿ ನೆಲ ಆಳ್ವರಾಗಿದ್ದರೆಂದು ತಿಳಿದು ಬರುತ್ತವೆ.

ಇಲ್ಲಿನ ಉದ್ಯೋಗಕ್ಕೆ ವೃತ್ತಿ ಸಂಘಗಳ ಶ್ರೇಣಿಗಳು ಇದ್ದವೆಂದು ಶಾಸನದಿಂದ ತಿಳಿದು ಬರುತ್ತದೆ. ಶ್ರೇಣಿ ಎಂದರೆ ಗುಂಪು ಸಂಘವೆಂದೆ ತೆಗೆದುಕೊಳ್ಳಬೇಕಾಗುತ್ತದೆ. ಈ ಸಂಘಗಳು ಬಹಳ ಕಾಲದಿಂದ ಅಸ್ತಿತ್ವದಲ್ಲಿದ್ದು ವ್ಯವಹಾರದಲ್ಲಿ ಪ್ರಮಾಣಿಕತೆ ದಕ್ಷತೆಯನ್ನು ಹೊಂದಿದ್ದವು. ಆಗಿನ ಜನರು ಶಾಶ್ವತ ನಿಧಿ ತೊಡಗಿಸಿರುವುದಕ್ಕೆ ವ್ಯಾಪಾರಿಗಳಿಗೆ ಒಳ್ಳೆಯ ಬಂಡವಾಳ ಒದಗಿಸಿ ವಾಣಿಜ್ಯಕ್ಕೆ ಒಳ್ಳೆಯ ಹೆಸರುವಾಸಿಯಾಗಿದ್ದವು. ಶಾತವಾಹನರ ನಂತರ ಇಂದಿನ ಸತ್ಯಂ ಕಂಪನಿ ಇರಲಿಲ್ಲವೆಂಬುದೇ ಸಮಾಧಾನ. ಬನವಾಸಿಯ ಕದಂಬರು ಕ್ರಿ.ಶ. ೭೫೦ ರಿಂದ ೧೦೫೫ ಇವರು ಹೆಚ್ಚಾಗಿ ಶಾತವಾಹನರ ಕಾಲದ ಜಾತಿ ಪದ್ಧತಿ ಹಾಗೂ ಸಾಮಾಜಿಕ ಸಂಪ್ರದಾಯಗಳೇ ಮುಂದುವರೆಸಿಕೊಂಡು ಬಂದರು. ಇವರ ಆಳ್ವಿಕೆಯಲ್ಲಿ ೧೦–೧೧ನೇ ಶತಮಾನದ ಹೊತ್ತಿಗೆ ಕೀಳ್ಗುಂಟೆ, ವೇಳಾವಾಳ, ಇದು ಜನರ ಬಣಕ್ಕೆ ಸಲ್ಲುವ ಹೆಸರಾಗಿತ್ತು. ಇವರು ವಾಸ ಮಾಡುವ ಪ್ರದೇಶಕ್ಕೂ ಇದೇ ಹೆಸರಿನಿಂದ ಕರೆಯುತ್ತಿದ್ದರು. ಈ ಬಗೆಯ ಮಾಹಿತಿ ದಕ್ಷಿಣ ಭಾರತದ ಭಾಗದಲ್ಲಿ ಕಂಡು ಬಂದಿವೆ. ಈ ರೀತಿ ಆರಂಭವಾದ ಪ್ರಭುತ್ವದ ಆಳ್ವಿಕೆ ಕರ್ನಾಟಕದಲ್ಲಿ ಬಾದಾಮಿ ಚಾಲುಕ್ಯರ ಉತ್ಕರ್ಷದೊಂದಿಗೆ ಮತ್ತೊಂದು ಮಜಲನ್ನು ಪ್ರವೇಶಿಸಿದ ಸುಳಿವು ದೊರೆಯುತ್ತದೆ.

ನಿರ್ವಿವಾದವಾಗಿ ಹೇಳುವುದಾದರೆ ಈ ವಂಶವು ಕರ್ನಾಟಕದ ನೆಲದಲ್ಲಿ ಉಗಮಗೊಂಡ ಕೃಷಿಕ ಬಣಕ್ಕೆ ಸೇರಿದ ಆಳುವ ವರ್ಗ. ಅಂದರೆ ಈ ವರೆಗೂ ಇಲ್ಲಿದಿದ್ದಂತಹ ಒಂದು ಚೈತನ್ಯ ಈ ಶೂದ್ರ ಗುಂಪಿಗೆ ಸೇರಿದ ಒಂದು ರೈತ ಸಮುದಾಯಕ್ಕೆ ಒದಗಿ ಬಂದಿದೆ ಎಂಬುದು ಕರ್ನಾಟಕದ ಜನಸಮೂಹದ ಪ್ರಮುಖ ಭಾಗವಾದ ಕೃಷಿಕರಿಗೆ ಒದಗಿ ಬಂದ ಸದೃಢತೆಯ ಅಂಶ ಸೂಚಿಸುತ್ತದೆ. ಅಂದರೆ ಆವರೆಗೆ ಕರ್ನಾಟಕವನ್ನಾಳಿದ ರಾಜವಂಶರು ನಾವು ಊಹಿಸುವಂತೆ ವೃದ್ಧಿ, ಧರ್ಮದ ದ್ವಿಜ ಜಾತಿಗೆ ಸೇರಿದವರಾಗಿದ್ದರು.

[59] ಕಾಯಕ ಜೀವಿಗಳ ಚಳುವಳಿ – ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ ಸಂ.–೧, ಡಾ. ಸಿ. ವೀರಣ್ಣ ಪು.ಸಂ.೪೮

ಈ ಸಂದರ್ಭದಲ್ಲಿಯೇ ಊಳಿಗಮಾನ್ಯ ತನ್ನಲ್ಲಿಯೇ ಸದೃಢಗೊಳ್ಳುವಾಗ ಚತುರ್ವರ್ಣವೆಂಬ ಬಿಗಿ ಶ್ರಮ ವಿಭಜನೆಯ ತಳಹದಿಯಾಯಿತು. ಇದರ ಫಲವಾಗಿ ಬ್ರಾಹ್ಮಣ ಅಥವಾ ಕ್ಷತ್ರಿಯರಲ್ಲದ ಸಾಮಾಜಿಕ ಪಂಗಡಗಳು ರಾಜ್ಯಭಾರದಂತಹ ಕೆಲಸಗಳಿಗೆ ಕೈಯಿಕ್ಕುವುದು ಪ್ರಾರಂಭವಾಯಿತು.

ಇಂತಹ ಸಂದರ್ಭದಲ್ಲಿ ಕೃಷಿಕ ಬಣಕ್ಕೆ ಸೇರಿದ ಚಾಲುಕ್ಯರು ಅಧಿಕಾರಕ್ಕೆ ಬಂದರೆಂಬುದು ಕರ್ನಾಟಕ ಜನರ ಜೀವನದಲ್ಲಿ ಒಂದು ಬದಲಾವಣೆ ಗಾಳಿ ಬೀಸಿತು. ಇದನ್ನು ಗಮನಿಸಿದರೆ. ಕನ್ನಡ ರಾಷ್ಟ್ರೀಯತೆಯ ಜನರ ಜೀವನ ತನ್ನ ಉತ್ಪಾದನಾ ಸಂಬಂಧಗಳ ವಿಷಯದಲ್ಲಿ ಈ ಹಂತದಲ್ಲಿ ಬಂದಷ್ಟು ಸಮೂಹ ಆಧಾರಿತಗೊಳ್ಳುತ್ತಿರುವುದನ್ನು ಸೂಚಿಸುತ್ತದೆ. ಹೆಚ್ಚೆಚ್ಚು ಜನಸಮೂಹಗಳು ತಮ್ಮ ಸಾಮರ್ಥ್ಯದಲ್ಲಿ ಸುಧಾರಿತಗೊಂಡಂತೆಲ್ಲ ಒಂದು ರಾಷ್ಟ್ರೀಯತೆಯ ಬದುಕು ಮತ್ತಷ್ಟು ಸದೃಢಗೊಂಡಿರುತ್ತದೆ ಎಂಬ ಅಂಶದ ಹಿನ್ನಲೆಯಲ್ಲಿ ಚಾಲುಕ್ಯರ ಆಡಳಿತವನ್ನು ನಾವಿಲ್ಲಿ ಪರಿಗಣಿಸಬಹುದಾಗಿದೆ. ಕಾರಣ ೮ನೇ ಶತಮಾನದ ಆನಂತರದ ತಾಮ್ರ ಶಾಸನ ಮತ್ತು ಶಿಲಾಶಾಸನಗಳಲ್ಲಿ ರಾಜರ ಗೋತ್ರಗಳು ಕಂಡು ಬಂದಿಲ್ಲ. ಇದರರ್ಥ ವೈದಿಕ ಸಂಪ್ರದಾಯದ ಹಿಡಿತ ತಪ್ಪಿ ಹೋಗಿತ್ತು. ಎಂಬುದುನಷ್ಟವಾಗುತ್ತದೆ.

ಇವರ ಹೆಸರಿನಲ್ಲಿಯೇ ಎದ್ದು ಕಾಣುವಂತೆ ಬಹುಮಟ್ಟಿಗೆ ಇವರು ಒಕ್ಕಲಿಗ ಬಣಕ್ಕೆ ಸಂಬಂಧಿಸಿದವರಾಗಿದ್ದು, ಇವರು ಬದಾಮಿಯ ಅಕ್ಕಪಕ್ಕದ ಪ್ರದೇಶದಿಂದ ಬಂದು ಏಳಿಗೆ ಹೊಂದಿದವರು ಇರಬೇಕೆಂಬುವುದು ವಿದ್ವಾಂಸರ ಅಭಿಪ್ರಾಯ ಇವರ ಮೂಲ ಹೆಸರು ಚೆಲುಕಿ, ಸಲುಕಿ, ಸಲ್ಕಿ ಎಂಬ ಕನ್ನಡದ ಪದ ಇದು ಕೃಷಿ ಉಪಕರಣದ ಹೆಸರು, ಪ್ರಾಚೀನ ಬುಡಕಟ್ಟು ವ್ಯವಸ್ಥೆಯಿಂದ ಪೂರ್ತಿಯಾಗಿ ವರ್ಗಾಧಾರಿತ ಶ್ರಮ ವಿಭಜನೆಯುಳ್ಳ ಹಾಗೂ ಅದನ್ನು ಸಂಘಟಿಸುವುದನ್ನು ಆಳ್ವಿಕೆ ನಡೆಸುವ ಉಗಮವನ್ನು ಶಾತವಾಹನರ ಆಳ್ವಿಕೆ ಸೂಚಿಸುತ್ತದೆ. ದೀರ್ಘಕಾಲಾವಧಿಯುದ್ದಕ್ಕೂ ಆಂತರಿಕವಾಗಿ ಉಂಟಾಗುತ್ತಲೇ ಬಂದ ಪರಿವರ್ತನೆಯ ಪ್ರಕ್ರಿಯೆಗಳನ್ನು ಇನ್ನೂ ತಾಯಂದಿರ ಹೆಸರಿನೊಂದಿಗೆ ತಮ್ಮನ್ನು ಗುರುತಿಸುವ ರೂಢಿಯನ್ನಿಟ್ಟುಕೊಂಡಿದ್ದ ಶಾತವಾಹನರ ಆಳ್ವಿಕೆಯ ಸಂಕೇತಿಸುತ್ತದೆ. ಇವರ ನಂತರ ಆಳಿದ ಕದಂಬರು ಕೂಡ ಒಂದು ಮರದ ಚಿಹ್ನೆಯನ್ನು ತಮ್ಮ ವಂಶದ ಅಭಿದಾನವಾಗಿ ಸ್ವೀಕರಿಸಿದ್ದು, ಕಂಡುಬರುತ್ತದೆ. ಬುಡಕಟ್ಟು ಸಂಸ್ಕೃತಿಯಲ್ಲಿ ಕಂಡು ಬರುವ 'ಟೋಟೆಂ'ಗಳ ಉಳಿಕೆಗೆ ತನ್ನ ಬುಡಕಟ್ಟು ಸ್ವಭಾವದ ಪ್ರಭಾವದಿಂದ ಪೂರ್ಣ ಆಚೆಗೆ ಬಂದಿರದ ಗುಂಪೊಂದರ ಸೂಚನೆಯನ್ನು ನೀಡುತ್ತದೆ

ನಂತರದಲ್ಲಿ ಕವಿರಾಜಮಾರ್ಗಕಾರರ ರಚನೆ. ಆ ಕಾಲ ಘಟ್ಟದಲ್ಲಿ ಕನ್ನಡ ಭಾಷೆಯ ಸೂತ್ರೀಕರಣಕ್ಕೆ ಪ್ರಭುತ್ವ ಕೈಗೊಂಡ ಪ್ರಯತ್ನದ ರೂಪವಾಗಿದೆ. ಆ ವರೆಗೆ ಜನಪದೀಯವಾಗಿ ಹರಡಿಕೊಂಡಿದ್ದ ಕನ್ನಡದ ಹಲವು ದೇಷಿ ರೂಪಗಳನ್ನು ಪರಿಷ್ಕರಿಸಿ ವ್ಯಾಕರಣ ರಚಿಸಿ ಕನ್ನಡಕ್ಕೆ ಶಾಸ್ತ್ರಾಭಿವ್ಯಕ್ತಿಯ ಸಾಮರ್ಥ್ಯ ತಂದುಕೊಡಲು ಆಗಿನ ಆಳುವ ವರ್ಗ ನಡೆಸಿದ ಪ್ರಯತ್ನ ಶ್ಲಾಘನೀಯ.

ಕವಿರಾಜಮಾರ್ಗಕಾರನು ಹಿಂದಿನ ಕಾಲದ ಅರಸರು ಕೆರೆ ಕಟ್ಟೆಗಳು ವ್ಯವಸಾಯ ಸಾಧನಗಳ ನಿರ್ಮಾಣ ಇತ್ಯಾದಿ ಚಟುವಟಿಕೆಗಳು ನಡೆಸಿದ ಬಗ್ಗೆ ಕವಿರಾಜಮಾರ್ಗದಲ್ಲಿ ಉಲ್ಲೇಖಿಸಿದ್ದಾನೆ. ಆನ ವಿಭಾಗವಾದಂತೆ ಕೃಷಿ ಉತ್ಪಾದನೆ ವಹಿವಾಟು ಸಂಚಿತಗೊಳ್ಳತೊಡಗಿದ ನಂತರ ಅಸಮುದಾಯವನ್ನು ಸ್ಪಂದಿಸಲು ಅವರದೇ ಭಾಷೆಯಲ್ಲಿ ವ್ಯವಹರಿಸಲು ಹಾಗೂ ಆ ಭಾಷೆಯನ್ನು ಬೇರೆ ಬೇರೆ ಕ್ಷೇತ್ರದಲ್ಲಿ ಅಭಿವ್ಯಕ್ತಿಗೆ ತಕ್ಕುದಾಗುವಂತೆ ನಿರ್ಮಿಸಲು ಪ್ರಭುತ್ವ ಕ್ರೀಯಾಶೀಲವಾಗಿತ್ತೆಂದು ಕವಿರಾಜಮಾರ್ಗಕಾರ ತಿಳಿಸಿದ್ದಾನೆ.

ಅಂದರೆ ಅಂದಿನ ಸರಳತೆ, ಒಂದು ಭಾಷೆ ಅಷ್ಟೊಂದು ಬೆಳೆದು ಬರಬೇಕಾದರೆ ಆ ಕಾಲದ ಪೌರಾಣಿಕ ಕಥೆಯನ್ನು ಸಮಕಾಲೀನ ವರ್ತಮಾನದ ಪ್ರತಾಪಗಳನ್ನು ಪಂಪನಿಂದ ಚಿತ್ರಿತವಾಗಿರಲು ಸಾಧ್ಯವಿರಲಿಲ್ಲ. ಯಾವ ಸಮಾಜ ತನ್ನ ಉತ್ಪಾದನೆಯಲ್ಲಿ ಸಾಕಷ್ಟು ಹೆಚ್ಚುವರಿಯನ್ನು ಸಾಧಿಸುವುದಿಲ್ಲವೋ ಅಂತಹ ಸಮಾಜದಲ್ಲಿ ಈ ಬಗೆಯ ಮಹತ್ತರ ವಿಚಾರ ಹೊರಬರುತ್ತಿರಲಿಲ್ಲ. ಯಾವಾಗಲೂ ಸಮಾಜದ ಸಾಧನೆ ಬದಲಾವಣೆಗಳೇ ಮಹತ್ವದ ಕೃತಿಗಳ ಹಾಗೂ ಕಲಾಕೃತಿಗಳ ಅಸ್ತಿತ್ವಕ್ಕೆ ಬರುತ್ತವೆ. ಕಾವೇರಿಯಿಂದ ಗೋದಾವರಿಯ ವರೆಗೆ ಅಲ್ಲಿರುವ ಊರುಗಳ ಹೆಸರುಗಳೆಷ್ಟು ಬಿಟ್ಟರೆ ಇಡೀ ಭಾರತವೆಲ್ಲ ಕನ್ನಡ ನಾಡು ಎಂದು ಕರೆದಿದಾರೆ. ಇಷ್ಟಕ್ಕೇ ಸುಮ್ಮನಾಗದ ನೃಪತುಂಗ ಭಾರತದ ಜನರ ಸ್ವಭಾವವನ್ನು ಕೂಡ ತಿಳಿಸುತ್ತಾನೆ.

"ಪದನರಿದು ನುಡಿಯಲುಂ ನುಡಿ
ದುದನರಿದಾರಯಲುಮಾರ್ಪರ್ಕ್ಕ ನಾಡವರ್ಗಳ್
ಚದುರರ್ ನಿಜದಿಂ ಕುರಿತೋ
ದದೆಯಂ ಕೌವ್ಯಪ್ರಯೋಗ ಪರಿಣತಮುತಿಗಳ್"[೬೦]

[60] ಕವಿರಾಜಮಾರ್ಗಂ – ಸಂ. ಡಾ.ಕೆ. ಕೃಷ್ಣಮೂರ್ತಿ, ಪು.ಸಂ.೧೦.

ಇಲ್ಲಿ ಬಾಳುವವರೆಲ್ಲ ಕನ್ನಡಿಗರೇ ಅವರೆಲ್ಲ ಏಕತೆಯಿಂದ ಬಾಳಿದವರು ಎಂದಿದ್ದಾರೆ. ಭಾಷೆಯೆಂಬುದು ಜನರ ಜೀವನದೊಂದಿಗೆ ಅತ್ಯಂತ ನಿಕಟವಾದ ಸಂಬಂಧವನ್ನು ಹೊಂದಿರುತ್ತದೆ.

ಈ ದಿಸೆಯಲ್ಲಿ ಪಂಪನ ಕಾವ್ಯ ಬಹಳಷ್ಟು ಪ್ರಸಿದ್ಧಿ ಪಡೆಯುವಾಗ ಒಳಗೊಳಗೆ ಉಂಟಾದ ಸಂಘರ್ಷಗಳ ಹಿನ್ನಲೆಯಲ್ಲಿ ಮತ್ತಷ್ಟು ರೂಪಾಂತರಗಳಿಗೆ ಸನ್ನದ್ಧವಾಯಿತು.

ಇದೇ ರೀತಿ ಮಹಾಭಾರತದ ಭೀಷ್ಮ, ದ್ರೋಣ, ಕರ್ಣರ ನಡುವೆ ನಡೆದ ಸಂವಾದ ಪ್ರಸಂಗ ಕೂಡ ಪಂಪ ಭಾರತದಲ್ಲಿ ನೋಡಬಹುದು. "ಮನುಷ್ಯ ಜಾತಿ ತಾನೊಂದೆ ಎಲ್ಲಂ" ಎಂಬ ಹೇಳಿಕೆ ದ್ರೋಣ ಹಾಗೂ ಕರ್ಣರ ನಡುವೆ ಭೀಷ್ಮನಿಗೆ ಪಟ್ಟ ಕಟ್ಟುವ ಸಂದರ್ಭದಲ್ಲಿ ಹಣ್ಣಾದ ದೇಹ ಇಳಿಬಿದ್ದ ಕಣ್ಣಿನರೆಪ್ಪೆ ಜೊತೆಗೆ ಅವನನ್ನು, ಇನ್ನೊಬ್ಬರು ಕೈ ಹಿಡಿದು ನಡೆಸುವ ಸ್ಥಿತಿ ಹೀಗಿರುವಾಗ ಅವನಿಂದ ಶಸ್ತ್ರಾಸ್ತ್ರಗಳು ಹೆಗಲಿಗೇರಿಸಲು ಪ್ರಧಾನವಿಲ್ಲವೆಂದ ಕರ್ಣ ಅವನಿಗೆ ಪಟ್ಟಕಟ್ಟಲು ಅಲ್ಲಗಳೆಯುತ್ತಾನೆ.

ಇದೇ ಸಂದರ್ಭಕ್ಕೆ ಕಾಯುತ್ತಿರುವಂತೆ ದ್ರೋಣ ಕರ್ಣನನ್ನು ಕುರಿತು ನಾಲಿಗೆ ಕುಲಮಂ ಸೂಚಿಸುವಂತೆ ಕರ್ಣನ ಕುಲದ ಬಗ್ಗೆ ಮಾತನಾಡಿದಾಗ, ಕರ್ಣ ಜಾತಿಯ ಕುರಿತು ಈ ರೀತಿ ಮಾತನಾಡುತ್ತಾನೆ. "ಕುಲಂ ಕುಲಮಲತ್ತು ಛಲಕುಲಂ, ಗುಣಂಕುಲಂ, ಅಭಿಮಾನಂಕುಲಂ, ಅಣ್ಮುಕುಲಂ, ಇತ್ಯಾದಿ ಹೇಳುತ್ತಾ ಕುಲ ಹುಟ್ಟಿನಿಂದಲ್ಲ, ಪರಾಕ್ರಮ, ವ್ಯಕ್ತಿತ್ವಸಾಧನೆಗಳಿಂದ ನಿರ್ಧಾರವಾಗುತ್ತದೆ ಎಂದಿದ್ದಾನೆ.

ಪಂಪನು ಪಾಂಡಿತ್ಯಕ್ಕಾಗಿ ಬರೆದುರೂ ಕೂಡ ಮೇಲಿನಂತೆ ಮಾತನಾಡಿಸಿದ್ದಾನಲ್ಲ ಇದು ಅವನಲ್ಲಿಯ ಜನಪರ ಕಾಳಜಿ ಎತ್ತಿ ತೋರಿಸುತ್ತದೆ. ಇದು ಒಂದು ಕ್ರಾಂತಿಯೇ ಸರಿ.

ಮುಂದೆ ಬಂದ ವಚನ ಸಾಹಿತ್ಯ ವಸ್ತು, ವರ್ಣಕ ಭಾಷೆ, ಸಾಹಿತ್ಯಗಳಿಂದ ಭಿನ್ನ ಉದ್ದೇಶವುಳ್ಳದ್ದು ಪಾಂಡಿತ್ಯಕ್ಕೆಂದು ಬರೆದುದಲ್ಲ. ಇದು ಪರಮಾತ್ಮನ ಸಾಕ್ಷಾತ್ಕಾರದ ಸಾಧನವಾಗಿ ಹೊರಹೊಮ್ಮಿದ ಸಾಹಿತ್ಯ, ಪಾಂಡಿತ್ಯಕ್ಕಾಗಿ ಬರೆಯುತ್ತಿದ್ದರೆ ಬಸವಣ್ಣ

ಹೊಡೆಸಿಕೊಳ್ಳುವ ಪರಿಸ್ಥಿತಿ ಇರಲಿಲ್ಲ. ವಚನ ಚಳುವಳಿ ಉದಯವಾದುದು ಅನುಭಾವಮಾರ್ಗಿಯಾಗಿ ಎಂಬ ಉದ್ದೇಶಕ್ಕೆ ಆದ್ದರಿಂದಲೇ ಕಾವ್ಯ, ನಾಟಕ, ಶಾಸ್ತ್ರಗಳಿಗಿಂತಲೂ ಭಿನ್ನವಾದುದು.

ಶರಣರು ವಿಚಾರಾಂಧರಾಗಿ ವಿಶ್ವಾಸಹೀನರಾಗಿ ಜೀವನ ಕಂಡವರಲ್ಲ. ಮಾನವರ ಆಸೆ ಆಕಾಂಕ್ಷೆಗಳನ್ನು ಕಡೆಗಣಿಸಿದವರಲ್ಲ. ಹೀಗೆನಾದರೂ ಅವರು ಮಾಡಿದರೆ ಇವತ್ತಿನ ದಿನಗಳಲ್ಲಿ ಅವರ ಪೀಳಿಗೆಯವರೇ ದೇಶ ಆಳಬಹುದಿತ್ತು. (ಕುಟುಂಬ ರಾಜಕಾರಣ) ಶರಣರು ಜನರ ಆಶೋತ್ತರಗಳಿಗೆ ಸ್ಪಂದಿಸಿದವರು. ಜೀವನದ ಇತಿಮಿತಿಗಳ ಪರಿವೆಯಿಂದ ಕೂಡಿರಬೇಕು. ಪ್ರತಿಯೊಬ್ಬರು ಸತ್ಯಶುದ್ಧವಾಗಿರಬುದಕ್ಕೆ ಪ್ರಥಮ ಪ್ರಾಶಸ್ತ್ಯ ಕೊಟ್ಟರು.

ಬಸವಾದಿ ಪ್ರಮಥರ ಪೂರ್ವದ ಕೆಲವು ಶಿವಶರಣರ ಹೆಸರುಗಳೂ ಅವರ ವಚನಾಂಕಿತಗಳಿಮದ ತಿಳಿದುಕೊಳ್ಳಬಹುದು. ದೇವರ ದಾಸಿಮಯ್ಯ, ಮಾದಾರ ಚನ್ನಯ್ಯ, ಕೊಂಡಗುಳಿ ಕೇಶಿರಾಜ, ಚಂದಿಮರಸ, ಕೆಂಭಾವಿ ಭೋಗಣ್ಣ ಶಂಕರದಾಸಿಮಯ್ಯ, ಸಕಲೇಶ ಮಾದರಸ, ಮೆರೆಮಿಂಡಯ್ಯ, ಡೋಹರ ಕಕ್ಕಯ್ಯ, ಬಸವಣ್ಣನ ವಚನಗಳನ್ನು ಆಧಾರವಾಗಿಟ್ಟುಕೊಂಡರೆ ಇವರೆಲ್ಲ ಅದ್ಯವಚನಕಾರರು ವಚನಗಳು ಕನ್ನಡದ ನೆಲದಲ್ಲಿ ಹೊರಹೊಮ್ಮಿರುವ ದೇಶಿಯ ನುಡಿಗಟ್ಟು, ನೀತಿಯ ಮಾತು. ಹೀಗಾಗಿ ನಿಂತ ನೆಲದಿಂದಲೇ ಸತ್ವ ಹೀರಿ ಸೃಷ್ಟಿಯಾದವು. ಜೇಡರ ದಾಸಿಮಯ್ಯನ ವಚನವೊಂದರಲ್ಲಿ 'ಸೂಳ್ನುಡಿ' ಎಂಬ ಶಬ್ದ ಬಳಸಿದ್ದಾನೆ. ಅಂದರೆ ವಚನಕಾರರೆಲ್ಲ ಸರದಿಯಂತೆ ತಮಗೆನಿಸಿದ್ದು, ಹೇಳುವುದು, ಸಮಾಜವನ್ನು ತಿದ್ದುವಲ್ಲಿ ಜೇಡರ ದಾಸಿಮಯ್ಯನು ವಚನಗಳು ಅಗ್ರಸ್ಥಾನ, ಇವತ್ತಿನ ದಿನಗಳಲ್ಲಿ ಅದೆಷ್ಟೋ ರಾಜಕಾರಣಿಗಳು ವಿದೇಶಗಳಲ್ಲಿ ಕಪ್ಪು ಹಣ ಇಟ್ಟಿದ್ದಾರೆ. ಕೆಲ ಜನ ಹಣವಿಟ್ಟು ಸತ್ತು ಹೋಗಿದ್ದಾರೆ. ಇವತ್ತಿನ ಸ್ಥಿತಿ ಶರಣರಿಗೆ ಅಂದೇ ಅನುಭವಕ್ಕೆ ಬಂದಂತಿದೆ. "ಹರಿದ ಗೋಣಿಯಲೊಬ್ಬ ಕಳವೆಯು ತುಂಬಿ ಇರುಳೆಲ್ಲ ನಡೆದನು ಸುಂಕಕಂಜಿ" ತೆರಿಗೆ ಕಟ್ಟಬೇಕಲ್ಲ ಎಂದು ಸ್ವಿಸ್ ಬ್ಯಾಂಕಿನಲ್ಲಿ ರೊಕ್ಕ ಇಲುಟ್ಟು ಕೊನೆಗೊಂದು ದಿನ ರಾಷ್ಟ್ರಕ್ಕೆ ಲಾಭ ಮಾಡದೆ ಇನ್ನ್ಯಾರಿಗೋ ಉದ್ಧಾರ ಮಾಡುವುದು ಇದನ್ನು ವಚನಕಾರರು ಅಂದೇ ವಿಚಾರ ಮಾಡಿದ್ದು ಕಾಣುತ್ತೇವೆ. ಕೆಲವು ಮತಗಳ ಪೂಜೆ ನೆಪದಲ್ಲಿ ಜನ ಸಾಮಾನ್ಯರಿಗೆ ಶೋಷಣೆ ಮಾಡುವುದನ್ನು ಕಂಡು ಈ ರೀತಿ ಕೂಡ ಹೇಳಿ ಎಚ್ಚರಿಸಿದರು. 'ಮಠದೊಳಗಣ ಬೆಕ್ಕು ಇಲಿಯಕಂಡು ಪುಟನೆಗೆದಂತಾಯ್ತು' ಎಂದು ತಿದ್ದಲು ಪ್ರಯತ್ನಿಸಿದ್ದಾನೆ.

ಪುರೋಹಿತ ಪದ್ಧತಿ ಸರಾಸಗಟಾಗಿ ತಿರಸ್ಕರಿಸಿದರು.[೬೧] ನಡೆಯಲು ಬಾರದ ಆದರ್ಶವನ್ನು ಮುಂದಿಡಲಿಲ್ಲ. ತಾವು ನಡೆದುದ್ದನ್ನೇ ನುಡಿದ ಅವರ ಆದರ್ಶ ಆಧ್ಯಾತ್ಮ ನಿತ್ಯ ವ್ಯವಹಾರದೊಂದಿಗೆ ಕೂಡಿಕೊಂಡು ಹೋಗುವಂಥದಿದ್ದುದರಿಂದ ಎಲ್ಲ ಜನತೆಗೂ ಹಿಡಿಸಿತು. ಅರಿವು ಆಚಾರ ಒಂದೆಯಾಗಿದ್ದು, ಅದೇ ನಡೆ ಜನತೆಯಲ್ಲೂ ತಂದುಕೊಡಲು ಪ್ರಯತ್ನಿಸಿದ್ದರು. ಅಂದಿನ ಜನಜೀವನದಲ್ಲಿ ಅದೆಷ್ಟೋ ಕ್ಷುಲ್ಲಕ ದೇವರುಗಳಿದ್ದವು. (ಇವತ್ತು ಇವೆ) ಇವು ಜನರ ವಿಚಾರಶಕ್ತಿಯು ಕೆಡಿಸಿದ್ದವು. ಇವುಗಳನ್ನೆಲ್ಲ ಹೊಡೆದು ಹಾಕಿ ಏಕದೇವೋಪಾಸನೆ ಜಾರಿಗೆ ತಂದರು.

ಈ ಸಂದರ್ಭದಲ್ಲಿ ಪ್ರತಿಯೊಬ್ಬರೂ ಈ ವರೆಗಿನ ಮೌಢ್ಯತೆ ಕಿತ್ತೊಗೆದ ಪ್ರತಿಭಟಿಸಿ ಹೊಸದಾಗಿ ತನ್ನನ್ನು ರೂಪಿಸಿಕೊಳ್ಳೊಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು.

ಕತ್ತೆ ಧೂಳಿನಲ್ಲಿ ಹೊರಳಾಡಿ ಪುನಃ ಮೈಝಾಡಿಸಿಕೊಳ್ಳುವಂತೆ ಅಜ್ಞಾನದ ಅಂಧಕಾರದಲ್ಲಿ ಹೊರಳಾಡಿ ಝಾಡಿಸಿಕೊಳ್ಳಲೇ ಬೇಕಾದ ಸಂದರ್ಭ ಹಿಂದಿನವರಿಗಿಂತಲೂ ಬಸವಣ್ಣ ಜಾಗ್ರತೆ ತೀಕ್ಷ್ಣತೆ ತಂದುಬಿಟ್ಟ.

ಕಲ್ಯಾಣದಲ್ಲಿ ಪ್ರಾರಂಭವಾದ ಈ ಪ್ರಗತಿಶೀಲ ಕ್ರಾಂತಿಗೆ ಇಡೀ ಭಾರತ ದೇಶದಾದ್ಯಂತ ಸಂಚಲನ ಉಂಟು ಮಾಡಿದ್ದು, ಬಸವಯುಗ,

ರಾಜತ್ವದ ಪತನದ ಬಗ್ಗೆ ನಮ್ಮ ಇತಿಹಾಸದಲ್ಲಿ ಸಾಕಷ್ಟು ಉದಾಹರಣೆ ಹಿಂದೆ ಸ್ವಲ್ಪ ಮಟ್ಟಿಗೆ ನೋಡಿದಂತೆ ಇಲ್ಲಿ ಸಾಮಂತರು ಸೈನಿಕರು ಇಲ್ಲಿ ರಾಜಕುಮಾರರೇ ನಡೆಸಿದ ಬಂಡಾಯಗಳಾಗಿರಬಹುದು. ಇಲ್ಲೆಲ್ಲೂ ಚಳುವಳಿಯ ಮಾರ್ಗವಿಲ್ಲ. ಇಲ್ಲೆಲ್ಲ ದಂಗೆಯ ತತ್ವವೇ ಪ್ರಧಾನವಾಗಿತ್ತು. ಈ ರೀತಿ ದಂಗೆಗಳಾದಾಗ ಅರಸೊತ್ತಿಗೆ ಬದಲಾಗುತ್ತದಷ್ಟೇ ಆದರೆ ಜನಜೀವನದಲ್ಲಿ ಎಲ್ಲವೂ ಸುಧಾರಣೆ ಆಗುತ್ತಿರಲಿಲ್ಲ. ಇದು ಚಳುವಳಿ ಅಲ್ಲವೇ ? ಎಂಬ ಪ್ರಶ್ನೆ ? ಚಳುವಳಿಯ ಗುರಿ ಚಳುವಳಿ ಅರಸರ ವಿರುದ್ಧವಲ್ಲ. ಚಳುವಳಿ ಎಂದರೆ ಬದುಕಿನ ಸಮಷ್ಟಿ ಸುಧಾರಣೆಯ ಮೌಲ್ಯ ಹೊಂದಿರುತ್ತದೆ. ಇದರಲ್ಲಿ ಆಧುನಿಕಯುಗದ ಕಾರ್ಮಿಕ ಚಳುವಳಿ,

---

[61] ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ ಸಂ.೧ ಡಾ.ಸಿ.ವಿ.ವೀರಣ್ಣ. ಪು.ಸಂ.೬೩.

ಸ್ವಾತಂತ್ರ್ಯ ಚಳುವಳಿ ರೈತ ಚಳುವಳಿಗಳಲ್ಲಿ ಆಳುವ ವರ್ಗವನ್ನು ವಿರೋಧಿಸುವುದರೊಂದಿಗೆ ಜನಸಾಮಾನ್ಯರು ಬಾಳುವ ಮಾರ್ಗವನ್ನು ಕಂಡುಕೊಳ್ಳುವುದಾಗಿರುತ್ತದೆ. ಇದರಿಂದ ಹೊಸ ಮೌಲ್ಯಗಳ ಪ್ರತಿಪಾದನೆ ಸಾಧ್ಯ. ಸಮಾಜದಲ್ಲಿ ಶೋಷಣೆಗೆ ಪೋಷಣೆ ನೀಡುವ ಎಲ್ಲಾ ಕುಕೃತ್ಯಗಳು ಬುಡಸಮೇತ ಕಿತ್ತಾಕಿ ಸಮಾನತೆಯ ಮೌಲ್ಯ ಅಂಗೀಕರಿಸುವುದಾಗಿದೆ. ಬಸವಯುಗದಲ್ಲೂ ಆದದ್ದು ಇದನ್ನೇ;

ಪಕ್ಕ ಬ್ರಾಹ್ಮಣನಾದ ಬಸವಣ್ಣ ಬ್ರಾಹ್ಮಣವನ್ನು ವಿರೋಧಿಸಿ ಬಾಹ್ಯಡಂಭಾಚಾರದ ಪೂಜೆ ಪುನಸ್ಕಾರ ಮಡಿ–ಮೈಲಿಗೆ ಯಾಗ ಯಜ್ಞಗಳ ಮೂಲಕ ಅಜ್ಞಾನಿ ಜನರನ್ನು ಶೋಧಿಸುವುದನ್ನು ಅವರು ಸಹಿಸುತ್ತಿರಲಿಲ್ಲ.[೬೨] ಶಿವನು ನಾದಪ್ರೀಯನಲ್ಲಿ ವೇದಪ್ರೀಯನಲ್ಲಿ ಆತ ಭಕ್ತಿಪ್ರೀಯನೆಂದು ಹೇಳಿ ದೇವಾಲಯದಲ್ಲಿ ನಡೆಯುವ ಹೋಮ ಹವನಗಳ ಮುಖಾಂತರ ಸುಲಿಗೆ ಮಾಡುವುದು ವಿರೋಧಿಸಿದರು. ಇಲ್ಲಿ ಮೋಸದ ಬ್ರಾಹ್ಮಣ್ಯವನ್ನು ವಿರೋಧಿಸಿದ್ದರೆ ವಿನಃ ಬ್ರಹ್ಮತತ್ವವನ್ನರಿತ ಬ್ರಾಹ್ಮಣ್ಯವನಲ್ಲ ಎಂಬುದುನೆನಪಿಡಬೇಕಾದ ಸಂಗತಿ.

ಬಸವಣ್ಣ ಬಿಜ್ಜಳನ ಭಂಡಾರದ ಮಂತ್ರಿಯಾಗಿದ್ದಾಗ ಈ ರೀತಿ ಚಳುವಳಿ ಕೈಗೊಳ್ಳದಿದ್ದರೆ ನಮ್ಮ ಇಂದಿನ ರಾಜಕಾರಣಿಗಳಂತೆ ನಡೆದಾಗ ನೆಲ ಕಾಣದಂತಹ ಎತ್ತರದ ಹೊಟ್ಟೆ ಬಿಟ್ಟು ಕಪ್ಪು ಹಣದಲ್ಲಿ ಐಶಾರಾಮಿ ಜೀವನ ನಡೆಸಬಹುದಿತ್ತಲ್ಲ ! ಅವರು ಹಾಗೆ ಮಾಡಲಿಲ್ಲ.

> "ಅಡ್ಡದೊಡ್ಡ ನಾನಲ್ಲಯ್ಯ
> ದೊಡ್ಡ ಬಸುರು (ಹೊಟ್ಟೆ) ನನಗಿಲ್ಲಯ್ಯ".[೬೩]

ಈ ವಚನ ನೋಡಿದಗೆ ಇಲ್ಲಿ ಸಮಷ್ಠಿಯ ಏಳಿಗೆಯೊಂದೇ ಬಸವಣ್ಣನ ಮೂಲಗುರಿ ಎಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ಜಾತಿಯಾಧಾರಿತ ಅಸಮಾನತೆ ಗಂಭೀರವಾಗಿ ಪರಿಗಣಿಸಿದ ವಚನಕಾರರು ಅಸ್ಪೃಶ್ಯತೆಯ ವಿರುದ್ಧ ಸಮರವೇ ಸಾರಿದರು. ಈ ರೀತಿಯ ದೃಷ್ಟಿಕೋನ ಹೊಂದಿದ ವಚನಗಳು ಸಾಕಷ್ಟು ಸಿಗಬಹುದು ಲಿಂಗಕ್ಕೆ ಹೊಲೆಯುಂಟೆ ? ಲಿಂಗಧರಿಸಿದ ಜಂಗಮನಿಗೆ ಹೊಲೆಯುಂಟೆ ? ಬಸವಣ್ಣನ ದೃಷ್ಟಿಯಲ್ಲಿ ಅಂಬಲಿಯ ಪ್ರಾತ್ರೆಯ ಮೇಲೆ

---

62 ಅನುಭಾವಿಗಳ ಕ್ರಾಂತಿ, ಅನು: ಡಾ.ಓ.ಎಲ್.ನಾಗಭೂಷಣ ಪು.ಸಂ.–೩.

63 ಬಸವಣ್ಣನವರ ವಚನ ಸಂಪುಟ–೧ ಸಂ. ಡಾ.ಎಮ್.ಎಮ್.ಕಲಬುರ್ಗಿ. ವ.ಸಂ.೪೧೩.

ಚಪ್ಪಲಿಯ ಮುಚ್ಚಿದ ಶ್ವಪಚಯ್ಯ ನು ಮಹಾನ್ ಲಿಂಗಭಕ್ತ ಜಂಗಮನೆನೆಸಿಕೊಳ್ಳುತ್ತಾನೆ. ಬಸವಣ್ಣನು ದಾಸಿ-ವೇಶಿಯರ ಮಕ್ಕಳಿಗೂ ಲಿಂಗಧಾರಣೆ ಮಾಡಿಸಿ ಶರಣರೆಂದು ಕರೆದ ಮಹಾನ್ ಕ್ರಾಂತಿಕಾರಕ.

"ಹೊಲಸುತಿನ್ನುವ ಹೊಲೆಯ ಕೊಲ್ಲುವವ ಮಾದಿಗ ಇವೆರಡೂ ಮೇಲ್ಜಾತಿಯವರು ಮಾಡಿದ್ದಾದರೆ ಅವರೇ ಹೊಲೆಯರು, ಮಾದಿಗರೆಂದು ಕರೆದರು."

ಧರ್ಮವು ಮುಖ್ಯ ಸಾಧನವಾಗಿ ಮಾಡಿಕೊಂಡು, ಸಮಾಜದ ಮೇಲೆ ಹಿಡಿತ ಸ್ಥಾಪಿಸುವುದೇ ಧಾರ್ಮಿಕ ಪ್ರಭುತ್ವ ಇದು ಸಮಾಜದ ಮೇಲೆ ಶಾಶ್ವತ ಪರಿಣಾಮವನ್ನುಂಟು ಮಾಡುತ್ತವೆ. ಧಾರ್ಮಿಕ ಪ್ರಭುತ್ವ ರಾಜಪ್ರಭುತ್ವಕ್ಕಿಂತ ಹೆಚ್ಚಿನ ಸಾಮರ್ಥ್ಯ ಹೊಂದಿತ್ತು. ಕಾರಣ ಅರಸರು ತಮ್ಮನ್ನೇ ದೇವರುಗಳೆಂದು ಅಥವಾ ದೇವರ ಪ್ರತಿನಿಧಿಗಳೆಂದು ಮುಂತಾಗಿ ಕರೆದುಕೊಳ್ಳುತ್ತಿದ್ದರು. ಜಾತಿವ್ಯವಸ್ಥೆ ಮತ್ತು ದೇವಾಲಯಗಳು ಧಾರ್ಮಿಕ ಪ್ರಭುತ್ವವನ್ನು ನಿರಂತರವಾಗಿ ಮುಂದುವರೆಯುವಂತೆ ಮಾಡಿದವು. ಪ್ರಜೆಗಳನ್ನು ನಿಯಂತ್ರಣದಲ್ಲಿಡಲು ಧರ್ಮದ ಮೊರೆ ಹೋಗುವುದು ಅರಸು ಮನೆತನಗಳಿಗೆ ಅನಿವಾರ್ಯವಾಗಿತ್ತು.

ಯಾವುದೇ ಒಂದು ಧರ್ಮ ಇತರ ಪ್ರದೇಶಗಳಿಗೆ ಪ್ರವೇಶ ಪಡೆದಾಗ ಅಲ್ಲಿನ ಜನರೊಡನೆ ಅವರ ಸಂಪ್ರದಾಯ-ಆಚರಣೆಗಳೊಂದಿಗೆ ಕೆಮಟ್ಟಿಗೆ ಸಮಾನತೆ ಪ್ರದರ್ಶಿಸುತ್ತವೆ. ಇಂಥ ಧರ್ಮಗಳು ಆಯಾ ರಾಜ್ಯಗಳ ರಾಜರ ಆಶ್ರಯವನ್ನು ಬಯಸುತ್ತವೆ. ಹೀಗೆ ರಾಜಾಶ್ರಯವನ್ನು ಪಡೆದ ಉಲ್ಲೇಖಗಳು ಹೆಚ್ಚಿನ ಸಂಖ್ಯೆಯಲ್ಲಿ ಸಿಗುತ್ತವೆ. ರಾಜ್ಯಗಳಲ್ಲಿ ಪ್ರಜೆಗಳ ಅಸಮಾಧಾನವನ್ನು ಹೋಗಲಾಡಿಸಲು ಮತ್ತು ಮೇಲಿಂದ ಮೇಲೆ ಸಂಭವಿಸುವ ಯುದ್ಧದ ಸಂದರ್ಭದಲ್ಲಿ ಪ್ರಜೆಗಳ ಬೆಂಬಲವನ್ನು ಪಡೆಯಲು ಅರಸರಿಗೆ ಎಲ್ಲ ಧರ್ಮಗಳಿಗೂ ಆಶ್ರಯವನ್ನು ನೀಡುವುದು ಅನಿವಾರ್ಯವಾಗಿರುತ್ತಿತ್ತು. ಇದರಿಂದಾಗಿ ಆಂತರಿಕ ಭದ್ರತೆ ಹಾಗೂ ರಾಜ್ಯ ವಿಸ್ತರಣೆಯ ಸಂದರ್ಭಗಳಲ್ಲಿ ಧಾರ್ಮಿಕ ಸಾಮರಸ್ಯದ ನೀತಿಯನ್ನು ಮುಂದಿಟ್ಟುಕೊಳ್ಳುವುದು ರಾಜಪ್ರಭುತ್ವದ ಅನಿವಾರ್ಯತೆಗಳಲ್ಲೊಂದಾಗಿತ್ತು. ಇದು ಕೂಡ ದೀರ್ಘ ಕಾಲಿನ ಪರಿಣಾಮಗಳನ್ನು ಬಿರುವಲ್ಲಿ ಯಶಸ್ವಿಯಾಗಲಿಲ್ಲ. ಈ ಕಾರಣದಿಂದಾಗಿ ಧಾರ್ಮಿಕ ಸಾಮರಸ್ಯ ಮೂಡುವ ಬದಲು ವಿವಿಧ ಧರ್ಮಗಳಿಗೆ ಸೇರಿದ ಜನರು ಅಧಿಕಾರಕ್ಕಾಗಿ

ಪರಿಸರದಲ್ಲಿ ಒಳವೈಶಮ್ಯ ಉಂಟಾಗಿ ವೈದಿಕ ಧರ್ಮದೊಳಗೆ ಅನೇಕ ಉಪಶಾಖೆಗಳು ಕಾಣಿಸಿಕೊಂಡವು. ಈ ಸಂದರ್ಭದಲ್ಲಿ ಜೈನ, ಬೌದ್ಧ ಧರ್ಮಗಳು, ರಾಜಾಶ್ರಯಕ್ಕಾಗಿ ಹಂಬಲಿಸುವ ಜೊತೆಗೆ ಪುರೋಹಿತಶಾಹಿಯ ವಿರೋಧ ಎದುರಿಸಬೇಕಾಯಿತು. ಹೀಗಿದ್ದಾಗ ಬ್ರಾಹ್ಮಣ ಪಾರಮ್ಯ ಎದುರಿಸಲು ಸಮಾಜ ಹೇಗೆ ಸಾಧ್ಯ. ಆದ್ದರಿಂದ ಅಂದಿನ ಸ್ಥಿತಿಯಲ್ಲಿ ಬ್ರಾಹ್ಮಣರು ಎಲ್ಲ ರೀತಿಯಿಂದ ನಿಯಂತ್ರಿಸುವ ಸಾಮರ್ಥ್ಯ ಹೊಂದಿದ್ದರು.[೬೪] ಆತ ಮೂರ್ಖನಿದ್ದರೂ ಕೂಡ ಬ್ರಾಹ್ಮಣ ಬ್ರಾಹ್ಮಣನೇ !

ಆಳುವ ವರ್ಗ ಪ್ರಜೆಗಳನ್ನು ಅಧೀನದಲ್ಲಿಡಲು ವಿಫಲವಾದಾಗ ಧರ್ಮದ ಮೊರೆ ಹೋಗುವುದರ ಜೊತೆಗೆ ದೇವಾಲಯಗಳು, ಧಾರ್ಮಿಕ ಸಂಸ್ಥೆಗಳು ಸ್ಥಾಪನೆ ಮಾಡಿದರು. ರಾಜಪ್ರಭುತ್ವ ಭದ್ರವಾಗಿರುವಲ್ಲಿ ದೇವಾಲಯಗಳೇ ಪ್ರಮುಖ ಪಾತ್ರ ವಹಿಸಿದ್ದವು. ಆದ್ದರಿಂದ ಜಾತಿ ಆಧಾರದ ಮೇಲೆ ವಿವಿಧ ಜನವರ್ಗದವರು ದೇವಾಲಯಗಳಲ್ಲಿ ಹಕ್ಕನ್ನು ಅನುಭವಿಸುತ್ತಿದ್ದರು.

ದೇವಾಲಯಗಳಲ್ಲಿ ಪುರೋಹಿತರಿಗೆ ಮಾತ್ರ ಹೆಚ್ಚಿನ ಹಕ್ಕು ಇದ್ದು ಉಳಿದವರ ಜಾತಿಗಳ ದೇವಾಲಯದ ಹೊರಗೆ ಮಾತ್ರ ಇರಬೇಕಿತ್ತು. ಹೀಗಾಗಿ ಜಾತಿ ವ್ಯವಸ್ಥೆ ಮತ್ತು ದೇವಾಲಯದ ಕಾರ್ಯಗಳು ಸಾಗುತ್ತಿದ್ದವು. ಈ ವರ್ಗೀಕರಣದಿಂದ ತಿಳಿದುಬರುವುದೇನೆಂದರೆ, ದೇವರ ಹೆಸರಿನಲ್ಲಿ ಪ್ರಜೆಗಳಲ್ಲಿ ಭಯ–ಭಕ್ತಿ ಮೂಡುವಂತೆ ಮಾಡಿ ಆ ಮೂಲಕ ಪ್ರಭುತ್ವವನ್ನು ಒಪ್ಪಿಕೊಳ್ಳುವಂತೆ ಮಾಡಿ ದೇವಾಲಯಗಳಿಗೆ ದಾನದತ್ತಿಗಳು ಪಡೆಯಲಾಗುತ್ತಿತ್ತು. ದೇವರಿಗಾಗಿ ಮಾಡುವ ಪ್ರತಿಯೊಂದು ಕೆಲಸ ಪುಣ್ಯ–ಮೋಕ್ಷ ಲಭಿಸುವುದೆಂದು ಸಾರುತ್ತಿದ್ದರು. ದೇವಾಲಯಗಳನ್ನು ಅಗೌರವಿಸಿದರೆ ಕಠಿಣ ಶಿಕ್ಷೆ ವಿಧಿಸುತ್ತಿದ್ದರು. ಪ್ರಜೆಗಳಲ್ಲಿ ಭಯ ಭಕ್ತಿ ಮೂಡಿದಾಗ ತನ್ನಷ್ಟಕ್ಕೆ ತಾನೇ ಅನೇಕ ಮೂಲಗಳಿಂದ ಸಂಪತ್ತು ಸಂಗ್ರಹವಾಗುತ್ತಿತ್ತು. ಅರಸರಿಂದ, ಅಧಿಕಾರಿಗಳಿಂದ ವ್ಯಾಪಾರಸ್ಥರು, ವರ್ತಕ ಸಂಘ ಶ್ರೀಮಂತರು ಇವರೆಲ್ಲರಿಂದ ಹಣ, ವಸ್ತು, ರೂಪಗಳಲ್ಲಿ ಧನ ಸಂಗ್ರಹವಾಗುತ್ತಿತ್ತು. ದಾನವಾಗಿ ಭೂಮಿ ಗೋವು, ಚಿನ್ನ ಮತ್ತು ಕರೆ ಭಾವಿಗಳ ನಿರ್ಮಾಣ ಕೂಡ ಶ್ರೀಮಂತರೇ ಮಾಡಿ ದೇವಾಲಯದ ಅಧೀನಕ್ಕೆ ಕೊಡುತ್ತಿದ್ದರು. ಈ ಬಾವಿ ಕೇವಲ ಬ್ರಾಹ್ಮಣರಿಗೆ ಮಾತ್ರ ಬಳಸುವ ಹಕ್ಕು ಇತ್ತು.

[64] ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ ಸಂ.೧ ಡಾ.ಸಿ.ವಿ.ವೀರಣ್ಣ. ಪು.ಸಂ.೪೭.

ದೇವಾಲಯಗಳು ಬಹಳಷ್ಟು ಚಟುವಟಿಕೆಯಿಂದ ಕೂಡಿರುತ್ತಿದ್ದವು. ಪುರೋಹಿತರು, ದೀಪಾಲಂಕಾರದವ ರು, ಸ್ವಚ್ಛತೆ ಮಾಡುವವರು, ಶಿಕ್ಷಣದ ಮೇಲ್ವಿಚಾರಕರು ಇರುತ್ತಿದ್ದರು. ಜೊತೆಗೆ ದೇವಾಲಯಗಳಲ್ಲಿ ಉತ್ಸವಗಳು ನಡೆಯುತ್ತಿದ್ದವು. ಉತ್ಸವಗಳ ಸಂದರ್ಭದಲ್ಲಿ ಜಾತ್ರೆಗಳ ನಡೆಯುತ್ತಿದ್ದವು. ಕ್ರಮೇಣ ಕ್ರಮೇಣ ಸಂತೆಗಳು ಏರ್ಪಡಿಸುತ್ತಿದ್ದರು. ಇದರೊಂದಿಗೆ ವ್ಯಾಪಾರಸ್ಥರು ತಮ್ಮ ಅಂಗಡಿಗಳನ್ನು ದೇವಾಲಯದ ಸುತ್ತಮುತ್ತ ತೆರೆಯುತ್ತಿದ್ದರು. ಆದ್ದರಿಂದ ತೆರಿಗೆಗಳು ಪಾವತಿಸಬೇಕಾಗುತ್ತಿತ್ತು. ಹೀಗೆ ಎಲ್ಲ ಮೂಲದಿಂದ ಬಂದ ಹಣ ಇಮ್ಮಡಿಗೊಳಿಸಲು ಸಾಲ ನೀಡಲು ಪ್ರಾರಂಭಿಸಿದವು. ಇದರಿಂದ ಪೇಟೆ ಪಟ್ಟಣಗಳು ನಿರ್ಮಾಣವಾಗುತ್ತಾ ಬಂದವು.

ದೇವಾಲಯಗಳು, ಆಧ್ಯಾತ್ಮ ಕೇಂದ್ರಗಳ ಜೊತೆಗೆ ಸಂಪತ್ತಿನ ಕೇಂದ್ರ ಕೂಡ ಆದವು, ಜೊತೆಗೆ ನ್ಯಾಯ ನೀಡುವ ನ್ಯಾಯಾಲಯಗಳನ್ನು ಕೂಡ ಆದವು. ಇಷ್ಟೆಲ್ಲ ಒಳ್ಳೆಯ ಕೆಲಸಗಳ ಮಧ್ಯ ಯಾರಿಗೂ ಗೊತ್ತಾಗದಂತೆ ಮಹಿಳೆಯರ ಶೋಷಣೆ ನಡೆಯುತ್ತಿತ್ತು.

ಇವತ್ತು ನಮಗೆಲ್ಲ ಪರಿಚಯವಿರುವ "ದೇವದಾಸಿಯರು ಎನ್ನುವವರು ಅಂದು ಪಾತರದವರು ಬಸವಿಗೆ ಬಿಟ್ಟವರು ಇವರೆಲ್ಲ ರಾಜ ಪ್ರಭುತ್ವ ಧಾರ್ಮಿಕದ ಹೆಸರಿನಲ್ಲಿ ಶೋಷಣೆಗೆ ಒಳಗಾದವರು."[೬೫] ಇಲ್ಲಿ ಇವರೆಲ್ಲ ಒಂದೇ ವೃತ್ತಿಯವರೆಂದು ಹೇಳಲು ಕಷ್ಟವೇ. ಇವರಲ್ಲಿ ಕೆಲವರು ದೇವರ ಸೇವೆಗೆ, ದೇವರಿಗೆ ಸಮನಾದ ಬ್ರಾಹ್ಮಣ, ಅರಸರಿಗೆ, ಕೆಲವರು ಇನ್ನಿತರ ಪುರುಷರಿಗೆ ಸೇವಕಿಯರಾಗಿ ಕಾರ್ಯನಿರ್ವಹಿಸುತ್ತಿದ್ದರು.

ಕ್ರಮೇಣ ಈ ಸೇವೆ ಪವಿತ್ರಕ್ಕೇರಿಸಿ ಆ ಹೆಣ್ಣು ಮಕ್ಕಳ ಕುಟುಂಬದವರೇ ಸ್ವತಃ ಅವರ ಸೇವಕಿಯರನ್ನಾಗಿ ಮಾಡಿ ಹಣದ ಆಸೆಯಲ್ಲಿ ಅವರು ತೇಲಾಡುತ್ತಿದ್ದರು. ಇದು ಬಡ ಕುಟುಂಬಗಳಿಗೆ ಅನಿವಾರ್ಯವಾಗಿತ್ತು. ಹೀಗಾದಾಗ ಸಾಮಾನ್ಯವಾಗಿ ಸಮಾಜದಲ್ಲಿ ಕೆಟ್ಟ ದೃಷ್ಟಿ ಒಳಗಾಗುತ್ತಿದ್ದರು. ಇವರ ಅತಿಯಾದ ಆದಾಯವನ್ನು ಪರಿಗಣಿಸಿ ಸೂಳೆದರ ಹೇರಿದರು. ಇಲ್ಲಿ ಅಧೀನಕ್ಕೊಳಪಟ್ಟವರು ಶ್ರೇಷ್ಠ ದೇವರುಗಳ ಅಧೀನವಾಗಿ ಕೆಲ ಹೆಣ್ಣು ದೇವರುಗಳ

---

[65] ವೀರಶೈವ ಚಳುವಳಿಯ ಹುಟ್ಟು ಡಾ.ಆರ್.ಎನ್. ನಂದಿ, ಬಸವಣ್ಣನವರ ವಚನಗಳು, ಸಾಂಸ್ಕೃತಿಕ ಮುಖಾಮುಖಿ – ಸಂ.ಅಮರೇಶ ನುಗಡೋಣಿ. ಪು.ಸಂ.೬೬

ನಿರ್ಮಾಣ ಮಾಡಿಕೊಂಡರು ಇದಕ್ಕಾಗಿ ಇದರ ಹಿಂದೆ ಬಹುಶಃ ಮೂಲದೇವರಿಂದ ವಂಚಿತರಾದವರು ಮಾರಿ ಮಸಣಿಯಂತಹ ದೇವತೆಗಳನ್ನು ಪೂಜಿಸತೊಡಗಿದರು.

ಇನ್ನೂ ಕೃಷಿ ಪ್ರಧಾನ ಸಮಾಜದಲ್ಲಿ ಹೆಣ್ಣು ದೇವತೆಯನ್ನು ಫಲೋತ್ಪತ್ತಿ ಸಂಕೇತವಾಗಿ ಪೂಜಿಸುತ್ತಿದ್ದರು. ಬಡವರಿಗೆ ಶಾಪ ಕೊಡುವ, ರೋಗ ನಿವಾರಿಸುವ ಗುಣ ಹೆಣ್ಣು ದೈವಕ್ಕೆ ಪೂಜಿಸಿ ಕೆಲ ಕ್ರೂರಪೂಜೆ, ಜೊತೆಗೆ ಬಲಿಕೊಡುತ್ತಿದ್ದರು. ಬಲಿಕೊಡುವಲ್ಲಿ ಕೂಡ ಹೆಣ್ಣು ಕುರಿ, ಗೋವು ಗಬ್ಬದ ಕುರಿಗಳೇ ಹೆಚ್ಚು ಬಲಿಯಾಗುತ್ತಿದ್ದವು.

ಹೀಗೆ ಸ್ತ್ರೀಯರಿಗೆ ಸೂದ್ರ ಸ್ಥಾನಕ್ಕೆ ತಳಲ್ಪಟ್ಟಾಗ ಸ್ತ್ರೀಯರನ್ನು ಪುರುಷ ಸರಿ ಸುಮಾರು ಎಂಬದುನ್ನು ಬಸವಣ್ಣನವರು ಸಾಧಿಸಿ ತೋರಿಸಿದರು. ಲಿಂಗ ತಾರತಮ್ಯ ಹೋಗಲಾಡಿಸಿ ಸ್ತ್ರೀಯರಿಗೆ ಧಾರ್ಮಿಕ, ಸಾಮಾಜಿ, ಸ್ವಾತಂತ್ರ್ಯ ಬೇಕೆಂದು ಪ್ರತಿಪಾದಿಸಿದರು. ಸಮಾನತೆಯಲ್ಲಿ ಕುಳಿತ ಧಾರ್ಮಿಕ ವಿಷಯಗಳಲ್ಲಿ ಸಮಾನವಾಗಿ ಚರ್ಚಿಸುವ ಅವಕಾಶ ಮಾಡಿಕೊಟ್ಟರು. ಬಸವಣ್ಣನವರು ಎಂತಹ ಧೋರಣೆ ತಳೆದಿದ್ದರೆಂದರೆ ನಿಸರ್ಗದತ್ತವಾದ ಪ್ರಸವ, ಋತುಸ್ರಾವಗಳಿಂದಾಗಿ ಮಹಿಳೆಯರ ಮೇಲೆ ಶೂದ್ರಳೆಂದೇ ಭಾವಿಸಿದ ಕಾಲದಲ್ಲಿ ಅದೆಷ್ಟೋ ದಾಸಿಯರಿಗೆ, ವೇಶೆಯರಿಗೆ, ಸಮಾಜದಲ್ಲಿ ಗೌರವ ತಂದು ಕೊಟ್ಟರು. ಅಂದಿನ ಈ ಕ್ರಾಂತಿ ಮೈಮನಗಳಲ್ಲಿ ಸಂಚಲನ ಉಂಟು ಮಾಡಿತೆಂದೇ ಹೇಳಬೇಕು.

ಈ ಸಂದರ್ಭದಲ್ಲಿ ಇದ್ದಬಿದ್ದ ದೈವಗಳನ್ನೆಲ್ಲ ಮೂಲೆಗೊತ್ತಿ ಏಕದೇವೋಪಾಸನೆ ಜಾರಿಗೆ ತಂದರು. ಮುಖ್ಯವಾಗಿ ಭಕ್ತಿಯೇ ದೇವರ ಮೇಲಿನ ಪ್ರೇವವೆಂದು ನಿಸರ್ಗದಲ್ಲಿಯೇ ದೇವರೆಂದು ಸಾರಿ ಹೇಳಿದರು. ಡಂಬಾಚಾರಕ್ಕೆ ಉಳ್ಳವರು ಶಿವಾಲಯ ಮಜಾಡುವರು ನಾನೇನು ಮಾಡಲಿ ಬಡವನಯ್ಯ ಎಂದು ಭಕ್ತಿಯೇ ದೇವರು ಎಂದು ಸ್ವರ್ಗ-ನರಕಗಳ ಕಲ್ಪನೆ ಬಯಲಿಗೆಳೆದರು. ಆಚಾರವೇ ಸ್ವರ್ಗ-ಅನಾಚಾರವೇ ನರಕ ಎಂದು ತಿಳಿ ಹೇಳಿದರು. ಕಾಯಕವೇ ಕೈಲಾಸ ಕಾಯಕದಿಂದಲೇ ಜೀವನ್ಮುಕ್ತಿ[66] ಎಂದು ಸಾರಿ ಸಾರಿ ಹೇಳಿದರು. ಕಾಯಕದಲ್ಲಿ ಎಲ್ಲರೂ ಸಮಾನರು ಎಂಬ ಪರಿಕಲ್ಪನೆ ಕೊಟ್ಟರು.

---

[66] ಬಸವ ಪ್ರಜ್ಞೆ – ರಂಜಾನ್ ದರ್ಗಾ, ಪು.ಸಂ.೩೩

ಕೃಷಿ ಕೃತ್ಯ ಕಾಯಿದಿಂದಾದಡೇನು ತನುಮನಗಳಿಸಿ ತಂದು ದಾಸೋಹವ ಮಾಡುವ ಪರಮ ಸದ್ಭಕ್ತನ ಪಾದ ತೋರಯ್ಯ, ಆತನ ತನು ಸುದ್ಧ ಮನಶುದ್ಧ, ನಡೆಶುದ್ಧ, ನುಡಿಶುದ್ಧ, ವೇದವ ನೋಡುವ ಹಾರುವನಿಗಿಂತ ಚರ್ಮ ಹದಿಮಾಡುವ ಡೋಹರ ಕೀಳಲ್ಲ.[೬೭] ಈ ರೀತಿ ಕಾಯಕ ಮಾಡುವ ಶರಣನಿಗೆ ಒಮ್ಮೆ ತೋರಿಸಯ್ಯ ನಾನು ಪಾವನನಾಗುವೆ ಎನ್ನುತ್ತಾನೆ ಬಸವಣ್ಣ.

ಹೀಗಾಗಿ ವಚನಕ್ರಾಂತಿ ಒಂದು ಹೊಸ ಬದಲಾವಣೆಯನ್ನೇ ನಿರ್ಮಾಣ ಮಾಡಿತ್ತು. ಅದಕ್ಕೆ ಸಾಕ್ಷಿಯಾಗಿ – ಆಚಾರ್ಯ ಶುದ್ಧಿಯಿಂದ, ಲಿಂಗಧಾರಣೆಯಿಂದ ಶರಣರಾದರು. ಸಮಾನರಾದರು. ಅಲ್ಲಿ ಎಲ್ಲರೂ ಸಮಾನರು ಪ್ರತಿಷ್ಠೇ ಕಿಂಚಿತ್ತಿಲ್ಲ. ಅದಕ್ಕಾಗಿಯೇ ಅನುಭವ ಮಂಟಪವೇಂಬಮುಸೆಯಲ್ಲಿ ಕಾಸಿ ಬಡಿಸಿದರು. ಹೀಗಾಗಿಯೇ ಸಿರಿಯಾಳ ಮಡಿವಾಳ, ಡೋಹರ ಕಕ್ಕಯ್ಯ, ಚನ್ನಯ್ಯ, ಚೌಡಯ್ಯ, ತುರುಗಾಹಿರಾಮಣ ಅದೆಷ್ಟೋ ಜನ ಸ್ತ್ರೀಯರು ಸಮಾನವಾಗಿ ಸಮಾಲೋಚನೆ ಮಾಡುವ ಹಕ್ಕು ಪಡೆದು ಸಮಾನ ಮನಸ್ಕರಾದದ್ದು ಸತ್ಯ.

ಹನ್ನೆರಡನೆಯ ಶತಮಾನ ಮುಕ್ತ ಸಮಾಜ ನಿರ್ಮಾಣದ ಕಾಲವೆಂದೇ ಹೇಳಬೇಕಾಗುತ್ತದೆ. ಇಲ್ಲಿ ಹೆಣ್ಣು ಗಂಡು ಎಂಬ ಭೇಧ ಭಾವವಿಲ್ಲದೆ ಎಲ್ಲರೂ ಬಸವಯುಗದ ಬೋಧನೆಯಲ್ಲಿ ಮಿಂದವರಾಗಿದ್ದರು.

ಹೊಸ ಮೌಲ್ಯಗಳ ಪ್ರಸ್ತುತತೆ ಬಗ್ಗೆ ಲಿಂಗಾಯತ ಸಮಾಜದೊಳಗೆ ಮತ್ತು ಜನರ ಮನವೊಲಿಸಲು ಜಾತಿ ರಹಿತ ಸಮಾಜದ ವಿಚಾರ ಪ್ರಚುರಪಡಿಸಲು ಬಸವಣ್ಣನ ಪಾತ್ರ ಪ್ರಮುಖವಾದುದು. ಈ ನಿಟ್ಟಿನಲ್ಲಿ ಬ್ರಾಹ್ಮಣ ಮೂಲವನ್ನು ತಿರಸ್ಕರಿಸಲೂ ಸಹ ಹಿಂದೆ ಸರಿಯಲಿಲ್ಲ. ಕೆಳಜಾತಿಯ ಶರಣರು ತನ್ನ ಸಂಬಂಧಿಗಳು ಎಂದು ಘೋಷಿಸಿದ ಹಲವಾರು ಕುತೂಹಲಕಾರಿ ವಚನಗಳಲ್ಲಿ ತನ್ನನ್ನು ಅವರೊಂದಿಗೆ ಸಮೀಕರಿಸಿ ವಚನಗಳು ರಚಿಸಿದ್ದಾರೆ.

"ಚೆನ್ನಯ್ಯನ ಮನೆಯ ದಾಸನಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರೂ ಹೊಲದಲ್ಲಿ ಬೆರಣಿಗೆ ಹೋಗಿ ಸಂಗವಮಾಡಿದರು
ಇವರಿಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲಸಂಗಮದೇವನ ಸಾಕ್ಷಿಯಾಗಿ"[೬೮]

---

[67] ಬಸವಣ್ಣನವರ ವಚನಗಳು ಸಂ.–೧, ಸಂ.ಡಾ.ಎಮ್.ಎಮ್.ಕಲಬುರ್ಗಿ.
[68] ಬಸವಣ್ಣನವರ ವಚನಗಳು ಸಂ.–೧, ಸಂ.ಡಾ.ಎಮ್.ಎಮ್.ಕಲಬುರ್ಗಿ.

ಇಲ್ಲಿ ಒಬ್ಬ ಬ್ರಾಹ್ಮಣ, ಮೇಲಾಗಿ ಮಂತ್ರಿ ಸ್ಥಾನದಲ್ಲಿದ್ದವ ತನ್ನ ಉತ್ತಮ ಕುಲದ ಪ್ರತಿಷ್ಠೆಯನ್ನು ಸಂಪೂರ್ಣವಾಗಿ ತ್ಯಜಿಸಿ ಬಿಟ್ಟಿದ್ದಾರೆ. ಇಂದಿನ ದಿನಗಳಲ್ಲಿ ರಾಷ್ಟ್ರ ರಕ್ಷಣೆ ಮಾಡುವ ರಕ್ಷಣಾ ಮಂತ್ರಿ ವಿಫಲವಾದರೆ ದೇಶದ ನಾಗರಿಕರೆಲ್ಲ ಸೇರ ರಾಜಿನಾಮೆಗೆ ಒತ್ತಾಯ ಮಾಡಿದರೆ ಅಧಿಕಾರಕ್ಕೆ ಅಂಟಿಕೊಂಡು, ಹಣ ಮಾಡುವ ಗುಣವೊಂದೇ ಅವರ ಮಕ್ಕಳನ್ನು ಅವರ ಮನಸ್ಥಿತಿಯನ್ನು ಅರಿಯುವುದಕ್ಕಾಗಿ, ಮತ್ತು ಬಸವಣ್ಣ ತಮ್ಮನ್ನು ಕಲೀನರೆಂದು ಬಸವಣ್ಣ ಈ ರೀತಿ ಕರೆದುಕೊಳ್ಳುತ್ತಾನೆ.

ಬಸವಣ್ಣ ಮತ್ತು ಆತನ ಸಮಕಾಲೀನ ಶಿವಶರಣರ ವಚನಗಳಲ್ಲಿ ಬಹಿರಂಗವಾಗಿ ಕಂಡುಬರುವ ಅಂಶವೆಂದರೆ ಅವರ ಚಳುವಳಿಯಲ್ಲಿನ ಜಾತಿಭೇಧದ ತೀವ್ರ ಖಂಡನೆ. ಇದನ್ನೇ ದೃಷ್ಟಿಯಲ್ಲಿಟ್ಟು ಒಂದು ವಚನ ನೋಡಬಹುದು.

> "ಕೊಲ್ಲುವವನೇ ಮಾದಿಗ ಹೊಲಸು ತಿಂಬುವವನೆ ಹೂಲೆಯ
> ಕುಲವೇನೋ ಆ ಮಾದಿಗರ ಕುಲವೇನೋ
> ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ
> ನಮ್ಮ ಕೂಡಲಸಂಗನ ಶರಣರೇ ಕುಲಜರು".[೬೯]

ಬಸವಣ್ಣ ಪ್ರಾಣಿ ಹತ್ಯೆಯ ಕಡುವಿರೋಧಿ. ಇಂದಿನ ದಿನಗಳಲ್ಲಿ ಪ್ರಾಣಿದಯಾ ಸಂಘಗಳು ಮಾಡುವ ಕೆಲಸ ಬಸವಣ್ಣ ೮೫೦ ವರ್ಷಗಳ ಹಿಂದೆಯೇ ಮಾಡಿದ್ದು ಕಂಡುಬರುತ್ತದೆ.

ಈ ವಚನ ಒಂದು ಕಡೆ ಪ್ರಾಣಿಹತ್ಯೆ ಮತ್ತು ಮೌಂಸಹಾರವನ್ನು ಖಂಡಿಸುತ್ತದೆ. ಇನ್ನೊಂದು ಕಡೆ ಸಾಂಪ್ರದಾಯಿಕ ಅಪವಿತ್ರ ಜಾತಿಗಳಿಗೆ ಪ್ರತಿಷ್ಠೆ ಒದಗಿಸುತ್ತದೆ. ಅಸ್ಪೃಶ್ಯ ಜಾತಿಯವರನ್ನೆಲ್ಲಾ ಹೊಸ ಸಮಾಜದೊಂದಿಗೆ ಸೇರಿಕೊಳ್ಳಲಾಗಿದೆ.

ಬಸವಯುಗದ ಆರಂಭದ ಕಾಲಘಟ್ಟ ಭಾವಗರ್ಭಿತ ಕಾಲವೆಂದೇ ಹೇಳಬೇಕು. ಈ ಕಾಲಘಟ್ಟದಲ್ಲಿ ಕ್ರಮೇಣವಾಗಿ ಚಳುವಳಿಯು ಗಮನಾರ್ಹವಾದ ಸಾಂಸ್ಕೃತಿಕ ಹಾಗೂ

---

[69] ಬಸವಣ್ಣನವರ ವಚನಗಳು ಸಂ.–೧ ಸಂ.ಡಾ.ಎಮ್.ಎಮ್.ಕಲಬುರ್ಗಿ , ಪು.ಸಂ.೫೯೧

ಸಾಮಾಜಿಕ ಚಟುವಟಿಕೆಗಳನ್ನು ಮೆರೆದಂತಹುದು. ಬಸವಣ್ಣನ ಪ್ರೇರಣೆಯಿಂದ, ವಿವಿಧ ಹಿನ್ನಲೆಯಿಂದ ಬಂದ ಜನರು ಶರಣರು ಭೋಧಿಸಿದ ಭಕ್ತಿಯಿಂದ ಸಾಂಪ್ರದಾಯಿಕ ನೆಲೆಯಿಂದ ಬಂದ ದೇವಾಲಯದ ಮಹತ್ವವನ್ನು ನೀರಸನಗೊಳಿಸಿ ಇದಕ್ಕೆ ಪ್ರತಿಯಾಗಿ ಚೈತನ್ಯ ಶೀಲವಾದ ಭಕ್ತಿ ವಿಧಾನವನ್ನು ಜನತೆಯ ಮಧ್ಯೆ ತಂದು ನಿಲ್ಲಿಸಿದರು.

ಲಿಂಗಾಯತದ ಪ್ರಾರಂಭದ ಕಾಲಘಟ್ಟದ ಗಮನಾರ್ಹ ವೈಲಕ್ಷಣವೆಂದರೆ ಉನ್ನತ ಜಾತಿಯಾದ ಪುರೋಹಿತ ಹಾಗೂ ಕೆಳಜಾತಿಗಳಾದ ಚಮ್ಮಾರ ಜಾತಿಯು ಭಕ್ತರು ಈ ಹೊಸ ಸಮುದಾಯಕ್ಕೆ ಸೇರಿಕೊಳ್ಳುವುದರ ಜೊತೆಗೆ ಸಾಮಾಜಿಕ ಸಮಾನತೆ ಪರಿಕಲ್ಪನೆಯನ್ನು ಒಳಗೊಂಡ ಅನೇಕ ವಚನಗಳು ಇಂದು ಸಾಕ್ಷಿಯಾಗಿ ನಮ್ಮ ಮುಂದಿವೆ. ಸ್ತ್ರೀ ಪುರುಷರು ಸಮಾನರು ಎಂಬ ಹೊಸ ಸಾಮಾಜಿಕ ಹಾಗೂ ಧಾರ್ಮಿಕ ಅನುಭವವನ್ನು ವ್ಯಕ್ತಪಡಿಸಲು ಶರಣಸತಿಲಿಂಗಪತಿ ಎಂಬ ಉಪಮೆಯನ್ನು ಬಳಸಲಾಯ್ತು.

ಮಹಿಳೆ :

ಮಹಿಳೆಯ ಸ್ಥಾನ-ಮಾನ ವಿಷಯವಾಗಿ ಮನುಸ್ಮೃತಿಯ ಪ್ರಕಾರ ಕಟ್ಟುಪಾಡುಗಳು ವಿಧಿಸಿ ಮಹಿಳೆಯೇ ಪುರುಷನನ್ನು ವಿಷಯಾಸಕ್ತಳನ್ನಾಗಿ ಮಾಡುತ್ತಾಳೆ. ನಮ್ಮಲ್ಲಿ ಒಂದು ಪ್ರಸಿದ್ಧವಾದ ಹೇಳಿಕೆ ಏನೆಂದರೆ ಶೈಶವಾವಸ್ಥೆಯಲ್ಲಿ ತಂದೆ, ಯೌವನದಲ್ಲಿ ಗಂಡನ, ವೃದ್ಧಾಪ್ಯದಲ್ಲಿ ಮಗನ ಆಶಯ ಹೆಣ್ಣಿಗೆ ಬೇಕೆಂದು ಹೇಳಿಕೆ. ಆದ್ದರಿಂದ ಹೆಣ್ಣಿಗೆ ಸ್ವಾತಂತ್ರ್ಯವಿಲ್ಲವೆಂದು ಆಕೆ ಪರಾವಲಂಬಿ ಎಂದು ಇನ್ನೊಬ್ಬರ ಆಶ್ರಯವಿರಲಾರದೇ ಆಕೆ ಬದುಕಲಾರಳೆಂಬ ನಿಲುವು ತಳೆದಂತಹ ದಿನಗಳಲ್ಲಿಯೇ ಋಗ್ವೇದದ ಪ್ರಕಾರ ಧಾರ್ಮಿಕ ಕ್ಷೇತ್ರಗಳಲ್ಲಿ ಮಹಿಳೆ-ಪುರುಷರ ಇಬ್ಬರೂ ಸಮಾನರೆಂಬ ನಿಲುವು ಅಲ್ಲಿ ಕಂಡುಕೊಂಡಂತಾಯ್ತು.

ವೈದಿಕತೆಯ ಪ್ರತಿಪಾದಿಸಿದ ವಿಷಯಾಸಕ್ತಳು ಮತ್ತು ವಿಶ್ವಾಸದ್ರೋಹಿಯೂ ಆದ ಮಹಿಳೆಯ ಭಯಾನಕ ಚಿತ್ರ ಈ ಕಾಲಘಟ್ಟದ ಒಂದೇ ಒಂದು ವಚನದಲ್ಲೂ ನಮಗೆ ದೊರೆಯುವುದಿಲ್ಲ.

ಪರಸತಿಯ ವ್ಯಾಮೋಹಕ್ಕೆ ಒಳಗಾಗುವವರ ಕುರಿತು ಬಸವಣ್ಣ ಈ ಕೆಳಗಿನ ವಚನದಲ್ಲಿ ಹೇಳಿದ್ದಾರೆ;

"ತೊರೆಯ ಮೀವ ಅಣ್ಣಗಳಿರಾ ತೊರೆಯ ಮೀವ ಸ್ವಾಮಿಗಳಿರಾ
ತೊರೆಯಿಂಬೊ ತೊರೆಯಿಂಭೋ
ಪರಧನದಾಮಿಷವ ತೊರೆಯಿಂಭೋ
ಇವ ತೊರೆಯದೆ ಹೋಗಿ ತೊರೆಯ ಮಿಂದಡೆ
ಬರುದೊರೆ ಹೋಹುದು ಕೂಡಲಸಂಗಮ ದೇವಾ"[೭೦]

ಈ ಮೇಲಿನ ವಚನದಲ್ಲಿ ಬರುವ ಪರ ತೊರೆ ಇಲ್ಲಿ ಬಳಸಿರುವ ತೊರೆಯಮೀ
ಎಂಬುದು ತೀರ್ಥಸ್ನಾಕಕ್ಕೆ ಸಂಬಂಧಿಸಿದುದಾಗಿದೆ. ಪುಣ್ಯ ಸಂಪಾದಿಸಲು, ಪಾಪಕಳೆದುಕೊಳ್ಳಲ
ಹೀಗೆ ತೊರೆ ಮೀಯುತ್ತಿದ್ದರು. ತೀರ್ಥಸ್ನಾನ ಕೈಗೊಳ್ಳುವವರಿಗೆ ಅನೈತಿಕ ನಡುವಳಿಕೆಗಳಾ
ಪರಸತಿ ವ್ಯಾಮೋಹ ಪರಧನವ್ಯಾಮೋಹವನ್ನು ತ್ಯಜಿಸುವಂತೆ ಎಚ್ಚರಿಸಿದ್ದಾರೆ.

ಇದೇ ರೀತಿ ಚನ್ನಬಸವಣ್ಣನು ಕೂಡ ಪರಸತಿಯ ವ್ಯಾಮೋಃಧ ಔಈಖುಊರ್ಧ
ರ್ದಔಣೀಶೀರ್ಧಧಣೀ. ಣ್ಣನ ವಚನಗಳು ಸ್ವಲ್ಪ ಮುಚ್ಚಿ ಟೀಕಿಸಿದರೆ ಚನ್ನಬಸವಣ್ಣನ ವಚನಗಳ
ಯಾವ ನಿರ್ಭಿಡೆಯಿಲ್ಲದೆ ದಾರಿ ಬಿಟ್ಟವರಿಗೆಲ್ಲ ಸರಿದಾರಿಗೆ ತಂದಿದ್ದಾರೆ.

"ಕ್ರೀಯೆಯ ಜ್ಞಾನ, ಅಜ್ಞಾನವೇ ಕ್ರೀಯೆ
ಜ್ಞಾನವೆಂದಡೆ ತಿಳಿಯುವುದು
ಕ್ರೀಯೆ ಎಂದಡೆ ತಿಳಿದಂತೆ ಮಾಡುವುದು.
ಪರಸ್ತ್ರೀಯು ಭೋಗಿಸಬಾರದೆಂಬುದೇ ಜ್ಞಾನ
ಅದರಂತೆ ಆಚರಿಸುವುದೇ ಕ್ರೀಯೆ
ಅಂತು ಆಚರಿಸದಿದ್ದಡೆ ಅದೇ ಅಜ್ಞಾನ ನೋಡಾ,
ಕೂಡಲಚೆನ್ನ ಸಂಗಮದೇವ"[೭೧]

ವೃತ್ತಿ ಧರ್ಮ ಸ್ತ್ರೀಯನ್ನು ಜಾರಿಣಿ, ವೈಭಿಚಾರಿಣಿ ವಿಷಯಾಸಕ್ತಳೆಂದೇ ಪರಿಗಣಿಸಿದ
ಆಕೆಯುನ್ನು ಶೂದ್ರಳೆಂದೇ ಪರಿಗಣಿಸಿತ್ತು. ವಚನಕಾರರ ಅಭಿಪ್ರಾಯ ಗಮನಿಸಿದಾಗ ಪರಸತಿಯ
ವ್ಯಾಮೋಹದ ಬಗೆಗಿನ ನಿಲುವುಜ್ಞಾನವೆಂದರೆ ಅರಿವು ಎಂಬ ಅರ್ಥವೂ ಇದೆ. ಜ್ಞಾನ
ಮೂಲಕ ಅರಿವು ಮೂಡಬೇಕು. ಜ್ಞಾನದಿಂದ ನಿರ್ದೇಶಿಸಲ್ಪಟ್ಟ ಸತ್ಕ್ರೀಯೆ ಪರಸತಿಯ ಸಮ
ಮಾಡದೇ ಇರುವುದು.

---

[70] ಬಸವಣ್ಣನವರ ವಚನಗಳು ಸಂ.–೧, ಸಂ.ಡಾ.ಎಮ್.ಎಮ್.ಕಲಬುರ್ಗಿ, ಪು.ಸಂ.೬೪೩

[71] ಚನ್ನಬಸವಣ್ಣನವರ ವಚನಗಳು ಸಂ.–೩, ಸಂ.ಡಾ.ಎಮ್.ಎಮ್.ಕಲಬುರ್ಗಿ.

ಪರರ ಹೆಣ್ಣು, ಪರರದ್ರವ್ಯ, ಸುಳ್ಳು ಹೇಳದಿರುವುದು ಇಂತಹ ಅದೆಷ್ಟೋ ಆದೇಶಗಳ ಚೆನ್ನಬಸವಣ್ಣನ ವಚನಗಳಲ್ಲಿ ಕಂಡುಬರುತ್ತವೆ.

ಲಿಂಗಾಯತ ಉದಯಕಾಲದಲ್ಲಿನ ಚಳುವಳಿಯಲ್ಲಿ ಶಿವಶರಣೆಯರು ಅತ್ಯಂತ ಪ್ರಮುಖವಾದ ಸಾರ್ವಜನಿಕರ ಪಾತ್ರ ನಿರ್ವಹಿಸುತ್ತಿದ್ದರು. ಸಾರ್ವಜನಿಕವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮತ್ತು ಪ;ಉರುಷನ ಜೊತೆ ಜಿಜ್ಞಾನಸೆಯಲ್ಲಿ ತೊಡಗಲು, ಹೆಣ್ಣಿಗೆ ಯಾವುದೇ ಅಡೆತಗಡೆಗಳಿರಲಿಲ್ಲ. ವೀರಶೈವ ಆವರಣದಲ್ಲಿ ಹೆಣ್ಣು ಸಂಪ್ರದಾಯವಾದಿ ಹಿಂದೂ ಆವರಣದಲ್ಲಿದ್ದುದಕ್ಕಿಂತ ಹೆಚ್ಚಿನ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದಳು. ಸಮಾಜದಲ್ಲಿ ಉನ್ನತ ವರ್ಗಗಳಲ್ಲಿ ಪರದಾ ಪದ್ಧತಿಯು ವ್ಯಾಪಕವಾಗಿ ಆಚರಣೆಯಲ್ಲಿತ್ತು. ತಮ್ಮನ್ನು ತಾವು ಪರದೆಯಿಂದ ಮರೆ ಮಾಡಿಕೊಳ್ಳುತ್ತಿದ್ದರು. ಮೂಲ ಮುಸ್ಲಿಮರ ಆಚರಣೆಯಾದ ಇದು ಬಹಳಷ್ಟು ಉನ್ನತಸ್ತರದ ಹಿಂದೂ ಜಾತಿಗಳು ಸ್ವಪ್ರತಿಷ್ಠೆಯ ಸಂಕೇತವಾಗಿ ಅಳವಡಿಸಿಕೊಂಡವು. ಆದರೆ ಲಿಂಗಾಯತರಲ್ಲಿ ಮಾತ್ರ ಈ ಬಗೆಯ ಪ್ರತ್ಯೇಕತಾ ಆಚರಣೆ ಇರಲಿಲ್ಲ.

ಇಂದು ವಿಶಿಷ್ಟವಾಗಿ ಕೆಲವು ಸಂಗತಿಗಳಿಗೆ ಸಂಬಂಧಿಸಿದಂತೆ ಹೆಣ್ಣಿಗೆ ಸ್ವಲ್ಪ ಮಟ್ಟಿನ ಸ್ವಾಂತಂತ್ರ್ಯ ನೀಡಲಾಗಿದೆ. ವಸಾಹತು ಕಾಲದಲ್ಲಿ ಸಾರ್ವಜನಿಕ ಕಾರ್ಯಗಳಲ್ಲಿ ಭಾಗವಹಿಸುವ ಅವಕಾಶ ಹೆಣ್ಣಿಗಿರಲಿಲ್ಲ. ಹೆಣ್ಣು ಈಗ ಗುರುವಾಗಿ, ಲೇಖಕಿಯಾಗಿ ವಚನಕಾರ್ತಿಯಾಗಿ ಕ್ರಿಯಾಶೀಲಳಾಗಿರುವಂತಿರಲಿಲ್ಲ. ಕಿತ್ತೂರರಾಣಿ ಚೆನ್ನಮ್ಮನಂತಹ ಅದೆಷ್ಟೋ ಮಹಿಳೆಯರು ಸ್ವತಂತ್ರಳಾ ಪಾತ್ರ ನಿರ್ವಹಿಸುವುದ ಸಾಧ್ಯವಾಯಿತು.

ಅಧ್ಯಾಯ – ೫

ಸೃಷ್ಟಿಯ ಪರಿಕಲ್ಪನೆ

ಅಧ್ಯಾಯ – ೫

ಸೃಷ್ಟಿಯ ಪರಿಕಲ್ಪನೆ

ಹಿನ್ನೆಲೆ :

ಜಗತ್ತಿನ ಎಲ್ಲ ಧರ್ಮ ದರ್ಶನಗಳು ಹಲವಾರು ಸಿದ್ಧಾಂತಗಳನ್ನು ಅನೇಕ ವಿಸ್ಮಯಕಾರಿ ಪರಿಕಲ್ಪನೆಗಳನ್ನು ಕುರಿತು ಚಿಂತಿಸಿದುತೆ ಸೃಷ್ಟಿಯ ಪರಿಕಲ್ಪನೆ ಕುರಿತು ಚಿಂತಿಸಿದ್ದಾರೆ. ಪ್ರಾಚೀನ ಕಾಲದಿಂದ ಮಧ್ಯಕಾಲದವರೆಗೆ ಅನಂತ ರೀತಿಯ ಚಿಂತನೆ ಚರ್ಚೆಗಳು ನಡೆದವು ಆದರೆ ಅತ್ಯಂತ ವೈಚಾರಿಕ, ವೈಜ್ಞಾನಿಕ ಮನೋಭಾವದ ಚಿಂತನೆ ಮಧ್ಯಕಾಲದ ವಚನಕಾರರಲ್ಲಿ ನಡೆದಿದೆ. ವಚನಕಾರರು ವಿಜ್ಞಾನಿಗಳಾಗಿರಲಿಲ್ಲ ಆದರೆ ಅವರು ವೈಜ್ಞಾನಿಕ ಮನೋಭಾವ ಜೀವಕಾರುಣ್ಯ ಕುರಿತ ದೂರದೃಷ್ಟಿ ಹೊಂದಿದ್ದರು ಹಾಗಾಗಿ ಪರಿಸರ ಸಂಬಂಧಿಯಾದ ಸೃಷ್ಟಿಯ ಪರಿಕಲ್ಪನೆ ಕುರಿತ ಚಿಂತನೆ ತುಂಬ ಮಹತ್ವದಾಗಿದೆ.

ಸೃಷ್ಟಿಯ ಅರ್ಥ :

ಸೃಷ್ಟಿ ಎನ್ನುವ ಪದಕ್ಕೆ ಶಬ್ದಶಃ ಅರ್ಥವೆಂದರೆ "ಉತ್ಪತ್ತಿ; ಹುಟ್ಟು; ಜಗತ್ತು ರಚನೆ, ನಿರ್ಮಾಣ, ನಿಸರ್ಗ, ಪ್ರಕೃತಿ"[೭೨] ಮೊದಲಾದ ಅರ್ಥಗಳಿವೆ "ವಿಶ್ವ"[೭೩] ಎನ್ನುವ ಅರ್ಥವೂ ಇದೆ. ಅಂದರೆ ಸಮಸ್ತ ಲೋಕ ಒಳಗೊಂಡಿದ ವಿಶ್ವ ಎಂಬ ಅರ್ಥವಿದೆ.

ಸೃಷ್ಟಿಯ ಪರ್ಯಾಯ ಹೆಸರಾದ ವಿಶ್ವವೆಂದರೆ "ಸಮಸ್ತವನ್ನು ಒಳಗೊಂಡಿರುವ ಭೌತ ವ್ಯವಸ್ಥೆ (ಯುನಿವರ್ಸ್) ನಮ್ಮಗೂ ನಮ್ಮ ಉಪಕರಣಗಳಿಗೂ ಗೋಚರವಾಗುವ ಮತ್ತು ವರ್ತಮಾನದಲ್ಲಿ ಗೋಚರವಾಗದೆ ಮುಂದೆಂದೋ ಅನಾವರಣಗೊಳ್ಳಲಿರುವ ಸಕಲ

---

72 ಕನ್ನಡ ನಿಘಂಟು ಸಂ–೮, ಕ.ಸಾ.ಪ. ಬೆಂಗಳೂರು–೧೯೯೫, ಪು.ಸಂ.೮೬೭೪.

73 ಕನ್ನಡ ನಿಘಂಟು ಸಂ–೮, ಕ.ಸಾ.ಪ. ಬೆಂಗಳೂರು–೧೯೯೫, ಪು.ಸಂ.೮೬೭೪.

ಭೌತಕಾರ್ಯಗಳ ಶಕ್ತಿ ಆಕರಗಳ ಮತ್ತು ವಿಕೀರಣ ಮೂಲಗಳ ಸಮಗ್ರ ಸಮುದಾಯವಿದು ವಿಶ್ವದ ವಾಖ್ಯೆ ನಮ್ಮಿಂದ ಆರಂಭವಾಗಿ ಮುಂದೆ ನಮ್ಮ ನಗರ ದೇಶ, ಭೂಮಿ, ಸೌರವ್ಯೂಹ, ಆಕಾಶಗಳಿಗೆ ಇನ್ನೂಮುಂದಿನ ಬ್ರಹ್ಮಾಂಡಗಳ (ಗ್ಯಾಲಾಕ್ಸಿ) ವಿಸ್ತರಿಸುತ್ತದೆ"[೭೪] ಈ ಹಿನ್ನೆಲೆಯೂ ಸೃಷ್ಟಿಯ ಅರ್ಥವನ್ನು 'ಇದ ಮಿತ್ಥಂ' ಎಂದು ಹೇಳಲಾಗದು. ಯಾವುದು 'ಅನಂತ' ಎಂದು ಪರಿಭಾವಿಸುತ್ತೆವೆಯೋ ಅದೇ ಸೃಷ್ಟಿ, ಸೃಷ್ಟಿಎಂದರೆ ಹುಟ್ಟು ರಚನೆ ಅರ್ಥಗಳಿವೆ ಅದರರ್ಥ ಈಗಾಗಲೇ ಜನಸಿದ್ದು ಅಷ್ಟೇಅಲ್ಲ ಮುಂದೆ ಗೋಚರವಾಗಬಹುದಾದದ್ದು ಸೇರಿಸಿ ಹೇಳಿರುವುದರಿಂದ ಸೃಷ್ಟಿಯ ಪರಿಕಲ್ಪನೆ ಚಿಂತನೆ ನಿರಂತರ.

ಸೃಷ್ಟಿಯ ಮೂಲ – ವಚನಕಾರರು :

ಸೃಷ್ಟಿಯ ಉಗಮದ ಬಗ್ಗೆ ಮನುಷ್ಯ ಹುಟ್ಟಿನಿಂದ ಈ ವರೆಗೆ ತನ್ನ ಸುತ್ತಲಿನ ಜಗತ್ತು ಆಕಾಶದಲ್ಲಿರುವ ಆಕಾಶಕಾಯಗಳು, ಗ್ರಹ, ಉಪಗ್ರಹಗಳು, ಗಮನಿಸುತ್ತಲೇ ಅವುಗಳ ವಿಸ್ಮಯ ಕುರಿತು ಚಿಂತಿಸಿದ್ದಾರೆ. ಅವುಗಳ ಹುಟ್ಟನ್ನು ಶೋಧಿಸಿದ್ದಾರೆ ಹೀಗೆ ಮನುಷ್ಯರ ಚಿಂತನಾಕ್ರಮ ಬೆಳೆದಂತಲ್ಲ ಸೃಷ್ಟಿಯ ಮೂಲದ ಬಗ್ಗೆ ತಾನು ಚಿಂತಿಸಿದ ಚಿಂತನೆಗಳನ್ನೇ ಸತ್ಯವೆಂದು ಹೇಳಿ ಅವುಗಳಿಗೆ ಸಿದ್ದಾಂತದ ಸುರ್ಮಾಲೇಪ ಹಚ್ಚುತ್ತಾ ಬಂದಿದಾನೆ. ಮನುಷ್ಯರ ಸಾಂಘಿಕ ಬದುಕು ಬೆಳೆದಂತೆ ಹೆಚ್ಚು ಹೆಚ್ಚು ಮತಧರ್ಮಗಳು ಸಿದ್ಧಾಂತಗಳು ಹುಟ್ಟಿದವು. ಆಯ ಧರ್ಮ ತತ್ವಗಳು ತಮ್ಮ ತಮ್ಮ ನೇರಕ್ಕೆ ಸೃಷ್ಟಿಯ ಮೂಲದ ಬಗ್ಗೆ ಹೊಸ ಹೊಸ ಪರಿಕಲ್ಪನೆಗಳನ್ನು ಹುಟ್ಟುಹಾಕಿದರು. ಅವುಗಳ ಸತ್ಯಾಸತ್ಯೆತೆಯ ಅಧಿಕವಾಗಿದ್ದ ಅವುಗಳನ್ನು ವೈಜ್ಞಾನಿಕ ದೃಷ್ಟಿಕೊನ ದಿಂದ ವಿಶ್ಲೇಷಣೆ ಮಾಡುವಾಗ ಅವೆಲ್ಲ ತಪ್ಪಿರಬಹುದು ಮಿಥ್ಯವಲ್ಲ ಏಕೆಂದರೆ ಅವೆಲ್ಲ ಮನುಷ್ಯರ ಆಲೋಚನಾ ಸ್ಥರದ ಪ್ರಗತಿಯ ಹಂತಗಳೆಂದು ಹೇಳಬಹುದು ಆದರೆ 'ಮಿಥ್ಯ'ಎಂದು ಹೇಳಲಾಗದು. ಬಹುಮುಖ್ಯವಾಗಿ "ಹಿಂದೂ ಧರ್ಮದ ಹಾಗೂ ಜೈನ ಧರ್ಮದ ಹಾಗೂ ಕ್ರಿಶ್ಚಿಯನ್ ಧರ್ಮದ ಪರಿಕಲ್ಪನೆಗಳನ್ನು ವೈಜ್ಞಾನಿಕ ಓರೆಗಳಿಗೆ ಸಲುವುದಿಲ್ಲ."[೭೫] ವೈಜ್ಞಾನಿಕ ಪರಿಕಲ್ಪನೆಗಳು, ನಿಹಾರಿಕ ಸಿದ್ಧಾಂತ (Nebular Hypothesis) ಎಬ್ಬರದ ಸಿದ್ಧಾಂತ (Tidal

[74] ವಿಶ್ವ ಕನ್ನಡ ವಿಶ್ವಕೋಶ ಸಿ.ಡಿ., ಮೈಸೂರು ವಿಶ್ವವಿದ್ಯಾಲಯ, ಮೈಸೂರು–೨೦೦೬.

[75] ವಚನಗಳಲ್ಲಿ ಭೂ–ವೈಜ್ಞಾನಿಕ ರೂಪಕಗಳ ವಿಶೇಷಣೆ – ಡಾ. ಎಚ್.ಚಂದ್ರಶೇಖರ, ವಚನಗಳಲ್ಲಿ ವಿಜ್ಞಾನ, ಸಂ. ಡಾ.ವೀರಣ್ಣ ರಾಜೂರ್, ಪು.ಸಂ.೧೦೮.

Theory) ಬೋಡು ಸಂಗಾತಿ ಸಿದ್ಧಾಂತ (Binary Theory) ಮತ್ತು ಮಹಾ ಸ್ಫೋಟದ ಸಿದ್ಧಾಂತ (Big Bang Theory) ಎಂದು ಹಂತ ಹಂತವಾಗಿ ಪ್ರಸಾರಕ್ಕೆ ಬಂದವು ಇಂದು ಬಹುತೇಕ ವಿದ್ವಾಂಸರು ಮಹಾಸ್ಫೋಟ ಸಿದ್ಧಾಂತವನ್ನು ಒಪ್ಪುತಾರೆ"[೭೬]

ಈ ಮಹಾ ಸ್ಫೋಟ ಸಿದ್ಧಾಂತವನ್ನು ಅದರ ಪೂರ್ವ ಸ್ಥಿತಿಯನ್ನು ಕುರಿತು ವಚನಕಾರರ ನಿಲುವು ಹೀಗಿದೆ.

"ಅಯ್ಯಾ ತತ್ತ ವಿತತ್ವ ಗಳಿಲ್ಲದಂದು. ಪ್ರಕೃತಿ ಪುರುಷರಿಲ್ಲದಂದು
ಜೀವಪರಮರೆಂಬ ಭಾವ ತಲೆ ದೂರದಂದು, ಏನೂ ಏನೂ ಇಲ್ಲದಂದು
ಬಯಲು ಒಂದು ಒಂದು ಬಿಂದುವಾಯಿತು ನೋಡಾ
ಆ ಬಿಂದು ಅಕ್ಷರ ತ್ರಯದ ಗಡುಗೆಯಲ್ಲಿ ಕುಳ್ಳಿರಲು
ಓಂಕಾರ ಉತ್ಪತ್ತಿಯಾಯಿತ್ತು.
ಆ ಓಂಕಾರನಾದದಲ್ಲಿ ಮೂರ್ತಗೊಂಡನೊಬ್ಬಶರಣ
ಆ ಶರಣನಿಂದಾಯಿತ್ತು, ಆ ಪ್ರಕೃತಿಯಿಂದಾಯಿತ್ತು ಲೋಕ
ಈ ಲೋಕ ಲೌಕಿಕವನತಿಗಳೆಂದು ನಿಜದಲ್ಲಿ ನಿವಾಸಿಯಾಗಿಪ್ಪ
ಗುಹೇಶ್ವರನ ಶರಣ ಚನ್ನಬಸವಣ್ಣನ ಘನವನು
ಬಸವಣ್ಣನ ಕೃಪೆಯಿಂದಲರಿದು ನಮೋನಮೋ ಎನುತಿರ್ದೆನು ॥"[೭೭]

ಹೀಗೆ ಸೃಷ್ಟಿಯ ಮೂಲವನ್ನು ಕುರಿತು ಅಲ್ಲಮನ ನಿಲುವು ಮಹಾಸ್ಫೋಟ ಪೂರ್ವಸ್ಥಿತಿ ಕುರಿತ ಸೃಷ್ಟಿಚಿತ್ರಣವಾಗಿದೆ.

ಈ ದೇಶದಲ್ಲಿ ದೇವರ ಹೆಸರಿನಲ್ಲಿ ನಡೆದಷ್ಟು ಶೋಷಣೆ ಮತ್ತಾವ ದೇಶದಲ್ಲಿಯೂ ನಡೆದಿಲ್ಲವೆಂದೇ ಹೇಳಬಹುದು. ಶ್ರೀಮಂತರು ಬಡವರನ್ನು ಆರ್ಥಿಕವಾಗಿ ಶೋಷಿಸುತ್ತಿದ್ದರೆ, ಪುರೋಹಿತರು, ಶ್ರೀಮಂತರನ್ನು, ಬಡವರನ್ನು ಕೂಡಿಯೇ ಶೋಷಿಸುತ್ತಿದ್ದರು. ಅದು ಇವತ್ತಿಗೂ ಇದೆ. ಈ ಶೋಷಣೆಗಾಗಿ ಅವರಿಗೆ ಸುಲಭವಾಗಿ ಸಿಕ್ಕ ಬಹುದೊಡ್ಡ ಆಯುಧ ದೇವರಾಗಿತ್ತು. ದೇವರನ್ನು ಸೃಷ್ಟಿಸಿ, ಆತನ ಹೆಸರಿನಿಂದ ಜನರ ಮನಸ್ಸಿನಲ್ಲಿ ಭಯವನ್ನು ಭಿತ್ತಿ, ಜನಸಮೂಹವನ್ನು ತಮ್ಮ ಕೈಗೆ ತೆಗೆದುಕೊಂಡ ಪುರೋಹಿತವರ್ಗ ಇಡೀ ಸಮಾಜವನ್ನು

---

76 ವಿವರಕ್ಕಾಗಿ ನೋಡಿ – ಸೃಷ್ಟಿ ಜಗತ್ತು, ಚಂದ್ರಶೇಖರ ಎಚ್., ವಚನಕಾರರ ಪ್ರಮುಖ ಪರಿಕಲ್ಪನೆಗಳು, ಸಂ.ಅಕ್ಕೂರ ಮಠ, ಸರ್ಪ ಭೂಷಣ.

77 ಅಲ್ಲಮಪ್ರಭುದೇವರ ವ.ಸಂ.–೨, ಸಂ.ಡಾ.ಬಿ.ವಿ.ಮಲ್ಲಾಪೂರ, ವ.ಸಂ.೭೮೫, ಪು.ಸಂ.೨೨೦.

ನಿರ್ವೀರ್ಯನನ್ನಾಗಿ ಮಾಡಿತು. ಅನೇಕಾನೇಕ ದೇವರುಗಳನ್ನು, ಹುಟ್ಟು ಹಾಕಿದ ಈ ಜನ, ಶ್ರೀ ಸಾಮಾನ್ಯರು, ಸದಾಕಾಲ ಇವುಗಳ ಸುತ್ತ ಸುತ್ತು ಹಾಕುವಂತೆ ಮಾಡುವಲ್ಲಿ ಪುರೋಹಿತವರ್ಗ ಯಶಸ್ವಿಯಾಯಿತು.

ನಿಸರ್ಗದಲ್ಲಿ ನಡೆಯುವ ಅದ್ಭುತ ಚಮತ್ಕಾರಗಳಿಗೆ ಮನುಷ್ಯ, ಕೆಲವೊಮ್ಮೆ ಆಶ್ಚರ್ಯದಿಂದ ಕೈಮುಗಿದುದುಂಟು. ಬೀಸುವ ಗಾಳಿ, ಸುರಿಮಳೆ, ಬೆಳಕು ನೀಡುವ ಸೂರ್ಯ ಬೆಳದಿಂಗಳು ಕೊಡುವ ಚಂದ್ರ, ಹರಿವ ಮಳೆ, ಭೋರ್ಗರೆಯುವ ಸಮುದ್ರ, ಗುಡುಗು, ಮಿಂಚು, ಸಿಡಿಲು, ಈ ಮುಂತಾದ ನಿಸರ್ಗದ ಅದ್ಭೂತಗಳಿಗೆ ಮನುಷ್ಯ ಕೃತಜ್ಞತೆಯಿಂದಲೋ, ಭಯದಿಂದಲೋ ತಲೆಬಾಗಿದ. ಆತನ ಈ ದೌರ್ಬಲ್ಯವನ್ನೇ ತಮ್ಮ ಬಲವನ್ನಾಗಿಸಿದ ಪುರೋಹಿತವರ್ಗ ನಿಸರ್ಗದ ಅದ್ಭುತಗಳ ಹಿಂದೆ ಅಡಗಿರುವ ದಿವ್ಯ ಚೈತನ್ಯವನ್ನು ಅರಿಯದೆ ಈ ಶಕ್ತಿಗಳ ಬದಲಾಗಿ ದೇವರನ್ನು ಸೃಷ್ಟಿಸಿ ಜನರಿಗೆ ದಾರಿ ತಪ್ಪಿಸಿದರು.

ಒಬ್ಬ ಒಂದು ದೇವರನ್ನು ಸೃಷ್ಟಿಸಿದರೆ ಇನ್ನೊಬ್ಬ ಅದಕ್ಕಿಂತ ಬಲಿಷ್ಠ ದೇವರನ್ನು ಸೃಷ್ಟಿಸಿದ. ಒಬ್ಬ ಶಿವನನ್ನು ಸೃಷ್ಟಿಸಿದರೆ, ಇನ್ನೊಬ್ಬ ಆದಿಶಿವನನ್ನು ಸೃಷ್ಟಿಸಿ ತನ್ನ ದೇವರೇ ಆದಿಯೆಂದು ಸಾಧಿಸಲಾರಂಭಿಸಿದ.

ಈ ಜಗತ್ತು ನಿಷ್ಕ್ರೀಯವಲ್ಲ. ನಿರಂತರ ಕ್ರಿಯಾಶೀಲ, ಬೀಜ ಮೊಳೆಯುತ್ತದೆ. ಹೂವು ಅರಳುತ್ತದೆ. ಕಾಯಿಗಟ್ಟುತ್ತವೆ. ಹಣ್ಣು ಉದುರುತ್ತದೆ. ಪ್ರತಿಕ್ಷಣವೂ ಇಲ್ಲಿ ಏನಾದರೂ ಒಂದು ಹೊಸದು ನಿರ್ಮಾಣವಾಗುತ್ತದೆ. ಅದನ್ನು ಸೃಷ್ಟಿ ಎನ್ನುತ್ತಾರೆ. ಅದರಿಂದಲೇ ಈ ಜಗತ್ತಿಗೆ ಸೃಷ್ಟಿ ಎಂಬ ಹೆಸರು. ಹೀಗೆ ಸೃಷ್ಟಿಯಾದುದು ಮತ್ತೊಂದು ಕ್ಷಣದಲ್ಲಿ ನಾಶವಾಗುತ್ತದೆ. ಅದನ್ನು ಸಂಹಾರ ಎನ್ನುತ್ತಾರೆ. ಈ ಜಗತ್ತಿನಲ್ಲಿ ಪ್ರತಿಕ್ಷಣವೂ ಅಸಂಖ್ಯ ಕ್ರಿಯೆಗಳು ನಡೆಯುತ್ತವೆ. ಅದುವೇ ಸೃಷ್ಟಿ–ಸಂಹಾರ.

ಅರಳಿದ ಹೂವು ಬಾಡುತ್ತದೆ. ಹೊತ್ತಿದ ದೀಪ ಆರುತ್ತದೆ. ಬೆಳೆದ ಮರ ಬೀಳುತ್ತದೆ. ಹುಟ್ಟಿದ ಮನುಷ್ಯ ಮರಣ ಹೊಂದುತ್ತಾನೆ. ಪ್ರತಿ ಕ್ಷಣಕ್ಷಣ ಸೃಷ್ಟಿ ಸಂಹಾರ, ನಿರ್ಮಾಣ–ನಾಶ ನಡೆದಿರುತ್ತದೆ. ಅಂತೆಯೇ ಬುದ್ಧನು ಸರ್ವಂ ಕ್ಷಣಿಕಂ ಎಂದ. ಅದು ವಿಶ್ವಲೀಲೆ. ಈ ಸೃಷ್ಟಿ

ಸಂಹಾರ ಎರಡೂ ಹೊಂದಿಯೇ ನಡೆಯುತ್ತವೆ. ಸೃಷ್ಟಿ ಸುಂದರವಾಗಿದೆ. ಅದೂ ಎಂದೂ 'ಸಂಹಾರ' ಆಗಲೇಬಾರದು ಎಂದರೆ ನಡೆದೀತೆ?

ಪೂರ್ವದಿಕ್ಕು ಮಂಗಲಮಯ ಬೆಳಕನ್ನು ಕೊಡುತ್ತದೆ. ಪಶ್ಚಿಮದಿಕ್ಕು ಭೀಕರ ಕತ್ತಲೆಯನ್ನು ಹರಡುತ್ತದೆ. ನಮಗೆ ಪೂರ್ವ ದಿಕ್ಕು ಬೇಕು ಪಶ್ಚಿಮ ದಿಕ್ಕು ಬೇಡವೆಂದರೆ ಆದಿತೆ; ಅರಳುವಿಕೆ ಇರಲಿ ಬಾಡುವುದು ಬೇಡವೆಂದರೆ ಹೇಗೆ? ಈ ಸೃಷ್ಟಿಯಲ್ಲಿ ಎಲ್ಲವೂ ಎರ'ಡೆರಡು ದಂಡೆ ಸೃಷ್ಟಿ-ಸಂಹಾರ, ಜನನ-ಮರಣ, ಜಯ-ಅಪಜಯ, ಸುಖ-ದುಃಖ ಮೊದಲಾದವು. ಇವುಗಳಿಂದ ಕೂಡಿದ್ದೇ ಜೀವನ.

ಈ ಜಗತ್ತಿನಲ್ಲಿ ಪ್ರತಿಕ್ಷಣವೂ ಒಂದು ಕಡೆ ಸೃಷ್ಟಿಯ ಕಾರ್ಯ ಇನ್ನೊಂದು ಕಡೆ ಸಂಹಾರದ ಕಾರ್ಯ ನಡೆದಿರುತ್ತದೆ. ಈ ಕಾರ್ಯಕ್ಕೆ ಕಾರಣವಾಗಿರುವ ಮಹಾನ್ ಶಕ್ತಿಯೇ ಸೃಷ್ಟಿ ಒಂದು ಮರದಿಂದ ಬಿದ್ದ ಎಲೆ ಅಂತರಿಕ್ಷದಲ್ಲಿ ಹಾರುತ್ತದೆ. ಮೇಘಮಾಲೆಯೊಂದಿಗೆ ತೇಲುತ್ತದೆ. ಆ ಎಲೆಯನ್ನು ಗಗನದೆತ್ತರ ಹಾರಿಸಿದು, ಬೀಸುವ ಗಾಳಿ! ಗಾಳಿಗೆ ಸಿಕ್ಕು ಏರುತ್ತದೆ. ಇಳಿಯುತ್ತದೆ, ತೇಲುತ್ತದೆ, ಮುಳುಗುತ್ತದೆ. ನಮ್ಮ ಕಣ್ಣಿಗೆ ಈ ಎಲೆ ಕಾಣುತ್ತದೆಯೇ ಹೊರತು ಗಾಳಿ ಕಾಣುವುದಿಲ್ಲ. ಹಾಗೆಯೇ ಸೃಷ್ಟಿ ಸಂಹಾರದ ಕಾರ್ಯಗಳು ನಮಗೆ ಕಾಣುತ್ತವೆ. ಆದರೆ, ಈ ಕಾರ್ಯಗಳೆಲ್ಲಾ ಕಾರಣನಾಗಿರುವ ದೇವರು ಕಾಣುವದಿಲ್ಲ. ಈ ಕಾರ್ಯಗಳೆಲ್ಲ ನಿರಂತರ ನಡೆದೇ ಇರುತ್ತದೆ.

ಹಾಗೆಯೇ ದೇವರದು ಬಿಡುವಿರದ ದುಡಿಮೆ. ಬೀಸುವ ಗಾಳಿ ಬೀಸದಿದ್ದರೆ, ಮಳೆ ಸುರಿಯದಿದ್ದರೆ, ರವಿ ಬೆಳಗದಿದ್ದರೆ, ಈ ಜಗತ್ತು ನಡೆಯುವುದಿಲ್ಲ.

ಇತ್ತೀಚಿನ ವಿಜ್ಞಾನಿಗಳು ಭೂಮಿಯ ಹುಟ್ಟಿನ ಬಗೆಗೆ ಸಂಶೋಧನೆ ನಡೆಸುತ್ತಿರುವುದರ 'ಬಿಗ್ ಬ್ಯಾಂಗ್ ಥಿಯರಿ' ಬಗ್ಗೆ ಪತ್ರಿಕೆಗಳಿಂದ ದೂರದರ್ಶನದಿಂದ ತಿಳಿದುಬಂದಿತ್ತು. ಭೂಮಿ ಹುಟ್ಟಿದ ದಿನ ಯಾವಾಗವೆಂದು ನಿಖರವಾಗಿ ಹೇಳುವುದು ಸಾಧ್ಯವಿಲ್ಲ ಈಗ ನಾವು ಕಾಣುವ ಗ್ರಹನಕ್ಷತ್ರಗಳ ಸ್ಥಿತಿಯನ್ನು ನೋಡಿ ಭೂಮಿ ಹೇಗೆ ಹುಟ್ಟಿರಬಹುದು ಎಂದು ಊಹಿಸಬಹುದಷ್ಟೆ. ಭೂಮಿ ಹುಟ್ಟುವ ಮುನ್ನ ಈ ಬ್ರಹ್ಮಾಂಡದ ರೂಪ ಹೇಗಿತ್ತು? ನಾವು ಯಾವುದಕ್ಕೆ ಆಕಾಶ ಎಂದು ಕರೆಯುತ್ತೇವೆಯೋ ಅದನ್ನೇ ತತ್ವಜ್ಞಾನಿಗಳು ಮಹಾಶೂನ್ಯ ಎಂದು ಕರೆಯುತ್ತಾರೆ. ಈ

ಮಹಾ ಶೂನ್ಯದಲ್ಲಿದ್ದದ್ದು ಧೂಳಿನ ಕಣ ಮತ್ತು ಅನಿಲ. ಈ ಕಣಗಳು ಪೂರ್ತಿ ಚದುರಿಬಿಟ್ಟವು. ಅವು ಒಂದೆಡೆ ಸೇರಲು ಅವಕಾಶವೇ ಇಲ್ಲದಾಯ್ತು. ಆಗ ಧೂಳಿನ ಕಣಗಳು ಅಲ್ಲಲ್ಲಿ ಒಗ್ಗೂಡಲು ಆರಂಭವಾದವು. ಹೀಗೆ ಕೂಡಿಕೊಂಡ ಭಾಗಗಳಲ್ಲಿ ಮತ್ತೆ ಅನಿಲ ಒಟ್ಟಾಗಲಾರಂಭಿಸಿತು. ಧೂಳಿನ ಕಣಗಳು ಒಂದಾಗುತ್ತಿದ್ದುದು ಮೋಡದಲ್ಲಿರುವ ಮಳೆ ಹನಿಯಂತೆ ಈ ಮಳೆಯ ಕಣಗಳು ನಿಧಾನವಾಗಿ ಸಾಂಧ್ರವಾಗುತ್ತಾ ಭಾರವಾಗಿ, ಆಕಾಶದಿಂದ ಬೇರೆಯಾಗಿ ಸುರಿಯುವಂತೆ ಅಲ್ಲಿ ಒಗ್ಗೂಡಿದ ಧೂಳಿನಕಣದ ಮುದ್ದೆಗಳು ದೊಡ್ಡದಾಗುತ್ತಾ ಭಾರವಾಗಿ ಒಂದೆಡೆ ಸೇರಿದ ಅನಿಲದಿಂದ ಸಿಡಿದು ದೂರವಾದವು. ಅನಂತರ ಆ ಮುದ್ದೆಗಳೆಲ್ಲ ಸೇರಿ ಅನಿಲಗೋಲವನ್ನು ನಡುವೆ ಸೇರಿಗೊಂಡು ಅದರಸುತ್ತಾ ಎಲ್ಲಾ ಧೂಳಿನ ಮುದ್ದೆಗಳ ಸುತ್ತ ಸುತ್ತಲೂ ಪ್ರಾರಂಭವಾದವು. ಈ ಗದ್ದಲದ ಮಧ್ಯೆ ಅನಿಲಗೋಳ ಸಾವಕಾಶವಾದರೂ ಕೂಡ ಬಿಸಿಯಾಗಲು ಪ್ರಾರಂಭವಾಯಿತು. ಈ ಬಿಸಿ, ಆ ಧೂಳಿನ ಮುದ್ದೆಗಳನ್ನು ಮತ್ತಷ್ಟು ದೂರಕ್ಕೆ ತಳ್ಳಿತು. ಅನಿಲದ ಗೋಳ ಬಿಸಿಯಾಗುತ್ತಾ ಆಗುತ್ತಾ ಬೆಂಕಿಯ ಗೋಳವಾಗಿ ಬದಲಾಯಿತು. ಇಂದು ಪ್ರತಿನಿತ್ಯ ನೋಡುವ ಅಸಂಖ್ಯೆ ನಕ್ಷತ್ರಗಳೇ ಹೀಗೆ ಬದಲಾದ ಬೆಂಕಿಯ ಗೋಳಗಳು. ಅವು ನಮ್ಮಿಂದ ಕೋಟಿಗಟ್ಟಲೆ ದೂರ ಇರುವುದರಿಂದ ನೋಟಕ್ಕೆ ಅಷ್ಟು ಸಣ್ಣದಾಗಿ ಮಿಂಚು ಹುಳುಗಳಂತೆ ಕಾಣುತ್ತವೆ. ನಮ್ಮ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ಇದರ ಮೇಲಿಂದಲೇ ಒಗಟುಗಳು ಕಟ್ಟಿದ್ದುಂಟು. ಅವ್ವನ ಸೀರಿ ಒಗಿಕ್ಕಬರಲ್ಲ, ಅಪ್ಪನ ರೋಕ್ಕ ಎಣಸಾಕ ಬರಲ್ಲ. ಬಾರಿಕದಾಗ ಚೀರಿಗಿಬಿದಾವ ಕಣ್ಣಿಗಿ ಕಾಣತಾವ ಕೈಗೆ ಬರಲ್ಲ. ಇಂತಹ ನಕ್ಷತ್ರಗಳಲ್ಲೆ ನಮ್ಮ ಸೂರ್ಯ ಕೂಡ ಮೇಲೆ ಹೇಳಿದ ಆ ಅಗ್ನಿಗೋಳವನ್ನು ಸುತ್ತುತ್ತಿದ್ದ ಧೂಳಿನ ಕಣಗಳ ಮುದ್ದೆಗಳೇ ಈಗ ನಾವು ಕಾಣುತ್ತಿರುವ ಗ್ರಹಗಳು. ಆ ಗ್ರಹಗಳು, ಆ ಗ್ರಹಗಳಲ್ಲಿ ಭೂಮಿ ಕೂಡ ಒಂದು.

ನಮ್ಮ ಶರೀರಕ್ಕೆ ಮುಪ್ಪು ಒಂದೇ ದಿನದಲ್ಲಿ ಆವರಿಸುತ್ತದೆಯೋ ಖಂಡಿತವಾಗಿಯೂ ಇಲ್ಲ. ನಮ್ಮ ಭೂಮಿ ಕೂಡ ಒಂದೇ ದಿನದಲ್ಲಿ ಹುಟ್ಟಲಿಲ್ಲ. ಆದ್ದರಿಂದಲೇ ಅದರ ಜನ್ಮದ ಬಗ್ಗೆ ನಿಖರವಾಗಿ ಯಾರಿಗೂ ಗೊತ್ತಿಲ್ಲ. ಸೂರ್ಯ, ಭೂಮಿ, ಚಂದ್ರ, ಇವೆಲ್ಲ ಸಹೋದರ ಸಂಬಂಧಗಳು ಆದರೆ, ಮೊದಲು ಹುಟ್ಟಿದ್ದು ಯಾವುದು? ಈಗಂತೂ ತಿಳಿಯಲು ಸಾಧ್ಯವಿಲ್ಲ. ಮುಂದೊಂದು ದಿನ ನೋಡೋಣ.

ಇವೆಲ್ಲವೂ ನಕ್ಷತ್ರಗಳಿಗಿಂತ ಬಹಳ ಚಿಕ್ಕವು. ಹಗುರ ಕೂಡ. ಅವುಗಳಷ್ಟು ಬಿಸಿಯೂ ಇಲ್ಲ. ಹೀಗೆ ಬಿಸಿ ಶೀತದಿಂದಲೇ ನಕ್ಷತ್ರಗಳು ನಕ್ಷತ್ರಗಳಾಗಿಯೇ, ಗ್ರಹಗಳು ಹಾಗೆಯೇ ಇರಲು ಸಾಧ್ಯವಾಗಿವೆ. ಸೂರ್ಯನಿಗಿಂತಲು, ಭೂಮಿ ಬಹಳ ಚಿಕ್ಕದು. ಸೂರ್ಯ ಅನ್ನುವುದು ಒಂದು ಖಾಲಿ ಚೀಲ, ಭೂಮಿ ಅನ್ನುವುದು ಚೀಲದ ತುಂಬ ಇರುವ ಜೋಳದಂತೆ. ಸುಮಾರು ನಾಲ್ಕು ನೂರಾ ಅರವತ್ತು ಕೋಟಿವರ್ಷಗಳಿಂದ ಧೂಳಿನ ಕಣಗಳಿಂದ ಕೂಡಿದ ಮುದ್ದೆಗಳು ಆ ಉರಿದ ಗ್ಯಾಸನ ಗೋಳವನ್ನು ಹೇಗೆ ಸುತ್ತಲಾರಂಭಿಸಿದ್ದವೂ, ಇವತ್ತಿಗೂ ಅದೇ ಕೆಲಸ ನಡೆಯುತ್ತಿದೆ. ಭೂಮಿಯು ಸೂರ್ಯನ ಹತ್ತಿರ ಹೋಗುವ ಸಾಧ್ಯತೆಗಳಿಲ್ಲ. ಹತ್ತಿರ ಹೋದರೆ ಸುಟ್ಟು ಬೂದಿಯಾಗುವ ಭಯ, ಸುಮಾರು ಒಂಬತ್ತು, ಕೋಟಿ ಮೂವತ್ತು ಲಕ್ಷ ಮೈಲುಗಳ ದೂರದಲ್ಲಿಯೇ ಈ ಸೆಳೆತ ಪ್ರತಿ ಸೆಳೆತಗಳಲ್ಲಿ ಸಿಕ್ಕಿ ಭೂಮಿ ಪ್ರತಿದಿನ ಇಪ್ಪತ್ನಾಲ್ಕು ಗಂಟೆಯೂ ಸೂರ್ಯನ ಸುತ್ತ ಸುತ್ತತ್ತಾ ಇದೆ.

ಆಗಸದಲ್ಲಿ ಸೂರ್ಯನಂತಹ ಅದೆಷ್ಟೋ ಕೋಟ್ಯಾನು ಕೋಟಿ ಸೂರ್ಯರಿದ್ದಾರೆ. ಗ್ರಹಗಳಿವೆ, ಭೂಮಿಯಲ್ಲಿ ಘಾಟಿಸುವಂತಹ ಘಟನೆ ಆಗಸದಲ್ಲಿ ಘಾಟಿಸುವಂತಿಲ್ಲ.

ಭೂಮಿ ಹುಟ್ಟಿದಾಗ ಅದು ತಣ್ಣಗಾದ ಧೂಳಿನ ಮುದ್ದೆಯಂತಿತ್ತು. ಗಾಳಿಯಾಗಲಿ, ಸಮುದ್ರವಾಗಲಿ ಇರಲಿಲ್ಲ. ಚೆಂಡನ್ನು ನೆಲದ ಮೇಲಿಟ್ಟು ಒತ್ತಿದ್ರೆ ಅದರ ಒತ್ತಡ ಕೆಳಗಡೆ ಬೀಳುವಂತೆ ಈ ಚಂಡಿನ ಒಳಭಾಗ ನಿಧಾನವಾಗಿ ಬಿಸಿಯಾಗುತ್ತಾ ಆಗುತ್ತ 'ಯುರೇನಿಯಂ' ನಂತಹ ಪದಾರ್ಥಗಳಲ್ಲಿ ತೇಜ ಹೊರಬರುವಂತಾಯ್ತು. ಈ ತೇಜ ಕೂಡ ಚಂಡಿನ ಒಳಗಡೆ ಬಿಸಿಗೊಳಿಸಲಾರಂಭಿಸಿತು. ಈ ಬಿಸಿ ನಿಧಾನವಾಗಿ ಹೆಚ್ಚಾಗುತ್ತಾ ಹೆಚ್ಚಾಗುತ್ತಾ ಭೂಮಿಯೊಳಗೆ ಸೇರಿ ಹೋಗಿ ಗಾಳಿ ಮತ್ತು ಭಾಷ್ಪಗಳ ಹೊರಗೆ ಸ್ಫೋಟಗೊಂಡವು. ನಂತರ ಎಷ್ಟೋ ದಿನಗಳವರೆಗೆ ಭೂಮಿಯ ಮೇಲೆ ಶೀತದಂತ ಈ ಬಿಸಿಗಾಳಿ ತಣ್ಣಗಾಗುತ್ತಾ ಬಂದು ಕೊನೆಗೊಮ್ಮೆ ಭೂಮಿಗೆ ಹೊಂದಿಕೊಂಡು ಬಿಟ್ಟಿತು.

ಈ ರೀತಿ ಸಿಡಿದು ಬಂದ ಬಿಸಿ ಭಾಷ್ಪ ತಣ್ಣಗಾಗಿ ನೀರಾಯಿತು. ಈ ನೀರೆ ವಿಶಾಲ ಸಮುದ್ರವಾಯಿತು. ಈ ಭೂಮಿ ನೀರಿನಲ್ಲಿ ಹುಟ್ಟಿ ನಂತರ ಸುಮಾರು ಕೋಟಿ ವರ್ಷಗಳ ನಂತರ ನೀರಿನಲ್ಲಿ ಒಂದು ಅಚ್ಚರಿ ಉಂಟಾಯ್ತು ಅದೇ ಜೀವ. ಈ ಜೀವಿ ಬಂದದ್ದು ಎಲ್ಲಿಂದ

ಇದು ಭೂಮಿಯಿಂದಲೇ ಭೂಮಿಯ ಹುಟ್ಟಿದ ನಂತರ ಅದರೊಳಗಿನ ಪದಾರ್ಥಗಳು ಒಂದರೊಳಗೊಂದು ಸೇರುತ್ತಾ ಸೇರುತ್ತಾ ಜೀವದ ಉಗಮವಾಯ್ತು. ಅದಕ್ಕೆ ಕಾರಣ ಭೂಮಿಯಲ್ಲಿರುವ ವಸ್ತುಗಳು. ಭೂಮಿಯಲ್ಲಿರುವ ಮೂಲವಸ್ತುಗಳು ೧೦೯ ಅವುಗಳು ಬೇರೆ ಬೇರೆ ರೀತಿಯಲ್ಲಿ ಸೇರಿ ಅನೇಕ ಲಕ್ಷ ವಸ್ತುಗಳಾಗಿವೆ. ಅವಕ್ಕೆ ಮೂಲವಸ್ತುಗಳೆನ್ನುತ್ತಾರೆ. ಸಾರಜನಕ, ಆಮ್ಲಜನಕ, ಜಲಜನಕ, ಇಂಗಾಲ ಇವುಗಳನ್ನು ಎಷ್ಟು ವಿಭಜಿಸಿದರೂ, ಅದರಿಂದ ಬೇರೆ ವಸ್ತು ಪಡೆಯಲು ಸಾಧ್ಯವಿಲ್ಲ. ವಿಭಜಿಸುತ್ತಾ ಹೋದರೆ ವಿಭಜಿಸಲಾರ'ದಷ್ಟು ಸಣ್ಣದಾಗುತ್ತದೆ. ಅದಕ್ಕೆ ವಿಜ್ಞಾನಿಗಳು, ಪರಮಾಣು ಎನ್ನುತ್ತಾರೆ. ಪರಮಾಣುಗಳು, ಒಗ್ಗೂಡುವಿಕೆಯೇ ದೊಡ್ಡ ಕಣವೆಂದು ಅದರ ಹೆಸರು 'ಅಣು' ಎನ್ನುವರು.

ಜೀವ ಸೃಷ್ಟಿಯಾಗಲು ಡಿ.ಎನ್.ಎ. ಮತ್ತು ಆರ್.ಎನ್.ಎ. ಗಳು ಇವು ಒಂದು ದಿನದಲ್ಲಿ ತಮ್ಮಷ್ಟಕ್ಕೆ ತಾವೇ ಹುಟ್ಟಿಕೊಂಡಿಲ್ಲ ಅನೇಕ ವರ್ಷಗಳವರೆಗೆ ಹಂತ ಹಂತವಾಗಿ ಬೇರೆ ಬೇರೆ ಬಗೆಯ ಸಣ್ಣ ಸಣ್ಣ ಅಣುಗಳು ಸೇರುತ್ತಾ ವಿಶಾಲ ಅಣುಗಳ ರಚನೆಯಾಯಿತು "ಈ ಡಿ.ಎನ್.ಎ. ರಚನೆಯಾದದ್ದು ಅದಕ್ಕಿಂತ ಎಷ್ಟೋ ಸಣ್ಣ ಅಣುವಾದ ನ್ಯೂಕ್ಲಿಯೊಟೈಡ್‌ನಿಂದ ಈ ನ್ಯೂಕ್ಲಿಯೋಟೈಡ್ ರಚನೆಯಾಗಿರುವುದು ಅದಕ್ಕಿಂತ ಚಿಕ್ಕ ಮೂರು ಬಗೆಯ ಅಣುಗಳ ಸಂಯೋಜನೆಯಿಂದ. ಇವಕ್ಕೆ ಶರ್ಕರ ಎನ್ನುವರು. ಇವುಗಳೊಂದಿಗೆ ಕ್ಷಾರ ಮತ್ತು ಫಾಸ್ಪೇಟ್ ಹೆಸರಿನ ಅಣುಗಳು"[೭೮] ಡಿ.ಎನ್.ಎ.ಗಳ ಜೊತೆಯಲ್ಲಿ ಪ್ರತಿಸೃಷ್ಟಿಯ ಕಾರ್ಯಕ್ಕೆ 'ಪ್ರೋಟೀನ್ ಎನ್ನುವ-ಪ್ರೋಟೀನ್ ಅಣು ರಚನೆಯಾಗಿದೆ. ಅದಕ್ಕೂ ಚಿಕ್ಕ ಅಮಿನೋ ಆಷಿಡ್ ಅಣುಗಳ ಸಂಯೋಜನೆಯಿಂದ ಇದೆಲ್ಲಕ್ಕೂ ಸಹಾಯ ಡಿ.ಎನ್.ಎ.

ಈ ಡಿ.ಎನ್.ಎ. ರಚನೆಯಾಗಿದ್ದು, ಹೇಗೆಂದರೆ, ಜೀವವಿರದ ಕೆಲವು ವಸ್ತುಗಳು ಸಂಯೋಜನೆ ಹೊಂದಿ ಹೊಸ ವಸ್ತುವೊಂದನ್ನು ಸೃಷ್ಟಿಯಾಗಿದೆ ಅದರಲ್ಲಿ ಜೀವವಿದೆ. ಆದರೆ ಯಾರೂ ನಿರ್ಮಾಣ ಮಾಡಿದ್ದಲ್ಲ. ಅದು ಭೂಮಿಯಲ್ಲಿಯೇ ಸೃಷ್ಟಿಯಾಗಿದೆ ಅದಕ್ಕೆ ಸ್ಥಾನಭೂಮಿಯೇ ಈ ಭೂಮಿಯ ಮೊದಲ ನೂರು ಕೋಟಿ ವರ್ಷಗಳಲ್ಲಿಯೇ ಪ್ರಾಣಸೃಷ್ಟಿಯ ಕಾರ್ಯ ನಡೆದಿದೆ. ಆ ನೂರು ಕೋಟಿ ವರ್ಷ ವಯಸ್ಸಿನಲ್ಲಿ ಭೂಮಿಯ ಸ್ಥಿತಿ ಹೇಗಿತ್ತು. ಆಗ ಭೂಮಿಯ ಮೇಲಿದ್ದ ಗಾಳಿಯಲ್ಲಿ ಹೈಡ್ರೋಜನ ಅಲ್ಲದೇ ಅನೇಕ ಬಗೆಯ ಗ್ಯಾಸ್‌ಗಳು ಹುಟ್ಟಿವೆ. [೧]ಇದು ಮುಗಿಯದ ಕಥೆ – ಲೇಖಕರು ದೇವಿಪ್ರಸಾದ್ ಚಟೋಪಾಧ್ಯಾಯ – ಪು.ಸ.೧೮.

---

[78] ಇದು ಮುಗಿಯದ ಕಥೆ – ದೇವಿಪ್ರಸಾದ ಚಟ್ಟೋಪಾಧ್ಯಾಯ, ಪು.ಸಂ.೧೮.

[illegible]

[illegible]

[illegible]

ಅಮೋನಿಯಾ ಮಿಥೇನ್ ಜಲಭಾಷ್ಪ, ಕಾರ್ಬನ್, ನೈಟ್ರೋಜನ್. ಆಕ್ಸಿಜನಗಳು ಇದ್ದವು. ಆಗ ವಾತಾವರಣವೂ ಸಹ ಬಹಳಷ್ಟು ಕೆಟ್ಟದಾಗಿತ್ತು. ಆರ್ಭಟಿಸುವ ಗುಡುಗು ಸಿಡಿಲುಗಳ ಜೊತೆಗೆ ಮಿಂಚು, ಇವೆಲ್ಲವುಗಳೋ ಸೂರ್ಯನಿಂದ ಬರುವ ಪ್ರಖರ ಶಾಖ, ಅಲ್ಟ್ರಾ-ವಾಯ್ ಲೇಟ್ ಕಿರಣಗಳು ಈ ಎಲ್ಲವೂಗಳ ಫಲವಾಗಿ ಈ ಮೇಲಿನ ವಸ್ತುಗಳೊಂದರೊಡನೊಂದು ಸೇರಲಾರಂಭಿಸಿದವು. ಹೀಗೆ ಸಂಯೋಗಗೊಂಡಾಗ ಉಂಟಾದದ್ದು, ಅಮಿನೋ ಆಸಿಡ್‌ಗಳು ಮತ್ತೆ ಅದೇಷ್ಟೋ ವರ್ಷಗಳು ಕಳೆದವು. ಈ ನಡುವೆ ಪ್ರಾಣ ಸೃಷ್ಟಿಗೊಳಿಸಬಲ್ಲ ಅಮಿನೋ ಆಸಿಡ್ ಮತ್ತ ನ್ಯೂಕ್ಲಿಯೋಟೈಡ್‌ಗಳ ಸಂಯೋಗಗೊಳಿಸಲಾರಂಭಿಸಿದವು. ನಿಧಾನವಾಗಿ ಸಮುದ್ರದ ನೀರಿನಲ್ಲಿ ಸೇರಲಾರಂಭಿಸಿದವು. ವಾತಾವರಣ ಆಗ ಕೂಡ ಸಾಕಷ್ಟು ಬಿಸಿಯಾಗಿಯೇ ಇತ್ತು. ಈ ಎಲ್ಲವುಗಳಿಂದ ತಯಾರಾದುದು ಒಂದು ಬಗೆಯಾದ ರಸ. ನೀರಿನಲ್ಲಿನ ಅಣುಗಳು ಆ ರಸದಲ್ಲಿ ಕೆಲಕೆಲವು ಅಣುಗಳನ್ನು ಒಂದೆಡೆ ಸೇರಿಸಿ ಬಂಧಿಸಿದವು. ಇದುವರೆಗೆ ಸುತ್ತಾಡುತ್ತಿದ್ದ ಅಣುಗಳೆಲ್ಲ ನೀರಿನ ಪಾಲ್ಕಿಯಲ್ಲಿ ಒಂದೆಡೆ ಬಂದಿಯಾದವು. ಈ ರೀತಿ ಬಂಧಿಯಾದ ಅಣುಗಳ ಆವರಣದಲ್ಲಿ ಪ್ರಾಣ ಸೃಷ್ಟಿಕ್ರಿಯೆಯಲ್ಲಿ ತೊಡಗಿದವು. ಆ ಜೀವ ವಸ್ತುವಿನಿಂದ ಸಜೀವ ವಸ್ತುಗಳ ಸೃಷ್ಟಿಯಾಯಿತು. ಅಂದ ಮಾತ್ರಕ್ಕೆ ದೈತ್ಯಗಾತ್ರದ ಪ್ರಾಣಿಗಳು ಸೃಷ್ಟಿಯಾಗಲಿಲ್ಲ !

ವಿಶ್ವದ ಮೊದಲ ಜೀವಿ ಹೆಣ್ಣೂ ಅಲ್ಲ ಗಂಡೂ ಅಲ್ಲ. ಹಿಂದೆ ಸೃಷ್ಟಿಯಾದ ಮೊದಲ ಜೀವಿಯ ರಚನೆ ಅತಿ ಚಿಕ್ಕದು. ಬರಿಗಣ್ಣಿಗೆ ಕಾಣಲಾರದಷ್ಟು ಚಿಕ್ಕದು. ಮುಖ ಕೈ ಕಾಲುಗಳು, ಅದಕ್ಕಿರಲಿಲ್ಲ. ದೇಹದ ಯಾವುದೇ ಭಾಗ ಮುಖವಾಗಿತ್ತು. ಕೈಕಾಲುಗಳಾಗುತ್ತಿತ್ತು. ಈಗಿನ ಸಿಹಿ ನೀರಿನ ಸರೋವರಗಳಲ್ಲಿ ಈ ಬಗೆಯ ಜೀವಿಗಳ ದೊರೆಯುತ್ತವೆ. ಸೂಕ್ಷ್ಮದರ್ಶಕದಿಂದ ಸಾವಿರಪಟ್ಟು ದೊಡ್ಡದಾಗಿಸಿ ಅವುಗಳನ್ನು ಗುರುತಿಸಬಹುದು. ಆ ಬಗೆಯ ಜೀವಿಗೆ ವಿಜ್ಞಾನಿಗಳು ಅಮಿಬಾ ಎಂದು ಹೆಸರಿಸಿದರು. ಈ ಬಗೆಯ ಜೀವಿಗಳಲ್ಲಿರುವ ಅತಿಸೂಕ್ಷ್ಮ ಅಂಶಕ್ಕೆ 'ಕೋಶ ಎನ್ನುತ್ತಾರೆ. ಗಡಿಗೆ, ಮಡಕೆ, ಖಡು, ಇವೆಲ್ಲ ಹೇಗೆ ಕಣಗಳಿಂದ ತಯಾರಾಗಿದೆಯೋ ಹಾಗೆಯೇ ಜೀವಿಗಳ ದೇಹಾಂಶಗಳೂ ಕೋಶದಿಂದ ರಚಿತವಾಗಿದೆ. ಪ್ರಾಣಿಗಳು ತಿನ್ನುವ ಹುಲ್ಲು ಸಹ ಅಸಂಖ್ಯಾತ ಕೋಶಗಳಿಂದ ರಚಿತವಾಗಿದೆ. ತಲೆಯ ಕೂದಲುಗಳಿಂದ ಹಿಡಿದು ಕಾಲಿನ ಉಗುರುಗಳವರೆಗೆ ಎಲ್ಲ ಅಂಗಗಳು ಕೋಟ್ಯಾನುಕೋಟಿ ಕೋಶಗಳಿಂದ ರಚಿತವಾಗಿವೆ.

ಕೋಶ ಒಂದೇ ರೀತಿಯದಾಗಿರುವದಿಲ್ಲ. ಕೋಶ ಯಾವುದೇ ವಿಧವಾಗಿರಲಿ, ಅದರ ಹೊರಮೈ ಪ್ರೋಟಿನ್‌ನಿಂದ ಆಗಿರುತ್ತದೆ. “ಹೊರ ಕವಚದಿಂದ ಆವೃತ್ತವಾದ ಆ ಕೋಶದ ನಡುವೆ ಇರುವ ಸಣ್ಣ ಆವೃತ್ತ ಅಂಶವೇ ನ್ಯೂಕ್ಲಿಯಸ್, ಉಳಿದ ಅಂಶ ಪ್ರೋಟೋಪ್ಲಾಸ್ಮಾ, ನ್ಯೂಕ್ಲಿಯಸ್ ಮಧ್ಯದಿಂದ ಸರಳವಾದ ರಿಬ್ಬನ್ನಿನಂತೆ ಇರುವ ಉದ್ದವಾದ ವಸ್ತುವಿಗೆ ಕ್ರೋಮೋಸೋಮ್ ಎನ್ನುತ್ತೇವೆ”[೭೯]

ಪ್ರತಿಯೊಂದು ಜೀವಿಯ ಜೀವದ ಮೊದಲ ಘಟಕ ಜೀವಕೋಶ. ಜೀವಕೋಶಗಳ ರಚನೆ ಮತ್ತು ಕ್ರಿಯೆಗಳು ಭಿನ್ನವಾಗಿದ್ದರೂ ಎಲ್ಲಾ ಜೀವಕೋಶಗಳ ಕೆಲವು ಗುಣಗಳು ಸಾಮಾನ್ಯವಾಗಿರುತ್ತದೆ. ಜೀವಕೋಶಗಳಲ್ಲಿ ನಡೆಯುವ ರಾಸಾಯನಿಕ ಕ್ರಿಯೆ ಶಕ್ತಿ ಉತ್ಪಾದನೆ ಮತ್ತು ಜೀರ್ಣ ಕ್ರಿಯೆಗೆ ಕಾರಣವಾಗುತ್ತದೆ.

ಜೀವಕೋಶಗಳ ಹೊರ ಪದರದ ವಿಶಿಷ್ಟ ರಚನೆಯ ಕಾರಣದಿಂದ ಅವುಗಳು ಹೊರಗಿನ ವಾತಾವರಣದೊಂದಿಗೆ ಪ್ರತಿಕ್ರಿಯಿಸಲು ಸಾಧ್ಯವಾಗುತ್ತದೆ. ಎಲ್ಲಾ ಜೀವಕೋಶಗಳಲ್ಲಿರುವ ಡಿಆಕ್ಸಿರೈಬೋನ್ಯೂಕ್ಲಿಯಿಕ್ ಆಮ್ಲ ಅನುವಂಶಿಯ ಮಾಹಿತಿಯನ್ನು ಹೊಂದಿರುತ್ತದೆ. ಕೋಶ ವಿಭಜನೆಗೆ ಮತ್ತು ಅನುವಂಶೀಯ ಮಾಹಿತಿಯನ್ನು ದಾಟಿಸಲು ಈ ಆಮ್ಲ ಕಾರಣವಾಗಿದೆ.

ಮನುಷ್ಯನ ಶರೀರದ ಕೋಶಗಳಲ್ಲಿ ಈ ಸಂಖ್ಯೆ ಇಪ್ಪತ್ನಾಲ್ಕು ಜೊತೆ. ಈ ಕ್ರೋಮೋಸೋಮ್‌ಗಳು ಸೂಕ್ಷ್ಮ ಮಣಿಗಳಂತಹ ವಸ್ತುವಿನಿಂದಾಗಿ ಇರುತ್ತವೆ. ಇವುಗಳಿಗೆ ‘ಜೀನ್’ ಎಂದು ಕರೆಯುತ್ತಾರೆ. ಈ ಜೀನಗಳಲ್ಲಿ ಉದ್ದನೆಯ ಹೆಣೆದ ರಚನಾ ವಿನ್ಯಾಸದಲ್ಲಿ ಡಿ.ಎನ್.ಎ. ಅಣುಗಳು ಅಡಗಿರುತ್ತವೆ. ಈ ಡಿ.ಎನ್.ಎ.ಗಳ ಕೆಲಸ ದೇಹರಚನೆಯ ನಕ್ಷೆ ಸಿದ್ದಪಡಿಸುವ ಕಾರ್ಯ, ಸುಮಾರು ಮುನ್ನೂರೈವತ್ತು ಕೋಟಿ ವರ್ಷಗಳ ಹಿಂದೆ ಇದ್ದ ಏಕಕೋಶ ಜೀವಿಗಳ ಕುರುಹು ಈಗ ದೊರೆತು ಯುಗದಿಂದ ಯುಗಕ್ಕೆ ಬೇರೆ ಬೇರೆ ರೀತಿಯಲ್ಲಿ ಈ ಎಲ್ಲಾ ಪ್ರಾಚೀನ ಜೀವಿಗಳು ಬದಲಾಗುತ್ತಾ ಸಾಗಿದವು. ಅವು ಬದಲಾಗುತ್ತಾ ಆಗುತ್ತಾ ಈಗ ನಾವು ಕಾಣುತ್ತಿರುವ ಮರ–ಗಿಡ ಪಶುಪಕ್ಷಿಗಳ ರೂಪದಲ್ಲಿ ನಿಂತಿದೆ. ಈ ಎಲ್ಲಾ ಬದಲಾವಣೆಯೇ ಸೃಷ್ಟಿಯ ನಿಯಮ.

---

[79] ಇದು ಮುಗಿಯದ ಕಥೆ – ದೇವಿಪ್ರಸಾದ ಚಟ್ಟೋಪಾಧ್ಯಾಯ, ಪು.ಸಂ.೨೩.

ಪ್ರತಿ ದಿನಕ್ಷಣ ಬದಲಾಗುತ್ತ ಸಾಗುತ್ತದೆ. ಆದರೆ ಅದು ನಮ್ಮ ಗಮನಕ್ಕೆ ಬಾರದಷ್ಟು ನಿಧಾನವಾಗಿ, ಮೊನ್ನೆ ಮೊನ್ನೆ ನಾಯಿಮರಿಯೊಂದಿಗೆ ಆಟವಾಡುವ ಮಗು ಇಂದು ಎಷ್ಟು ಬೆಳೆದು ಬಿಟ್ಟನೆಂದು ಮಾತನಾಡಿಕೊಳ್ಳುತ್ತೇವಲ್ಲ ಹಾಗೆ, ಭೂಮಿಯ ಬದಲಾವಣೆ ಕೂಡ ಬದಲಾವಣೆಗೆ ಕೊನೆಯೇ ಇಲ್ಲ, ವಿರಮಾವಿಲ್ಲ.

ಜಗತ್ತಿನೆಲ್ಲ ವಸ್ತುಗಳು ಮರ-ಗಿಡಗಳು, ಜೀವ ಜಂತುಗಳ ವಿಚಾರ ಸಹ ಇದೇ ಆಗಿದೆ. ಎಲ್ಲವೂ ಬದಲಾಗುತ್ತಿದೆ. ವಿರಾಮವಿಲ್ಲದೆ. ಆದರೆ ಅದು ನಮ್ಮ ಅರಿವಿಗೆ ಬರದಂತೆ ಇದು ಮನುಷ್ಯನ ಹುಟ್ಟಿನಿಂದ ಸಾವಿನವರೆಗಿನ ಬದಲಾವಣೆಯಲ್ಲ. ಇಲ್ಲಿ ಅದ್ಭುತ ಬದಲಾವಣೆ ಇದೆ. ಅದೇಂದರೆ ಒಂದು ಬಗೆಯ ಜೀವಿ ಬದಲಾವಣೆ ಹೊಂದುತ್ತಾ ಹೊಂದುತ್ತಾ ಬೇರೆ ಮತ್ತೊಂದು ಜೀವಿಯಾಗಿ ಪರಿವರ್ತನೆ ಹೊಂದುತ್ತದೆ.

ಬಹಳ ಕಾಲದ ಹಿಂದೆ ನರಿಗಳಂತಹ ಪ್ರಾಣಿಗಳಿದ್ದವು. ಅವುಗಳಿಗೆ 'ಯೋಪಸ್' ಎಂದು, ಅನೇಕ ಸಾವಿರ ವರ್ಷಗಳ ವರೆಗೆ ಆ ಪ್ರಾಣಿಗಳ ವಂಶಾಭಿವೃದ್ಧಿಯಾಗುತ್ತಾ ಸಾಗಿದೆ. ನಿಧಾನವಾಗಿ ಅದರ ಮರಿ ಅದರಿಂದ ಇನ್ನೊಂದು ಮರಿ, ಇನ್ನೊಂದು ಮರಿ, ಹೀಗೆ ಮರಿಗಳಲ್ಲಿ ಬದಲಾಗುತ್ತಾ ಕೊನೆಗೆ ಆ ಪ್ರಾಣಿಗಿಂತ ಭಿನ್ನವೇ ಆದ ಬೇರೆ ಪ್ರಾಣಿಯ ಉಗಮವಾಯ್ತು. ಇವತ್ತಿನ ಕುದುರೆಗಳು ಹಿಂದಿನ ಕಾಲದ ಯೋಪಸ್ ಜಾತಿಯಲ್ಲಿ ಹುಟ್ಟಿಬಂದವುಗಳೇ ಆಗಿವೆ.

ಇದು ಇಡೀ ಜಗತ್ತಿನ ಘಟನೆಯಲ್ಲಿ ಘಟಿಸುತ್ತದೆ. ಕ್ರಮೇಣ ಕ್ರಮೇಣ ಎಷ್ಟೋ ಸಾವಿರ ವರ್ಷಗಳ ನಂತರ ಬೇರೊಂದು ಬಗೆಯ ಪ್ರಾಣಿಗಳಾಗಿ ಪರಿವರ್ತನೆಯಾಗಿರುತ್ತದೆ. ಇದೆಲ್ಲಾ ಸದಾಕಾಲ ನೋಡುತ್ತಿದ್ದರು ಕೂಡ ಈ ಬದಲಾವಣೆ ನಮ್ಮ ಕಣ್ಣಿಗೆ ಕಾಣುವುದಿಲ್ಲ. ಈ ಬದಲಾವಣೆ ಗುರುತಿಸಿದವನು ಡಾರ್ವಿನ್.

ಈ ಡಾರ್ವಿನನಿಗೆ ಚಿಕ್ಕಂದಿನಿಂದಲೂ ಆಸಕ್ತಿ ಇದ್ದುದ್ದು ಕ್ರಿಮಿಕೀಟಗಳಲ್ಲಿ ಪಶು ಪಕ್ಷಿ ಮರ-ಗಿಡ, ಹಕ್ಕಿ ಪಕ್ಷಿಗಳ ಮೊಟ್ಟೆಗಳನ್ನು ಹುಡುಕುತ್ತಾ ಇಡೀ ದಿನ ಇದೇ ಅವರ ಕೆಲಸ. ಹೊಸ ಬಗೆಯ ಕ್ರಿಮಿ ಕೀಟಗಳನ್ನು ಏನಾದರೂ ನೋಡಿದನೋ ಬಹಳ ಸಂತೋಷ. ಈತನು ಸುಮಾರು "ಇನ್ನೂರು ವರ್ಷಗಳ ಹಿಂದೆ ಕ್ರಿ.ಶ. ೧೮೩೧ ಇಲ್ಲಿಂದ ಡಾರ್ವಿನ್ನಿಗೆ ಇಪ್ಪತ್ತೊಂದು

ವರ್ಷವಿರುವಾಗ ಬ್ಯೂಗಲ್ ಎನ್ನುವ ಒಂದು ಹಡಗು ಇಡೀ ಜಗತ್ತನ್ನು ಸುತ್ತಲು ಹೊರಟಿತು."[೮೦] ಆ ಸಂದರ್ಭದಲ್ಲಿ ಹೊರಬಿದ್ದವನು. ದೇಶ ವಿದೇಶ ದ್ವೀಪ ದ್ವೀಪ ಪೂರ್ತಿ ಐದು ವರ್ಷ ಆ ಹಡಗಿನಲ್ಲಿ ಇಡಿ ಜಗತ್ತಿನ ವಿವಿಧ ವೈಚಿತ್ರ್ಯ ಕಂಡನು. ಕ್ರಿಮಿ–ಕೀಟ, ಪಶು–ಪಕ್ಷಿ, ಮರಗಿಡ ಬೆಟ್ಟ– ಗುಡ್ಡ ಎಲ್ಲವನ್ನು ನೋಡಿದ್ದು. ಬರೆದಿಟ್ಟುಕೊಂಡು ನಂತರ ತನ್ನದೇಶಕ್ಕೆ ಹಿಂತಿರುಗಿದ.

ಡಾರ್ವಿನ್‌ನ ಸಂಶೋಧನೆಗೆ ಮುಂಚೆ ಇಡೀ ಈ ಜಗತ್ತಿನಲ್ಲಿರುವ ಲಕ್ಷಾಂತರ ಪ್ರಾಣಿ ಪಕ್ಷಿಗಳೆಲ್ಲ ದೇವರ ಸೃಷ್ಟಿ ಎಂದು ಇದುವರೆಗೂ ಎಲ್ಲರೂ ನಂಬಿದ್ದರು. ಮನುಷ್ಯನೇ ಬೇರೆ ಪ್ರಾಣಿ ಕಪ್ಪೆ ಬೇರೆ ಎಂದು ನಂಬಿದ್ದವರಿಗೆ ಈ ನಂಬಿಕೆ ತಲೆ ಕೆಳಗಾಯ್ತು. ಅನೇಕ ವರ್ಷಗಳಿಂದ ಆದಿಮ ಪ್ರಾಣಿ ಪಕ್ಷಿಗಳು ಅನೇಕ ಕಡೆಗಳಲ್ಲಿ ಅನೇಕ ಬಗೆಗಳಲ್ಲಿ ಬದಲಾಗುತ್ತಾ ಆಗುತ್ತಾ ಈಗಿನ ಲಕ್ಷಾಂತರ ಪ್ರಾಣಿಗಳಾಗಿದೆ. ಈ ಎಲ್ಲಾ ಪ್ರಾಣಿಗಳ ಪೂರ್ವಜ ಮಾತ್ರ ಒಂದೇ!

ಪ್ರಾಣಿಗಳ ಸಂಬಂಧ ಹೆಚ್ಚು ಕಡಿಮೆ ಇದೇ ರೀತಿ ಆಗಿರುವುದು ಕಂಡುಬರುತ್ತದೆ. ಚಿಂಪಾಂಜಿ ಮತ್ತು ಮನುಷ್ಯ ಇವುಗಳ ಮಧ್ಯ ಬಹಳ ಸಾಮ್ಯವಿರುವುದು ಕಾಣುತ್ತದೆ. ಇವೆರಡು ಅಣ್ಣ ತಮ್ಮರಂತೆ ಸಂಬಂಧವೆಂದರೆ ಒಪ್ಪಬೇಕಾಗುತ್ತದೆ. ಒಂದೇ ಪ್ರಾಣಿಯಿಂದ ಈ ಎರಡು ಪ್ರಾಣಿಗಳು ಹುಟ್ಟಿವೆ ಎಂದು ಹೇಳಬಹುದು.

ನಾವು ಈ ರೀತಿ ನೋಡಬಹುದು. ಚಿಂಪಾಂಜಿಯ ಮೈತುಂಬಾ ಕೂದಲುಗಳು ಮತ್ತು ನಾಲ್ಕು ಕಾಲುಗಳ ಮೇಲೆ ನಡೆಯುತ್ತದೆ. ಆದರೆ ಮನುಷ್ಯನ ಮೈಮೇಲೆ ಅಷ್ಟೊಂದು ಕೂದಲುಗಳೇನೂ ಇಲ್ಲ. ಎರಡು ಕಾಲುಗಳ ಮೇಲೆ ನಡೆಯುತ್ತಾನೆ. ಬಾಹ್ಯವಾಗಿ ಎಷ್ಟೇ ವ್ಯತ್ಯಾಸ ಇದೆ ಎಂದರೂ ಇವೆರಡರ ಅಸ್ತಿಪಂಜರ ಏನೇನೂ ಬೇರೆ ಇಲ್ಲ. ನಮ್ಮಜ್ಜ ಮತ್ತು ದೊಡ್ಡಪ್ಪನ ತಂದೆ ಇಬ್ಬರೂ ಮುತ್ತಜ್ಜನ ಮಕ್ಕಳೆ. ಹಾಗೆಯೇ ಮಾನವನ ಮತ್ತು ಚಿಂಪಾಂಜಿಯ ಮೂಲ ಪುರುಷ ಒಂದೇ ಬಗೆಯ ಕಾಡು ಮನುಷ್ಯ ಇಂದು ಇವರು ನೋಡಲು ಸಿಗುವುದಿಲ್ಲವಾದರೂ ಇಂದು ಕ್ರಮೇಣ ಕ್ರಮೇಣ ಬದಲಾಗುತ್ತಾ ಬಂದಿದ್ದಾರೆ.

---

[80] ಇದು ಮುಗಿಯದ ಕಥೆ – ದೇವಿಪ್ರಸಾದ ಚಟ್ಟೋಪಾಧ್ಯಾಯ, ಪು.ಸಂ.೨೮.

ಆರುಕೋಟಿ ವರ್ಷಗಳ ಹಿಂದೆ ಈ ಭೂಮಿಯ ಮೇಲೆ ಅನೇಕ ಬಗೆಯ ಜೀವ ಜಂತುಗಳಿದ್ದವು. ಇಂದಿನ ಕುದುರೆಗಳು ಅಂದು ಇದ್ದವೋ ? ಆಕಾಲದಲ್ಲಿ ಕುದುರೆಗಳು ಇರಲಿಲ್ಲ. ಬದಲಿಗೆ ಕುದುರೆಗಳ ಪೂರ್ವಜರು ನೋಡಲು ಬೇರೆ ರೀತಿಯಲ್ಲಿದ್ದವು. ಸಣ್ಣ ನರಿಯ ರೀತಿಯಲ್ಲಿ ಅವುಗಳ ರಚನೆಯಿತ್ತು. ಅವುಗಳು ನೋಡಲು ನೆಲದಿಂದ ಒಂದು ಮೊಳ ಎತ್ತರದಲ್ಲಿ ಇವುಗಳ ಕಾಲಲ್ಲಿ ಕುದುರೆಗಳಿಗಿರುವಂತೆ ಕಾಲಿಗೆ ಗೊರಸುಗಳಿರಲಿಲ್ಲ. ಅಂದಮೇಲೆ ಕುದುರೆಗಿಂತಲೂ ವಿಭಿನ್ನವೆನ್ನಬೇಕು. ಈ ಕುದುರೆಯ ಪೂರ್ವಜರ ಹೆಸರು ಯೋಹಿಪ್ಪಸ್ ಅಂದರೆ ಇದರ ವಂಶಸ್ಥರು ಆರುಕೋಟಿ ವರ್ಷಗಳಲ್ಲಿ ಬದಲಾಗುತ್ತಾ ಬದಲಾಗುತ್ತಾ ಈಗಿನ ಕುದುರೆಗಳಾಗಿವೆ.

ಸಾಮಾನ್ಯವಾಗಿ ನದಿಗಳೆಲ್ಲ ಹರಿಯುವಾಗ ಅಂದರೆ ಸಮುದ್ರ ಸೇರುವಾಗ, ನದಿಯ ತನ್ನ ತೆಕ್ಕೆಗೆ ಸಿಕ್ಕ ಎಲ್ಲ ಪ್ರಾಣಿ ಪಕ್ಷಿ ಕಪ್ಪೆ, ಮೀನು ಮನುಷ್ಯ ಇಂತಹ ಅದೆಷ್ಟೋ ವಸ್ತುಗಳನ್ನು ತನ್ನತ್ತ ಸೆಳೆದುಕೊಂಡು ಸಮುದ್ರ ಸೇರುವಾಗ ಈ ಎಲ್ಲ ವಸ್ತುಗಳು ನದಿಯ ತಳವನ್ನು ಸೇರುತ್ತವೆ. ಈ ತಳಸೇರಿದ ವಸ್ತುಗಳ ಮೇಲೆ ಅನೇಕ ವಸ್ತುಗಳು, ಮುಳ್ಳಿನಂತಹ ಅನೇಕ ವಸ್ತುಗಳು ಸೇರಿ ಪದರು ಪದರಾಗಿ ಹೀಗೆ ವರ್ಷಾಂತರಗಳವರೆಗೆ ಸ್ಥರಗಳು ಬೆಳೆಯುತ್ತಾ ಮೇಲಿನ ಸ್ಥರದ ಒತ್ತಡದಿಂದ ಕೆಳಗಿಸ್ಥರ ನಿಧಾನವಾಗಿ ಕಲ್ಲಿನ ರೂಪ ಪಡೆಯುತ್ತದೆ. ಇದಕ್ಕೆ 'ಪಾಲಲಿಕ್' ಪರ್ವತ ಎನ್ನುತ್ತಾರೆ. ಇವುಗಳು ನೋಡಲು ಒಂದರ ಮೇಲೆ ಒಂದು ಹೊದಿಸಿದಂತೆ ಪದರು ಪದರಾಗಿ ಕಾಣುತ್ತವೆ. ಇಂತಹ ಬದಲಾವಣೆ ಪ್ರತಿನಿತ್ಯ ನಡೆದೇ ಇರುತ್ತದೆ. ಈ ತರಹದ ಪ್ರದೇಶದಿಂದ ನಾವು ಭೂಕಂಪನದಿಂದಲೂ ಇಂತಹ ವೈಚಿತ್ರ್ಯಗಳು ನಡೆಯುತ್ತವೆ. ಇವೆಲ್ಲ ಉತ್ಖನದಿಂದ ತಿಳಿದುಬರುತ್ತದೆ.

ಈ ರೀತಿ ತಳ ಸೇರಿದ ವಸ್ತುಗಳ ಮೇಲೆ ಬೇರೆ ಬೇರೆ ಬಗೆಯ ಧಾತುಗಳು ಬೀಳುತ್ತಾ ಪದರುಗಳನ್ನುಂಟುಮಾಡುತ್ತವೆ. ಇವುಗಳಲ್ಲಿ ಅನೇಕವು ಕೊಳೆತು ಹೋಗುತ್ತವೆ. ಅವುಗಳ ಯಾವುದೇ ಚಿಹ್ನೆ ಇರುವುದಿಲ್ಲ. ಇನ್ನೂ ಕೆಲವು ವಸ್ತುಗಳು ಕೊಳೆಯದೆ ತಳಸೇರಿ ಪಳಿಯುಳಿಕೆ ನಿರ್ಮಾಣವಾಗುತ್ತದೆ. ನೋಡಿದರೆ ಕಲ್ಲಿನಲ್ಲಿ ಕೆತ್ತಿದಂತಿರುತ್ತವೆ.

ಸಸ್ಯಗಳು ಮತ್ತು ಪ್ರಾಣಿಗಳ ಅವಶೇಷಗಳು ಕಲ್ಲಿನಲ್ಲಿ ಹುದುಗಿದ್ದ ವಿಚಾರ ಪ್ರಾಚೀನ ಕಾಲದ ಜನರಲ್ಲಿ ಕುತೂಹಲ ಕೆರಳಿಸಿತು. "ಗ್ರೀಕ್ ತತ್ವಜ್ಞಾನಿ ಕ್ಸೆನೋಫೋನ್ (ಕ್ರಿ.ಪೂ.೫೭೦–

೪೭೦)ರ ಪ್ರಕಾರ" ಈ ಪ್ರಾಣಿಗಳು ಸಮುದ್ರದ ಮಾರುತಕ್ಕೆ ಸಿಕ್ಕಿ ಇಂಥ ಸ್ಥಳಗಳಲ್ಲಿ ಬಿದ್ದಿರಬಹುದು ಎಂದೇ ಊಹಿಸಿದ. ಎಲ್ಲ ಜೀವಿಗಳು ಮಣ್ಣಿನಿಂದ ಉಂಟಾಗುತ್ತವೆ. ಎಂಬ ತನ್ನ ಸಿದ್ದಾಂತವನ್ನು ಈ ಪಳೆಯುಳಿಕೆ ನಿರೂಪಿಸುತ್ತವೆ. ಎಂದು ಅರಿಸ್ಟಾಟಲ್ (ಕ್ರಿ.ಪೂ. ೩೮೪-೩೨೨) ನಂಬಿದ್ದ.[೮೧] ಆತನ ಪ್ರಕಾರ ಈ ಪಳೆಯುಳಿಕೆಗಳು ಮಣ್ಣಿನಿಂದ ಉಂಟಾಗಿ ಪೂರ್ತಿ ವಿಕಾಸಗೊಳ್ಳದೆ ಅಲ್ಲೇ ಕೊನೆಗೊಂಡ ಜೀವಿಗಳಾಗಿರಬೇಕು ಎಂದು ತಿಳಿಸಿದ.

ಚೈನಿ ಸಂಸ್ಕೃತಿಯಲ್ಲಿ ಪಳೆಯುಳಿಕೆಗಳ ವಿವರಣೆ ಸುಮಾರು "ಕ್ರಿ.ಶ. ೫೦೦ರಷ್ಟು ಹಿಂದೆಯೇ ಕಂಡುಬರುತ್ತದೆ. ಕ್ರಿ.ಶ.೭೭೦ ರಲ್ಲಿ ಚೈನ ಇತಿಹಾಸಕಾರರು" ಈ ಪಳೆಯುಳಿಕೆಯನ್ನು ಪೌರಾಣಿಕ ಪಾತ್ರಗಳೊಂದಿಗೆ ಸಂಬಂಧ ಕಲ್ಪಿಸಿದ್ದಾರೆ.[೮೨]

ಕ್ಸೆನೋಫೋನ್ ತತ್ವಜ್ಞಾನಿಯ ಸಿದ್ಧಾಂತವನ್ನು ಮೊದಲು ಒಪ್ಪಿಕೊಂಡಿದ್ದು ಚರ್ಚ ಇತಿಹಾಸಕಾರರು ಎಂಬುದು ಆಶ್ಚರ್ಯದ ವಿಚಾರ. ಬೈಬಲ್‌ನಲ್ಲಿ ಬರುವ ಪ್ರಳಯದಿಂದಾಗಿ ಈ ಜೀವಿಗಳು ಕಲ್ಲುಗಳಾದವು ಎಂದು ಅವರು ಅರ್ಥೈಸಿದರು.

ಆರಂಭದಲ್ಲಿ ಹಿಂದೆ ಹೇಳಿದಂತೆ ಭೂಮಿಯು ನೀರಿನಿಂದ ತುಂಬಿತ್ತು ಎಂದು "ಕಾರ್ಲೆಬ್ ಧರ್ಮಶಾಸ್ತ್ರವ ಟೇರ್ಡುಲಿಯನ್ (ಕ್ರಿ.ಶ. ೧೫೦-೨೨೫ ರ ನಂತರ) ವಾದಿಸಿದ. ತನ್ನವಾದಕ್ಕೆ ಆಧಾರವಾಗಿ ಪರ್ವತಗಳಲ್ಲಿ ದೊರೆತ ಕಪ್ಪೆ ಚಿಪ್ಪು ತೋರಿಸಿದ. ಪ್ಯಾಲೆಸ್ಥಿನ್‌ನಲ್ಲಿ ಕಪ್ಪೆ ಚಿಪ್ಪು ದೊರೆತ ಎತ್ತರದ ಆಧಾರದಿಂದ ಸೀಜೇರಿಯಾದ ಯುಸೇಬಿಯಸ್ (ಕ್ರಿ.ಶ. ೨೬೦-೩೪೦)"[೮೩] ಎಂಬ ಬಿಷಪ್ ಪ್ರವಾಹದ ಎತ್ತರ ಎಪ್ಪತ್ತು ಎಂಬುದನ್ನು ಲೆಕ್ಕಾಚಾರ ಮಾಡಿದರು.

೧೦೨೨ ರಲ್ಲಿ ಖನಿಜಶಾಸ್ತ್ರಕ್ಕೆ ಬಂದು ಆಧಾರವನ್ನು ಸೃಷ್ಟಿಸಿದ ಅರಬ್ ಭೌತಶಾಸ್ತ್ರಜ್ಞ ಮತ್ತು ಪ್ರಕೃತಿ ವಿಜ್ಞಾನಿ ಅವಿಸಿನ್ನ (ಕ್ರಿ.ಶ. ೯೮೦-೧೦೩೭)ನ ವಿಚಾರಗಳೇ ಬೇರೆಯಾಗಿದ್ದವು.

---

[81] ಪಳಿಯುಳಿಕೆ – ತಾರಾಮಂಡಲ –ಜಗತ್ತಿನ ಇತಿಹಾಸದ ಒಂದು ಹೊಸ ಪರಿಕಲ್ಪನೆ.
[82] ಪಳಿಯುಳಿಕೆ – ತಾರಾಮಂಡಲ –ಜಗತ್ತಿನ ಇತಿಹಾಸದ ಒಂದು ಹೊಸ ಪರಿಕಲ್ಪನೆ.

[83] ಪಳಿಯುಳಿಕೆ – ತಾರಾಮಂಡಲ –ಜಗತ್ತಿನ ಇತಿಹಾಸದ ಒಂದು ಹೊಸ ಪರಿಕಲ್ಪನೆ.

ವಿಸ್ ಲಾಪಿಡಿ ಫಿಕೇಟಿವ್ ಜಡಗೊಳಿಸುವ ಶಕ್ತಿಯಾಗಿ ಈ ಪಳಿಯುಳಿಕೆಗಳು ಉಂಟಾಗಿವೆ.[೮೪] ಎಂದು ಈತ ಪ್ರಕಟಿಸಿದ. ಪಳೆಯುಳಿಕೆಗಳು ಸಾವಯವ ಮೂಲದಿಂದ ಉಂಟಾಗಿರಬಹುದಾದ ಸಾಧ್ಯತೆಗಳನ್ನು ಆತ ತಳ್ಳಿಹಾಕದಿದ್ದರೂ ಆತ ತನ್ನ ಸಿದ್ಧಾಂತವನ್ನು ಅರಿಸ್ಟಾಟಲ್‌ನ ಸಿದ್ಧಾಂತದೊಂದಿಗೆ ಸೇರಿಸಿ ಪಳೆಯುಳಿಕೆಗಳು ವಿಸ್ ಪ್ಲಾಸಿಕಾ ಅಂದರೆ 'ನಿರ್ಮಾಣಗೊಳ್ಳುವ ಶಕ್ತಿ'ಯಿಂದ ಉಂಟಾಗುತ್ತಿವೆ. ಎಂಬ ಹೊಸ ಸಿದ್ಧಾಂತವನ್ನು ನಿರೂಪಿಸಿದ. ಈ ಸಿದ್ಧಾಂತ ಬಹಳ ಕಾಲದವರೆಗೆ ಈ ಯುರೋಪಿನಲ್ಲಿ ವ್ಯಾಪಕವಾಗಿ ಚಾಲನೆಯಲ್ಲಿತ್ತು.

ಹೀಗೆ ಚಾಲನೆಯಲ್ಲಿದ್ದ ಸಿದ್ಧಾಂತದ ನಂಬಿಕೆಗಳನ್ನು ಕಟುವಾದ ವಿಮರ್ಶಾದೃಷ್ಟಿಯಿಂದ ಪರಿಶೀಲಿಸಿದ ಮೊದಲಿಗೆ ಪುರೋನಾದ ವೈದ್ಯ ಮತ್ತು ತತ್ವಜ್ಞಾನಿ ಗಿರೊಲಾಮೊಫ್ರಾಕಾಸ್ಟರೋ ೧೫೧೭ ರಲ್ಲಿ ವೆರೋನಾದ ಕಲ್ಲುಗಳಲ್ಲಿ ಕಲ್ಲಾಗಿದ ಕಪ್ಪೆಚಿಪ್ಪುಗಳು ಅಲ್ಲಿರುವ ಬೈಬಲ್‌ನಲ್ಲಿ ಬರುವ ಪ್ರವಾಹದ ಅಥವಾ ವಿಸ್ ಪ್ಲಾಸ್ಟಿಕದಿಂದ ಉಂಟಾಗಿದೆ ಎಂಬುದನ್ನು ಆತ ಒಪ್ಪಲಿಲ್ಲ. ಬೆರೆ ಯಾವುದೇ ಬಗೆಯ ಪ್ರವಾಹದಿಂದ ಇವು ಅಲ್ಲಿಗೆ ಎಳೆದು ಬಂದಿರಬಹುದು ಎಂಬುದನ್ನು ಪೂರ್ತಿಯಾಗಿ ನಿರಾಕರಿಸಿದ.

ಬದಲಾಗಿ ಬಹಳ ಹಿಂದೆ ವೆರೋನಾ ಸಮುದ್ರದಿಂದ ಆವರಿಸಲ್ಪಟ್ಟಿತ್ತಾದ್ದರಿಂದ ಅಲ್ಲಿ ಕಪ್ಪೆ ಚಿಪ್ಪುಗಳ ಪಳೆಯುಳಿಕೆ ಸಿಗುತ್ತದೆ ಎಂದು ಭಾವಿಸಿದ. ಆದರೆ ಫ್ರಾಕಾಸ್ಟೋರೋನ್ ವಾದವನ್ನು ಯಾರೂ ಕೇಳಲಿಲ್ಲ. ಈ ಹಿಂದೆ ಪ್ರಚಲಿತವಿದ್ದ ಪೌರಾಣಿಕ, ಕಲ್ಪಿತ ಪ್ರವಾಹಗಳಿಂದ ಕಪ್ಪೆ, ಚಿಪ್ಪುಗಳು ಅಲ್ಲಿಗೆ ಬಂದಿರುವ ಸಾಧ್ಯತೆಯನ್ನು ಎತ್ತಿ ಹಿಡಿಯುವದಾದರೆ ಮತ್ತಷ್ಟು ಬಲಗೊಂಡಿತು. ೧೭೪೬ ರಷ್ಟು ತಡವಾಗಿ ಜ್ಞಾನೋದಯದ ತತ್ವಜ್ಞಾನಿಯಂದೇ ಪ್ರಖ್ಯಾತವಾಗಿದ್ದ ವೋಲ್ಟೇರ್ ಫ್ರಾನ್ಕೋಸ್ ಮಾರಿ ಆರಾ (೧೬೯೪–೧೭೭೮) ಪಳೆಯುಳಿಕೆಗಳ ಸಾವಯವ ಮೂಲದ ವಿಚಾರಕ್ಕೆ ಸಮ್ಮತಿ ಸೂಚಿಸಿದೆ.

ಆಲ್ಪ್ಸ್ ಪರ್ವತಗಳಲ್ಲಿನ ಪಳೆಯುಳಿಕೆಗಳು ಪ್ರವಾಸಿಗರಿಂದ ಸಾಗಿಸಲ್ಪಟ್ಟದ್ದವು ಎಂದು ಆತ ನಂಬಿದ್ದ. "ಗೇಟ್ಟಿನ್ ಜೆನ್‌ನ ಪ್ರೋಫೆಸರ್ ಜೋಹಾನ್ ಫೆಡ್ರಿಕ್ ಬ್ಲೂಮನಬಾಕ್

---

[84] ಪಳಿಯುಳಿಕೆ – ತಾರಾಮಂಡಲ –ಜಗತ್ತಿನ ಇತಿಹಾಸದ ಒಂದು ಹೊಸ ಪರಿಕಲ್ಪನೆ.

(೧೭೫೨-೧೮೪೦)ರಂಥ ಮೇಧಾವಿಗಳು[೮], ಪ್ರಾಕಾಸ್ಟರೊ ಮಂಡಿಸಿದ ಪಳೆಯುಳಿಕೆಯ ನಿಜವಾದ ಸ್ವಭಾವದ ಬಗ್ಗೆ ಒಪ್ಪಿಕೊಳ್ಳಲು ಬಹಳ ಕಾಲ ಹಿಡಿಯಿತು."[೮೫] ೧೮ನೇ ಶತಮಾನದ ಕೊನೆಯಲ್ಲಿ ಈ ಸಿದ್ಧಾಂತಕ್ಕೆ ಮನ್ನಣೆ ಸಿಕ್ಕಿತು. ೧೯ನೇ ಶತಮಾನದಲ್ಲಿ ವಿಶ್ವ ಇತಿಹಾಸ ರಚನೆಯಾಗಿ ಪುರಾವೆಗಳ ಶೇಖರಣೆ ಮಾಡುವ ಕಾರ್ಯ ಆರಂಭವಾದಾಗ ಪಳೆಯುಳಿಕೆಗಳ ಅಧ್ಯಯನ ಮಹತ್ವ ಪಡೆದುಕೊಂಡಿತು. ಆ ಅಧ್ಯಯನಕ್ಕೆ ಹೆಚ್ಚಿನ ಪ್ರಾಮುಖ್ಯತೆ ಬಂದದ್ದು. 'ಚಾರ್ಲ್ಸ್ ಡಾರ್ವಿನನ ವಿಕಾಸವಾದದ' ಪ್ರಕಟಣೆಯಿಂದ.

ಮನುಷ್ಯನ ಆದಿಪುರಷ ಮೀನು, ಲಕ್ಷ ಲಕ್ಷ ವರ್ಷಗಳ ಹಿಂದೆ ಒಂದಿಷ್ಟು ಮೀನುಗಳು ಬದಲಾಗುತ್ತಾ ಆಗುತ್ತಾ ಈಗಿನ ಮನಷ್ಯನ ರೂಪ ಪಡೆದಿವೆ. ಇವೆಲ್ಲಕ್ಕೂ ಮುಂಚೆ ಮೀನು ಹೇಗೆ ಹುಟ್ಟಿತೆಂದು ತಿಳಿಯೋಣ.

ಹಿಂದೆ ಹೇಳಿದಂತೆ ಏಕಾಣು ಜೀವಿಗಳೆ ಮೊದಲಿದ್ದುದ್ದು. ಇಡೀ ಶರೀರ ಇದ್ದದ್ದೆ ಒಂದೇ ಒಂದು ಕೋಶದಿಂದ. ಆ ಮೇಲೆ ಅನೇಕ ಕೋಶಗಳು ಸೇರಿ ಒಂದೊಂದೇ ಪ್ರಾಣಿಯ ಶರೀರ ರಚನೆಯಾಗಲಾರಂಭಿಸಿತು. ಹೀಗೆ ಬದಲಾಗುತ್ತಾ ಆಗುತ್ತಾ ನೀರಿನ ತಳದಲ್ಲಿ ಪಾಚಿ ಮತ್ತು ಸಣ್ಣ ಸಣ್ಣ ಹಸಿರು ಗಿಡಗಳು ಹುಟ್ಟಿದವು. ಈಗಿನ ಗಿಡಗಳ ಆದಿ ಪುರುಷ ಈ ಗಿಡವೆ ! ಮುಂದೆ ಕ್ರಮೇಣ ಅನೇಕ ಕೋಶಗಳು ಸೇರಿ ಜೀವಿಗಳ ರಚನೆ ಆರಂಭವಾಗುತ್ತಾ ಬಂತು. ಅನೇಕ ಬಗೆ ಕೀಟಗಳು ಎರೆ ಹುಳು ಇವೆಲ್ಲಕ್ಕಿಂತ ಪ್ರಾಚೀನವಾದುದು, ಬ್ರೈಲೋಬೈಟ್ ಎಂಬ ಬೇಬಿ ಇದು ಸುಮಾರು ಇಪ್ಪತ್ತು ಕೋಟಿ ವರ್ಷಗಳ ವರೆಗೆ ನೀರಿನಲ್ಲಿಯೇ ವಾಸವಿದ್ದ ನೀರಿನಿಂದಲೇ ಆಹಾರವನ್ನು ಪಡೆಯುತ್ತಿದ್ದವು. ಇವುಗಳು ಬಿರುಸಾದ (ಆಮೆಯಂತೆ !) ಕವಚ ಹೊಂದಿರುತ್ತಿದ್ದು, ಇವು ಏಕಕಾಲಕ್ಕೆ ಒಮ್ಮೆಲೆ ಅನೇಕ ಮರಿಗಳಿಗೆ ಜನ್ಮ ನೀಡುತ್ತಿದ್ದು, ಕೆಲವೊಂದು ಸತ್ತರೂ ಕೂಡ ಇವುಗಳ ವಂಶಾಭಿವೃದ್ದಿಗೆ ಯಾವುದೇ ರೀತಿಯ ತೊಂದರೆಯಾಗುತ್ತಿರಲಿಲ್ಲ.

ಇವುಗಳ ವಂಶ ನಿಧಾನವಾಗಿ ಇಲ್ಲವಾಗುತ್ತಾ ಸಾಗಿದಂತೆ ನೀರಿನಲ್ಲಿ ಇನ್ನೊಂದು ಬಗೆಯ ಜೀವಿ ಉಗಮಗೊಳ್ಳಲಾರಂಭಿಸಿತು. ಇವುಗಳು ನೋಡಲು ಮೂದಲಿನಂತೆ ಇದ್ದು, ಆಹಾರ ಅಗಿದು ತಿನ್ನಲು ದವಡೆಯೇ ಇರಲಿಲ್ಲ. (ಡಿಸ್ಕವರಿ ಟಿ.ವಿ.ಯಲ್ಲಿ ತೋರಿಸುವುದುಂಟು) ಇವು ಕೆಸರಿನಲ್ಲಿ ಮುಖ ಸೇರಿಸಿ ಆಹಾರವನ್ನು ಎಳೆದುಕೊಳ್ಳುತ್ತಿದ್ದವು.

---

85 ಪಳಿಯುಳಿಕೆ – ತಾರಾಮಂಡಲ –ಜಗತ್ತಿನ ಇತಿಹಾಸದ ಒಂದು ಹೊಸ ಪರಿಕಲ್ಪನೆ.

ನಂತರ ಏಳುವರೆ ಕೋಟಿ ವರ್ಷಗಳವರೆಗೆ ಇವು ಬದಲಾಗುತ್ತಾ ಮೀನಿನ ರೂಪ ತಳೆದವು. ಈ ಮೀನುಗಳ ಮೆದುಳು ಮಾತ್ರವಲ್ಲದೆ. ಬೆನ್ನೆಲುಬಿರುವ ಪ್ರಾಣಿ ಗೋಚರಿಸಿದ್ದಿಲ್ಲ. ಮೀನೇ ಭೂಮಿಯ ಮೇಲೆ ಬೆನ್ನೆಲುಬುಳ್ಳ ಪ್ರಥಮ ಜೀವಿ. ಇದರೊಂದಿಗೆ ದವಡೆ ಕೂಡ ರಚನೆಯಾಯಿತು. ಅಷ್ಟೇ ಅಲ್ಲ ಶರೀರದಲ್ಲಿಯ ಬಾಲ ಅಲುಗಾಡಿಸುವದರೊಂದಿಗೆ ನೀರಿನಲ್ಲಿ ಸುಲಭವಾಗಿ ಈಜಲಾರಂಭ ಮಾಡಿದವು. ಎಲ್ಲಿ ನೋಡಿದರಲ್ಲಿ ಮೀನುಗಳದ್ದೇ ರಾಜ್ಯ ಸುಮಾರು ಆರುಕೋಟಿ ವರ್ಷಗಳ ವರೆಗೆ !

ಇಷ್ಟೆಲ್ಲ ಸೃಷ್ಟಿಗೆ ಕಾರಣ 'ಭೂಮಿ' ಭೂಮಿಯ ಬಗ್ಗೆ ಇವತ್ತಿನ ವಿಜ್ಞಾನಿಗಳು ತಲೆಕೆಡಿಸಿಕೊಂಡದು ನೆನಪಿದೆಯಲ್ಲ ! ಅದೇ ಬಿಗ್‌ಬ್ಯಾಂಗ್ ನಾವೆಲ್ಲ ವಾಸಿಸುವ ಭೂಮಿ ಹಾಗೂ ಗ್ರಹಗಳೆಲ್ಲದರ ಸೃಷ್ಟಿಗೆ ಕಾರಣವಾದದ್ದೇ ಮಹಾಸ್ಫೋಟಕ್ ಸೂರ್ಯನಲ್ಲಿ ಉಂಟಾದ ಮಹಾಸ್ಫೋಟದಲ್ಲಿ ಅಲ್ಲಿಂದ ಸಿಡಿದ ಲಕ್ಷಾಂತರ ಚೂರುಗಳಲ್ಲಿ ಭೂಮಿಯೂ ಒಂದು.

ಇತ್ತೀಚಿಗೆ ಯುರೋಪ್‌ನ ವೈಜ್ಞಾನಿಕ ಸಂಸ್ಥೆಯಾದ ಸರ್ನ್‌ನ ಲಾರ್ಜ್‌ಹ್ಯುಡ್ರೋನ್ ಕೊಲೈಡರ್ ಭೂಗರ್ಭದಲ್ಲಿ ವರ್ತುಲಾಕಾರದ ಸುರಂಗವನ್ನು ನಿರ್ಮಿಸಿ ಅಲ್ಲಿ ಬಿಗ್‌ಬ್ಯಾಂಗ್ ಸೃಷ್ಟಿಸಿದ್ದು ಎಲ್ಲರಿಗೂ ನೆನಪಿದೆ.

ಅಲ್ಲಿ ಕೊಳವೆಗಳ ಮೂಲಕ ಪ್ರೋಟಾನ್ ಕಣಗಳನ್ನು ಒಂದೇ ಸೆಕೆಂಡಿಗೆ ಕೊಟ್ಯಾಂತರ ಬಾರಿ ಡಿಕ್ಕಿ ಹೊಡೆಯುವಂತೆ ಮಾಡಿದಾಗ ಸೃಷ್ಟಿಯ ರಹಸ್ಯ ತಿಳಿಯುತ್ತದೆ ಎನ್ನುತ್ತಾರೆ ವಿಜ್ಞಾನಿಗಳು ಸದ್ಯ ಮಾತ್ರ ಈ ಪ್ರಯೋಗ ನಿಂತಿದ್ದು ಎಲ್ಲರಿಗೂ ಗೊತ್ತಿದೆ.

ವಿಜ್ಞಾನಿಗಳ ಪ್ರಕಾರ ಪ್ರಯೋಗ ನಡೆಯುತ್ತಿರುವ ಸಂದರ್ಭದಲ್ಲಿ ಭೂಮಿಯಲ್ಲಿ ಹಾಕಿದಂತಹ ಕೊಳವೆ ಛಿದ್ರವಾಗಬಹುದು, ಪ್ರೋಟಾನುಗಳು ಪರಸ್ಪರ ಡಿಕ್ಕಿಯಿಂದ ಅಗಾಧವಾದ ಶಬ್ದ, ಶಾಖ, ಉತ್ಪಾದನೆಯಾಗಿ ಭೂಮಿ ಕಂಪಿಸಬಹುದಂತೆ ! ಈ ಸಂಶೋಧನೆಯಿಂದ ಸೃಷ್ಟಿಯನ್ನು ಕುರಿತು ಇನ್ನಷ್ಟು ವಿಷಯ ಹೊರಬರುವಲ್ಲಿ ಸಂದೇಹವಿಲ್ಲ!

ಇದು ಜೀವಜಾಲದ ಮೇಲೆ ಬೀಳುವ ಪರಿಣಾಮ ಗಮನದಲ್ಲಿಟ್ಟಿರಬೇಕಷ್ಟೆ !

ವಚನಕಾರರು ಸೃಷ್ಟಿಯ ಪರಿಕಲ್ಪನೆ :

ಮಾನವನ ಜೀವಿತದ ಪರಮಗುರಿ ಸ್ವಸ್ವರೂಪಜ್ಞಾನ ಇದನ್ನೇ ಸತ್ಯಸಾಕ್ಷಾತ್ಕಾರ ಎನ್ನುತ್ತಾರೆ. ಇದರ ಸಾಧನೆ ಅಷ್ಟು ಸುಲಭ ಅಲ್ಲ, ಮಾನವನು ತನ್ನ ಭೌತಿಕ ಪರಿಸರದಲ್ಲಿ ಲಭ್ಯವಿರುವ ಎಲ್ಲ ಸಂಪನ್ಮೂಲಗಳನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸುತ್ತಿದ್ದಾನೆ. ಭೂಸಂಪತ್ತು, ಖನಿಜಸಂಪತ್ತು, ಅರಣ್ಯಸಂಪತ್ತು, ನೀರು, ಗಾಳಿ, ಬೆಳಕನ್ನು ಬಳಸಿಕೊಂಡು ಮುಂದುವರೆಯುತ್ತಿದ್ದಾನೆ.

ಶರಣರ ವಚನ ಚಳುವಳಿಯಲ್ಲಿ ಭಾವಕ್ಕೆ ತಕ್ಕಂತೆ ವಿಮರ್ಶೆ'ಮಾಡಬಹುದಾಗಿದೆ. ಅವುಗಳಲ್ಲಿ ಕೆಲವಚನಗಳು ಬೆಡಗಿನ ವಚನಗಳು ಎಂದು ಹೆಸರಿಸಲಾಗಿದೆ. ಕಾರಣ ಅವು ಅರ್ಥೈಸಬಹುದಾಗಿವೆ.

ಸಂಘರ್ಷವಿಲ್ಲದೆ ಏನೂ ಹುಟ್ಟುವುದಿಲ್ಲ ಅದಕ್ಕೆಂದೇ ಅಕ್ಕ ಹೇಳುತ್ತಾಳೆ 'ಸಂಗದಿಂದಲ್ಲದೆ ಅಗ್ನಿಹುಟ್ಟದ್ದು ಸಂಗ ಶಬ್ದ' ಪುನರುಕ್ತಿಯಿಂದ ಒಂದಕ್ಕೊಂದು ಹೊಂದಿಕೊಂಡು ಐದು ವಿಭಿನ್ನ ಹೇಳಿಕೆಗಳಿವೆ. ಪ್ರತಿಯೊಂದು ಸಾಲಿನಲ್ಲಿಯ ಅರ್ಥಸಂದಿಗ್ಧತೆಯನ್ನು ಸಂಪೂರ್ಣ ಬಳಸಿಕೊಂಡು ವಚನ ಕೆಲಸ ಮಾಡುತ್ತದೆ. ಕಟ್ಟಿಗೆಗೆ ಕಿಡಿ ತಗುಲಿದಾಗ ಬೆಂಕಿ ಹತ್ತುತ್ತದೆ. ಆದರೆ ಬೆಣಚುಗಲ್ಲನ್ನು (ಚಕಮಕಿ) ಬೆಣಚುಗಲ್ಲಿಗೆ ಜೋರಾಗಿ ಉಜ್ಜಿದಾಗ ಬೆಂಕಿಉಂಟಾಗುತ್ತದೆ. ಮಣ್ಣಿನ ಸಂಪರ್ಕದಿಂದ ಬೀಜವು ಮೊಳಕೆಯೊಡೆಯುವುದು ನೇಗಿಲು ಹೊಡೆದ ಫಲವತ್ತಾದ ಮಣ್ಣಿನ ಪೂರ್ವಸಂಬಂಧವನ್ನು ತೋರಿಸುತ್ತದೆ. 'ಸಂಗ' ಶಬ್ದದೇಹ ಮನಸ್ಸುಗಳ ಸಂಬಂಧವೆಂದೇ ಹೇಳಬೇಕು. ಅಷ್ಟೇ ಅಲ್ಲ ಸಂಗ ಎಂದರೆ ಗುರುತು ಪರಿಚಯವೆಂದೇ ಅರ್ಥವಾಗಬಹುದು ಸಂಗದ ಪರಿಣಾಮ ಬೆಂಕಿಯಹುಟ್ಟು, ಬೀಜದ ಮೊಳೆದೋರುವಿಕೆ, ದೇಹವಾಗುವಿಕೆ, ಸರ್ವಸುಖ ಹಾಗೂ ಪರುಮಸುಖವೊಂದರ ಬೆಳವಣಿಗೆ ಕಾಣುತ್ತದೆ. ಬೆಂಕಿಯ ಸಂಗದ ಶೀಘ್ರಪರಿಣಾಮ ಅದೊಂದು ಮಿಂಚು ಆದರೆ ಬೀಜ ಮೊಳಕೆಯೊಡೆಯುವುದು, ಸಂಗದ ನಿಧಾನವಾದ ಪರಿಣಾಮ 'ಸರ್ವಸುಖ' ಹಾಗೂ 'ಪರಮಸುಖ'ದ ಅಂತರವೂ ಬೆಳವಣಿಗೆಯೊಂದಿಗೆ ಸೃಷ್ಟಿಪರಿಕಲ್ಪನೆ ತೋರಿಸಿಕೊಟ್ಟಿದಾಳೆ.

೧೬ನೇ ಶತಮಾನದವರೆಗೂ ಭೂಮಿಯು ದುಂಡಾಗಿದೆ. ತನ್ನ ಕಕ್ಷದ ಮೇಲೆ ಸುತ್ತುತ್ತದೆ ಎಂಬ ವೈಜ್ಞಾನಿಕ ಸತ್ಯವೂ ಈ ಜಗತ್ತಿಗೆ ಗೊತ್ತಿರಲಿಲ್ಲ. ಸೂರ್ಯ ಕೇಂದ್ರವಾದುದನ್ನು ಪ್ರಚುರಪಡಿಸಿ ಸೂರ್ಯನ ಸುತ್ತ ಭೂಮಿ ತಿರುಗುವುದೆಂಬ ವಿಚಾರವನ್ನು ಅದು ಯಾವುದರ ಮೇಲೆಯೇ ನಿಂತಿರಲಿ ತನ್ನ ಕಕ್ಷದಲ್ಲಿ ತಾನೇ ಸುತ್ತುತ್ತಿದೆ ಎಂಬ ಸಂಗತಿಯನ್ನು ಗೆಲಿಲಿಯೋ ಕೋಪರ್ನಿಕಸ್ ಹೇಳಿದರು. ಆದರೆ ೧೧ನೇ ಶತಮಾನದಲ್ಲಿಯೇ ಈ ಭೂಮಿಯನ್ನು ಕುರಿತು ವೈಜ್ಞಾನಿಕವಾಗಿ ಚಿಂತಿಸಿರುವ ದೇವರದಾಸಿಮಯ್ಯ ಹೀಗೆ ಹೇಳುತ್ತಾನೆ.

"ಸರ್ಪನೂ ಕೂರ್ಮನೂ ದಿಕ್ಕರಿಸಳೆಂಟೂ
ಭೂಮಿಯ ಹೊತ್ತಿರ್ದರೆಂದು
ಅನಿಶಾ ಹೊತ್ತಿಪ್ಪವರಿಗೆ ಅತ್ತಲಾಧಾರ ಇತ್ತಲಾಧಾರ
ಉತ್ತರಗುಡುವವರಿಗೆ ಇಕ್ಕುವೆ ಮುಂಡಿಗೆಯ
ಇತ್ತುವರುಳ್ಳಡೆ ತೋರಿರೈ ರಾಮನಾಥ"[೮೬]

ಈ ಜಗತ್ತು ಸೃಷ್ಟಿಯಾದಂದಿನಿಂದ ವಿಜ್ಞಾನದ ಬೆಳವಣಿಗೆಯಾಗಿರಲಿಲ್ಲವೆಂದು ಭಾವಿಸುವ ಅಗತ್ಯವಿಲ್ಲ. ಜಗತ್ತ ಪ್ರಳಯವಾದಾಗಲೆಲ್ಲ ಅವು ನಾಮಾವ ಶೇಷವಾಗಿರಬಹುದು. ಆದರೆ ಅದು ವಿಶಾಲವಾಗುತ್ತ ಚಿಕ್ಕದಾಗುತ್ತಾ ಆಗಾಗ ತನ್ನ ಇರುವಿಕೆಯನ್ನು ಸೂಚಿಸುತ್ತಾ ನಿಸರ್ಗದ ಮೇಲೆ ತನ್ನ ಪ್ರಭಾವ ಬೀರುತ್ತಿದೆ.

ಕುಮಾರವ್ಯಾಸನು ತಿಣುಕಿದನು ಫಣಿರಾಯ ರಾಮಾಯಣ ಗಳಗಳ ಭಾರದಲಿ ಎಂದ ಅಂದರೆ ಈ ಭೂಮಿಯ ಕೆಳಗೆ ಸರ್ಪ ಇದೆಯಂತೆ ಆ ಸರ್ಪ ತನ್ನ ತಲೆಯ ಮೇಲೆ ಹೊತ್ತುಕೊಂಡಿದೆಯಂತೆ. ಹೀಗಿದ್ದ ಮೇಲೆ ಸರ್ಪ ಎದರ ಮೇಲೆ ನಿಂತಿದೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಈ ರೀತಿ ನಂಬಿದವರಿಗೆ ದೇವರದಾಸಿಮಯ್ಯ ಒಂದು ಸವಾಲ್ ಹಾಕುತ್ತಾನೆ. ಅದು ಹೀಗೆ ಇದೆ.

ಏಳು ಹೆಡೆಯ ಸರ್ಪ, ಕೂರ್ಮ, ಮತ್ತು ಅಷ್ಟದಿಕ್ಪಾಲಕರು ಭೂಮಿಯನ್ನು ಹೊತ್ತಿರುವರೆಂದು ಹೇಳುವರು ಯಾವ ಆಧಾರದ ಮೇಲೆ ಈ ರೀತಿಯ ಹೇಳಿಕೆ ಕೊಡುತ್ತಾರೆ ?

---

[86] ಜೇಡರ ದಾಸಿಮಯ್ಯನ ವಚನ – ಸಂ.ವ.ಸಂ.–೨ ಸಂ.ಡಾ.ಎಸ್.ವಿದ್ಯಾಶಂಕರ, ವ.ಸಂ.೧೫೪, ಪು.ಸಂ.೨೨೫.

ಹೀಗೆ ಹೇಳುವವರು ಸಾಕ್ಷಾಧಾರ ಸಮೇತ ಅಂದರೆ ಹೀಗೆ ನಂಬಿರುವವರು ಸರಿಯಾಗಿ ಉತ್ತರ ಕೊಡುವುದಾದರೆ ಅವರಿಗೆ ತನ್ನ ಮಂಡಿಗೆಯ ಇಕ್ಕುವೆ ಎನ್ನುತ್ತಾನೆ. ಮಂಡಿಗೆ ಎಂದರೆ ಆಳಾಗು, ಸೋಲೊಪ್ಪಿಕೊಳ್ಳು, ಅವರು ಹೇಳಿದ್ದು, ಶಿರಸಾ ಪಾಲಿಸುವೆ ಇಲ್ಲವೆ ತನ್ನ ತಲೆಯೇ ದಂಡವಾಗಿ ಕೊಡುವೆ ಎಂಬುದನ್ನು ಹೇಳುತ್ತಾನೆ.

ಈ ರೀತಿ ದಾಸಿಮಯ್ಯನು ಹೇಳಬೇಕಾದರೆ ಆತನಿಗೆ ಗೊತ್ತಿತ್ತು. ಈ ಭೂಮಿಯನ್ನು ಯಾವ ಹಾವು, ಕೂರ್ಮವೂ ಹೊತ್ತುಕೊಳ್ಳಲು ಹೇಗೆ ಸಾಧ್ಯವೆಂದು ? ವಚನಕಾರರ ವೈಜ್ಞಾನಿಕ ದೃಷ್ಟಿಗೆ ಇಷ್ಟು ಸಾಕಲ್ಲವೇ ? ಅಲ್ಲಮನ ಕಾಲ ಚಕ್ರದ ವಚನವೊಂದು ನೋಡುವುದಾದರೆ;

"ಏಕಂ ಏಕವಾದ ವಸ್ತುವ ಲೋಕಾಲೋಕಂಗಳರಿವು
ಸ್ಥೂಲ ಸೂಕ್ಷ್ಮವೆನುತಿರ್ಪರೆಲ್ಲರೂ,
ಆತನೀತ ಬೇರೆ ಮತ್ತೊಬ್ಬಾತನೆಂಬ ಭ್ರಮೆಯಲ್ಲಿ
ಭೂತಪ್ರಾಣಿಗಳವರೆತ್ತ ಬಲ್ಲರು ಆತನ ಘನವ
....
....
ಅಪ್ರಮಾದಿ ಅಗಮ್ಯ ಅಗೋಚರ ಉಪಮಿಸಬಾರದು
ಅಂತಿಂತೆನಲಿಲ್ಲ ಗುಹೇಶ್ವರಲಿಂಗ ನಿರಂಜನ ನಿರಾಳ ! ನಿರಾಮಯ" ![೮೭]

ಅಲ್ಲಮನ ಪ್ರಕಾರ ಇವತ್ತಿನ ವಿಜ್ಞಾನದ ಅಭಿಪ್ರಾಯ ವಚನಕಾರರ ಅಭಿಪ್ರಾಯ ಒಂದೇ ಆಗಿದ್ದಿವೆಂಬುದಕ್ಕೆ ಕಾಲಚಕ್ರದ ವಚನ ಒಂದೇ ಸಾಕು.

ಹೀಗೆ ಹೇಳುತ್ತಾನೆ ಆ ಸ್ಥಿತಿಯಲ್ಲಿ ನಾನು ನೀನೆಂಬ ಭ್ರಾಂತಿ ಸೂತಕವಿರಲಿಲ್ಲ. ನಾಮರೂಪ ಕ್ರಿಯೆಗಳಿನ್ನೂ ಇರಲಿಲ್ಲ. ಪರವಸ್ತುವೊಂದಿತ್ತು. ಅದುವೆ ಶೂನ್ಯ, ಜ್ಞಾನಾಜ್ಞಾನಗಳಿರಲಿಲ್ಲ, ಕಾಮನಿಃಕಾಮಗಳಿರಲಿಲ್ಲ, ಮಾಯಾಮಯಗಳೇನೂ ತಲೆದೂರಲಿಲ್ಲ. ಆಗ ಸರ್ವಶೂನ್ಯ ವಸ್ತು ತನ್ನ ಘನತೆಯ ತಾನರಿಯದೆ, ಇದಿರರಿಯದೆ, ಏನನ್ನೂ ಅರಿಯದೆ ತಾನೇ ತಾನಾಗಿದ್ರುದ್ದು ಅಲ್ಲಿ ಅಂತರವಿರಲಿಲ್ಲ, ಬಾಹ್ಯವಿರಲಿಲ್ಲ, ಅಡಿ, ಮುಡಿ, ಒಡಲು,

---

87 ಅಲ್ಲಮ ಪ್ರಭುದೇವರ ವಚನ ಸಂ.–೨ ಸಂ.ಡಾ.ಬಿ.ವ್ಹಿ.ಮಲ್ಲಾಪೂರ, ವಚನ ಸಂ.೬೫೪, ಪು.ಸಂ.೧೭೬

ಮತ್ತೊಂದೆಡೆಯೇನೂ ಇರಲಿಲ್ಲ. ಸರ್ವಶೂನ್ಯವೊಂದೇ ಇದ್ದಿತ್ತು. ಆ ಶೂನ್ಯವೂ ಅಸ್ತಿತ್ವದ ಹಿತವಾದ ಶೂನ್ಯವಲ್ಲ. ಅದು ಸರ್ವಾಸ್ತಿ ಸೂಚಕ ಶೂನ್ಯ ಮತ್ತೊಂದಕ್ಕೆಡೆಯಿಲ್ಲದೆ ತಾನೇ ತಾನಾಗಿ ಸರ್ವವನ್ನೂ ತುಂಬಿಕೊಂಡಿರುವ ಶೂನ್ಯವದು.

ಆದಿ–ಆಧಾರ, ಅಂತರ–ಬಾಹ್ಯ, ಸ್ಥೂಲ–ಸೂಕ್ಷ್ಮ, ಮಾಯೆ–ನಿರ್ಮಾಯೆ, ಜ್ಞಾನ–ಅಜ್ಞಾನ, ಸಾವಯ ನಿರವಯ ಇಂತಹ ಯಾವ ದ್ವಂದ್ವಗಳು ಅಂದು ಇರಲಿಲ್ಲ. ಸರ್ವಶೂನ್ಯವಾಗಿದ್ದ ಶಕ್ತಿಯಲ್ಲಿ ಮುಂದೆ ವ್ಯಕ್ತವಾಗಿರಲಿರುವ ಚರಾಚರಸೃಷ್ಟಿ ಅವ್ಯಕ್ತರೂಪದಿಂದ ಇದ್ದಿತೆಂದು ವಚನಕಾರರ ಅಭಿಪ್ರಾಯ.

ಈ ಭೂಮಿ ಹೇಗೆ ಹುಟ್ಟಿತು ಹೇಗೆ ಕೊನೆಗೊಳ್ಳುತ್ತದೆ ? ಈ ಪ್ರಶ್ನೆ ಕೇವಲ ಇಂದಿನ ವಿಜ್ಞಾನಿಗಳಿಗಷ್ಟೆ ಕಾಡಿದ ಪ್ರಶ್ನೆಯಲ್ಲ. ಈ ಪ್ರಶ್ನೆ ವಚನಕಾರರಿಗೂ ಕಾಡಿತ್ತು. ಇಂದಿನ ಖಗೋಳ ವಿಜ್ಞಾನಿಗಳು ಜಗತ್ತಿಗೆ ಕೊಡುವ ಸಿದ್ಧಾಂತ ವಚನಕಾರರೂ ಅಂದೇ ಕೊಟ್ಟಿದ್ದು ಕಂಡು ಬರುತ್ತದೆ. ಖ್ಯಾತ ಖಗೋಳ ವಿಜ್ಞಾನಿ ಮತ್ತು ಭೌತವಿಜ್ಞಾನಿ ಹಬಲ್ ಮತ್ತು ರಾಬರ್ಟ್‌ನ ಮೊದಲಾದವರ ಮತ್ತು ವಚನಕಾರನಾದ ಅಲ್ಲಮನ ವಿಚಾರ ಇದಕ್ಕೆ ಹೊರತಾಗಿರಲಿಲ್ಲ. ಇಡೀ ಜಗತ್ತೇ ಒಂದು ಶೂನ್ಯ ರೂಪವಾದ ಅಗ್ನಿ, ಇದು ಕ್ರಮೇಣ ವಿಕಾಸವಾಗುತ್ತಾ ವಿಸ್ತಾರವಾಗಿ ಒಂದು ಹಂತಕ್ಕೆ ಬಂದು ನಿಂತಿದೆ. ಅಂದರೆ ಒಂದು ಶೂನ್ಯವೆನ್ನುತ್ತೇವಲ್ಲ. ಅದು ಅಸ್ಫೋಟನೆಗೊಂಡು ವಿಕಾಸವಾಯಿತು. ಅಂದರೆ ಅಲ್ಲಮನು ಹೇಳುವ ಘಳಿಗೆ, ದಿನ, ಮಾಸ, ವರುಷ ಸಂವತ್ಸರಗಳೆಲ್ಲ ಆದವು ಬಿಂದುವಿನಿಂದ ಬ್ರಹ್ಮಾಂಡದ ಬಗ್ಗೆ ಬಹಳ ಸರಳ ತಿಳಿಯುವಂರತೆ ಹೇಳುವುದಾದರೆ ಹಾಲಿನೊಳಗೆ ಒಂದು ಹನಿ ಗಟ್ಟಿ ತುಪ್ಪ ಚಲ್ಲಿದರೆ ಅದು ಹೇಗೆ ಕರಗಿ ಕರಗಿ ಎಲ್ಲ ಕಡೆ ಹರಡಿಕೊಳ್ಳುತ್ತದೋ ಹಾಗೆ ! ಈ ರೀತಿ ಅದು ಅಸ್ಫೋಟಗೊಂಡು ಎಲ್ಲ ಕ್ರೀಯೆಯೂ ಕಾಲಚಕ್ರದಂತೆ ಸುತ್ತುತ್ತಿದೆ. ನಿರಂತರ ಬ್ರಹ್ಮಾಂಡ ಸೃಷ್ಟಿ ಇದೆ. ಈ ರೀತಿಯ ಆವರ್ತನಕೆ ೮೮,೦೦೦ ಮಿಲಿಯನ್ ವರ್ಷಗಳ ಪೂರ್ಣಾವರ್ತನದ ಕಾಲಾವಧಿಯೆಂದು ಲೆಕ್ಕ ಹಾಕಿದ್ದಾರೆ.[೮೮] ಡಿ.ಡಿ.–೧ರ ಪ್ರಕಾರ ೦೭.೦೩.೨೦೧೦ ಬ್ಲ್ಯಾಕ್ ಹೋಲ್ ಸಿ.ಎಸ್. ಚಂದ್ರಶೇಖರ ಅವರ ಅಭಿಪ್ರಾಯ ಮತ್ತು ಅಲ್ಲಮನ ಅಭಿಪ್ರಾಯ ಎರಡೂ ಒಂದೇ ಅಂದರೆ

---

[88] ಪಳಿಯುಳಿಕೆ – ತಾರಾಮಂಡಲ –ಜಗತ್ತಿನ ಇತಿಹಾಸದ ಒಂದು ಹೊಸ ಪರಿಕಲ್ಪನೆ.

ವಿಶ್ವವಿಕಾಸಕ್ಕೆ ಹೇಗೆ ಕೊನೆ ಎಂಬುಂದು ಇಲ್ಲವೋ ಹಾಗೇ ಭೂಮಿಗೆ ಸಾವು ಅನ್ನುವುದಿಲ್ಲ. ಹೇಗೆ ಸ್ಫೋಟಗೊಂಡು ವಿಕಾಸಗೊಳ್ಳುವುದೋ ಅದಕ್ಕೆ ವಿಕಾಸವೆಂದು, ಸಂಕುಚಿತ ಎಂದು ಕರೆಯಬಹುದು ಎನ್ನುತ್ತಾರೆ.

ಅಲ್ಲಮನು ವಿಶ್ವದ ಕಾಲಮಾನವನ್ನು ಜ್ಯೋತಿವರ್ಷಗಳಲ್ಲಿ ಅಳೆದಿದ್ದಾನೋ ಅದನ್ನೇ ಬೆಳಕಿನ ಕಿರಣಗಳು ಒಂದು ಸೆಕೆಂಡಿಗೆ ೧೮೬,೦೦೦ ಮೈಲುಗಳು, ಭೂಮಿಗೆ ಬರುತ್ತವೆ ಎನ್ನುತ್ತಾನೆ. ಇವತ್ತಿನ ವಿಜ್ಞಾನಿಗಳು ಹೇಳುವ ಪ್ರಕಾರ, ಸೂರ್ಯನ ಕಿರಣ ಭೂಮಿಗೆ ಬರಲು ೭ ನಿಮಿಷ ಬೇಕಾಗುತ್ತದಲ್ಲ ಇದನ್ನೇ ವಚನಕಾರರ ಪ್ರಕಾರ ಜ್ಯೋರ್ತಿನಿಮಿಷ ಎಂದು ಹೇಳುತ್ತಾರೆ.

ಸೂರ್ಯ ಚಂದ್ರರ ನಡುವಣ ಅಂತರ, ಪಶ್ಚಿಮದಿಂದ ಪೂರ್ವಕ್ಕೆ ಪರಿಭ್ರಮಣವಾಗುವುದು, ಅಮವಾಸ್ಯ ಪೂರ್ಣಿಮೆಗಳಿಗೆ ಕಾರಣ. ವರ್ಷದಲ್ಲಿ ಹನ್ನೆರಡು ಮಾಸಗಳು, ಮೂರು ಋತುಗಳು, ೩೬೬ ದಿನಗಳು ಇವೆಯೆಂದು ಲೆಕ್ಕ ಮಾಡಿ ಈ ಜಗತಯ್ತಸೃಷ್ಟಿ ಮಾಡಿದವನು ಬ್ರಹ್ಮ ಎಂಬ ಮಾತಿಗೆ ಅಲ್ಲಮನು ಹೀಗೆ ಹೇಳುತ್ತಾನೆ. ಸೂರ್ಯನು ಕತ್ತಲಲ್ಲಿ ಮುಚ್ಚಿಹೋಗಿದ್ದೇ (ಅಮವಾಸ್ಯೆ-ಮೌರ್ಣಿಮೆ) ತಿಳಿಯಲಿಲ್ಲ ! ಇದರ ಅಗಮ್ಯ, ಅಗೋಚರ, ಅಪ್ರಮಾಣ ಅರಿಯದ ಬ್ರಹ್ಮನೇ ಇಲ್ಲವೆನ್ನುತ್ತಾನೆ.

ನಮ್ಮ ಜನಪದರ ನಂಬಿಕೆ ಪ್ರಕಾರ ಈ ಭೂಮಂಡಲ ನಾಗೇಂದ್ರನ ನೆತ್ತಿಯ ಮೇಲೆ, ನಿಂತಿದೆಯಂತೆ! 'ತಿಣುಕಿದನು ಫಣಿರಾಯ ರಾಮಾಯಣಗಳ ಭಾರದಲಿ'(ಕುಮಾರವ್ಯಾಸ ಭಾರತ) ಇದನ್ನೇ ಕುರಿತು ಬಸವಣ್ಣನು ಹೀಗೆ ಹೇಳುತ್ತಾನೆ 'ಸಮುದ್ರ ಘನವೆಂಬೆನೆ ಧರೆಯ ಮೇಲಡಗಿತ್ತು ! ಘನ ಎಂದು ಹೇಳುವುದು ಇದು ಪ್ರಪಂಚದ ಉತ್ಪತ್ತಿಯ ವಿವರಣೆ ಈ ಧರೆಯು ನಾಗೇಂದ್ರನ ತಲೆಯ ಮೇಲಡಗಿದೆ ಎಂಬುದು ಫಣಮಣಿ ಎಂದರೆ ಭಜ್ರ-ರತ್ನ ವಾಯುವಿನ ಘಟವಾದ ಅಂಗಾರಾಮ್ಲದ' ಒಂದು ಸಂಯೋಜನೆ ಎಂಬುದು ಈಗಿನ ವಿಜ್ಞಾನಿ ವಿಶ್ಲೇಷಣೆ.

ಶರಣರು ವಚನಗಳಲ್ಲಿ ದಶವಾಯುಗಳನ್ನು ಉಲ್ಲೇಖಿಸುತ್ತಾರೆ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನವೆಂಬ ಮುಖ್ಯ ಪ್ರಾಣಪಂಚಕಗಳಾದರೆ, ನಾಗ, ಕೃಕರ, ದೇವರತ್ತ ಧನಂಜೆಯ ಮತ್ತು ಕೂರ್ಮ ಎಂಬ ಪಂಚ ಉಪಪ್ರಾಣ ಪಂಚಕಗಳೆನ್ನುತ್ತಾರೆ. ಇವೆಲ್ಲದರ ಅರ್ಥ ಶಬ್ದಕೋಶದಲ್ಲಿ 'ವಾಯು' ಎಂದೇ ಉಲ್ಲೇಖಿಸಿರುತ್ತಾರೆ 'ಮಡಿವಾಳ ಮಾಚಿದೇವ' 'ವಾಯುವಿನ ಗುಣವ ಸರ್ಪಬಲ್ಲದು' 'ಮಧುರಗುಣವ ಇರುವೆ ಬಲ್ಲದು' ವಾಯುಗುಣವ ಸರ್ಪಬಲ್ಲದು ಎಂದು ತನ್ನ ವಚನಗಳಲ್ಲಿ ಹೇಳಿದ್ದು ವಾಯುವಿಗೂ ಸರ್ಪಕ್ಕೂ ಇರುವ ನಂಟನ್ನು ವಿವರಿಸುತ್ತಾರೆ.

ಇಂದು ಪ್ರಾಣಿಶಾಸ್ತ್ರಜ್ಞರು ಹೇಳುವ ವಿಷಯ ವಚನಕಾರರು ಅಂದೇ ಹೇಳಿದ್ದರು. (ಡಿಸ್ಕವರಿ ಚಾನಲ್) ಕೂಡ ಸರ್ಪವು ವಾಯುವಿನ ನಂಟೆನ್ನುತ್ತಾರೆ. ಈ ಜಾಡುಹಿಡಿದು ವಚನ ಅರ್ಥೈಸುವುದಾದರೇ ಈಗಾಗಲೇ ವಿವರಿಸಿದಂತೆ, ಆದಿಯಲ್ಲಿ ಸೂನ್ಯವಿತ್ತು. ಸೂನ್ಯದಿಂದ ಓಂಕಾರ ಉದ್ಧಭವಾಯಿತು. ಓಂಕಾರದಿಂದ ಪರಾಶಕ್ತಿ (ಪರಶಿವ) ಆ ಪರಾಶಕ್ತಿಯಿಂದ ಶಕ್ತಿ (ಶಕ್ತಿಗೆ ಪಾರ್ವತಿ ಎಂದು) ಆಶಕ್ತಿಯೂ ಅಗ್ನಿ, ಸೂರ್ಯ ಎನ್ನಲೂಬಹುದು. ಈ ಶಕ್ತಿ ಪರಾಶಕ್ತಿಯಾದ ಪರಶಿವನ ಅರ್ಧಾಂಗಿಯಾಗಿದ್ದರಿಂದಲೇ ಪರಶಿವನನ್ನು ಅರ್ಧನಾರೀಶ್ವರ ಎಂದೂ ಕರೆಯುತ್ತಾರೆ. ಈ ಶಕ್ತಿ ರೂಪಿಣಿಯಾದ ಪಾರ್ವತಿಯಿಂದ ವಾಯು (ಶಕ್ತಿ–ಅಗ್ನಿ–ಸೂರ್ಯ)ನ ಸೂಕ್ಷ್ಮ ಅಂಶವಾಗಿರುವುದರಿಂದಲೇ ಬಸವಣ್ಣ ಕೂಡ ಹೀಗೆ ಹೇಳಿದ್ದಾನೆ. ಪಾರ್ವತಿಯ ಕಿರುಬೆರಳು ಕಿರುಕುಣಿಯ(ಉಂಗುರ)ಷ್ಟು ಈ ನಾಗೇಂದ್ರನಾದ ವಾಯುವಿನ ಗಾತ್ರವೆಂದಿದ್ದಾನೆ. ಇಂಥ ವಾಯುವಿನ ಘಟಕಗಳ ಫಲವೇ ಈ ಪೃಥ್ವಿ, ಧರೆಯ ಆಧಾರದಿಂದಲೇ ಜಲ ಸಮುಚ್ಚಯವಾದ ಸಮುದ್ರ, ವೈಜ್ಞಾನಿಕ ವಿಶ್ಲೇಷಣೆಯಂತೆ ಆಕಾಶ ತತ್ವದಲ್ಲಿ ಶಬ್ದ, ವಾಯುವಿನಲ್ಲಿ ಶಬ್ದ ಮತ್ತು ಸ್ಪರ್ಶ, ಅಗ್ನಿಯಲ್ಲಿ ಶಬ್ದ, ಸ್ಪರ್ಶ, ರೂಪ, ಜಲದಲ್ಲಿ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವೆಲ್ಲವುಗಳಿಂದ ಕೂಡಿದ ಅಂಶವೇ ಪೃಥ್ವಿ.

ಈ ಮೇಲಿನ ವಿಚಾರಗಳಿಗೆ ಪುಷ್ಟಿಕೊಡುವಂತೆಯೇ ಪ್ರಭುದೇವರ ಒಂದು ವಿಚಾರ ನೋಡಬಹುದು.

ಆಕಾಶ ಪ್ರಕಾಶವಿಲ್ಲದಂದು, ಸಾಕ್ಷಿಸಭೆಗಳಿಲ್ಲದಂದು, ಸಚರಾಚರವೆಲ್ಲ ರಚನೆಗೆ ಬಾರದಂದು ಹೀಗೆ ರಚಿತವಾದ ಭೂಮಂಡಲಕ್ಕೂ ತನಗೂ ಇರುವ ಸಂಬಂಧವನ್ನು ಇದೇ ವಿಚಾರ ಬಸವಣ್ಣ ಹೇಳಿದಂತೆ "ಅಯ್ಯಾ ನೀನು ನಿರಾಕಾರವಾಗಿರ್ದಲ್ಲಿ" ಈ ಎರಡೂ ವಚನಗಳು ವಿಜ್ಞಾನ ಮತ್ತು ವಚನಕಾರರು ಹೇಳುವಂತೆ ಆದಿಯಲ್ಲಿ ಈ ಜಗತ್ತು ಶೂನ್ಯವಾಗಿತ್ತು. ಯಾವುದೋ ಒಂದು ಕಾಲದಲ್ಲಿ ಒಂದು ಅದ್ಭುತ ಸ್ಫೋಟ ಭೂಮಿಯ ಉಗಮದ ಬಗ್ಗೆ ಮೊನ್ನೆ ಮೊನ್ನೆಯ ಸಂಶೋಧನೆ (ಬಿಗ್ ಬ್ಯಾಂಗ್) ಉಂಟಾಗಿ ಅದರಿಂದ ಅನಂತ ಕೋಟಿ ಬೆಂಕಿ ಚೆಂಡುಗಳುದುರಿ ಈ ಭೂಮಂಡಲವಾಯಿತು. ಅದನೇ ನಮ್ಮ ಪೂರ್ವಜರು ನಿರಾಕಾರದ ಶಿವನಿಗೆ ಸೃಷ್ಟಿರಚಿಸಬೇಕೆಂಬ ಯೋಚನೆ ಬಂದಿತು ಎಂದು ಹೇಳಿದ್ದಾರೆ. ಆ ಆಲೊಚನೆಯೇ ವಿಜ್ಞಾನವೆಂದೆನಿಸಿದೆ. ಹೀಗೆ ಆಸ್ಫೋಟಗೊಂಡಾಗ ಹನ್ನೆರಡು ಜ್ಯೋತಿವರ್ಷಗಳು ಉಂಟಾದವೆಂದು ಹೇಳಲಾಗಿದೆ.

ಹನ್ನೆರ'ಡು 'ರಾಶಿ' ವೃಷಭರಾಶಿಯೂ ಒಂದು ಇದು ಶಿವನ ವಾಹನವೆಂಬುದು ಎಲ್ಲರಿಗೂ ಗೊತ್ತಿದೆ. ಹಾಗೆ ಸ್ಫೋಟ ಸಂಭವಿಸಿದಾಗ ತಾನು ಆ ರಾಶಿಯಲ್ಲಿದ್ದೆನೆಂದು ಹೇಳಿ, ಆಗ ಶಿವನು ಜನತೆಯ ಸಂಕಷ್ಟಗಳನ್ನು ನೀಗಲು ಜಂಗಮವೇಶಧಾರಿಯಾಗಿ ಭವಕ್ಕೆ ಬಂದಾಗ ತಾನು ಭಕ್ತನೆಂಬ ವಾಹನವಾಗಿದ್ದೆನೆಂದು ಹೇಳಿದ್ದಾನೆ. ಆದ್ದರಿಂದ ಶಿವನಿಗೆ 'ನಂದಿ'ಯ ಅವತಾರವೆನ್ನುತ್ತಾರೆ. ಚನ್ನಬಸವಣ್ಣನು ಬಯಲು ಮೂರ್ತಿಯಾಗಿ ನಿಂದನೊಬ್ಬ ಶರಣ, ಆತನ ವಿದ್ಯಾಬುದ್ಧಿಯಿಂದ ಹುಟ್ಟಿದಾತ ವಿಷ್ಣು ಕ್ರೋಧದಿಂದ ಹುಟ್ಟಿದಾತ ರುದ್ರ, ಎಂದು ಹೇಳಿ ತ್ರಿಮೂರ್ತಿಗಳಿಗೆ ಶಕ್ತಿ (ಹೆಣ್ಣು)ಯರಿಲ್ಲದೆ ಜಗದ ಕಾರ್ಯ ಸುಗಮಗೊಳ್ಳುವುದಿಲ್ಲೆಂದು ಭಾವಿಸಿ ಯಾರಿಗೆ ಎಂಥೆಂಥ ಶಕ್ತಿಕೊಟ್ಟಾನೆಂಬುದು ಈ ವಚನದಲ್ಲಿ ಬಸವಣ್ಣ ಹೀಗೆ ಹೇಳಿದನು 'ಆದಿಯಲೊಬ್ಬ ಮೂರ್ತಿಯಾದ' 'ಬಯಲು ಆಂದರೆ ಶೂನ್ಯ. ಶೂನ್ಯ ಅಂದರೆ ಅಣು, ಈ ಅಣುವಿಗೆ ಅಂಡವೆಂದೂ ಕರೆಯುತ್ತಾರೆ. ಅಂಡ–ಜ ಎಂಬುದಕ್ಕೆ ತತ್ತಿಯಿಂದ ಹುಟ್ಟಿದ್ದು ಎಂದೂ ಅಂಡಭ ಅಂದರೆ ಬ್ರಹ್ಮವೆಂದೂ ಬ್ರಹ್ಮನಿಗೆ 'ಜ್ಞಾನ'ವೆಂದೂ ವಿಷ್ಣುವಿಗೆ 'ಆಕಾಶ' ವೆಂದೂ ಸರಸ್ವತಿಗೆ 'ಹೊಳೆ' ನದಿ, ಎಂದಿದ್ದರೆ ಪಾರ್ವತಿಗೆ ಶಿವನ ಒಂದು ಅಂಶವೆಂದೂ ಅರ್ಥ ಹೀಗೆ ಬ್ರಹ್ಮ ವಿಷ್ಣು, ಮಹೇಶ್ವರಾದಿ ಪುರಾಣಗಳಲ್ಲಿ ಬರುವ ವ್ಯಕ್ತಿಗಳೆಲ್ಲ ನಮ್ಮಂತ ಶರೀರಧಾರಿಗಳಾದ ವ್ಯಕ್ತಿಗಳಾಗಿರದೆ ಈಗಾಗಲೇ ವಿವರಿಸಿದಂತೆ ಏಕದಿಂದ ಅನೇಕವಾದ, ಅಂದರೆ ಸಮಸ್ತ ಉತ್ಪತ್ತಿ

ಸ್ಥಿತಿ ಲಯಗಳು ಋಣ, ಧನ ಎಂಬ ಎರಡು ಶಕ್ತಿಗಳು ಸಮ್ಮಿಳನದಿಂದಲೇ ನಡೆಯುತ್ತದೆಂದು ಸದಾಶಿವನಿಂದ ಜ್ಞಾನಶಕ್ತಿ, ಇವುಗಳಿಂದ ಶಿವ, ಶಿವನಿಂದ ಇಚ್ಛಾಶಕ್ತಿ, ಎರಡರಿಂದ ರುದ್ರ, ರುದ್ರನಿಂದ ಕ್ರಿಯಾಶಕ್ತಿ ಇವರಿಬ್ಬರಿಂದ ವಿಷ್ಣು, ವಿಷ್ಣುವಿನಿಂದ ಲಕ್ಷ್ಮಿ, ಇವರಿಬ್ಬರಿಂದ ನರರು, ಸುರರು, ಹೆಣ್ಣು ಗಂಡು ಹೀಗೆ ಸಕಲ ಚರಚರಾಗಳ ಉತ್ಪತ್ತಿಯಾಯಿತೆಂದು ಈ ರೀತಿ ಕ್ರಿಯೆಗಳ ವಿಧಾನವನ್ನು ವಿವರಿಸಿದ್ದು ಕಂಡು ಬಂದಿದೆ.

ಬಸವಣ್ಣ ಹೀಗೆ ಹೇಳುತ್ತಾನೆ. 'ಅಂಡ ಸ್ವೇದಜ ಉದ್ಬಜಜಿರಾಯುಜಿ ಅಂಡಜ- ಎಂದರೆ ಅಣುವಿನಿಂದ ಹುಟ್ಟಿದ ಬ್ರಹ್ಮ ವಿಷ್ಣು ಮೊದಲಾದವರು. ಸ್ವೇದಜ-ಬೆವರು, ಕಾವು, ಉಷ್ಣತೆ, ತಾಪದಿಂದ ಹುಟ್ಟಿದವುಗಳು ಜರಾಯಜ-ಪಿಂಡದಿಂದ ಯೂನಿಯಲಿ ಜನಿತವಾಗುವ ಜೀವಿಗಳು.

ಹೀಗೆ ಸೃಷ್ಟಿ ಸ್ಥಿತಿ ಲಯಗಳು ನಿರಂತರವಾಗಿ ಸಾಗಿ ಬರುತ್ತಿರುವ ಈ ಮಹಾಲೋಕದ ವ್ಯಾಪಾರವನ್ನು ವಿವರಿಸುತ್ತಾ ಸ್ಥಿತಿಯನ್ನು ನಡೆಸುತ್ತಿರುವ ಆ ಮಹಿಮನಾದ ಸದಾಶಿವನೆಂಬ ಮೂಲ ಅಣುವಿನ ಸಂಬಂಧ ಅವಿನಾಶಿಯಾಗಿರುತ್ತದೆಂದು ವಿವರಿಸುತ್ತಾನೆ.

ನ್ಯೂಟನ್‌ನ ಪ್ರಕಾರ ಈ ಜಗತ್ತಿನ ಅಂತರಾಳದಲ್ಲೊಂದು ಅಧ್ಬುತ ಶಕ್ತಿ ಇದೆ. ಅದುವೇ ಗುರುತ್ವಾಕರ್ಷಣೆ. ತನ್ಮೂಲಕವೇ ನಮ್ಮ ಜಗದ ದೈನಂದಿನ ವ್ಯವಹಾರವು ಸುಗಮವಾಗಿ ಸಾಗಲು ಸಹಕಾರಿಯಾಗಿದೆ ಎಂದು ವಿವರಿಸಿದ್ದಾನೆ. ಇಂಥ ವಿಷಯಗಳನ್ನು ಪ್ರಭುದೇವನು ಕೂಡ ವ್ಯಕ್ತಪಡಿಸಿದ್ದಾನೆ. ಸೃಷ್ಟಿಯ ಉತ್ಪತ್ತಿ ಹೀಗೆ ವಿವರಿಸಿದ್ದಾನೆ. ಆದಿ ಆಧಾರವಿಲ್ಲದೆಂದು ಶಿವನಿಂದ ಈ ಸೃಷ್ಟಿ ಉತ್ಪತ್ತಿಯಾಯಿತೆಂಬ ವಿಚಾರ ವ್ಯವಹಾರಿಕ ಹಾಗೂ ಜ್ಞಾನದ ಒರೆಗಲ್ಲಿಗೆ ನಿಲ್ಲಬಲ್ಲದು ವ್ಯವಹಾರಿಕವಾಗಿ ಪೃಥ್ವಿಯಲ್ಲಿ ಧಾರಣಶಕ್ತಿ, ಜಲದಲ್ಲಿ ಆಪ್ಯಾಯನ ಶಕ್ತಿ, ತೇಜದಲ್ಲಿ ದಾಹಶಕ್ತಿ, ಇರುವುದು ಎಲ್ಲರ ಅನುಭವಕ್ಕೆ ಬಂದಮಾತು ಇದರಂತೆ ವ್ಯಷ್ಟಿಸೃಷ್ಟಿಯೊಳಗಿನ ವಸ್ತುಗಳು ಶಕ್ತಿಯುತವಾಗಿವೆಯೆಂಬುದಕ್ಕೆ ಅನೇಕ ನಿದರ್ಶನಗಳನ್ನು ಕೊಡಬಹುದು. ಭೌತಸೃಷ್ಟಿ ಮೂಲವೆನಿಸಿದ ಪರಮಾಣು ಇಲೆಕ್ಟ್ರೋನ್, ಪ್ರೋಟೋನ್ ಎಂಬ ಶಕ್ತಿಯಿಂದ ಸಂಘಟಿತವಾಗಿದೆಯೆಂದು ಜಡವೆಂದು ತೊರುವ ಸೃಷ್ಟಿಯೆಲ್ಲವೂ ಶಕ್ತಿಯುತವಾಗಿದೆಯೆಂದು ವಿಜ್ಞಾನದಮತ.

ಪ್ರಕೃತಿಯಿಂದ ರೂಪಗೊಂಡ ಮಹಾಭೂತಗಳು ಐದು ಅವುಗಳ ವಿವಿಧ ಸಂಯೋಜನೆಯಿಂದ ಈ ದೇಹವು ನಿರ್ಮಾಣಗೊಳ್ಳುತ್ತದೆ. ಇದರ ರಚನೆ ಕಾರ್ಯಮಾಡುವ ರೀತಿ ಅದ್ಭುತವಾದುದರಿಂದ ಇದಕ್ಕೆ ಅದ್ಭುತ ಎಂದಿದ್ದಾನೆ. ಅಲ್ಲಮ ಸೃಷ್ಟಿಯ ವಿಕಾಸದ ಮುನ್ನ ಏನೇನೂ ಇಲ್ಲ ಏನಿಲ್ಲದ ಬಯಲು ಮುಂದೆ ಬರಲಿರುವ ಮಹಾಸೃಷ್ಟಿಯನೆಲ್ಲವನ್ನು ಮಯುರಾಂಡ ರಸನ್ಯಾಯದಂತೆ ತನ್ನಲ್ಲಿ ಒಳಗೊಂಡ ಮಹಾಶೂನ್ಯ ಕ್ರಮೇಣ ಈ ತತ್ವಗಳು ಹುಟ್ಟಿದ ರೀತಿ ಹೀಗಿದೆ. ಈ ಪರವಸ್ತು 'ಸಹುಶ್ಯಾಂ' ಎಂದು ಬಹುತತ್ವರೂಪಕ್ಕೆ ಇಚ್ಚೆಸುತ್ತದೆ. ಲೀಲೆಯಾದೊಡೆ ಉಮಾಪತಿ, ಲೀಲೆನಿಂದೊಡೆ ಸ್ವಯಂಭು ಎಂದು ಪ್ರಭುದೇವ ಹೇಳುತ್ತ ಇಡಿ ವಿಶ್ವವೆಲ್ಲ ಪರಶಿವನ ಲೀಲೆ ಎಂದು ಸಹಜದಿಂದ ನಿರಾಲಂಬವಾಯಿತು. ನಿರಾಲಂಬದಿಂದ ನಿರಾಳವಾಯಿತು. ನಿರಾಳದಿಂದ ನಿರವಯವಾಯಿತು. 'ನಾದದ ಉತ್ಪತ್ತಿ ಸ್ಥಿತಿ, ಲಯವನ್ನು ಹೇಳಿದಡೇನು ಕೇಳಿದಡೇನು, ಎಲೆಮರುಳೆ' ಎನ್ನುತ್ತಾನೆ ನಾದ-ಬಿಂದು ಕಲೆಗಳು ವಿಶ್ವಸೃಷ್ಟಿಯ ಮೂರು ಹಂತಗಳು. ನಾದವು ಮೊದಲಹಂತ ಅದು ಅತ್ಯಂತಸೂಕ್ಷ್ಮ ಅಲ್ಲಿರುವುದು ಬರಿಚೇತನ ಈ ನಾದವೇ ತೇಜೋ ಘನರೂಪವ ತಾಳುತ್ತದೆ ಅದುವೇ ಬಿಂದುವೆಂದರು. ವಿಶ್ವನಿರ್ಮಾಣಕ್ಕೆ ಸಿದ್ಧವಾದ ಅವಸ್ಥೆ ಎರಡನೆ ಹಂತ ಈ ಬಿಂದುವೇ ಇನ್ನಷ್ಟು ಸ್ಥೂಲಗೊಂಡು ಬೃಹತ್ ವಿಶ್ವರೂಪದಲ್ಲಿ ವಿಕಾಸಗೊಳ್ಳುತ್ತದೆ. ಅದು ಕಲೆ, ಮೂರನೆಯ ಹಂತ, ಈ ನಾದ, ಬಿಂದು ಕಲೆಗಳನ್ನು ಅರಿಯುವುದೆಂದರೆ ವಿಶ್ವಸೃಷ್ಟಿಯನ್ನು ಅರಿಯುವುದು. ಲೋಕದ ಬಹುಜನ ಬುದ್ಧಿವಂತರು ಈ ವಿಶ್ವದ ಅದ್ಭುತವನ್ನು ಬಲ್ಲರು ಅದು ಸೃಷ್ಟಿಗೊಂಡ ವಿಧಾನವನ್ನು ಎಳೆ ಎಳೆಯಾಗಿ ಬಿಡಿಸಿ ವಿವರಿಸುವ ಸಾಮರ್ಥ್ಯ ಅವರಿಗೆ.

ಅಂಬಿಗರ ಚೌಡಯ್ಯನ ಪ್ರಕಾರ 'ಸೃಷ್ಟಿಯ ಕಲ್ಪಿಸುವ ತರ್ಕಬ್ರಹ್ಮಂಗೆ ಶತಾಯುಗವೆಂದು' ಶಾಶ್ವತವಾಗಿ ಇರುವ ಪರಾತ್ಪರ ಸ್ವರೂಪನಾದ ಶಿವನ ಅದಿಕ್ಯವನ್ನು ಹಲವಾರು ಪೌರಾಣಿಕ ನಿದರ್ಶನಗಳನ್ನು ಉದಾಹರಿಸುತ್ತ ವಿವರಿಸುತ್ತಾನೆ. ಮೂರು ಲೋಕಗಳಲ್ಲಿ ಇರುವ ಎಂತೆಂಥ ಶಕ್ತಿಶಾಲಿಗಳಾದರೂ ಸರಿ, ಅವರು ಒಂದಲ್ಲ ಒಂದು ದಿನ ಅಳಿದು ಹೋಗುವಂತಹವರೆ, ಅವರೆಲ್ಲರಿಗೂ ಒಡೆಯನಾಗಿರುವ ಶಿವನು ನಿತ್ಯನೂ ಶಾಶ್ವತನೂ ಆಗಿದ್ದನೆಂದು ಚೌಡಯ್ಯ ಅದುವೇ ಸತ್ಯ.

ಚನ್ನಬಸವಣ್ಣ ಮುಂದುವರಿದು ಹೇಳುತ್ತಾನೆ. ಪೂಜೆಯ ಹೆಸರಿನಲ್ಲಿ ಪರಿಸರವನ್ನು ಸಂರಕ್ಷಿಸಬೇಕೆಂದು ಹೇಳುತ್ತಾನೆ. ಧರಣಿ ಜನರೆಲ್ಲರೂ ಭಕ್ತರೇ ಆಗಿ ಪಾಷಾಣಂಗಳೆಲ್ಲವೂ ಲಿಂಗಗಳಾಗಿ ಚನ್ನಬಸವಣ್ಣನಂತಹ ಕಲ್ಪನೆ ಭೂಮಿಯ ಮೇಲೆ ವಾಸಿಸುವ ಪ್ರತಿಯೊಬ್ಬ ಜೀವಿ ಅರಿತಿದ್ದೆ ಆದರೆ ಯಾರು ಯಾರನ್ನು ಹಿಂಸಾದೃಷ್ಟಿಯಿಂದ ನೋಡಲಿಕ್ಕೆ ಸಾಧ್ಯವಿಲ್ಲ.

ಭೂಮಿಯ ಮೇಲೆ ವಾಸಿಸುವ ಎಲ್ಲರೂ ಭಕ್ತರೇ ಆಗಬೇಕು ಅಂದಾಗ ಸೃಷ್ಠಿಯ ಎಲ್ಲ ವಸ್ತುಗಳು ಪಾಷಾಣಂಗಳೆಲ್ಲ ಲಿಂಗಗಳಾಗಿ ಪೂಜಿಸಲ್ಪಡುತ್ತವೆ. ಅಂದರೆ ಸೃಷ್ಟಿಯ ಎಲ್ಲ ವಸ್ತುಗಳು ಹಾಳಾದರೆ ಅವುಗಳು ನಮ್ಮ ಬದುಕಿಗೆ ಪೂರಕ ಮತ್ತು ಮುಂದಿನ ಪೀಳಿಗೆಗೆ ಪ್ರೇರಕವಾಗುತ್ತಿವೆ. ಎಂದು ಹೇಳಿ ಮಾನಸಿಕವಾಗಿ ತಯಾರಾದಾಗ ಆತನೇ ಭಕ್ತನಾಗುತ್ತಾನೆ, ವಿರಕ್ತ'ನಾಗುತ್ತಾನೆ. ನಿತ್ಯಮುಕ್ತನಾಗುತ್ತಾನೆ. ತ್ರಿವಿಧಸೂತಕವ ಕಳೆದುಳಿದಲ್ಲದೆ. ಗುರು, ಲಿಂಗ, ಜಂಗಮ ಸೃಷ್ಟಿಯ ಚರಾಚರಗಳೆಲ್ಲ ಹೀಗೆ ಪೂಜಿಸಲ್ಪಟ್ಟಾಗ ಪ್ರತಿಯೊಂದು ಗೌರವತೆಗೆ ಹೆಸರಾಗಿ ಸಂರಕ್ಷಿಸಲ್ಪಡುತ್ತವೆ.

ಈ ಸೃಷ್ಟಿಯ ರಕ್ಷಣೆ ಎಲ್ಲರ ಹೊಣೆ ಇದನ್ನು ಪ್ರತಿಯೊಬ್ಬರು ತಿಳಿದುಕೊಳಬೇಕು ಹೀಗೆ ಪ್ರತಿಯೊಂದು ಲಿಂಗವೆಂದು ಅರಿತ ಮೇಲೆ ಮತ್ತೆ ಬೇರೊಂದು ಲಿಂಗ ಪೂಜಿಸಲು ಹೇಗೆ ಸಾಧ್ಯ.

ಆದ್ದರಿಂದ ಲಿಂಗವೆ'ಂಬುದು ಅದು ಬೇರೆಯಲ್ಲ ಸೃಷ್ಟಿಯಲ್ಲಿರುವ ಪ್ರತಿಯೊಂದು ವಸ್ತು ಪೂಜೆಯ ಹೆಸರಲ್ಲಿ ಸಂರಕ್ಷಿಸಲ್ಪಟ್ಟಾಗ ಅದುವೇ ಲಿಂಗವೆನ್ನುತ್ತಾನೆ ಚನ್ನಬಸವಣ್ಣ. ಮುಂದುವರೆದು ಹೇಳುತ್ತಾನೆ. 'ಆದಿಯಾಧಾರವಾಗಿಹುದೇ ಘನ, ಇಡಿ ಜಗಕ್ಕೆ ಆಧಾರವಾದುದ್ದೇ ಘನ ಅದುವೇ ಭೂಮಿ, ಆಕಾಶ, ಗಾಳಿ, ನೀರು, ಬೆಳಗು ಇವುಗಳು ಹಾಳುಮಾಡುವವರು ನಾವುಗಳು. ಅಂದರೆ ಸೃಷ್ಟಿಯಲ್ಲಿ ಯಾವುದೂ ಕನಿಷ್ಠವಲ್ಲ ಎಲ್ಲವು ಶ್ರೇಷ್ಟವೆ !ಸೃಷ್ಟಿಯನ್ನು ನೋಡಿ ಸಂತೋಷ ಪಡುವುದೇ ಭಕ್ತಿ ಇದಕ್ಕೆ ಮತ್ತಾವ ತೆರಿಗೆ ಕೊಡಬೇಕಿಲ್ಲ ಇಬ್ಬಗೆ ನೀತಿ ಮಾಡದೆ ಎಲ್ಲವನ್ನು ಪ್ರೀತಿಯಿಂದ ನೋಡುವುದೇ ಪೂಜೆ ಶ್ರೇಷ್ಠ – ಕನಿಷ್ಟವೆಂಬುದಿದ್ದರೆ ಸೃಷ್ಠಿ ವಿಸ್ತಾರ ಹೇಗಾಗುತಿತ್ತು; ವಂಶಾಭಿವೃದ್ಧಿ ಹೇಗಾಗುತ್ತಿತ್ತು, ಆದ್ದರಿಂದ ಸೃಷ್ಠಿಯಲ್ಲಿ ಪ್ರತಿಯೊಂದು ಶ್ರೇಷ್ಟವಾಗಿದೆ.

ಆಸೆ, ರೋಷ ಹೊಗಳಿಕೆಗಳಿಗೆ ಒಳಗಾಗದೇ ನಿತ್ಯಕರ್ಮವೆಸಗುವುದೇ ಪ್ರಸಾದವೆನಿಸುತ್ತದೆ. ಹೆಸರು ಸಿಗುವುದೆಂಬ ಆಸೆಗೆ ಒಳಗಾಗಿ ಮಾಡುವ ಕೆಲಸ ಅದು ಪ್ರಸಾದವಾಗುವುದಿಲ್ಲ ಆಸೆ ರಹಿತಮಾಡುವುದೇ ನಿಜವಾದ ಕರ್ಮ. ನಮ್ಮ ಕಿವಿಗಳಿಗೆ ಬೀಳುವ ಪ್ರತಿಯೊಂದು ಶಬ್ದ ಶರಣರ 'ಸುಳ್ನುಡಿ' ಕ್ಷಣ ಕ್ಷಣವೂ ಕಿವಿಗಳು ಒಳ್ಳೆಯದೇ ಕೇಳಬೇಕು. ಅದುವೇ ಅನುಭವವಾಗುತ್ತದೆ. ಹೀಗೆ ಇಡೀ ದೇಹವೆಲ್ಲ ಸಾಹಿತ್ಯವಾದಾಗ ಅವನೇ ಶರಣ, ಅದುವೇ ಪೂಜೆಯಾಗುತ್ತದೆ. ಅದೇ ರಸಾನುಭವವಾಗುತ್ತದೆ. ಇಂಥವರೇ ನಿಜವಾದ ಶರಣರು ಇಂಥ ಗುಣಗಳನ್ನು ಅಳವಡಿಸಿಕೊಂಡವರು ಎಲ್ಲೇ ಇರಲಿ ಅವರಿಗೆ ನಮೋ ನಮೋ ಎನ್ನುತ್ತಾನೆ ಚನ್ನಬಸವಣ್ಣ.

ಅಂಬಿಗರ ಚೌಡಯ್ಯ ಅಜ್ಞಾನದಲ್ಲಿ ತೊಳಲಾಡುವವರ ಕುರಿತು ಹೀಗೆ ಹೇಳಿದ್ದಾನೆ. 'ಈಶ್ವರನ ಕೌಜುದೊಂದಾಸೆಯುಳ್ಳೊಡೆ' ಈ ಮೇಲಿನ ವಚನ ನೋಡಿದಾಗ ಯಾರು ಅಜ್ಞಾನ ಭ್ರಮೆಯ ಬಲೆಯಲ್ಲಿ ಸಿಕ್ಕು ಹಾಕಿಕೊಂಡವರಾಗಿರುತ್ತಾರೋ ಅಂಥವರು 'ದೇವರು ತನ್ನಲ್ಲಿಯೇ ಇದ್ದಾನೆ' ಎಂಬುದನ್ನು ತಿಳಿಯದೆ ಎಲ್ಲೆಲ್ಲೋ ಅಲೆದು ಹೊರಗಡೆ ದೇವರನ್ನು ಹುಡುಕಿ ಕಾಣಲು ಹಂಬಲಿಸುತ್ತಾರೆ. ಈ ಕಾರಣದಿಂದಲೇ ಅಂಬಿಗರ ಚೌಡಯ್ಯ ಅಂತಹ ಭ್ರಮೆಯುಳ್ಳವರನ್ನು ಕುರಿತು ದೇವರು ನಿನ್ನಲ್ಲಿಯೇ ಇದ್ದಾನೆ. ಪರಪ್ರದೇಶಗಳಿಗೆ ಹೋಗಿ ಬಳಲಬೇಡ ಎಂದು ಹೇಳುತ್ತಾನೆ. ಹಾಗೆಯೇ ಇನ್ನೂ ಕೆಲವರಿಗೆ ಮೂಕ್ಷ ಪಡೆಯಬೇಕೆಂಬ ಆಸೆಯಿರುತ್ತದೆ. ಕೆಲವು ಪುಣ್ಯಕ್ಷೇತ್ರಗಳಿಗೆ ಹೋಗಿ ದೇಹತ್ಯಾಗ ಮಾಡಿದರೆ ಮೋಕ್ಷವು ದೊರೆಯುತ್ತದೆಂದು ಅವರು ಭಾವಿಸಿಕೊಂಡಿರುತ್ತಾರೆ. ಅಂಥವರನ್ನು ಕುರಿತು "ಕಾಶಿಯಲ್ಲಿ ಹೋಗಿ ದೇಹತ್ಯಾಗ ಮಾಡಬೇಡ" ಎಂದು ಹೇಳಿದ್ದಾನೆ. ಆದುದರಿಂದ ದೇವರನ್ನು ಕಂಡುಕೊಳ್ಳಲು ತನ್ನ ಸ್ವರೂಪವನ್ನೇ ದೇವರು ಎಂದಿದ್ದಾನೆ.

ಚೌಡಯ್ಯನ ಹೇಳಿಕೆಗೆ ಪುಷ್ಟಿಕೊಡುವಂತೆ ಸಕಳೇಶ ಮಾದರಸನು ಹೀಗೆ ಹೇಳುತ್ತಾನೆ. 'ಕರ್ತನೊಬ್ಬನೆ ದೇವ ಸತ್ಯವೇ ಸುಭಾಷ ಭೃತ್ಯಾಚಾರವೇ ಆಚಾರ' ಈ ಜಗವ ಸೃಷ್ಟಿಸುವ ರಕ್ಷಿಸುವ ಕರ್ತವ್ಯದಲ್ಲಿ ನಿತ್ಯ ನಿರತನಾಗಿರುವಾತನೇ ದೇವರು. ಈ ಸತ್ಯವನ್ನು ನಂಬಿ ನಡೆಯುವುದು ನುಡಿಯುವುದೇ ಸುಜ್ಞಾನ ಸುವಿಚಾರ, ಸುಭಾಷೆ, ದೇವ ನಿರ್ಮಿತ ಈ ಸೃಷ್ಟಿಯ ಸಕಲ ಜೀವರಾಶಿಗಳ ಸೇವೆಯಲ್ಲಿ ನಾವು ಸದಾ ನಿರತರಾಗಬೇಕು.

ಅಂದರೇ ಸೃಷ್ಠಿಯಲ್ಲಿಯ ಜೀವರಾಶಿಯ ಬಗ್ಗೆ ಕಳಕಳಿಯುಳ್ಳವರಾಗಬೇಕು ಚರಾಚರಗಳನ್ನು ಕಾಪಾಡುವುದೇ ಮನುಷ್ಯ ಗುಣ ಎನ್ನುತ್ತಾರೆ.

ಚನ್ನಬಸವಣ್ಣನ ಪ್ರಕಾರ ಈ ಸೃಷ್ಠಿಯಲ್ಲಿ ಎಲ್ಲವೂ ಬದಲಾಗುತ್ತದೆ. ಒಂದು ಕ್ಷಣದಲ್ಲಿ ಇದ್ದಂತೆ ಇನ್ನೊಂದು ಕ್ಷಣದಲ್ಲಿ ಇರುವುದಿಲ್ಲ ಇದುವೇ ಈ ಜಗತ್ತಿನ ಗುಣಲಕ್ಷಣ ಅದಕ್ಕೆ ಇದರ ಹೆಸರು 'ಜಗತ್ ಸೃಷ್ಟಿ' ಎಂದು 'ಜಗತ್' ಎಂದರೆ ಚಲಿಸು ಬದಲಾಗು ಎಂದರ್ಥ. ಈ ಸೃಷ್ಟಿಯಲ್ಲಿ ಎಲ್ಲವು ವಿಚಿತ್ರ ವಿಶೇಷ ಎಂಥ ಆಹಾರಾದಿಗಳು ಸೇವನೆ ಮಾಡಿದರೂ ಈ ದೇಹ ಮರೆಯಾಗಿ ಹೋಗುವುದು. ಇದರಿಂದ ಕಳಚಿಕೊಳ್ಳಲು ಅಸಾಧ್ಯ ಅದೆಷ್ಟೋ ಸೌಂದರ್ಯ ಸಾಧನಗಳನ್ನು ಬಳಸಿದರು ಈ ದೇಹವು ಒಂದುದಿನ ಕುರೂಪ ಆಗುವುದನ್ನು ನಿಲ್ಲಿಸಲಿಕ್ಕೆ ಆಗದು.

ಚರ್ಮವೆಲ್ಲ ಸುಕ್ಕಗಟ್ಟಿ ಕಳಾಹೀನವಾಗುತ್ತದೆ. ಕರಿಯಕೂದಲು ಬಿಳಿಯ ಕೂದಲುಗಳಾಗುತ್ತವೆ. ಹಲ್ಲುಗಳೂ ಉದುರುತ್ತವೆ. ಬೆನ್ನುಬಾಗುತ್ತದೆ. ಪ್ರತಿಯೊಂದು ಅವಯವಗಳ ಶಿಥಿಲವಾಗುತ್ತವೆ. ಒಂದುದಿನ ಈ ದೇಹ ಸಂಪೂರ್ಣ ಮರೆಯಾಗಿಬಿಡುತ್ತದೆ.

ಇಷ್ಟಿದ್ದರೂ ಮನುಷ್ಯ ತಲೆಯಲ್ಲಿ ಏನಾದರೂ ತುಂಬಿಕೊಳ್ಳುತ್ತಾನೆ. ತನ್ನ ಹೆಸರು ಈ ಜಗತ್ತಿನಲ್ಲಿ ಅಜರಾಮರವಾಗಿ ಉಳಿಯಬೇಕೆನ್ನುತ್ತಾನೆ. ಅದಕ್ಕಾಗಿ ಶಿಲಾಶಾಸನ ಬರೆಯಿಸುತ್ತಾನೆ ಮೂರ್ತಿಗಳು ನಿಲ್ಲಿಸುತ್ತಾನೆ. ಇದರರ್ಥ ಮನುಷ್ಯ ಎನೂ ಕಟ್ಟಬಾರದು ಬೆಳೆಸಬಾರದು ಎಂದಲ್ಲ ಆದರೆ ಇದಾವುದೂ ಸ್ಥಿರವಲ್ಲ ಎಂದಂತಿರಬೇಕು ಅಷ್ಟೇ ! ಇದೆಲ್ಲವೂ ಒಂದುದಿನ ಬಿಡಲೇಬೇಕು ಕೆಲಸಕ್ಕೆ ಸೇರಿದ ಮಾತ್ರಕ್ಕೆ ಸೇರಿದ ಮೇಲೆ ನಿವೃತ್ತಿಯಾಗದೆ ಇರುತ್ತದೆಯೆ ?

ಬದುಕಿನಲ್ಲಿ ಎಷ್ಟೆ ಮೇಲೆರಿದರೂ ಉನ್ನತ ಹುದ್ದೆಯಲ್ಲಿದ್ದರೂ ಒಂದು ದಿನ ನಿವೃತ್ತಿ ಖಚಿತ. ಹಕ್ಕಿ ಆಗಸದಲ್ಲಿ ಎಷ್ಟೆ ಎತ್ತರ ಹಾರಿದರೂ ಅದು ಇಳಿದು ಗೂಡಿಗೆ ಬರಲೇಬೇಕು ಈ ತಿಳುವಳಿಕೆಯಿದ್ದ ಮನುಷ್ಯ ತನ್ನ ಏಳಿಗೆ, ಸಾಧನೆ ಕಂಡು ಅಹಂಕರಿಸುವುದಿಲ್ಲ ಇನ್ನೋಬ್ಬರ ಏಳಿಗೆ ಕಂಡು ಮತ್ಸರಿಸುವುದಿಲ್ಲ ಈ ರೀತಿ ಬದುಕುವುದೇ ಸಾರ್ಥಕತೆ, ಅಳಿಯದಂತೆ ಉಳಿಯುವುದೇ ಅದೇ ಸತ್ಯ ಪರಮಸತ್ಯ ಅದೇ ಜಗದ ಸ್ಥಿತಿ.

ಅಂಬಿಗರ ಚೌಡಯ್ಯನ ಪ್ರಕಾರ :

> "ಬ್ರಹ್ಮನ ಘನವೆಂತೆಂಬಿರಯ್ಯ, ಬ್ರಹ್ಮನು ಘನವಲ್ಲ,
> ಬ್ರಹ್ಮನು ಕಮಲದಲ್ಲಿ ಹುಟ್ಟಿದ
> ಆ ಕಮಲವು, ಘನವೆಂತೆಂಬಿರಯ್ಯ, ಕಮಲವು ಘನವಲ್ಲ
> ....
> ....
> ಅಡಗಿರ್ದನೆಂದು ವೇದಗಳು ಸಾರುವವು ಎಂದಾತ
> ನಮ್ಮಾಂಬಿಗರ ಚೌಡಯ್ಯ"[೮೯]

ಬ್ರಹ್ಮನ ಇಂದ ಈ ಸೃಷ್ಟಿ ನಿರ್ಮಾಣವಾಯಿತೆಂದು ಹೇಳುವವರಿಗೆ ಅಂಬಿಗರ ಚೌಡಯ್ಯ ಈ ರೀತಿ ಹೇಳುತ್ತಾನೆ.

ಈ ಸೃಷ್ಟಿಯು ಬ್ರಹ್ಮರೂಪ, ಶಿವರೂಪ, ಹೀಗಿರುವ ಸೃಷ್ಟಿ ಈ ಬ್ರಹ್ಮನನಿಗೆ ಅವಿನಾನುಭಾವ ಸಂಬಂಧವಿದೆ ಎಂದೆಂದೂ ಈ ಶಕ್ತಿ ಶಿವನ ರೂಪವೇ ಆಗಿದೆ. ಅವನ ಧರ್ಮವಾಗಿದೆ. ಆದ್ದರಿಂದ ಈ ಸೃಷ್ಟಿ ಶಿವಸ್ವರೂಪ. ಹಾಗಾದರೆ ಕೇಡು, ದುಃಖಗಳ ಅಸ್ತಿತ್ವಬೇಕೆ ಎಂಬ ಪ್ರಶ್ನೆಗಳೇಳುತ್ತವೆ. ಇದು ಬ್ರಹ್ಮನ ಇಂದ ಹುಟ್ಟಿದ್ದು ಎಂದ ಮೇಲೆ ಯಾವುದು ಕರಗಬಾರದಲ್ಲ. ಸವೆಯಬಾರದಲ್ಲ ! ಅವೆಲ್ಲ ಸವೆಯುತ್ತವ ಎ, ಕರಗುತ್ತವೆ ಎಂದರೆ ಏನರ್ಥ ? ಬ್ರಹ್ಮನ ಕಮಲ ಶಾಶ್ವತವೇ ? ಇಲ್ಲ, ಕಮಲ ಬೆಳೆದ ಕೆಸರು ಶಾಶ್ವತವೇ ? ಇಲ್ಲ ಕಿಎಸರಿನಲ್ಲಿರುವ ನೀರು ಶಾಶ್ವತವೇ ? ಇಲ್ಲ ಈ ನೀರು ಆಗಸ್ತ್ಯನೆಂಬ ಮುನಿಗೆ ಣಿರಡಿಸಿದರೆ ಒಂದು ಬೊಗಸೆ ನೀರು ಇಲ್ಲ. !

ಅಂದರೆ ಬಾವಿಕಯ ನೀರು ಸೇದಿ ಸೇದಿ ಬಾವಿಯ ನೀರು ಬತ್ತುವುದಿಲ್ಲವೆ ? ಅಂದರೆ ಮುಂಬರುವ ಪ್ರಳಯ, ಲಯದ ಬಗ್ಗೆ ನಾವು ಕಿಂಚಿತ್ತು ವಿಚಾರ ಮಾಡಿಯೂ ಇಲ್ಲ.

---

[89] ಅಂಬಿಗರ ಚೌಡಯ್ಯನ ವಚನ, ಸಂ.ವ.ಸಂ.-೧, ಸಂ. ಎಮ್.ಎಮ್.ಕಲಬುರ್ಗಿ, ವ.ಸಂ.೨೧೦, ಪು.ಸಂ.೬೮

ಭೂಮಿ ಶಾಶ್ವತವೇ ಇಲ್ಲ. ಭೂಮಿ ಹೊತ್ತಂತಹ ಆದಿಶೇಷ ಶಾಶ್ವತನೇ ? ಎಂತಹ ಪ;ರಶ್ನೆ ಹಾಕುತ್ತಾನೆಂದರೆ ಪಾರ್ವತಿದೇವಿ ಕೂಡ ಕೇವಲ ಪರಮಾತ್ಮನ ಎಡಗಡೆಯ ತೊಡೆ ಏರಿಕುಳಿತವಳು ಆಕೆಗೆ ಬಲತೊಡೆಯ ಬಗ್ಗೆ ಏನನ್ನೂ ಗೊತ್ತಿಲ್ಲವಲ್ಲ. ಈ ವಿಷಯದಲ್ಲಿ ಅಮಾಯಕಳು.

ಅಂದರೆ ದೇವನುಜ ದೇವತೆಗಳಿಗೆ ಗುರುತಿರದ ರಹಸ್ಯವೊಂದಿದೆ. ಅದುವೆ ಮತ್ತೆ ಶೂನ್ಯದತ್ತ ಕೊಂಡೊಯ್ಯುವುದು. ಶೂನ್ಯದಿಂದ ವಸ್ತು ಸೃಷ್ಟಿ ಸಾಧ್ಯವಾದಂತೆ ಸೃಷ್ಟಿಯಿಂದ ಮತ್ತೆ ಶೂನ್ಯದತ್ತ.

ಅಂದರೆ, ಚೌಡಯ್ಯನೇ ಸೃಷ್ಟಿಕರ್ತನೆಂಬುವವರಿಗೆ ಒಂದು ಪ್ರಶ್ನೆ ಕೇಳುತ್ತಾನೆ. ಇಲ್ಲಿ ಮೊದಲು ಬ್ರಹ್ಮನೇ ಶಾಶ್ವತನಲ್ಲವೆಂದ ಮೇಲೆ ಬ್ರಹ್ಮನು ಹೇಗೆ ಸೃಷ್ಟಿಕರ್ತನಾಗಲು ಸಾಧ್ಯ ?

ಅಂಡಜ ಸ್ವೇದಜ ಉದ್ಭಿಜ ಜರಾಯುಜ ಈ ನಾಲ್ಕು ಮುನಿಗಳಲ್ಲಿ ಬರುತ್ತಿಹ ಅನಂತಕೋಟಿ ಜೀವ ಸತ್ತ ಪಾಪವು ತಾಗೂದೆ ಅಯ್ಯಾ ? (ಕಾರ್ಮೆಘ ಗಗನದಿಂದ ಸುರಿಯಲು ಭೂಮಿ ಜರ್ಜರಿತವಾಗಿ ಹಳ್ಳ ಕೊಳ್ಳ ಕೆರೆ ತುಂಬಿ ದಶದಿಕ್ಕುಗಳೆಲ್ಲ ಭರಿತಂಗಳಾಗಿ ಪುರಂಗಳ ಪೊಗಲು ಅನಂತಕೋಟಿ ಜೀವ ಸತ್ತ ಪಾಪವು ಮೇಘಂಗಳಿಗೆ ತಾಗೂದೆ ಅಯ್ಯಾ)

> "ಕಾನನದಡವಿಯೊಳಗೆ ಒಂದೊಂದು ಕಾಡುಗಿಚ್ಚು ಹುಟ್ಟಿ
> ಧಿಗಿಲು ಭುಗಿಲೆಂದು ಬರಿ ಸುಳಿಗೊಂಡಟ್ಟಿ ಸುಡುವಲ್ಲಿ
> ....
> ....
> ಈ ಅಷ್ಟತನುಮೂರ್ತಿಗಳು ನಷ್ಟವಾದ ಪಾಪ ಸದಾಶಿವನ ತಾಗೂದೆ ಅಯ್ಯ
> ಉತ್ಪತ್ತಿ, ಸ್ಥಿತಿ ಲಯ ಕಾಲಕಲ್ಪಿತನಲ್ಲ
> ಪ್ರಳಯರಹಿತ ಕೂಡಲಚೆನ್ನ ಸಂಗಾ ನಿಮ್ಮ ಶರಣ"[90]

ಹೀಗೆ ಅಂಡಜ ತತ್ತಿಯಿಂದ ಯೂನಿಯಿಂದ ಬೆವರಿನಿಂದ, ತಂಪಿನಿಂದ ತಾನೆ ಹೀಗೆ ಹುಟ್ಟಿದ ಅದೆಷ್ಟೋ ಅನಂತ ಕೋಟಿ ಜೀವ ಸತ್ತಿವೆ. ಅವು ಕಾಲದ ಚಕ್ರಕ್ಕೆ ಸಿಕ್ಕಿಸುತ್ತಿವೆ. ಇದರ

---

[90] ಚನ್ನಬಸವಣ್ಣನವರ ವಚನ, ಸಂ–೩, ಸಂ. ಡಾ.ಬಿ.ವ್ಹಿ.ಮಲ್ಲಾಪೂರ (ಹೊಸ ಆವೃತ್ತಿ)

ಪಾಪ ಹತ್ತದೆ ಬಿಡುತ್ತದೆಯೋ, ಒಂದೆ ಸಮನೆ ಧೋ ಎಂದು ಸುರಿಮಳೆಗೆ ಭೂಮಿಯು ಕೂಡ ಕಂಪಿಸುತ್ತದೆ. ಹಳ್ಳಕೊಳ್ಳ ಕೆರೆಗಳೆಲ್ಲ ತುಂಬಿ ಹತ್ತು ದಿಕ್ಕುಗಳಿಗೆಲ್ಲ ಆವರಿಸಿದರೆ, ಇಡೀ ಭೂಮಂಡಲವೆಲ್ಲ ಜಲಪ್ರಳಯವಾದರೆ.

ಹಸಿ ಕಾಡಿಗೆ ಬೆಂಕಿ ಹತ್ತುತ್ತದೆ. ಕಾಡಿನ ತುಂಬೆಲ್ಲ ಕಾಳ್ಗಿಚ್ಚು ಹಬ್ಬಿದರೆ ಸುತ್ತೆಲ್ಲಾ ನಾಲಿಗೆ ಚಾಚಿ ಸಿಕ್ಕುದೆಲ್ಲ ಸುಟ್ಟುಬಿಡುತ್ತವೆ. ಗಾಳಿ ದಿನನಿತ್ಯ ಬೀಸುತ್ತದಲ್ಲ ಅದು ಇದ್ದಕ್ಕಿದ್ದಂತೆ ಸುಂಟರಗಾಳಿಯಾಗಿ ಭೂಮಿಯನ್ನು ಕೂಡ ಹರಿಗುಟ್ಟಿಸಿಬಿಟ್ಟರೆ ಅದೆಷ್ಟೋ ಭೂಮಿಯ ಮೇಲಿನ ಜೀವಿಗಳು ವಾಯುವಿಗೆ ಸಿಕ್ಕು ಸಾಯುತ್ತವಬೆ. ಧರೆ ಹತ್ತಿ ಉರಿದು, ಬ್ರಹ್ಮಾಂಡವೇ ತಾಗಲು ಕಂಡದ ಮಳೆ ಸುರಿಯಲು ದೇವಲೋಕ ಮರ್ತ್ಯಲೋಕಕ್ಕೆ ತಾಗಲು ದಿಗಿಲೆ, ಭುಗಿಲೆಂದು ಉರಿಯುವಾಗ. ಪೃಥ್ವಿ ಅಪ್ಪ, ತೇಜವಾಯು, ಆಕಾರ, ಸೂರ್ಯ ಚಂದ್ರ ಆತ್ಮ ಇವುಗಳೆಲ್ಲ ಉತ್ಪತ್ತಿ, ಸ್ಥಿತಿ, ಲಯ ಇವೆಲ್ಲದರ ಪಾಪ ಸದಾಶಿವನಿಗೆ ಹತ್ತುತ್ತದೆಯೋ ?

ಅಂದರೆ ಆಕಾಲಮಳೆ, ಅನಾವೃಷ್ಟಿ, ಕಾಡ್ಗಿಚ್ಚು ಅಘೋಷಿತ ಯುದ್ಧ ಇವೆಲ್ಲ ಸೃಷ್ಟಿಯಲ್ಲಿಯ ಅಮೂಲ್ಯ ಸಂಪತ್ತು ನಾಶವಾಗಲಿಕ್ಕೆ ಕಾರಣವಾಗುತ್ತವೆ. ಹೀಗೆ ಸೃಷ್ಟಿಯು ಮುನಿದು ಬಿಟ್ಟರೆ ಅದು ಯಾರ ತಪ್ಪು, ಪಾಪ ಯಾರಿಗೆ ತಾಗುತ್ತದೆ ಎಂದು ಕೇಳುತ್ತಾನೆ.

ಇದರ ಪಾಪ, ಪರಿಣಾಮ ಒಬ್ಬಿಬ್ಬರಿಗೆ ತಗಲುವುದಿಲ್ಲ. ಪುನಃ ಇಡೀ ಜೀವಜಾಲದ ಮೇಲೆ ಅದರ ಇರುವಿಕೆಯನ್ನು ಪ್ರಭಾವ ಪರಿಣಾಮವನ್ನು ನಿಸರ್ಗ ತೋರಿಸಿಕೊಡುತ್ತದೆ. ಅಂದರೆ ಇಲ್ಲಿ ಎಲ್ಲವೂ ಉತ್ಪತ್ತಿ ಸ್ಥಿತಿ ಲಯ ಇದು ಸೃಷ್ಟಿಯ ಅಘೋಷಿತ ಮುಷ್ಕರವೆಂದೇ ಹೇಳಬೇಕು.

ಜಗದ ಸ್ಥಿತಿಯ ಬಗ್ಗೆ ಬಸವಣ್ಣ ಹೀಗೆ ಹೇಳಿದ್ದಾನೆ "ಹತ್ತುಮತ್ತರ ಭೂಮಿ ಬತ್ತದ ಹಯನ" ಪ್ರಾಚೀನ ಕಾಲದಲ್ಲಿ ದೇವಸ್ಥಾನಗಳಿಗೆ ಭೂಮಿ, ಹಣ, ಹಸು, ದೀಪ ಉರುವಲು ಎಣ್ಣೆ, ಇತ್ಯಾದಿಗಳೆಲ್ಲ ದಾನ, ದತ್ತಿ ನೀಡಿದ್ದು ನಾವು ಅನೇಕ ಶಾಸನಗಳನ್ನು ಕಂಡು ಕೇಳಿ ತಿಳಿದಿದ್ದೇವೆ. ಅಷ್ಟೇ ಅಲ್ಲದೆ ಯಾರು ದಾನವಾಗಿ ಕೊಡುತ್ತಾರೋ ಅಂತವರ ಹೆಸರುಗಳು

ಥಾಳಾಗಿ ಬರೆಯಿಸಿರುತ್ತಾರೆ. ಇದರ ಹಿಂದಿನ ಉದ್ದೇಶ ತಮ್ಮ ಹೆಸರು ಜನರಿಗೆ ಗೊತ್ತಾಗಲಿ ಎನ್ನುವುದು ಇರಬೇಕು.

ಈ ಮೇಲಿನ ಮಾತು ಗಮನಿಸಿದರೆ ನಾವೆಷ್ಟು ಮೂರ್ಖರೆಂಬುದು ಗೊತ್ತಾಗುತ್ತದೆ. ಈ ಭೂಮಿ ಬತ್ತದ ಹಯನ ದೀಪದ ಎಣ್ಣೆ ಇದ್ದಷ್ಟು ಅಲ್ಲ ಸಕಲಚರಾಚರವೆಲ್ಲವೂ ನಮಗೆಂದೇ ದಾನವಾಗಿಕೊಟ್ಟಿರುವ ಈ ಸೃಷ್ಟಿಕರ್ತನಿಗೆ ನಾವೇನಾದರೂ ದಾನವಾಗಿ ಕೊಡಲು ಸಾಧ್ಯವೆ? ಇಂದಿನ ದಿನಗಳಲ್ಲಿ ಅವರು ದಾನವಾಗಿ ಕೊಟ್ಟಿದ್ದಾರೆ, ಇವರು ದಾನವಾಗಿ ಕೊಟ್ಟಿದ್ದೆಯೆ ನೆನಪಿದ್ದರೆ ಸಾಕು ಆದ್ದರಿಂದ ಆ ಸೃಷ್ಟಿಕರ್ತನಿಗೆ ನಾವೇನು ದಾನವಾಗಿ ಕೊಡಲು ಸಾಧ್ಯವಿಲ್ಲ. ಈ ನಿಸರ್ಗದ ಚಲುವು ಹಾಳುಮಾಡದೆ ಉಳಿಸಿಕೊಂಡು ಬಂದರೇ ಅದೇ ಕೊಡುಗೆ

ಜಗತ್ತು ಹುಟ್ಟಿದಾಗಿನಿಂದ ವಿಜ್ಞಾನ ಬೆಳವಣಿಗೆ ಯಾರಗಿರಲಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಸೃಷ್ಟಿ ಪ್ರಳಯವಾದಾಗೆಲ್ಲ ಅವು ಅವಶೇಷವಾಗಿರಬೇಕು.

ನಮಗೆ ಸಿಕ್ಕ ವಚನಗಳಲ್ಲಿ ಇಷ್ಟೊಂದು ವೈಜ್ಞಾನಿಕ ಹಿನ್ನಲೆ ಇದೆ ಎಂದರೆ ಕ್ರಾಂತಿಯ ಸಂದರ್ಭದಲ್ಲಿ ಅದೇಷ್ಟೋ ವಚನಗಳು ನಶಿಸಿ ಹೋಗಿರಲಿಕ್ಕಿಲ್ಲ. ವಚನಕಾರರಿಗೆ ಗೊತ್ತಿರುವ ಅದೆಷ್ಟೋ ವಿಷಯಗಳು ಇಂದಿನ ವಿಜ್ಞಾನಿಗಳಿಗೆ ಬೆಚ್ಚಿ ಬೀಳಿಸುವಂತಿವೆ.

ಅಂದರೆ ವಚನಕಾರರನ್ನು ಎಲ್ಲರೂ ನೊಡುವ ದೃಷ್ಟಿ ಒಂದೇ ಆಗಿರಲಿಕ್ಕಿಲ್ಲ. ಅನೆಯೊಂದೇ ಯಾರಾರು ಎಲ್ಲೆಲ್ಲಿ ಮುಟ್ಟಿ ನೋಡಿರುತ್ತಾರೋ ಅಲ್ಲಲ್ಲಿ ಬೇರೆ ಬೆರೆಯಾಗಿ ಕಾಣೂತ್ತದಲ್ಲ ಹಾಗೆ!

ಭಾರತೀಯರ ಕಲ್ಪನೆಯ ಖಗೋಳ ವಿಜ್ಞಾನ ಅಸಾಮಾನ್ಯವಾದುದು. ಹಾಗೆಯೇ ಅವರೆಲ್ಲ ಉಪಕರಣಗಳ ಸಹಾಯದಿಂದ ಹೊಸ ಹೊಸ ಸಂಶೋಧನೆಗಳಿಂದ ಸೃಷ್ಟಿಯ ಬಗ್ಗೆ ಭೂಮಿಯ ಬಗ್ಗೆ ಸೌರಮಂಡಲದ ಬಗ್ಗೆ ಮಾತನಾಡುತ್ತರೆ. ವಚನಕಾರರು ಇಂಥಹ ಯಾವ ಉಪಕರಣಗಳ ಸಹಾಯವಿಲ್ಲದೇ, ಯಾವುದೇ ಪದವಿಗಳ ಅಹಂಕಾರವಿಲ್ಲದೆ ಹನ್ನೆರಡು ಜೋತಿರ್ಮಂಡಲ (ಮೇಷ, ವೃಷಭ........ ಇತ್ಯಾದಿ) ಗ್ರಹಗಳ ಬಗ್ಗೆ ನಕ್ಷತ್ರಪುಂಜದ ಬಗೆಗಿನ ಅವರ ಅರಿವು ಯಾವ ವಿಜ್ಞಾನಿಗಳೋಂದಿಗೆ ಹೋಲಿಸಬೇಕು?

ಚಾರ್ಲ್ಸ್ ಡಾರ್ವಿನ್ನನ ಸಮಕಾಲೀನವು ಛಾರ್ಲ್ಸ್ ಲೇಯರ್ ನ ಹೇಳಿಕೆ ಮತ್ತು ವಚನಕಾರರ ಹೇಳಿಕೆ ಎಲ್ಲಿಯೂ ಬದಲಾಗುವುದಿಲ್ಲ.

ಭೂಮಿಯ ಕುದಿಯುವ ಬೆಂಕಿಯ ಚಂಡಾಗಿದ್ದು. ಕ್ರಮೇಣ ತಣ್ಣಗಾಗಿ ಕಲ್ಲು ಮಣ್ಣು ಹೊರ ಮೈರೂಪಗೊಂಡಿತೆಂದು ಲೇಯರ್, ಮತ್ತು ವಚನಕಾರರ ಅಭಿಪ್ರಾಯ. ಹೀಗೆಯೇ ಭೂಗರ್ಭದಲ್ಲಿ ಶಾಖ ಪ್ರಾರಂಭವಾಯಿತು. ಈ ರೀತಿ ಶಾಖದಿಂದ ಹೊರಬಿದ್ದ ಲಾವಾದಿಂದಲೇ ಕಲ್ಲು ಮಣ್ಣಾಯಿತೆಂದು ಹೇಳುತ್ತಾರೆ.

ಈ ಜಗತ್ತಿನ ಪ್ರತೀಕ್ಷಣವೂ ಒಂದು ಕಡೆ ಸೃಷ್ಟಿಯ ಕಾರ್ಯ ಪ್ರಾರಂಭವಾದರೆ ಇನ್ನೊಂದು ಕಡೆ ಸಂಹಾರ ವಾಗುತ್ತಿರುತ್ತದೆ. ಹೇಗೆ ಗಾಳಿಗೆ ಸಿಕ್ಕ ಎಲೆ ಗಾಳಿಯಲ್ಲಿ ತೇಲಾಡಿ ಮೇಲೇರಿ ತಿರುಗಿ ತಿರುಗಿ ಮತ್ತೆ ಬಿದ್ದು ಮಣ್ಣು ಸೇರುತ್ತದೆಯೋ ಹಾಗೆಯೇ ಪ್ರತಿಯೊಂದು ಚರಾಚರದಲ್ಲೂ ಬದಲಾವಣೆ ಆಗುತ್ತಿರುತ್ತದೆ. ಆದರೆ ತತ್‌ಕ್ಷಣ ಅರಿವಿಗೆ ಬಾರದಂತೆ ಇದನ್ನೇ ಸೃಷ್ಟಿ. ಸ್ಥಿತಿ. ಲಯವೆಂದು ಕರೆದರು ಶರಣರು.

ಅಧ್ಯಾಯ – ೬

ಪಂಚಭೂತಗಳು

ಅಧ್ಯಾಯ - ೬

ಪಂಚಭೂತಗಳು

ಹಿನ್ನೆಲೆ :

ವಿಶ್ವದ ಮೂಲ ಧಾತುಗಳನ್ನು ಪಂಚಭೂತಗಳು ಎಂದು ಕರೆಯಲಾಗಿದೆ. ಜೀವ ಇರುವ ಯಾವುದೇ ಚರಾಚರ ಅಂದರೆ ಜೀವ ಸಂಕುಲ, ಸಸ್ಯ ಸಂಕುಲ, ಮುಂತಾದ ಎಲ್ಲವುಗಳಲ್ಲಿ ಪಂಚಭೂತಗಳು ಇರುತ್ತವೆ ಎಂದು ನಂಬಲಾಗಿದೆ.

ಶೂನ್ಯ ತತ್ವದಿಂದ ಘನ ತತ್ವದವರೆಗೆ, ಬಯಲಿನಿಂದ ಆಲಯದವರೆಗೆ ಇರುವ ತತ್ವವನ್ನು ಪಂಚಭೂತಗಳೆಂದು ಹೇಳಲಾಗಿದೆ. ಚಾರ್ವಾಕರನ್ನು ಹೊರತ್ತುಪಡಿಸಿ ಎಲ್ಲ ದಾರ್ಶನಿಕರು, ಚಿಂತಕರು, ಪಂಚಭೂತ ತತ್ವಗಳನ್ನು ಒಪ್ಪಿಕೊಂಡಿದ್ದಾರೆ. ಪಂಚಭೂತದಲ್ಲಿರುವ ಆಕಾಶ ತತ್ವವನ್ನು ಚಾರ್ವಾಕರು ಒಪ್ಪಿಕೊಳ್ಳಲಿಲ್ಲ. ಉಳಿದ ಎಲ್ಲ ನಾಲ್ಕು ತತ್ವಗಳನ್ನು ಒಪ್ಪಿಕೊಂಡಿದಾರೆಂದರೆ ಅವರನ್ನು ಚಾರ್ವಾಕರೆಂದು ಕರೆದಿರಬಹುದು. ಸೃಷ್ಠಿಯ ಎಲ್ಲ ಚರಾಚರ ವಸ್ತುಗಳಲ್ಲಿನ ಪಂಚಭೂತ ತತ್ವವೆ...?

ಸೃಷ್ಠಿಯ ಎಲ್ಲ ಚರಾಚರ ವಸ್ತುಗಳಲ್ಲಿ ಪಂಚಭೂತ ತತ್ವವಿದ್ದು ಅದು ಪರಿಸರದಲ್ಲಿ ಸಾವಯವ ಸಂಬಂಧ ಹೊಂದಿದೆ. ವಚನಕಾರರು ತಾತ್ವಿಕ ವಿಷಯಗಳನ್ನು ವಿವರಿಸುವಾಗ ಅನೇಕ ಸಲ ಪಂಚಭೂತ ತತ್ವಗಳನ್ನು ಸಂಕೇತ ಪ್ರತಿಯಾತ್ಮಕವಾಗಿ ಬಳಸಿದ್ದಾರೆ.

ಪಂಚಭೂತಗಳು : ಅರ್ಥ

ಮಣ್ಣು, ನೀರು, ಬೆಂಕಿ, ಗಾಳಿ, ಹಾಗೂ ಆಕಾಶ ಸೇರಿರುವ ಸೃಷ್ಠಿಯ ಮೂಲತತ್ವಗಳನ್ನೆ ಪಂಚಭೂತ ತತ್ವಗಳೆನ್ನುವರು. ಪಂಚಭೂತ ವೆಂದರೆ "ಪ್ರಪಂಚದಲ್ಲಿ ಪದಾರ್ಥಗಳ

ಮೂಲವಸ್ತುಗಳೆನಿಸಿದ ಪೃಥ್ವಿ (ಭೂಮಿ) ಅಪ್ಪು (ನೀರು) ತೇಜಸು (ಬೆಂಕಿ) ವಾಯು ಮತ್ತು ಆಕಾಶಗಳೆಂಬ ಐದು ವಸ್ತುಗಳು"[೯೧] ಎಂದು ಅರ್ಥೈಸಲಾಗಿದೆ.

ಅಂಧಕಾರದಿಂದ ಕೂಡಿದ ಜಗತ್ತಿನಲ್ಲಿ ತೇಜೋರೂಪಿಯಾದ ನಿರಾಕಾರ ಆತ್ಮಶಕ್ತಿ ಆಕಾಶ ತತ್ವವಾಗಿ, ಆಕಾಶ ತತ್ವದಿಂದ ವಾಯು ತತ್ವ ಅದರಿಂದ ಅಗ್ನಿ ತತ್ವ ಅದರಿಂದ ಅಪ್ಪು ತತ್ವ ಮತ್ತೆ ಅದರಿಂದ ಪೃಥ್ವಿ ತತ್ವ ಸೃಷ್ಠಿಯಾಗಿರುವದಾಗಿ ವೇದಮೂಲಗಳಲ್ಲಿ ವಿವರಿಸಲಾಗಿದೆ.೨

ಪಂಚಭೂತಗಳ ಸ್ವರೂಪ :

ಪಂಚಭೂತಗಳಿಂದಾದ ಈ ಜೀವಮಂಡಲದಲ್ಲಿ ಮನುಷ್ಯ ಅಷ್ಟೇ ಅಲ್ಲ ಪ್ರಾಣಿಗಳು, ಸಸ್ಯಗಳು, ಪಕ್ಷಿಗಳೂ, ಜಲಚರಗಳು, ಕೀಟಗಳು ಪಾಚಿ ಏಕಾಣು ಜೀವಿಗಳು ಮುಂತಾದ ಸೂಕ್ಷ್ಮ ಜೀವಿಗಳು ಬದುಕುತ್ತವೆ. ವಾಯುಮಂಡಲ ಆಮ್ಲಜನಕ ಪೂರೈಸಿದರೆ ಜಲ-ಶಿಲಾಮಂಡಲ, ನೀರು-ಆಹಾರ ಆವಾಸಕ್ಕೆ ಅನುಕೂಲ ಮಾಡಿಕೊಡುತ್ತವೆ. ಈ ಮಂಡಲಗಳಲ್ಲಿ ಏನಾದರೂ ಬದಲಾವಣೆಯಾದರೆ ಇಡಿ ಜೀವಸಂಕುಲದ ಮೇಲೆ ಪರಿಣಾಮ ಬೀರುತ್ತದೆ.[೨] ಇವತ್ತಿನ ದಿನಗಳಲ್ಲಿ ಈ ರೀತಿಯ ಪರಿಣಾಮ ಬೀರುತ್ತಿವೆ.

ಈ ಮೇಲಿನವುಗಳಲ್ಲಿ ಭೂಮಿಯ ವಾತಾವರಣ ಅಧಿಕ ಪ್ರಾಮುಖ್ಯತೆಯನ್ನು ಪಡೆದಿದೆ. ಏಕೆಂದರೆ ಜೀವನ ಪೋಷಕ ಮತ್ತು ಜೀವಿಗಳು ತಮ್ಮ ದೇಹಕ್ಕೆ ಸಹಾಯಕವಾಗುವ ಎಲ್ಲ ಅಂಶಗಳು ಇದರ ಹಿಡಿತದಲ್ಲಿವೆ. ಜೈವಿಕ ವಸ್ತುಗಳು ರಚನಾಂಗಗಳಲ್ಲಿ ಸೇರಿರುವ ಇಂಗಾಲ ಸಾರಜನಕ ಮತ್ತು ಜಲಜನಕ ಇವುಗಳಿಂದ ಜೀವಿಗಳ ಆಹಾರ ಹಾಗೂ ಜೀವನಕ್ಕೆ ತುಂಬಾ ಅವಶ್ಯಕವಾದವುಗಳು ಜೊತೆಗೆ ಪೃಥ್ವಿಯನ್ನು ಸುರಕ್ಷಿತವಾಗಿಡುವಲ್ಲಿ ಕೆಲಸಮಾಡುತ್ತವೆ. ಅಂದರೆ ಎಲ್ಲಾ ಪಾತ್ರಗಳು ಭೂವಾತಾವರಣದ ಮೂಲಕ ಸಾಗುವಾಗ ಸುಟ್ಟು ಭಸ್ಮವಾಗುತ್ತವೆ. ಸಂಪೂರ್ಣ ಸ್ಥಿತಿಯಲ್ಲಿ ಭೂಮಿಗೆ ಬಿದ್ದರೆ ಕಂದಕಗಳು ನಿರ್ಮಾಣವಾಗುತ್ತವೆ. ಓಝೋನ್ ಪದರ ಹಿಡಿದಿಟ್ಟುಕೊಳ್ಳುತ್ತದೆ. ಇಷ್ಟೇ ಅಲ್ಲದೆ ಸೂರ್ಯನಿಂದ ಭೂಮಿಗೆ ಉಷ್ಣತೆಯನ್ನು ವಾತಾವರಣದಲ್ಲಿರುವ ಅನಿಲಗಳು ಈ ಶಾಖವನ್ನು

---

[91] ಕನ್ನಡ ನಿಘಂಟು ಸಂ.೫ ಕ.ಸಾ.ಪ., ಬೆಂಗಳೂರು-೧೯೮೮, ಪು.ಸಂ.೫೦೩೫.

[92] ವಿವರಕ್ಕಾಗಿ ನೋಡಿ, ಪಂಚಭೂತಗಳು-ವಿಶ್ವಕನ್ನಡ ಸಿ.ಡಿ. ಮೈಸೂರು ವಿಶ್ವವಿದ್ಯಾಲಯ, ಮೈಸೂರು-೨೦೦೬.

[illegible]

ಮಿತಿಗೊಳಿಸುತ್ತವೆ. ಇದರ ಸಮತೋಲನೆಯಿಂದಲೇ ಭೂಮಿಯ ಮೇಲೆ ಶಾಶ್ವತವಾಗಿ ಜೀವಿಗಳಿರಲು ಸಾಧ್ಯ !

ಭೂಮಂಡಲವೆಂದು ಕರೆಯುವ ವಲಯ ಭೂಮಿಯ ಸುತ್ತಲೂ ನೀರಿನ ರೂಪದಲ್ಲಿ ಗೋಚರಿಸುತ್ತದೆ. ಅದು ಘನ, ದ್ರವ, ಅನಿಲವಾಗಿರಬಹುದು ಆದರೆ ಜಲಮಂಡಲದ ೯೫% ಉಪ್ಪು ನಿರಿನಿಂದ ಕೂಡಿದ್ದು ಒಂದು ಸಾರಿ ಶುದ್ಧ ನೀರಿಲ್ಲದೆ ಕಲ್ಪನೆ ಕೂಡ ಮಾಡಿಕೊಳ್ಳಲಾಗದು. ನೀರು ಇಲ್ಲದೆ ಹೋದರೆ ಭೂಮಿಯ ಮೇಲೆ ಬದುಕು ಸಾಧ್ಯವೆ ಪ್ರತಿಯೊಂದು ಜೀವಿಯ ದೇಹದಲ್ಲೂ ನೀರಿದೆ. ಶರೀರದ ಒಳಗೆ-ಹೊರಗೆ ಸಂಚಾರ ಮಾಡುತ್ತದೆ. ಹಾಗೆಯೇ ಶುದ್ಧ ನೀರಿನ ಕಾರಣದಿಂದಲೇ ನೆಲದ ಹವಾಗುಣದಲ್ಲಿ ವೈವಿಧ್ಯತೆ ಕಂಡು ಬರುತ್ತದೆ.

ಭೂಮಿಯ ಮೇಲಿರುವ ಗುಡ್ಡಗಾಡು ಪ್ರದೇಶವೇ ಶಿಲಾವಲಯ ಪರ್ವತವಲಯ ಇವು ಒಮ್ಮೊಮ್ಮೆ ನೂರಾರು ಕಿಲೋಮೀಟರಗಳಷ್ಟು ನೆಲಕ್ಕೆ ಇಳಿಯುತ್ತವೆ. ಇಲ್ಲಿ ಬೆಲೆಬಾಳುವ ಖನಿಜ ಸಂಪತ್ತು ಸಿಗುತ್ತವೆ. ಸಿಲಿಕಾನ್, ಮೆಗ್ನಿಸಿಯಂ, ಕಬ್ಬಿಣ, ತಾಮ್ರ, ಬೆಳ್ಳಿ, ಬಂಗಾರ ಮುಂತಾದವು ದೊರೆಯುತ್ತವೆ. ಈ ಪರ್ವತವಲಯದ ಮೇಲ್ಮಟ್ಟದಲ್ಲಿ ಮನುಷ್ಯ ಮತ್ತು ಇತರ ಪ್ರಾಣಿಗಳು ವಾಸಿಸುತ್ತವೆ. ಇಲ್ಲಿ ಆಹಾರ ಭಂಡಾರದ ಜೊತೆಗೆ ಶುದ್ಧ ನೀರಿನ ಬುಗ್ಗೆಗಳು ಇವೆ. ಇದು ಬದಲಾಗುತ್ತಿರುವ ಪರಿಸರಕ್ಕೂ ಕಾರಣವಾಗುತ್ತಿದೆ.

ಪರಿಸರದ ಪರಿವರ್ತನೆಗೆ ಮಾನವನೇ ಬಹುದೊಡ್ಡ ಕಾರಣನಾಗಿದ್ದಾನೆ. ಅರಣ್ಯಗಳು ಕಡಿದು ಅವುಗಳಿಂದ ಉರುವಲು, ಮನೆ, ಹಡಗು, ಮೇಜು, ಕುರ್ಚಿ ಇತ್ಯಾದಿ ವಸ್ತುಗಳ ನಿರ್ಮಾಣ ಆಹಾರಕ್ಕಾಗಿ ಅರಣ್ಯ ಕಡಿದು ಭೂಸಾಗುವಳಿ ಮಾಡುತ್ತಾನೆ. ಇದರಿಂದ ಗಾಳಿಯ ರಭಸ ವೇಗವಾಗುತ್ತದೆ. ಪರಿಣಾಮ ಮಳೆ ಕಡಿಮೆಯಾಗುತ್ತದೆ. ಹೀಗಾದಾಗ ವರ್ಷದಿಂದ ವರ್ಷಕ್ಕೆ ಇಂಗಾಲ ಡೈಆಕ್ಸೈಡ್ ವೃದ್ಧಿಯಾಗುತ್ತದೆ. ಭೂವಲಯದ ಹವಾಗುಣ ತಾನಾಗಿಯೇ ಬದಲಾವಣೆ ಹೊಂದುತ್ತದೆ.

ಈ ರೀತಿ ಭೂವಲಯಕ್ಕೆ ಅಪಾಯಕಾರಿ ಎನಿಸುವ ಇನ್ನೊಂದು ಅಂಶ ಓಝೋನ ಸ್ಥಿರ ವಿನಾಶ ಸೂರ್ಯನಿಂದ ವಿಸರ್ಜಿಸಲ್ಪಡುವ ಮಾರಕ ಕಿರಣಗಳನ್ನು ಹೀರಿಕೊಳ್ಳುವ ಸಾಮರ್ಥ್ಯ ಇದು ಪಡೆದುಕೊಂಡಿದೆ. ಒಂದು ವೇಳೆ ಇದರ ವಿನಾಶವಾದರೆ ಅದು ಮನುಕುಲದ ವಿನಾಶವೇ ಸರಿ.

‘ಭೂಮಿ ಬೆಂಕಿಕಾರದ’ ಅನುವ ಮಾತು ನಮ್ಮ ಗ್ರಾಮೀಣ ಜನ ಮಾತನಾಡುತ್ತಾರೆ. ಯುದ್ಧ ಬರಗಾಲ, ಭೂಕಂಪನ ಇಂತಹ ಘಟನೆಗಳು ಘಟಿಸಿದಾಗ ಈ ಮೇಲಿನ ಮಾತು ಸಾಮಾನ್ಯ ಹೀಗೆಂದರೆ ಅಕ್ಷರಸ್ತರು ಅದೆಲ್ಲ ಸುಳ್ಳು ಎಂದು ಮೂಗು ಮುರಿಯುವುದುಂಟು ಇವರು ಹೇಳುವ ಮಾತು ಸತ್ಯ ಅದುವೇ ಜ್ವಾಲಾಮುಖಿ’ ಹೀಗೆಂದರೆ ಭೂಗರ್ಭದಿಂದ ಹೋರ ಚಿಮ್ಮಲ್ಪಡುವ ಶಿಲಾಚೂರುಗಳು, ಶಿಲಾದ್ರವ, ನೀರು ಅನಿಲ ಇವುಗಳಿಂದ ಕೂಡಿದ ಕಾದವಸ್ತುಗಳು ಹೋರಚಿಮ್ಮಲ್ಪಡುತ್ತವೆ. ಇದಕ್ಕೆ ಜ್ವಾಲಾಮುಖಿ ಇಲ್ಲವೆ ‘ಭೂಮಿ’ ಬೆಂಕಿಕಾರದ ಎನ್ನುತ್ತಾರೆ.

ಭೂಮಿಯಿಂದ ಹೊರಬೀಳುವ ಶಿಲಾರಸವು ಅತಿ ಉಷ್ಣತೆಯಲ್ಲಿ ಕೆಂಪಾಗಿ ಕಾಣುತ್ತವೆ. ಅತಿ ಉಷ್ಣತೆಯಲ್ಲಿ ಕೆಂಪಾಗಿಕಣುತ್ತದೆ. ಹೀಗೆ ಹೊರಬಿದ್ದ ಶಿಲಾರಸ ಪರ್ವತ ನಿರ್ಮಾಣವಾಗಬಹುದು ಬಿಡಬಹುದು. ಶಿಲಾರಸ ಬೂದಿಯಂತಹ ವಸ್ತು ಹೊರ ಬೀಳುವುದರಿಂದ ಇದು ಪರ್ವತದಂತೆ ಆಗದೆ ತಳುವಾಗಿ ಹರಿಯುತ್ತದೆ.

ಹೀಗಾಗುವುದಕ್ಕೆ ಕೆಲ ಮುನ್ಸೂಚನೆಗಳಿವೆ. ಅಂದರೆ ಮೊದಲು ಭೂಮಿಯಿಂದ ದಟ್ಟವಾದ ಹೊಗೆಯಂತೆ ಬಂದು ಆ ಪ್ರದೇಶವೆಲ್ಲ ಸೂರ್ಯನ ಕಿರಣ ಬರದಂತೆ ತಡೆಯುತ್ತದೆ. ಈ ಪ್ರದೇಶದ ಸುತ್ತಮುತ್ತ ಲಘು ಭೂಕಂಪನ ಉಂಟಾಗುತ್ತದೆ. ನಂತರ ಭಯಂಕರ ಶಬ್ದದಿಂದ ಇಂತಹ ದ್ರವರೂಪ ಹೊರ ಚೆಲ್ಲುತ್ತದೆ ಅದುವೆ ಲಾವಾರಸ.

ಕೋಟ್ಯಾನು ಕೋಟಿ ವರ್ಷಗಳ ಸತತ ಪರಿಶ್ರಮವಹಿಸಿ ನಿಸರ್ಗ ಈ ಜಗತ್ತನ್ನು ಸೃಷ್ಟಿಸಿದೆ ನಮ್ಮ ಹಿಂದಿನ ಹಿರಿಯರು ನಾವು ಮುಂದಿನ ಪೀಳಿಗೆ ಬದುಕಿ ಬಾಳಲು ಸುಗಮವಾಗುವಂಥ ವೈವಿಧ್ಯಮಯ ಸಂಪತ್ತನ್ನು ನಮಗಾಗಿ ನೀಡಿದ್ದಾರೆ. ಮನುಷ್ಯರಾದ ನಾವೆಲ್ಲ ಸೇರಿ ಇಪ್ಪತೊಂದನೇ ಶತಮಾನದ ಅಂತ್ಯದೊಳಗೆ ನಿರ್ನಾಮ ಮಾಡಬೇಕೆಂದು ನಿರ್ಧರಿಸಿದಂತಿದೆ. ತನ್ನ ಕೈಗೆ ಸಿಕ್ಕ ನಿಸರ್ಗದ ಪ್ರತಿಯೊಂದು ವಸ್ತುವಿನ ಕೈಕಾಲುಗಳು ಮುರಿದು ಮೂಲೆ ಗುಂಪಾಗಿಸುತ್ತಿದ್ದಾನೆ. ಇದೆಲ್ಲಕ್ಕೂ ಕಾರಣ ಪ್ರಗತಿ ಎನ್ನುವ ಚಲುವಾದ ಹೆಸರೊಂದು ಇಟ್ಟು ನಿಸರ್ಗದ ಮೇಲೆ ಅತ್ಯಾಚಾರವೆಸಗುತ್ತಿದ್ದಾನೆ. ಇದೆಲ್ಲ ನಂಬಬೇಕೆಂದರೆ ಕಂಡು ಕೇಳಿ, ಓದಿಯೋ ನಂಬಬೇಕು–ಭೂಗರ್ಭದೊಳ ಹೊಕ್ಕು ಹೇಗೆ ಎಲ್ಲವನ್ನು ಬಗೆದು ಹೊರ ಚೆಲ್ಲುತ್ತಿದ್ದಾರೆಯೊ ಹಾಗೆಯೊ ಜಲಸಂಪನ್ಮೂಲ ಕೂಡ ಹಾಳುಮಾಡುವ ಕಿಡಿಗೇಡಿಗಳು ಇದ್ದಾರೆ.

ನಮ್ಮ ದೇಶದಲ್ಲಿ ಗಣಿಗಾರಿಕೆ ಯಾವ ರೀತಿ ಆಗುತ್ತಿದೆಯೋ ಹಾಗೆಯೇ ಕೈಗಾರಿಕೆಗಳೂ ಕೂಡ ನೀರನ್ನು ಅಪವಿತ್ರಗೊಳಿಸುತ್ತಿವೆ. ಇದರೊಂದಿಗೆ ಅಂತರ್ಜಲ ಹಾಗೂ ಮಹಾಸಾಗರಗಳನ್ನು ಹಾಳು ಗೆಡುವುದು ನೋಡಿಯೇ ಸುಮ್ಮನಿದ್ದೇವೆ.

ಅಂಬಿಗರ ಚೌಡಯ್ಯನ ವಚನವೊಂದು ಹೀಗಿದೆ;

> "ಅರಿವುದೊಂದು ವಾಯು, ಮರೆವುದೊಂದು ವಾಯು,
> ಉಭಯದಿಂದ ತೋರುವ ವಾಯು ಒಂದೆಯಾರಿ,
> ವಾಳುಕದ ಒಳ ಹೊರಗಿನ ನೀರಿನಂತೆ
> ಬೆಗ್ಗಳಿಸಿದಡೆ ನಿಂದು ತೆಗೆದಡೆ ಅಲ್ಲಿಯೇ ಅಡಗುವಂತೆ
> ಅರಿದು ನುಡಿದು ನಡೆದಡೆ ಜ್ಞಾನಿ,
> ನುಡಿದ ನುಡಿಗೆ ನಡೆಯಡೆ ಆತನೆ ಜೀವಭಾವಿ
> ಎಂದನಂಬಿಗ ಚೌಡಯ್ಯ"[೯೩]

ಪಂಚಭೂತಗಳ ಬಗ್ಗೆ ವಚನಕಾರರು ಹೇಳಿರುವುದೇ ಒಂದು ನಾವು ತಿಳಿದುಕೊಂಡಿರುವುದೇ ಇನ್ನೊಂದು. ನಮಗೆ ಪ್ರತಿನಿತ್ಯ ಕಣ್ಣಿಗೆ ಕಾಣುವುದೆಲ್ಲವೂ ಹಾಗೆಯೇ ಪ್ರತಿಯೊಂದನ್ನು ಅಂದರೆ, ನಿಸರ್ಗದ ಸಂಪತ್ತನ್ನು ಕಂಡೂಕಾಣದಂತೆ ಹಾಳು ಗೆಡುತ್ತಿದ್ದೇವೆ. ಬೇಕಾದಷ್ಟು ಅವಶ್ಯಕತೆ ಇದ್ದಷ್ಟು ಬಳಸುವುದು ಜಾಣರ ಲಕ್ಷಣ. ಏಕೆಂದರೆ ನಮ್ಮಿಂದ ಪಂಚಭೂತಗಳಿಲ್ಲ. ಪಂಚಭೂತಗಳಿಂದ ನಾವಿದ್ದೇವೆ ಎಂಬ ಸತ್ಯ ಅರಿತಾಗ ಮಾತ್ರ ಬದುಕಿನ ಭಾಗವಾಗಿ ನೋಡಲು ಸಾಧ್ಯವಿದೆ. ಇದೆಲ್ಲ ಬಾಯಿಂದ ಹೇಳುವುದಷ್ಟೇ ಅಲ್ಲ ನುಡಿದಂತೆ ನಡೆಯಬೇಕು. ಅಂದಾಗ ಮಾತ್ರ ಎಲ್ಲರೂ ಜ್ಞಾನಿಗಳಾಗಲು ವಿಜ್ಞಾನಿಗಳಾಗಲು ಸಾಧ್ಯವೆನ್ನುತ್ತಾನೆ ಅಂಬಿಗರ ಚೌಡಯ್ಯ.

ಇಂದಿನ ದಿನಗಳಲ್ಲಿ ಮನುಷ್ಯ ಹೆಚ್ಚಿನ ಅನಾರೋಗ್ಯಕ್ಕೆ ಒಳಗಾಗುವುದು ಕಲುಷಿತ ನೀರಿನಿಂದಲೇ ನಮ್ಮಲ್ಲಿ ಎಲ್ಲ ಕಾರ್ಖಾನೆಯನ್ನು ನಡೆಸುವವರು ನದಿ ಕೆರೆಗಳಿರುವದೇ ಕೊಳಚೆ ವಸ್ತುಗಳು ಹರಿದು ಬಿಡಲಿಕ್ಕೆಂದು ತಿಳಿದಿದ್ದಾರೆ ಹಾರೂವ ಬೂದಿಯಿಂದ ಅಕ್ಕಪಕ್ಕದ ಬೆಳೆಗಳು ಸುಟ್ಟುಹೋದಂತಾಗುತ್ತವೆ. ಸಮೀಪದಲ್ಲಿ ವಾಸಮಾಡುವ ಜನರು ಅನಾರೋಗ್ಯಕ್ಕೆ ಒಳಗಾಗುತ್ತಾರೆ.

---

[93] ಅಂಬಿಗರ ಚೌಡಯ್ಯನ ವಚನ, ಸಂ.ವ.ಸಂ.-೪, ಸಂ. ಎಮ್.ಎಮ್.ಕಲಬುರ್ಗಿ, ವ.ಸಂ.೩೦, ಪು.ಸಂ.೧೮

ಇದರ ಬಗ್ಗೆ ಆಯಾಹಳ್ಳಿಯ ಜನರು ಇದಕ್ಕೆ ವಿರೋಧವಾದರೂ ಬಡವರನ್ನು ಹಿಂದುಳಿದವರನ್ನು ಬೆಂಬಿಸುವವರಾರು? ಎಲ್ಲ ನೀತಿ, ಕಾನೂನು, ಬೆಂಬಲಗಳೆಲ್ಲ ಉಳ್ಳವರ ಪರವೇ ಹೊರುತು ಇಲ್ಲದರವರ ಪರ ಎಲ್ಲೂ ಇಲ್ಲ.

ಹೊಸ ಹೊಸ ತಂತ್ರಜ್ಞಾನ ಸುಧಾರಿಸಿದ ಹಾಗೆ ಹೊಸ ಹೊಸ ಬಗೆಯ ಮಾಲಿನ್ಯಗಳು ಪರಿಸರಕ್ಕೆರುತ್ತಿವೆ. ಅವು ಯಾವುವೆಂದರೆ ಆಮ್ಲಗಳು, ಕ್ಷಾರಗಳು ಶರ್ಕರ ಪಿಷ್ಟಗಳು, ಬಣ್ಣ, ಕೊಬ್ಬು, ಮಾರ್ಜಕ, ಮೇಣ ಅನಿಲಗಳು ತೇಲಾಡುವ ಕಣಗಳು, ತೈಲ, ವಿಷಲೋಹಗಳು, ಇವೆಲ್ಲವುಗಳು ಮನುಷ್ಯ ಪ್ರಾಣಿ, ಸಸ್ಯ ಏಕಾಣು ಜೀವಿಗಳ ಮೇಲೆ ಪರಿಣಾಮ ಬೀರುತ್ತವೆ.

ಇತ್ತೀಚಿಗೆ ೨೦೦೮ನೇ ಸಾಲಿನಲ್ಲಿ ಬೀದರನ ಡಿಸ್ಟಲರಿ ಕಾರ್ಖಾನೆಯ ವಿಷಯುಕ್ತ ನೀರು ಇಡಿ ಬೆಳೆಗಳ ಮೇಲೆ ಪರಿಣಾಮ ಬೀರುವುದು ಪತ್ರಿಕೆಯಲ್ಲಿ ಓದಿದ್ದೇವೆ.

ಈ ಸುದ್ದಿ ಬಂದ ಕೆಲವೇ ದಿನಗಳಲ್ಲಿ ರಾಜಶ್ರೀ ಸಿಮೇಂಟನ ಧೂಳು ಅಲ್ಲಿಯ ಬೆಳೆಗಳ ಮತ್ತು ಜನಗಳ ಮೇಲೆ ವಿಷವಾಗಿ ಪರಿಣಮಿಸುತ್ತಿರುವುದು ಕೂಡಾ ಓದಿದ್ದೇವೆ. ಇನ್ನು ನದಿಗಳಿಗೆ ಹೊಲಸು ನೀರು ಬಿಡುವುದರಿಂದ ಜನರು ಅಂಗವಿಕಲರಾಗುವ ಸಾಧ್ಯತೆ ಹೆಚ್ಚು. ಇದರಿಂದ ನೈಸರ್ಗಿಕ ಸಮತೋಲನ ಬಿಗಡಾಯಿಸುತ್ತಿದೆ. ಆಮ್ಲದ ಹಾಗೆ ಕ್ಷಾರವು ನೀರಿನಲ್ಲಿರುವ ಸೂಕ್ಷ್ಮ ಜೀವಾಣುಗಳಿಗೆ ಮಾರಕವಾಗಿ ನೀರಿನ ಸ್ವಯಂ ಶುದ್ಧೀಕರಣ ಕ್ರಿಯೆಗೆ ಅಡ್ಡಿವುಂಟಾಗುತ್ತದೆ.

ಹೀಗೆ ತೇಲುವ ವಸ್ತುಗಳಿಂದ ಹೆಚ್ಚಿನ ಜಲಮಾಲಿನ್ಯಕ್ಕೆ ಕಾರಣವಾಗುತ್ತವೆ. ಸಾಮಾನ್ಯವಾಗಿ ನದಿಗಳಲ್ಲಿ ಇಂಥ ತೇಲುವ ವಸ್ತುಗಳು ಗೋಚರಿಸುತ್ತವೆ. 'ಗಂಗಾಸ್ನಾನ ತುಂಗಾಪನ' ಎನ್ನುತ್ತೇವಲ್ಲ. ಇವತ್ತಿನ ದಿನಗಳಲ್ಲಿ ಗಂಗೆ. ಅಪವಿತ್ರವಾಗಿದ್ದಾಳೆ. ನಮ್ಮಲ್ಲಿ ಅಂದರೆ ಕೆಲ ಜನಾಂಗಗಳಲ್ಲಿ ಶೈವರು ಶವಗಳು ಹೂಳುತ್ತಾರೆ. ವೈಷ್ಣವರು ದಹಿಸುತ್ತಾರೆ. ಹೂಳಿದ ಶವಗಳನ್ನು ಕ್ರಿಮಿಕೀಟಗಳು ವಿಘಟಕಗಳಾಗಿ ಪರಿವರ್ತಿಸುತ್ತವೆಂದು ಎಲ್ಲರಿಗೂ ಗೊತ್ತೇ. ವೈಷ್ಣವರು ಮತ್ತು ಇನ್ನುಳಿದವರು ಶವಗಳನ್ನು ದಹಿಸುವ ಪದ್ದತಿ ಇಟ್ಟಿದ್ದಾರೆ ಇದನ್ನು ಅಷ್ಟಕ್ಕೆ ಬಿಡದೆ ಅಲ್ಲಿಯ ಬೂದಿ ತೆಗೆದುಕೊಂಡು ಗಂಗಾನದಿಯಂತಹ ಸಂಗಮದಲ್ಲಿ ತೇಲಿ ಬಿಡುತ್ತಾರೆ. ಯಾತ್ರೆಗೆಂದು ಹೋದ ಭಕ್ತರು ಅಲ್ಲಿಯೇ ಸ್ನಾನಮಾಡಿ ಇದ್ದ ಹೊಲಸೆಲ್ಲ ಬಿಟ್ಟು ಇರಲಾರದ ಹೊಲಸೆಲ್ಲ ಮೆತ್ತಿಕೊಂಡು ಬರುತ್ತಾರೆ.

ಮಂತ್ರಾಲಯದ ತುಂಗ-ಭದ್ರಾನದಿಯಲ್ಲೂ ಕೂಡ ಇದೇ ಸಮಸ್ಯೆ ನದಿ ದಡದಲ್ಲಿ ತಲೆಬೋಳಿಸುತ್ತಾರೆ. ಆ ಕೂದಲುಗಳೆಲ್ಲ ನದಿಯಲ್ಲಿಯೇ ಹರಿದು ಹೋಗುತ್ತವೆ. ತೇಲಾಡುತ್ತವೆ ಇನ್ನೂ ಬಹಿರ್ದೇಸೆ ಕೂಡ ಅಲ್ಲಿಯೇ ! ಅಲ್ಲೊಂದು ಚಿಕ್ಕ ಉದ್ಯಾನವಿದೆ. ಅಲ್ಲಿಗೆ ಚರಂಡಿ ನೀರು ಕೂಡ ಹಾಯಿಸುತ್ತಾರೆ. ಒಂದೇ ಒಂದು ನಿಮಿಷ ಕೂಡುವುದಕ್ಕಾಗದು. ಅಲ್ಲೆಲ್ಲ ಗಬ್ಬುವಾಸನೆಯೇ ಇದೆ. ಇನ್ನೂ ಕಲ್ಲಿದ್ದಲಿನ ಬದಲು ಕಚ್ಚಾ ತೈಲದ ಬಳಕೆಯಿಂದ ಮಾಲಿನ್ಯದ ಸಮಸ್ಯೆ ಇನ್ನಷ್ಟು ಜಟೀಲವಾಗುತ್ತಿದೆ. ಇದು ನೀರಿನ ಮೇಲೆ ತೆಳ್ಳನೆ ಪೊರೆಯಂತೆ ತೇಲುತ್ತಿರುತ್ತದೆ. ಇಂತಹ ತೈಲದ ಜಿಡ್ಡು ಜಲಚರಗಳ ಮೇಲೆ ಪರಿಣಾಮ ಬೀರುತ್ತದೆ.

ನಮ್ಮಲ್ಲಿ ಬಹಳಷ್ಟು ಕೈಗಾರಿಕೆಗಳು ಮನುಷ್ಯನ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆಂಬುದು ಗಣನೆಗೆ ತಾರದೆ ತಮ್ಮ ಕಲ್ಮಶಗಳನ್ನು ನೀರಿಗೋ, ಬಯಲಿಗೋ ಹರಿದೂ ಬಿಟ್ಟು ಹಾಯಾಗಿ ನಿದ್ದೇ ಮಾಡುತ್ತಾರೆ ಇಂಥವರ ಬಗ್ಗೆ ಅಧ್ಯಯನಕಾರರು, ಪರಿಸರ ಪ್ರೇಮಿಗಳು ಮಾತ್ರ ತಲೆಕೆಡಿಸಿಕೊಳ್ಳುತ್ತಿದ್ದಾರೆ.

ಬ್ಯಾಟರಿ ಮತ್ತು ಬಣ್ಣ, ಪ್ಲಾಸ್ಟಿಕ, ಪೈಪುಗಳು ತಯಾರಿಕೆಯಲ್ಲಿ ಸೀಸದ ಬಳಕೆ ಹೆಚ್ಚು ಸೀಸ ಪ್ಲಾಸ್ಟಿಕಿನ ಕಠಿಣತೆ ಕಾಪಾಡುವಲ್ಲಿ ಇದನ್ನು ಬಳಸುತ್ತಾರೆ. ಈ ರೀತಿ ಸೀಸ ಚಿಕ್ಕ ಮಕ್ಕಳ ಬೆಳೆಯುವ ನರಮಂಡಲದ ಮೇಲೆ ಪರಿಣಾಮ ಬೀರುತ್ತದೆ. ಹಳ್ಳದ ನೀರಿನಲ್ಲಿ ಕೆರೆ ನೀರಿನಲ್ಲಿ ಸೀಸ ಸೇರಿಕೊಂಡರೆ ಜಾನುವಾರಗಳು ವಿಚಿತ್ರರೋಗ'ಕ್ಕೆ ಒಳಗಾಗಿ ಸಾವನ್ನಪ್ಪತ್ತಿವೆ.

ಇನ್ನು ಲೋಹಗಳಿಗೆ ತುಕ್ಕು ಹಿಡಿಯುಬಾರದೆಂದು ಕೈಗಾರಿಕೆಗಳಲ್ಲಿ ಕ್ರೋಮಿಯಂ ಲವಣ ವ್ಯಾಪಕವಾಗಿ ಬಳಸುತ್ತಾರೆ. ಇದು ಮನುಷ್ಯ ಪ್ರಾಣಿಗಳ ದೇಹಕ್ಕೆ ಅತಿ ಹೆಚ್ಚಿನ ಅಪಾಯಕಾರಿ ಕೈಗಾರಿಕೆಗಳಲ್ಲಿ ವಿದ್ಯುತ ಉತ್ಪದನಾ ಘಟಕಗಳು ಪರಮಾಣುಸ್ಥಾರಗಳು ಕೂಡ ಸೇರಿವೆ.

ಇನ್ನೊಂದೆಡೆ ಚರಂಡಿ ನೀರಿನ ಸಮಸ್ಯೆ ಚರಂಡಿ ನೀರು ಸಂಸ್ಕರಿಸದೇ ಹಾಗೆಯೇ ನದಿಗಳಿಗೆ ಹರಿಬಿಡುವುದು. ಮಾಲಿನ್ಯದ ದೊಡ್ಡ ಸಮಸ್ಯೆ ಜನಸಂಖ್ಯೆ ಹೆಚ್ಚಾಗುತ್ತಾ ಬಂದ ಹಾಗೆಲ್ಲ ಮಾಲಿನ್ಯ ಸಮಸ್ಯೆ ಗಂಭೀರವಾಗಿಯೇ ಇದೆ. ಇದಕ್ಕೆ ಉತ್ತಮ ಉದಾಹರಣೆ 'ಕಾರವಾರ' ಬಹಳ ಒಳ್ಳೆ

ಉದಾಹರಣೆಯಾಗಿದೆ. ಕಾರ್ಖಾನೆ ನೀರು ಚರಂಡಿ ನೀರು, ಜೋತೆಗೆ ಕುಡಿಯುವ ನೀರು ಈ ಮೂರರ ಸಂಗಮಕ್ಕೆ 'ಕಾರವಾರ' ಒಳ್ಳೆ ಉದಾಹರಣೆ.

ಶುದ್ದ ನೀರಿನಲ್ಲಿ ಕೃಷಿಜನ್ಯ ಮಾಲಿನ್ಯಕ್ಕೇನು ಕಡಿಮೆ ಇಲ್ಲ ಆಧುನಿಕ ಕೃಷಿರಂಗದಲ್ಲಿ ವಿವಿಧ ಬಗೆಯ ರಸಗೊಬ್ಬರ ರಾಸಾಯನಿಕ ಪೀಡೆ ನಾಶಕ ಔಷಧಿಗಳ ಹೇರಳ ಬಳಕೆಯಾಗುತ್ತಿದೆ. ಈ ರೀತಿ ಬಳಸಿದ ಔಷಧಿಗಳು ಜಲಮಾಲಿನ್ಯಕ್ಕೆ ಕಾರಣವಾಗುತ್ತಿದೆ. ಮಳೆಯಿಂದ ರಸಗೊಬ್ಬರದ ಕೆಲಭಾಗ ತೊಳೆದುಹೋಗಿ ನದಿ, ಹಳ್ಳ, ಕೆರೆಕಟ್ಟೆಗಳಿಗೆ ಸೇರಿಬಿಡುತ್ತಿವೆ.

ನಿಸರ್ಗ ತನ್ನ ರಕ್ಷಣೆಗೆಂದೇ ಬೆಟ್ಟಗುಡ್ಡಗಳು ನಿರ್ಮಿಸಿಕೊಂಡಂತೆ ಮನುಷ್ಯ ತನ್ನ ಅಂತ್ಯಕ್ಕೆ ದೊಡ್ಡ ದೊಡ್ಡ ತಿಪ್ಪೆಯ ಕೊಳೆತುನಾರುವ ರೋಗ ಹಬ್ಬಿ ಮನುಕುಲಕ್ಕೆ ಸಂಚಕಾರವಾಗುವ ಕಸದ ದೊಡ್ಡ-ಗುಡ್ಡಗಳು ನಿರ್ಮಾಣಮಾಡಿಕೊಂಡಿದ್ದಾನೆ ! ಇದಕ್ಕಿಂತ ದೊಡ್ಡ ಸಾಧನೆ ಇನ್ನೆನು ಬೇಕು.

ಇವುಗಳೆಲ್ಲ ನಮ್ಮ ಬದುಕಿನ ಭಾಗವೆನ್ನುವಂತೆ ಪೋಷಿಸಿಕೊಂಡು ಬಂದಿದ್ದೇವೆ. ನಮ್ಮ ಮನೆಯಿಂದ ಹಿಡಿದು ಎಲ್ಲೆಲ್ಲಿ ಖಾಲಿಜಾಗವಿದೆಯೋ ಅಲ್ಲಲ್ಲಿ ಆಕ್ರಮಿಸಿಕೊಂಡು ಬಿಟ್ಟಿವೆ. ಇವೆಲ್ಲಕ್ಕೂ ಒಂದೇ, ಎರಡೇ ಕಾರಣಗಳಿಲ್ಲ ಅಡುಗೆ ಮನೆಯಿಂದ ಹಿಡಿದು ಪ್ರಾರಂಭವಾಗುವ ತಿಪ್ಪೆರಾಶಿ ಕಲ್ಲಿದ್ದಲು, ಖನಿಜ, ಹೊರಗೆಡುವ ಗಣಿ, ವಿದ್ಯುತ್ತ ಸ್ಥಾವರ, ಅಣುಸ್ಥಾವರ ಲೋಹ ಉತ್ಪಾದಿಸುವ ಕಾರ್ಖಾನೆಗಳು ವೈದ್ಯಕೀಯರಂಗ ಕೂಡ ಇದಕ್ಕೆ ಹೊರತಾಗಿಲ್ಲವೆಂದೆ ಹೇಳಬೇಕು ಚುಚ್ಚುಮದ್ದಿನ ಸೂಜಿ, ಸಿರಿಂಜ್, ಬ್ಯಾಂಡೇಜ ಬಟ್ಟೆ, ಪ್ಲಾಸ್ಟಿಕ್ ಕೊಳವೆಚೀಲ, ಹ್ಯಾಂಡ್‌ಗ್ಲೌಜು, ಪ್ಲಾಸ್ಟೀಕ್ ಪ್ಯಾರಿಸ್ ಇವೆಲ್ಲ ಊರಾಚೆ ಇಲ್ಲವೇ ಆಸ್ಪತ್ರೆಯ ಆವರಣದಲ್ಲೇ ಬಿಸಾಕುತ್ತಾರೆ. ಇನ್ನು ಚಿಂದಿ ಆಯುವ ಹೆಂಗಸರು ಮಕ್ಕಳು ಈ ತಿಪ್ಪೇರಾಶಿ ಕೆದರಿ ಜನ ಓಡಾಡುವ ಜಾಗಕ್ಕೆ ಸಂಚಕಾರ ಹಾಕುತ್ತಾರೆ.

ಭೂಮಿಯ ತುಂಬೆಲ್ಲ ತಿಪ್ಪೆಗುಂಡಿಯಂತೆ ಮಾಡಿ ಹೀಗೆ ಹಾಳುಮಾಡುವುದೇ ನಮ್ಮ ಮೂಲ ಧ್ಯೇಯವೆಂಬಂತೆ ತಿಳಿದಿದ್ದಾಯ್ತು. ಇನ್ನೂ ಭೂಮಿಯ ತಾಪಮಾನದ ಬಗ್ಗೆ ತಿಳಿದುಕೊಳ್ಳುವುದಾದರೆ ಭೂಮಿಯ ಯಾವ ಭಾಗದಲ್ಲಾದರೂ ಜೈವಿಕ ಸಾಮರ್ಥ್ಯ ಕಮ್ಮಿಯಾಗಿ ಹೋದರೆ ಅಲ್ಲಿ ಮರಭೂಮಿಯಂತಹ ಸ್ಥಿತಿ ನಿರ್ಮಾಣವಾಗುತ್ತದೆ. ಅಲ್ಲಿ ಸಸ್ಯಗಳ ಬೆಳವಣಿಗೆ ತೀರಾ

ಕಮ್ಮಿಯಾಗುತ್ತದೆ. ಈ ಕಾರಣದಿಂದ ಹವಾಗುಣದಲ್ಲಿ ಏಕಾಏಕಿ ಬದಲಾವಣೆ ಉಂಟಾಗುತ್ತದೆ. ಇದರೊಂದಿಗೆ ಮನುಷ್ಯನ ಅತಿ ಅವಸರದ ಕಾರ್ಯಗಳು, ಮಿತಿಮೀರಿದ ವ್ಯವಸಾಯ, ಅರಣ್ಯನಾಶ, ಇತ್ಯಾದಿಗಳಿಂದ ಮರುಭೂಮಿ ಅಸ್ತಿತ್ವಕ್ಕೆ ಬರುತ್ತದೆ. ಇದರಿಂದ ಕ್ರಮೇಣ ನೆಲದ ಫಲವತ್ತತೆ ನಾಶವಾಗುತ್ತದೆ ಇದನ್ನು ಮರಳಿ ಪಡೆಯುವುದು ಅಸಾಧ್ಯ.

ಅಮೇರಿಕೆಯಂತಹ ರಾಷ್ಟ್ರಗಳಲ್ಲಿ ಹಳೆಯ ವಸ್ತುಗಳನ್ನು ಕರಗಿಸುವುದೇ ಒಂದು ದೊಡ್ಡ ಸಮಸ್ಯೆ ಅಂತಹ ರಾಷ್ಟ್ರಗಳಲ್ಲಿ ಹಳೆ ವಸ್ತುಗಳು ತೆಗೆದುಕೊಂಡು ಕಂತಿನ ರೂಪದ ಹಣಪಾವತಿಗೆ ಹೊಸ ವಸ್ತುಗಳ ಖರೀದಿ ಇರುತ್ತದೆ. ಹೀಗೆ ಬದಲಾವಣೆ ಮಾಡಿಕೊಂಡು ಹಳೆಯ ವಸ್ತುಗಳು ಕರಗಿಸಲೇಬೇಕು. ಈ ರೀತಿ ಕರಗಿಸುವ ಕಾರ್ಖಾನೆಗಳ ಚಿಮಣಿಗಳ ಮುಖಾಂತರ ನೈಟ್ರೋಜನ್ ಆಕ್ಸೈಡ ಗಂಧಕದ ಹೊಗೆ ಹೊರಬೀಳುತ್ತದೆ. ಇದರಂತೆಯೇ ವಾಹನಗಳಿಂದ ಹೊರಡುವ ಗ್ಯಾಸ ಗಾಳಿಯಲ್ಲಿ ಕಾಡು ಸುಡುವುದರಿಂದ ಕೂಡ ಆಮ್ಲ ಉಂಟಾಗುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಕೈಗಾರಿಕಾ ಕ್ಷೇತ್ರದಿಂದ ವಿಸರ್ಜಿಸಲ್ಪಡುತ್ತದೆ. ಅಲ್ಲದೆ ಆಮ್ಲಜನಕ ಮಿಶ್ರಣಗಳನ್ನು ಹುಟ್ಟಿಸುವ ಇತರ ಪ್ರಮುಖ ರಾಸಾಯನಿಕ ವಸ್ತುಗಳೆಂದರೆ ನೆಲದಲ್ಲಿರುವ ಇಂಧನ, ಪೆಟ್ರೋಲ್, ಗ್ಯಾಸ್, ಇತ್ಯಾದಿ ಇವುಗಳ ಪರಿಣಾಮ ವಾತಾವರಣದ ಮೇಲೆ ನಿರ್ಭರವಾಗಿ ಪರಿಣಾಮ ಬೀರುತ್ತವೆ. ಇವತ್ತಿನ ದಿನಗಳಲ್ಲಂತೂ ವಾಹನಗಳಿಗೆ ಕಲಬೆರಕೆ ತೈಲವೇ ಪೂರೈಕೆಯಾಗುತ್ತಿದೆ.

ಈ ರೀತಿ ಆಮ್ಲಮಳೆ ಪ್ರಭಾವ ಪರಿಸರದ ಮೇಲೆ ಉಂಟಾದಾಗ ಅರಣ್ಯದ ಮೇಲೆ ಪರಿಣಾಮ ಬೀರುತ್ತದೆ. ಅಂದರೆ ಇದರಿಂದ ಮಳೆಪ್ರಮಾಣ ಕುಸಿಯುತ್ತದೆ. ನೀರಿನ ಪೂರೈಕೆ ತಂತಾನೇ ಕಡಿಮೆಯಾಗುತ್ತದೆ. ಅದೆಷ್ಟೊ ಚಿಕ್ಕ ಚಿಕ್ಕ ಸಸ್ಯಗಳಲ್ಲಿರುವ ಕೀಟಗಳು, ಪತಂಗ ಹುಳು-ಹಪ್ಪಡಿಯಿಂದ ಹಿಡಿದು ಕಾಡಿನವರೆಗೆ ಪರಿಣಾಮ ಬೀರುತ್ತದೆ.

ಇದನ್ನು ಸ್ವಲ್ಪಮಟ್ಟಿಗೆ ಕಮ್ಮಿಮಾಡಬೇಕಾದರೆ ವಾಹನಗಳು ಉಗುಳುವ ಹೊಗೆಯಲ್ಲಿ ಮಿತಿಇರಬೇಕು. ಅತಿ ಹಳೆಯ ವಾಹನ, ಅಥವಾ ಕಲಬೆರಕೆಮಾಡಿದ ತೆಲದ ನಿಷೇದ ಕಾರ್ಖಾನೆಗಳು ಉಗುಳುವ ಹೊಗೆಯ ಮೇಲೆ ನಿಯಂತ್ರಣ ಇಂತಹ ಕಾಖಾನೆಗಳೇನಾದರೂ ಇದ್ದರೆ ಅವುಗಳು ಶಾಶ್ವತವಾಗಿ ಮುಚ್ಚಿಬಿಡುವುದೇ ಸರಿ.

ಇನ್ನೂ ವಿಕಿರಣಗಳತ್ತ ಸ್ವಲ್ಪ ನೋಡುವುದಾದರೆ ಕೆಲವು ವಸ್ತುಗಳು ಅವು ಮೂಲವಸ್ತುಗಳಾಗಿರಲಿ ಇಲ್ಲವೇ ಕಣಗಳಾಗಿರಲಿ ಸಾಗುತ್ತಿರುತ್ತವೆ. ಅವು ಸೂಸುವ ಕಿರಣಗಳಿಗೆ ವಿಕಿರಣ ಅಥವಾ 'ರೇಡಿಯೇಶನ್' ಎನ್ನುತ್ತಾರೆ. ಪರಮಾಣು ಆಸ್ಫೋಟನೆಯಿಂದ ಸ್ಥಳಿಯ ಸ್ಥಿರ-ಚರ ವಸ್ತುಗಳು ತುಂಬ ದೂರದವರೆಗೂ ವಿಸ್ತರಿಸುತ್ತಾ ಜನರನ್ನು ಇತರ ಪ್ರಾಣಿಗಳನ್ನು ಸಸ್ಯಗಳನ್ನು ಸೇರಿದಂತೆ ಇಡಿ ಜೀವಮಂಡಲವನ್ನು ಅಪಾಯದಂಚಿಗೆ ತಳ್ಳಿದಂತಾಗುತ್ತದೆ.

ಮನುಷ್ಯನ ಮೇಲೆ ಸದಾಕಾಲ ವಿಕಿರಣ ಬೀಳುತ್ತಲೇ ಇರುತ್ತದೆ. ಸೂರ್ಯನಿಂದ ಆಗಿರಬಹುದು, ಭೂಮಿಯ ಕೆಲ ನೈಸಸರ್ಗಿಕ ಮೂಲಗಳಿಂದಲೂ ಬರುತ್ತದೆ. ಕೆಲ ಬಗೆಯ ಕಲ್ಲು, ಮಣ್ಣು ಖನಿಜ ಮತ್ತು ನೈಸರ್ಗಿಕ ಅನಿಲಗಳಿಂದಲೂ ವಿಕಿರಣ ಹೊರ ಸೂಸುತ್ತಿರುತ್ತದೆ. ಇಂತಹ ನೈಸರ್ಗಿಕ ಮೂಲಗಳಿಂದ ಬಂದಂತಹ ವಿಕಿರಣ ಒಂದು ಸುರಕ್ಷ ಮಿತಿಯಲ್ಲಿ ಇರುತ್ತಿತ್ತು. ಪರಮಾಣು ಶಸ್ತ್ರಾಸ್ತ್ರ ಪರಮಾಣು ಸ್ಥಾವರಗಳು ಅಸ್ತಿತ್ವಕ್ಕೆ ಬಂದ ನಂತರವೇ ವಿಕಿರಣದ ಮಟ್ಟ ಇಂಥ ಅಪಾಯಕಾರಿ ಪ್ರಮಾಣಕ್ಕೇರಿದೆ ಇದರಿಂದ ಲಾಭವಾದಷ್ಟು ಮಟ್ಟದಲ್ಲಿ ಹಾನಿಯೂ ಇರುವುದು ನಾವು ಮರೆಯುವಂತಿಲ್ಲ ಪರಮಾಣು ವಿದ್ಯುತ್‌ಗೆ ಸುರಕ್ಷಾ ಇದ್ದರೆ ಇದು ಇತರ ಶಕ್ತಿಮೂಲಗಳಿಗಿಂತ ತೀರ ಚೊಕ್ಕಟ ಕಲ್ಲಿದ್ದಲ್ಲು ನಾಡಿನ ಎಲ್ಲಕಡೆ ಏಕರೂಪವಾಗಿ ಸಿಗುವುದು ಸ್ವಲ್ಪ ಕಷ್ಟವೇ ಜೊತೆಗೆ ಬಳಕೆ ಹೆಚ್ಚು, ಉತ್ಪಾದನೆ ಕಡಿಮೆ ಇಷ್ಟಕ್ಕೂ ಪರಮಾಣು ಸ್ಥಾವರಗಳಲ್ಲಿ ಉತ್ಪನ್ನವಾಗುವ ಯಾವ ತ್ಯಾಜ್ಯವಸ್ತುಗಳು ಯಾವುದೇ ದುರ್ನಾತವನ್ನು ಹಬ್ಬಿಸುವುದಿಲ್ಲ ಜೊತೆಗೆ ಕೊಳಕು ವಾಸನೆ ಕೂಡ ಬರುವುದಿಲ್ಲ.

ಸ್ವಲ್ಪ ಪೃಥ್ವಿ ರಕ್ಷಣೆಯತ್ತ ಕೂಡ ಗಮಹರಿಸುವುದಾದರೆ, ಅರಣ್ಯ ರಕ್ಷಣೆಯಾದರೆ ಪೃಥ್ವಿಯ ರಕ್ಷಣೆ ಕೂಡ ಆಗುತ್ತದೆ. ಇಂದಿನ ದಿನಗಳಲ್ಲಿ ಹಣ ಸಂಪಾದನೆಯ ಹಪಾಹಪಿಯಲ್ಲಿ ತೊಡಗಿದ್ದೇವೆ. ಆರೋಗ್ಯಕ್ಕೂ, ಅರಣ್ಯಕ್ಕೂ ಮನುಷ್ಯನಿಗಷ್ಟೇ ಅಲ್ಲ ಎಲ್ಲ ಜೀವಿಗಳಿಗೂ ಆರೋಗ್ಯವಾಗಿಡಲೂ 'ಹಸಿರು' ಮುಖ್ಯ ಕಾರಣ ಎಷ್ಟೊಂದು ಸೃಷ್ಠಿ ವೈಚಿತ್ರ್ಯ, ಕಾರ್ಖಾನೆಗಳಿಂದ ವಾಹನಗಳಿಂದ ಅಷ್ಟೆ ಅಲ್ಲದೆ ಮಾನವ-ಪ್ರಾಣಿಗಳು ಉಸಿರಿನಿಂದ ಹೊಮ್ಮುವ ಇಂಗಾಲದ ಡೈಆಕ್ಸೈಡ್ ಅನಿಲವನ್ನು ಹೀರಿಕೊಂಡು ಶುದ್ದಗಾಳಿ ನಮಗೆ ಕೊಡುತ್ತವೆ.

ಗಿಡ-ಮರಗಳಿಂದ ದಟ್ಟವಾದ ಅರಣ್ಯ ಸಂರಕ್ಷಣೆ ಆಗುತ್ತದೆಂಬ ಸಂಗತಿ ನಮಗೆಲ್ಲ ಗೊತ್ತಿದೆ. ಗಿಡಮರಗಳು ತಮ್ಮ ಬೇರುಗಳಿಂದ ಮಣ್ಣಿನ ಸಂರಕ್ಷಣೆ ಆಗುತ್ತದೆಂಬ ಸಂಗತಿ ನಮಗೆಲ್ಲ ಗೊತ್ತಿದೆ. ಗಿಡಮರಗಳು ತಮ್ಮ ಬೇರುಗಳಿಂದ ನದಿ ದಡದ ಮಣ್ಣು ಸರಿದು ಹೋಗದಂತೆ ತಡೆಗಟ್ಟುತ್ತದೆ. ಬಿದ್ದಮಳೆಯನ್ನು ಗಿಡದ ತರಗೆಲೆಗಳು, ಸಸ್ಯಗಳು ನೀರು ನೆಲದೊಳಗೆ ಇಂಗುವಂತೆ ಮಾಡುತ್ತವೆ. ಇದರಿಂದ ಅಂತರ್ಜಲ ಮಟ್ಟ ಹೆಚ್ಚಿಸಲು ಸಹಾಯವಾಗುತ್ತದೆ. ಜನಸಂಖ್ಯೆ ಹೆಚ್ಚಾದಂತೆ ಅರಣ್ಯನಾಶ ಕೂಡ ಹೆಚ್ಚುತ್ತದೆ. ಆಹಾರಕ್ಕಾಗಿ ಉರುವಲು ಬೇಕು ಜೊತೆಗೆ ಅರಣ್ಯ ಯಾರು ಬೇಕಾದರು ಎಷ್ಟು ಬೇಕಾದರು ಬಳಸಿಕೊಳ್ಳುತ್ತಾರೆ. ಮೇಲ್ನೋಟಕ್ಕೆ ಅರಣ್ಯ ಇಲಾಖೆಯ ಪರವಾನಿಗೆ ಪಡೆದಿರುತ್ತಾರೆ. ಅದೆಷ್ಟೋ ಅಕ್ರಮದಿಂದ ಮರಗಳು ನಾಶಮಾಡುತ್ತಾರೆ.

ಇಷ್ಟಲ್ಲದೆ ಇತ್ತೀಚಿನ ದಿಗಳಲ್ಲಿ ಗಣಿಗಾರಿಕೆ ಕೂಡ, ಅರಣ್ಯನಾಶಕ್ಕೆ ಕಾರಣವಾಗಿದೆ. ಗಣಿಗಾರಿಕೆಯಿಂದ, ಅರಣ್ಯನಾಶದಿಂದ ಭೂಕುಸಿತ ಹೆಚ್ಚಾಗಿ ನದಿಗಳಿಗೆ ಮಹಾಪೂರ ಹೆಚ್ಚಾಗುತ್ತದೆ. ಜಲಾಶಯಗಳಲ್ಲಿ ಹೊಳು ತುಂಬಿಕೊಳ್ಳುತ್ತದೆ. ಎಲ್ಲಕಿಂತ ಹೆಚ್ಚಾಗಿ ಮಳೆಯ ಪ್ರಮಾಣ ಕಡಿಮೆಯಾಗುತ್ತದೆ. ಅರಣ್ಯನಾಶವೆಂದರೆ ಸರ್ವನಾಶವೆಂದೇ ಹೇಳಬೇಕು. ಪರಿಸರ ಸ್ಮರಂತದತ್ತ ಇಡಿ ಸಮಾಜ ಹೊರಳುವುದನ್ನು ತಡೆಯಬೇಕಾದರೆ ಶಿಕ್ಷಣಕ್ಷೇತ್ರದಲ್ಲಿ ಕಾರ್ಯಕ್ರಮಗಳು ಹಾಕಿಕೊಳ್ಳಬೇಕು. ಅರಣ್ಯ ಮಳೆ ಮಣ್ಣಿನ ಸವಕಳಿ ಕೃಷಿಕ್ಷೇತ್ರ ಇವೆಲ್ಲಕ್ಕೂ ಸಂಬಂಧವಿದೆ. ಇದರ ಬಗ್ಗೆ ಮನುಷ್ಯನ ಶರೀರಕ್ಕೆ ಹೋಲಿಸಿ ನಮ್ಮ ಅಂಗಗಳಿದ್ದಂತೆ, ಮರ-ಗಿಡಗಳಿಗೂ ಕೈಕಾಲುಗಳಿವೆ. ಅದರಲ್ಲಿ ಒಂದೇ ಒಂದು ಅಂಗಕ್ಕೂ ನೋವಾದರೂ ಇಡಿ ದೇಹವೇ ಬೇನೆಯಿಂದ ಬಳಲುವುದಲ್ಲ ಹಾಗೆಯೇ ಮರಗಳೂ ಕೂಡ !

ಈಗಾಗಲೇ ಹಾಳಾಗಿರುವ ಪರಿಸರವನ್ನು ಮೊದಲಿನ ಸ್ಥಿತಿಗೆ ತರಲು ಸಾಧ್ಯವಿಲ್ಲ. ಆದರೆ ಸ್ವಲ್ಪಮಟ್ಟಿಗೆ ಭಾರತದ ಬಂಜರು ಪ್ರದೇಶದಂತಹ ಭೂಮಿಯಲ್ಲಿ ಹಸಿರನ್ನು ನಳನಳಿಸುವಂತೆ ಮಾಡಬೇಕಾಗಿದೆ. ಹೇಗೆ ಊರಿನ ಗೋಮಾಳದಂತಹ ಪ್ರದೇಶದಲ್ಲಿ ಗಿಡ-ಮರಗಳು ಬೆಳೆಸುವುದು ಕೂಡ ಎಲ್ಲರಿಗೂ ಸೇರಿದ್ದು ಎಂದು ನೆನಪಿಡಬೇಕು. ಹೀಗೆ ಕಾಡಿನ ರಕ್ಷಣೆ, ಮತ್ತು ಕಾಡು ಬೆಳೆಸುವಲ್ಲಿ ನಮ್ಮ ಪಾತ್ರವಿದೆಯೋ ಹಾಗೆಯೇ ಭೂಮಿಯ ಮೇಲಿನ ಎಲ್ಲ ಸಂಪತ್ತು

[illegible]

[illegible]

[illegible]

ಹರಣವಾಗುತ್ತಿರುವುದು, ಸರ್ವೆ ಸಾಮಾನ್ಯ ಇದನ್ನು ತಡೆಯದೆ ಹೊದರೆ ಇಡಿ ಜೀವಜಾಲವೇ ಸರ್ವನಾಶ. ಅಭಿವೃದ್ದಿಯಲ್ಲಿ ಸಂಪೂರ್ಣವಾಗಿ ಮಾಲಿನ್ಯ ನೀಗುವುದು ಅಸಾಧ್ಯ ಆದರೂ ಮಾಲಿನ್ಯ ಆಗುವ ಸ್ಥಳಗಳಲ್ಲಿ ಉದ್ಯಮ ನಡೆಸುವವರೇ ಸ್ವತಃ ಮುತುವರ್ಜಿವಹಿಸಿ ಅರಣ್ಯ ನಾಶವಾದಲ್ಲೆಲ್ಲ ಬಂಜರು ಭೂಮಿಯಲ್ಲೆಲ್ಲ ಅರಣ್ಯ ಬೆಳೆಸಲು ಮುಂದಾದರೆ ಇದರಿಂದ ಲಾಭವೂ ಹೌದು ಜೊತೆಗೆ ಪರಿಸರದ ಸಂರಕ್ಷಣೆ ಕೂಡ ಆದಂತೆಯೇ, ಆದರೆ ಸಾಮಾನ್ಯವಾಗಿ ಹಾಗಾಗುವುದಿಲ್ಲ ಎಂಬುದೇ ದುರಂತ.

ಬಳಕೆ ಮಾಡಿದ ನೀರನ್ನು ಮರುಬಳಕೆ ಮಾಡುವುದು ಮಾಲಿನ್ಯ ನಿಯಂತ್ರಣದಲ್ಲಿ ಬಹುಮುಖ್ಯ ಘಟ್ಟವಾಗಿದೆ. ಕೊಳಚೆ ನೀರನ್ನು ಕೆಲಮಟ್ಟಿಗೆ ಶುಚಿಗೊಳಿಸಿದರೂ ಕೃಷಿಯಲ್ಲಿ, ಮೀನುಗಾರಿಕೆಯಲ್ಲಿ ಬಳಸಬಹುದು. ಇವತ್ತು ನೀರು ಮರು ಬಳಕೆ ಮಾಡುತ್ತಿದ್ದಾರೆ. ತರಕಾರಿ ಬೆಳೆಯುವಲ್ಲಿ ಕೊಳಚೆ ನೀರು ಬಳಸುತ್ತಿದ್ದಾರೆ. ಶುದ್ದಿಕರಿಸದೆ ಬಳಸಿದ ನೀರಿನಲ್ಲಿ ಬೆಳೆದ ತರಕಾರಿಗಳು ಅಂದರೆ ವಿಶೇಷವಾಗಿ ತಪ್ಪಲು(ಸೊಪ್ಪು) ನೆಲದಲ್ಲಿ ನೀರಿಗೆ ತಾಗಿ ಬೆಳೆಯುವುದರಿಂದ ಆಹಾರದ ಜೊತೆಗೆ ಹೊಟ್ಟೆ ಸೇರಿ ರೋಗ ರುಜೀನಗಳಿಗೆ ತವರಾಗುತ್ತದೆ. ಇಂತಹ ಸಂದರ್ಭದಲ್ಲಿ ಬಳ್ಳಿಯಾಗಿ ಹಚ್ಚಿದರೆ ಆಶ್ರಯದಿಂದ ಬೆಳೆಯುವ ತರಕಾರಿ ಹಾನಿಯೆನಲ್ಲ.

ಎಲ್ಲಕ್ಕಿಂತ ಪ್ರಮುಖವಾಗಿ ನಮ್ಮ ಪರಿಸರದ ಬಗ್ಗೆ ನಮ್ಮ ಧೋರಣೆ ಬದಲಾಗಬೇಕಾಗಿದೆ. ರಸ್ತೆಗಳೆಂದರೆ ತಿಪ್ಪೆಗುಂಡಿಗಳೆಂದು ಪರಿಗಣಿಸಿ ನಮ್ಮೆಲ್ಲ ತ್ಯಾಜ್ಯ ವಸ್ತುಗಳನ್ನು ಬಿದಿಯಲ್ಲಿ ಚಲ್ಲುವ ನಮ್ಮ ಹೊಣೆಗೇಡಿ ವರ್ತನೆ ಬದಲಾಗಬೇಕಿದೆ. ಅಂದಾಗ ನಗರ-ಹಳ್ಳಿಗಳು ಶುಚಿಯತ್ತ ಸಾಗುತ್ತವೆ.

ಎಲ್ಲೋ ಒಂದು ಕಡೆ ಬದುಕುಳಿದ ಪ್ರಾಣಿಗಳು ಇಂದು ನಾವು ಸಿಂಪಡಿಸುತ್ತಿರುವ ಕಳೆನಾಶಕ-ಕ್ರೀಮಿನಾಶಕಗಳ ಪ್ರಭಾವಕ್ಕೂ ಒಳಗಾಗಿ ಅಳಿದುಳಿದ ಜೀವರಾಶಿಯಲ್ಲ ಮೂಲೆಗುಂಪಾಗುತ್ತವೆ. ಹೀಗಾದಾಗ ಮನುಷ್ಯ ಮುಂದೊಂದು ದಿನ ತಾ ಮಾಡಿದ ಕರ್ಮಕ್ಕೆ ತಾನೇ ಬೇಲೆ ತೆರಬೇಕಾಗುತ್ತದೆ. ಮುಂದಿನ ಪೀಳಿಗೆಗಳಿಗೆ ಸ್ವಚ್ಛ ಪರಿಸರ, ಸುಂದರನಾಡು ನಿರ್ಮಿಸುವಲ್ಲಿ ಎಲ್ಲರೂ ನಿರತರಾಗಬೇಕು. ಶುದ್ಧಗಾಳಿ, ಶುದ್ಧನೀರು ಎಲ್ಲರ ಜನ್ಮಸಿದ್ದ ಹಕ್ಕು ಎಂಬುದು ಮರೆಯಬಾರದು.

ಪ್ರಸ್ತುತ ಕಾಲ ಹಾಗೂ ಪರಿಸ್ಥಿತಿಗಳಲ್ಲಿ ಪರಿಸರ ರಕ್ಷಣೆಯು ಅಷ್ಟು ಸುಲಭ ಸಾಧ್ಯವಾದ ಕಾರ್ಯವಲ್ಲ. ಅದಕ್ಕೆ ಸೂಕ್ತ ಪರಿಸರ ಶಿಕ್ಷಣ, ಜಾಗೃತಿ, ನಿರಂತರ ಕಟ್ಟೆಚ್ಚರ ಹಾಗೂ ಬದ್ದತೆ ಅವಶ್ಯಕ ಈ ದಿಸೆಯಲ್ಲಿ ಕಾರ್ಯೋನ್ಮೂಖರಾಗಿರುವ ವ್ಯಕ್ತಿಗಳು, ಸಮೂಹಗಳು, ಸಂಘಟನೆಗಳು ಜಗತ್ತಿನಾದ್ಯಂತ ಗುರತಿಸಬಹುದಾಗಿದೆ.

ಜಗತ್ತಿನ ಎಲ್ಲ ರಾಷ್ಟಗಳೂ ಸಹ ತಮ್ಮ ತಮ್ಮ ಶಕ್ತಿಮೀರಿ ಈ ನಿಟ್ಟಿನಲ್ಲಿ ಕ್ರಮಕೈಗೊಂಡಿವೆ. ಆದರೆ ಈ ದಿಸೆಯಲ್ಲಿನ ಪ್ರಯತ್ನ ಎನೇನೂ ಸಾಲದು ಎಂಬಂತೆ ಪರಸ್ಥಿತಿ ಇದೆ. ಈ ಮಾತು ನಮ್ಮ ಭಾರತದಂತಹ ಅಭಿವೃದ್ದಿ ಶೀಲ ರಾಷ್ಟ್ರಗಳಿಗೆ ಅನ್ವಯವಾಗುತ್ತದೆ.

ವಿದ್ಯುತ್ ಉಳಿತಾಯ ಮುಖ್ಯವಾಗಿಟ್ಟುಕೊಂಡು, ಡಿಸೆಲ್, ಪೆಟೋಲ, ಅಡಿಗೆ ಇಂಧನ, ಇವೆಲ್ಲದರ ಉಳಿತಾಯವಾಗುವ ನಿಟ್ಟಿನಲ್ಲಿ ನಮ್ಮ ಕರ್ನಾಟಕ ಸರ್ಕಾರದ 'ಕ್ರೆಡಿಲ್' ಸಂಸ್ಥೆಗೆ ಸೇರಿದ ಸೌರಬಸ್ ನಿರ್ಮಾಣ ನೆನಪಿರಬೇಕು 'ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ" ಎಂದು ಈ ಬಸ್ಸಿನಲ್ಲಿ ಸೂರ್ಯನ ಬಿಸಿಲನ್ನು ಹನ್ನೆರಡು ವಿಧಗಳಲ್ಲಿ ಹೇಗೆ ಬಳಸಬಹುದೆಂದು ಕೂಡ ಸೂಚಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಂತೂ ಹೆಚ್ಚಿನ ಸೌಕರ್ಯ ಇರುನ ಐಶರಾಮಿ ವಾಹನಗಳೇ ಹೆಚ್ಚಾಗಿವೆ. ಇವನ್ನೆಲ್ಲ ದೃಷ್ಟಿಯಲ್ಲಿಟ್ಟುಕೊಂಡು ಸೌರಬಸ್ಸಿನಲ್ಲಿರುವ ಸೋಲಾರ್ ಟಿ.ವಿ. ಮನೆದೀಪ, ಬೀದಿದೀಪ, ಲಾಂದ್ರ ಸೌರಪೆಟ್ಟಿಗೆ–ಕುಕ್ಕರ್, ವಾಟರ್‌ಹೀಟರ್, ವಿದ್ಯುತ ಚಾರ್ಜುಗಳು ಇದಕ್ಕೆ ಕಾರಣ ಇಂತಹ ಬಸ್ಸಿನಲ್ಲಿ ಒಡಾಡುವವರಿಗೆ ಇಂತಹ ವ್ಯವಸ್ಥೆ, ನೋಡಿ ಜನಸಾಮಾನ್ಯರು ಕೊಡ ಇದರ ಉಪಯೋಗ ಪಡೆಯುವಂತಹ ವಿಚಾರ ಎಲ್ಲರಲ್ಲಿ ಬರಬೇಕು.

ವಚನಕಾರರು : ಪಂಚಭೂತಗಳು :

ಬಸವಾದಿ ಶರಣರು ಪಂಚಭೂತಗಳ ಬಗ್ಗೆ ಅತಿ ಹೆಚ್ಚು ಚಿಂತನೆ ಮಾಡಿದ್ದಾರೆ. ಪಂಚಭೂತಗಳ ಮಹತ್ವ, ಮಹಿಮೆ ಕುರಿತ ಬಸವಣ್ಣನವರ ನಿಲುವು ಹೀಗಿದೆ.

"ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ನಿರಂಜನದೇವಾ
ನಿಮ್ಮ ಮಹಿಮೆಯ ಪ್ರಣವ ಸ್ವರೂಪಂಗಲ್ಲದೆ
ಕಾಣಲಾರಿಗೆಯೂ ಬಾರದಯ್ಯಾ.
ಜ್ಞಾನಜ್ಯೋತಿಧ್ಯಾನದಿಂದ ನಾಳಶುದ್ಧದ್ವಾರವಾಗಿ
ಆರಾಧಿಸಿ ಕಂಡೆ, ನಮ್ಮ ಕೂಡಲಸಂಗಮದೇವನ".[೯೪]

ಪಂಚಭೂತಗಳಿಂದಾದ ಗಿಡ-ಮರಗಳಿಗೂ ಪಂಚಭೂತಗಳಿಂದಾದ ಮನುಷ್ಯ-ಪ್ರಾಣಿಗಳಿಗೂ ಒಳ್ಳೆಯದೇ ಬಗೆಯುತ್ತವೆ. ಆದ್ದರಿಂದ ಇಲ್ಲಿ ಇರುವುದೆಲ್ಲ ಒಂದು ದಿವ್ಯ-ಶಕ್ತಿಯ ಕೊಡುಗೆ ಅದನ್ನು ಇಲ್ಲಿಯೇ ಕೊಡುವುದಾದರೆ ಅದಕ್ಕೆ ಹಳಹಳಿಸುವುದು ಬೇಡ ಎನ್ನುತ್ತಾನೆ ಬಸವಣ್ಣ.

ಅಲ್ಲಮನ ಪ್ರಕಾರ ಜ್ಯೋತಿಯೊಳಗಾದ ಕರ್ಪೂರ ಜೋತಿಯ ನೀರಿನಲ್ಲಿರುವ ಉಪ್ಪ ನೀರಲ್ಲಿಯೇ ಬೆರೆತು ಹೋದಾ ಹಾಗೆ ಗುರುವನ್ನು ಮೀರಿಸುವಂತಹಷ್ಯರು ತಾವೇ ಗುರುಗಳಾಗುವರು! ಪ್ಲೇಟೋ –ಅರಿ'ಸ್ಟಾಟಲ್ ರಂತೆ. ಈ ಗುರುವಿನ ಲಕ್ಷಣ ಪಂಚಭೂತಗಳಿಗೆ ಹೋಲಿಸಿದ್ದಾನೆ. ಕರ್ಪೂರ ಮತ್ತು ಉಪ್ಪು ಕರಗಿ ಇವುಗಳು ಕೊನೆಗೆ ತಮ್ಮ ಗುರುತು ಏನನ್ನು ಬಿಟ್ಟುಹೋಗುವುದಿಲ್ಲವೋ ಹಾಗೆಯೇ ಪಂಚಭೂತಗಳಿಂದಾದ ದೇಹದಲ್ಲಿ ಇದ್ದು ಇಲ್ಲದಂತೆ ಎನ್ನುತ್ತಾನೆ ಅಲ್ಲಮ.

ಮಿಗಬಾರದು, ಮಿಗಬಾರದು ಮಾಯಾಜ್ಯೋತಿ ವಾಯುವ ಕೂಡುವ ಮುನ್ನ ಪ್ರತಿಯೊಂದು ದೇಹ ಸುಕೃತ ದುಷ್ಕೃತಗಳ ಸಂಯೋಜನೆಯಿಂದ ಕೂಡಿರುತ್ತದೆ ಒಡಲಿನ ಬದುಕು ಪ್ರಾರಂಭವಾಗುತ್ತದೆ. ಈ ಒಡಲು ಪಿಡಿದ ಜೀವಾತ ತನ್ನ ಭೌತಿಕ ಜೀವನ ಪ್ರಾರಂಭಿಸುವಾಗ ಅವನ ಬೇಕು ಬೇಡಗಳು ಪೂರೈಸಿಕೊಳ್ಳುವಲ್ಲಿ ಉಗ್ರವಾಗುತ್ತಾನೆ.

ಅಂದರೆ ಪಂಚಭೂತಗಳು ತಾನೆಷ್ಟು ಬಳಸಿಕೊಳ್ಳುತ್ತಿದ್ದೇನೊ ಅಷ್ಟೆ ಇನ್ನೊಬ್ಬರು ಕೂಡ ಬಳಸಿಕೊಳ್ಳುತ್ತಿರಬಹುದು ಕೇವಲ ಈ ಬಳಕೆ ನನ್ನೊಬ್ಬನಲ್ಲೇ ಕೊನೆಯಾಗಬೇಕೆ ಅಥವಾ ಮುಂದಿನ ಜೀವಿಗಳಿಗೂ ಒಂದಿಷ್ಟು ಬಿಟ್ಟು ಹೋಗಬೇಕೆಂಬುದೇ ಅವನು ವಿಚಾರ ಮಾಡದೇ ತಾನೊಬ್ಬನು

[94] ಬಸವಣ್ಣನವರ ವಚನ ಸಂ.೧ ಸಂ. ಎಮ್.ಎಮ್.ಕಲಬುರ್ಗಿ, ವ.ಸಂ.೮೧೪, ಪು.ಸಂ.೨೦೯.

ಮಾತ್ರ ಚೆನ್ನಾಗಿದ್ದರೆ ಸಾಕೆಂಬ ಭಾವನೆ ಬರದೇ ಈ ದೇಹ ಪಂಚಭೂತಗಳಲ್ಲಿ ಬೆರೆತು ಹೋಗುವ ಮುಂಚೆ ಎಚ್ಚೆತ್ತು ಕೊಳ್ಳಬೇಕಾಗಿದೆ. ಮುಂದುವರಿದು ಹೀಗೆ ಹೇಳುತ್ತಾನೆ. "ಪ್ಲಥ್ವಿಯ ಪೂರ್ವಾಶ್ರಯವ ಕಳೆಯ (ಲರಿಯ) ದನ್ನಕ್ಕ"[95] ಪೃಥ್ವಿ, ಜಲ, ಅಗ್ನಿ ,ವಾಯು, ಆಕಾಶ, ಮನುಸ್ಸು, ಬುದ್ದಿ ಮತ್ತು ಜೀವಭಾವ–ಈ ಸೃಷ್ಟಿ (ವಿಶ್ವ) ವ್ಯವಸಂಕುಲವೇ ಈ ದೇಹ ಸಾಮಾನ್ಯವಾಗಿ ವಿಷಯಗಳ ತಾಣ ಈ ದೇಹ ವಿಷಯಗಳ ಉಪಭೋಗಸ್ಥಾನ, ಇದು ಎಲ್ಲ ಜನರದೃಷ್ಟಿಭಾವ–ಈ ಭಾವನೆ ಆಧರಿಸಿ ಬದುಕುವುದು ಪೂರ್ವಾಶ್ರಯದ ಬದುಕು ಇದನ್ನು ತೇಜಿಸುವುದೇ ಪೂರ್ವಾಶ್ರಯದ ನಿರಸನ ವ್ಯಾಪ್ತಿ ಮತ್ತು ಸಮಷ್ಟ ಜಗತ್ತುಗಳ ವಿಷಯದಲ್ಲಿ ಜನಸಾಮಾನ್ಯರ ದೃಷ್ಟಿಯನ್ನಿಟ್ಟು ಬದುಕಬೇಕು ಕಾರಣ ಈ ದೇಹ ಇಲ್ಲ ತ್ಯೇಜಿಸಿ ಬದುಕಬಹುದು ಆದರೆ ಪಂಚಭೂತ ತ್ಯಜಿಸಿ ಬದುಕಲುಂಟೆ ಈ ವಿಷಯದಲ್ಲಿ ಯಾರು ಮೇಲು– ಕೀಳಲ್ಲಾ!

ಆದ್ದರಿಂದಲೇ ವಾಯು ಎಷ್ಟು ಅವಶ್ಯವೆಂಬುದರ ಬಗ್ಗೆ ಅಲ್ಲಮ ಹೇಳುತ್ತಾನೆ. ಪ್ರಾಣ ಅಪಾನ ವ್ಯಾನ ಉದಾನ ಸಮಾನವೆಂಬ ಇದಕ್ಕೆ ಹೀಗೆ ಹೆಸರು ಕೊಡಲಾಗಿದೆ ರಚಕ, ಪೂರಕ ಇವೆರಡೂ ಅವ್ಯಾಹತವಾಗಿ ನಡೆಸುವುದೇ ಪ್ರಾಣಗತಿ ದೈಹಿಕ ಬದುಕು ಮನಸ್ಸಿನ ಚಲನೆ ಎಲ್ಲವೂ ಈ ಗತಿಗಳನ್ನೇ ಅವಲಂಬಿಸಿರುತ್ತದೆ. ದೇಹ, ಇಂದ್ರಿಯ, ಮನ ಮತ್ತು ಬುದ್ಧಿಗಳ ಎಲ್ಲ ಕ್ರಿಯೆಗಳಿಗೆ ವಾಯುಗಳು ಕಾರಣ ಇದರ ವೇಗ ಹೆಚ್ಚಿದಂತೆ ದೈಹಿಕ, ಮಾನಸಿಕ ಚಲನೆ ಹೆಚ್ಚುತ್ತದೆ.

ಇದನ್ನೇ ಅಧ್ಯಾತ್ಮದಲ್ಲಿ ಪ್ರಾಣತತ್ವ, ಪ್ರಾಣಲಿಂಗವೆಂದು ಕರೆದರು ಬಸವಣ್ಣ ಇದನ್ನೇ ಹೀಗೆ ಹೇಳುತ್ತಾನೆ, ಪ್ಲಥ್ವಿ, ಅಪ್ಪ, ತೇಜ, ವಾಯು, ಆಕಾಶನಿರಂಜನದೇವಾ' ಬಸವಣ್ಣ ಹೇಳಿದ ನಿರಂಜನ ಸ್ಥಿತಿಯನ್ನು ತಲುಪಲು ಪ್ರಾಥಮಿಕವಾಗಿ ಇಡಾ–ಪಿಂಡಗಳೆಂಬ ಎರಡು ನಾಡಿಗಳಲ್ಲಿ ಸೋರಿಹೋಗುವ ಪ್ರಾಣಶಕ್ತಿಯನ್ನು ಬೆನ್ನುಹುರಿಯ ನಡುವಿರುವ ಸುಷುಮಾನ್ನಾಡಿಯ ಮೂಲಕ ಉನ್ಮುಖವಾಗಿ ಹರಿಯಬಿಡುವ ಸಿದ್ದತೆಯನ್ನು 'ನಾಳಸುರ್ಧದದ್ವಾರ'ವಾಗಿ ಎಂಬ ಮಾತಿನಿಂದ, ಪೃಥ್ವಿ, ಅಪ್ಪ,ತೇಜ, ವಾಯು, ಆಕಾಶವೆಂಬ ಪಂಚ ಭೂತವಾದಿ ಪದಗಳನ್ನು ಕೆಳಗಿನಿಂದ ಮೇಲಕ್ಕೆ ಕ್ರಮವಾಗಿ ಆಧಾರ–ಸ್ವಾದಿಷ್ಠಾನ ಮಣಿಪುರಕ ಅನಾಹತ–ವಿಶುದವೆಂಬ ಪಂಚಚಕ್ರಗಳಿಗೂ, ನೀರಾಲಂಬನವೆಂಬ ಪದವನ್ನು

---

[95] ಅಲ್ಲಮ ಪ್ರಭುದೇವರ ವಚನ ಸಂ.–೨ ಸಂ.ಡಾ.ಬಿ.ವ್ಹಿ.ಮಲ್ಲಾಪೂರ, ವಚನ ಸಂ.೧೩೬೩, ಪು.ಸಂ.೪೦೨.

ಸಹಸ್ರಾರದ ನೆರೆಹೊರೆಯ ಭೂ ಮಧ್ಯ ಸ್ಥಾನವೆ ಆಜ್ಞಾಚಕ್ರವೂ ಪ್ರತಿನಿಧಿಕವಾಗಿ ಬಳಸಲಾಗಿದೆ. ಶರಣರು ಶಕ್ತಿಯಿಂದ ಭಕ್ತಿಗೂ ಭಕ್ತಿಯಿಂದ ಮುಕ್ತಿಗೂ ಸಲ್ಲುವ ಭಕ್ತಿಯೋಗದೊಡನೆ ಸಮೀಕರಿಸಿದ್ದಾರೆ.

'ಶರಣಧರ್ಮದ' ಪರಿಭಾಷೆಯಲ್ಲಿ ಭಕ್ತನಾಗುವ್ಯದೆಂದರೂ 'ಪಾತಂಜಲಯೋಗ' ಪರಿಭಾಷೆಯಲ್ಲಿ ಯೋಗಿಯಾಗುವುದೆಂದರೂ ಅತ್ಯಂತಿಕವಾಗಿ ಒಂದೇ ಆಗಿದೆ.

ಪ್ರಾಣಾಯಾಮಾದಿಗಳಿಂದ ಹೇಗೋ ಹಾಗೆ ತೀವ್ರ ಭಕ್ತಿ ಭಾವನೆಯಿಂದಲೂ ಶುಶುಮೆಯ ದ್ವಾರತೆರೆದುಕೊಳ್ಳುತ್ತದೆಂದು, ಹೀಗೆ ತೆರೆದುಕೊಂಡ ಸುಷಾಮ್ನಾನಾಡಿಯೆಂಬ ಗುಹಾದ್ವಾರದುದ್ದಕ್ಕೂ ಪೇರಿಸಿರುವ ಷಡ್ಡಚಕ್ರಗಳನ್ನು ಬೇಧಿಸಿಕೊಂಡು ಪಯಣಿಸಿ ಸಹಸ್ರಾರದ ಶಿಖರದಲ್ಲಿ ಜ್ಞಾನಜೋತಿಯ ಬೆಳಗಿನಲ್ಲಿ ಕೂಡಲಸಂಗಮ ದೇವನನ್ನು ಕಂಡಂತೆ ಎಂದು ಬಸವಣ್ಣ ಹೇಳಿದರೇ, ಇದಕ್ಕೆ ಬೆಂಬಲಿಸಿದಂತೆ ಅಲ್ಲಮನು ಕೂಡ ತನ್ನ ವಿಚಾರ ವ್ಯಕ್ತಪಡಿಸಿದ್ದಾನೆ.

ಜಲದೊಳಗೆ ಕಿಚ್ಚಿದೆ ಆದರೂ ಜಲವನ್ನು ಸುಡದು ಆ ಜಲದೊಂದಿಗೆ ಅಭಿನ್ನವಾಗಿ ನೆಲೆಸಿದೆ. ಅದೇ ರೀತಿ ಈದೇಹ ಕೂಡ ಪಂಚಭೂತಗಳಿಂದಾಗಿದೆ. ಅದಕ್ಕೆ ಚೇತನ ಎಂದು ಹೆಸರು ಕೊಟ್ಟಿದ್ದಾರೆ. ಈ ಚೇತನದಿಂದ ಪಂಚಭೂತಗಳಲ್ಲಿ ಒಂದರ ಕೊರತೆಯಾದರೂ ಕೂಡ ದೇಹ ಬಿದ್ದುಹೋಗುತ್ತದೆ. ಈ ಸತ್ಯವನ್ನು ಅರಿತವರು ಅತಿವಿರಳ. ಕಾಣುವ ದೇಹದಿಂದ ಭಿನ್ನವಾಗಿ ಆತನ ನಿಲುವು ಗುರುತಿಸದವರಾರು? ಮುಂದುವರಿದು ಸ್ಥೂಲ–ಶುಷ್ಮದ ಬಗ್ಗೆ ಮಾತನಾಡುತ್ತಾನೆ.

ಭೂಮಿ ಸ್ಥೂಲ, ಆಕಾಶದ ಸೂಕ್ಷ್ಮತೆಯನ್ನು ಸಂಪೂರ್ಣ ಜಡವಿಸ್ತಾರವನ್ನು ಜೀವಾತ್ಮನ ಮುತಿಯ ತಿಳಿದುಕೊಳ್ಳುತ್ತದೆ. ಅಂದರೆ ತನ್ನ ಕಣ್ಣಿಗೆ ಕಂಡಿದ್ದಷ್ಟೆ ಅದರಾಚೆ ಇರುವ ತನ್ಮೂಲ ಸ್ವರೂಪವಾದ ಪರವಸ್ತುವನ್ನು ತಿಳಿಯುತ್ತ ಅವರ ಗಮನ ಹರಿಯುವುದಿಲ್ಲ ಅಂದರೆ ಸಂಸಾರಿಕ ಸುಖದತ್ತಲೇ ಅವನ ವಲವು ಪಂಚಭೂತಗಳ ಮೇಲೆ ಒಂದಿಷ್ಟು ನಿಗಾ ಇಡದಿದ್ದರೆ ಮುಂದೊಂದು ದಿನ ಮಾನವನಿಗೆ ಕಳೆದು ಕೊಂಡದ್ದರ ಬಗ್ಗೆ ಅವನಿಗೇ ಆಶ್ಚರ್ಯವಾಗಬಹುದೆಂದು ಅಲ್ಲಮ ಹೇಳುತ್ತಾನೆ.

ಅಂದರೆ ಭೂಮಿಯ ಕಠಿಣತೆ, ಆಕಾಶದ ಮೃದುತ್ವ ಇಡಿ ಭೂಮಿಯನ್ನು ಗೆಲ್ಲುವಂತಾದ ಮಾನವನು ಭೂಮಿ–ಆಕಾಶ'ವನ್ನು ತನ್ನ ದುರುಪಯೋಗಕ್ಕಾಗಿ ಉಪಯೋಗಿಸುತ್ತಿದ್ದಾನೆ. ಭೂಮಿಯ ಹೊಟ್ಟೆ ಬಗೆದು ತನ್ನ ದೈತ್ಯ ಪ್ರವೃತ್ತಿ ತೋರಿಸುತ್ತಿದಾನೆ. ಆದ್ದರಿಂದ ಇದನ್ನು ಕಂಡು ಸೃಷ್ಟಿಕರ್ತ ಬೇರಗಾಗುತ್ತಾನೆಂದು ವಚನಕಾರರು ಹೇಳಿದ್ದಾರೆ.

"ಭೂತ ಭೂತವ ಕೂಡಿ ಅದ್ಭುತವಾಯಿತು
ಕಿಚ್ಚುಕೋಡಿತ್ತು (ನೀರು) ನೀರಡಿಸಿತ್ತು – ಅದ್ಭುತವಾಯಿತ್ತು !
ಉರಿ, ಪವನದೋಷದೊಳಗಗಿದೂರ
ವಾಯುವಿಮ್ಮಡಿಸಿತ್ತು ಕಂಡೆ, ಗುಹೇಶ್ವರಾ !"[96]

'ಭೂತ ಭೂವ ಕೂಡಿ ಅದ್ಭುತವಾಯಿತು' ಎಂಬಲ್ಲಿ ಪ್ಲಥ್ವಿ, ಅಪ್ಪ, ತೇಜ, ವಾಯು, ಆಕಾಶವೆಂಬ ಪಂಚಭೂತಗಳು ಪರಸ್ಪರ ಬೆರೆತಾಗ ದೇಹ ನಿರ್ಮಾಣವಾಗುತ್ತದೆ. ಈ ದೇಹವು ಅತ್ಯದ್ಬುತವಾದ ಸ್ವ–ನಿಯಂತ್ರಿತ ಸಂಯೋಜನೆ ಇದರ ಅಂತರ ರಚನೆ ಹಾಗೂ ಕಾರ್ಯವಿಧಾನ ಎಂತಹ ಬುದ್ದಿವಂತನನ್ನು ಅಚ್ಚರಿಗೊಳಿಸುತ್ತದೆ. ಈ ಜಾತ ರಚನೆಯೊಳಗೆ ಜ್ಞಾಕಿಚ್ಚು ಹತ್ತಿಕೊಂಡಿತ್ತು ಅದು ಆತ್ಮ ಚೇತನ, ಶಿವಕಳೆ ಆದರೆ ಮಾಯೆಯ ಪರಿಣಾಮವಾಗಿ ಆಚೇತನ ತನ್ನ ಮೂಲ ಸ್ವರೂಪವನ್ನು ಮರೆಯಿತು. ದೇಹಭಾವಿಯಾಯಿತು.(ರಚನೆ) ದೇಹಭಾವಿಯಾದ ಚೇತನವೇ ಜೀವಾತ್ಮ 'ಕೂಡಿದ ಕಿಚ್ಚು' ತನ್ನತಾ ಮರೆತ ಜೀವ ಈತನ ಸುತ್ತಾಮುತ್ತ ಹರಿದಾಡಿಕೊಂಡಿದ ಮನಸ್ಸು ನೀರು, ಈ ನೀರಿದೊಂದಾಗ ಮನಸ್ಸಿನಲ್ಲಿ ನೂರು ಬಯಕೆ ಒಂದೂ ಈಡೇರದು! ಹೀಗಾಗಿ ಆಜೀವ ಮನೋ ಬುದ್ದಿ ಚಿತ್ತ ಅಹಂಕಾರ ಈ ಇಂದ್ರಿಯಗಳಿಂದ ವ್ಯಷ್ಠಿ ಎನಿಸುವ ದೇಹ ತನ್ನ ನಿಜಸ್ವರೂಪವನ್ನು ಕಳೆದುಕೊಂಡು ವಿಷಯಗಳಿಗಾಗಿ ಇಂದ್ರಿಯ ಸುಖಕ್ಕಾಗಿ ಹಪಹಪಿಸಿ ಹಾಳಾಗುತ್ತಿದ್ದಾನೆ.

'ಹರಿಯ ಬಾಯ ಹಾಲ' ರಾಕ್ಷಸರ ಸಂಹಾರ ಮಾಡಲು ಇಂದ ವಿಷ್ಟು ಹೆಣ್ಣು ವೇಶದಲ್ಲಿ ಬಂದಂತೆ ಈ ಜೀವ ಕೂಡ ಭೂಗ ವೈಭವದ ಮದಗಜವೇರಿ ಪ್ರಪಂಚರಂಗದಲ್ಲಿ ವಿಹರಿಸುತ್ತಾನೆ. ಇದರಿಂದ ಹಿಡಿದು ನಿಲ್ಲಿಸಿ ಬೋಗ ವೈಭವದ ಉನ್ಮಾದದಿಂದ ಹೊರಬರಬೇಕು ಅಂದರೇ

---

[96] ಅಲ್ಲಮ ಪ್ರಭುದೇವರ ವಚನ ಸಂ.–೨ ಸಂ.ಡಾ.ಬಿ.ವ್ಹಿ.ಮಲ್ಲಾಪೂರ, ವಚನ ಸಂ.೩೨, ಪು.ಸಂ.೧೧

ಪಂಚಭೂತಗಳು ತನಗಾಗಿ ತನ್ನ ವೈಭೂಗಕ್ಕಾಗಿ ಎಂದು ತಿಳಿದುಕೊಂಡು ಮಾನವರು ಇದು ಕೇವಲ ವ್ಯಷ್ಠಿ–ಯಾಗದೇ ಸಮಷ್ಟಿಯದಾಗಿದೆ.

ಇದನ್ನೆ ಹೀಗೆ ಹೇಳುತ್ತಾನೆ 'ಅಗ್ನಿ ಮುಟ್ಟಲು ತೃಣ ಭಸ್ಮ' ಅಗ್ನಿಯು ಹೋತ್ತಿದಾಗ ಕಾಷ್ಠವು ಭಸ್ಮವಾಗುತ್ತದೆ. ಇದನ್ನು ಎಲ್ಲರೂ ಬಲ್ಲರು. ಆದರೆ ಕಾಷ್ಠದಲ್ಲಿಯೇ ಅಗ್ನಿಹುದಾಗಿದೆ ಎಂಬುದನ್ನು ತಿಳಿದು ನೋಡುವುದು ಮುಖ್ಯ ಮನುಷ್ಯನಲ್ಲಿಯೂ ಹಾಗೆಯೇ ಅಜ್ಞಾನದಿಂದ ಕೂಡಿದ ದೇಹ ಜಾಗ್ರತವಾಗಬೇಕು.

ಹೇಗೆಂದರೆ ಯೋಗ ಸಾಧನೆಯಿಂದ ಶಿವಜ್ಞಾನಾಗ್ನಿಯೂ ಪ್ರಕಟವಾಗುತ್ತದೆ. ಅದು ಮಾನವನ್ನೆಲ್ಲ ವ್ಯಾಪಿಸಿ ಅಮನಗೊಳಿಸುತ್ತದೆ. ಅದನ್ನೇ ನೀರ ಸುಟ್ಟ ಕಿಚ್ಚಿನಂತೆ' ಧ್ಯಾನ ಸಾಧನೆಯಿಂದ ಅಜ್ಞಾನದಿಂದ ಬಳಸಿ ಬಿಸಾಡುವ ಪದ್ದತಿಯಿಂದ ಹೊರಬಂದಾಗ ಮನದ ಚಾಂಚಲ ಅಳಿದು ಉನ್ಮನಿಸ್ಥಿತಿ ಪ್ರಾಪ್ತಾವಾಗುತ್ತದೆ. ಪರವಸ್ತುವಿನ ನಿಜ ಜ್ಞಾನ ಅಳವಡುತ್ತದೆ. ಅದರ ಪರಿಣಾಮವಾಗಿ ಭ್ರಮೆ ಅಳಿದುಹೋಗಿ ಸ್ಥಿರತೆ ತರುತ್ತದೆ. ಅದುವೇ ಸಾಧನೆ ಅಂದರೆ ತನ್ನೆಲ್ಲ ವಸ್ತು ಸೃಷ್ಟಿಯಲ್ಲಿ ಅಡಗಿವೆ ಪ್ಲಥ್ವಿಯಲ್ಲಿಯೋ ಸೃಷ್ಟಿ ಅಡಗಿದೆ ಅಂದರೆ ಪ್ರತಿಯೊಂದು ಪ್ರತಿಯೊಂದು ಇಲ್ಲಿಯೋ ಸೇರಬೆಕಲ್ಲ!

'ಪೃಥ್ವಿಯಲೊದಗಿದ ಘಟವು ಪೃಥ್ವಿಯಲಡಗಿದಡೆ' ಅಂದರೆ ಪ್ರತಿಯೊಂದು ಪೃಥ್ವಿಯಿಂದ ಆದದೆಲ್ಲ ಪೃಥ್ವಿಯಲ್ಲೇ, ಜಲದಿಂದ ಆದುದೆಲ್ಲ ಜಲದಲ್ಲೇ ತೇಜದಿಂದಾದುದೆಲ್ಲ ತೇಜದಲ್ಲೇ ವಾಯುವಿನಿಂದಾದುದೆಲ್ಲ ವಾಯುವಿನಲ್ಲೇ ಅಡಗುತ್ತವೆ. ಆಕಾಶದಿಂದಾದುದೆಲ್ಲ ಆಕಾಶದಲ್ಲೆ! ಅಂದರೆ ಮಾನವರಾದ ನಾವು ಶರಣರಾಗಿ ಬಳಸುವ ಪದಾರ್ಥವೆಲ್ಲ ಲಿಂಗವಾಗಿರಬೇಕು.

ಪೃಥ್ವಿ, ಅಪ್ಪ, ತೇಜ, ವಾಯು, ಆಕಾಶ– ಇವುಗಳಿಂದ ಕುಡಿದುದರ ಜಗತ್ತು ಈ ಜಗತ್ತಿನಲ್ಲಿ ದೈಹಿಕ, ಮಾನಸಿಕ, ಬೌದ್ದಿಕವಾಗಿ ಬೆಳೆದ ಕೀರ್ತಿಶಾಲಿಗಳಾಗಿ ಬೆಳೆದವರು ಹಲವರು ಈ ವಿಶಾಲವಾದ ಜಗತ್ತು ಘನ, ಈ ಘನಕ್ಕೆ ಘನವಾದುದು ಪರವಸ್ತು ಅಂಥ ಪರವಸ್ತು ತಮ್ಮ ಬುದ್ದಿ ಮತ್ತೆಯಿಂದ ಅರಿತಿದ್ದೇವೆ, ಎಂಬ ಭ್ರಮೆ ಅವರಿಗೆ ಆ ಪರವಸ್ತು ನಿರ್ವಿಕಾರ, ಮಾತು ಮನಗಳಿಗೆ

ಅತೀತ ಅದನ್ನು ಬುದ್ಧಿಯಿಂದ ಗ್ರಹಿಸಲಾಗದು, ನಿರ್ಣಯಿಸಲಾಗದು ಅದು ಅವರ್ಣನೀಯ, ಅದೆನ್ನು ನಮ್ಮ ಜನ ತಿಳಿದಾರು?

ಈ ಪಂಚಭೂತಗಳ ಸಮ್ಮಿಶ್ರ ಸಮುದಾಯವೇ 'ವಿಶ್ವ" ಈ ಜಗತ್ತಿನಲ್ಲಿ ಅಸಂಖ್ಯ ಜೀವಜಂತುಗಳು ಅವುಗಳಲ್ಲಿ ಹೆಚ್ಚು ವಿಕಶಿತನಾದವ ಮನುಷ್ಯ ದೇಹ– ಮನುಸ್ಸು ಬುದ್ಧಿಯಾಗಿ ಬೆಳೆದು ಅದರ ಮೂಲಕ ಆತ ಕೀರ್ತಿಶಾಲಿಯಾಗುತ್ತಿದ್ದಾನೆ ಇವರಿಗೆಲ್ಲ ತಮ್ಮ ಬುದ್ಧಿಯ ಬಗ್ಗೆ ತುಂಬ ಅಭಿಮಾನ ಕಾರಣ ತಾವು ಎಲ್ಲವನ್ನು ಅರಿಯ ಬಲ್ಲೆವು ಅರಿತಿದ್ದೇವೆ ಅಷ್ಟೆ ಏಕೆ, ಘನಕ್ಕೆ ಘನವಾದ ಅಭೌತಿಕ ಪರವಸ್ತುವನ್ನು ತಿಳಿದಿದ್ದೇವೆ ಎಂಬ ಭ್ರಮೆ.

"ಎಲೆ ಶಿವನೆ ನಿಮ್ಮಲ್ಲಿ ಸಾಲವ ಕೊಂಡು
ನಿಮ್ಮ ಶರಣರ ಶಿವಲೋಕಕ್ಕೆ ಹೋದವನಲ್ಲಾ
ಪೃಥ್ವಿಯ ಸಾಲವ ಪೃಥ್ವಿಗೆ ಕೊಟ್ಟು
ತೇಜದ ಸಾಲವ ತೇಜಕ್ಕೆ ಕೊಟ್ಟು,
ವಾಯುವಿನ ಸಾಲವ ವಾಯುವಿಗೆ ಕೊಟ್ಟು,
ಆಕಾಶದ ಸಾಲವ ಆಕಾಶಕ್ಕೆ ಕೊಟ್ಟು
ಪ್ರಸಾದವನಾರಿಗೆಯೂ ಕೊಡಲಿಲ್ಲೆಂದು
ಕೂಡಲ ಚೆನ್ನಸಂಗನಲ್ಲಿ ಹೊಣೆ ಹೊಕ್ಕು ಶರಣಂಗೆ
ಮೀಗೆ ಮಿಗೆ ನಮೋ ನಮೋಯೆಂಬೆ"[97]

ಪ್ರಕೃತಿದತ್ತವಾದ ಪಂಚಭೂತಗಳನ್ನು ಮನುಷ್ಯರಾದ ನಾವು ಯಾವ ರೀತಿ ಬಳಸಿ, ಕಾಪಾಡಬೇಕೆಂಬ ಕಳಕಳಿ ಇದೆ. 'ಎಲೆ ಶಿವನೆ ನಿಮ್ಮಲ್ಲಿ ಸಾಲವ ಕೊಂಡು' ಇವತ್ತಿನ ವಿಜ್ಞಾನಿಗಳ ವಿಚಾರ ಚನ್ನಬಸಣ್ಣ ಮಾಡಿದ.

ಇಡಿ ಜಗಕ್ಕೆ ಸಾಲಕೊಟ್ಟ ಶ್ರೀಮಂತರಿದ್ದಾರೆ. ಈ ಭೂಮಿಯ ಮೇಲೆ ವಾಸಿಸುವ ಪ್ರತಿಯೊಂದು ಜೀವಿ ಒಂದು ರೀತಿ ಸಾಲದಲ್ಲಿ ಸಿಕ್ಕಿಬಿದ್ದವರೇ ಆಗಿದಾರೆ. ಈ ಭೂಮಂಡಲವೇ ಶಿವಲೋಕ ಈ ಶಿವಲೋಕದಲ್ಲಿ ಕಾಮಿಸಿದ್ದಲ್ಲ ಸಿಗುವಂತಹದ್ದಾಗಿದೆ. ನಾವೆಲ್ಲ ದೇವಲೋಕದಲ್ಲಿ ಅಂದರೆ ಈ ಭೂಮಿಯ ಮೇಲೆ ಯಾವ ರೀತಿಯೂ ತೆರಿಗೆ ಕಟ್ಟದೆ ಬೇಕಾಬಿಟ್ಟಿಯಾಗಿ ಪ್ರಕೃತಿಯನ್ನು

[97] ಚನ್ನಬಸವಣ್ಣನವರ ವಚನ, ಸಂ–೩, ಸಂ. ಡಾ.ಬಿ.ವ್ಹಿ.ಮಲ್ಲಾಪೂರ ವ.ಸಂ.೧೮೯೧, ಪು.ಸಂ.೩೭೨

ಬಳಸಿಕೊಳ್ಳುತ್ತಿದೇವೆ. ಬಳಸಿಕೊಳ್ಳುವುದೇನೋ ನಿಜ ಆದರೆ ಪ್ರತಿಯಾಗಿ ಪ್ರಕೃತಿಗೆ ನಾವು ಏನನ್ನು ಕೊಡುತ್ತಿಲ್ಲ ಇದೆಲ್ಲಾ ಸಾಲವನು ಪಡೆದವರು ನಾವು ಪಡೆದ ಸಾಲ ತಿರುಗಿಸಬೇಕಲ್ಲ!

ಪೃಥ್ವಿಯ ಸಾಲ ಪೃಥ್ವಿಗೆ ಕೊಟ್ಟು ಅಂದರೆ ನಾವು ಭೂಮಿಯನ್ನು ಕೃತಜ್ಞತಾ ದೃಷ್ಟಿಯಿಂದ ನೋಡದೆ ಭೂಮಿಯನ್ನು ಹೊಲಸುಗೇಡುವದಂತೆ ದೃಷ್ಟಿಹಾಯಿಸಿದ್ದೇವೆ. ಇದನ್ನು ಬಿಟ್ಟು ನಾವು ಈ ಭೂಮಿ ಸಾಲವಾಗಿ ಪಡೆದಿದ್ದೇವೆ. ಅದನ್ನು ನಾವು ಪುನಃ ಬಡ್ಡಿ ಸಮೇತ ಹಿಂದಿರುಗಿಸಬೇಕಾಗಿದೆ ಎಂಬುದನ್ನು ನೆನಪಿಡಬೇಕು.

ನೀರಿನ ಸಾಲ ನೀರಿಗೆ ಕೊಟ್ಟು ಪ್ರತಿನಿತ್ಯ ಸರ್ಕಾರದ ನಲ್ಲಿಗಳು ಬಾಯ್ದೆರೆದು ನೀರೆಲ್ಲ ಸೋರಿ ರಸ್ತೆ ಮೇಲೆ ರಾಡಿಯಾದರೂ ನೋಡದ ನಾವು ಸಂಬಂಧವೇ ಇಲ್ಲದಂತೆ ಇರುತ್ತೇವೆ. ಮೋಡಗಳೆಲ್ಲ ಮಳೆಯೇ ಸುರಿಸದಿದ್ದರೆ ಬೆಳೆಗಳಿಗೆ ನೀರೆಲ್ಲಿಂದ ಮನುಕುಲ ಪ್ರಾಣಿ- ಪಕ್ಷಿಗಳಿಗೆ ನೀರೆ ಇಲ್ಲದಂತಾಗುತ್ತದೆ. ಆದ್ದರಿಂದ ಪೋಲಾಗದಂತೆ ತಡೆಗಟ್ಟಬೇಕು.

ಅಗ್ನಿ (ಸೂರ್ಯ) ನಮಗೆ ಹಗಲ್ಲೆಲ್ಲಾ ದುಡಿಮೆಗೆ ಅವಕಾಶ ಕೊಟ್ಟು ರಾಷ್ಟ್ರದ ಸಂಪತ್ತನ್ನು ವಿದ್ಯುತ್ ಉಳಿತಾಯ ಮಾಡುವ ಸೂರ್ಯನು ಬೆಳಕು ತೋರುವಾಗಲು ಅದೆಷ್ಟು ಮನೆಗಳಲ್ಲಿ ವಿದ್ಯುತ್ ದೀಪ ಉರಿಯುತ್ತಿರುತ್ತವೆ. ಅದೆಷ್ಟೋ ಬೀದಿದೀಪಗಳು ಇಂತಹ ಪ್ರಕಾಶಕ ಬೆಳಕು ಕೊಡುವ ಹಗಲಿನಲ್ಲೂ ವಿದ್ಯುತ್ ಇಲ್ಲದೆ ಬದುಕೇ ಇಲ್ಲವೆನ್ನುವಂತಾದರೂ ಕೂಡ ತಮ್ಮ ತಮ್ಮ ಮನೆಗಳಿಗೆ ಬೇಕಾದಷ್ಟು ಸೂರ್ಯನ ಶಾಖದಿಂದಲೇ ಮನೆಬೆಳಗುವಂತೆ ಮನೆಗಳಿಗೆ ಬೇಕಾದಷ್ಟು ಸೂರ್ಯನ ಶಾಕದಿಂದ ಮನೆ ಬೆಳಕೆಗೆ ಅಡುಗೆ ಮಾಡುವಂತೆ, ವಾಹನ ನಡೆಯುವಂತೆ ನಾವೆಲ್ಲರೂ ನೋಡಿಕೊಳ್ಳಬೇಕು.

ನಮ್ಮ ಉಸಿರಾಟಕ್ಕೆ ಪ್ರಾಣವಾಯು ಬೇಕೆ ಬೇಕು ಒಂದು ಕ್ಷಣ ಗಾಳಿ ಇರದಿದ್ದರೆ ಇಡಿ ಸೃಷ್ಟಿಯೇ ಅಲ್ಲೋಲ ಕಲ್ಲೋಲವಾಗುವುದು ನಾವು ನೆನಪೀಡಬೇಕು. ಗಾಳಿಯಲ್ಲಿ ಎಲ್ಲ ರೀತಿಯ ಹೊಗೆ, ಧೂಳು, ಗಬ್ಬು ವಾಸನೆ ನಮ್ಮ ಪ್ರತಿನಿತ್ಯ ವಿಸರ್ಜಿಸಿದ ಹೊಲಸೆಲ್ಲಾ ಗಾಳಿಯಲ್ಲಿ ತೇಲುತ್ತದೆ. ಅದನ್ನು ಶುದ್ಧವಾಗಿಡುವ ಕರ್ತವ್ಯ ಎಲ್ಲರದಾಗಿದೆ.

ಆಕಾಶದಲ್ಲಂತೂ ಅದೆಷ್ಟೋ ಹೊಗೆ, ಧೂಳು ಕಾರ್ಖಾನೆಯ ಎಲ್ಲ ತ್ಯಾಜ್ಯ ಮತ್ತು ವಿಸರ್ಜಿಸಿದ ಹೊಗೆಯೆಲ್ಲ ಆಮ್ಲವಾಗಿ ಭೂಮಿಗೆ ಬೀಳುತ್ತದೆ. ಆದರಿಂದ ಬೆಳೆಗಳಿಗೆ ರೋಗರುಜಿನ ಉಂಟಾಗುತ್ತವೆ. ಹೀಗಾದಾಗ 'ಓಝೋನ್' ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದ್ದು ಸೂರ್ಯನಕಿರಣ ಭೂಮಿಗೆ ಅತ್ಯಂತ ಪ್ರಖರವಾಗಿ ಪರಿಣಾಮ ಬೀರುತ್ತಿರುವುದು ಇಂದಿನ ಸಮಸ್ಯೆ.

ಆದ್ದರಿಂದ ನಾವಿಂದು ವಿಚಾರ ಮಾಡುವ ಸಮಸ್ಯೆಗೆ ವಚನಕಾರರು ಅಂದೆ ವಿಚಾರ ಮಾಡಿದು ಕಂಡುಬಂದಿದೆ.

ಪ್ರಕೃತಿ ನಮಗೆ ಕೊಟ್ಟ ಕೊಡುಗೆಗೆ ನಾವೇನನ್ನೂ ಕೊಡಬೇಕಾಗಿಲ್ಲ ಆದರೆ ಅದನ್ನು ಹಾಳುಗೆಡುವುದು ನಮ್ಮ ಧ್ಯೇಯವೆಂಬಂತೆ ವರ್ತಿಸಿದ್ದೇವೆ. ಒಂದನ್ನು ನಾವು ನೆನಪಿನಲ್ಲಿಡಬೇಕು. ಈ ಪ್ರಕೃತಿಯಲ್ಲಿಯ ಯಾವ ವಸ್ತುವೂ ಹಾಳು ಮಾಡುವ ಹಕ್ಕು ನಮಗಿಲ್ಲವೆನ್ನುವುದು ನೆನಪಿಡಬೇಕು.

ಹಾಗೇನಾದರೂ ಆದರೆ ಮುಂದೊಂದು ದಿನ ಚಕ್ರಬಡ್ಡಿ ಸಮೇತ ಹಿಂದಿರುಗಿಸಬೇಕಾಗುತ್ತದೆ. ಎಂಬುದು ನೆನಪೀಡಬೇಕು ಎನ್ನುತ್ತಾನೆ ಚನ್ನಬಸವಣ್ಣ.

ಹೀಗೆ ಬೇಕಾಬಿಟ್ಟಿಯಾಗಿ ಬಳಸಿಕೊಂಡರೆ ಮುಂದೇನಾಗುತ್ತದೆ. ಎಂದು ಅಲ್ಲಮ ಹೀಗೆ ಹೇಳಿದ್ದಾನೆ 'ಕಾಡು ಗಿಚ್ಚುದ್ದಡೆ ಅಡವಿಯೋಗುರಿ' ಇದಕ್ಕಿಂತ ಹೆಚ್ಚಿನ ಸಾಕ್ಷಿ ನಮಗೆ ಬೇಕಿಲ್ಲ ಕಾಡಿನಲ್ಲಿ ಮರಗಳು ಒಂದಕ್ಕೊಂದು ಘರ್ಷಣೆಗೊಂಡಾಗ ಹಚ್ಚ ಹಸಿರು ಕಾಡೇ ಮೈಯೆಲ್ಲ ನಾಲಿಗೆಯಾಗಿ ಉರಿಯುತ್ತದೆ. ಇನ್ನು ನೀರು ಗಿಚ್ಚೆದ್ದರೆ? ಇದರ ಬಗ್ಗೆಯಂತೂ ಸುನಾಮಿಯ ಚಿತ್ರ ಇನ್ನೂ ಕಣ್ಣಿನಿಂದ ಮಾಸಿಲ್ಲ. ಮೊನ್ನೆಯೇ ಪ್ರವಾಹಕ್ಕೆ ಬಿಜಾಪೂರ, ರಾಯಚೂರು ನರಗುಂದ, ಮಂತ್ರಾಲಯದ ಸುತ್ತಮುತ್ತಲಿನ ಹಳ್ಳಿಗಳು ಪ್ರವಾಹದಲ್ಲಿ ಕೊಚ್ಚಿಹೋಗಿವೆ. ದಿನಾಂಕ: ೧೬-೧೧-೨೦೦೦ ಪ್ರಜಾವಾಣಿ ಕರಗುತ್ತಿರುವ ಅಂಟಾರ್ಕ್ಟಿಕಾ ಹಿಮತಟ್ಟೆ" ಆತಂಕ ಒಡಲುಗಿಚ್ಚೆದಡೆ ಇದರ ಅನುಭವ ಇಡಿ ಮನುಷ್ಯ ಕುಲ ಅಷ್ಟೇ ಅಲ್ಲ ಎಲ್ಲ ಪ್ರಾಣಿಪಕ್ಷಿಗಳಿಗೂ ಇದರ ಬಿಸಿತಟ್ಟಿದೆ.

ಅಂದು ಅಕ್ಕಮಹಾದೇವಿ ಹಸಿವಾದಡೆ ಬಿಕ್ಷಾನ್ನಗಳುಂಟು ಎಂದು ಹೇಳಿದಳು ಆದರೆ ಇಂದು ಬಿಕ್ಷಾಟನೆ ಮಾಡುವವರ ಆಸ್ತಿಪಾಸ್ತಿ ಜೋರು.

ಇಂದು ಇದಕ್ಕೆ ಸರ್ಕಾರ ಕಡಿವಾಣ ಹಾಕುತ್ತಿದೆ. ಭಿಕ್ಷೆ ನೀಡುವುದರಿಂದ ಸೋಮಾರಿಯಾಗುವರೆಂದು ಹಾಗೆ ಒಂದು ವೇಳೆ ಬೀಕ್ಷೆ ಕೊಡುವುದಾದರೆ ಅದನ್ನು ಸರ್ಕಾರದ ಅದೀನದಲ್ಲಿರುವ ಸಂಸ್ಥೆಗೆ ಸಲ್ಲಿಸಬೇಕಂತೆ !

ಈ ಹಣ ರಸ್ತೆಬದಿ ಗಿಡ ನೆಡಲು ಬಳಸಿಕೊಳ್ಳವು ಉದ್ದೇಶ ಒಂದು ಗಿಡ ನೆಟ್ಟು ಪ್ರತಿದಿನ ನೀರು ಹಾಕಿದರೆ ೬೦-೭೦ ರೂಪಾಯಿ ಸರ್ಕಾರ ಕೊಡಲು ಸಿದ್ದವಾಗಿದೆ.

"ನಾನು ಮೆಟ್ಟುವ ಭೂಮಿಯ ಭಕ್ತನ ಮಾಡಿದಲ್ಲದೆ ಮೆಟ್ಟೆನಯ್ಯಾ
ನಾ ನೋಡುತಿಹ ಆಕಾಶದ ಚಂದ್ರಸೂರ್ಯರ
ಭಕ್ತರ ಮಾಡಿದಲ್ಲದೆ ನಾ ನೋಡೆನೆಯ್ಯಾ
ಜಲವ ಭಕ್ತನ ಮಡಿದಲ್ಲದೆ ನಾನು ಬಳಸೆನಯ್ಯಾ
ನಾನು ಕೊಂಬ ಹದಿನೆಂಟು ಧಾನ್ಯವ ಭಕ್ತನ ಮಾಡಿದೆಲ್ಲದೆ
ಕೊಳ್ಳೆನು ಕೂಡಲ ಚೆನ್ನಸಂಗಾ ನಿಮ್ಮಾಣೆ"[೯೮]

ಪಂಚಭೂತಗಳೆಲ್ಲವೂ ನಾವು ಹಾಳುಗೆಡುವ ವಸ್ತುಗಳಲ್ಲ. ಪಂಚಭೂತಗಳು ನಮ್ಮ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಇವೆಯೇ ಹೊರತು ಅವುಗಳನ್ನು ಹಾಳುಗೆಡುವುದಕ್ಕಲ್ಲ. ಅಂದರೆ ನಿಸರ್ಗದ ಸದ್ಬಳಕೆ ಮಾಡಿಕೊಂಡರೆ ಮಾತ್ರ ಜೀವಜಾಲಕ್ಕೆ ಧಕ್ಕೆಯಾಗುವುದಿಲ್ಲ. ಇಲ್ಲದೆ ಹೊದರೆ ಪರಿಣಾಮ ಘನಘೋರ.

ಮನಸ್ಸು ಎಂಬ ಮೇಲೆ ಅದು ದುರಾಸೆಯೇ ಸೃಷ್ಟಿಸುತ್ತದೆ ಅದಕ್ಕೆಂದೆ ಈ ವಚನ ಭೌತಿಕ ಮತ್ತು ಅಧ್ಯಾತ್ಮಕ್ಕೆ ಹೋಲಿಸಿ ಹೇಳಲಾಗಿದೆ. ಪಂಚಭೂತಗಳಾದ, ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ ಇವನ್ನೆಲ್ಲ ಬಳಸವಾಗ ಭಕ್ತನೆಂದೇ ತಿಳಿಯಬೇಕು. ಅಂದಾಗ ನಾವು ಬಳಸಿ ಬಿಸಾಡುವ ಪದ್ಧತಿಯಿಂದ ಹೊರಬರುತ್ತೇವೆ ಎಂದಿದ್ದಾರೆ.

[98] ಚನ್ನಬಸವಣ್ಣನವರ ವಚನ, ಸಂ-೩, ಸಂ. ಡಾ.ಬಿ.ವ್ಹಿ.ಮಲ್ಲಾಪೂರ ವ.ಸಂ.೮೮, ಪು.ಸಂ.೨೭.

ಲೋಕದ ಎಲ್ಲಾ ವ್ಯವಹಾರಗಳಲ್ಲಿ ಸಮತೋಲನ ಕಾಯ್ದುಕೊಳ್ಳುವುದಾಗಿದೆ. ಈ ಪ್ರಜ್ಞೆ ಇರದೇ ಹೋದರ ಇಡೀ ಭೂಮಿ ನಿಸರ್ಗ ಅಲ್ಲೋಲ ಕಲ್ಲೋಲವಾಗುತ್ತದೆ. ಕಾಡು ಮರಭೂಮಿಗಳಾಗುತ್ತವೆ ಭೂಮಿಯ ತಾಪಮಾನ ಹೆಚ್ಚುತ್ತದೆ. ಆದ್ದರಿಂದ ನಿಸರ್ಗದ ಸಂಪತ್ತನ್ನು ಭಕ್ತನೆಂದು ತಿಳಿದುಕೊಳ್ಳವಂತೆ ವಚನಕಾರರು ಹೇಳಿದ್ದಾರೆ.

ಅಧ್ಯಾಯ – ೭

ಸಸ್ಯ ಪರಿಸರ

ಅಧ್ಯಾಯ - ೭

ಸಸ್ಯ ಪರಿಸರ

ಹಿನ್ನೆಲೆ :

ಸಸ್ಯ ಪರಿಸರ ಪ್ರಕೃತಿಯ ಅತಿ ಮುಖ್ಯ ನೈಸರ್ಗಿಕ ಸಂಪನ್ಮೂಲಗಳಲ್ಲಿ ಒಂದು. ನಾವು ಬೆಳೆವ ಗಿಡಮರಗಳು ಹಾಗೂ ಅರಣ್ಯ ಸೇರಿ ಸಸ್ಯಪರಿಸರ ರೂಪುಗೊಂಡಿದ್ದು ಇದು ಜೀವೋತ್ಪತ್ತಿಯ ಮೊದಲ ಘಟಕ. ಮನುಷ್ಯನಿಗಿಂತ ಮೊದಲು ಹುಟ್ಟಿಕೊಂಡ ಈ ಸಸ್ಯ ಪರಿಸರ ಮನುಷ್ಯರ ಬದುಕಿಗೆ ಮತ್ತು ಎಲ್ಲಾ ಜೀವಿಯ ಬದುಕಿಗೆ ಬೇಕಾಗುವ ಜೀವಸತ್ವ ನೀಡಬಲ್ಲ ಶಕ್ತಿ ಇದಕ್ಕಿದೆ. ಪರಿಸರ ವೆಂದರೆ 'ಸಸ್ಯ' ಎನ್ನುವಷ್ಟರ ಮಟಿಗೆ ಪ್ರಚಲಿತವಿರುವ ಇದು ಪಂಚಭೂತಗಳಲ್ಲಿ ಒಂದಾದ ವಾಯು ಉತ್ಪಾದಕ ಘಟಕವೆಂದು ಕರೆಯಬಹುದು. ಜಾಗತಿಕ ಪರಿಸರ ಸಂರಕ್ಷಣೆಯಲ್ಲಿ ಸಸ್ಯ ಪರಿಸರ ಪಾಲು ಮಹತ್ವದ್ದಾಗಿದೆ. ಪಂಚಭೂತಗಳಲ್ಲಿ ಒಂದಾದ ಮಣ್ಣಿನ (ಭೂಮಿಯ) ಫಲವತತ್ತೆಗೆ ಇದರ ಕೊಡುಗೆ ಅಪಾರ "ಪ್ರಕೃತಿಯಲ್ಲಿನ ಮೂಲ ಧಾತುಗಳಾದ ಕಾರ್ಬನ್ ನೈಟ್ರೋಜಸ್ ಮತ್ತು ಆಕ್ಸಿಜನ್‌ಗಳ ಆವರ್ತಕದಲ್ಲಿ ಅರಣ್ಯ (ಸಸ್ಯ) ಗಳು ಜಾಗತಿಕ ಪಾತ್ರ ವಹಿಸುತ್ತದೆ"[99] ನಮ್ಮ ಸುತ್ತಲ್ಲಿನ ಪರಿಸರದ ಉಷ್ಣತೆ ತೇವಾಂಶ, ಮಳೆ ಪ್ರಮಾಣ, ಶುದ್ಧ ಗಾಳಿ, ಮೊದಲಾದವುಗಳನ ಸ್ಥಿತಿ ಸ್ಥಾಪಕ ಶಕ್ತಿ ಪಡೆದಿವೆ.

ಇಂಥ ಸಸ್ಯ ಪರಿಸರ ಜೀವ ಜಗತ್ತಿಗೆ ಮೂಲ ಧಾತುವಾಗಿದ್ದ ಇದರ ಉಪಯುಕ್ತತೆ ಅನಂತ. ಈ ಸಸ್ಯ ಪರಿಸರ ಕುರಿತ ಕಾಳಜಿ ಅನೇಕರು ವ್ಯಕ್ತಪಡಿಸಿದಂತೆ ವಚನಕಾರರು 'ಸಸ್ಯ ಪರಿಸರ' ಕುರಿತು ಚಿಂತಿಸಿದ್ದಾರೆ ಅನೇಕ ಸಸ್ಯಗಳ ಶಕ್ತಿ, ಮಹತ್ವ, ಬಳಕೆ, ಅವುಗಳ ಗುಣಗಳನ್ನು ಕುರಿತು ಪ್ರಸ್ತಾಪಿಸಿದಾರೆ. ವಚನಕಾರರ ಸಸ್ಯಪರಿಸರ ಪ್ರೀತಿಯ ಕುರಿತು ಇಲ್ಲಿ ಚರ್ಚಿಸಲಾಗಿದೆ.

---

[99] ಪರಿಸರ ಅಧ್ಯಯನ – ಡಾ. ಎಚ್.ಎಸ್. ನಿರಂಜನ್, ಪು.ಸಂ.೯೪.

ಸಸ್ಯ ಪರಿಸರ ಅರ್ಥ

ಭೂಮಿಯ ಮೇಲಿನ ಜೀವರಾಶಿಗಳು ಬದುಕಲು ಅವಲಂಬಿತವಾಗಿರುವ ಪ್ರಕೃತಿಯ ಹಲವಾರು ವಸ್ತುಗಳನ್ನು, ಪ್ರಾಕೃತಿಕ ಪ್ರಕ್ರಿಯೆಗಳನ್ನು ನೈಸರ್ಗಿಕ ಸಂಪನ್ಮೂಲಗಳೆಂದು ಕರೆಯುತ್ತೇವೆ. ಇದರಲ್ಲಿ ಸಸ್ಯ ಸಂಪನ್ಮೂಲ ಒಂದಾಗಿದ್ದು ಅದು ಸಸ್ಯ ಪರಿಸರ ಎಂದೂ ಕರೆಸಿಕೊಳ್ಳುತ್ತದೆ. "ಪರಿಸರ ವಿಜ್ಞಾನದ ಎರಡು ಪ್ರಮುಖ ಭಾಗಗಳಲ್ಲಿ ಪ್ರಾಣಿಪರಿಸರ ವಿಜ್ಞಾನ (ಎನಿಮಲ್ ಇಕಾಲಜಿ) ಸಸ್ಯ ಪರಿಸರ ವಿಜ್ಞಾನ (ಪ್ಲಾಂಟ್ ಇಕಾಲಾಜಿ)"[೧೦೦] ಎಂದು ಕರೆಯುವರು.

ವಿಶೇಷವೆಂದರೆ ನಮ್ಮಲ್ಲಿ ಕೃಷಿ ಭೂಮಿಗಿಂತ ಅರಣ್ಯವೆ ಹೆಚ್ಚಾಗಿದೆ ಪ್ರತಿ ರಾಷ್ಟ್ರವು ಕನಿಷ್ಟ ೩೦% ಭೂಮಿಯಾದರು ಅರಣ್ಯಕ್ಕಾಗಿ ಮಿಸಲೀಡಬೇಕೆಂಬ ನಿಯಮ ಏದೆ. ಜಗತ್ತಿನಲ್ಲಿ ೪೦% ಅರಣ್ಯ ಪ್ರದೇಶವಿದ್ದರೆ ಭಾರತದಲ್ಲಿ ೨೩% ಪ್ರದೇಶ ಮಿಸಲಾಗಿದೆ.[೧೦೧] ಬೆಳೆಯುತ್ತಿರುವ ನಗರ ಪ್ರದೇಶ, ಆಧುನಿಕರಣದ ಬೇಡಿಕೆಗಳಿಂದಾಗಿ ಸಸ್ಯಪರಿಸರ ಅವಸಾನದತ್ತ ಸಾಗಿರುವುದು ದುರಂತದ ಸಂಗತಿ ಆದ್ದರಿಂದ ಇತ್ತಿಚ್ಚಿನ ದಿನಗಳಲ್ಲಿ ಸಸ್ಯಪರಿಸರ ಸಂಬಂದಿ ಅಧ್ಯಯನ ವ್ಯಾಪಕವಾಗಿರುತ್ತದೆ.

ಸಸ್ಯ ಪರಿಸರ ವೈದ್ಯಪದ್ಧತಿಯಲ್ಲಿ ನೋಡುವುದಾದರೆ ಭೌಗೋಳಿಕ ಪರಿಸರಕ್ಕನುಕೂಲವಾಗಿ ದೇಶ, ಭಾಷೆ, ಮಣ್ಣು, ನೀರಿನ ಗುಣದೊಂದಿಗೆ ಸೇರಿಕೊಂಡಿದೆ. ಜನಪದರಿಗೆ ನಿರಂತರವಾಗಿ ಕಾಡುವ ರೊಗಗಳ ಚಿಕಿತ್ಸಾಕ್ರಮಗಳಲ್ಲಿ ನಿರಂತರ ಸೋಜಿಗವೆನಿಸುವ ಪರಿಣಾಮ ಜನಪದರಿಗಷ್ಟೇ ಅಲ್ಲದೆ ಈ ಔಷಧಿ ಶಿಷ್ಟರಿಗೂ ನೀಡುತ್ತಲೇ ಬಂದಿದೆ. ಇದಕ್ಕೆ ಪ್ರಚಾರದ ಕೊರತೆ ಇರುವುದರಿಂದ ಜನಪ್ರೀಯತೆಯಿಂದ ದೂರ ಉಳಿದಿದೆ. ಪ್ರಾಣಕ್ಕೆ ಮಾರಕವಾಗುವ ಅದೆಷ್ಟೋ ಸಮಸ್ಯೆಗಳನ್ನು ಜನಪದವೈದ್ಯ ಬಗೆಹರಿಸಿವೆ ಮನುಷ್ಯ ಪರಿಸರದ ಎಷ್ಟೋ ವೃಕ್ಷಗಳು, ಬಳ್ಳಿಗಳು ಸಸ್ಯಗಳಾಗಿರಬಹುದು. ಇಷ್ಟೇ ಅಲ್ಲದೆ ಪ್ರಾಣಿ ಪಕ್ಷಿಗಳ ಕೆಲವು ಸೂಜಿಗದ ಚಟುವಟಿಕೆಗಳನ್ನು ಸರಿತಪ್ಪುಗಳ ಹಿನ್ನಲೆಯಲ್ಲಿ ತನ್ನ ಮತ್ತು ಪರಿಸರದ ಸಂಬಂಧವನ್ನು ಆರೋಗ್ಯವಾಗಿಟ್ಟುಕೊಳ್ಳಲು ಹೋರಾಡಿ ನಿರಂತರವೂ ತನಗೆ ಸಮಸ್ಯೆಯಾಗಿ ಕಾಡಿದ ರೋಗಗಳ ಆಕಸ್ಮಿಕ ಆಘಾತಗಳು ಅಂಗವಿಕಾರಗಳಿಂದ ಉಂಟಾದ ಕಳವಳಗಳನ್ನು ತಾನೊಬ್ಬನೇ ಅಲ್ಲದೆ ತನ್ನ ಸಮಾಜದ ಇತರ ವ್ಯಕ್ತಿಗಳೊಡನೆ ವ್ಯವಸ್ಥಿತವಾಗಿ ಉದ್ದೇಶ ಪೂರಿತವಾದ ಪರಿಹಾರವನನ್ನು ಅರಸಿಕೊಡಬಂದ ಪ್ರಯತ್ನವೇ ಇಂದು ಜನಪದ ವೈದ್ಯವಾಗಿ ರೂಪುಗೊಂಡಿದೆ.

---

100 ವಿವರಕ್ಕಾಗಿ ನೋಡಿ, ಪರಿಸರ ವಿಜ್ಞಾನ. ಕನ್ನಡ ವಿಶ್ವಕೋಶ ಸಿ.ಡಿ. ಮೈಸೂರು ವಿಶ್ವವಿದ್ಯಾಲಯ, ಮೈಸೂರು-೨೦೦೬

101 ಸಸ್ಯ ಪರಿಸರ – ಡಾ. ಕೃಷ್ಣಾನಂದ ಕಾಮತ, ಪು.ಸಂ.೧೩.

ಜನಪದ ವೈದ್ಯಪದ್ಧತಿಯಲ್ಲಿ ಮೊದಲಿಗೆ ಗಮನದಲ್ಲಿರುವ ಸಂಗತಿಗಳೆಂದರೆ, ರೋಗಗಳ ರೂಪ ಬದಲಾವಣೆಗಳನ್ನು ಹೊಂದಿ ವಿವಿಧ ರೂಪ ಮತ್ತು ಲಕ್ಷಣಗಳನ್ನು ಹೊಂದುತ್ತಾ ಪ್ರಾದೇಶಿಕವಾಗಿ ವೈವಿದ್ಯತೆಯಲ್ಲಿ ವೈಚಿತ್ರ್ಯತೆಯನ್ನು ಉಂಟು ಮಾಡುವ ವಿಚಿತ್ರವಾದ ಸಂಗತಿಯಾಗಿದೆ. ಭೂಮಿಯ ಮೇಲೆ ಎಂದು ಜೀವಿಯ ಹುಟ್ಟು ಪ್ರಾರಂಭವಾಯಿತೋ ಅಂದೇ ರೋಗಗಳ ಹುಟ್ಟುವಿಕೆ ಆರಂಭವಾಗಿ ರೋಗಗಳು ಜೀವಿಯಷ್ಟೇ ಪುರಾತನವಾದವು ಎಂಬುದು ತಿಳಿಯುತ್ತದೆ.

ಈ ಭೂಮಿಯ ಮೇಲೆ ಮಾನವನಿರುವವರೆಗೂ ರೋಗ ರುಜಿನುಗಳು ಬಾಧಿಸುತ್ತಲೇ ಇರುತ್ತವೆ. ಹೀಗಿರುವಾಗ ಔಷಧಿಗಾಗಿ ಗಿಡಗಳಿಗೆ ಸಸ್ಯಗಳಿಗೆ ಹುಡುಕಾಟ ಆರಂಭವಾಯಿತು. ಇದೇ ಇಂದು ಸಸ್ಯ ಜನಪದ ವೈದ್ಯವಾಗಿ ಜನಪದರಲ್ಲಿ ರೂಢಿಯಲ್ಲಿರುವ ಸಸ್ಯೌಷಧಿ ಪದ್ಧತಿ ಎಂದಾಗುತ್ತದೆ. ಬುಡಕಟ್ಟು ಜನಾಂಗದಲ್ಲಿ ಮಾಂತ್ರಿಕ ವೈದ್ಯರೆಂದು, ಜನಪದರಲ್ಲಿ ಅನುಭವ ವೈದ್ಯ ಅಥವಾ ಹಸಿರು ಔಷಧಿಯವರು ಎಂತಲೂ ಶಿಷ್ಟರಲ್ಲಿ ಧಾರ್ಮಿಕ ಪುರೋಹಿತರು ಪಂಡಿತರೆಂಬ ಹೆಸರುಗಳಿಂದ ಕರೆಯುವುದುಂಟು.

ಸಸ್ಯೌಷಧಿಯಲ್ಲಿ ಮುಖ್ಯವಾಗಿ ಗಮನಿಸುವುದೇನೆಂದರೆ ಗಿಡಮೂಲಿಕೆಗಳ ಜ್ಞಾನ ಇರಲೇಬೇಕು. ಸಸ್ಯಗಳ ಯಾವ ಭಾಗವು ಹೆಚ್ಚು ಪರಿಣಾಮಕಾರಿಯಾದ ಫಲಿತಾಂಶವನ್ನು ನೀಡುವುದೆಂಬ ಅಂಶ ತಿಳಿದುಕೊಂಡಿರಬೇಕು. ಈ ರೀತಿ ತರಬೇತಿ ಮಾಹಿತಿ ಪಡೆದವರೆಲ್ಲ ಮೇಲಿನ ಹೆಸರುಗಳಿಂದ ಪರಿಚಯಿಸಲ್ಪಡುತ್ತಾರೆ. ಈ ವೈದ್ಯರೆಲ್ಲ ತಮ್ಮದೇ ಆದ ವೈದ್ಯಕೀಯ ಚಿಕಿತ್ಸಾ ಕ್ರಮಗಳನ್ನು ರೂಢಿಸಿಕೊಂಡಿರುತ್ತಾರೆ. ಈ ಸಸ್ಯವೈದ್ಯ ಪದ್ಧತಿಯಲ್ಲಿ ಎಲೆ, ಚಿಗುರು, ನಾರು ಬೇರು, ತೊಗಟೆ, ಕಾಯಿ, ಬೀಜ, ಹೂ ಇತ್ಯಾದಿಗಳನ್ನು ಸಂಗ್ರಹಿಸಿ ಅವುಗಳನ್ನು ಒಣಗಿಸಿ ಕುಟ್ಟಿ ಪುಡಿ ಮಾಡಿ ಹಾಲ್ಲಿನಲ್ಲೂ ಇಲ್ಲವೇ ನೀರಿನಲ್ಲಿ ಕುದಿಸಿ, ಕುದಿಸಿದ ನೀರು ಅರ್ಧಕ್ಕೆ ಬಂದಾಗ ಅದರ ರಸವನ್ನು ತೆಗೆದು ರೋಗಿಗೆ ನಿರ್ದಿಷ್ಟ ವೇಳೆಯಲ್ಲಿ ಕೊಡುವುದುಂಟು. ಇಂದಿನ ಜನರು, ರಾಜ್ಯಕಾರಣಿಗಳು, ನಿಸರ್ಗಚಿಕಿತ್ಸೆ ಮಾಡಿಕೊಳ್ಳಲು ಅಂತಹ ಚಿಕಿತ್ಸಾ ಘಟಕಗಳಿಗೆ ಹೋಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಈ ರೀತಿ ಎಲ್ಲಾ ವರ್ಗಗಳಲ್ಲಿಯೂ ಸಸ್ಯ ಜಾನಪದ ವೈದ್ಯದಲ್ಲಿ ಔಷಧಿಯನ್ನು ತಯಾರಿಸಲು ನೆರವಾಗುವ ಸಸ್ಯವೃಕ್ಷಗಳ ತೊಗಟೆ, ನಾರು, ಬೇರು, ಚಿಗುರು, ಹಣ್ಣು ಹೂ, ಕಾಯಿ, ಬೀಜ, ಎಲೆ ಇತ್ಯಾದಿ ಈ ಕೆಳಗಿನ ರೀತಿಯಲ್ಲಿ ಕೊಡಬಹುದು.

ಬೇವಿನಮರ, ಹುಣಸೆಮರ, ಶ್ರೀಗಂಧ, ಬೇಲಮರ ಬಸುರಿ ಮರ, ಹಲಸಿನ ಮರ, ಆಲ, ಅತ್ತಿ, ಅರಳಿ, ಅಶೋಕ, ಮುತ್ತಂಗ, ಮತ್ತಿ ಬಕಲ, ಬನ್ನಿ, ನೆಗ್ಗಿ ಬೂರುಗ, ಪಾರಿಜಾತ ಎಕ್ಕ ಅನೇಕವು ವೃಕ್ಷಗಳು. ಇನ್ನೂ ಅದೆಷ್ಟೋ ಬಳ್ಳಿಗಳಲ್ಲಿ ಔಷಧಿಗಳಾಗಿ ಬಳಕೆಯಲ್ಲಿವೆ. ಅಮೃತಬಳ್ಳಿ ಸರ್ಪಗಂಧಿ ಇತ್ಯಾದಿ.

ಹೂಗಳಲ್ಲಿ ಅವರೆ ಹೂ, ತಾವರೆ ಹೂ, ಬಾಳೆ ಹೂ, ಅಗಸೆ ಹೂ ಎಕ್ಕದ ಹೂ, ಪಾರಿಜಾತ, ನಂದಿಬಟ್ಟಲು, ತುಂಬೆ, ಮಲ್ಲಿಗೆ, ಜಾಜಿ, ಗುಲಾಬಿ ಕೆಂಪುಕಣಗಿಲೆ ದಾಸವಾಳ, ವಿಶೇಷವಾಗಿ ಬಿಳಿದಾಸವಾಳ.

ಕಾಯಿಗಳಲ್ಲಿ ಕೂಡ, ಗುಳಕಾಯಿ, ಅಳಲೆಕಾಯಿ, ಪರಂಗಿ (ಪಪ್ಪಾಯಿ) ಕಾಡುಹಾಗಲಕಾಯಿ, ಗೊಂಚಲಹೀರೆಕಾಯಿ, ಇವೆಲ್ಲ ಕಾಯಿಗಳಲ್ಲಿ ಬರುವ ಔಷಧಿಗಳು.

ಸೊಪ್ಪು ಮತ್ತು ಎಲೆಗಳ ಬಗ್ಗೆ ಹೇಳುವುದಾದರೆ ಮದರಂಗಿ ಅಗಸೆ, ಒಂದೆಲಗ, ದೊಡ್ಡಪತ್ರೆ, ಬೇವಿನ ಚಿಗುರು, ಮಾವಿನ ಚಿಗುರು, ಬೇವಿನ ಎಲೆ, ನೆರಳೆ ಚಿಗುರು ಹಣ್ಣು ಬೀಜ ಎಲ್ಲವೂ ತುಳಿಸಿ ಎಲೆ, ಕಾಂಡ, ಬೇರು ಕೂಡ ಇವುಗಳೊಂದಿಗೆ ಔಷಧಯುಕ್ತವೆ ಸಾಂಬಾರ ಪದಾರ್ಥಗಳೆಲ್ಲವೂ ಔಷಧಿಗಳೇ !

ಈ ಹಿಂದೆ ಹೇಳಿದ ಪಟ್ಟೆ ಅಷ್ಟೇ ಅಲ್ಲ ಅದೆಷ್ಟೋ ರೀತಿಯ ಸಸ್ಯಗಳು ಇನ್ನೂ ಇವೆ. ಈ ಮೇಲೆ ಹೇಳಿದ ಕೆಲವು ಸಸ್ಯಗಳಲ್ಲಿ ಸಸ್ಯದ ಸಮಗ್ರ ಭಾಗಗಳು ಔಷಧದಲ್ಲಿ ನೆರವಾದರೆ ಕೆಲವೊಮ್ಮೆ ಬೇರು ಬಳಸಿದರೆ, ಎಲೆಗಳು ಬಳಸುವುದಿಲ್ಲ ಮತ್ತು ಕೆಲವೊಮ್ಮೆ ಕಾಯಿ ಬಳಸಿದರೆ ಹಣ್ಣು ಮತ್ತು ಬೀಜಗಳನ್ನು ಬಳಸುವದಿಲ್ಲ.

ಇನ್ನೂ ಆಹಾರ ಪಾನಿಯಗಳಲ್ಲಿ ಹೇಳುವುದಾದರೆ ಕುದಿಯುವ ಹಾಲಿಗೆ ಅರಿಶಿಣಪುಡಿ, ಮೆಣಸು, ಉಪ್ಪು ಹಾಕಿ ಕುದಿಸಿ ಉಗುರು ಬೆಚ್ಚಗಿರುವಷ್ಟೆ, ಬೆಚ್ಚಗಿರುವಾಗಲೆ, ಕುಡಿಯಬೇಕು. ಇದರಿಂದ ಮಕ್ಕಳ ಕಫ, ದಮ್ಮು ಮುಂತಾದ ಸ್ವಾಸ್ಥಕ್ಕೆ ಸಂಬಂಧಿಸಿದ ಕಾಯಿಲೆ ತಡೆಗಟ್ಟಬಹುದು. ಮಕ್ಕಳಲ್ಲಿ ಉಂಟಾಗುವ ಪದೆ ಪದೆ ಕಿವಿ ನೋವಿಗೆ ತಾಯಿಯ ಎದೆಹಾಲಿನಲ್ಲಿ ಒಂದು ಚಿಕ್ಕ ಹರಳುಪ್ಪು ಕರಗಿಸಿ ಕಿವಿಗೆ ಬಿಡುವುದರಿಂದ ಕಿವಿಶೂಲೆ ಕಡಿಮೆಯಾಗುತ್ತದೆ.

ನಾವು ಪ್ರತಿದಿನ ಆಹಾರದಲ್ಲಿ ಬಳಸುವ ಕರಿಬೇವು ಕೊತ್ತಂಬರಿ ಸೊಪ್ಪು, ಸಾಸಿವೆಗಳು, ನಮ್ಮ ಆಹಾರದಲ್ಲಿನ ವಿಷ (ಕೆಟ್ಟ) ಗುಣ ಹೀರುತ್ತವೆ.

ಎಕ್ಕದ ಹಾಲು ಕೂಡ ಔಷಧಯುಕ್ತವೇ ಆಗಿದೆ. ಕಾಲಿಗೆ ಮುಳ್ಳು ಚುಚ್ಚಿ ಒಳಗೆ ಮುರಿದರೆ ಎಕ್ಕದ ಹಾಲು ಹಾಕಿದರೆ ಮುಳ್ಳು, ತಂತಾನೇ ಮೇಲೆ ಬರುತ್ತದೆ. ಉಗುರು ಸುತ್ತಿಗೆ ಗೋಧಿ ಹಿಟ್ಟಿನಲ್ಲಿ ಎಕ್ಕದ ಹಾಲು ಹಾಕಿ ಉಗುರಿಗೆ ಕಟ್ಟಿದರೆ ಉಗುರೆಲಾ ಸುತ್ತು ಕಡಿಮೆಯಾಗುತ್ತದೆ.

ಹಾಲಿಗೆ ಹೆಪ್ಪ ಹಾಕಿದಾಗ, ಹಾಲಿನೊಳಗಿನ ಬ್ಯಾಕ್ಟೇರಿಯಾಗಳು ಅಭಿವೃದ್ಧಿ ಹೊಂದಿ ಮೊಸರಾಗುತ್ತದೆ. ದ್ವಿದಳ ಧಾನ್ಯಗಳನ್ನು ಕೆಲಕಾಲ ಮುಚ್ಚಿಟ್ಟರೆ ಬಾಲ ಹುಳುಗಳು ಉತ್ಪನ್ನವಾಗುತ್ತವೆ. ಆ ಧಾನ್ಯಗಳನ್ನು ಬೀಸಿ ರವೆಯಾಗಿ ಮಾರ್ಪಟ್ಟಾಗ ಅದರಲ್ಲಿಯೂ ಜೀವ ವಿಕಾಸಗೊಂಡು ಗೊಂಡಾಳಿಯಂತಹ ಹುಳುಗಳಾಗುತ್ತವೆ. ಹಣ್ಣು ಹಂಪಲುಗಳು ಹೆಚ್ಚು ಮಾಗಿದಾಗ ಕೆಲ ಸಮಯದಲ್ಲೇ ಕ್ರಿಮಿ ಕೀಟಗಳೂ ಬೆಳೆಯುತ್ತವೆ. ಹೀಗೆ ಜೀವ ವಿಕಾಸಕ್ಕೆ ಸಾಧ್ಯ ಪರಿಸರವೇ ಕಾರಣ.

ಸಸ್ಯಪರಿಸ : ವಚನಕಾರರು.

ಬಸವಾದಿಶರಣರಿಗೆ ಸೃಷ್ಟಿಯ ಉಗಮದ ಬಗ್ಗೆ ಚಿಂತಿಸಿದಂತೆ ಪರಿಸರ ಕುರಿತು ಚಿಂತಿಸಿದ್ದಾರೆ. ಅವರಿಗೆ ಅಗಾಧವಾದ ಪರಿಸರ ಕಾಳಜಿ ಇತ್ತು. ಸೃಷ್ಟಿಯ ಮೂಲ, ಅವರ ವೈಚಿತ್ರ್ಯ ವಿಸ್ಮಯಗಳನ್ನು ವಚನಗಳಲ್ಲಿ ಪ್ರಸ್ಥಾಪಿಸಿದಂತೆ ಸಸ್ಯ ಪರಿಸರದ ಹಲವಾರು ವಿಸ್ಮಯಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಮಹಾದೇವಿ ಆಕ್ಕನ ವಚನವೊಂದು ಸಷ್ಟಿಗಳ ಸ್ವರೂಪ ಅವುಗಳ ಸತ್ಯ ಕುರಿತು ಹೇಳವ ಪರಿ ಹೀಗಿದೆ.

> "ಈಳೆನಿಂಬೆ ಮಾವು ಮಾದಲಕ್ಕೆ
> ಗುಳಿನೀರದರೆದವರಾರಯ
> ಕಬ್ಬು ಬಾಳೆ ಹಲಸುನಾರಿವಾಳಕ್ಕೆ
> ಸಿಹಿ ನೀರನರೆದವರರಯ್ಯ
> ಕಳವೆ ಶಾವ್ಯನ್ನಕ್ಕೆ ಓ ಗರದ ಉದಕವನೆರೆದವರಾರಯ್ಯ
> ಉರುಗ ಮಲ್ಲಗೆಪಚ್ಚೆಗೆ
> ಪರಿಮಳದುದ ಕವನೆರೆದವರಾರಯ್ಯ".[೧೦೨]

102 ಅಕ್ಕಮಹಾದೇವಿ ವಚನ – ಶಿವಶರಣೆಯರ ವ.ಸಂ.೫, ಸಂ.ಡಾ.ವೀರಣ್ಣ ರಾಜೂರ್, ವ.ಸಂ.೬೬, ಪು.ಸಂ.೨೫.

“ಮಾಹದೇವಿ ಅಕ್ಕನ ಈ ವಚನದಲ್ಲಿ ಅನ್ವೇಷಕ ಬುದ್ದಿ ಇದೆ ವೈವಿಧ್ಯಮಯವಾದ ಸಸ್ಯಗಳ ಸ್ವರೂಪ ಅವುಗಳ ಅಂತಃ ಸತ್ವ ಕುರಿತ ಚರ್ಚೆಗಳ ವಿವರವಿದೆ.”[೧೦೩]

ಪ್ರತಿಯೊಂದು ಆಹಾರ ಧಾನ್ಯಗಳಲ್ಲಿ ಹಣ್ಣು-ಹಂಪಲುಗಳಲ್ಲಿ ಜೀವಕಣಗಳು ಇದ್ದೇ ಇರುತ್ತವೆ. ಅಲ್ಲದೆ ನಮ್ಮ ಶರೀರದಲ್ಲೂ ಅನೇಕ ತರಹ ಜೀವ-ಜಂತುಗಳು ಹುಟ್ಟಿ ನಾಶವಾಗುತ್ತಲೇ ಇರುತ್ತವೆ. ಇದನ್ನು ಕಂಡು ದಸರಯ್ಯ ತನ್ನ ವಚನದಲ್ಲಿ ಹೀಗೆ ಹೇಳಿದ್ದಾನೆ.

“ಎಲುವು, ನರ ಚರ್ಮ, ಮಜ್ಜೆ, ಮಾಂಸಗೊಳಗಾದ ಕ್ರಿಮಿ”[೧೦೪] – ತರು – ಲತೆ ಸ್ಥಾವರಜಿವಂಗಳೆಲ್ಲ ನಿನ್ನ ಕಾರುಣ್ಯದಿಂದ ಬಗೆದವು. ಎಂಬ ಭಾವದವನಾಗಿದ್ದ, ದಸರಯ್ಯಾ ಗಿಡ-ಮರಗಳೆಲ್ಲವೂ ಅವು ದೇವರ ಸ್ವತ್ತು, ತೊಟ್ಟುಬಿಟ್ಟು ಬಿದ್ದರೆ ಅದನ್ನು ಎತ್ತಿಕೊಂಡವನ ಸ್ವತ್ತು ಎಂಬ ಭಾವದಿಂದ ಬಾಡಿದ ಒಣಗಿದ ಪುಷ್ಪಗಳಿಂದಲೇ ಪೂಜಿಸುವ ಕಾಯಕದವನಾಗಿದ್ದನು. ಹಾಗೂ ಕೊಲ್ಲುವ ರಕ್ಷಿಸುವ ಹೊಣೆ ನಿನ್ನದಲ್ಲ ಎಂಬ ಭಾವದವನಾಗಿದ್ದನೆಂಬುದು ವೇದ್ಯವಾಗುತ್ತದೆ.

ಯಾವದೇ ರೀತಿಯ ಆಹಾರವನ್ನು ನಾವು ಸೇವಿಸಬೇಕಾದರೆ, ಅದರಲ್ಲಿ ಜೀವಕೋಶಗಳಿರಬೇಕು. ನಾವು ಶಕ್ತಿ ಹೀನರಾದಾಗ, ಕಾಯಿಲೆ ಬಿದ್ದಾಗ ತೆಗೆದುಕೊಳ್ಳುವ ಆಹಾರ ಜೀವಕೋಶಗಳಿಂದ ಕೂಡಿದ ಪೌಷ್ಟಿಕ ಆಹಾರವನ್ನೇ ಸೇವಿಸುತ್ತವೆ. ಸುಮಾರು ಎಪ್ಪತ್ತು ವರ್ಷಗಳ ಹಿಂದೆ, ಭಾರತದ ವಿಜ್ಞಾನಿ ಸರ್ ಜಗದೀಶ್ಚಂದ್ರ ಬೋಸರು, ಗಿಡ ಮರ ಬಳ್ಳಿಗಳು ಮನುಷ್ಯನಂತೆಯೇ ಬಾಹ್ಯದ ಆಗು ಹೋಗುಗಳೀಗೆ ಸ್ಪಂದಿಸುತ್ತವೆ. ಅವುಗಳಿಗೂ ಜೀವವಿದೆ ಎಂದು ಪ್ರಯೋಗದಿಂದ ಖಚಿತಪಡಿಸಿದ್ದುಂಟು. ಇತ್ತೀಚಿನ ದಿನಗಳಲ್ಲಿ ನಮ್ಮ ದೇಶದಲ್ಲೇ ಪರಾಗಸ್ಪರ್ಶದಿಂದ ನಾವು ಎರಡರಷ್ಟು ಹೆಚ್ಚು ಫಸಲು ಪಡೆಯುವುದನ್ನು ಕೆಲ ಪೈರುಗಳಿಗೆ ಅನ್ವಯಿಸಿ ಬೆಳೆಗಾರರಿಗೆ ಆಗಾಗೆ ಕೃಷಿಕರಿಗೆ ಪ್ರಸಾರ ಮಾಧ್ಯಮಗಳ ಮೂಲಕ ಸಲಹೆ ನೀಡುತ್ತಿದ್ದಾರೆ. ರೈತರಿಗೆ ಸಲಹೆ, ಕೃಷಿರಂಗದಂತಹ ಕಾರ್ಯಕ್ರಮದಲ್ಲಿ ಕೊಡುತ್ತಿದ್ದಾರೆ.

---

103 ವಚನಗಳಲ್ಲಿ ಸಸ್ಯ ವಿಜ್ಞಾನ – ಡಾ. ಸಿ.ಎಸ್.ಪಾಟೀಲ್, ಸಂ.ಡಾ.ವೀರಣ್ಣ ರಾಜೂರ್, ಪು.ಸಂ.೧೩೪.

104 ದಸರಯ್ಯನ ವಚನ – ಸಂಕೀರ್ಣ ವ.ಸಂ.೨, ಸಂ.ಡಾ.ಎಸ್.ವಿದ್ಯಾಶಂಕರ ವ.ಸಂ.೧೦೬೪, ಪು.ಸಂ. ೩೩೭.

ಹೀಗೆ ಮನುಷ್ಯ ಸಂಬಂಧ ಸಸ್ಯದೊಂದಿಗೆ ಇಡೀ ಜೀವಜಾಲದ ಸಂಬಂಧವಾಗಿ ಬಸವಣ್ಣ ಅಲ್ಲಮ ಮೋದಲಾದ ವಚನಕಾರರು ಹೇಳಿರುವಂತ್ಯೆ ಅಕ್ಕ ಕೂಡ ಹೀಗೆ ಹೇಳಿರುವುದನ್ನು ಗಮನಿಸಬಹುದು.

"ವನವೆಲ್ಲಾ ನೀನೆ, ಮನದೊಳಗಣ ದೇವತರುವೆಲ್ಲಾ ನೀನೆ
ತನುವಿನೊಳಗಾಡುವ ಖಗಮೃಗವೆಲ್ಲಾ ನೀನೆ
ಚನ್ನಮಲ್ಲಿಕಾರ್ಜುನಾ
ಸರ್ವಭರಿತನಾಗಿ ಎನಗೇಕೆ ಮುಖದೋರೆ?"[೧೦೫]

"ತರು-ಲತೆ ಪಕ್ಷಿ ಸಂಕುಲ .ಖಗಮೃಗಾದಿಗಳ" ಇರುವನ್ನು ವರ್ಣಿಸಿದ್ದು, ಅವುಗಳ ಭಾಷೆ ಗೊತ್ತಿರುವಂತೆ, ಅವುಗಳ ಜೊತೆಗೆ ತಾನೂ ಕೂಡ ವ್ಯವಹರಿಸಬಹುದೆಂದು ಪ್ರಕೃತಿ ಜ್ಞಾನ ಇತ್ತು ಎಂಬುದು ಗೊತ್ತಾಗುತ್ತದೆ. ಮರಗಿಡ ಬಳ್ಳಿ ಧಾನ್ಯಂಗಳ ಕುರಿತು ಕನ್ನಡ ಕಾವ್ಯಗಳಲ್ಲಿ ನೂರಾರು ಗಿಡಮರಗಳ ಹೆಸರುಗಳು ಕಾಣಿಸಿಕೊಳ್ಳುತ್ತವೆ. ಇವುಗಳಲ್ಲಿ ಬಹುಪಾಲು ಕನ್ನಡನಾಡಿನಲ್ಲಿಯೇ ಬೆಳೆಯುತ್ತಿದ್ದವೆಂದೂ, ಕವಿಗಳಿಗೆ ಪರಿಚಿತ್ತವಾಗಿದ್ದವೆಂದೂ ತಿಳಿದುಬಂದಿವೆ.

ಹರಿಹರನು ಹೇಳುವ ಅನೇಕ 'ಪುಷ್ಪರಗಳೆಗಳು' ಶಿವನಿಗೆ ಅರ್ಪಿತವೆಂದು ಕೆಲವಂತೂ ಶಿವನ ಪ್ರತ್ಯಕ್ಷ ಅಂಗಾಂಗಗಳಿಗೆ ಮೀಸಲಾದವು. ಕತ್ತುರಿ (ತಿಲಕ) ಇರುವಂತಿಗೆ ಮುಡಿಯಲ್ಲಿ ಶೋಭಿಸಿತು ಸೇವಂತಿಗೆಯು ಅಕ್ಕಪಕ್ಕಗಳಿಗೆ ಅನುವಾಯಿತು. ಮಲ್ಲಿಗೆಯು ಚಂದನವಾಯಿತು. ಮೊಲ್ಲೆಮೊಗ್ಗು ನಾಗಕುಂಡಲವಾಯಿತು. ತಾವರೆ ಚರಣವನ್ನು ಸೇರಿತು. ಕುಂಡಲ ಪಕ್ಕಗಳನ್ನು ಅಲಂಕರಿಸಿತು ಮರುಗಲು ಗಜಚರ್ಮವಾಯಿತೆನ್ನುತ್ತಾನೆ.[೧೦೬]

ವಚನಕಾರರ ಅಭಿಪ್ರಾಯವೂ ಇದಕ್ಕೆ ಹೊರತಾಗಿಲ್ಲ ಈ ಎಲ್ಲ ಪುಷ್ಪಗಳಲ್ಲಿ ಒಂದೊಂದು ಹೂ ಒಂದೊಂದು ಅಂಗಾಂಶಗಳಾಗಿರುವಾಗ ಅವುಗಳನ್ನು ಗಿಡದಿಂದ ಬೇರೆ ಮಾಡಲು ಸಾಧ್ಯವೇ ಪ್ರತಿಯೊಂದು ಹೂ ಗಿಡದಲ್ಲಿಯೇ ನೋಡಿ ಸಂತೋಷಪಡಬೇಕೆ ಹೊರತು ಅವುಗಳನ್ನು ಕಿತ್ತು ಹಾಕಲು ಹೋಗಬೇಡವೆಂದಿದ್ದಾರೆ. ಇದು ಕೂಡ ಪೂಜೆಯೇ ಆಗುವುದೆಂದು ವಚನಕಾರರ ಅಭಿಪ್ರಾಯ. ಇದನ್ನು ಗಮನಿಸಿದರೆ ವಚನಕಾರರಿಗೆ ಪರಿಸರದ ಮೇಲಿನ ಪ್ರೀತಿ ವ್ಯಕ್ತವಾಗುತ್ತದೆ.

---

[105] ಅಕ್ಕಮಹಾದೇವಿ ವಚನ – ಶಿವಶರಣೆಯರ ವ.ಸಂ.೫, ಸಂ.ಡಾ.ವೀರಣ್ಣ ರಾಜೂರ್, ವ.ಸಂ.೩೦೦, ಪು.ಸಂ.೨೯೭.

[106] ವಿವರಕ್ಕಾಗಿ ನೋಡಿ – ಹರಿಹರನ ರಗಳೆಗಳು –ಸಂ. ಎಮ್.ಎಮ್.ಕಲಬುರ್ಗಿ, ಕ.ವಿ.ವಿ.ಹಂಪಿ.

ಬಸವಣ್ಣ ಮರದ ಬಗ್ಗೆ ತನ್ನ ಅಭಿಪ್ರಾಯ ಹೀಗೆ ವ್ಯಕ್ತಪಡಿಸುತ್ತಾನೆ. "ಮರಕ್ಕೆ ಬೇರು ಬಾಯಿಯೆಂದು"[೧೦೭] ಮರ ಯಾವುದಾದರೂ ಸರಿ ಅದಕ್ಕೆ ನೀರು ನೆರೆದರೆ ಅದಕ್ಕೆ ಬಾಯಿಯೇ ಬೇರು–ಬೇರಿನಿಂದ ನೀರು ಹೀರಿ ಅದರೊಂದಿಗೆ ಮಣ್ಣಿನಲ್ಲಿರುವ ಪೋಷಕಾಂಶ ಹೀರಿ ಮೇಲೆ ಚಿಗುರುತ್ತದೆ. ಇದರೊಂದಿಗೆ ಆ ಮರದ ಎಲೆಗಳೆಲ್ಲ ಉದುರಿದಾಗ ನೀರಿನೊಂದಿಗೆ, ಮಣ್ಣಿನೊಂದಿಗೆ ಬೆರೆತು 'ಕಾಂಪೋಸ್ಟಗೊಬ್ಬರ' ವಾಗುತ್ತದೆ. ಮನುಷ್ಯನಿಗೆ ಬೇಕಾಗುವ ಶುದ್ಧ ಗಾಳಿ ಕೊಡುತ್ತದೆ. ಅದಕ್ಕೆ ಪಂಪ ಮಾಮರದ ಕುಳಿತಾಗ ತೇಲಿ ಬರುವ ಗಾಳಿಗೆ ಯಾವ ರೀತಿಯ ತೆರಿಗೆ ಕೊಡಬೇಕಾಗಿಲ್ಲ. ಆದರೆ ಅಂತಹ ಗಾಳಿ ತೇಲಿ ಬರುವುದಕ್ಕೆ ನಾವು ಮರಗಳು ಬೆಳೆಸಲೇಬೇಕು ಎಂದು ಹೇಳಿರುತ್ತಾನೆ.

ಅರಳಿ ಮರವನ್ನು ಕುರಿತು ಅಲ್ಲಮನ ವಚನವೊಂದು ಹೀಗೆ ಅರ್ಥೈಸುತ್ತದೆ ನಶ್ವರವಾಗುವ ದೇಹದಲ್ಲಿ ಜೀವವೆಂಬ ಹಂಸ ವಾಸವಾಗಿದ್ದಾನೆ. ಮನಸ್ಸು ಆತನಗೂಡು ಆ ಮನದಲ್ಲಿ ಒಂದು ಉಯ್ಯಾಲೆ ಅದಕ್ಕೆ ಶುಭ ಕಾರ್ಯಗಳೇ ಹಗ್ಗ, ವಾಸನೆಗಳೇ ಕೂರುವ ಮಣೆ ಮಾಯ ಚಂಚಲತೆ ಆ ಉಯ್ಯಾಲೆಯಲ್ಲಿ ಕುಳಿತು ಕ್ರೀಡಿಸುತ್ತಾಳೆ. ಇನ್ನುಳಿದ ವ್ಯಾಮೋಹಕ್ಕೆ ಮನಸ್ಸು ಹರಿದಾಡುತ್ತದೆ ಎಂದು ಒಂದು ಅರ್ಥ.

ಈಗ ಮರದ ಕಡೆ ಬರುವುದಾದರೇ ಅರಳಿ ಮರಗಳೂ ಸಾಮಾನ್ಯವಾಗಿ ದೇವಾಲಯಗಳ ಸಮೀಪ ಕಂಡುಬರುತ್ತವೆ. ಅರಳಿಮರಗಳ ಸುತ್ತಲೂ ಕಟ್ಟೆಕಟ್ಟಿರುತ್ತಾರೆ. ಜನರು, ಮುಂಜಾನೆ ಸಂಜೆಯವೇಳೆ, ಕಟ್ಟೆಯ ಮೇಲೆ ಕುಳಿತು ವಿಶ್ರಾಂತಿ ಪಡೆಯುತ್ತಾರೆ. ಅರಳಿಮರ ಒಂದು ಪವಿತ್ರಮರ ಎಂದು ನಂಬಲಾಗಿದೆ.

ಅರಳಿಮರವನ್ನು ಸುತ್ತುವುದು ಅದಕ್ಕೆ ಕಟ್ಟೆಕಟ್ಟುವುದು ಪೂಜೆ ಮಾಡುವುದು ಉಪನಯನ ಮಾಡುವುದು ಕ್ರಮಗಳನ್ನು ಜನರು ಅಲ್ಲಲ್ಲಿ ಆಚರಿಸುತ್ತಾರೆ. ಅರಳಿ ಮರವನ್ನು ಬಿಲ್ವ ಅಥವಾ ಬೇವಿನ ಮರಕ್ಕೆ ವಿವಾಹ ಮಾಡಿಕೊಡುವ ಪದ್ಧತಿಯು ಇದೆ. ಅರಳಿ ಮರನವನ್ನು ಕಡಿದರೆ ಅದರಲ್ಲಿ ವಾಸವಾಗಿರುವ ದೇವತೆಗಳ ಶಾಪಕ್ಕೆ ತುತ್ತಾಗುತ್ತೇವು ಎಂದು ಜನರ ಅಭಿಪ್ರಾಯ ಕಾರಣ ಅರಳಿಮರ ಒಂದು ಆಮ್ಲಜನಕದ ಕಾರ್ಖಾನೆಯಿದ್ದಂತೆ. ನಮಗೆ ಅವಶ್ಯಕವಾದ ಆಮ್ಲಜನಕವನ್ನು ಹೊರಬಿಡುತ್ತಿರುತ್ತದೆ. ಹಕ್ಕಿಗಳಿಗೆ ಅರಳಿಹಣ್ಣೆಂದರೆ ಬಲು ಇಷ್ಟ. ಇದರ ಬೀಜ ಎಲ್ಲೆಂದರಲ್ಲಿ ಬಿದ್ದು

[107] ಬಸವಣ್ಣನವರ ವಚನ ಸಂ.೧ ಸಂ. ಎಮ್.ಎಮ್.ಕಲಬುರ್ಗಿ, ವ.ಸಂ.೪೨೦, ಪು.ಸಂ.೧೦೨.

ಎಲ್ಲೆಲ್ಲೂ ಇದರ ಸಸಿಗಳು ಕಂಡುಬರುತ್ತವೆ. ಅರಳಿ ಮರದ ವಿವಿಧ ಭಾಗಗಳೂ ಔಷಧವಾಗಿ ಬಳಸುತ್ತಾರೆ. ಚರ್ಮರೋಗಗಳಿಗೆ ಕೈಕಾಲು ನೋವಿಗೆ ಅದರ ತೊಗಟೆಯನ್ನು ಸಣ್ಣಗೆ ಅರೆದು ಹಚ್ಚುವುದುಂಟು. ಇದರ ಹಣ್ಣುಗಳು ತಿನ್ನುತ್ತಿದ್ದರೆ ದೇಹಾರೋಗ್ಯದ ಜೊತೆಗೆ ಸಂತಾನಪ್ರಾಪ್ತಿಯಾಗುತ್ತದೆ. ಎಂದು ಜನ ನಂಬಿದ್ದಾರೆ.

ಅಲ್ಲಮನು ಅರಳಿಮರದ ಕುರಿತು ಮಾತನಾಡಿದರೆ, ಬಸವಣ್ಣ ಅತ್ತಿ ಮರದಿಂದ ಉಪಯೋಗ ಕುರಿತು ಹೇಳಿದ್ದಾನೆ.

ಎನ್ನ ಚಿತ್ತವು ಅತ್ತಿಯ ಹಣ್ಣ ನೋಡಯ್ಯಾ ಅತ್ತಿ ಹಣ್ಣು ಕಣ್ಣಲ್ಲ ಅದೊಂದು ಪುಷ್ಪಗುಚ್ಚ ಎಂಬುದು ಅರಿಯಬೇಕು ಎರಡನೆಯದಾಗಿ ಹೂವು ಹೊರ ನೋಟಕ್ಕೆ ಕಾಣಿಸವು. ಗುಚ್ಚವನ್ನು ಸೀಳಿದಾಗ ಮಾತ್ರ ಕಣ್ಣಿಗೆ ಬೀಳುತ್ತದೆ. ಈ ಕಾಯಿಯ ಬೆಳವಣಿಗೆಯಿಂದ ಪಕ್ವಗೊಂಡಾಗ ಬಳಿಕ ತಿನ್ನುತ್ತೇವೆ. ಅತ್ತಿಯಕಾಯಿ ಅಥವಾ ಅಂಜೂರದ ಕಾಯಿ (ಖಸಕಾದ) ಯಿಂದ ದಿನನಿತ್ಯದ ತರಕಾರಿಯಾಗಿ ಪಲ್ಯ, ಸಾಂಬಾರ ತಯಾರಿಸಿ, ಊಟದಲ್ಲಿ ಬಳಸುವುದರಿಂದ ಹೊಟ್ಟೆ ಹುಣ್ಣು (ಅಲ್ಸರ್) ನಂತಹ ರೋಗ ಕಡಿಮೆಯಾಗಬಹುದು. ಕಲ್ಲು ಸಕ್ಕರೆಯೊಂದಿಗೆ ಹಣ್ಣಾದ ಅಂಜೂರ ಅಥವಾ ಅತ್ತಿ ಹಣ್ಣು ಸೇವನೆಯಿಂದ ಮೂಲ ವ್ಯಾದಿಯಿಂದಾಗುವ ರಕ್ತಸ್ರಾವ ಕಡಿಮೆಯಾಗುತ್ತದೆ. ಇವತ್ತು ಆಯುರ್ವೇಧದಲ್ಲಿ ಬಳಕೆಯಲ್ಲಿದೆ.

ಈ ಸಂದರ್ಭದಲ್ಲಿ 'ಹಣ್ಣಿನ' ರಚನೆಯನ್ನು ಸ್ವಲ್ಪ ಸೂಕ್ಷ್ಮವಾಗಿ ಪರಿಶೀಲಿಸಬೇಕು ತೊಟ್ಟಿಗೆ ಮುಂತುದಿಯಲ್ಲಿ ಸಣ್ಣ ರಂಧ್ರದ ಮೂಲಕ ಸಣ್ಣ ರೆಕ್ಕೆ ಹುಳುಗಳೂ ಒಳಗೆ ಪ್ರವೇಶಿಸಿ ಮೊಟ್ಟೆ ಇಡುತ್ತವೆ. ಈ ಹಣ್ಣಿನ ಒಳಗೆ ಬಲಿಯುವುದು ಬೀಜವಲ್ಲ, ಹುಳುವಿನ ಮೊಟ್ಟೆ ಬೆಳೆದು ಒಡೆದು ಹಾರುವ ಹುಳುವಾಗಿ ರಂದ್ರದ ಮೂಲಕ ಹೊರಬರುತ್ತವೆ. ಕ್ರಿಮಿಯ ಈ ಚಲನವಲನಗಳಿಂದ ಕೆಲವು ಅಂಡಕೋಶಗಳು ಪರಾಗಸ್ಪರ್ಶಗೊಳ್ಳಬಹುದು. ಇಂಥದೊಂದು ಅಂಡಕೋಶ ಸಾಧಾರಣವಾಗಿ ಬೆಳೆದು ಬೀಜವನ್ನು ಉತ್ಪತ್ತಿ ಮಾಡುತ್ತದೆ. ಅಂದರೆ ನಿಜವಾದ ಹಣ್ಣಾಗಿ ಮಾರ್ಪಾಡು ಹೊಂದುತ್ತದೆ.

ಹೀಗೆ ಬಸವಣ್ಣನು ಒಂದು ಸಾರಿ ಅತ್ತಿ ಹಣ್ಣಿಗೆ ಹೋಲಿಸಿಕೊಂಡು ಇನ್ನೊಂದು ಸಾರಿ ಮಾವಿನ ಕಾಯಿಗೆ ತನ್ನನ್ನು ತಾನು ಈ ರೀತಿ ಅಣ್ಣ ವಚನದಲ್ಲಿ ಹೇಳಿಕೊಂಡಿದ್ದಾನೆ. ಮಾವಿನ ಕಾಯೊಳಗೆ ಒಂದು ಎಕ್ಕೆಯ ಕಾಯಿ, ಬಸವಣ್ಣನು ಶಿವಶರಣರನ್ನು ಮಾವಿನಕಾಯಿ ಈ ರಾಶಿ ಮಧ್ಯೆ

ಬಿದ್ದಿರುವ ಒಂದು ಎಕ್ಕೆಯ ಕಾಯಿಗೆ ಹೋಲಿಸಿಕೊಂಡಿರುವನು. ಎಕ್ಕೆಯ ಕಾಯಿ ಮಾವಿನ ಕಾಯಿಗಳನ್ನು ಹೋಲುವುದು ನಿಜ. ಅದನ್ನು ಯಾರಾದರೂ ಸಾದೃಶ್ಯಮಾತ್ರದಿಂದ ಮಾವಿನಕಾಯಿಯೆಂದೇ ತಿಳಿದು ತಿಂದರೆ ಅತಿಸಾರದಿಂದ ಸಾವೇ ಸಂಭವಿಸುತ್ತದೆ. ಹೀಗೆ ವೇಶಧಾರಿ ಭಕ್ತರಿಂದ ಸಮಾಜದ ಸ್ವಾಸ್ಥ್ಯದ ಮೇಲಾಗುವ ದುಷ್ಪರಿಣಾಮವನ್ನು ಸೂಚಿಸುತ್ತ, ಸತ್ಯ ಶಿವಭಕ್ತರಾಗಬೇಕೆಂದು ಜನರಲ್ಲಿ ವಿನಂತಿಸಿಕೊಳ್ಳುತ್ತ ಕಡೆಯ ಪಕ್ಷ ಶಿವಭಕ್ತರಂತೆ ನಟಿಸುವುದನ್ನಾದರು ಬಿಡಬೇಕೆಂದು ಒತ್ತಾಯಿಸುತ್ತಿರುವರು.

ಚಂಡೇಶ ಪಿಳೆಯ ಹರಿಹರನ ರಗಳೆ ಶಿವಲಿಂಗಕ್ಕೆ ಅರ್ಪಿಸಿದ ಹೂಗಳಲ್ಲಿ ಎಕ್ಕೆ ಹೂ ಇದೊಂದು, ಹೂವಿಗೆ ವಾಸನೆಯೇನೋ ಇದೆ. ಆದರೆ ನನ್ನಂಥವರ ಮೂಗಿಗೆ ಹಿತವಾದದ್ದೇನೂ ಅಲ್ಲ. ಕೀಟಗಳು ನೊಣಗಳು ಎಕ್ಕದ ಹೂವಿಗೆ ಆಕರ್ಷಿತವಾಗುವುದು ಈ ವಾಸನೆಯಿಂದಲೇ.

ಬಯಲು ಸೀಮೆಯ ಕೆಲವೆಡೆ ಹದಿನೈದಡಿ ಎತ್ತರ ಬೆಳೆಯುತ್ತದೆ. ಕಳ್ಳಿಯಂತೆ ಹಾಲು ಸುರಿಸುತ್ತದೆ. ಹಾಲು ವಿಷಸಂಯೋಜಿತವಾದದ್ದು. ಎಕ್ಕದಲ್ಲಿ ಎರಡು ಪ್ರಕಾರ ೧) ಶ್ವೇತಾರ್ಕ (ಬಿಳಿ ಎಕ್ಕ) ಕೆಂಪು ಎಕ್ಕ ಶ್ವೇತಾರ್ಕ ಎಕ್ಕದ ಬೇರಲ್ಲಿ ಗಣಪತಿ ಉದ್ಭವ ವಾಗುತ್ತಾನೆಂದು ನಂಬುಗೆ. ಹರಳು ಗಲ್ಲಿನ ಭೂಮಿಯ ಕೊರಕಲ್ಲುಗಳಲ್ಲಿ ಕೆಲವು ಸಲ ಬೇರುಗಳು ಒಂದರೊಡನೊಂದು ಸಿಕ್ಕು ಹಾಕಿಕೊಂಡು ಬೆಳೆದಿರುತ್ತವೆ. ಇಂಥದೊಂದು 'ಡೊಳ್ಳು' ಹೊಟ್ಟೆಯ ಗಿಡ್ಡು ದೇಹದ ಸೊಟ್ಟ ಹಾಕಿಕೊಂಡು ಬೆಳೆದಿರುತ್ತವೆ. ಹೊಟ್ಟೆಯ ಗಿಡ್ಡು ದೇಹದ ಸೊಟ್ಟ ಕೈಕಾಲು ಗ್ರಂಥಿಗಳ ತೊಂಗು, ಸೊಂಡಿಲ, ದಂತಹ ಒಂದು ಎಕ್ಕದ ಬೇರಿನ ಗಂಟು ಉಂಟಾಗುತ್ತದೆ. ಎಕ್ಕದಗಿಡ ಅಳವಾಗಿ ಬೇರು ಬಿಟ್ಟ ಬೆಳೆಯುವ ಗಿಡ ಇದು ಕಡಿದು ಕಡಿದು ತೆಗೆದಿರಬೇಕಾದರೆ ಇದರ ಬೇರು ಎಲ್ಲೆಲ್ಲೂ ಹರಡಿಕೊಂಡಿರುತ್ತದೆ.

ಅಕ್ಕ ಹೇಳುವಂತೆ ಎಲ್ಲಿಯೂ ಶಾಶ್ವತವಾಗಿ ಬೇರು ಬಿಡಬೇಡವೆನ್ನುತ್ತಾಳೆ. ಕಾರಣ ಮಾನವರಾದ ನಾವುಗಳು ಎಕ್ಕ, ಆಲದಂತೆ, ಬೇರು ಬಿಟ್ಟು ಸಂಬಂಧ ಬೆಳೆಸಬಾರದು. ಅದರಿಂದ ಅಗಲುವಾಗ ನೋವೆ ಅತಿ ಹೆಚ್ಚೆಂದು ಹೇಳಿದ್ದಾಳೆ. ಇದನ್ನೇ ಮುಂದೆ ನಾವು ಹೇಗಿರಬೇಕೆಂದು ಸಸ್ಯದೊಂದಿಗೆ ಹೋಲಿಸಿದ್ದಾಳೆ. ಚಂದನವ ಕಡಿದು ಕೊರೆದು ತೇದಡೆ, ಸೃಷ್ಟಿಯ ಚರಾಚರಗಳೆಲ್ಲ ಒಂದಲ್ಲ ಒಂದು ರೀತಿ ಸೇವೆ ಸಲ್ಲಿಸುತ್ತವೆ. ಶ್ರೀಗಂಧದ ಕೊರಡು ತನ್ನನ್ನು ತಾನು ಸವೆಸಿ ಘಮ್ಮೆನ್ನುವ

ಗಂಧ ಬೀರುತ್ತದೆ ಬಹುಶಃ ಆ ಕೊರಡು ಅಯ್ಯೋ ನನ್ನ ದೇಹ ಸವೆಸಿ ನಾನೇಕೆ ಗಂಧ ಕೊಡಬೇಕೆಂದರೆ ಹೇಗಾದೀತು. ಅದು ಗಂಧ ಬೀರಿದರೆನೇ ಗಂಧವೆನಿಸಿಕೊಳ್ಳುತ್ತದೆ.

"ಚಂದನವ ಕಡಿದು ಕೊರೆದು ತೇದಡೆ
ನೋಂದೆನೆಂದು ಕಂಪ ಬಿಟ್ಟಿತೆ?
ತಂದು ಸುವರ್ಣವ ಕುಡಿದೊರೆದಡೆ
ಬೆಂದು ಕಳಂಕ ಹಿಡಿಯಿತ್ತೆ?
ಸಂದು ಸಂದು ಕಡಿದ ಕಬ್ಬನ್ನು ತಂದು ಗಾಣದಲ್ಲಿಕ್ಕಿ ಅರೆದಡೆ,
ಬೆಂದು ಪಾಕಗೂಳ ಸಕ್ಕರೆಯಾಗಿ ನೊಂದೆನೆಂದು ಸಿಹಿಯ ಬಿಟ್ಟಿತ್ತೇ?
ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು,
ನಿಮಗೇ ಹಾನಿ
ಎನ್ನ ತಂದೆ ಮಲ್ಲಿಕಾರ್ಜುನಯ್ಯಾ
ನೀ ಕೊಂದಡೆಯೂ ಶರಣೆಂಬುದ ಮಾಣೆ ॥"[೧೦೮]

ಚರಾಚರವೆಲ್ಲವೂ ಒಂದರ ಮೇಲೆ ಇನ್ನೊಂದು ಅವಲಂಬಿಸಿವೆ ಎಂಬುದು ಸತ್ಯ. ನಾವು ನಮ್ಮ ಉಪಯೋಗಕ್ಕಾಗಿ ಚಂದನ ಶ್ರೀಗಂಧದ ಮರ ಕಡಿದು ಸಾಣೆಗೆ ಹಚ್ಚಿ ಘಮ್ಮೆನ್ನುವ ಸುವಾಸನೆಗೆ ನಾವಿಂದು ಮಾರು ಹೋಗಿದ್ದೇವೆ. ಇದನ್ನು ತಿಕ್ಕಿದಾಗ ನೊಂದುಕೊಳ್ಳುತ್ತದೆಯೇ? ಇಲ್ಲ ! ಕಾರಣ ಅದು ಉಜ್ಜಿದಷ್ಟು ಸುವಾಸನೆಯೇ ಬೀರುತ್ತದೆ. ಹಾಗಂತ ಶ್ರೀಗಂಧದ ಮರಗಳೆಲ್ಲ ಕಡಿದು ಹಾಕಿದರೆ ಹೇಗೆ ?

ಇನ್ನೂ ಕಬ್ಬನ್ನೂ ತಂದು ಕುಡುಗೋಲಿನಿಂದ ಅದರ ಇಡೀ ಮೆಯ್ಯನ್ನು ಕೆತ್ತಿ ಚಿಕ್ಕಚಿಕ್ಕ ತುಂಡನ್ನಾಗಿ ಮಾಡಿದರೂ ಕೂಡ ಅದು ಸಿಹಿಯಾದ ಪಾಕ, ಸಕ್ಕರೆ, ಬೆಲ್ಲವಾಗುತ್ತದೆ.ಇವೆಲ್ಲವೂ ಕಡಿದಾಗ, ಕಾಸಿದಾಗ, ತೇದಾಗ, ತನ್ನ ನಿಜರೂಪವನ್ನೇ ಹೊರಹಾಕುತ್ತವಲ್ಲ. ಈ ಮನುಷ್ಯ ಮಾತ್ರ ಏಕೆ ತನ್ನ ತಪ್ಪುಗಳನ್ನು ತಿದ್ದಿಕೊಂಡು ಶುದ್ಧವಾಗುತ್ತಿಲ್ಲವೆಂಬ ಕಳಕಳಿ ಅಕ್ಕನದು.

ಇವೆಲ್ಲವೂ ತಮ್ಮ ಮುನ್ನಿನ ರೂಪ ಬಿಡುವುದಿಲ್ಲ. ಆದರೆ ಮನುಷ್ಯ ಇವತ್ತು ಎಷ್ಟೋ ರೂಪಗಳನ್ನು ತಳೆದಿದ್ದಾನೆ. ಪರಿಸರದ ವಿಷಯದಲ್ಲಂತೂ ಬಹಳ ಕ್ರೂರಿಯಾಗಿದ್ದಾನೆ.

---

[108] ಅಕ್ಕಮಹಾದೇವಿ ವಚನ – ಶಿವಶರಣೆಯರ ವ.ಸಂ.೫, ಸಂ.ಡಾ.ವೀರಣ್ಣ ರಾಜೂರ್, ವ.ಸಂ.೧೬೯, ಪು.ಸಂ.೫೨.

ಒಂದು ವೇಳೆ ನಾವು ನಮ್ಮ ಕುಕೃತ್ಯ ತಿದ್ದಿಕೊಳ್ಳದೇ ಹೋದರೆ ಇಡೀ ನಿಸರ್ಗವೇ ತನ್ನ ಪ್ರಭಾವ ನಮ್ಮ ಮೆಲೆ ಖಂಡಿತ ಬೀರುತ್ತದೆ. ಅದು ಯಾವುದೇ ರೂಪದಲ್ಲಾದರೂ ಸರಿಯೇ ನಾವು ಅದನ್ನು ಅನುಭವಿಸಲೇಬೇಕು. ಹೀಗಾಗಬಾರದೆಂದರೆ, ಸಮ್ಮ ನಿಸರ್ಗವನ್ನು ನಾವು ನಮಗಾಗಿ ಕಾಪಾಡಿಕೊಳ್ಳಬೇಕು.

ಧಾರ್ಮಿಕ ಆಚರಣೆಗಳು ಮತ್ತು ಧಾರ್ಮಿಕ ಬರಹಗಳನ್ನು ಅಧ್ಯಯನ ಮಾಡಿದ ವಿದ್ವಾಂಸರು ಸಾಮಾನ್ಯವಾಗಿರುವ ಧರ್ಮ ಮತ್ತು ಪರಿಸರದ ನಡುವೆ ಅದ್ವೈತ ಸಂಬಂಧವನ್ನು ಪ್ರತಿಪಾದಿಸಿದ್ದಾರೆ. ಅಂಬಿಗರ ಚೌಡಯ್ಯನ ಇನ್ನೊಂದು ವಚನ ನಿಸರ್ಗದ ಪೂಜೆಯನ್ನೇ ಹೇಳುತ್ತದೆ.

ಅಂಬಿಗರ ಚೌಡಯ್ಯನ ಇನ್ನೊಂದು ವಚನದಲ್ಲಿ ಹೀಗೆ ವ್ಯಕ್ತವಾಗಿದೆ :

> "ಅರಿಕೆ ಬಿತ್ತಿದ ಗಿಡುವಿನ ಹೂವ ಕೊಯಿದು,
> ಊರೆಲ್ಲರೂ ಕಟ್ಟಿಸಿದ ಕೆರೆಯ ನೀರ ತಂದು,
> ನಾಡೆಲ್ಲರೂ ನೋಡಿರಿಯೆಂದು ಪೂಜಿಸುತ್ತ,
> ಪೂಜಿಸಿದ ಪುಣ್ಯ ಹೂವಿಗೋ? ನೀರಿಗೋ?
> ನಾಡೆಲ್ಲಕ್ಕೋ? ಪೂಜಿಸಿದಾತಗೋ
> ಇದನಾನರಿಯೆ, ನೀ ಹೇಳೆಂದನಂಬಿಗ ಚೌಡಯ್ಯ."[೧೦೯]

ನಿಸರ್ಗವೇ ಇಡೀ ಜಗತ್ತಿಗಾಗಿ ಶುದ್ಧ ಪರಿಸರ ಒದಗಿಸಿಕೊಡುವುದಕ್ಕಾಗಿ ನಿರ್ಮಾಣವಾಗಿದೆ. ಹೀಗೆ ಶುದ್ಧತೆಗಾಗಿ ಬೆಳೆದ ಗಿಡಗಳ ಹೂವ ತಂದು, ನಿಸರ್ಗವೇ ಮಳೆಯಾಗಿ ಸುರಿದ ನೀರತಂದು, ಊರ ಜನರೆಲ್ಲ ನೋಡಲೆಂದು ಯಾರನ್ನು ಪೂಜಿಸುತ್ತಿರುವೆ? ಈ ತರಹ ಪೂಜಿಸಿದರೆ ಇದರ ಪುಣ್ಯ ಹೂವಿಗೆ ಸೇರಬೇಕೋ ನೀರಿಗೆ ಸೇರಬೇಕೊ ನಮಗೆಲ್ಲಿ ಸೇರಬೇಕೋ ಅಥವಾ ಅವುಗಳನ್ನು ತನ್ನಿಂದ ಪೂಜಿಸಿದ ಪುಣ್ಯ ನಿನಗೆ ಸೇರಬೇಕೋ ಎಂದು ಪ್ರಶ್ನಿಸುತ್ತಾನೆ.

ನಿಸರ್ಗವನ್ನು ಕಾಪಾಡುವುದೇ ಒಂದು ಪೂಜೆ. ಇದು ದೇವರ ನೆಪವಷ್ಟೇ ಆದರೆ ಕಾಪಾಡುವುದರಲ್ಲಿ ನಿಮ್ಮ ಏಳಿಗೆ ಹೊರತು ದೇವರದಲ್ಲ, ಹೂವು ತಂದು, ನೀರು ತಂದು ಪೂಜಿಸಿದರೆ ಇದು ಪೂಜೆಯಲ್ಲ ಇರುವ ನಿಸರ್ಗದ ಹೂ ಕೊಯ್ದು ಮರಗಳೆಲ್ಲ ಬೋಳು ಮಾಡಿ ಇದೇತರ ಪೂಜೆ ಎಂದು ಚೌಡಯ್ಯನ ಪ್ರಶ್ನೆ. ಇವೆಲ್ಲವನ್ನು ನೀನು ದೇವರೆಂದು ತಿಳಿದಿದ್ದೆ. ಆದರೆ ಹಿಂಸಿಸುವುದು ಬಿಟ್ಟು ಬಿಡು ಅದುವೇ ಪೂಜೆಯಾಗುತ್ತದೆ ಎಂಬ ವಾದ ಚೌಡಯ್ಯನದು.

---

[109] ಅಂಬಿಗರ ಚೌಡಯ್ಯನ ವಚನ, ಸಂ.ವ.ಸಂ.-೧, ಸಂ. ಎಮ್.ಎಮ್.ಕಲಬುರ್ಗಿ, ವ.ಸಂ.೫೩, ಪು.ಸಂ.೨೧

ಹಾಗೆಯೇ ಮನುಷ್ಯನಾದವನು ಕೂಡ ಪರೋಪಕಾರಕ್ಕಾಗಿ ಈ ಶರೀರ ನೂಕಬೇಕೆಂದು ಹೇಳುವುದಾದರೆ, ಮನುಷ್ಯ ಕೆಲ ಸಾರಿ ತಪ್ಪುಗಳು ಮಾಡುತ್ತಾನೆ. ಹೀಗೆ ತಪ್ಪು ಮಾಡಿದವರಿಗೆ ಶಿಕ್ಷೆ ವಿಧಿಸಬೇಕು ಎನ್ನುತ್ತಾಳೆ. ಅಕ್ಕ ಅಂದರೆ ನಿಸರ್ಗದಲ್ಲಿಯ ಗಿಡಗಳು ಕಡಿಯಬೇಡವೆಂದರೆ ಹೇಗೆ ಸಾಧ್ಯ. ಆದರೆ ಹೇಗೆ ಗಿಡ ಮರಗಳು ಮನುಷ್ಯರ ಉಳಿವಿಗಾಗಿಯೋ ಹಾಗೆಯೇ ಮಾನವರಾದ ನಾವು ಕೂಡ ಗಿಡ–ಮರಗಳು ಉಳಿಸಿ ಬೆಳೆಸುವಲ್ಲಿ ಶ್ರಮಿಸಬೇಕು ಎನ್ನುತ್ತಾಳೆ.

ಅಕ್ಕ ಹೇಳಿದ ಮಾತಿಗೆ ರಾಯಮ್ಮ ಹೀಗೆ ಕೆಳುತ್ತಾಳೆ. ಮರಗಳು ಬೆಳೆಸಬೇಕಾದರೆ ಬೀಜ–ಸಸಿ ಬೇಕಲ್ಲ ಎಂದು "ಬೀಜವಿಲ್ಲದೆ ವೃಕ್ಷ ಬೆಳೆಯುಬಲ್ಲುದೆ"[೧೧೦] ಎಂದು ಈ ವಚನ ಎಂತಹ ತಾತ್ವಿಕ ವಿಚಾರಭರಿತವಾಗಿದೆ. ಎಂದರೆ ಬೀಜವಿಲ್ಲದೆ ಕಾಯಾಗಬಹುದು?, ಸಸ್ಯವಿಲ್ಲದೆ ಮರವಾಗಲು ಸಾಧ್ಯವೆ? ತೆಂಗಿನ ಸಸಿಯ ಬದಲಾಗಿ ತೆಂಗಿನ ಮರವೇ ಹಚ್ಚಿದರೆ ಹೇಗೆ? ಆದ್ದರಿಂದ ಪರಿಸರದಲ್ಲಿಯ ಪ್ರತಿಯೊಂದು ಬೀಜ, ಸಸ್ಯ, ಗಿಡ ಮಾನವನ ಉಳಿವಿಗಾಗಿಯೇ ಇವೆ. ಆದರೆ ಬಳಸುತ್ತಾ ಹೋದಂತೆ ಗಿಡಗಳೆಲ್ಲ ಮಾಯವಾಗಿ ಬರಾಡವಾಗುವ ಸಾಧ್ಯತೆ ಹೆಚ್ಚು, ಆದ್ದರಿಂದ ಬೀಜ ಹಾಕಿ ಸಸ್ಯ ಬೆಳೆದು ನಂತರ ಮರಗಳನ್ನು ಬೆಳಿಸಬೇಕೆಂದು ವಚನಕಾರರು ಅಂದೇ ಹೇಳಿದ್ದು. ಇಂದು ನಮ್ಮ ಪರಿಸರವಾದಿಗಳು ಅದಕ್ಕೆ ಪುಷ್ಠಿಕೊಡುತ್ತಿರುವುದು ಕಂಡುಬರುತ್ತದೆ.

ವಚನಕಾರರು 'ತಾಳಮರ' ವೆಂಬ ಪದ ಬಳಸಿದ್ದಾರೆ. ಇಲ್ಲಿ ತಾಳಮರವೆಂದರೆ ಬರಹ ಸಾಮಾಗ್ರಿಯಾಗಿ ತಾಡೋಲೆಯನ್ನೀಯುವ ಮರ ೩೦-೪೦ ಅಡಿ ಎತ್ತರ ಬೆಳೆಯುತ್ತದೆ. ಹೆಂಚಿಕೊಂಬೆಗಳಲ್ಲಿ ತುದಿಯಲ್ಲಿ ಎಲೆಗೆದರಿ ನೆಟ್ಟಗೆ ನಿಂತಿರುತ್ತದೆ. ಪರ್ಣಕೋನಗಳಿಂದ ಹೂಗೊಂಚಲುಗಳು ಕೊನರುತ್ತವೆ. ಗಂಡು ಹೂ ಬಿಡುವ ಮರ ಬೇರೆ, ಹೆಣ್ಣು ಹೂ ಬಿಡುವ ಮರ ಬೇರೆ. ಗಂಡು ಹೂ ಗೊಂಚಲು ಉದ್ದವಾಗಿದ್ದುಕೊಂಡು ಕಳೆಗಳನ್ನು ಒಡೆದಿರುತ್ತವೆ. ಹೆಣ್ಣಿನದು ಗುಂಚು ಗುಂಚಾಗಿದ್ದು ಚೆಂಡು ಚೆಂಡಾಗಿರುತ್ತವೆ.

ತೆಂಗಿನಂತೆಯೇ ತಾಳೆಯ ಮೂಲಾಗ್ರ ಭಾಗಗಳು ಉಪಯೋಗದಲ್ಲಿವೆ. ಆಹಾರ ಸತ್ವವನ್ನೊಳಗೊಂಡ ತಾಯಿ ಬೇರನ್ನು ಬೇಯಿಸಿ ತಿನ್ನುತ್ತಾರೆ. ಕಾಂಡವು ಏತ (ನೀರು ಹೂಡುವ ಮಟ್ಟೆ), ಮನೆಯಕಂಬವೋ ತೊಲೆಯೋ ಆಗುತ್ತದೆ. ಮನೆಯ ಭಾವಣಿಗೆ ತಾಳೆ ಎಲೆ ಹೊದಿಕೆ

[110] ಅಮುಗೆ ರಾಯಮ್ಮನ ವಚನಗಳು –ಶಿವಶರಣೆಯರ ವ.ಸಂ.೫, ಸಂ.ಡಾ.ವೀರಣ್ಣ ರಾಜೂರ್, ವ.ಸಂ.೧೮೭, ಪು.ಸಂ.೧೮೮.

ಸಾಧಾರಣವಾಗಿ ಉಪಯೋಗದ್ದೇ. ಸೀಳಿದ ಎಳೆಯಿಂದ ಬೀಸಣಿಕೆ, ಚಾಪೆ, ಬುಟ್ಟಿಗಳು ತಯಾರಿಸುತ್ತಾರೆ.

ಇನ್ನೊಂದು ತಾಳಮರವೆಂದರೆ ಸೇಂದಿಮರ, ಸೇಂದಿ ಗಿಡದ ಕೆಳಗೆ ಹಾಲಿನ ಹರವಿಯಿಟ್ಟರೂ ಅದಕ್ಕೆ ಜನ ಹಾಲಿನ ಹರವಿ ಎನ್ನಲು ಹೇಗೆ ಸಾದ್ಯ. ಖಂಡಿತವಾಗಿಯೂ ಇಲ್ಲ. ಕಾರಣ ಅದು ಸೇಂದಿಗಿಡ ಅಲ್ಲವೆ? ಆದ್ದರಿಂದ ನಮ್ಮ ಜನ ಯಾವುದನ್ನು ಒಪ್ಪಿಕೊಳ್ಳದವರಿದ್ದಾರೆ. ಹೀಗಾಗಿ ಇಂತಹ ಜನರಿಗೆ ಮರಗಳ ಬಗ್ಗೆ, ಪ್ರಕೃತಿಯ ಬಗ್ಗೆ, ಒಳ್ಳೆಯದರ ಬಗ್ಗೆ ತಿಳಿ ಹೇಳುವುದೇ ಹರಸಾಹಸವೆನ್ನುತ್ತಾನೆ ಬಸವಣ್ಣ.

ಇಂದು ನಮ್ಮ ಸರ್ಕಾರದವರು ಶ್ರೀಗಂಧ ಮರವನ್ನು ಮುಕ್ತವಾಗಿ ಬೆಳೆಸುವುದು ನಿಷೇಧಿಸಿದ್ದಾರೆ. ಹಾಗೇನಾದರೂ ಬೆಳೆಸಬೇಕಾದರೆ ಕೃಷಿ ಕೇಂದ್ರದವರ ಪರವಾನಿಗೆ ಪಡೆದಿರಬೇಕು. ಗಿರಿಗಳ ಮೇಲೆ ಹಲವು ತರುಮರಾದಿಗಳಿಂದ ಶ್ರೀಗಂಧದ ಸನ್ನಿಧಿಯಲು ಪರಿಮಳವಾಗದೆ? ಗಂಧದ ಮರದ ಅಕ್ಕಪಕ್ಕ ಇರುವ ಅನೇಕ ಕಾಡು ಮರಗಳೂ ಪರಿಮಳಿಸುವುದನ್ನು ಕಂಡಿಲ್ಲವೆ? ಸಾಮಾನ್ಯ ನರಮಾನವರೂ ಶರಣರ ಸಹವಾಸದಲ್ಲಿದ್ದರೆ ಅವರ ಪ್ರಭಾವದಿಂದ ಸಜ್ಜನರಾಗುವುದುಂಟು. ಸಿರಿಯಾಳನೆಂಬ ಮಹಾನುಭಾವನು ಮಾಡಿದ ಮಹಾದಾಸೋಹದ ಪರಿಣಾಮವಾಗಿ ಅವನಿದ್ದ ಕಾಂಚಿಪುರದ ಕೈಲಾಸಕ್ಕೆ ಹೋದರೆಂಬ ಕಥೆಯೊಂದಿದೆ.

ಹಾಗೆಯೇ ಕಾಡಿನಲ್ಲಿ ಶ್ರೀಗಂಧದ ಮರಗಳ ಪಕ್ಕವೇ ಅದೆಷ್ಟೋ ಬೇರೆ ಬೇರೆ ಮರಗಳೂ ಇರುತ್ತವೆ. ಈ ಮರದ ಸುಗಂಧ ಇನ್ನುಳಿದ ಮರಗಳಿಗೂ ಹಬ್ಬದೇ ಇರುವುದೇ ! ಈ ಗಂಧದಮರ ಅತ್ಯಂತ ಬೆಲೆ ಬಾಳುವವ ಮರ ಈ ಮರಕ್ಕೆ ಅಲ್ಹಾದಕರ ಪರಿಮಳ, ಜೊತೆಗೆ ಈ ಗಿಡದ ಕಟ್ಟಿಗೆ ತುಂಡುಗಳಿಂದ ಮಾಡಿದ ವಿಗ್ರಹಗಳಿಗೆ ದೇಶ–ವಿದೇಶಗಳಲ್ಲಿ ಬೇಡಿಕೆಯಿದೆ. ಈ ಗಿಡದ ಬೀಜಗಳು ಕರಿಬೇವಿನ ಬೀಜವನ್ನು ಹೋಲುತ್ತವೆ. ದೇವರ ಪೂಜೆಯಲ್ಲಿ ವಿಗ್ರಹಗಳಿಗೆ ಗಂಧಲೇಪನ ಮಾಡುತ್ತಾರೆ. ತೇಯ್ದಗಂಧ ಚರ್ಮಕ್ಕೆ ಹೆಚ್ಚುವುದರಿಂದ ಚರ್ಮ ರೋಗ ಗುಣಪಡಿಸಬಹುದು. ಗಂಧದ ಪುಡಿ ಸೌಂದರ್ಯವರ್ಧಕಗಳಲ್ಲಿ ಬಳಸುತ್ತಾರೆ. ಇದರಿಂದ ಸುಗಂಧ ದ್ರವ್ಯ ಕೂಡ ಪಡೆಯುತ್ತಾರೆ. ಕಾಡುಗಳ್ಳರ ಹಾವಳಿಯಿಂದ ಗಂಧದ ಮರಗಳು ನಾಶವಾಗುತ್ತಿವೆ. ಆದ್ದರಿಂದ ಇಡೀ ಕಾಡು ರಕ್ಷಣೆಗೆ ಪ್ರತಿಯೊಬ್ಬರೂ ಜವಾಬ್ದಾರಿಯಿಂದ ಅರಿತು ಕಾಡು ಸಂರಕ್ಷಿಸಬೇಕು. ಇಂತ ಹುದೆ ಸುಗಂಧ ದ್ರವ್ಯದಲ್ಲಿ ಬಳಸುವ ಇನ್ನೊಂದು ಮರ ಸಂಪೆಗೆ. ಇದನನು ಕುರಿತು ಸಿದ್ಧರಾಮೇಶ್ವರನು ವಚನದಲ್ಲಿ ಹೀಗೆ ಹೇಳಿದ್ದಾನೆ. 'ಅಂಕುಸದಳಿನ ಸಂಪೆಗೆಯ ಹೂವಿನ ಕಂಪು'

"ಅಂಕುಸರಳಿನ ಸಂಪೆಗೆಯ ಹೂವಿನ ಕಂಪು
ಇತ್ತಲಿತ್ತ ಬಿಜಯಂಗೈಯದಿರು ಶಿವನೆ !
ಅರಿಯಾ ಮಗನೆ ಮನೆಯ ಮಲ್ಲಯ್ಯ ನಿನಗೆಂದು ಬಂದುದನು
ನೀವು ಭಕ್ತರಂಗಳದಲ್ಲಿ ಆಡುವ
ತೊತ್ತು ವೇಶಿಯ ಮಗನೆಂದು ಬಂಧಿರಿ ಶಿವನೆ !
ಕಪಿಲಸಿದ್ಧ ಮಲ್ಲಿಕಾರ್ಜುನ ॥"[೧೧೧]

ಸಿದ್ಧರಾಮೇಶ್ವರರ ಈ ಮೇಲಿನ ವಚನ 'ಹೂ'ಗಳಲ್ಲಿ ಅತಿ ಹೆಚ್ಚು ಸುವಾಸನೆ ಬೀರುವ ಹೂ ಸಂಪಗೆ. ಆನೆಯನ್ನು ನಿಯಂತ್ರಣ ಮಾಡುವ ಅಂಕುಶದಂತೆ ಹೋಲುವ ಈ ಸಂಪಗೆ ಸುಗಂಧ ಭರಿತವಾದ ಸಸ್ಯ ಇದಕ್ಕೆ ಅನೇಕ ಹೆಸರಿನಿಂದ ಕರೆಯುತ್ತಾರೆ. ರಜನಿಗಂಧಾ, ನೀಲಸಂಪಗೆ, ನೆಲಸಂಪಗೆ ಎಂದು ಕರೆಯುತ್ತಾರೆ.

ಇದು ಭಾರತದಾದ್ಯಂತ ಬೆಳೆಯಲ್ಪಡುವ ವಾಣಿಜ್ಯ ಬೆಳೆಯಾಗಿ ಬೆಂಗಳೂರು, ಮೈಸೂರು, ತುಮಕೂರು ಜಿಲ್ಲೆಗಳಲ್ಲಿ ಬೆಳೆಯಲಾಗುತ್ತದೆ. ಈ ಹೂಗಳಲ್ಲಿ ಎರಡು ಸುತ್ತಿನ ಹೂಗಳು ಕೂಡ ಬಿಡುತ್ತವೆ. ಮನೆಯಂಗಳದಲ್ಲಿಯೂ ಬೆಳೆಯಬಹುದಾದಂತಹ ಸಸ್ಯ. ಹೂ ಅರಳಿದ ಕ್ಷಣವೇ ಸುಗಂಧ ಬೀರುತ್ತದೆ. ಸ್ವಲ್ಪ ಬಿರುಸಾದ ಈ ಹೂಗಳು ಬೇಗ ಬಾಡದೆ ಬಃಲ ಹೊತ್ತಿನವರೆಗೆ ತಾಜಾ ಆಗಿಯೇ ಇರುತ್ತವೆ. ಇತ್ತೀಚಿನ ದಿನಗಳಲ್ಲಿ ಈ ಹೂವನ್ನು ಸೂಪ ತಯಾರಿಕೆಯಲ್ಲಿ ಬಳಸುತ್ತಿದ್ದಾರೆ. ಆಯುರ್ವೇದ ಔಷಧಿಗಳಲ್ಲಿ ಇದರ ವಿಶೇಷ ಬಳಕೆಯಿದೆ. ಈ ಹೂಗಳು ಬಹಳ ದಿನಗಳ ವರೆಗೆ ಗಿಡದಲ್ಲಿಯೇ ಬಿಟ್ಟಾಗ ಹೂ ಬಲಿತು ತಳದಲ್ಲಿ ಕಾಯಿಗಳಾಗುತ್ತವೆ. ಇವುಗಳು ಹಸಿ ಇದ್ದಾಗಲೇ ಅರೆದು ಗಾಯಗಳಿಗೆ ಲೇಪಿಸಿದರೆ ಗಾಯ ಬೇಗ ವಾಸಿಯಾಗುತ್ತದೆ. ಜಾನುವಾರುಗಳ ಔಷಧಿಯಾಗಿ ಕೂಡ ಬಳಸುತ್ತಾರೆ. ವಿಷದ ಹುಲ್ಲು ತಿಂದು ಹೊಟ್ಟೆ ಉಬ್ಬರವಾದರೆ ಸಂಪಗೆ ಗಿಡದ ಬೇರು ಮತ್ತು ಅದರ ಗೆಡ್ಡೆ ಚಿಕ್ಕ ಚಿಕ್ಕ ತುಂಡು ಮಾಡಿ ಹಾಗೆ ಕೊಡಬಹುದು. ಇಲ್ಲವೆ ರಸ ತೆಗೆದು ಕುಡಿಸಬಹುದು.

ಇದರ ಸಂಸ್ಕೃತದ ಹೆಸರು 'ಚಂಪಕ' ಎಂದು ಕರೆಯಲ್ಪಡುವ ಸಂಪಗೆ ದೇಶದ ಎಲ್ಲೆಡೆ ಕಂಡುಬರುವ ಸ್ವಲ್ಪ ಹಳದಿ ಮಿಶ್ರಿತ ಸುವಾಸನಾಯುಕ್ತ ಹೂಗಳಿಂದಾಗಿ ಪ್ರಸಿದ್ಧಿ ಹೊಂದಿವೆ. ಇವುಗಳಲ್ಲಿ ಎರಡು ವಿಧ ಕೆಂಡ ಸಂಪಗೆ, ಬಿಳಿ ಸಂಪಗೆ.

---

[111] ಸಿದ್ದರಾಮೇಶ್ವರ ವ.ಸಂ. ೪, ಸಂ.ಡಾ.ಎಸ್.ವಿದ್ಯಾಶಂಕರ ವ.ಸಂ.೧, ಪು.ಸಂ. ೧.

ಈ ಕೆಂಡ ಸಂಪಗೆ ದಟ್ಟ ಹಸಿರು ವರ್ಣದ ಎತ್ತರ ಮರಗಳಾಗಿದ್ದು, ಇದು ಸುಗಂಧಕ್ಕಾಗಿ ಮನೆಯ ಬಳಿ ಬೆಳೆಸುತ್ತಾರೆ. ಹೂಗಳಲ್ಲಿಯ ತೀಕ್ಷ್ಣ ಸುಗಂಧದಿಂದಾಗಿ ದುಂಬಿಗಳು ಹತ್ತಿರ ಸುಳಿಯುವುದಿಲ್ಲ. ಹಳದಿ ಗುಣವಾಗಿರುವುದರಿಂದ ಹೇಮ ಪುಷ್ಪಕ ಎಂದು ಮತ್ತು ಸುವಾಸನೆ ಬಹಳ ಹೊತ್ತು ಹಾಗೆಯೇ ಇರುವುದರಿಂದ ಸ್ಥಿರಗಂಧವೆಂದು ಹೆಸರು.

ಕೊನೆಯದಾಗಿ ಅಲ್ಲಮನ ಒಂದು ವಚನ ಹೀಗೆ ಹೇಳುತ್ತದೆ. ಈ ಪ್ರಕೃತಿಯಲ್ಲಿ ಹುಟ್ಟಿದ ವಸ್ತು ಪ್ರಕೃತಿಯಲ್ಲಿ ಮರೆಯಾಗಬೇಕೆಂದು ಈ ಕೆಳಗಿನ ವಚನದಲ್ಲಿ ವ್ಯಕ್ತವಾಗಿದೆ. "ಮರದೊಳಗಣ ಪತ್ರ ಫಲಂಗಳೂ, ಮರಕಾಲವಶದಲ್ಲಿ ತೋರುವಂತೆ"[೧೧೨]

ವೃಕ್ಷದಲ್ಲಿ ಎಲೆ, ಹೂ, ಹಣ್ಣುಗಳು ಅಡಗಿವೆ. ಆ ವೃಕ್ಷದ ಋತುಕಾಲ ಬಂದಾಗ ಅವು ಹೊರ ಹೊಮ್ಮಿ ತೋರುತ್ತವೆ. ಹಾಗೆ ಪ್ರಕೃತಿ (ಪರಮಾತ್ಮ) ಯಲ್ಲಿ ಮತ್ತು ಪ್ರಾಕೃತಿಕ ಸಕಲ ವಿಶ್ವವೂ ಅಡಗಿದೆ. ಆಗ ಪ್ರಕೃತಿ ಸ್ವಭಾವದ ಗುಣ ಗೋಚರಿಸುತ್ತವೆ. ಅಂದರೆ ಚರಾಚರ ಸಮಸ್ತ ಪ್ರಪಂಚವು ಕಾಲಾಂತರದಲ್ಲಿ ಬದಲಾಗುತ್ತದೆ. ಈ ವಿಶ್ವದ ಅಭಿವ್ಯಕ್ತಿಯೇ ಸೃಷ್ಟಿಯ ಲೀಲೆಯಾಗಿದೆ. ಪ್ರಕೃತಿಯಲ್ಲಿ ವ್ಯಕ್ತವಾದ ಪ್ರತಿಯೊಂದು ಇಲ್ಲಿಯೇ ಐಕ್ಯವಾಗಬೇಕೆಂದು, ಇದು ಸತ್ಯಕೂಡ ಆಗಿದೆ. ಹೀಗೆ ಪರಿಸರದ ಬಗ್ಗೆ ವಚನಕಾರರು ತಮ್ಮದೇ ಆದ ನಿಲುವು ವ್ಯಕ್ತಪಡಿಸಿದ್ದಾರೆ.

ಜಗತ್ತಿನ ಜೀವಜಾಲವೆಲ್ಲಾ ನಿಂತಿರುವುದೇ ಈ ಭೂಮಿಯನ್ನವಲಂಬಿಸಿ ಈ ಜೀವ ಜಾಲಕ್ಕೆ ಬದುಕಲು ಆಹಾರವೇ ಮೂಲಸಂಬಂಧ ಎಲ್ಲ ಜೀವಿಗಳು ಒಂದೇ ರೀತಿಯ ಆಹಾರವಂತು ತಿನ್ನುವುದಿಲ್ಲ. ಕೆಲವು ಸಸ್ಯಾಹಾರಿ, ಕೆಲವು ಮಾಂಸಹಾರಿ, ಇನ್ನೂ ಕೆಲವು ಎರಡನ್ನೂ ಸೇವಿಸುತ್ತವೆ. ಈ ರೀತಿ ಸೇವಿಸುವ ಆಹಾರ ಎಲ್ಲಿಂದ ಪ್ರಾರಂಭವಾಗಿ ಎಲ್ಲಿ ಅಂತ್ಯವಾಗುತ್ತದೆ ಎಂದು ಹೇಳುವುದು ಬಹಳ ಕಷ್ಟವೇ.

ಬಿಂದುವಿನಿಂದ ಆರಂಭವಾದ ಸೃಷ್ಟಿ ಶಾಖೋಪ ಶಾಖೆಗಳಾಗಿ ಕವಲೊಡೆದು ಕೂಡಿ, ಒಂದಕ್ಕೊಂದು ಬೆಸೆದು ಕೊಂಡಿವೆ.

---

[112] ಅಲ್ಲಮ ಪ್ರಭುದೇವರ ವಚನ ಸಂ.–೨ ಸಂ.ಡಾ.ಬಿ.ವ್ಹಿ.ಮಲ್ಲಾಪೂರ, ವಚನ ಸಂ.೧೪೫, ಪು.ಸಂ.೪೪

‘ಸೃಷ್ಟಿ ಪರಿಕಲ್ಪನೆಯಲ್ಲಿ’ ನೋಡಿರುವಂತೆ ಮೇಲ್ನೋಟಕ್ಕೆ ಆಹಾರದ ವಿಷಯವಾಗಿ ಬೇರೆ ಬೇರೆಯಾಗಿ ಕಂಡರೂ ಕೂಡ ಸೃಷ್ಟಿಯ ಎಲ್ಲ ಜೀವಿಗಳು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಪರಸ್ಪರ ಸಂಬಂಧವೇರ್ಪಟ್ಟಿದೆ. ಎಂಬುದಂತೂ ಸತ್ಯ. ಇದಕ್ಕೆ ‘ಇಕೋಸಿಸ್ಟಂ’ ಅಥವಾ ಜೀವ ವ್ಯವಸ್ಥೆನ್ನು ಅಮೇರಿಕದ ವಿಜ್ಞಾನಿ ಹೆರಾಲ್ಡ್ ಯೂರಿ[೧೧೩] ಜಗತ್ತು ಕಾಸ್ಮಿಕ್ ಧೂಳಿನಿಂದ ರೂಪುಗೊಂಡಿದ್ದು ಎನ್ನುವ ತತ್ವದ ಆಧಾರದ ಮೇಲೆ ತನ್ನ ಸಿದ್ಧಾಂತವನ್ನು ಮಂಡಿಸಿದ. ಕಾಸ್ಮಿಕ್ ಧೂಳಿನಿಂದ ಜಲಜನಕ, ಸಾರಜನಕ, ಆಮ್ಲಜನಕಕ್ಕೆ ಮುಂತಾದ ಅನಿಲದ ಪರಮಾಣುಗಳಿದ್ದವು. ಇವುಗಳಿಂದ ಜೀವ ಹುಟ್ಟಲು ಕಾರಣವಾಗುವ ಪ್ರೋಟಿನ ವಸ್ತುಗಳಿದ್ದವು. ಹೀಗಾಗಿ ಜೀವಮೂಲಕ್ಕೆ ಅಗತ್ಯವಾದ ಈ ವಸ್ತುಗಳಿಂದ ಕ್ರಮೇಣ ಅಮಿನೋ ಅಸಿಡ್ ಮತ್ತು ಪ್ರೋಟೀನ್ ರೂಪಾಂತರ ಹೊಂದಿ ನಿರ್ಜಿವವಾದ ಭೂಮಿಯಲ್ಲಿ ಜೀವ ಸೃಷ್ಟಿಯಾಯಿತು.

ಭೂಮಿಯಲ್ಲಿ ಕೆಲ ಜೀವಕೋಶಗಳು ಹರಿತ್ತುಗಳನ್ನು ನಿರ್ಮಿಸಿಕೊಳ್ಳತೊಡಗಿದವು. (ಅಮಿಬಾ) ತಮ್ಮ ಆಹಾರವನ್ನು ತಾವೇ ತಯ್ಯಾರು ಮಾಡಿಕೊಳ್ಳತೊಡಗಿದವು.[೧೭] ಇವುಗಳು ತಮ್ಮ ಆಹಾರದಲ್ಲಿ ಆಮ್ಲಜನಕವನ್ನೇ ಉತ್ಪತ್ತಿ ಮಾಡುವ ಜೀವಕೋಶ ತಯಾರಾದವು ಅವೆ ಹರಿತ್ತು (ಸಸ್ಯ) ಹೀಗೆ ಸಸ್ಯಗಳು ಬಿಟ್ಟ ಆಮ್ಲ ಜೀವಿಗಳೂ ಬಿಟ್ಟ ಇಂಗಾಲವು ಸಸ್ಯ, ಅಂದರೆ ಸಸ್ಯ ಮತ್ತು ಪ್ರಾಣಿ ಒಂದರ ಆಹಾರ ಇನ್ನೊಂದಕ್ಕೆ ಪೂರಕವಾಗುತ್ತಾ ಬಂತು.

ಇದನ್ನೇ ಕುರಿತು ಸಸ್ಯವನ್ನು ನಾವು ಹೇಗೆ ಕಾಣಬೇಕು ಎಂದು ಅಂಬಿಗರ ಚೌಡಯ್ಯನು ಹೀಗೆ ಹೇಳಿದ್ದಾನೆ.

> “ಗಿಡುವಿನ ಪುಷ್ಪವ ಕೊಯ್ಯೆನು
> ಮಡುವಿನಗ್ಘವಣಿಯ ತಳುಕೆನು
> ಸ್ಥಾವರಂಗಳ ಪೂಜಿಸೆನು
> ಕೇಳು ಕೇಳು ನಮ್ಮಯ್ಯಾ
> ಮನದಲ್ಲಿ ನೆನೆಯ, ವಚನಕ್ಕೆ ತಾರೆ,
> ಹೊಡವಂಟು ಬೇರು ಮಾಡುವವನಲ್ಲ.
> ಬಸರೊಳಗಿರ್ದು ಕಾಲನಿಡುವ ಬುದ್ಧಿ ಕೊಡದೆಂದನಂಬಿಗ ಚೌಡಯ್ಯ”[೧೧೪]

[113] ಜೀವ ಜಾಲ – ಕೆ. ಪುಟ್ಟಸ್ವಾಮಿ ಕೃಪಾಕರ ಸೇನಾನಿ, ಪು.ಸಂ.೧೫.

[114] ಅಂಬಿಗರ ಚೌಡಯ್ಯನ ವಚನ, ಸಂ.ವ.ಸಂ.–೧, ಸಂ. ಎಮ್.ಎಮ್.ಕಲಬುರ್ಗಿ, ವ.ಸಂ.೧೪೩, ಪು.ಸಂ.೪೬.

ವಚನಕಾರರಿಗೆ ಎಂತಹ ಪೂರ್ವ ಪ್ರಜ್ಞೆ ಇತ್ತಲ್ಲ? ಸಸ್ಯವನ್ನೂ ಕೂಡ. ನಾವು ಹೇಗೆ ಕಾಪಾಡಬೇಕು ಎಂಬುದನ್ನು ಹೇಗೆ ತಿಳಿಸಿ ಕೊಟ್ಟಿದ್ದಾರೆಂದರೆ, ಗಿಡುವಿನ ಪುಷ್ಪ ಕೊಯ್ಯೆಸು, ನಮ್ಮ ದೇಶ ಧಾರ್ಮಿಕತೆಗೆ ಹೆಸರುವಾಸಿ ಇದರ ಮೇಲೆ ಶ್ರಾವಣ ಮಾಸ ಬಂತೆಂದರೆ ಸಾಕು ನಮ್ಮ ಮನೆಯ ಗಿಡದ ಹೂ ಸಾಲದೇ ಎಲ್ಲರ ಮನೆಯ ಗಿಡದ ಹೂ ಹರಿದು ತರುತ್ತೇವೆ. ಚೌಡಯ್ಯನ ಪ್ರಕಾರ ಗಿಡದಲ್ಲಿಯ ಹೂ ಕೊಯ್ದರೆ ಆ ಗಿಡದ ಸೌಂದಯ್ಯ ಹಾಳಾಗುತ್ತದೆ. ಹಾಳಾಗುವುದರ ಜೊತೆಗೆ ದುಂಬಿಗಳೂ ಮಕರಂದವನ್ನೇ ನಂಬಿ ಬದುಕುತ್ತಿವೆ. ಅವುಗಳ ಆಹಾರವೇ ಹೂಗಳ ಮಕರಂದ ಇಂಥದರ ಮಧ್ಯ ಇನ್ನೊಂದು ಜೀವಿಯ ಆಹಾರ ಕಸಿದುಕೊಂಡಂತಾಗುವುದಿಲ್ಲವೇ?

ಇನ್ನು ಕೆರೆ, ಬಾವಿ ಹಳ್ಳದ ನೀರು ತಂದು ಸ್ಥಾವರದ ಮೇಲೆ ಸುರುವಿದರೆ ಅದೆಷ್ಟೋ ನೀರು ಪೋಲಾಗುತ್ತದಲ್ಲ. ಇವತ್ತಿನ ದಿನಗಳಲ್ಲಿ ಮಾದ್ಯಮದವರು ಆಹಾರ, ನೀರು ವಿದ್ಯುತ್ ಮಿತವ್ಯಯದಿಂದ ಬಳಸಿರಿ ಎಂದು ಜಾಹಿರಾತು ಮಾಡುತ್ತಿದ್ದಾರೆ. ೧೨ನೇ ಶತಮಾನದಲ್ಲಿ ವಚನಕಾರರು ತಮ್ಮ ವಚನಗಳೇ, ಮಾಧ್ಯಮವಾಗಿಸಿಕೊಂಡು ಜಗತ್ತಿಗೆ ಜಾಗ್ರತ ಮಾಡಿದ್ದು ಕಾಣುತ್ತೇವೆ. ಕೇಳು ಕೇಳು ನಮ್ಮಯ್ಯ ಈ ಮಾತು ಎಂತಹ ಸೌಜನ್ಯದ ಮಾತು ಯಾರನ್ನಾದರೂ ತಿದ್ದಬೇಕಾದರೆ, ಬಹಳ ನಲ್ಮೆಯಿಂದ ಮಾತನಾಡಿಸಬೇಕಲ್ಲ. ಅದಕ್ಕೆ ಚೌಡಯ್ಯ ನನ್ನಯ್ಯ, ಎಂಬ ಶಬ್ದ ಬಳಸಿದ್ದಾನೆ. ಎಲ್ಲವನ್ನೂ ಪೂಜಿಸು ಆದರೆ ಹಾಳುಗೆಡಲು ಬೇಡ ಎಂದಿದ್ದಾನೆ. ಇದರ ಹಿಂದಿನ ಉದ್ದೇಶ ಯಾವುದು ನಮ್ಮ ಜೀವ ಜಾಲಕ್ಕೆ ಪೂರಕವಾಗುವಂತಹ ಪ್ರತಿಯೊಂದನ್ನು ಎಲ್ಲಿದೆಯೋ ಯಾವ ರೂಪದಲ್ಲಿದೆಯೋ ಅಲ್ಲಿಯೇ ಪೂಜಿಸು. ನಮಗೆ ಅನಿವಾರ್ಯವೆಂದಾಗ ಮಾತ್ರ ಅದನ್ನು ಎಷ್ಟು ಬೇಕೋ ಅಷ್ಟನ್ನೆ ಉಪಯೋಗಿಸು. ಕೊಯ್ದು ಹಾಕುವುದು ದೊಡ್ಡ ವಿಷಯವಲ್ಲ. ಬೆಳೆಸಬೇಕಾದರೆ ಅದರ ಹಿಂದಿನ ಶ್ರಮವೇನು ಎಂಬ ಪ್ರಜ್ಞೆ ನಮ್ಮಲ್ಲಿರಬೇಕೆಂದು ಹೇಳುತ್ತಾನೆ.

ಈ ಪರಿಕಲ್ಪನೆಯುಳ್ಳವರು 'ನೈಲ್ ನದಿ' ದಂಡೆಯು ಈ ಜಿಪ್ಪ ಜನರದಾಗಿತ್ತು. ಅನಾಗರಿಕ ಜನರಿದ್ದರೂ ಕೂಡ ಇಲ್ಲಿ ಅದೆಷ್ಟೋ ಪಂಗಡಗಳೂ, ಹುಟ್ಟಿದ್ದವು. ಆದರೂ ಎಲ್ಲ ಪಂಗಡದವರು ತಮ್ಮ ಗುರುತೆಂದು 'ಟೊಟೆಂ' ಪದ್ಧತಿ ಅಳವಡಿಸಿಕೊಂಡಿದ್ದರು. ಕಾರಣ ತಮಗೆ ಅನಿವಾರ್ಯವಾದಾಗ ಪ್ರಾಣಿ--ಸಸ್ಯ ಬಳಸುತ್ತಿದ್ದರು. ಸಸ್ಯ ಪ್ರಾಣಿಗಳನ್ನು ಕಾಪಾಡುವ ಉದ್ದೇಶಕ್ಕಾಗಿ 'ಟೊಟೆಂ' ಪದ್ಧತಿ ಜಾರಿಗೆ ತಂದಿದ್ದು ಕಂಡುಬರುತ್ತದೆ.

ಹಚ್ಚ ಹಸುರಾಗಿ ದಟ್ಟವಾಗಿ ಬೆಳೆದ ಪಶ್ಚಿಮಘಟ್ಟಗಳ ನಿತ್ಯ ಹರಿದ್ವರ್ಣದ ಕಾಡುಗಳು, ಇಂದು ಅಪಾಯದ ಅಂಚಿನಲ್ಲಿವೆ.[೧೧೫] ಈ ಕಾಡುಗಳಲ್ಲಿ ಶ್ರೀಮಂತ ದೇಶಗಳಲ್ಲಿ ಗಗನ ಚುಂಬಿ ಕಟ್ಟಡಗಳಿದ್ದಂತೆ ನಮ್ಮಲ್ಲಿ ಆಗಸದೆತ್ತರಕ್ಕೆ ಬೆಳೆದ ನಿತ್ಯ ಹರಿದ್ವರ್ಣ ಕಾಡು ಜಗತ್ತಿನ ಇನ್ನೆಲ್ಲೂ ಕಾಣಸಿಗದ ಸಸ್ಯ ಕಾಶಿಯನ್ನು ಹೊಂದಿದೆ. ಎಂತಹ ಬಿರುಬಿಸಿಲಿನಲ್ಲೂ ಸೂರ್ಯನ ಕಿರಣ ಈ ಕಾಡಿನ ನೆಲ ಮುಟ್ಟಿಲ್ಲವೆಂದೇ ಹೇಳಬೇಕು. ಇಂತಹ ಕಾಡು ಇವತ್ತಿನ ಪೈಶಾಚಿಕ ಪ್ರವೃತ್ತಿಯಿಂದ ತಪ್ಪಿಸಿ ಉಳಿಸಿಕೊಳ್ಳುವ ಜವಾಬ್ದಾರಿ ಎಲ್ಲರ ಮೇಲಿದೆ ನೂರು ಇನ್ನೂರು ವರ್ಷಗಳ ಕಾಲ ಸಾಮ್ರಾಜ್ಯಶಾಹಿ ಆಡಳಿತದಿಂದ ಇನ್ನೇನಾದರೂ ಸಂಪತ್ತು ಭಾರತದಲ್ಲಿದೆಯೇ? ಎಂಬ ಪ್ರಶ್ನೆಗೆ ಉತ್ತರ ಇಂತಹ ಕಾಡುಗಳು ! ಈ ಕಾಡುಗಳು ಜೀವ ಜಗತ್ತಿನ ಅಮೂಲ್ಯ ನಿಧಿಯೇ ಹೌದು. ಇಂತಹ ಬೃಹದ್ದಾಕಾರದಲ್ಲಿ ಚಾಚಿಕೊಂಡ ಕಾಡು ನಾಶವಾದರೆ ಈ ಮನುಷ್ಯನಿಂದ ಮತ್ತೆ ನಿರ್ಮಾಣ ಮಾಡಲು ಸಾಧ್ಯವೇ ಇಲ್ಲ. ಈ ಮನುಷ್ಯನಿಗೆ ಕರಗಿಸಿದ್ದು ಗೊತ್ತೇ ವಿನಃ ಬೆಳೆಸಿದ್ದು ಗೊತ್ತಿಲ್ಲ !

ಈ ಕಾಡಿನಲ್ಲಿ ಸಸ್ಯ ಸಮೂಹ ಎಷ್ಟು ವೈವಿದ್ಯಮಯವಾಗಿದೆಯೋ ಅಷ್ಟೇ ವೈವಿದ್ಯಮಯ ಕೀಟ ಸಮೂಹವೂ ಇದೆ. ಬೃಹದ್ದಾಕಾರದಲ್ಲಿ ಬೆಳೆದಿರುವ ಬೆಳೆಯುತ್ತಿರುವ ಗೋಣಿ–ಬಸುರಿ ಮರಗಳೂ ಹೇರಳವಾಗಿದ್ದು, ಹಕ್ಕಿಗಳು ತಿಂದ ಹಿಕ್ಕೆಗಳ ಬೀಜದಿಂದ ಬಸುರಿ ಸಸ್ಯ ಕ್ರಮೇಣ ನೆಲಕ್ಕೆ ಬೇರು ಬಿಟ್ಟು ತನ್ನ ತಾಯಿಮರವನ್ನೇ ಅಪ್ಪಿ ಬೆಳೆಯುವ ಮರ. ಇಂತಹ ಕಾಡು ಮನುಷ್ಯ ಪ್ರಾಣಿವರ್ಗಕ್ಕೆ ಅದೆಷ್ಟು ಮಹದುಪಕಾರ ಮಾಡುತ್ತಿವೆ ಎಂಬ ವಿಚಾರ ನಮ್ಮಲ್ಲಿನ್ನು ಬರುತ್ತಿಲ್ಲ.

ತೀರ್ಥ ಹಳ್ಳಿ ಸಮೀಪದ ಸಹ್ಯಾದ್ರಿ ಕಾಡುಗಳಲ್ಲಿ ವಿಶಿಷ್ಟವಾದ ಹಕ್ಕಿ ಗುಂಪು, ಇಂಪೇರಿಯಲ್[೧೧೬] ಈ ಹಕ್ಕಿಗಳು ತಮ್ಮ ಆಟಕ್ಕಾಗಿ ಈ ಕಾಡನ್ನೇ ಬಳಸಿಕೊಂಡಿದ್ದು, ಮನುಷ್ಯ ಹೇಗೆ ತನ್ನಷ್ಟಕ್ಕೆ ತಾನಿರಬೇಕು. ತನ್ನ ಸ್ವಾತಂತ್ರಕ್ಕೆ ಯಾರೂ ಅಡ್ಡಿಯಾಗಬಾರದೆಂದು ಬಯಸುತ್ತಾನೋ ಹಾಗೆಯೇ ಪಕ್ಷಿಗಳೂ ಕೂಡ ಸ್ವತಂತ್ರವಾಗಿ ಬದುಕಲು ಇಂತಹ ಕಾಡುಗಳನ್ನು ಆಶ್ರಯಿಸುತ್ತವೆ. ಸರ್ಕಾರ ಕಡ್ಡಿಪೆಟ್ಟಿಗೆ ಕಾರ್ಖಾನೆಯವರೆಗೆ ಇಲ್ಲಿಯ ಮರ ಕಡಿಯಲು ಅನುಮತಿ ಕೊಟ್ಟಾಗ ಈ ಹಕ್ಕಿ ಸಂಕುಲವೇ ಅಲ್ಲಿಂದ ನೆಲಕ್ಕಿತ್ತು ಬಿಟ್ಟವಂತೆ. ಕಾರಣ ಸ್ವಾತಂತ್ರಕ್ಕೆ ಧಕ್ಕೆಯಾಯಿತಲ್ಲವೆ?

ಮನುಷ್ಯ ಎಷ್ಟು ಕ್ರೂರಿ ಎಂಬುವುದು ಪ್ರತಿ ಪ್ರಾಣಿ–ಪಕ್ಷಿ ಸಂಕುಲವೆಲ್ಲಕ್ಕೂ ಗೊತ್ತಾಗಿದೆ. ನಮಗೆ ಕಾಡು ಬೆಳೆಸುವುದಂತೂ ಗೊತ್ತಿಲ್ಲ. ಆದರೆ ಇದ್ದ ಕಾಡು ನಾಶ ಮಾಡುತ್ತಾ ಹೋದರೆ ಇಡೀ ಜೀವ

---

115 ವಿಸ್ಮಯ–೧ – ಕೆ. ಪಿ. ಪೂರ್ಣ ಚಂದ್ರ ತೇಜಸ್ವಿ, ಪು.ಸಂ.೭೦.

116 ವಿಸ್ಮಯ–೧ – ಕೆ. ಪಿ. ಪೂರ್ಣ ಚಂದ್ರ ತೇಜಸ್ವಿ, ಪು.ಸಂ.೭೦.

ಜಾಲವೇ ಅಲ್ಲೋಲ ಕಲ್ಲೋಲವಾಗುತ್ತದೆ. ಇದರ ಪರಿಣಾಮ ಮುಂಬರುವ ದಿನಗಳಲ್ಲಿ ಅನುಭವಿಸಬೇಕಾದೀತು.

ಅದ್ಭುತ ವೈವಿಧ್ಯತೆಗಳನ್ನು ಹೊಂದಿರುವ ಜಗತ್ತಿನ ಸಸ್ಯಲೋಕದಲ್ಲಿ ಕಳ್ಳಿಗಿಡಕ್ಕೆ ತನ್ನದೆಯಾದ ಮಹತ್ವವಿದೆ. ಉಷ್ಣವಾತಾವರಣವೇ ಇರಲಿ, ಬಂಜರು ಪ್ರದೇಶವೇ ಆಗಿರಲಿ ಕಳ್ಳಿಗಿಡದ ದೀರ್ಘಾಯುಷ್ಯಕ್ಕೆ ಒಂದಿನಿತು ಅಡ್ಡಿ ಇರುವುದಿಲ್ಲ "ಕ್ಯಾಕ್ಟಸ್" ಮತ್ತು ಸಕ್ಯೂಲೆಂಟ್ಸಗಳೆಂದೇ ವರ್ಗೀಕರಿಸಲಾಗಿರುವ ಈ ಗುಂಪಿನ ಸಸ್ಯಗಳಲ್ಲಿಯೂ ಎರಡು ಬಗೆಗಳಿವೆ.

ಬಂಜರು ನೆಲದ ವೈಪರಿತ್ಯದ ತೀವ್ರ ಜಲ ಅಭಾವದ ಪರಿಸರದ ಮರುಭೂಮಿಗಳಲ್ಲೂ ನೆಮ್ಮದಿಯ ದೀರ್ಘಾಯುಷ್ಯದ ವಾಳುವೆ ನಡೆಸಿರುವ ಕಳ್ಳಿಗಿಡ ಇದು ಗೊತ್ತೆ? ಮೂಲತಃ ಮರುಭೂಮಿಯ ಬದುಕ್ಕಿಗೆಂದೇ ಸೃಷ್ಟಿಗೊಂಡಿರುವ ಕಳ್ಳಿ ಅನನ್ಯ ಗುಣದ ಅದ್ಭುತ ಸಾಮರ್ಥ್ಯದ ಗುಣಗಳು ಹೊಂದಿದೆ.

ಧರೆಯ ಜೀವಜಾಲದಲ್ಲಿ ಸಸ್ಯಗಳ ಸ್ಥಾನಮಾನ ವಿಶಿಷ್ಟ ಇಡೀ ಪ್ರಾಣಿ ಲೋಕಕ್ಕೆ ಮೂಲ ಆಧಾರವಾಗಿರುವ ಸಾಮರ್ಥ್ಯವಿದೆ. ಭೂಮಿಯ ಎಲ್ಲ ನೆಲೆಗಳಲ್ಲೂ ಎಂದರೆ ನೆಲ ಜಲ, ಕಣಿವೆ ಗಿರಿ ಶಿಖರ, ಹಿಮಹಾಸು ಇತ್ಯಾದಿ ಎಲ್ಲೆಡೆಯೂ ಅವು ಹರಡಿವೆ. ಎಲ್ಲ ಪ್ರಾಣಿಗಳಿಗೂ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಆಹಾರ ಮೂಲವಾಗಿ. ಸಸ್ಯ ಎಂದೊಡನೆ ಯಾರ ಮನದಲ್ಲಾದರೂ ತಕ್ಷಣ ಮೂಡುವ ಚಿತ್ರಣ ದಟ್ಟ ಹಸಿರಿನ ವೃಕ್ಷಗಳಿದ್ದು ಸುಂದರ ಹೂಗಿಡಗಳದ್ದು, ಕೃಷಿ ಭೂಮಿಯ ಬೆಳೆ ಗಿಡಗಳದು ಅಥವಾ ಅವನ್ನು ಕಾಡುವ ಕಳ್ಳಿ ಗಿಡಗಳದ್ದು. ಆದರೆ ಈ ಬಗೆಯ ಕಲ್ಪನೆಗಳಿಂದೆಲ್ಲ ಭಿನ್ನವಾದ ರೂಪ ಆಕಾರ, ಆಯುಷ್ಯ ಬದುಕಿನ ಕ್ರಮಗಳ ಸಸ್ಯಗಳೂ ಬಹಳ ಇವೆ. ಮುಗಿಲ ಚುಂಬಿಸುವ ಹೆಮ್ಮರಗಳಿವೆ. ಸಾವಿರ ವರ್ಷ ಬಾಳಬಲ್ಲ ಗಿಡ-ಮರಗಳಿವೆ, ಹುಲ್ಲು ಗಿಡಗಳಂತೂ ಹತ್ತಾರು ಸಾವಿರ ವಿಧಗಳಿವೆ. ಹೂ ಬಿಡುವ ಗಿಡಗಳಿದ್ದು ಲಕ್ಷ ಮೀರಿದಷ್ಟು ಪ್ರಭೇಧಗಳಿವೆ. ಅತಿ ಚಳಿ-ಬಿರುಗಾಳಿ ಎದುರಿಸಬಲ್ಲ ಮಾಂಸಹಾರಿ ಸ್ವಭಾವ ಪಡೆದ ಕಡಲ ನೀರಲ್ಲೇ ನೆಲೆಸಿದ ಸಸ್ಯಗಳಲ್ಲಿ ವಿಧಗಳೂ ಬೇಕಾದಷ್ಟಿವೆ. ಪರ್ವತ ಅಡವಿ ಜೀವಸಾರವನ್ನು ರೂಪಿಸಿರುವುದು ಗಿಡ ಮರಗಳೇ ತಾನೇ?

ಸಸ್ಯ ಸಾಮ್ರಾಜ್ಯದ ಅಸಾಮಾನ್ಯ ಸಸ್ಯಗಳೆಲ್ಲ ಬಿಸಿ ಮರುಭೂಮಿ ಪರಿಸರಕ್ಕೆ ಒಪ್ಪವಾಗುವಂತೆ ಸೃಷ್ಟಿಗೊಂಡಿರುವ ಸಸ್ಯಗಳದ್ದೇ ಒಂದು ವಿಶಿಷ್ಟ ಬಗೆ. ಬಿಸಿ ಮರುಭೂಮಿಗಳಲ್ಲಿನ ಹಗಲಿನ ಅತೀವ

ಉಷ್ಣ-ಇರುಳಿನ ಅತೀವ ಶೀತದ ವೈಪರಿತ್ಯವನ್ನು ಬಂಜರು ನೆಲದ ತೀವ್ರ ಜಲಭಾವದ ಪರಿಸರ ಪರಿಸ್ಥಿತಿಯನ್ನು ಲೀಲಾಜಾಲವಾಗಿ ಎದುರಿಸುತ್ತಲೇ ದೀರ್ಘ ಬಾಳುವೆ ನಡೆಸಬಲ್ಲ ಆ ವಿಧದ ನೂರಾರು ಪ್ರಭೇಧಗಳ ಸಸ್ಯಗಳು ಇವೆ.

ಅಂಥ ವಿಸ್ಮಯದ ಅತೀ ವಿಶಿಷ್ಟ ಸಾಮರ್ಥ್ಯದ ಸಸ್ಯಗಳಲ್ಲೆಲ್ಲ ವಿಶೇಷ, ಎನಿಸಿರುವ ಸಸ್ಯ ಸಮೂಹವೇ ಇದೆ. ಗಿಡಗಳ ಗುಂಪು ಅವುಗಳ ಸಾಮರ್ಥ್ಯ ವೈಚಿತ್ರ್ಯ ವಿಸ್ಮಯಗಳೆಲ್ಲ ಅನನ್ಯ ಅಸಂಖ.

'ಕ್ಯಾಕ್ಟಸ್' ಮತ್ತು 'ಸಕ್ಯೂಲೆಂಟ್'ಗಳೆಂದೇ ವರ್ಗೀಕರಿಸಲಾಗಿರುವ ಈ ಗುಂಪಿನ ಸಸ್ಯಗಳಲ್ಲಿ ಎರಡು ಬಗೆಗಳಿದ್ದು ಸ್ಥೂಲವಾಗಿ ಹೇಳಬೇಕೆಂದರೆ ಸೆಕ್ಯೂಲೆಂಟ್‌ಗಳದೆಲ್ಲ ಮುರಿದರೆ ಹಾಲು ಸ್ರವಿಸುವ ದಪ್ಪನ್ನ ಎಲೆಗಳ ರಚನೆ, ಕಾಂಡವೇ ಎಲೆಯಂತೆ ದ್ಯುತಿ ಸಂಶ್ಲೇಷಿಸುವ, ಎಲೆಗಳೇ ಇಲ್ಲದ, ಬೋಳು ಬೋಳಾದ ಕವಲುಗಳ ಮುಳ್ಳು ಮುಟ್ಟಿದ ತನುವಿನ ನಿರ್ಮಿತಿ ಕಳ್ಳಿ ಗಿಡಗಳದ್ದು. ಇವೆರಡು ಗುಂಪಿನ ಸಸ್ಯಗಳಿಗೂ ಬರಗಾಲದ ಭಯ ಇಲ್ಲ. ಬಿರು ಬಿಸಿಲಿಗೆ ಅವು ಬಾಡುವುದಿಲ್ಲ. ಅತಿ ಚಳಿಗೆ ಅವು ಕುಂದುವುದಿಲ್ಲ. ನಿತ್ಯ ನೀರಿನ ಅಗತ್ಯವೇ ಅವಕ್ಕೆ ಇಲ್ಲ. ವಿಶಿಷ್ಟ ಮರುಭೂಮಿಯ ಸಸ್ಯಗಳಾಗಿರುವ ಕಾಕ್ಟೈಲ್ ಮತ್ತು ಸಕ್ಯೂಲೆಂಟ್‌ಗಳದು ಎಂದರೆ ಕಳ್ಳಗಿಡಗಳದು.

ಸರಾಸರಿ ಎರಡುವರೆ ಅಡಿ ಸುತ್ತಳತೆಯ ಕಾಂಡ ಕೊಂಬೆಗಳು ಸೆಗ್ವಾರೋ ಕಳ್ಳಿ ಹೊಂದಿರುತ್ತದೆ. ಅತ್ಯುನ್ನತ ಜಲಸಂಗ್ರಹಣಾ ಸಾಮರ್ಥ್ಯ. ಮರುಭೂಮಿ ಪ್ರದೇಶದಲ್ಲೆ ಬೀಳುವ ಮಳೆ ನೀರನ್ನೇ ಅತಿ ಕ್ಷಿಪ್ರವಾಗಿ ಹೀರುವ ಶೇಖರಿಸಿಡುವ ಅದ್ಭುತ ಶಕ್ತಿ-ಪ್ರಕೃತಿ ಅದರದು. ಸೆಗ್ವಾರೋದ ಬೇರಿನ ಜಾಲ ತೆಳ್ಳನೆ ಎಳೆ-ಎಳೆಯಾಗಿ ಐವತ್ತು ಅಡಿ ವ್ಯಾಸಕ್ಕೆ ಹರಡಿರುತ್ತದೆ.

ಅಷ್ಟೇ ಪ್ರದೇಶದಲ್ಲಿ ಬೀಳುವ ಎಲ್ಲ ಮಳೆ ನೀರನ್ನೂ ನೆಲಕ್ಕೆ ಇಂಗಲು ಬಿಡದೆ ಸರಸರ ಹೀಗೆ ಹಾಕುತ್ತದೆ. ಪರಿಣಾಮವಾಗಿ ಇಡೀ ಗಿಡವೆ ಒಂದು ಜಲಾಶಯ ಅದರ ಕಾಂಡ ಕೊಂಬೆಗಳೆಲ್ಲ ಉಬ್ಬಿ ನಿಲ್ಲುತ್ತವೆ. ಯಾರ ಹಂಗಿಲ್ಲದೆ ತಾನೇ ಬದುಕುತ್ತದೆ. ಇದಕ್ಕೆ ಇನ್ನೊಂದು ಹೆಸರು ಮರುಭೂಮಿಯ ಬಾವಿ ಎಂದೆ ಪ್ರಸಿದ್ಧ.

ಕ್ಷಿಪ್ರವಾಗಿ ನೀರನ್ನು ಹೀರುವ ಶಕ್ತಿ, ಹೀರಿದ ನೀರನ್ನು, ಸಂಗ್ರಹಿಸಿಟ್ಟುಕೊಳ್ಳುವ ಸಾಮರ್ಥ್ಯ, ಅತ್ಯಂತ ಮಿತ ಭಾಷ್ಪವಿಸರ್ಜನಾ ಕ್ರಮ ಕಳ್ಳೀಗಿಡಗಳದು ಮರುಭೂಮಿಗಳಲ್ಲೂ ಅಲ್ಲಿನ ತೀವ್ರ ಜಲಕ್ಷಾಮದ ಪರಿಸರದಲ್ಲು ನೆಮ್ಮದಿಯ ದೀರ್ಘಾವಧಿಯ ಬದುಕು ಇವುಗಳದ್ದಾಗಿದೆ.

ಮಡಿಕೇರಿಯಿಂದ ೬-೮ ಕಿ.ಮೀ. ದೂರದ ದಾರಿ ಅಲ್ಲಿ ಕಾಫಿ ಏಲಕ್ಕಿ ತೋಟ, ಸಸ್ಯ ಶಾಮಲೆಯ ನಡುವೆ ಮಳೆ ಹೆಚ್ಚು ಕಡಿಮೆ ಆದಂತಿಲ್ಲ ಒಮ್ಮೆ ಬಳುಕುವ ಲಲನೆಯಂತೆ ಮತ್ತೊಮ್ಮೆ ಗಂಭೀರವನಿತೆಯಂತೆ ೮೦-೮೫ ಅಡಿ ಎತ್ತರದಿಂದ ಬಿಳಿ ನೊರೆ ನೊರೆಯಾಗಿ ಧುಮ್ಮಿಕ್ಕುವ ಅಭಿಜಲಪಾತ ಮನೋಹರ ದೃಷ್ಯವಾಗಿದೆ. ಇದರಷ್ಟೇ ಚೆಲುವು ಜೋಗಕ್ಕೂ ಇದೆ. ಬೇಸತ್ತ ಮನಕ್ಕೆ ಮಾದಕತೆ ತುಂಬಿರುವ ಸಂತೋಷ ಮೈಮನ ಹಗುರೆ ಹಗುರು.

ಈ ಜಲರಾಶಿ ಎಷ್ಟು ನಯನ ಮನೋಹರವೋ ಅದರ ಮೂಲ ಅಷ್ಟೇ ಅಸಹ್ಯಕರ. ಇಡೀ ಮಡಿಕೇರಿ ನಗರದ ಹೋಟೆಲ್ ತ್ಯಾಜ್ಯ ಹಾಗೂ ಈ ಮಡಿಕೇರಿಯಾದ್ಯಂತ ಪ್ರವಾಸಿಗರು ಬಳಸಿ ಬಿಸಾಡಿದ ತ್ಯಾಜ್ಯಗಳೇ ಎಲ್ಲೆಂದರಲ್ಲಿ ತೇಲಾಡುತ್ತಿವೆ.'

ಇದೇ ಮಡಿಕೇರಿಯಿಂದ ಸುಮಾರು ೪೦-೪೫ ಕಿ.ಮೀ. ದೂರ ಕ್ರಮಿಸಿದರೆ ಅದುವೇ ಬ್ರಹ್ಮಗಿರಿ ಎಲ್ಲಿ ನೋಡಿದರಲ್ಲಿ ಕರ್ಣ ತಣಿಸುವ ಹಸಿರು, ಸಾಲು ಸಾಲು ಶಿಖರ ಅಲ್ಲಲ್ಲೇ ಮೋಡ ಆವರಿಸಿ ಮಳೆಯ ಸಿಂಚನ ಇಂತಹ ಚೆಲುವು ಉಳಿಸಿಕೊಳ್ಳಲು ಪರಿಸರವನ್ನು ಬಳಸಿ ಬಿಸಾಡದೇ ಎಂದೆಂದೂ ಕಾಪಾಡಿಕೊಳ್ಳಬೇಕು.

ಅಧ್ಯಾಯ–೮

ಪ್ರಾಣಿ ಪರಿಸರ

ಅಧ್ಯಾಯ-೮

ಪ್ರಾಣಿ ಪರಿಸರ

ಹಿನ್ನೆಲೆ :

ಜೀವಿಗಳಲ್ಲಿನ ವಿವಿಧತೆಯನ್ನು ಜೀವ ವೈವಧ್ಯವೆಂದು ಕರೆಯುತ್ತೇವೆ. ಭೂಮಿಯ ಮೇಲೆ ಒಂದು ನಿರ್ದಿಷ್ಟ ಪ್ರದೇಶದಲ್ಲಿ ನಿರ್ದಿಷ್ಟ ಜೀವಿಗಳು ವಾಸಿಸುವುದನ್ನು ಜೈವಿಕ ಪರಿಸರ ವೆಂದು ಕರೆಯುತ್ತೇವೆ. ಅದನ್ನು ಸಸ್ಯ, ಪ್ರಾಣಿ, ಪರಿಸರವೆಂದು ವಿಭಜಿಸುವುದು ವಾಡಿಕೆ ಅವೆಲ್ಲ ಆಯಾಸ್ಥಳದಲ್ಲಿ ಪೂರಕವಾದ ವಾತಾವರಣ ಸೃಷ್ಟಿಸಿಕೊಂಡು ಹೊಂದಾಣಿಕೆ ಬದುಕನ್ನು ಬದುಕತ್ತವೆ. "ಪ್ರತಿ ಪ್ರಭೇದದಲ್ಲಿ ಅನುವಂಶಿಯತೆ ವ್ಯತ್ಯಾಸಗಳಿರುವ ತಳಿ, ಉಪತಳಿ, ಹಾಗೂ ಸದಸ್ಯರಿವೆ ಅಲ್ಲದೇ ಈ ಭೂಮಿಯಲ್ಲಿ ಜೀವಿಗಳು ವಾಸವಿರುವ ಅನೇಕ ರೀತಿಯ ಪರಿಸರ ವ್ಯವಸ್ಥೆಗಳಿವೆ. ಇಂತಹ ಒಂದು ವೈವಿಧವೇ ಜೀವಿ ವೈವಿಧ್ಯ"[೧೧೭] ವಿಶೇಷವಾಗಿ ಜೀವ ವಿಜ್ಞಾನದ ಒಂದು ಭಾಗವಾದ ಪ್ರಾಣಿಗಳು ಪರಿಸರದೊಂದಿಗೆ ಅನನ್ಯ ಸಂಬಂಧ ಹೊಂದಿವೆ. ಪರಿಸರ ಸಮತೋಲನದಲ್ಲಿ ಪ್ರಾಣಿಗಳ ಪಾತ್ರ ಮತತ್ವದ್ದು. ಅನೇಕ ವಚನಕಾರರು ಪ್ರಾಣಿ ಗೊಸಕಗಳನ್ನು ಒಳಸುಮೂಲಕ ಪ್ರಾಣಿ ಪರಿಸರವನ್ನು ಚರ್ಚಿಸಿದ್ದಾರೆ. ಅಲ್ಲದೇ ಮನುಷ್ಯ ಪ್ರಾಣಿಗಳ ಸಂಬಂಧ ಪರಿಸರ ಸಂಬಂಧನೆಯಲ್ಲಿ ವಚನಕಾರರ ನಿಲುವುಕೂಡ ಮಹತ್ವದ್ದು ಆದರಿಂದ ಪ್ರಾಣಿಪರಿಸರ ಕುರಿತ ಅಧ್ಯಯನ ಕೈಗೆತ್ತಿಕೊಳ್ಳಲಾಗಿದೆ.

ಪ್ರಾಣಿ ಪರಿಸರ: ಅರ್ಥ

ಪರಿಸರ ಪ್ರಾಣಿ ಸಂಬಂಧ ಅನನ್ಯವಾದದ್ದು ಪರಿಸರ ಸಮತೋಲನದಲ್ಲಿ ಪ್ರಾಣಿಗಳ ಪಾತ್ರವು ಮಹತ್ವ ಇತ್ತೀಚಿನ ದಿನಗಳಲ್ಲಿ ಪ್ರಾಣಿಪರಿಸರ ಒಂದು ವೈಜ್ಞಾನಿಕ ಶಿಸ್ತಾಗಿ ಬೆಳದಿದೆ. ವಿಶೇಷವಾಗಿ ಪರಿಸರ ವಿಜ್ಞಾನದ ಎರಡು ಮುಖ್ಯಭಾಗಗಳಲ್ಲಿ ಪರಿಸರ ಒಂದು ಇದನ್ನು ಅನಿಮಲ್ ಇಕಾಲಜಿ

---

[117] ಪರಿಸರ ಅಧ್ಯಯನ – ಡಾ. ಎಚ್.ಎಸ್. ನಿರಂಜನ್, ಪು.ಸಂ.೯೭.

ಎಂದು ಕರೆಯುವರು.[೧೧೮] ಪ್ರಾಣಿ ಪರಿಸರವು ಜೀವವೈವಿಧ್ಯದ ಮೂರು ಪ್ರಭೇಧಗಳಲ್ಲಿ ಒಂದಾದ ಪ್ರಭೇಧ ವೈವಿಧ್ಯಕ್ಕೆ ಸೇರಿದೆ.[೧೧೯]

ಭೂಮಿಯ ವಯಸ್ಸು ಎಷ್ಟು ನಿಗೂಢವೋ ಅಷ್ಟೇ ನಿಗೂಢತೆ ಜೀವೋತ್ಪತ್ತಿಯದು ಕೂಡ. ನಿರ್ಜಿವ ಪರಿಸರದಲ್ಲಿ ಜೀವಗಳು ಹೇಗೆ ಉತ್ಪತ್ತಿ ಹೊಂದಿದವೆಂಬುದು ಅಮೇರಿಕಾದ ಯೂರಿ ಹೆರಾಲ್ಡ್ ಹೀಗೆ ಹೇಳುತ್ತಾನೆ. ಈಗನ ಪ್ರಕಾರ ಕಾಸ್ಮಿಕ ಧೂಳಿನಲ್ಲಿ ಜಲಜನಕದ ಪರಮಾಣುಗಳು ತತ್ಸಂಬಂಧಿಗಳಾದ ಇಂಗಾಲ, ಸಾರಜನಕ, ಆಮ್ಲಜನಕ, ಮುಂತಾದ ಅನೀಲದ ಪರಮಾಣುಗಳಿದ್ದವು. ಜೀವಕ್ಕೆ ಅಗತ್ಯವಾದ ಪ್ರೋಟೀನ ವಸ್ತುಗಳೇ ಮೂಲ ಜೀವಕ್ಕೆ ಅವಶ್ಯ ಇವು ಭೂಮಿಯಲ್ಲಿ ಇದ್ದವೆಂದು ಹೇಳುತ್ತಾನೆ.

ಸ್ಫೋಟಗೊಂಡ ಭೂಮಿ ತಂಪಾಗುತ್ತಾ ಬಂದ ಹಾಗೆ ನಿಲ್ಲ ತೊಡಗಿದ ನೀರಿನಲ್ಲಿ ಅಮಿನೋ ಆಸಿಡ್, ಜೀವ ನಿರ್ಮಾಣಕ್ಕೆ ಕಾರಣವಾದ ಕಣಗಳು ಶೇಖರವಾಗಿ ಕ್ರಮೇಣ ಜೀವ ನಿರ್ಮಾಣಕ್ಕೆ ಕಾರಣವಾಯಿತು. ಕ್ರಮೇಣ 'ಅಮಿಬಾ'ದಂತಹ ಏಕಾಣು ಬ್ಯಾಕ್ಟರಿಯಾಗಳು ರೂಪಗೊಂಡವು. ಈ ಸಂದರ್ಭದಲ್ಲಿ ದಟ್ಟ ಮೋಡದ ತೆರೆ ಆಗಸದಲ್ಲಿ ನಿರಂತರವಾಗಿ ಮುಸುಗಿದ್ದುದ್ದರಿಂದ ಸೂರ್ಯನ ಬೆಳಕು ಭೂಮಿಯನ್ನು ಭೇಧಿಸಲು ಹೇಗೆ ಸಾದ್ಯ. ಅಂತಹ ಸಂದರ್ಭದಲ್ಲಿ ಸಸ್ಯ ರೂಪದ ಅಣುಗಳಾಗಲಿ ಹರಿತ್ತುಗಳನ್ನುಳ ಜೀವಕೋಳಶಗಳಾಗಲಿ ಅಂತಹ ವಾತಾವರಣದಲ್ಲಿ ಇರುವುದು ಸಾಧ್ಯವಿರಲಿಲ್ಲ. ಕ್ರಮೇಣ ಮೋಡಗಳ ಹೊದಿಕೆ ಬೇಧಿಸಿ ಸೂರ್ಯನ ಕಿರಣ ಭೂಮಿಗೆ ಬರತೊಡಗಿದವೋ ಆಗ ಹರಿತ್ತುಗಳ ಸಹಾಯದಿಂದ ಸೂರ್ಯನ ಬೆಳಕನ್ನು ಉಪಯೋಗಿಸಿ ಸಂಕೀರ್ಣವಾದ ಸಸ್ಯ ಪ್ರಪಂಚಕ್ಕೆ ನಾಂದಿಯಾಯಿತು. ಇದರೊಂದಿಗೆ ಪ್ರಾಣಿ ಪ್ರಪಂಚದ ನೂರಾರು ರೀತಿಯ ಚಲಿಸುವ ವಿಧಾನಗಳ ಮೂಲ ಇಲ್ಲಿಂದಲೇ ಆರಂಭವಾಯಿತೆಂದೇ ಹೇಳಬೇಕು. ನೀರಿನಲ್ಲಿ ಉದ್ಭವವಾದ ಜೀವಿಗಳು ತಮ್ಮ ದೇಹದಿಂದ ನೀರನ್ನೊತ್ತಿ ಮುಂದೆ ಸಾಗುವುದಕ್ಕೆ ಅಗತ್ಯ ದೇಹ ರಚನೆಯಾಗತೊಡಗಿತ್ತು. ಅದು ಮೀನಿನಂತಹ ಪ್ರಾಣಿ.

ಸುಮಾರು ಮುನ್ನೂರು ಐವತ್ತು ಕೋಟಿ ವರ್ಷಗಳ ಈ ಅವಧಿಯಲ್ಲಿ ಈ ಜೀವಕೋಶಗಳು ಹೇಗೆ ಸಸ್ಯ ಮತ್ತು ಪ್ರಾಣಿ ಕುಲಗಳಾಗಿ ವಿಕಾಸವಾದವೆಂದು ತಿಳಿಯುವುದು ಕಷ್ಟವೇ ಸರಿ. ಸೃಷ್ಟಿಯ ಆದಿಯಲ್ಲಿ ಸೂರ್ಯನ ಕಿರಣಗಳು ಉಪಯೋಗಿಸಿ ಆಹಾರೋತ್ಪಾದನೆ ಮಾಡುವ ಪಾಚಿಯು

---

[118] ವಿವರಕ್ಕಾಗಿ ನೋಡಿ, ಪರಿಸರ ವಿಜ್ಞಾನ. ಕನ್ನಡ ವಿಶ್ವಕೋಶ ಸಿ.ಡಿ. ಮೈಸೂರು ವಿಶ್ವವಿದ್ಯಾಲಯ, ಮೈಸೂರು-೨೦೦೬

[119] ವಿವರಕ್ಕಾಗಿ ನೋಡಿ, ಪರಿಸರ ಅಧ್ಯಯನ – ಡಾ. ಎಚ್.ಎಸ್. ನಿರಂಜನ್.

ಕಾಡುಗಳ ನಡುವೆ ಅಕ್ಟೋಪಸ್ ಸೀಗಡಿಗಳಂತ ಮೂಳೆಗಳಿಲ್ಲದ ಮೃದ್ವಸ್ಥಿ ಜೀವಿಗಳ ಸಮುದಾಯವೇ ಹುಟ್ಟಿದವು. ಈಗಿನ ಚಿಪ್ಪಿಮೀನು, ಜಲಕೀಟಗಳು ಅಗಾಧ ರೀತಿಯಲ್ಲಿ ಸೃಷ್ಟಿಯಾದವು.

ಕ್ರಮೇಣ ಈ ಸಸ್ಯಗಳು ನಿರಿನಲ್ಲಿ ತೇಲಾಡುತ್ತ ಸ್ವಲ್ಪ ಗಟ್ಟಿ ತಳದಲ್ಲಿ ಕಾಲೂರಿ (ಮ್ಯಾಂಗ್ರೋವ್ ಸಸ್ಯಗಳು) ಗಾಳಿಯಲ್ಲಿಯ ಇಂಗಾಲದ ಡೈಕ್ಸೈಡ್ ಹೀರಲು ಪ್ರಾರಂಭಿಸಿದವು. ಮೇಲೆ ಇಂಗಾಲ ಕೆಳಗೆ ಭೂಮಿಯ ಪೋಷಕಾಂಶ ಹೀರಿ ಬೆಳೆಯಲು ಸ್ವಲ್ಪ ಕಾಲಾವಕಾಶವೇ ಬೇಕಾಯಿತು.

ಈ ಸಸ್ಯಗಳು ಹೂ ಹಣ್ಣುಗಳನ್ನು ತನ್ಮೂಲಕ ಬೀಜೋತ್ಪತ್ತಿ ವಿಧಾನವಿರದೇ ಕ್ರಮೇಣ ತನ್ನಷ್ಟಕ್ಕೆ ತಾನೇ ಹಸುರಾದ ಕಾಂಡದಿಂದಲೇ ಆಹಾರೊತೋತ್ಪತ್ತಿ ಮಾಡಿಕೊಳ್ಳುತ್ತ ಸೌರಶಕ್ತಿಯಿಂದ ಕ್ರಮೇಣ ಅಗಲವಾದ ಹಸುರಾದ ಎಲೆಗಳು ರೂಪಗೊಂಡವು. ಕ್ರಮೇಣ ಬೀಜ ಪ್ರಸಾರದಿಂದ ಸಂತಾನಾಭಿವೃದ್ಧಿ ಪ್ರಾರಂಭವಾಯಿತು.

ಹೇಗೆ ಅಪರಿಮಿತ ಸಸ್ಯಗಳು ಉತ್ಪತ್ತಿಯಾದವೋ ಅದೆಷ್ಟೋ ಬಗೆಯ ಮೀನುಗಳು ಹುಟ್ಟಿಕೊಂಡವು, ಈ ಮೀನುಗಳ ಸಮೂಹದಲ್ಲಿ ಕೆಲವು ರೀತಿಯ ಚಿಕ್ಕ ಮೀನುಗಳಲ್ಲಿ ಪ್ರಕೃತ ರೂಪದ ಶ್ವಾಸಕೋಶ ರೂಪಗೊಂಡವು ಈ ಪ್ರಾಕೃತ ಶ್ವಾಸಕೋಶ ಮೀನುಗಳಿಗೆ ನೀರಿನಲ್ಲಿನ ಅಮ್ಲಜನಕ ಕಡಿಮೆಯಾದಾಗ ಇಲ್ಲವೇ ಸಮುದ್ರದ ನೀರು ಸಂಪೂರ್ಣ ಇಂಗಿ ಹೋದಂತಹ ಸಂದರ್ಭದಲ್ಲಿ ಗಾಳಿಯಿಂದಲೇ ನೇರವಾಗಿ ಅಮ್ಲಜನಕವನ್ನು ಹೀರಲು ಸಹಾಯ ಮಾಡುತ್ತಿದ್ದವು.

ಕ್ರಮೇಣ ಜೀವವಿಕಾಸದಲ್ಲಿ ಪ್ರಾಣಿ ಸಂಕುಲಗಳು ಭೂಮಿಯ ಮೇಲೆ ಮನುಷ್ಯನವರೆಗೂ ವಿಕಾಸವಾಗಲು ನಿಜಕ್ಕೂ ಮೀನುಗಳೇ ಕಾರಣ. ಈ ರೀತಿ ನೀರಿನಲ್ಲಿ ಚಲಿಸುವ ಮೀನಿನ ರೆಕ್ಕೆಗಳು ನಿಧಾನವಾಗಿ ಕೈಕಾಲುಗಳಾಗಿ ನೆಲದ ಮೇಲಿನ ಚಲನೆಗೆ ಸಹಾಯವಾದವು. ಇವುಗಳಿಗೆ ನಾವಿಂದು ಸರಿಸೃಪಗಳೆಂದು ಕರೆಯುತ್ತೇವೆ.

ಜೀವಸ್ಥರವೆಂದು ಕರೆಯುವ ಇಷ್ಟೂ ಅಗಣಿತ ಜೀವಿಗಳು ಎಲ್ಲೆಂದರಲ್ಲಿ ಬದುಕಲು ಸಾದ್ಯವಿಲ್ಲ. ಅಂದರೆ ಆಯಾ ಜೀವರಾಶಿ ಆಯಾ ಜಾಗದಲ್ಲಿಯೇ ಹವಾಮಾನಕ್ಕನುಕೂಲವಾದ ಜಾಗದಲ್ಲೇ ಬದುಕುತ್ತವೆ. ಇಂಥ ಜಾಗವೇ ಪ್ರಾಣಿಗಳ ತವರು.

ಸಸ್ಯಪರಿಸರದಲ್ಲಿ ನೋಡುವಂತೆ ಕೆಲಬಗೆಯ ಮರಳುಗಾಡಿನ ಸಸ್ಯಗಳು ಬಿಸಿಲಿಗೆ ಜಗ್ಗುವುದೇ ಇಲ್ಲ. ಅವು ನೀರನ್ನು ಪಡೆದುಕೊಳ್ಳಲು ಅನೇಕ ವಿಶಿಷ್ಟ ಬಗೆಯ ಮಾರ್ಗಗಳನ್ನು ಅನುಸರಿಸುತ್ತವೆ. ಈ

ಕುರುಚಲಾದ ಗಿಡಗಳು ಅತಿ ಆಳಕ್ಕೆ ತಮ್ಮ ಬೇರನ್ನು ಬಿಟ್ಟು ಅಂತರ್ಜಲ ಹೀರುತ್ತವೆ. ಇಲ್ಲವೇ ನಸುಕಿನಲ್ಲಿ ಬೀಳುವ ಇಬ್ಬನಿಯನ್ನೆ ಹೀರುತ್ತವೆ.

ಯುರೋಪ ಖಂಡ ಒಂದನ್ನುಳಿದು ಎಲ್ಲ ಮರಳುಗಾಡೇ ನೆಲ ಬಂಜರಾಗಿ ಮರುಭೂಮಿ ವಿಸ್ತಾರವಾಗುತ್ತಾ ಸಾಗಿದೆ. ಇದಕ್ಕೆ ಕಾರಣ ಮನುಷ್ಯರಾದ ನಾವೇ ಅಲ್ಲಿರುವ ಅಷ್ಟಿಷ್ಟು ಕಾಡು ದನಗಳನ್ನು ಮೇಯಿಸಿ, ಮರ ಕಡಿದು ಉರುವಲಾಗಿ ಮಾಡಿದ್ದರಿಂದಲೇ ಮರುಭೂಮಿ ನಿಧಾನಕ್ಕೆ ವಿಸ್ತಾರವಾಗುತ್ತಿದೆ.

ಮರುಭೂಮಿಯು ನೀರಿಲ್ಲದ ನೆಲವಾದರೇ ತಂಡ್ರಾ ಪ್ರದೇಶ ಇದಕ್ಕೆ ಹೊರತಾಗಿದೆ. ವರ್ಷದ ಒಂಬತ್ತು ತಿಂಗಳು ಮಳೆ, ಶೀತ ಹವಾಮಾನ ಮೂರು ತಿಂಗಳು ಬೇಸಿಗೆ ಸಂದರ್ಭದಲ್ಲಿ ಮಂಜು ಕರಗಿ ಅಷ್ಟಷ್ಟು ಬಿಸಿ ನೀರು ಈ ಕ್ಷಿಪ್ರ ಬೇಸಿಗೆಯಲ್ಲಿ ಅಲ್ಲಲಿ ಸಸ್ಯ ಪ್ರಾಣಿಗಳು ಬೆಳೆಯಲಿಕ್ಕೆ ಅನುಕೂಲವಾಗುತ್ತವೆ. ಹಿಮಕರಗುತ್ತಲೇ ಗಿಡಮರಗಳೆಲ್ಲ ಚಿಗುರುತ್ತವೆ. ಈ ಸಂದರ್ಭದಲ್ಲಿ ಜಿಂಕೆ, ಹಿಮಕರಡಿ, ತೋಳ, ಮುಂತಾದ ಪ್ರಾಣಿಗಳು ವಲಸೆ ಬರುತ್ತವೆ. ಇಲ್ಲಿ ವಾಸ ಮಾಡಿದ ಎಸ್ಕಿಮೋ ಜನರು ಸೀಲ್ ಪ್ರಾಣಿ ಮತ್ತು ಮೀನುಗಳನ್ನು ತಮ್ಮ ಆಹಾರಕ್ಕಾಗಿ ಬಳಸುತ್ತಾರೆ. (ಡಿಸ್ಕವರಿ ಚಾನೆಲ್) ಈ ಪ್ರದೇಶದಲ್ಲಿರುವ ಪ್ರಮುಖ ಪ್ರಾಣಿಗಳೆಂದರೆ, ಹಿಮಕರಡಿ, ತೋಳ, ನರಿ, ಮೊಲ ಇವು ವರ್ಷದ ಒಂಬತ್ತು ತಿಂಗಳು ಮಲಗಿದ್ದು ಬೇಸಿಗೆಯ ಮೂರು ತಿಂಗಳು ಎಚ್ಚರವಾಗಿರುವಂತೆ. ಡಾರ್ವಿನ್‌ನು ಹೇಳಿರುವಂತೆ ಮನುಷ್ಯ ಮತ್ತು ಪ್ರಾಣಿಗಳು ಪರಿಸರ ಪ್ರದೇಶಕ್ಕನುಗುಣವಾಗಿ ಭಿನ್ನವಾಗಿದ್ದು ಹಿಂದೆ ಮನುಷ್ಯ ಪ್ರಾಣಿ ಸಂಬಂಧವನ್ನು ಸ್ವಭಾವಗಳನ್ನು ಪಳೆಯುಳಿಕೆಯಾಗಿರುವುದು ಸುಳ್ಳಲ್ಲ.

ನಮ್ಮ ಭಾಷೆಯಿಂದ ತಿಳಿದಿರುವ ಪ್ರಕಾರ ಎಲ್ಲ ಮನುಷ್ಯ ಅಲೆಮಾರಿ ಜೀವನ ತ್ಯಜಿಸಿ ಒಂದೆಡೆ ಬೀಡು ಬಿಟ್ಟು ನೆಲೆ ನಿಂತು, ಲೆಕ್ಕವಿಡುವುದು ಆರಂಭವಾಯಿತೋ ಆಗ ಬೇಸಾಯವನ್ನು ಆಶ್ರಯಿಸಿದ. ಈ ಸಂದರ್ಭದಲ್ಲಿ ಅದಕ್ಕೆ ಪೂರಕವಾದ ಪ್ರಾಣಿಗಳೊಂದಿಗೆ ಸಂಬಂಧ ಬೆಳೆಯಿತು. ಮೊದಲು ಪ್ರಾಣಿ ಮತ್ತು ಮಾನವ ಸಂಬಂಧ ನಂತರ ಘರ್ಷಣೆ, ಇದಕ್ಕೆ ಕಾರಣ ಮನುಷ್ಯ ಕೆಲ ಪ್ರಾಣಿಗಳ ಶಕ್ತಿಯ ಮುಂದೆ ಮಾನವ ಅಸಹಾಯಕನಾಗಿ ಬೆಚ್ಚಿ ಬಿದ್ದನು. ಇದರ ಪರಿಣಾಮ ದುಷ್ಪರಿಣಾಮಗಳೆಂದು ಅವನು ಮನಗಂಡ, ಹಾವು, ಹುಲಿ, ಆನೆ, ಚಿರತೆ, ಸಿಂಹ ಮೊದಲಾದವುಗಳಿಗೆ ದೈವಿಕ ಶಕ್ತಿಯನ್ನು ಆರೋಪಿಸಿ ಪೂಜಿಸಲು ಶುರು ಮಾಡಿದ.

[illegible]

ಭಾರತಿ ಪುರಾಣಗಳಲ್ಲಿ ದೇವ, ದೇವತೆಗಳೇ ನಾಯಕರು. ಇದರಲ್ಲಿ ಪ್ರಾಣಿಗಳಾದಿಯಾಗಿ ದೇವರ ಸುತ್ತಲೇ ಸುತ್ತುತ್ತವೆ. ಪುರಾಣಗಳಲ್ಲಿ ದೇವಲೋಕದ ಕಲ್ಪನೆ, ಶಿವನೇ ಅಧಿಪತಿ, ಅವನ ಗಣ ಸಮೂಹದಲ್ಲಿ ನಂದೀಶ ಪ್ರಮುಖ. ದೇಹ ಮನುಷ್ಯನದಾದರೂ ಮುಖ ಮಾತ್ರ ನಂದಿಯದು. ಈ ಕಾರಣದಿಂದ ಶಿವಭಕ್ತರೆಲ್ಲ ನಂದಿ ಪೂಜ್ಯಕರಾದರು. ಹರಪ್ಪ ಮತ್ತು ಮಾಹೆಂಜೋಧಾರೋ ಸಂಸ್ಕೃತಿಯ ಉತ್ಖನನದಲ್ಲಿ ಎತ್ತುಗಳ ಚಿತ್ರವುಳ್ಳ ಮುದ್ರೆಗಳು ದೊರೆತಿವೆ. ಕ್ರಿ.ಪೂ. ೩ ರಲ್ಲಿ ಭಾರತಕ್ಕೆ ಬಂದ ಮೆಗಾಸ್ತಾನಿಸ್‌ನು ರೈತರು ಬೇಸಾಯಕ್ಕಾಗಿ ಎತ್ತನ್ನು ಬಳಸುತ್ತಿದ್ದುದಾಗಿ ಉಲ್ಲೇಖಿಸಿದ್ದಾನೆ. ಇನ್ನೂ ಶಿವನ ಮಗ ಗಣೇಶನ ಬಗ್ಗೆ ಪೌರಾಣಿಕ ಕಥೆ ಎಲ್ಲರಿಗೂ ಗೊತ್ತಿದೆ.

ಮಾನವ ಜನಾಂಗದ ಯಾವುದಾದರೂ ಬುಡಕಟ್ಟಿನವರು ಯಾವ ಪ್ರಾಣಿ ಅಥವಾ ಮರಕ್ಕೆ ಸಂಬಂಧಿಸಿದಂತೆ ತಮ್ಮನ್ನು ಗುರುತಿಸಿಕೊಳ್ಳುತ್ತಾರೋ ಆ ಪ್ರಾಣಿ ಅಥವಾ ಮರವು ಆ ಪಂಗಡದ ಟೋಟೆಂ ಎಂದಾಗುತ್ತದೆ. ಈ ಟೊಟೆಂಗಳಲ್ಲಿರುವ ನಂಬಿಕೆಯೊಂದಿದೆ. ಏನೆಂದರೆ, ಯಾವುದು ಒಂದು ಪಂಗಡದ ಟೊಟೆಂ ಆಗಿರುತ್ತದೋ ಆ ಪ್ರಾಣಿಯನ್ನು ಅವರು ಹಿಂಸಿಸುವಂತಿಲ್ಲ.

ಪ್ರಾಚಿನ ಈಜಿಪ್ತಿನ ನಿದರ್ಶನ ನೋಡುವುದಾದರೆ ಮುಖಗಳು ವಿಚಿತ್ರವಾದ ಮೃಗಾಲಯವನ್ನು ನೋಡಿದಂತೆ ಅಂದರೆ ದೇಹ ಮನುಷ್ಯನದಾಗಿದ್ದು, ಮುಖ ಮೃಗಾಲಯವನ್ನು ನೋಡಿದಂತೆ ಅಂದರೆ ದೇಹ ಮನುಷ್ಯನದಾಗಿದ್ದು, ಮುಖ ಬೇರೆಯದಾಗಿರುತ್ತದೆ. ಈ ಮುಖಗಳಿಂದ ಅದು ದೇವಿ ದೇವತೆಗಳನ್ನು ಗುರುತಿಸಬಹುದು ಅಲೆಮಾರಿಗಳಂತೆ ಜೀವಿಸುತ್ತಿದ್ದ ಅನಾಗರಿಕ ಜನಾಂಗದವರಿಗೆ ಆ ಜಮೀನಿನ ಬಗ್ಗೆ ಫಲವತ್ತತೆಯ ಬಗ್ಗೆ ತಿಳಿದು ಠಿಕಾಣಿ ಹೂಡಿದರು. ಅವರಲ್ಲಿ ಎಷ್ಟೋ ಬಗೆಯ ಟೋಟೆಂ ಗಳನ್ನು ಉಳ್ಳವರಿದ್ದರು. ಒಂದೊಂದು ಪಂಗಡಕ್ಕೂ ಒಂದೊಂದು ಪ್ರಾಣಿಯೊಂದಿಗೆ ಸಂಬಂಧ ವಿರುತ್ತದೆ.

ಒಂದು ಕಡೆ ಗಿಡಗನ ಗೂಡು, ಇನ್ನೊಂದೆಡೆ ದನಗಳ ತಾಣ, ಮತ್ತೊಂದೆಡೆ ನರಿಗಳ ಗುಹೆ, ಇವೆಲ್ಲ ನೈಲ್ ನದಿ ಜನರ ಪಂಗಡಗಳಾಗಿದ್ದವು. ಆಧಿಕಾಲದಿಂದಲೂ ಪಶುಪಕ್ಷಿಗಳು, ಮಾನವನ ಜೀವನದೊಂದಿಗೆ ಬೆರೆತು ಹೋಗಿವೆ. ಆರಂಭದಲ್ಲಿ ಮಾನವ ಗೆಡ್ಡೆ ಗೆಣಸುಗಳನ್ನುತಿನ್ನುವುದು ಆರಂಭಿಸಿದ, ಕಾಲದ ಗತಿಯಲ್ಲಿ ಆಡು, ಕುರಿ, ಹಸು, ಎತ್ತು, ಎಮ್ಮೆ, ಕೋಣ, ಕತ್ತೆ ಕುದುರೆ, ಜಿಂಕೆ, ಮೀನು, ಏಡಿ, ಕೋಳಿ ಪಾರಿವಾಳ ಗಿಣಿ, ಅಳಿಲು, ಗುಬ್ಬಚ್ಚಿ ಮೊದಲಾದ ಪ್ರಾಣಿ ಪಕ್ಷಿಗಳನ್ನು ಕೊಂದು ತಿನ್ನಲು ಪ್ರಾರಂಭಿಸಿದ್ದಾನೆ.

ಹಸು, ಎಮ್ಮೆ, ಕುರಿ, ಮೇಕೆಗಳನ್ನು ಮನೆಯಲ್ಲಿ ಸಾಕಿ ಅವುಗಳಿಂದ ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ ತುಪ್ಪ ಮೊದಲಾದವುಗಳನ್ನು ಪಡೆದು ಉಪಯೋಗಿಸತೊಡಗಿದ್ದಾನೆ. ಮನೆಯ ರಕ್ಷಣೆ ಮಾಡಲು ನಾಯಿ ಮತ್ತು ಬೆಕ್ಕನ್ನು ಸಾಕುತ್ತಾರೆ. ಒಂದೆಡೆ ನೆಲೆ ನಿಂತು ಕೃಷಿಯನ್ನು ಒಂದು ಉದ್ಯೋಗವನ್ನಾಗಿ ಅವಲಂಬಿಸತೊಡಗಿದಾಗ ಹಸು. ಎತ್ತು, ಎಮ್ಮೆ, ಕೋಣ, ಕತ್ತೆ ಕುದುರೆ ಮೊದಲಾದವುಗಳನ್ನು ಸಾಕಿ ಅವುಗಳಿಂದ ಮರದ ದಿಮ್ಮಿ, ಕಲ್ಲು ಇಂತಹ ಭಾರವಾದ ಸಾಮಾನುಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆ ಸಾಗಿಸಲು ಒಂಟೆ, ಆನೆಗಳನ್ನು ಬಳಸುತ್ತಾ ಬಂದ. ಈ ರೀತಿ ಪ್ರಾಣಿಗಳೊಂದಿಗೆ ಮಾನವನ ಸಂಬಂಧ ಬೆಸೆದುಬಂತು.

ಹೀಗೆ ಸಾಕಿದ ಪ್ರಾಣಿಗಳು ಅನಾರೋಗ್ಯಕ್ಕೆ ತುತ್ತಾದರೆ ಅವುಗಳಿಗೆ ಮಾನವರಂತೆ ಮಾತನಾಡಲು ಬರುವುದಿಲ್ಲ ಎಂಬುದೊಂದೆ. ಉಳಿದಂತೆ ಎಲ್ಲ ತರಹದ ಸೊಪ್ಪು ಸದೆ ತಿಂದ ಅನುಭವ ಇವಕ್ಕಿದೆ. ಆದ್ದರಿಂದಲೇ ಅರ್ಜೀರ್ಣದಿಂದ ಹೊಟ್ಟೆಯೂ ಕೆಟ್ಟಿರಬೇಕು. ಅದಕ್ಕೆ ಇನ್ನಾವುದೋ ಹುಲ್ಲುತಿಂದಾಗ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿರಬೇಕು. ಹೀಗಾಗಿ ಪ್ರಾಣಿಗಳು ಅಂತಹ ಸಸ್ಯ ಔಷಧಿಯಾಗಿ ಬಳಸುತ್ತಾ ಬಂದವು. ನಮ್ಮ ಮನೆಯ ಸಾಕುಪ್ರಾಣಿಗಳು ನಾಯಿ, ಬೆಕ್ಕುಗಳು ನಿನ್ನೆಯ ದಿನ ತಿಂದ ಆಹಾರ ಅಜೀರ್ಣವಾದರೆ, ನಸುಕಿನಲ್ಲಿಯೇ ಇಬ್ಬನಿ ಹುಲ್ಲು ತಿಂದು ವಾಂತಿ ಮಾಡಿಕೊಳ್ಳುತ್ತವೆ. ಇವುಗಳಿಗೆ ಎಲ್ಲಾದರೂ ಗಾಯವಾದರೆ ಮೈಯೆಲ್ಲಾ ನೆಕ್ಕಿಕೊಂಡು ಗಾಯ ವಾಸಿಮಾಡಿಕೊಳ್ಳುತ್ತೇವೆ. ಹೀಗೆ ನಿಸರ್ಗವೇ ಪ್ರಾಣಿಗಳಿಗೆ ಸ್ವಯಂ ಆಗಿ ತೆಗೆದುಕೊಳ್ಳುವ ಔಷಧಿ ಪರಿಚಯಿಸಿದೆ.

ಪ್ರಾಣಿ ಪರಿಸರ – ವಚನಕಾರರು :

ಮಾನವನ್ನು ಒಂದು ಪ್ರಾಣಿ ಎಂಬ ಹೇಳಿಕೆ ವಾಸ್ತವವಾದರೂ ಅನೇಕ ಸಂದರ್ಭಗಳಲ್ಲಿ ಮನುಷ್ಯನಗಿಂತ ಪ್ರಾಣಿಗಳೆಮೇಲು ಎಂಬುದು ಸಾರ್ವತ್ರಿಕ ಸತ್ಯ. ಭೂಮಿಯ ಮೇಲಿನ ಪಸರಿಸ ಸಮತೋಲನದಲ್ಲಿ ಪ್ರಾಣಿಪ್ರಪಂಚದ ಮಹತ್ವ ಹೆಚ್ಚಾಗಿದೆ ಅನೇಕ ದಾರ್ಶಕರು ತಾತ್ವಿಕ ಸಿದ್ಧಾಂತಗಳನ್ನು ಪ್ರತಿಪಾದಿಸುವಾಗ ಪ್ರಾಣಿ ರೂಪಕ ದೃಷ್ಟಾತಂಗಳನ್ನು ಬಳಿಸಿದ್ದಾರೆ. ಪಂಚತಂತ್ರಕತೆಗಳು ಪ್ರಾಣಿಕೇಂದ್ರಿತ ವಾಗಿವೆ. ಹಾಗೇ ವಚನಕಾರರು ಕೂಡ ಅನೇಕ ಪ್ರಾಣಿಗಳನ್ನು ತಮ್ಮ ವಚನಗಳಲ್ಲಿ ಉಲ್ಲೇಖಿಸಿದ್ದಾರೆ.

“ಬೇವಿನ ಮರದಲ್ಲಿ ಕಾಗೆ ಮನೆಯ ಮಾಡಿತ್ತು
ಕೋಗಿಲೆ ಮರಿಯ ಹಾಕಿತ್ತು
ಗೂಬೆ ಆರೈಕೆ ಮಾಡಿತ್ತು
ಹಂಸೆ ತಂಬೆಲರ ಗುಟಕು ಕೊಟ್ಟು ಸಂಭ್ರಮನ ಮಾಡಿತ್ತು.
ಅದು ಯಾರ ಹಂಗಿಲ್ಲದೆ ಹಾರಿಹೋಗಿತ್ತು.
ಎನಗೆ ಬೇವಿನ ಮರನೆ ತಾಯಿ ಎಂದಿತ್ತು
ಹಾಗೆಂದುದ ನಿನ್ನ ನೀನರಿ
ಪುಣ್ಯಾರಣ್ಯ ದಹನ ಭೀಮೇಶ್ವರಲಿಂಗ ನಿರಂಗ ಸಂಗ ॥[೧೨೦]

ಪರಿಸರ ಸಮತೋಲನವೆಂದರೆ 'ಸಹಕಾರ ಭಾವ' “ಹಾವಿನಾಳ ಕಲ್ಲಯ್ಯಾ ಕಾಗೆ ಕೋಗಿಲೆಗಳು ಸಹಕಾರ ಅಸಹಕಾರ ವಿಷಯದ ಜೊತೆಗೆ ಕ್ರೇಷ್ಣ ಭ್ರೂಣಶಾಸ್ತ್ರೀ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ.[೧೨೧] ಆ ವಚನ ಹೀಗಿದೆ

“ಇಕ್ಕದೇ ಕೋಗಿಲೆ, ಕಾಗೇಯತತ್ತಿಯಲ್ಲಿ
ಸಾಕಿದ ತನ್ನ ಸಿಶುವ ಮನಬುದ್ಧಿಯಿಂದ?
ಇಕ್ಕಿದಡೇನೋ ದೇವ ಪಿಂಡವಾ ತಂದು
ಮಾನವ ಯೋನಿಯಲ್ಲಿ ಹುಟ್ಟಿದಡೇನೋ
ಲಿಂಗ ಶರಣನು ನಗರ ಯೋನಿಯಲ್ಲಿ ಹುಟ್ಟಿದಾತನೇ? ಅಲ್ಲ
ಬಾರದೆ ಪಕ್ಷಿಯ ಬಸುರಲ್ಲಿ ಅಶ್ವಥ ವೃಕ್ಷವು
ಇದು ಕಾರಣ್ಯ ಮಹಾಲಿಂಗ ಕಲ್ಲೇಶ್ವರಾ ಕಾಗೆಗೆ ಪಿತ ಶಿಶುವೇ।[೧೨೨]

ಬಸವಣ್ಣವರ ವಚನವೊಂದು ಮನುಷ್ಯರಿಗಿಂತ ಪ್ರಾಣಿಗಳು ಶ್ರೇಷ್ಟ ಎಂಬುವುದನ್ನು ಹೀಗೆ ಹೇಳುತ್ತಾರೆ.

“ವ್ಯಾಧನೊಂದು ಮೊಲನ ತಂದಡೆ ಸಾಲು ಹಾಗಕ್ಕೆ ಬಲಿವರಯ್ಯಾ
ನೆಲನಾಳ್ವನ ಹೆಣನೆಂದಡೆ ಒಂದಡಕೆಗೆ ಕೊಂಬವರಿಲ್ಲ ನೋಡಯ್ಯಾ
ಮೊಲನಿಂದ ಕರಕಷ್ಟ ನರನ ಬಾಳುವೆ,
ಸಲೆ ನಂಬೋ ನಮ್ಮ ಕೂಡಲಸಂಗಮದೇವನ”[೧೨೩]

---

[120] ಕೋಲ ಶಾಂತಯ್ಯನ ವಚನ, ಸಂಕೀರ್ಣ ವ.ಸಂ.೭. ಸಂ.ಡಾ.ಎಸ್.ವಿದ್ಯಾಶಂಕರ ವ.ಸಂ.೧೦೬, ಪು.ಸಂ. ೪೩.

[121] ವಚನಗಳಲ್ಲಿ ಪ್ರಾಣಿ ವಿಜ್ಞಾನ -- ಡಾ. ಎಚ್.ಬಿ. ದೇವರಾಜ ಸರ್ಕಾರ, ವಚನಗಳಲ್ಲಿ ವಿಜ್ಞಾನ, ಸಂ.ಡಾ.ವೀರಣ್ಣ ರಾಜೂರ್. ಪು.ಸಂ.೧೪೩

[122] ಹಾವಿನಾಳ ಕಲ್ಲಯ್ಯನ ವಚನ, ಸಂಕೀರ್ಣ ವ.ಸಂ.೪. ಸಂ. ಡಾ. ಬಿ.ಆರ್.ಹಿರೇಮಠ. ಪು.ಸಂ. ೧೧೦೭, ಪು.ಸಂ.೩೨೪.

[123] ಬಸವಣ್ಣನವರ ವಚನ ಸಂ.೧ ಸಂ. ಎಮ್.ಎಮ್.ಕಲಬುರ್ಗಿ, ವ.ಸಂ.೧೫೮, ಪು.ಸಂ.೪೧.

ಬೇಟೆಗಾರ ಬೇಟೆಯಾಡಿ ತಂದ ಮೊಲಕ್ಕೆ ತೂಗಿ ಹಣಕೊಟ್ಟು ಕೊಳ್ಳುವವರಿದ್ದಾರೆ. ಅದಕ್ಕೆ ಜಾತಿಯುಂಟೆ? ಕುಲವುಂಟೆ? ಮೊಲ ಒಂದೇ ಅಲ್ಲ ಪ್ರತಿಯೊಂದು ಕಾಡುಮೃಗಕ್ಕೆ ಬೆಲೆಕೊಟ್ಟು ಕೊಳ್ಳುವವರಿದ್ದಾರೆ. ಆದರೆ ಮನುಷ್ಯ ಬ್ರಾಹ್ಮಣನಾದರೇನು, ಅರಸನಾದರೇನು, ಈತನ ಹೆಣ ಒಂದಡಕೆಯಲ್ಲ ಅಡಕೆ ಹೋಳಿಗೂ ಕೊಂಬುವವರಿಲ್ಲ. ಇದು ಗೊತ್ತಿರುವ ಸತ್ಯ ಆದರೂ ಮನುಷ್ಯ ಹೀಗೆ ವರ್ತಿಸುವದು ಕಂಡು ಬಡಿದೆಬ್ಬಿಸಿದ್ದಾರೆ.

ಮನುಷ್ಯರಾದ ನಾವುಹೇಗೆ ವರ್ತಿಸುತ್ತೇವೆಂದು ನನ್ನೊಂದಿಗೆ ಸರಿಸಮಾನ ಇನ್ನಾರೂ ಇಲ್ಲವೆಂಬಂತೆ ವರ್ತಿಸುತ್ತೇವೆ. ಆದರೆ ಮೊಲಕ್ಕೆ ಅದರ ಹೆಣಕ್ಕೂ ಬೆಲೆಯಿದೆ, ಇಡೀ ಜಗತ್ತನೇ ಆಳುವವನ ಹೆಣ ಹರಾಜಿಗಿಟ್ಟರೆ ಯಾರೊಬ್ಬರೂ ಕೂಡ ತಮಗೇಕೆ ಎಂದು ಸುಳಿಯುವುದೇ ಇಲ್ಲ. ಹೀಗೆ ಇಡೀ ಪರಿಸರದ ದೃಷ್ಟಾಂತಗಳನ್ನು ಕೊಟ್ಟು ವಚನಕಾರರು ವಿಶಿಷ್ಟ ರೀತಿಯ ವಿಮರ್ಶಾ ದೃಷ್ಟಿಕೋನ ವ್ಯಕ್ತಪಡಿಸಿದ್ದಾರೆ. ಇದರ ಹಿಂದಿನ ಉದ್ದೇಶ ಜೀವಜಾಲದ ಬಗ್ಗೆ ಪ್ರಜ್ಞೆ ಮೂಡಿಸುವದಾಗಿದೆ.

ಮನುಷ್ಯ ಪ್ರಾಣಿ ಪಕ್ಷಿ ಸಂಬಂಧ ಅನನ್ಯವಾದದು ಅಂತ್ಯೇಯೇ ಮಹಾದೇವಿಯಕ್ಕ ತನ್ನ ಚನ್ನಮಲ್ಲಿಕಾರ್ಜುನನ್ನು ಹುಡುಕುವುದಕ್ಕಾಗಿ ಅವುಗಳೊಂದಿಗೆ ಸಂವಾದ ತುಂಬಾ ಮಾರ್ಮಿಕ, ಅಪ್ಯಾಯಮಾನವಾಗಿದೆ.

“ಚಿಲಿಮಿಲಿ ಎಂದು ಓದುವ ಗಿಳಿಗಳಿರಾ,
ನೀವು ಕಾಣಿರೆ, ನೀವು ಕಾಣಿರೆ,
ಸರವೆತ್ತಿ ಪಾಡುವ ಕೋಗಿಲೆಗಳಿರಾ,
ನೀವು ಕಾಣಿರೆ, ನೀವು ಕಾಣಿರೆ,
ಎರಗಿ ಬಂದಾಡುವ ತುಂಬಿಗಳಿರಾ,
ನೀವು ಕಾಣಿರೆ, ನೀವು ಕಾಣಿರೆ,
ಕೊಳನತಡಿಯೊಳಾಡುವ ಹಂಸೆಗಳಿರಾ
ನೀವು ಕಾಣಿಕೆ, ನೀವು ಕಾಣಿರೆ,
ಗಿರಿ ಗಹ್ವರದೊಳಗಾಡುವ ನವಿಲುಗಳಿರಾ
ನೀವು ಕಾಣಿರೆ, ನೀವು ಕಾಣಿರೆ,
ಚೆನ್ನ ಮಲ್ಲಿಕಾರ್ಜುನನೆಲ್ಲಿದ್ದ ಹನೆಂದು ಹೇಳಿರೆ”೧೨೪

[124] ಅಕ್ಕಮಹಾದೇವಿ ವಚನ – ಶಿವಶರಣೆಯರ ವ.ಸಂ.೫, ಸಂ.ಡಾ.ವೀರಣ್ಣ ರಾಜೂರ್. ವ.ಸಂ.೧೭೪, ಪು.ಸಂ.೫೫.

ಪ್ರಸ್ತುತ ವಚನದಲ್ಲಿರುವ ಪ್ರಾಣಿ ಪಕ್ಷಿಗಳು ಉಪಯುಕ್ತ ನೆಲೆ ಹೊಂದಿವೆ. ಗಿಳಿಪಾಠಕ್ಕೆ ಕೋಗಿಲೆ, ಕಂಠಕ್ಕೆ ದುಂಬಿ ಮಧು ಉತ್ಪಾದನೆಗೆ, ನವಿಲು ನರ್ತಕ್ಕೆ, ಹಂಸ ಅಂಚೆಗೆ ಹೆಸರಾಗಿವೆ. ಹಾಗಾಗಿ ಅವುಗಳನ್ನು ಮಾತ್ರ ಉಲ್ಲೇಖಿಸಿರುವುದು ಗಮನಾರ್ಹ ಅಲ್ಲದೇ ಈ ವಚನ ಮೇಲ್ನೋಟಕ್ಕೆ ಅಕ್ಕ ತನ್ನ ಚೆನ್ನಮಲ್ಲಿಕಾರ್ಜುನನ ಬಗ್ಗೆ ಹೇಳಿದಂತೆ ಕಂಡರೂ ಕೂಡ ಆಕೆಗೆ ತನ್ನ ಸಂದೇಶವನ್ನು ಮಲ್ಲಿಕಾರ್ಜನನಿಗೆ ತಲುಪಿಸುವವರಾರು ಆದ್ದರಿಂದ ತನ್ನ ವಿಷಯ, ಸಂದೇಶವೆಲ್ಲ ಪ್ರಾಣಿಗಳ ಮುಖಾಂತರ ವ್ಯಕ್ತಿಪಡಿಸಿದ್ದಾಳೆ.

"ಚಿಲಿಪಿಲಿ ಎಂದು ಓದುವ ಗಿಳಿಗಳಿರಾ ನೀವು ಚನ್ನಮಲ್ಲಿಕಾರ್ಜುನನ್ನು ಕಾಣಿರೆ" ಇಂಪಾದ ಕಂಠದಿಂದ ಕೂಗುವ ಕೋಗಿಲೆಗಳನ್ನು ಕುರಿತು ನೀವು ಸಂಚಾರ ಮಾಡುವಾಗ ಚೆನ್ನಮಲ್ಲಿಕಾರ್ಜುನನ್ನು ಕಂಡಿರುವಿರೆ, ಹೂವಿಂದ ಹೂವಿಗೆ ಹಾರಾಡುವ ದುಂಬಿಗಳನ್ನು ಕುರಿತು ಸಸ್ಯ ಕಾಶಿಗಳಲೆಲ್ಲಾ ಅಲೆದಾಡಿ ಬರುವಾಗ ಚನ್ನಮಲ್ಲಿಕಾರ್ಜುನನ್ನು ಕಂಡಿದ್ದೀರಾ? ನೀರಕೊಳದಲ್ಲಿ ಮೈ ಚೆಲ್ಲಿ ಆಡುವ ಹಂಸಗಳಿರಾ ನೀವಾದರೂ ಕಂಡಿರೇ? ಬೆಟ್ಟ ಗುಡ್ಡಗಳಲ್ಲಿ ಆಡುವ ನವಿಲುಗಳಿರಾ ನೀವು ಕಾಣಿರೆ? ಎಂದು ಪ್ರಶ್ನೆ ಮಾಡುತ್ತಾಳೆ.

ಅಂದರೆ ಮನುಷ್ಯನಿಗೆ ಅತೀ ಆತ್ಮೀಯವಾಗಿ ಮನದ ಭಾವನೆಗಳು ಪ್ರಾಣಿ-ಪಕ್ಷಿಗಳು ಅರ್ಥ ಮಾಡಿಕೊಳ್ಳುತ್ತವೆ ಎನ್ನುತ್ತಾಳೆ ಅಕ್ಕ.

ಮನುಷ್ಯನಿಗೆ ಮನುಷ್ಯ ಅಷ್ಟೋಂದು ಪ್ರೀತಿಸುವದಿಲ್ಲ. ಆದರೆ ಮನುಷ್ಯನ ಒಂದು ಭಾಗವೇ ಪ್ರಾಣಿಗಳೂ ಎಂಬುದಕ್ಕೆ ಅಕ್ಕನ ವಚನಗಳು ಸಾಕ್ಷಿ ಈ ರೀತಿ ಪರಿಸರದಲ್ಲಿ ಮನುಷ್ಯ ಪ್ರಾಣಿಗಳನ್ನು ಇಡೀ ಜೀವಜಾಲವನ್ನು ತನ್ನ ಬದುಕಿನ ಅಂಗವಾಗಿ ನೋಡಿದಾಗ ಮಾತ್ರ ಸಾಧ್ಯವಿದೆ.

ಮನುಷ್ಯ ಸಮಾಜ ಜೀವಿ ಆತ ಒಂಟಿಯಾಗಿ ಬದುಕಲಾರ ಇಡೀ ಮನುಷ್ಯ ಮತ್ತು ಪ್ರಾಣಿ ಸಂಕುಲ ಒಂದಿಲ್ಲೊಂದು ರೀತಿಯಲ್ಲಿ ಅವಲಂಬನೆಯಾಗಿವೆ. ಮನುಷ್ಯರ ಮಾತು ಮನುಷ್ಯರೇ ಕೆಲವು ಸಾರಿ ಕೇಳದೇ ಇರಬಹುದು. ಅಥವಾ ಮನುಷ್ಯ ಸ್ವಾರ್ಥ ಭಾವನೆಯವನಾಗಿದ್ದಾನೆ. ಇದೆಲ್ಲ ಕಂಡ ಅಕ್ಕ ತನ್ನ ಬದುಕಿನ ಭಾಗವಾಗಿಯೇ ಕಂಡುಕೊಂಡ ಇಡೀ ಪ್ರಾಣಿ ಸಂಕುಲವನ್ನು ಕುರಿತು ಎಲ್ಲಾದರೂ ನೀವು ಸಂಚರಿಸುವಾಗ ತನ್ನೊಡೆಯ ಚೆನ್ನಮಲ್ಲಿಕಾರ್ಜುನನ್ನು ಕಂಡಿದ್ದೀರಾ? ಎಂದು ಪ್ರಾಣಿ ಪಕ್ಷಿ ಸಸ್ಯಗಳನ್ನು ಆತ್ಮೀಯವಾಗಿ ಮಾತನಾಡಿಸಿದ್ದಾಳೆ.

ಬಸವಣ್ಣನವರ ವಚನವೊಂದು ಪ್ರಾಣಿ ಹತ್ಯೆ ಬಗ್ಗೆ ಹೀಗೆ ಹೇಳುತ್ತದೆ. ಪ್ರಜ್ಞಾವಂತರೆಂದು ಕರೆಯಿಸಿಕೊಳ್ಳುವವರು ಪ್ರಾಣಿ ಬಲಿಕೊಡುವಾಗ ಎಲ್ಲರೂ ಮೂಕ ಪ್ರೇಕ್ಷಕರಂತೆ ಇದ್ದಾರಲ್ಲಾ ಎಂತಹ ವಿಪರ್ಯಾಸವೆನ್ನುತ್ತಾನೆ.

"ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು
ಎಲೆ ಹೋತೆ ಅಳು, ಕಂಡಾ !
ವೇದವನೋದಿದವರ ಮುಂದೆ ಅಳುಕಂಡಾ!
ಶಾಸ್ತ್ರ ಕೇಳಿದವರ ಮುಂದೆ ಅಳು, ಕಂಡಾ!
ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವ"[೧೨೫]

ವೇದ-ಶಾಸ್ತ್ರಗಳನ್ನೋದಿದವರು, ತಾವು ವಿದ್ಯಾವಂತರು ಉಚ್ಚಕುಲದ ಬಗ್ಗೆ ಮಾತನಾಡುವವರಿಗೆ, ಬಸವಣ್ಣನ ಪ್ರಶ್ನೆ ಮೂಕರನ್ನಾಗಿಸುತ್ತದೆ. ದೇವರ ಹೆಸರಿನಲ್ಲಿ ಹೋತವನ್ನು ಬಲಿಕೊಡುವುದು ಪ್ರಾಚೀನ ಕಾಲದಿಂದ ಇವತ್ತಿನವರೆಗೆ ನಡೆದುಕೊಂಡೇ ಬಂದಿದೆ. ಹಿಂದೆ ಚರ್ಚಿಸಿದಂತೆ ಹೆಚ್ಚಾಗಿ ಗಂಡು ಪ್ರಾಣಿಗಳೆ ಬಲಿಕೊಡುತ್ತಿದ್ದರು. ಹೀಗೆ ಬಲಿಕೊಡುವಾಗ ಪ್ರಜ್ಞಾವಂತರೆನಿಸಿಕೊಂಡವರು ಒಬ್ಬರಾದರೂ ಒಂದು ಅ ಬಲಿಯಾಗುವ ವಧೆಯಾಗುವ ಹೋತದ ಆರ್ತತೆ ಕೇಳಿಸಿಕೊಂಡರೇ? ಖಂಡಿತವಾಗಿಯೂ ಇಲ್ಲ. ಏಕೆಂದರೆ ಯಾರೋಬ್ಬರಲ್ಲಿಯೂ ಇಂತಹ ವ್ಯವಸ್ಥೆ ಬದಲಾಯಿಸಬೇಕು. ಸಂಪೂರ್ಣವಾಗಿ ಕಿತ್ತೊಗೆಯಬೇಕೆಂಬುದು ಯಾರೊಬ್ಬರ ಉದ್ದೇಶವಿರಲಿಲ್ಲವೆಂದೇ ಹೇಳಬೇಕು.

ಹೀಗೆ ಹೋತವನ್ನು ಕೊಂದು ಹಾಕುವಾಗ ಯಾರ ಮೊಗದಲ್ಲಾದರೂ ಅಳುಕಂಡಿತೇ? ಕನಸಾಮಾನ್ಯರಿಗೆ ಹಿಂಸೆಯ ಬಗ್ಗೆ ಗೊತ್ತಿರಲಿಲ್ಲ. ಆದರೆ ವೇದಶಾಸ್ತ್ರಗಳನ್ನೋದಿದವರ ಮೊಗದಲ್ಲಾದರೂ ಕೊಂಚ ಕಸಿವಿಸಿ ಇತ್ತೇ? ಶಾಸ್ತ್ರ ಕೇಳಿ ತಲೆ ಅಲ್ಲಾಡಿಸಿ ಬಂದವರಲ್ಲಿ ಯಾರಾದರೂ ಒಬ್ಬರಲ್ಲಿ ನಿನ್ನ ಬಗ್ಗೆ ಕನಿಕರ ಬಂದಿತೇ? ಯಾರೊಬ್ಬರೂ ಇದನ್ನು ತಡೆಯಲು ಮುಂದೆ ಬರಲಿಲ್ಲ. ಕಾರಣ ಆಳುವವಗರ ತಮಗೆಂದೇ ನಿರ್ಮಾಣ ಮಾಡಿಕೊಂಡು ಬಂದ ವ್ಯವಸ್ಥೆ ಮುರಿಯುವವರಾರೂ ಇಲ್ಲವೆಂದೇ ನಂಬಿದ್ದರು.

[125] ಬಸವಣ್ಣನವರ ವಚನ ಸಂ.೧ ಸಂ. ಎಮ್.ಎಮ್.ಕಲಬುರ್ಗಿ, ವ.ಸಂ.೫೭೫, ಪು.ಸಂ.೧೪೩

ಬಸವಣ್ಣನ ವಿಚಾರವೆಂದರೆ ಈ ರೀತಿ ಪ್ರಾಣಿಗಳನ್ನು ಒಂದೊಂದನ್ನಾಗಿ ಕೊಂದು ಭಕ್ಷಿಸುತ್ತ ಬಂದರೆ ಜೀವ ಜಾಲದ ಮೇಲೆ ಒಂದಲ್ಲ ಒಂದು ದಿನ ಕೆಟ್ಟ ಪರಿಣಾಮ ಬಿರುತ್ತದೆ. ಆಗ ಮತ್ತೆ ಕೊಂದು ಬಂದವರಿಗೆ ನಿಸರ್ಗವೇ ತನ್ನ ಪ್ರತಿಕ್ರೀಯೇ ತೋರಿಸುತ್ತದೆ. ಅದು ಇವತ್ತು ನಾವು ಅನುಭವಿಸುತ್ತಿದ್ದೇವೆ.

ಇವತ್ತಿನ ದಿನಗಳಲ್ಲಿ ಪರಿಸರವಾದಿಗಳು, ಮಾಧ್ಯಮದವರು ಏನು ಹೇಳಬಯಸುತ್ತಿದ್ದಾರೋ ಇದನ್ನೇ ೮೫೦ ವರ್ಷಗಳ ಹಿಂದೆ ವಚನಕಾರರು ಹೇಳಿದ್ದು ಕಂಡುಬರುತ್ತದೆ.

ಬಸವಣ್ಣನ ಇನ್ನೊಂದು ವಚನ ನೋಡುವುದಾದರೆ ಭಕ್ತಿಯ ಹೆಸರಿನಲ್ಲಿ ಪ್ರಾಣಿ ಪಕ್ಷಿಗಳನ್ನು ಪೂಜಿಸಿ ಪೂಜೆಯ ಹೆಸರಿನಲ್ಲಾದರೂ ಪ್ರಾಣಿಗಳನ್ನು ಕಾಪಾಡಿಕೊಳ್ಳಲಿ ಎಂಬ ಉದ್ದೇಶ ಆತನದಾಗಿತ್ತು.

“ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ ಸಲಹುತ್ತ
ಶಿವಶಿವಾ ಎಂದೋದಿಸಯ್ಯಾ
ಭಕ್ತಿಯೆಂಬ ಪಂಜರದೊಳಗಿಕ್ಕಿ ಸಲಹು
ಕೂಡಲಸಂಗಮದೇವಾ”[೧೨೬]

ವಚನಕಾರರನ್ನು ಗಮನಿಸಿದರೆ ಎಲ್ಲರ ವಚನಗಳಲ್ಲಿ ಪೂಜಿಸಲು ಯೋಗ್ಯ ಅನ್ನುವ ಪರಿಕಲ್ಪನೆ ಕೊಟ್ಟಿದ್ದಾರೆ. ಪೂಜೆ ಎಂಬುದು ಕಾಪಾಡಿಕೊಳ್ಳು ಎಂಬ ಅರ್ಥ ವಚನಕಾರರು ಕೊಟ್ಟಿದ್ದಾರೆ. ಪ್ರಾಣಿ, ಪಕ್ಷಿ ಸಂಕುಲ ಇವುಗಳ ಜನ್ಮ ಅದೆಷ್ಟೋ ಶ್ರೇಷ್ಠ ತನ್ನನ್ನೂ ಕೂಡ ಇಂತಹ ಪಕ್ಷಿಯೊಂದಿಗೆ ಸಮಿಕರಿಸಿಕೊಂಡಿದ್ದಾನೆ. ಇಷ್ಟಲ್ಲದೆ ತನ್ನ ಬಾಯಿಂದ ಅಕ್ಷರಭ್ಯಾಸಮಾಡಿಸುವ ಮೊದಲನೆ. ಶಬ್ದವೇ ಶಿವ ಶಿವಾ ಅಂದರೆ ಪ್ರತಿಯೊಂದು ಜೀವಿಯನ್ನು ಶಿವನರೂಪವೇ ಎಂದು ತಿಳಿದಾಗ ಒಂದಿಷ್ಟು ನಿಸರ್ಗ, ಜೀವಜಾಲ, ಒಳ್ಳೆಯ ಪರಿಸರ ಈ ಹೆಸರಿನಿಂದಲೂ ಉಳಿಸಿಕೊಳ್ಳಬಹುದೆಂದು ವಚನಕಾರರ ಅಭಿಪ್ರಾಯವಾಯಿತು. ಈ ಎಲ್ಲ ಜೀವಿಗಳನ್ನು ಪಂಜರದೊಳಗಿಕ್ಕು ಆ ಪಂಜರವೆಂತೆಂದರೆ ಭಕ್ತಿಯೆಂಬ ಪಂಜರ ಭಕ್ತಿಯ ಹೆಸರಿನಲ್ಲಿ ಜೀವಜಾಲ ಉಳಿಸಿಕೊಳ್ಳುವ ಮಹದಾಸೆ ಅವರದಾಗಿತ್ತು.

ಬಸವಣ್ಣನ ವಚನಗಳ ಪ್ರಭಾವ ಅಕ್ಕನ ಮೇಲೆ ಆದಂತೆ ಕಂಡುಬರುತ್ತದೆ. ಆದರೆ ಎಲ್ಲ ವಚನಕಾರರ ಅಭಿಪ್ರಾಯ ಮಾತ್ರ ಒಂದೇ ಆಗಿದೆ.

[126] ಬಸವಣ್ಣನವರ ವಚನ ಸಂ.೧ ಸಂ. ಎಮ್.ಎಮ್.ಕಲಬುರ್ಗಿ, ವ.ಸಂ.೫೮, ಪು.ಸಂ.೫೫.

“ವನವೆಲ್ಲಾ ನೀನೆ!
ವನದೊಳಗಣ ದೇವತರುವೆಲ್ಲಾ ನೀನೆ,
ತರುವಿನೊಳಗಾಡುವ ಖಗಮೃಗವೆಲ್ಲಾ ನೀನೆ
ಚನ್ನಮಲ್ಲಿಕಾರ್ಜುನಾ ಸರ್ವಭರಿತನಾಗಿ
ಎನಗೇಕೆ ಮುಖದೋರೆ”[೧೨೭]

ಅಕ್ಕನ ದೃಷ್ಟಿಕೋನ ಅದೆಷ್ಟು ಎತ್ತರ! ಅಕ್ಕನ ಪ್ರಕಾರ ಇಡೀ ನಿಸರ್ಗವೆಲ್ಲ ದೇವರೆ! ವನವೆಲ್ಲ ದೇವರು. ನಮ್ಮಲ್ಲಿರುವ ಕಾಡು-ಬೆಟ್ಟ ಗುಡ್ಡದಲ್ಲೆಲ್ಲಾ ದೇವರೆ ವಾಸವಾಗಿದ್ದಾನೆ. ಅನ್ನುವುದಕ್ಕಿಂತ ಅಣು-ಅಣುವಿನಲ್ಲೂ ಕೂಡ ವಚನಕಾರರು ದೇವರನ್ನೆ ಕಂಡುಕೊಂಡಿದ್ದರು. ತರು-ಲತೆಗಳಲ್ಲಿ ಸ್ವಚ್ಛಂದವಾಗಿ ವಾಸ ಮಾಡಿರುವ ವನ್ಯ ಪ್ರಾಣಿಗಳಲ್ಲು ಕೂಡ ದೇವರು ಇದ್ದಾನೆ. ಎಲ್ಲದರಲ್ಲೂ ತನ್ನೊಡೆಯ ಚನ್ನಮಲ್ಲಿಕಾರ್ಜುನನಿದ್ದಾನೆ. ಎಂದು ಹೇಳುವುದರ ಮುಖಾಂತರ ಪ್ರಕೃತಿಯ ಪೂಜೆಯನ್ನು ಕುರಿತು ಹೇಳುತ್ತಾರೆ. ಈ ಪೂಜೆಯ ನೆಪದಲ್ಲಾದರೂ ನಿಸರ್ಗವನ್ನು ಉಳಿಸಿಕೊಳ್ಳಿಲ್ಲಿ ಎಂಬ ಉದ್ದೇಶ ಅವರದಾಗಿತ್ತು.

ಅಕ್ಕನ ಇನ್ನೊಂದು ವಚನ ನೋಡುವುದಾದರೆ ಮನುಷ್ಯನಿಗಿಂತ ಪ್ರಾಣಿಗಳೇ ಎಷ್ಟೋ ವಾಸಿ ಎಂಬ ಮಾತು ಅಕ್ಕನದಾಗಿದೆ.

“ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲಡೆ
ಹಾವಿನ ಸಂಗವೇ ಲೇಸು ಕಂಡಯ್ಯಾ
ಕಾಯದ ಸಂಗವ ವಿವರಿಸಬಲ್ಲಡೆ
ಕಾಯದ ಸಂಗವೆ ಲೇಸು ಕಂಡಯ್ಯಾ
ತಾಯಿ ರಕ್ಕಸಿಯಾದಂತೆ ಕಾಯವಿಕಾರವು
ಚನ್ನಮಲ್ಲಿಕಾರ್ಜುನಯ್ಯಾ
ನೀನೊಲಿದವರು ಕಾಯಗೊಂಡಿದ್ದರೆನಬೇಡ”[೧೨೮]

ಮನುಷ್ಯನ ವರ್ತನೆಯ ಕುರಿತು ಅಕ್ಕ ಯಾವ ರೀತಿ ಹೋಲಿಕೆ ಕೊಟ್ಟಿದ್ದಾಳೆಂದರೆ, ಮನುಷ್ಯ ಎಷ್ಟು ನೀಚ ಮಟ್ಟಕ್ಕಿಳಿದಿದ್ದಾನೆಂದರೆ, ವಿಷಯುಕ್ತ ಹಾವನ್ನು ನಾನು ನನ್ನಂತೆ ಮಾಡಿಕೊಳ್ಳಬಹುದು ಈ ಪ್ರಾಣಿಗಳಿಗೆ ಕೇವಲ ಹಲ್ಲಲ್ಲಿ ಮಾತ್ರ ವಿಷವಿದೆ. ಈ ನಿಸರ್ಗವನ್ನು ದೋಚಿ ತನ್ನ ಭೋಗಕ್ಕಾಗಿ ಬಳಸಿಕೊಳ್ಳುವ ಮನುಷ್ಯನಿಗೆ ಮೈಯೆಲ್ಲವೂ ವಿಷವಾಗಿದೆ. ಮನುಷ್ಯನಿಗಿಂತ ಪ್ರಾಣಿಗಳೇ ಎಷ್ಟೋ

---

127 ಅಕ್ಕಮಹಾದೇವಿ ವಚನ – ಶಿವಶರಣೆಯರ ವ.ಸಂ.೫, ಸಂ.ಡಾ.ವೀರಣ್ಣ ರಾಜೂರ್, ವ.ಸಂ.೩೦೦, ಪು.ಸಂ.೯೨.
128 ಅಕ್ಕಮಹಾದೇವಿ ವಚನ – ಶಿವಶರಣೆಯರ ವ.ಸಂ.೫, ಸಂ.ಡಾ.ವೀರಣ್ಣ ರಾಜೂರ್, ವ.ಸಂ.೩೪೦, ಪು.ಸಂ.೧೦೬.

ಉತ್ತಮ ಸ್ಥಾನದಲ್ಲಿವೆ. ಮನುಷ್ಯ ಸಕಲ ಜೀವಿಗಳಿಗೆ ಲೇಸನ್ನೇ ಬಯಸುವಲ್ಲಿ ಬಹಳ ಕೆಳಮಟ್ಟದಲ್ಲಿ ಇಳಿದಿದ್ದಾನೆ. ಅಂದರೆ ತಾಯಿ ಜನ್ಮಕೊಟ್ಟ ತನ್ನ ಮಗುವನ್ನೇ ತಿಂದರೆ, ಕೊಂದರೆ, ನಿಸರ್ಗಕ್ಕೆ ವಿರೋಧವಾದರೆ, ನಾವು ಈ ಪರಿಣಾಮ ಅತೀ ಶೀಘ್ರವೇ ಅನುಭವಿಸಬೇಕಾದಿತ್ತು ಎಂದು ಎಚ್ಚರಿಸಿದ್ದಾಳೆ.

ಮನುಷ್ಯನ ಹೊರತು ನಿಸರ್ಗವಿಲ್ಲ, ನಿಸರ್ಗದ ಹೊರತು ಮನುಷ್ಯನಿಲ್ಲ, ಮನುಷ್ಯ ನಿಸರ್ಗದ ಒಂದು ಸಣ್ಣ ಅಣು. ಇವು ಒಂದರ ಮೇಲೆ ಇನ್ನೊಂದು ಅವಲಂಬಿಸಿವೆ. ಮಾನವನ ಜೀವನದಲ್ಲಿ ನಿಸರ್ಗ ಎಷ್ಟು ಅಮೂಲ್ಯವೆಂಬುದನ್ನು ಹೇಳುತ್ತಾ ನಾವೆಲ್ಲಾ ನಿಸರ್ಗವನ್ನು ಹಾಳು ಕೆಡುವುತ್ತಿದ್ದೇವೆ. ಇದರ ಬಗ್ಗೆ ಅದೆಷ್ಟು ಪ್ರಜ್ಞೆ ಮೂಡಿಸಿದರೂ ನಾವಾರೂ ಕೇಳುತ್ತಿಲ್ಲ. ಕಡೆಗಣಿಸುತ್ತಾ ಬಂದಿದ್ದೇವೆ. ತಾಯಿ ತನ್ನ ಮಗುವನ್ನೆ ಕೊಂದರೆ ಇಡೀ ಸಮಾಜ ಆಕೆಯನ್ನು ಕ್ರೂರ ಟೀಕೆಗೆ ಗುರಿ ಮಾಡುತ್ತದಲ್ಲ. ಹಾಗೆಯೇ ನಾವು ನಿಸರ್ಗವನ್ನು ಕಬಳಿಸುತ್ತಿದ್ದೇವೆ. ಇದರ ಪರಿಣಾಮ ನಾವೇ ಅನುಭವಿಸುತ್ತಿದ್ದೇವೆ. ನಿಸರ್ಗ ಕೂಡ ನಮ್ಮ ಕ್ರೂರತನಕ್ಕೆ ಒಂದು ದಿನ ವಿಷ ಕಕ್ಕಿ ಬಿಡುತ್ತದೆ. ಆಗ ನಮ್ಮ ಅರಿವಿಗೆ ನಿಸರ್ಗದ ಮಹತ್ವ ಗೊತ್ತಾಗುತ್ತದೆ. ಆದ್ದರಿಂದ ಅಂತಹ ದುರ್ಗತಿಯನ್ನು ತಂದುಕೊಳ್ಳದೆ ಜಾಗ್ರತರಾಗುವಂತೆ ಅಕ್ಕ ತಿಳಿ ಹೇಳಿದ್ದಾಳೆ.

ಅಕ್ಕನೇ ಇನ್ನೊಂದು ವಚನದಲ್ಲಿ ಹೀಗೆ ಎಚ್ಚರಿಸಿದ್ದಾಳೆ. ಹಾವು ತಿಂದವರ ನುಡಿಸಬಹುದು, ಪರಿಸರದ ವಿಷಯವಾಗಿ ಹೇಳುವಾಗ ಹಾವು ಕಚ್ಚಿದ ಮನುಷ್ಯ ಸುಸ್ತಾಗಿ ಮಲಗುತ್ತಾನೆ. ನಿದ್ದೆ ಸಂಪೂರ್ಣ ಆವರಿಸಿದರೆ ಆತನಿಗೆ ಸಾವೇ ಗತಿ. ಆದರೆ ಆತ ನಿದ್ದೆಮಾಡಿಲ್ಲ. ಎಚ್ಚರವಾಗಿಯೂ ಇದ್ದಾನೆ. ಹುಚ್ಚು ಹಿಡಿದವರನ್ನು ಕೂಡ ಮಾನಸಿಕ ತಜ್ಞರಲ್ಲಿಗೆ ಕರೆದುಕೊಂಡು ಹೋಗಿ ಗುಣಪಡಿಸಬಹುದು. ಆದರೆ ಮನುಷ್ಯರಾದ ನಮಗೆ ನಿಸರ್ಗದ ಪರಿಣಾಮವೇನು? ಎಂಬುದು ಗೊತ್ತಿದ್ದರೂ ಕೂಡ ನಿದ್ದೆ ಹತ್ತಿದಂತೆ ನಟಿಸುತ್ತಿದ್ದೇವೆ. ಎಚ್ಚರದಿಂದಿದ್ದರೂ ಕೂಡ ಯಾವುದೇ ಕ್ರಮಗಳು ಕೈಗೊಳ್ಳುತ್ತಿಲ್ಲ. ಹೀಗಲೆ ಎಳಲೇ ಬಾರದೆಂದು ಮಲಗಿದವರಿಗೆ ಎಬ್ಬಿಸಿಯೂ ಪ್ರಯೋಜನವಿಲ್ಲ ಎಂಬ ಮಾತು ಎಲ್ಲರನ್ನು ಎಚ್ಚರಗೊಳಿಸಿದೆ.

"ಕುರಿ ಕೋಳಿ ಕಿರುಮೀನು ತಿಂಬವರ
ಊರೊಳಗೆ ಇರು ಎಂಬರು
ಅಮೃತಾನ್ನವ ಕರೆವ ಗೋವ ತಿಂಬವರ
ಊರಿಂದ ಹೊರಗಿರು ಎಂಬರು
ಆ ತನು ಹರಿಗೋಲಾಯಿತು
ಬೊಕ್ಕಣ್ಣ ಸಿದಿಕೆ ಬಾರುಕೋಲು ಪಾದರಕ್ಷೆ
ದೇವರ ಮುಂದೆ ಬಾರಿಸುವುದಕ್ಕೆ ಮದ್ದಳೆಯಾಯಿತು.
ಈ ಬುದ್ದಲಿಕೆಯೊಳಗಣ ತುಪ್ಪವ ಶುದ್ಧಮಾಡಿ
ತಿಂಬ ಗುಜ್ಜ ಹೊಲೆಯರ ಕಂಡಡೆ
ಉದ್ದನ ಚಮ್ಮಾಳಿಗೆಯ ತೆಕ್ಕೊಂಡು
ಬಾಯಿ ಕೊಯ್ಯುವೆನು ಎಂದಾತ ನಮ್ಮ ಅಂಬಿಗರ ಚೌಡಯ್ಯ.
ಅಂಬಿಗರ ಚೌಡಯ್ಯ"[೧೨೯]

ವಚನಕಾರರಲ್ಲಿ ಅಂಬಿಗರ ಚೌಡಯ್ಯ ಅತ್ಯುತ್ತಮ ವಿಮರ್ಶಕನೆಂದೆ ಹೇಳಬೇಕು. ಕುರಿ, ಕೋಳಿ, ಮೀನು ಮುಂತಾದ ಪ್ರಾಣಿಗಳನ್ನೆಲ್ಲ ತಿಂದು, ಮೇಲೆ ತಾವು ಪರಿಶುದ್ಧರೆಂದು ಹೇಳಿಕೊಳ್ಳುತ್ತ ಊರೊಳಗಿರುವ ಮೇಲುಜಾತಿಯವರ ದುರಾಚಾರಗಳನ್ನು ಅಂಬಿಗರ ಚೌಡಯ್ಯ ವಚನದ ಪ್ರಾರಂಭದಿಂದ ವಿಡಂಬನೆ ಮಾಡಿದ್ದಾನೆ.

ಹಾಗೆಯೇ ಗೋವಿನ ಮಾಂಸ ತಿನ್ನುವವರನ್ನು ಕೀಳುಜಾತಿಯವರೆಂದು ಕರೆದು ಅವರನ್ನು ಊರಿನಿಂದ ಹೊರಗಡೆ ಇಟ್ಟಿರುವ ಕ್ರಮವನ್ನು ಖಂಡಿಸುತ್ತಾನೆ. ಊರ ಒಳಗಡೆ, ಊರ ಹೊರಗಡೆ ಇರುವ ಇಬ್ಬರು ಮಾಂಸವನ್ನು ತಿನ್ನುವಾಗ ಊರಲ್ಲಿರುವವರು ಮೇಲು ಜಾತಿಯವರು ಹೇಗಾಗುತ್ತಾರೆ? ಹೊರಗಿರುವವರು ಕೀಳು ಹೇಗಾಗುತ್ತಾರೆ? ಮಾಂಸ ತಿನ್ನುವ ಮೇಲು ಜಾತಿಯವರಿಗೂರೊಳಗಡೆ ಇರುವ ಹಕ್ಕು ಇಲ್ಲ.

ಸತ್ತ ಆಕಳ ಮಾಂಸ ತಿನ್ನುವವರು ಕೀಳೆಂದು ಹೆಳುವ ಮೇಲು ಜಾತಿಯವರಿಂದ ಪ್ರಯೋಜನವೇನೂ? ಪ್ರಾಣಿಗಳು ಸತ್ತಮೇಲೆ ಅವುಗಳ ಚರ್ಮದಿಂದ ಸಿದಿಗೆ, ಬಾರಕೋಲು, ಚಪ್ಪಲಿ, ಮದ್ದಳೆ, ಹೆಣ್ಣೆತುಂಬಲುಬದ್ದಾಗಲಿಕ ಮುಂತಾದವು ತಯ್ಯಾರಿಕೆಯಲ್ಲಿ ಚರ್ಮ ಉಪಯುಕ್ತವಾಗಿದೆ. ಈ ಪ್ರಾಣಿಗಳು ಎಷ್ಟೇ ನಿಯತ್ತಿನವುಗಳು, ಆದರೆ ಮನುಷ್ಯ, ಕದ್ದು ಮಾಂಸ ತಿಂದು, ಮೇಲೆ ಶುದ್ಧದಂತೆ ತೋರಿಸಿಕೊಳ್ಳುವ ಮೇಲು ಜಾತಿಯವರು ಆ ಉಪಕರಣಗಳನ್ನು ಬಳಸುತ್ತಾರೆ.

---

[129] ಅಂಬಿಗರ ಚೌಡಯ್ಯನ ವಚನ, ಸಂ.ವ.ಸಂ.–೧, ಸಂ. ಎಮ್.ಎಮ್.ಕಲಬುರ್ಗಿ, ವ.ಸಂ.೧೧೭, ಪು.ಸಂ.೩೯.

ಯಾರು ಮೇಲು ಜಾತಿಯವರೆಂದು ಹೇಳಿ ಕೀಳು ಕಾರ್ಯ ಪ್ರಾಣಿವಧೆ ಮಾಡುತ್ತಾರೋ ಅವರೇ ನಿಜವಾಗಿ ಕುಲಹೀನರು, ಇಲ್ಲಿ ಚೌಡಯ್ಯ ನಿಸರ್ಗದ ವಿರುದ್ಧ ಹೋಗುವವನೇ ಕುಲಹೀನ ಎಂಬ ಅರ್ಥ ಕೊಟ್ಟಿದ್ದಾನೆ.

ಇಡೀ ನಿಸರ್ಗದ ಸಂಪತ್ತು ಕೊಳ್ಳೆ ಹೋದಾಗ ಇಡೀ ಸೃಷ್ಟಿ ಹೇಗಾಗುತ್ತದೆ. ಎಂಬುದು ಅಕ್ಕ ತನ್ನ ಈ ವಚನದಲ್ಲಿ ಹೀಗೆ ಹೇಳಿದ್ದಾಳೆ.

"ಗಿರಿಯಲಲ್ಲದೆ ಹುಲ್ಲು ಮೊರಡಿಯಲ್ಲಾಡುವುದೆ ನವಿಲು?
ಕೊಳಕಲ್ಲದೆ ಕಿರುವಳ್ಳಕ್ಕೆಳಸುವುದೆ ಹಂಸೆ?
ಮಾಮರ ತಳಿತಲ್ಲದೆ ಸರಗೈವುದೆ ಕೋಗಿಲೆ?
ಪರಿಮಳವಿಲ್ಲದ ಪುಷ್ಪಕ್ಕೆಳಸುವುದೆ ಬ್ರಮರ?
ಎನ್ನದೇವ ಚೆನ್ನಮಲ್ಲಿಕಾರ್ಜುನಂಗಲದೆ
ಆನ್ಯಕ್ಕೆಳಸುವುದೆ ಎನ್ನಮನ
ಪೇಳಿಕಿ ಕೆಳದಿಯರಿರಾ!"[೧೩೦]

ಇಡೀ ಪ್ರಕೃತಿಯ ಚಲುವೆಲ್ಲ ಕಳೆಗುಂದಿದ ಮೇಲೆ ಪ್ರಕೃತಿಯಲ್ಲಿಯ ಪ್ರಾಣಿಪಕ್ಷಿಗಳು ಬದುಕುವದೇ ದುಸ್ತರವೆನುತ್ತಾಳೆ ಅಕ್ಕ. ನಮಗೆ ನಮ್ಮ ಬದುಕಿನ ಬಗ್ಗೆ ನಮ್ಮ ಜೀವನಕ್ಕೆ ಪೂರಕವಾಗುವ ಪರಿಸರದ ಬಗ್ಗೆಯೇ ನಮಗೆ ಅರಿವಿನ ಕೊರತೆ ಇದೆ.

ಆದರೆ ಅಕ್ಕನಿಗೆ ನಿಸರ್ಗದಲ್ಲಿ ಅಲ್ಲೋಲ ಕಲ್ಲೋಲವಾದರೆ ಅದರ ಪರಿಣಾಮ, ಮನುಷ್ಯ ಪ್ರಾಣಿ ಇಡೀ ಕುಲಸಮೂಹದ ಮೇಲೆ ಆಗುತ್ತದೆ ಎಂಬುದು ಹೀಗೆ ಹೇಳಿದ್ದಾಳೆ.

ನವಿಲುಗಳಿಗೆ ಹುಲ್ಲು ಪ್ರದೇಶವಿದ್ದರೆ ಆಗದು ಅವುಗಳ ವಾಸಕ್ಕೆ ಬೆಟ್ಟ ಗುಡ್ಡಗಳು ಬೇಕು. ಹಂಸಗಳು ಕೊಳದಲ್ಲಿ ಮಾತ್ರ ಸ್ವಚ್ಛಂದವಾಗಿ ತಮ್ಮ ವಿಹಾರ ಪ್ರಾರಂಭ ಮಾಡುತ್ತವೆ. ವಿನಃ ಮಳೆಯಿಂದ ನಿಂತ ನೀರಿನ ತಗ್ಗು ದಿಣ್ಣೆಗಳಲ್ಲಿ ಆಡುತ್ತವೆಯೋ? ಎಂದು ಪ್ರಶ್ನಿಸುತ್ತಾಳೆ.

ವಸಂತಮಾಸದಲ್ಲಿ ಇನ್ನೂ ಚಿಗುರುತ್ತಿರುವ ಎಳೆಯ ಎಲೆಯನ್ನು ತಿಂದು ಕೋಗಿಲೆ ಇಂಪಾದ ಸ್ವರಗೈಯ್ಯುತ್ತದೆ. ಇದರೊಂದಿಗೆ ಅಲ್ಲಲ್ಲಿ ಬೆಟ್ಟ-ಗುಡ್ಡ, ಕೊಳ, ತೊರೆಯ ಹರಿವಿನ ಅಕ್ಕ-ಪಕ್ಕ ಸುಗಂಧ ಬೀರುವ ಹೂವುಗಳಲ್ಲಿ ಬ್ರಮರ ಸುತ್ತಾಡುತ್ತದೆ.

---

[130] ಅಕ್ಕಮಹಾದೇವಿ ವಚನ - ಶಿವಶರಣೆಯರ ವ.ಸಂ.೫, ಸಂ.ಡಾ.ವೀರಣ್ಣ ರಾಜೂರ್. ವ.ಸಂ.೧೫೯, ಪು.ಸಂ.೪೯.

ಅಂದರೆ ಪ್ರತಿಯೊಂದು ಪ್ರಾಣಿ, ಪಕ್ಷಿ, ಕೀಟ ಇವೆಲ್ಲ ಕೂಡ ಒಳ್ಳೆಯ ಪರಿಸರ, ನಿಸರ್ಗವನ್ನೆ ತಮ್ಮ ಬದುಕಿಗಾಗಿ ಆಯ್ಕೆ ಮಾಡಿಕೊಳ್ಳುತ್ತವೆ. ಇಂಥದ್ದರದಲ್ಲಿ ಈ ಪ್ರಾಣಿ–ಪಕ್ಷಿ ಕೀಟಗಳಿಗಿರುವ ಒಂದಿನಿತಾದರೂ ನಿಸರ್ಗದ ಬಗ್ಗೆ ಪ್ರಜ್ಞೆ ಇದ್ದಿದ್ದರೆ ಇವತ್ತು ನಾವ್ಯಾರು ಇಂತಹ ಹದಗೆಟ್ಟ ಪರಿಸರದಲ್ಲಿ ವಾಸ ಮಾಡುತ್ತಿರಲಿಲ್ಲ.

ಆದಿಮಾನವನಿಂದ ಹನ್ನೆರಡನೆ ಶತಮಾನದವರೆಗೆ ಮನುಷ್ಯನು ಪ್ರಕೃತಿಯನ್ನು ದೇವರೆಂದೇ ಪೂಜಿಸುತ್ತಾ ಬಂದಿದ್ದಾನೆ. ಕಾರಣವಿಷ್ಟೇ ಪೂಜೆಯ ನೆಪದಲ್ಲಾದರೂ ನಮ್ಮ ಪರಿಸರವನ್ನು ಕಾಪಾಡಿಕೊಳ್ಳೋಣ ಎಂದು ಅದರ ಹಿಂದಿನ ಉದ್ದೇಶ. ಈ ಒಂದು ಉದ್ದೇಶಕ್ಕಾಗಿಯೇ ಇಡೀ ಪ್ರಕೃತಿಯೇ ಆತನಿಗೆ ಪೂಜ್ಯನೀಯವಾಗುತ್ತಾ ಬಂತು.

ಪ್ರಕೃತಿ ಪೂಜೆಯಲ್ಲಿ ಪ್ರಾಣಿಗಳನ್ನು ಆತ ಪೂಜಿಸುತ್ತಾ ಬಂದ ಅವುಗಳಲ್ಲಿ ಕ್ರೂರ ಪ್ರಾಣಿಗಳನ್ನು ಸಾಕ್ಷಾತ ದೇವರ ಸ್ವರೂಪವೇ ಎಂದು ತಿಳಿದ ಇನ್ನುಳಿದ ಸಾದು ಪ್ರಾಣಿಗಳನ್ನು ತನ್ನ ದಿನನಿತ್ಯದ ಕೆಲಸಕಾರ್ಯಕ್ಕಾಗಿ ಬಳಸಿಕೊಂಡು ಬಂದನು.

ಒಂದೊಂದು ಪ್ರಾಣಿಗಳನ್ನು ದೈವಿಸ್ವರೂಪವೇ ಎಂದು ಪೂಜೆಯ ಹೆಸರಿನಲ್ಲಿ ಕಾಪಾಡಿಕೊಂಡು ಬಂದ. ಇದರಿಂದ ಗೊತ್ತಾಗುತ್ತದೆ. ವಚನಕಾರರು ತಮ್ಮ ಬದುಕಿನ ಒಂದು ಭಾಗವೇ ಪರಿಸರವೆಂದು ಕಂಡುಕೊಂಡಿದ್ದರು.

ಅಧ್ಯಾಯ–೯

ಕೃಷಿ ಪರಿಸರ

ಅಧ್ಯಾಯ-೯

ಕೃಷಿ ಪರಿಸರ

ಹಿನ್ನೆಲೆ :

ನಾಗರಿಕತೆಯ ಬಹುದೊಡ್ಡ ಆವಿಷ್ಕಾರವೆಂದರೆ 'ಕೃಷಿ' ಅದ್ದರಿಂದ ಕೃಷಿ ಅಧ್ಯಯನ ವೆಂದರೆ ಅದು ಮಾನವ ಶಾಸ್ತ್ರದ ಅಧ್ಯಯನವೇ ಆಗಿದೆ. ಅನಾದಿಕಾಲದಲ್ಲಿ ಅಲೆಮಾರಿಗಳಾಗಿದ್ದ ಮನುಷ್ಯರು ಕಾಡಿನಲ್ಲಿ ಗೆಡ್ಡೆ ಗೆಣಸು ತಿನ್ನುವುದು ಪ್ರಾಣಿಗಳ ಹಸಿ ಮಾಂಸ ತಿನ್ನುವುದರ ಮೂಲಕ ಅನಾಗರಿಕನಾಗಿದ್ದ ಮನುಷ್ಯ ಬೆಂಕಿಯ ಅವಿಷ್ಕಾರದ ಫಲವಾಗಿ ಬೇಯಿಸಿ ತಿನ್ನುವುದು ಕಲಿತ ಜೊತೆಗೆ ಕೃಷಿ ಅಭಿವೃದ್ಧಿಪಡಿಸಿ ನಾಗರಿಕತೆಗೆ ತರೆದುಕೊಂಡು ಹೀಗೆ ಸಾವಿರಾರು ವರ್ಷಗಳಿಂದ ಮಾನವನ ಬದುಕಿನ ಭಾಗವಾದ ಕೃಷಿ ಸ್ಥಳಿಯ ಭೂಗೊಳಕನುಗುಣವಾಗಿ ಮಣ್ಣು, ನೀರು, ಗಾಳಿಯ ಅಗತ್ಯಕ್ಕೆ ತಕ್ಕಂತೆ ಬೆಳೆಯುವ ಮೂಲಕ ಪರಿಸರಕ್ಕೆ ಪೂರಕವಾಗಿ ವ್ಯವಹರಿಸುತ್ತಿದ್ದ ಮನುಷ್ಯರ ಶಕ್ತಿಯ ಮೂಲ ಧಾತುವಾದ "ಆಹಾರ ಉತ್ಪಾದನೆ" ಕೇಂದ್ರಿತವಾದ ಕೃಷಿಗೆ ದೈವತ್ವದ ಗೌರವವಿದೆ ಕುವೆಂಪು ಅವರು ಕೃಷಿಕ (ರೈತ)ನನ್ನು "ನೇಗಿಲ ಯೋಗಿ"ಎಂದು ಕರೆದಿದ್ದಾರೆ. ಕೃಷಿಗೂ ಆಧುನಿಕತೆ ಸ್ಪರ್ಶವಾಗಿ ಅನೇಕ ರೀತಿಯ ತಂತ್ರಜ್ಞಾನಗಳ ಬಳಕೆ ಹೆಚ್ಚಾಗಿದೆ. ಹೇಗಾದರೂ ಕೃಷಿಲಾಭದಾಯಕವಲ್ಲ ಎನ್ನುವ ರೈತರು ಇದ್ದಾರೆ. ಅದೇನೆ ಇದ್ದರು ಕೃಷಿ ಪರಿಸರ ಕುರಿತು ಅಧ್ಯಯನ ಇಂದು ತುಂಬ ಪ್ರಸ್ತುತ.

ಮನುಷ್ಯರ ಅಪಾಹಪಿತನದಿಂದಾಗಿ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಪ್ರಭಾವ-ಪ್ರೇರಣೆಯಿಂದಾಗಿ ಹೊರಗಿನ ತಳಿಗಳು, ರಾಸಾಯನಿಕ ಗೊಬ್ಬರ ವಿಷಪುರಿತ ಕೀಟನಾಶಕಗಳ ಫಲವಾಗಿ ಭೂಮಿ ತನ್ನ ರೋಗನಿರೋಧಕ ಶಕ್ತಿ ಕಳೆದುಕೊಂಡಿದೆ. ಇದರ ಫಲಿತವೆಂದರೆ ಪರಿಸರ ಹಾನಿ ಕೃಷಿ ಪರಿಸರ ಕುರಿತ ಕಾಳಜಿ ಒಲವುಗಳ ಅಧ್ಯಯನ ತೀರ ಇತ್ತೀಚಿನದವುಗಳಾದರೂ ವಚನಕಾರರು ಅಂದೇ ಕೃಷಿ ಕುರಿತು ಚಿಂತನೆ ಮಾಡಿದ್ದಾರೆ. ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿದ್ದು ಒಕ್ಕಲು ತನ ಅಭಿವೃದ್ಧಿ ಹೊಂದದರೆ ಮಾತ್ರ ದೇಶ-ರಾಜ್ಯಗಳು ವೈಜ್ಞಾನಿಕವಾಗಿ ಹಾಗೂ

ತಾಂತ್ರಿಕವಾಗಿ ಮುಂದುವರೆಯಲ್ಲಿಕ್ಕೆ ಸಾಧ್ಯ"[೧೩೧] ಎಂಬ ಮಾತು ಸತ್ಯವಾದದ್ದು. ಕೃಷಿ ಅಭಿವೃದ್ಧಿಯಿಂದ ಮಾತ್ರ ಪರಿಸರ ಉಳಿಯಲಿಕ್ಕೆ ಸಾಧ್ಯವೆಂಬ ಕುರಿತ ಚಿಂತನೆ ಜನಜಾಗೃತಿ ಇಂದು ಅಗತ್ಯವಾಗಿದೆ.

ಕೃಷಿಯ ಅರ್ಥ:

ಭೂಮಿಯನ್ನು ಸಂಸ್ಕರಿಸುವ ಮೂಲಕ ಉತ್ತಿಬಿತ್ತಿ ಬೆಳೆದು ಮನುಷ್ಯರ ಜೀವಚೇತನವಾದ ಆಹಾರ ಉತ್ಪಾದಿಸುವ ಮತ್ತು ಪರಿಸರ ಸಮತೋಲನ ಕಾಪಾಡುವ ಪ್ರಕ್ರಿಯೆಯನ್ನು ಕೃಷಿ ಎಂದು ಕರೆಯುತ್ತವೆ.

ಕೃಷಿ ಎನ್ನುವುದಕ್ಕೆ ಇಂಗ್ಲೀಷನಲ್ಲಿ "ಅಗ್ರಿ ಕಲ್ಚರ್" ಎಂಬ ಸಂವಾದಿ ಪದವಿದೆ. ಇದು 'ಕಲ್ಚರ್' (ಸಂಸ್ಕೃತಿ) ಎನ್ನುವ ಪದದ ಮೂಲ ರೂಪ"[೧೩೨] ಸಂಸ್ಕೃತ ಮೂಲದ ಕೃಷಿಯ ಶಬ್ದಶಃ ಅರ್ಥ ಒಂದು ಸಾಗುವಳಿ, ಬೇಸಾಯ. ಎರಡು ಉದ್ಯಮ, ಪ್ರಯತ್ನ, ವ್ಯವಸಾಯ, ಪರಿಶ್ರಮ.[೧೩೩] ಎಂಬ ಅರ್ಥಗಳಿವೆ ಜೊತೆಗೆ "ಒಕ್ಕಲುತನ" ಉಳುಮೆ, ಗೆಯ್ಮೆ, ಎಂಬ ಪರ್ಯಾಯ ಪದಗಳು[೧೩೪] ರೂಢಿಯಲ್ಲಿವೆ.

ಈ ಎಲ್ಲ ಅರ್ಥವಿವರವನ್ನು ನೋಡಿದರೆ, ಕೃಷಿಗೆ ವಿಶಾಲ ಅರ್ಥ ವಿರುವುದು ಕಂಡುಬರುತ್ತವೆ. ಕೃಷಿಯು "ವ್ಯಾಪಕಾರ್ಥದಲ್ಲಿ ಮೀನುಗಾರಿಕೆ ಸಮುದ್ರಸಂಪತ್ತು ಅರಣ್ಯ, ಅರಣ್ಯ ಉತ್ಪನಗಳು"[೧೩೫] ಎಂದಾಗಿದೆ ರೂಢಿಯ ಅರ್ಥದಲ್ಲಿ ಕೃಷಿ ಸಾಗುವಳಿ ಎಂದು ಗುರುತಿಸುತ್ತವೆ.

ಕೃಷಿ ಮಡುವವದೇ ಕೃಷಿಕ ಅವನಿಗೆ ಕೃಷಿಕ, ಒಕ್ಕಲಿಗ, ವ್ಯವಸಾಯಗಾರ ಮೊದಲಾದ ಹೆಸರಿನಿಂದ ಕರೆಯಲಾಗುತ್ತಿವೆ.

---

131 ಹೈದ್ರಾಬಾದ ಕರ್ನಾಟಕ ಭಾಗದ ಕೃಷಿ ಒಂದು ಕೈಪಿಡಿ, ಮುನ್ನುಡಿ,– ವಿ.ಶಾಂತರಡ್ಡಿ, ಪು.ಸಂ.೫

132 ವಿವರಕ್ಕಾಗಿ ನೋಡಿ – ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಾ. ಎಚ್.ತಿಪ್ಪೇರುದ್ರ ಸ್ವಾಮಿ.

133 ಕನ್ನಡ ನಿಘಂಟು – ಸಂಪುಟ–೨, ಕ.ಸಾ.ಪ., ಬೆಂಗಳೂರು–೧೯೭೬, ಪು.ಸಂ.೨೦೩೭.

134 ಕೃಷಿ, ಕೃಷಿ, ದಕ್ಷಿಣ ಭಾರತೀಯ ಜಾನಪದ ಕೋಶ, ಕ.ವಿ.ವಿ.ಹಂಪಿ. ಪು.ಸಂ.೨೦೭.

135 ಕನ್ನಡ ವಿಶ್ವಕೋಶ ಸಿ.ಡಿ. ಮೈಸೂರು ವಿಶ್ವವಿದ್ಯಾಲಯ, ಮೈಸೂರು–೨೦೦೬

ಕೃಷಿ ಪರಿಸರ-ಸ್ವರೂಪ :

ಮನುಕುಲದ ಅಭಿವೃದ್ಧಿಗೆ ಪೂರಕವಾದ ಜ್ಞಾನಗಳಲ್ಲಿ ಕೃಷಿಯೇ ಮಹತ್ವದ್ದು ಆದ್ದರಿಂದ "ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು" ಎಂಬ ಜನಪದ ಗಾದೆ ಸಾರ್ವಕಾಲಿಕ. ಕೃಷಿ ಎಲ್ಲ ಜ್ಞಾನಗಳ ತಾಯಿ ಇದ್ದಹಾಗೆ ಏಕೆಂದರೆ ವ್ಯವಸಾಯ ಜಾನಪದ ಅಧ್ಯಯನ ವೆಂದರೆ, ಕೃಷಿ ವಿಜ್ಞಾನದ ಅಧ್ಯಯನ ಮತ್ತು ಸಾಂಸ್ಕೃತಿಕ ಮಾನವ ಶಾಸ್ತ್ರದ ಅಧ್ಯಯನ"[೧೩೬] ಎಂದೇ ಅನಿಸುತ್ತದೆ. ಆದರೆ ಕೃಷಿ ಸುಸ್ಥಿರವಾಗಿದ್ದರೆ ಮಾತ್ರ ಪರಿಸರ ಸರಿ ಇರಲು ಸಾಧ್ಯ.

ಪೃಥ್ವಿಯನ್ನು ಜಯಿಸುವುದರ ಕುರಿತು ಹಿಂದಿನ ಅಧ್ಯಾಯದಲ್ಲಿ ಸ್ವಲ್ಪಮಟ್ಟಿಗೆ ನೋಡಿದ್ದೇವೆ. ಪೃಥ್ವಿಯಿಂದ ಎಷ್ಟರಮಟ್ಟಿಗೆ ಮಾನವ ಸದುಪಯೋಗ ಪಡೆದುಕೊಳ್ಳುತ್ತಾನೆ. ಅಂದರೆ ಪೃಥ್ವಿಯಿಂದ ಯಾವ ಯಾವ ವಸ್ತು ಪಡೆದುಕೊಳ್ಳುತ್ತಾನೆ? ಎಷ್ಟು ಫಸಲು ಬೆಳೆಯುತ್ತಾನೆ? ಧಾನ್ಯ ಬೆಳೆಯುಬಲ್ಲ ಇವೆಲ್ಲಕ್ಕೂ ಕಾರಣ ಅವನಲ್ಲಿರುವ ಪರಿಕರಣಗಳು, ನಮ್ಮ ಭಾಷೆಯಿಂದ ತಿಳಿದುಬರುತ್ತದೆ. ನಾಗರಿಕತೆಗೆ ಸುಮಾರು ೪ ಸಾವಿರ ವರ್ಷಗಳ ಇತಿಹಾಸವಿದೆ. ಅಂದರೆ ಅಂದೇ, ಮನುಷ್ಯ ಆಯುಧದಿಂದ ಆದೆಷ್ಟು ಶ್ರಮಪಟ್ಟರೂ ಕೂಡ ಆತ ತನಗೊಬ್ಬನಿಗೆ ಬೇಕಾದ ಆಹಾರ ಮಾತ್ರ ತಯಾರಿಸಿಕೊಳ್ಳಬಲ್ಲವನಾಗಿದ್ದ ಕಾರಣ ಅಂದಿನ ಅವನ ಆಯುದ್ಧಗಳು ಮೊಂಡಾದ ಕಲ್ಲುಗಳೆ ! ಈ ಆಯುಧಗಳನ್ನಿಟ್ಟುಕೊಂಡು ದಿನಪೂರ್ತಿ ಶ್ರಮ ಮಾಡಿದರೂ ಕೂಡ ಅವನೊಬ್ಬನ ಹೊಟ್ಟೆ ತುಂಬಿತೆಂದರೆ ಅದೇ ದೊಡ್ಡ ಸಾದನೆಯಲ್ಲವೆ?

ಕ್ರಮೇಣ ಅತನ ಬದುಕಿನಲ್ಲಿ ಬದಲಾವಣೆಗಳಾಗುತ್ತಾ ಬಂದವು. ಆಯುಧಗಳು ಕೂಡ ಕ್ರಮೇಣ ಕಬ್ಬಿಣದಾದವು. ಇದರೊಂದಿಗೆ ವ್ಯವಸಾಯ ಮಾಡುವುದನ್ನು ಕಲಿತ. ಕೆಲಕಾಲದನಂತರ ಕಬ್ಬಿಣ ಕರಗಿಸುವುದನ್ನು ಕಲಿತ ತಾನೇ ನಿರ್ಮಾಣ ಮಾಡಿದ. ಕಟ್ಟಿಗೆ ಮತ್ತು ಕಬ್ಬಿಣದ ನೇಗಿಲಿನಿಂದ ತಾನೇ ಎಳೆಯತೊಡಗಿದ. ಇದರಿಂದ ತಪ್ಪಿಸಿಕೊಳ್ಳಲು ಪ್ರಾಣಿ ಪಶುಗಳನ್ನು ಸಾಕತೊಡಗಿದ, ಕ್ರಮೇಣ ಅವುಗಳಿಂದ ಹೊಲ ಉಳ್ಳುವುದು ಕಲಿತುಕೊಂಡ. ಇದರಿಂದ ಕೃಷಿ ಪರಿಸರದಲ್ಲಿ ಅದ್ಭುತ ಬದಲಾವಣೆಯಾದವು. ಏಕೆಂದರೆ ಮನುಷ್ಯ ತನ್ನೊಬ್ಬನ ಹೊಟ್ಟೆ ತುಂಬಿಸಿಕೊಳ್ಳುವ ದಿನಗಳು ಹೋಗಿ ಸಂಗ್ರಹಿಸಿಡುವ ಪ್ರವೃತ್ತಿ ಉಂಟಾಯಿತಲ್ಲ. ಇದರಿಂದ ಅವನಲ್ಲಿ ಅದೆಷ್ಟೋ ಶಕ್ತಿ ಸಂಪತ್ತು ಉಂಟಾಯಿತು.

---

[136] ವ್ಯವಸಾಯ ಜಾನಪದ ಡಾ. ಎಮ್.ಜಿ. ಈಶ್ವರಪ್ಪ, ಜಾನಪದ ಆಯಾಮಗಳು ಸಂ.ಡಾ. ಬಸವರಾಜ ಸಬರದ, ಪು.ಸಂ೩೨೯.

ಈ ಬೃಹತ್ ಸಾಧನೆಗಳೊಂದಿಗೆ ಶುರುವಾಯಿತು. ಏನೆಂದರೆ, ನೆಮ್ಮದಿ ಕಳೆದುಕೊಳ್ಳುವುದು ಇಲ್ಲಿ ಈತ ಪೃಥ್ವಿಯನ್ನು ಚೆನ್ನಾಗಿ ಜಯಿಸುವುದು ಕಲಿತ. ಇದರೊಂದಿಗೆ ಆದಾಯ ಹೆಚ್ಚಾದಂತೆ ಕಸಿದುಕೊಳ್ಳುವ ಗುಂಪುಗಳು ಕೂಡ ಹುಟ್ಟಿಕೊಂಡವು. ಹೀಗೆ ಕಸಿದುಕೊಂಡು ಬದುಕುವವರು ಶ್ರೀಮಂತರಾದರು ದುಡಿಯುವವರು ಶ್ರಮಜೀವಿಗಳಾದರು.

ಕೃಷಿ ಪರಂಪರೆ:

ಹರಪ್ಪ ಮಹೆಂಜೋದಾರೋ ನಾಗರಿಕತೆಯ ಉಚ್ಛಾಯ ಹಂತದಲ್ಲಿ ನಾಗರಿಕರಣವು ಸಾಕಷ್ಟು ವ್ಯಾಪಕವಾಗಿದಿತ್ತು. ವ್ಯವಸ್ಥಿತವಾದ ನಗರಗಳು ನಿರ್ಮಾಣ ಮಾಡಿಕೊಂಡಿದ್ದರು. ಯಾವುದಾದರೊಂದು ನಗರಿಕರಣಕ್ಕೆ ಪೂರ್ವಭಾವಿಯಾಗಿ ಕೃಷಿ ಪ್ರಧಾನವಾಗಿ ಅಭಿವೃದ್ಧಿ ಹೊಂದಬೇಕಾದದ್ದು ಅನಿವಾರ್ಯವಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಭೂಮಿಯನ್ನು ಆಧರಿಸಿ ಜೀವನ ನಡೆಸಿದ್ದವರಿಗೆ ಆಹಾರ ದೊರಕುವಂತಾಗಬೇಕಾದರೆ ಕೃಷಿ ಮಾಡುವಷ್ಟು ಮಾತ್ರವಲ್ಲದೆ ಇತರರಿಗೂ ಸ್ವಲ್ಪ ಸರಬರಾಜು ಮಾಡುವಷ್ಟು ಬೆಳೆ ಬೆಳೆಯಬೇಕು. ಕೃಷಿಯ ತಾಂತ್ರಿಕತೆ ಇನ್ನೂ ಪ್ರಾಥಮಿಕ ಹಂತದಲ್ಲೇ ಉಳಿದಿದ್ದರೆ ಮಿಗುತಾಯವಾಗುವಷ್ಟು ಉತ್ಪಾದನೆ ಅಸಾಧ್ಯವಾಗಿ ಕೃಷಿಯೇತರ ಕಸುಬುಗಳಿಗೆ ಪೂರ್ಣಾವಧಿಯಾಗಿ ಅಂಟಿಕೊಳ್ಳುವುದು ದುಷ್ಕರವಾಗುತ್ತದೆ. ಅಂತಹ ಸಂದರ್ಭದಲ್ಲಿ ಕೃಷಿ ಅಥವಾ ಕೃಷಿ ಸಮಾನವಾದ ಕ್ರೀಯೆಗಳಲ್ಲಿ ಎಲ್ಲರು ತೊಡಗಿದ್ದು, ಅವರಲ್ಲಿ ಕೆಲವರು ಕುಶಲಕರ್ಮಿಗಳಾಗಿಯೂ ಕೆಲಸ ಮಾಡುತ್ತಿರಬೇಕಾಗುತ್ತದೆ. ಹರಪ್ಪ ನಾಗರಿಕತೆಯ ಹಿನ್ನಲೆಯಲ್ಲಿ ನೋಡುವುದಾದರೆ ಆಗೆ ಕೃಷಿ ಸಂಬಂಧಿ ಜ್ಞಾನವು ಹೇಳಿಕೊಳ್ಳುವಷ್ಟರ ಮಟ್ಟಿಗೆ ಬೆಳೆದಿತ್ತು. ಕೃಷಿ ಸಂಬಂಧಿ ಸಲಕರಣೆಗಳನ್ನು ಆರ್ಯರು ಹರಪ್ಪ ಸಾಂಸ್ಕೃತಿಯವರಿಂದ ಎರವಲು ಪಡೆದಿದ್ದರು.

ಹರಪ್ಪ ಸಂಸ್ಕೃತಿಯಲ್ಲಿ ನೇಗಿಲಿನಿಂದ ಬೇಸಾಯ ಮಾಡುತ್ತಿದ್ದುದಕ್ಕೆ ಸಾಕ್ಷಾಧಾರಗಳಿವೆ. ಪಶುಸಂಗೋಪನೆಯು ಅವರ ಪ್ರಮುಖ ಕಸುಬಾಗಿದ್ದಿತೆಂಬುದು ಇದಕ್ಕೆ ಇನ್ನಷ್ಟು ಪುಷ್ಟಿಯನ್ನೊದಗಿಸುತ್ತದೆ. ಕೃಷಿಗೆ ಸಂಬಂಧಿಸಿದಂತೆ ಋಗ್ವೇದದಲ್ಲಿ ಪ್ರಸ್ತಾಪಗಳಿವೆ. ನೇಗಿಲ ಬಳಕೆ, ಬೀಜ ಬಿತ್ತುವಿಕೆ, ಬೆಳೆ ಕಟಾವು, ಬೆಳೆಗೆ ನೀರು ಹಾಯಿಸುವುದು. ಬೃಹದಾರಣ್ಯ ಕೋಪನಿಷತ್ತಿನ ಮಂತ್ರಭಾಗದಲ್ಲಿ

ಯಥಾವೃಕ್ಷೋ ವನಸ್ಪತಿಸ್ತಥೈವ ಪರುಷೊಮೃಪಾ ।
ತಸ್ಯ ಲೋಮಾನಿ ಪರ್ಣನಿ ತ್ವಗಸ್ಯೋತಾಡಿಕಾ ಬಹಿಃ ।
ತ್ವಚ ಏವಾಸ್ಯ ರುದ್ಧಿರಂ ಪ್ರಸ್ಯಂದಿ ತ್ವಚ ಉತ್ಪಾಟಃ ।
ತಸ್ಮಾತ್ತಿದಾತೃಣತ್ ಪ್ರೈತಿ ರಸೋ ವೃಷಾದಿವಾ ಹತಾತ ।
ಮಾಂಸಾನ್ಯಸ ಶಕರಾಣಿ ಕಿನಾಟಂ ಸ್ನಾವ ತತ್ ಸ್ಥಿರಮ್
ಅಸ್ತಿನಂತರತೊ ದಾರೋಣಿ ಮಜ್ಜಾ ಮಜ್ಜೋಪಮಾ ಕೃತ ।
ಯುದ್ಧಕ್ಷೋ ವೃಕ್ಣೊ ರೋಹತಿ ಮೂಲಾನ್ನವತರಃ ಪುನಃ ।
ಮರ್ತ್ಯ ಸ್ವಿನ್ಮೃತ್ಯುತಾ ವೃಕ್ಣ ಃ ಕಸ್ಮಾನ್ಮೂಲಾತ್ಪ್ರರೋಹತಿ ॥[೧೩೭]

ಮನುಷ್ಯನು ಒಂದು ಮರವಿದ್ದಂತೆ ಇಡೀ ಶರೀರವೇ ಒಂದು ಮರ ಮರದ ತೊಗಟೆಯಿಂದ ಅಂಟುದ್ರವ ಹರಿಯುತ್ತದೆ ಮನುಷ್ಯನ ದೇಹದಲ್ಲಿ ರಕ್ತದ ಹರಿಯುವಿಕೆ, ಮನುಷ್ಯರಾದ ನಮ್ಮ ದೇಹದಲ್ಲಿ ನರ, ಮೂಳೆ, ಗಳಿರುವಂತೆ ಗಿಡಗಳಿಗೆ ತೊಗಟೆ ಒಳಮೈ, ನಾರಿನಂಶ, ಬೇರು, ಕಾಂಡ, ಗಿಡ ಕಡಿದರೆ ಚಿಗುರುತ್ತದೆ ಬೇರು ಸಮೇತ ಕಡಿದರೆ ಚಿಗುರುವುದಿಲ್ಲ.

ಕೃಷಿಯಲ್ಲಿ ಸಾವಯವಗೊಬ್ಬರ ಇಂದು ಪ್ರಚಾರಕ್ಕೆ ಬಂದಿದೆ. ಆದರೆ ಸಾವಯವ ಗೊಬ್ಬರದ ಬಗ್ಗೆ ಅಥರ್ವವೇದದ ಮಂತ್ರ ಹೀಗೆ ಹೇಳುತ್ತದೆ.

ಕರಿಷಿಣೀಂ ಫಲವತಿಂ ಸ್ವಧಾಮಿರಾಂ ಚ ನೋ ಗ್ರಹೇ ।
ಔದುಂಬರಸ್ಥ ತೇಜನಾ ಧಾತಾ ಪುಷ್ಟಿಂ ದಧಾತು ಮೇ ॥[೧೩೮]

ಔದುಂಬರ್ ಎಂದರೆ ಅತ್ತಿಮರ (ಅಂಜೂರ) ವೆಂದು ತೋರುತ್ತದೆ. 'ಕರೀಷ್' ಅಂದರೆ ಸಗಣಿ ಅಥವಾ ಸಾವಯವ ಗೊಬ್ಬರ ಇದು ಹಾಕುವುದರಿಂದ ಫಲವೃದ್ಧಿಯಾಗುತ್ತದೆ.

ಭಾರತದ ಕೆಲ ದಾರ್ಶನಿಕರು ಮರ ಗಿಡಗಳಿಗೂ ಪ್ರಾಣಿಗಳಿಗಿರುವಂತೆ ಜೀವವಿದೆ ಎಂದು ಹೇಳಿದ್ದಾರೆ. ೧೦ನೇ ಶತಮಾನದ ಉದಯಾಚಾರ್ಯ ತನ್ನ ಕೃತಿ ಕಿರಣಾವಲಿಯಲ್ಲಿ ಸಸ್ಯಗಳಿಗೂ ಜೀವವಿದೆ. ಅವುಗಳು ತಮಗೆ ಬೇಕಾದ ಆಹಾರ ತೆಗೆದುಕೊಂಡು ಬೇಡವಾದದ್ದು ಬಿಟ್ಟುಬಿಡುತ್ತವೆ. ಮುಂಜಾನೆ ಎಲೆಗಳು ಲವ ಲವಿಕೆಯಿಂದ ಕೂಡಿದ್ದು, ರಾತ್ರಿಯಾದಂತೆ ಅವುಗಳ ಎಲೆಗಳು

---

[137] ಭಾರತೀಯ ವಿಜ್ಞಾನದ ಹಾದಿ, ಜಿ.ರಾಮಕೃಷ್ಣ, ಪ್ರಸಾರಾಂಗ, ಕ.ವಿ.ವಿ. ಹಂಪಿ, ಪು. ೨೯೦

[138] ಭಾರತೀಯ ವಿಜ್ಞಾನದ ಹಾದಿ, ಜಿ.ರಾಮಕೃಷ್ಣ, ಪ್ರಸಾರಾಂಗ, ಕ.ವಿ.ವಿ. ಹಂಪಿ, ಪು. ೨೯೧

ಮುದುಡಿಯಾಗುತ್ತವೆ. ಅಂದರೆ ಲವ ಲವಿಕೆಯಿಂದ ಕೂಡಿದರೆ ಎಚ್ಚರದಿಂದಿರುತ್ತವೆ!. ಬಾಡಿದಾಗ ನಿದ್ರಾವಸ್ಥೆಗೆ ಜಾರುತ್ತವೆ.

ಗಿಡ-ಮರಗಳು ಬೆಳೆಸುವುದರ ಬಗ್ಗೆ ಮತ್ಸೆ ಪುರಾಣ ಅಗ್ನಿ ಪುರಾಣ, ವಾರಾಹಪುರಾಣ, ಪದ್ಮಪುರಾಣಗಳಲ್ಲಿ ಹೀಗೆ ಹೇಳಲಾಗಿದೆ. ಆಶ್ವಥ ದಿಂದ ಶ್ರೀಮಂತಿಕೆ, ಅಶೋಕದಿಂದ ಸಂತೋಷ ಬಾಳೆಯಿಂದ ರತಿಸುಖ, ಕೇತಕಿಯಿಂದ ಅನಿಷ್ಠ ನಿವಾರಣೆ ಇತ್ಯಾದಿ.

ಅಂದರೆ ಮಕ್ಕಳಿಲ್ಲದವರಿಗೆ ಸಂತಾನಪ್ರಾಪ್ತಿ, ಬಡತನದಿದ ಧನಿಕ ಶೋಕದಿಂದ ಅಶೋಕ ಇವೆಲ್ಲ ನೋಡಿದರೆ, ರೈತ ತನ್ನ ಬದುಕಿನ ಎಲ್ಲ ನೋವುಗಳು ಗಿಡಗಳ ಬೆಳವಣಿಗೆಯಲ್ಲಿಯೂ ಕಾಲ ಕಳೆಯಲಿ ಆತನಿಗೆ ತನ್ನ ಬಡತನದ, ಬಂಜೆತನದ ನೋವು ಬಾಧಿಸದಿರಲಿ ಎಂಬ ಉದ್ದೇಶದಿಂದ ಜೊತೆಗೆ ಹೀಗೆ ಆತ ತನ್ನನ್ನು ತಾನು, ಇವುಗಳನ್ನು ಕೃಷಿಯಲ್ಲಿ ತೊಡಗಿಸಿಕೊಂಡರೆ ಬೇರೆ ವಿಚಾರಗಳಿಗೆ ಆತನಿಗೆ ಸಮಯವೇ ಇರುವದಿಲ್ಲ. ಜೊತೆಗೆ ಆರೋಗ್ಯವು ಚೆನ್ನಾಗಿರುವುದೆಂದು ಇದರ ಹಿಂದಿನ ಉದ್ದೇಶವಿರಬೇಕು.

ಗಿಡಗಳು ಬೆಳೆಸುವ ಸಸ್ಯ ಬೆಳೆಸುವುದರ ಹಿಂದಿನ ಉದ್ದೇಶ ಇದಾದರೂ ಕೂಡ ಗಿಡಗಳನ್ನು ಕಡಿದರೆ ಸುವರ್ಣ ದಂಡವಾಗಿ ಕೊಡಬೇಕಿತ್ತು. ಅಂದರೆ, ಈ ರೀತಿ ದಂಡವಿಧಿಸಿದರು ಗಿಡಕಡಿಯದೇ ನೆಟ್ಟರೆ ನನಗೆ ಮೇಲೆ ಹೇಳಿದ ಬಹುಭಾರ್ಯ ಒದಗುವುದೆಂದು ಮರಗಳು ಕಡಿಯುತ್ತಿರಲಿಲ್ಲ ಬದಲಾಗಿ ಹೆಚ್ಚು ಹೆಚ್ಚು ಸಸ್ಯ ನೆಡುತ್ತಿದ್ದರು.

ಶುಕ್ರಾಚಾರ್ಯ ಶತ್ರುನೀತಿಯ[೧೩೯] ಮನೆಯ ಎಡಭಾಗಕ್ಕೆ ತೋಟವೊಂದಿರಬೇಕು, ಊಟವಾದ ಮೇಲೆ ಆರಡಿ ನಡೆಯಬೇಕು. ಇದರಿಂದ ಉಂಡ ಆಹಾರ ಕಿರಿಕಿರಿಯಿಲ್ಲದೆ ಪಚನವಾಗುತ್ತದೆ. ಮನೆಯ ಎಡಭಾಗಕ್ಕೆ ತೋಟವಿರಬೇಕೆಂದರೆ ಶುದ್ಧವಾದ ಪರಿಸರದ ಉದ್ದೇಶದಿಂದ ಪ್ರತಿಯೊಬ್ಬರೂ ಎಡಗಡೆಯೋ ಹೆಚ್ಚಾಗಿ ಮಲಗಬೇಕು. ಏಳುವಾಗ ಕೂಡ ಎಡಗಡೆಯಿಂದಲೇ ಏಳಬೇಕು. ಇದರ ಹಿಂದೆ ನಮ್ಮ ಹೃದಯಕ್ಕೆ ಸರಾಗವಾಗಿ ಶುದ್ಧ ಗಾಳಿ ದೊರೆಯಲಿ ಎಂಬ ಉದ್ದೇಶ ಇದರದ್ದಾಗಿದೆ.

---

[139] ಭಾರತೀಯ ವಿಜ್ಞಾನದ ಹಾದಿ, ಜಿ.ರಾಮಕೃಷ್ಣ, ಪ್ರಸಾರಾಂಗ, ಕ.ವಿ.ವಿ. ಹಂಪಿ, ಪು. ೨೯೯

ಚರಕ ಸುಶ್ರತರಾದಿಯಾಗಿ ಕೇವಲ ಸಸ್ಯಗಳ ಬಗ್ಗೆ ಅಷ್ಟೆ ಅಲ್ಲ ಕೃಷಿಯಲ್ಲಿ ಮಣ್ಣನ್ನು ಕೂಡ ಎಂಥ ಎಂಥ ಮಣ್ಣು ಇದ್ದರೆ ಕೃಷಿಗೆ ಯೋಗ್ಯವೆಂಬುದನ್ನು ಕೂಡ ಹೇಳಿದ್ದಾರೆ. ಈ ಮಣ್ಣಿನ ಗುಣಧರ್ಮ ಆಯಾ ಪ್ರದೇಶಕ್ಕನುಗುಣವಾಗಿ, ವಿಂಗಡಿಸಲಾಗಿದೆ. "ಕೃಷಿಗೆ ಅನುಕೂಲವಾಗುವಂತೆ ಕೌಟಿಲ್ಯನು ನದಿ ತಟಗಳಲ್ಲಿ ಬೆಳ್ಳಿಯ ಕೃಷಿಗೆ ಯೋಗ್ಯವೆನ್ನುತ್ತಾನೆ.[೧೪೦]

ಇವುಗಳೊಂದಿಗೆ ಮನುಷ್ಯ ಸ್ಮೃತಿಯಲ್ಲಿ ವಿಶೇಷವಾದ ಸಸ್ಯೌಷಧಿದಯ ಬಗ್ಗೆ ಉಲ್ಲೇಖಿಸಿದ್ದಾನೆ. ಭತ್ತ, ಗೋದಿ, ಸಸಿಗಳ ಔಷಧವಾಗಿ ಇವತ್ತಿನ ದಿನಗಳಲ್ಲಿ ಗೋದಿ, ಏಡ್ಸ್ ಔಷಧಕ್ಕಾಗಿ ಗೋದಿ ಸಸ್ಯ ಇಲ್ಲವೆ?

ಹಿಂದೆ ನೊಡಿದರೆ. ಸುಮಾರು ೧೦ ಸಾವಿರ ವರ್ಷಗಳ ಇತಿಹಾಸವಿರುವ ನೈಲ್ ನದಿಗೆ ಜಗತ್ತಿನ ಎಲ್ಲ ಕೃಷಿ ಪದ್ದತಿಗೆ ಆದರ್ಶವೆಂದೇ ಹೇಳಬೇಕು. ಪ್ರಾಚಿನ ಕಾಲದಿಂದ ಗೊತ್ತಿರುವ ನಮ್ಮ ರೈತರು ಹೊಸದಾಗಿ ಕೃಷಿಯಲ್ಲಿ ಎನನ್ನೂ ಕಲಿಯಬೇಕಾಗಿಲ್ಲ.

ಕೃಷಿ ಪರಿಸರ ವಚನಕಾರರು:

ವಚನ ಚಳುವಳಿಯ ಕೇಂದ್ರ ವ್ಯಕ್ತಿಯಾದ ಬಸವಣ್ಣನವರು ಕೃಷಿಗೆ ಅಗ್ರಸ್ಥಾನ ನೀಡಿದ್ದಾರೆ. ತ್ಯಾಗ ಮಾಡುವ ತ್ರಿವಿಧ ದಾಸೋಹ ಕೃಷಿಗಾಗಿ ಎಂಬುದನ್ನು "ನಾನು ಆರಂಬವ ಮಾಡುವೆನು ಗುರುಪೂಜೆಗೆಂದು"[೧೪೧] ಎಂಬ ವಚನದ ಮೂಲಕ ಹೇಳಿದ್ದು ನೊಡದರೆ ಕೃಷಿಗೆ ಅವರು ಕೊಟ್ಟ ಮಹತ್ವ ವಿಧಿತವಾಗುತ್ತದೆ. ವಚನಕಾರರ ಕೃಷಿ ಕೇವಲ ಭೂ ವ್ಯವಸಾಯ ಮಾತ್ರ ವಾಗಿರದೆ, ಹಸನಾದ ಬದುಕಿನ ವ್ಯವಸಾಯವು ಆಗಿತ್ತು ಸಾಮಾಜಿಕ ವ್ಯವಸಾಯವು ಆಗಿತ್ತು. ಅಲ್ಲದೆ ಪವಿತ್ರಕಾಯಕವಾದ ಕೃಷಿ "ಲೌಕೀಕ ಜೀವನವನ್ನು ಸುಭದ್ರವೂ ಸುಂದರವು ಆಗುವಂತೆ ಮಾಡುತ್ತದೆ ಅದು ಕೃಷಿ ವಿಜ್ಞಾನ ಆಗಿದೆ ಹಾಗೆಯೇ 'ಕೃಷಿ'ಯು ಪಾರಲೌಕಿಕ ಆಗಿದೆ"[೧೪೨] ಹೀಗೆ ಅಂತರಂಗದ ಬಹಿರಂಗ ಶುದ್ದಿಗೆ ಕೃಷಿಕಾಯಕ ಕೃಷಿ ಪರಿಕರಗಳ ಉಲ್ಲೇಖ ನೀಡಿದ್ದು ಗಮನಾರ್ಹ.

ಅಥರ್ವಣ ವೇದದ ಶ್ಲೋಕ ಜೀವೋ ಜೀವಸ್ಯ ಜೀವನಂ ಒಕ್ಕಲಿಗ ಮುದ್ದಣ್ಣನ ವಚನವೊಂದು ನೋಡುವುದಾದರೆ.

---

[140] ಭಾರತೀಯ ವಿಜ್ಞಾನದ ಹಾದಿ, ಜಿ.ರಾಮಕೃಷ್ಣ, ಪ್ರಸಾರಾಂಗ, ಕ.ವಿ.ವಿ. ಹಂಪಿ, ಪು. ೨೯೯

[141] ಬಸವಣ್ಣನವರ ವಚನ ಸಂ.೧ ಸಂ. ಎಮ್.ಎಮ್.ಕಲಬುರ್ಗಿ, ವ.ಸಂ.೭೦೯, ಪು.ಸಂ.೧೭೮.

[142] ವಚನಗಳಲ್ಲಿ ಕೃಷಿ ವಿಜ್ಞಾನ – ಡಾ. ಎಮ್.ಸಿ. ಧಮದಮನಿ, ವಚನಗಳಲ್ಲಿ ವಿಜ್ಞಾನ, ಸಂ.ಡಾ.ವೀರಣ್ಣ ರಾಜೂರ್, ಪು.ಸಂ.೧೯೩.

ಅಂಗವೆ ಭೂಮಿಯಾಗಿ ಲಿಂಗವೆ ಬೆಳೆಯಾಗಿ,
ವಿಶ್ವಾಸವೆಂಬ ಬತ್ತ ಬಲಿದು ಉಂಡು
ಸುಖಿಯಾಗಿರಬೇಕೆಂದ ಕಾಮ ಭೀಮ ಜೀವಧನದೊಡೆಯ.[೧೪೩]

ಅಂದರೆ ಒಂದು ಜೀವ ಇನ್ನೊಂದು ಜೀವವನ್ನು ಬೆಳೆಸುತ್ತದೆ. ಜೀವ ಜೀವದಿಂದ ಜೀವಕ್ಕೆ ಸಾಗುತ್ತದೆ. ಅಂದರೆ ಮತ್ತೆ ನಿಸರ್ಗಕ್ಕೆ ಸೇರಬೇಕು. ಇದೆಲ್ಲವೂ ಎಲ್ಲಿ ಸಾಧ್ಯವೆಂದರೆ ಕೃಷಿ ಪರಿಸರದಲ್ಲಿ ಮಾತ್ರ ಸಾಧ್ಯ. ಕೊಡುವುದು ಪಡೆಯುವುದು, ಪಡೆದದ್ದನ್ನು ಮತ್ತೆ ಪಡೆದಲ್ಲಿಯೇ ಹಿಂದಿರುಗಿಸುವುದು, ನಾವು ಯಾರಿಂದಾದರೂ ಪಡೆದ ವಸ್ತು ಅವರಿಗೆ ಹಿಂದಿರುಗಿಸುತ್ತೇವಲ್ಲ ಹಾಗೆ ಒಂದು ವೇಳೆ ನಾವು ಹಿಂದಿರುಗಿದೆ ಇದ್ದರೆ ಅವರು ಪುನಃ ನಮಗೆ ಕೊಡುತ್ತಾರೆಯೇ ಇಲ್ಲವಲ್ಲ. ಆದ್ದರಿಂದ ಪಡೆದದ್ದನ್ನು ಪುನಃ ಪಡೆದಲ್ಲಿಯೇ ಕೊಡಬೇಕಾಗುತ್ತದೆ.

ಅಂದರೆ ನಮ್ಮ ಕೊಟ್ಟಿಗೆ ಗೊಬ್ಬರಕ್ಕೆ ಮಹತ್ವವೆಷ್ಟು ಎಂಬುದನ್ನು ಈ ವಚನ ಹೇಳುತ್ತದೆ ಅಂಗವೇ ಭೂಮಿ ಲಿಂಗವೇ ಬೆಳೆಯಾಗಬೇಕಾದರೆ, ಇಂದಿನ ರಾಸಾಯನಿಕ ಕೃಷಿ ಪದ್ದತಿಯಿಂದ ಸಾಧ್ಯವಿಲ್ಲ. ಇವತ್ತಿನ ದಿನಗಳಲ್ಲಿ ಎಲ್ಲೆಂದರಲ್ಲಿ ರಸಾಯಾನಿಕ ಬೇಸಾಯ ಪದ್ದತಿಯೂ ಹೆಚ್ಚಾಗಿರುವಾಗ ಈ ವಚನ ಹೀಗೆ ವಿವರಿಸಬಹುದು. ರಾಸಾಯನಿಕ ಗೊಬ್ಬರ ಕೀಟನಾಶಕ, ಬಳಸಿದ ಕೃಷಿಯಲ್ಲಿ ರೈತನು ಕಂಗಾಲಾಗಬೇಕಾಗುತ್ತದೆ. ರೈತ ಕೃಷಿಯಲ್ಲಿ ಹಳೆಪದ್ಧತಿ ಕೈಬಿಡದೆ ಹೊಸದನ್ನು ಸಂಪೂರ್ಣವಾಗಿ ಸ್ವೀಕರಿಸದೆ ಆತ ಅತಂತ್ರಸ್ಥಿತಿಗೆ ತಲುಪಿದ್ದಾನೆ.

ರಾಸಾಯನಿಕ ಗೊಬ್ಬರ, ಕೀಟನಾಶಕ, ಕಳೆನಾಶಕಗಳು ಲಗ್ಗೆ ಇಟ್ಟಿವೆ ಒಂದು ಮಾತಂತೂ ಸತ್ಯ ಮನುಷ್ಯನಿಗಿಂತ ಮೊದಲು ಸಸ್ಯ ಜನ್ಮ ತಾಳಿದೆ ಸೃಷ್ಟಿಯಲ್ಲಿ ಮರಗಿಡಗಳೇ ಮೊದಲು ಮರಗಿಡಗಳಿಗೆ ಭೂಮಿಯೊಂದಿಗೆ ಮಾನವನಿಗಿಂತ ಮೊದಲು ಸಂಬಂಧವಿದೆ ಎಂದಿದ್ದಾರೆ. ಕೃಷಿಯಲ್ಲೂ ಕೂಡ ಪಾಲನೆ, ಸೃಷ್ಟಿಗೆ ಬಿಟ್ಟದ್ದಾಗಿದೆ. ಅಂದರೆ ಕೃಷಿಯಲ್ಲಿ ತನ್ನಷ್ಟಕ್ಕೆ ತಾನೇ ಬೆಳೆದ ಬೆಳೆ ನಮ್ಮ ದನಗಳ ಸಗಣಿ, ಗ್ವಾತದಿಂದ ಸತ್ವ ಹೀರಿ ಬೆಳೆದ ಬೆಳೆಯು ವಿಷಂಯುಕ್ತ ಬೆಳೆಯಾಗಿರಲು ಸಾಧ್ಯ ಇನ್ನೂ ಇವತ್ತಿನ ನಮ್ಮ ರೈತರ ಸಂಸ್ಕರಿಸಿದ ಬೀಜ, ರಸಗೊಬ್ಬರದ ಕೀಟನಾಶಕ ಇವುಗಳಿಂದ ಬೆಳೆದ ಬೆಳೆ ಸತ್ವರಹಿತವಾಗಿಯೇ ಇರುತ್ತದೆ.

[143] ಒಕ್ಕಲಿಗ ಮುದ್ದಣ್ಣನ ವಚನ ಸಂ. ೧೭೩೭ ಸಂಪುಟ ೬ ಪು: ೬೭೦

ನಮ್ಮ ದೇಸಿ ದನಗಳ ಸಗಣಿಯಲ್ಲಿ ಒಂದೇ ಒಂದು ರಾತ್ರಿಯಲ್ಲಿ ಕೋಟಿಗಟ್ಟಲೇ ಜೀವಾಣು ಸೃಷ್ಟಿಯಾಗುತ್ತವೆ. ಇದು ನಿಸರ್ಗ ಸೃಷ್ಟಿ ! ಈ ಜೀವಾಮೃತ ಉಂಡು ಬೆಳೆದ ಬೆಳೆ ಸತ್ವ ಶಾಲಿಬೆಳೆಯಾಗಿರುತ್ತದೆ. ವಿಷಮುಕ್ತ ಆಹಾರವಾಗಿರುತ್ತದೆ. ಹೀಗೆ ಬೆಳೆದ ಬೆಳೆಯ ಮೇಲೆ ರೈತ ಸಂಪೂರ್ಣ ವಿಶ್ವಾಸವಿಟ್ಟು ಬದುಕಬಹುದೆಂದು ವಚನಕಾರರ ಅಭಿಪ್ರಾಯ.

ಇಡೀ ಒಂದು ವರ್ಷದ ತಯಾರಿ ರೈತ ಹೇಗೆ ಮಾಡಿಕೊಳ್ಳಬೇಕೆಂಬುದು ಹೀಗೆ ಹೇಳಿದ್ದಾನೆ. ಮುದ್ದಣ :

ಪೂರ್ವಕ್ಕೆ ತಾಳಾಗಿ ಉತ್ತರಕ್ಕೆ ತಲಹಾಗಿ ಬಿದ್ದ ಮರನತಂದು,
ನಿಬದ್ಧಿಯ ಕಾರುಕನ ಕೈಯಲ್ಲಿ ಸುಬದ್ಧಿಸಿ, ಶುದ್ಧೈಸಿ
ಅನಾದಿಯೆಂಬ ಹುಗಿಲುದೆಗೆದು,
ಆದಿಯೆಂಬ ಈ ಯವನಿಕ್ಕಿ,
ಇಷ್ಟವೆಂಬ ವಿಶ್ವಾಸದ ಮೇಳಿಯಂ ಬೆಟ್ಟಿ,
ಭಾವವೆಂಬ ಜಿಗುಳಿಯನಿಕ್ಕಿ,
ಸದ್ಭಾವವೆಂಬ ಗುಳುವ ತೋಡಿಸಿ,
ಸಚ್ಚಿಯೆಯೆಂಬ ಕಣ್ಣಿಲ್ಲಿ ನೇಗಿಲ ತೋಡಿಸಿ,
ಜ್ಞಾನಚಕ್ಷುವೆಂಬ ನೊಗದ ಉಭಯದ ಕೊನೆಯಲ್ಲಿ
ಎಡಗೋಲಿನಲ್ಲಿ ಕಾರಿಯ ಹೂಡಿ
ಬಲಗೋಲಿನಲ್ಲಿ ಬೆಳ್ಳಿಯ ಹೂಡಿ,.
ಅಡಿ ಕೆತ್ತುವಂತೆ ಧಾಯೆಂದು ಹೊಡೆಯಲಾಗಿ,
ಭೂಮಿಯೊಡಗೂಡಿ ಸವೆಯಿತ್ತು
ಬಿತ್ತವಟ್ಟಕ್ಕೆ ದಿಕ್ಕಿಲ್ಲ,
ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ.[೧೪೪]

ರೈತ ವರ್ಷದ ಮಧ್ಯದಲ್ಲಿ ತನ್ನ ಕೃಷಿ ಸಾಮಾನು ತಯಾರಿಸುವುದಕ್ಕೆ ಮರ ಕಡಿದಿಡುತ್ತಾನೆ. ಆ ಮರದಲ್ಲಿಯ ನೀರಿನಾಂಶವೆಲ್ಲ ಆರಿದಾಗ, ತನಗೆ ಬೇಕಾದ ಉಪಕರಣ ಮಾಡಿಕೊಳ್ಳಲು ಬಡಿಗತನ ಮಾಡುವವನಲ್ಲಿಗೆ ಕೊಂಡೊಯ್ದು, ಕೃಷಿಗೆ ಸಂಬಂಧಿಸಿದ ಉಪಕರಣಗಳನ್ನು ಬಡಿಗನಿಂದ ಮಾಡಿಸಿಕೊಳ್ಳುತ್ತಿದ್ದನು. ಈ ಕಾಯಕಕ್ಕೆ ೧೨ನೇ ಶತಮಾನದಲ್ಲಿ ಬಾಚಿ ಕಾಯಕವೆಂದೆ ಕರೆಯುತ್ತಿದ್ದರು. ಈ ಬಾಚಿಯಿಂದ ಮನೆಯ ಕೆಲಸ ಮಾಡುವಲ್ಲಿ ಉಪಯೋಗಿಸುವ ಸಾಧನ ಅದರಲ್ಲೂ ವಿಶೇಷವಾಗಿ ಕೃಷಿಗೆ ಸಮಬಂಧಿಸಿದ ಎಲ್ಲಾ ಉಪಕರಣಗಳ ತಯಾರಿಕೆಯಲ್ಲಿ ಉಳ್ಳಿ, ಬಾಚಿ, ಉಪಯೋಗಿಸುತ್ತಾರೆ. ಇವು ಕಂಬಾರಿಕೆ, ಮತ್ತು ಬಡಿಗತನದಲ್ಲಿ ಉಪಯೋಗಿಸುವ ಸಾಧನಗಳು. ಬಡಿಗ ಎತ್ತಿನ ಬಂಡಿ ಮಾಡಿದರೆ ಕುಂಬಾರ ಚಕ್ರಕ್ಕೆ ಕಬ್ಬಿಣದ ಪಟ್ಟಿ ಕೂಡಿಸುತ್ತಾನೆ.

---

[144] ಒಕ್ಕಲಿಗ ಮುದ್ದಣ್ಣನ ವಚನ ಸಂ. ೧೭೪೩ ಸ.ವ.ಸಂ.೬ ಪು. ೬೭೨

ಚನಕಾರರಿಗೆ ರೈತಾಪಿ ವರ್ಗದ ಬಗ್ಗೆ ಸಂಪೂರ್ಣ ಪರಿಚಯವಿದ್ದಂತಿದೆ. ತಾಳ ಅನ್ನುವದು ವಿಶೇಷವಾಗಿ ಕೂರ್ಗಿ ತಾಳ ಎಂದೆ ಹೆಸರು ಇದು ಜೋಳ ಕಡಲೆ ಬಿತ್ತಲು ಉಪಯೋಗಿಸುತ್ತಾರೆ. ಅನಾದಿ ಯೆಂಬ ಹುಗ್ಗಿಲಗೆರೆದು ಅಂದರೆ ಬೀಜ ಮಂಡೆಯಲ್ಲಿ ಹಾಕಿದರೆ ಅಳತೆ ಪ್ರಕಾರ ಬೀಜ (ಹುಗಿಲ) ರಂಧ್ರ) ದಿಂದ ಮಣ್ಣು ಸೇರುತ್ತವೆ.

ಹೀಗೆ ಬಿತ್ತಬೇಕಾದರೆ ನೊಗ ಹೂಡಬೇಕು. ಅದಕ್ಕೆರಡು ಎತ್ತು ಒಂದು ಕಾರಿ, ಇನ್ನೊಂದು ಬೆಳ್ಳಿ, ನಮ್ಮ ರೈತಮಗ ತನ್ನ ಮನೆಯ ಎಲ್ಲಾ ಪ್ರಾಣಿಗಳಿಗೆ ಹೆಸರುಗಳಿಟ್ಟಿರುತ್ತಾನೆ. ಆಯಾ ಪ್ರಾಣಿಗಳಿಗೆ ಇಟ್ಟ ಹೆಸರಿನಿಂದ ಅವಕ್ಕೆ ಕರೆದರೆ ಸಾಕು ಅವು ಆ ಕ್ಷಣಕ್ಕೆ ಮಾಲಿಕನ ಮಾತು ಕೇಳುತ್ತವೆ. ಧಾ ಎಂದರೆ ಸಾಕು ಇಡೀ ಹೊಲ ಬಿತ್ತುವದಾಗುವವರೆಗೆ ರೈತನ ಅನ್ನ ತಯಾರಿಸಲು ಶ್ರಮಿಸುತ್ತವೆ ಎಂದು ಮುದ್ದಣ್ಣ ಹೇಳುತ್ತಾನೆ.

ಇವತ್ತಿನ ತಾಂತ್ರಿಕ ಯುಗದಲ್ಲಿ ಟ್ರ್ಯಾಕ್ಟರ್ ನೇಗಿಲಿನಿಂದ ಹೊಲವೇನೋ ಊಳುತಿದ್ದಾರೆ. ಹೀಗೆ ನೇಗಿಲು ಹೊಡೆಯುವುದರಿಂದ ಸತ್ವಕಳೆದುಕೊಂಡ ಮಣ್ಣು ನೆಲದಾಳಕ್ಕೆ ಹೋಗುತ್ತದೆ. ನೆಲದಾಳವು ಫಲವತ್ತಾದ ಮಣ್ಣು ಮೇಲೆ ಬರುತ್ತದೆ. ಹೀಗೆ ಮಾಡುವುದರಿಂದ ಕೃಷಿಯಲ್ಲಿ ಹೆಚ್ಚಿನ ಇಳುವರಿ ಪಡೆಯುತ್ತಾರೆ.

ರೈತ ಪರಿಸರಕ್ಕೆ ಸಂಬಂಧಿಸಿದಂತೆ ಇನ್ನೊಂದು ವಚನ ನೋಡುವುದಾದರೆ ಇಡೀ ರೈತ ಪರಿಸರದ ಸಂಪೂರ್ಣ ಮಾಹಿತಿ ಒದಗಿಸಿಕೊಡುತ್ತದೆ.

ಭಕ್ತಿಯೆಂಬ ಪೃಥ್ವಿಯಲ್ಲಿ ಗುರೂಪದೇಶವೆಂಬ ನೇಗಿಲಂ ಪಿಡಿದು,
ಅಂತಃ ಕರಣ ಚತುಷ್ಟಯವೆಂಬ ಪಶುವಂಕಟ್ಟಿ
ಓಂಕಾರನಾದವೆಂಬ ಸೆಳೆಕೋಲಂ ಪಿಡಿದು,
ಉತ್ತರ ಕ್ರೀಯೆಂಬ ಸಾಲನೆತ್ತಿ
ದುಃಕರ್ಮವೆಂಬ ಕಂಟಕದ ಗುಲ್ಮವಂ ಕಡಿದು
ಅರುಹೆಂಬ ರವಿಯ ಕಿರಣದಿಂದ ಒಣಗಿಸಿ,
ಅವಂ ಕೂಡಲೊ, ಜ್ಞಾನಾ ಗ್ನಿಯೆಂಬ ಅಗ್ನಿಯಿಂದ ಸುಟ್ಟರುಹಿ
ಆ ಹೊಲನಂ ಹಸಮಾಡಿ, ಬಿತ್ತುವ ಪರಿ ಇನ್ನಾವುದಯ್ಯ ಎಂದಡೆ
ನಾದ, ಬಿಂದು, ಕಳೆ ಮಳೆಗಾಲದ ಹದಬೆದೆಯನರಿದು.
ಸ್ಥೂಲವೆಂಬ ದಿಂಡಿಗೆ ತ್ರಿದೇವರೆಂಬತಾಳ ಸಡು
ಇಡಾಪಿಂಗಳ ಸುಷುಮ್ನಾನಾಳವೆಂಬ ಕೋವಿಗಳ ಜೋಡಿಸಿ
ಮೇಲೆ ತ್ರಿಕೂಟನಸ್ಥಾನವೆಂಬ ಬಟ್ಟಲಂ ಬಲಿದು,

ಕುಂಡಲೀಸರ್ಪನೆಂಬ ಹಗ್ಗವ ಸೇದಿ ಕಟ್ಟಿ
ಹಂಸನೆಂಬ ಎತ್ತಂ ಹೂಡಿ
ಪ್ರಣವನೆಂಬ ಬೀಜವ ಪಶ್ಚಿಮ ಮುಖಕ್ಕೆ ಬಿತ್ತಿ,
ಸರ್ವಶಾಂತಿ ನಿರ್ಮಲವೆಂಬ ಮೇಘ ಸುರಿಯಲ್ಕೆ,
ನೀಲಬ್ರಹ್ಮವೆಂಬ ಸಸಿ ಹುಟ್ಟಿತ್ತ,
ಆ ಸಸಿಯ ಮುಟ್ಟುವ ಸಪ್ತವರ್ಣದ ಸದೆಯು ಕಳೆದು
ಅಷ್ಟವರ್ಣದ ಅಲಬಂ ಕಿತ್ತು, ದಶವಾಯುವೆಂಬ ಕಸಮಂ ತೆಗೆದು
ಆ ಸಸಿ ಪಸರಿಸಿ ಪ್ರಜ್ವಲಿಸಿ ಫಲಕ್ಕೆ ಬರಲಾಗಿ
ಚತುರ್ವಿದವೆಂಬ ಮುಂಚಿಕೆಯಂ ಮೆಟ್ಟಿ
ಬಾಲಚಂದ್ರನೆಂಬ ಕವಣೆಯಂ ಪಿಡಿದು
ಪ್ರಪಂಚವೆಂಬ ಕವಣೆಯಂ ಪಿಡಿದು
ಪ್ರಪಂಚವೆಂಬ ಹಕ್ಕಿಯಂ ಸೋವಿ
ಆ ಬತ್ತ ಬಲಿದು ನಿಂದಿರಲು
ಕೊಯ್ದುಂಬ ಪರಿ ಇನ್ನಾವುದಯ್ಯಾ ಎಂದಡೆ
ಇಷ್ಟವೆಂಬ ಕುಡುಗೋಲಿಗೆ ಪ್ರಣವವೆಂಬ ಹಿಡಿಯಂ ತೊಡಿಸಿ
ಭಾವವೆಂಬ ಹಸ್ತದಿಂ ಪಡಿದು, ಜನನದ ನಿಲವಂ ಕೊಯ್ದು,
ಮರಣದ ಸಿವುಡ ಕಟ್ಟಿ, ಆಕಾಶವೆಂಬ ಬಣವೆಯನೊಟ್ಟಿ
ಉನ್ಮನಿಯೆಂಬ ತೆನೆಯನ್ನರಿದು, ಮನೋರಥವೆಂಬ ಬಂಡಿಯಲಿ ಹೇರಿ,
ಮುಕ್ತಿಯೆಂಬ ಕೋಟಾರಕ್ಕೆ ತಂದು,
ಅಷ್ಟಾಂಗಯೋಗವೆಂಬ ಜೀವಧನದಿಂದೊಕ್ಕಿ,
ತಾಪತ್ರಯದ ಮೆಟ್ಟನೆರಿ, ಪಾಪದ ಹೊಟ್ಟ ತೂರಿ,
ಪುಣ್ಯದ ಬೀಜಮಂ (ತ) ಳೆದು
ಷಡುವರ್ಗ ಷಡೂರ್ಮೆಯೆಂಬ ಬೇಗಾರಮಂ ಕಲೆದು
ಅಂಗಜಾಲನ ಕಣ್ಣ (ಮು)ಚ್ಚಿ, ಚಿತ್ರಗುಪ್ತರೆಂಬ ಕರಕಣಿಕರ ಸಂಪುಟಕ್ಕೆ ಬರಿಸದೆ
ಯಮರಾಜನೆಂಬರಸಿಗೆ ಕೋರನಿಕ್ಕದೆ
ಸುಖ ಶಂಕರೋತಿ ಶಂಕರೊತ್ತಿ ಎಂಬ ಸಯಿದಾನವ ನುಂಡು
ಸುಖಿಯಾಗಿಪ್ಪ ಒಕ್ಕಲಮಗನ ತೋರಿ ಬದುಕಿಸಯ್ಯಾ
ಕಾಮ ಭೀಮ ಜೀವ ಧನದೊಡೆಯ ಪ್ರಭುವೆ
ನಿಮ್ಮ ಧರ್ಮ, ನಿಮ್ಮ ಧರ್ಮ[೧೪೫]

ಹಿಂದಿನ ಅಧ್ಯಾಯಗಳಲ್ಲಿ ಹೇಳಿದಂತೆ ಪಂಚಭೂತಗಳನ್ನೆಷ್ಟೆ ಅಲ್ಲ ಇಡೀ ನಿಸರ್ಗವೇ ವಚನಕಾರರು ಭಕ್ತ ಲಿಂಗವೆಂದು ಕರೆದಿದ್ದಾರೆ. ಭಕ್ತಿ ಎಂದು ಭೂಮಿಯನ್ನು ಕರೆಯಲು ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ಈ ಭೂಮಿ ಉಳ್ಳಬೇಕಾದರೆ ಚತುರ್ಥಿಯವೆಂಬ ಎತ್ತುಗಳ ಹೂಡಿ ಕೆಲಸಾರಿ ಎತ್ತುಗಳು ರೈತನ ಮಾತು ಕೇಳದೆ ಹೋದರೆ, ಅವುಗಳನ್ನು ನಿಗ್ರಹಿಸಲು ಬಾರಕೋಲು ಕೈಯಲ್ಲಿರಲೇಬೇಕೆನ್ನುತ್ತದೆ. ಹೀಗೆ ನೇಗಿಲು ಹೊಡೆದು ಸೂರ್ಯನ ಕಿರಣಗಳಿಂದ ಸುಟ್ಟ

[145] ಒಕ್ಕಲಿಗ ಮುದ್ದಣ್ಣನ ವಚನ ಸಂ. ೧೭೪೫ ಸಮಗ್ರ ವ.ಸಂ.೬ ಪು.೬೭೩

ಭೂಮಿಯನ್ನೇ ಉಳುಮೆ ಮಾಡಿ ಮಳೆ ಬಂದ ಮೇಲೆ ಹೆಂಟೆಯಲ್ಲಿ ಕರಗಿ ಮಣ್ಣು ಹದವಾದ ಮೇಲೆ ಬೀಜಬಿತ್ತಿದರೆ. ಬೀಜ ಮೊಳೆಯುತ್ತದೆ. ಹೀಗೆ ಸಸಿ ಬೆಳೆದಂತೆ, ಅದಕ್ಕೆ ಮತ್ತು ಕಳೆ-ಕಸ ತೆಗೆದು ಒಂದು ಸಾರಿ ನಿಂತು ನೋಡಿದರೆ ಹೊಲವೆಲ್ಲ ಹಸಿರು ಬೆಳೆ ನಳನಳಿಸಿ ರೈತಮಗನ ಮುಖ ಸಂತೋಷಿಂದ ತುಂಬಿ ತುಳುಕುತ್ತದೆ.

ಹೀಗೆ ಬಿತ್ತಿ ಬೆಳೆದ ಫಸಲು ಕಾಳು ತುಂಬಿದ ಮೇಲೆ ರೈತನ ಹೊಲವೆಲ್ಲ ಹಕ್ಕಿಗಳೆ ಹಕ್ಕಿಗಳು ಹೀಗೆ ಒಣಗಿದ ಬೆಳೆಗೆ ಕಟಾವು ಮಾಡಲು ಮತ್ತೆ ರೈತ ಕಂಬಾರನ ಮನೆಗೆ ಹೋಗಿ ಕುಡುಗೋಲಿಗೆ ಕಟ್ಟಿಗೆಯಹಿಡಿಯನ್ನು ತೊಡಿಸಿ ಭಾವೆಂಬ ಅಂದರೆ ನಿಸ್ವಾರ್ಥದಿಂದ ಬೆಳೆ ಕೊಯ್ಯಬೇಕೆಂದು ಹೇಳುತ್ತಾನೆ. ಈ ಮಧ್ಯೆ ಜನನದ ನಿಲುವಂ ಕೊಯ್ದು, ಅಂದರೆ ಒಂದು ಮಗು ಜನಿಸಿದಾಗ ಅದರ ಹೊಕ್ಕಳು ಬಳ್ಳಿ ತಾಯಿಯ ಗರ್ಭದಿಂದ ಬೇರ್ಪಡಿಸುತ್ತಾರಲ್ಲ. ಆದ್ದರಿಂದ ವಚನಕಾರ ಜನನ ಮರಣದ ನಿಲುವಂ ಎಂದು ಕರೆದಿದ್ದಾರೆ. ಹೀಗೆ ಬೇರ್ಪಡಿಸಿದ ನಂತರ ಸೂಡು ಕಟ್ಟಿ ಅಗಸದೆತ್ತಕ್ಕೆ ಬಣವೆಯನ್ನೊಟಿ ಕಣಬಳಿದು ಸಗಣಿ ನೀರಿನಿಂದ ಕಣತೊಯ್ಸಿ ಗೂಡು ಮುರಿದು ಹಂತಿ ಹೊಡೆದು ತೂರಿದರೆ ಧಾನ್ಯ ಕೈಯಲ್ಲಿ.

ಇಲ್ಲಿ ಅಷ್ಟಾಂಗ ಯೊಗ, ಎಂದು ಬಳಸಿದ್ದಾರೆ. ಅಂದರೆ ನಮ್ಮಲ್ಲೊಂದು ಮಾತಿದೆ. "ದನದಾಗ ದನ ಆಗಿ ದುಡ್ಡು ದೇವರಂಥ ಧ್ಯಾನ ಕೃಷಿಯಲ್ಲಿ ಇಡೀ ರೈತನ ಕುಟುಂಬವೇ ದುಡಿದ ಫಲವಾಗಿರುತ್ತದೆ. ಇಷ್ಟಕ್ಕೆ ಬಿಡದ ವಚನಕಾರ ಪಾಪದ ಹೊಟ್ಟೆ ತೂರಿ ನಮ್ಮಲ್ಲಿ ಇದಕ್ಕೆ ಮಳಹಂಥಿ ಅಂದರೆ ಧಾನ್ಯ ತೂರುವಾಗ ಗಾಳಿಯ ವೇಗಕ್ಕೆ ಧಾನ್ಯ ಹೊಟ್ಟಿನಲ್ಲಿ ಹೋಗಿರುತ್ತವೆ. ಆದ್ದರಿಂದ, ಈ ಹೊಟ್ಟು ಇನ್ನೊಮ್ಮೆ ತೂರುತ್ತಾರೆ. ಹೀಗೆ ತೂರಿ ತಂದ ಧಾನ್ಯ ಪುಣ್ಯದ ಬೀಜವಾಗುತ್ತದೆ. ಇಲ್ಲಿ ವಚನಕಾರರು ಇನ್ನೊಂದು ಪದ ಬಳಸಿದ್ದಾನೆ. ಕರಣಿಕರ ಸಂಪುಟಕ್ಕೆ ಬರಿಸದ, ರೈತ ಹೀಗೆ ಬೆಳೆದ ಧಾನ್ಯ ಕೇವಲ ರೈತಮಗನೊಬ್ಬನಿಗಾಗಿ ಅಲ್ಲ ಇಡೀ ವಿಶ್ವ ಸಮುದಾಯಕ್ಕೆ ಎಲ್ಲರ ಹಸಿವನೀಗಲು ಒಕ್ಕಲಿಗ ಮುದ್ದಣ್ಣ ಹೇಳಿದ್ದಾರೆ. ಇವತ್ತಿನ ದಿನಗಳಲಿ ಅಂತರ್ಜಲದ ಬಗ್ಗೆ ಅಲಲ್ಲಿ ಮಾತುಗಳು ಕೇಳಿಬರುತ್ತಿವೆ. ಆದರೆ ೧೨ನೇ ಶತಮಾನದಲ್ಲಿಯೇ ಅಂತರ್ಜಲದ ಬಗ್ಗೆ ಮಾತಾಡಿದ್ದು ಈ ಕೆಳಗಿನಂತೆ ನೋಡಬಹುದಾಗಿದೆ.

ಪೈರಿಗೆ ನೀರು ಬೇಕೆಂಬಲ್ಲಿ ಉಚಿತವನರಿದು ಬಿಡಬೇಕು.
ಕ್ರೀಗೆ ಅರಿವು ಬೇಕೆಂಬಲ್ಲಿ ಉಬಯನರಿದು ಘಟಿಸಬೇಕು
ಏರಿ ಹಿಡಿವನ್ನಕ್ಕ ನೀರ ಹಿಡಿದಡೆ ಸುಖವಲ್ಲದೆ ಮಿರಿದರುಂಟೆ
ಕ್ರೀಯೆ ಬಿಡಲಿಲ್ಲ, ಅರಿವ ಮರೆಯಲಿಲ್ಲ ಬೆಳೆಯ ಕೊಯಿದ ಮತ್ತೆ ಹೊಲಕ್ಕೆ ಕಾವಲುಂಟೆ?[೧೪೬]

ನಮ್ಮಲ್ಲಿ ಕೆಲ ರೈತರು ಎಡೆಬಿಡದೆ ಬೆಳೆಗೆ ನೀರು ಹಾಯಿಸುತ್ತಾರೆ. ಹೀಗೆ ಎಡೆಬಿಡದೆ ಬೆಳೆಗೆ ನೀರು ಹಾಯಿಸದಿದ್ದರೆ. ಭೂಮಿಯ ಫಲವಂತಿಕೆ ಕಡಿಮೆಯಾಗುತ್ತದೆ. ಆದ್ದರಿಂದ ಬೆಳೆಗೆ ನೀರಿನ ಅವಶ್ಯಕತೆ ಎಷ್ಟಿದೆಯೋ ಅಷ್ಟೆ ಮತ್ತೆ ನೀರು ಹಾಯಿಸಬೇಕು. ಮಾನ್ಸೂನ ಶುರುವಾದಾಗ ಬಿದ್ದ ಮಳೆ ನೀರು ಭೂಮಿ ಆಳಕ್ಕೆ ಸೇರುತ್ತದೆ. ಹೀಗೆ ಇಳಿದ ನೀರು ಅಂತರ್ಜಲವಾಗುತ್ತದೆ. ಶರದ್ ಋತು, ಜನ ಜಾನುವಾರ, ಮರ ಗಿಡಗಳ ಪಾಲಿಗಂತೂ ಸಂಕಷ್ಟದ ದಿನಗಳು ಈ ಸಂದರ್ಭದಲ್ಲಿ ಬಿಸಿಲಿನ ಪ್ರಖರತೆ ಹೆಚ್ಚಾಗುತ್ತದೆ. ಇಂತಹ ಸಂದರ್ಭದಲ್ಲಿ ಸಸ್ಯಗಳು ಭೂಮಿ ಮೇಲ್ಪದರದಲ್ಲಿರುವ ಬಹುತೇಕ ಪೋಷಕಾಂಶಗಳು ಹೀರಿಕೊಳ್ಳುತ್ತವೆ. ಹೀಗೆ ಹೀರಿಕೊಂಡ ಮಣ್ಣು ಮತ್ತು ತೇವಾಂಶ ಮತ್ತೆ ಆವರಣದಲ್ಲಿ ಆವಿಯಾಗುತ್ತದೆ. ಹೀಗಾದಾಗ ಪುನಃ ವಾತಾವರಣ ತಂಪಾಗುತ್ತದೆ. ಭೂಮಿ ಆಳಕ್ಕೆ ಹೋದಂತೆಲ್ಲ ಸಸ್ಯಕ್ಕೆ ಬೇಕಾದ ಪೋಷಕಾಂಶಗಳು ಹೆಚ್ಚಾಗುತ್ತಾ ಹೋಗುತ್ತದೆ. ಮತ್ತೆ ಬೇಸಿಗೆಯಲ್ಲಿ ದನಗಳ ಗೊರಸುಗಳಿಗೆ ಹತ್ತಿದ ಸಗಣಿ ಗಂಜಲ (ಗ್ವಾತ) ಹೊಲ ಸೇರುತ್ತದೆ. ಮತ್ತೆ ಮಳೆಗಾಲದಲ್ಲಿ ಭೂಮಿ ಫಲವತ್ತಾಗುತ್ತದೆ.

ಆದರೆ ಇವತ್ತಿನ ರಾಸಾಯನಿಕಗಳ ಬಳಕೆಯಿಂದ ಅಂತರ್ಜಲ ಕೂಡ ವಿಷಪೂರಿತವಾಗುತ್ತಿದೆ. ಭೂಮಿ ತೇವಾಂಶ ಕಡಿಮೆಯಾಗುತ್ತಿದೆ. ಮತ್ತೆ ಇವತ್ತಿನ ಸಂದಿಗ್ದ ಪರಿಸ್ಥಿತಿಯಲ್ಲಿ ಪಾರಂಪರಿಕ ಕೃಷಿ ಪರಿಸರಕ್ಕೆ ರೈತ ಪುನಃ ತಿರುಗಬೇಕಾಗಿದೆ. ಇಲ್ಲದೆ ಹೋದರೆ ಘೋರ ದಿನಗಳು ಎದುರಿಸಬೇಕಾಗಿತೆಂದು ಮುದ್ದಣ್ಣನ ಅಭಿಪ್ರಯಾಯ ಮತ್ತು ಇವತ್ತಿನ ಕೃಷಿ ವಿಜ್ಞಾನಿಗಳ ಅಭಿಪ್ರಾಯವೂ ಅದೇ ಆಗಿದೆ.

[146] ಒಕ್ಕಲಿಗ ಮುದ್ದಣ್ಣನ ವಚನ ಸಂ. ೧೭೪೪ ಸ.ವ.ಸಂ. ೬ ಪು. ೬೭೨

ರೈತ ತನ್ನ ಭೂಮಿಯನ್ನೇ ನಂಬಿ ಬದುಕಿದ್ದಾನೆ. ಅದಿಲ್ಲದೆ ಹೋದರೆ ಅವನಿಗೆ ಇನ್ನೊಂದು ಕೆಲಸ ಗೊತ್ತೆ ಇಲ್ಲ. ಅದಕ್ಕಾಗಿಯೇ ಆತ ತನ್ನ ಬಗ್ಗೆ ಹೀಗೆ ಹೇಳಿಕೊಂಡಂತೆ ಕೆಳಗಿನ ವಚನವೊಂದು ಹೀಗೆ ನೋಡಬಹುದು.

ವೇದಶಾಸ್ತ್ರವನ್ನೊವುದುಕ್ಕೆ ಹಾರುವನಲ್ಲ
ಇರಿದು ಮೆರೆವುದಕ್ಕೆ ಕ್ಷತ್ರಿಯನಲ್ಲ.
ವ್ಯವಹರಿಸುವುದಕ್ಕೆ ವೈಶ್ಯನಲ್ಲ,
ಉಳುವ ಒಕ್ಕಲುಮಗ ತಪ್ಪ ನೋಡದೆ ಒಪ್ಪಗೊಳ್ಳಯ್ಯಾ
ಕಾಮ ಭೀಮ ಜೀವದಾನ ನೊಡೆಯ ನೀನೆ ಬಲ್ಲೆ.[೧೪೭]

ಈ ವಚನ ನೋಡುವದಾದರೆ ಎಲ್ಲರೂ ಎಲ್ಲ ಕೆಲಸಗಳು ಮಾಡಬಹುದು ಏಕೆಂದರೆ ಬ್ರಾಹ್ಮಣ ನಾಲ್ಕು ಮನೆಗೆ ಹೋಗಿ ವೇದಗಳನ್ನೋಂದಿದರೆ ಹೊಟ್ಟೆ ತುಂಬುತ್ತದೆ. ಯಾವುದೇ ಅರಸನ ಸೈನ್ಯಕ್ಕೆ ಸೇರಿದರೆ ಇವತ್ತಿನ ಉದ್ಯೋಗವಾದ ಪೋಲಿಸ್, ಮಿಲಿಟರಿ, ಆತನಿಗೂ ಆಹಾರ ಸಿಗುತ್ತದೆ. ವೈಶ್ಯ ವ್ಯಾಪಾರ ಮಾಡಿದರೆ ಅವನಿಗೂ ಎರಡರಷ್ಟು ಲಾಭವಿದೆ. ಆದರೆ ಭೂಮಿಯನ್ನು ಮಳೆಯನ್ನು ನಂಬಿ ಬದುಕುವ ರೈತನು ನಿಸ್ವಾರ್ಥಿ, ಕಷ್ಟ ಸಹಿಷ್ಣು ಜೀವ, ಈತ ಬಿತ್ತಿದರೆ, ಸಕಾಲಕ್ಕೆ ಮಳೆ ಬಂದರೆ ಮಾತ್ರ ಹಸಿದ ಹೊಟ್ಟೆಗಳಿಗೆ ಆಹಾರ. ಈ ಮೇಲಿನ ಎಲ್ಲರೂ ಎಷ್ಟೆ ಅನುಭವಿಸಿದರೂ ಕೂಡ ಅನ್ನವಿಲ್ಲದ ಮೇಲೆ ಇನ್ನಾವ ಸುಖ? 'ಅನಂ ಬ್ರಹ್ಮೆತ್ತಿಹಿ' ಎಂದು ಬದುಕಿದ ರೈತ ಪ್ರಾಚೀನ ಕಾಲದಿಂದಲೂ ಆತ ಕೃಷಿಯನ್ನೇ ನಂಬಿ ಬದುಕಿದ್ದಾನೆ.

ನಮ್ಮ 'ಕೃಷಿ ಪರಿಸರದಲ್ಲಿ' ಇವತ್ತಿಗೂ ಕೂಡ ಬೀಜಗಳು ಸಂಸ್ಕರಿಸಬೇಕಾದರೆ ಬಿದಿರು, ಲೆಕ್ಕಿ, ಸಿಂಧಿ, ಇವುಗಳಲ್ಲಿ ಯಾವುದಾದರೂ ಬುಟ್ಟಿಗಳು (ಗುಮ್ಮಿ) ಇವಕ್ಕೆ ಸಗಣಿ ಗ್ವಾತದಿಂದ ಸಾರಿಸಿ, ಚೆನ್ನಾಗಿ ಒಣಗಿಸಿ, ಮನೆಯ ಒಲೆಗೆ ಊರಿಸಿದ ಕುಳ್ಳು ಬೂದಿಯನ್ನು ಚೆನ್ನಾಗಿ ಸೋಸಿ ಒಂದು ಪದರ ಬೂದಿ, ಇನ್ನೊಂದು ಪದರ ಬೀಜ ಹಾಕಿ ಸಂಸ್ಕರಿಸುತ್ತಾರೆ. ಹೀಗೆ ಸಂಸ್ಕರಿಸಿದ ಬೀಜ ಬಿತ್ತುವಾಗ ಹೊರತೆಗೆಯುತ್ತಾರೆ. ಹೊರ ತೆಗೆದ ಬೀಜ ಮತ್ತು ಗ್ವಾತದಲ್ಲಿ ಬೀಜವೆಲ್ಲ ನೆನೆಸಿ ಬಿತ್ತುತ್ತಾರೆ ಚೆನ್ನಾಗಿ ಮೊಳಕೆಯೊಡೆಯುತ್ತವೆ. ಇದನ್ನೇ ನಂಬಿದ ರೈತರ ಕುರಿತು ಮುದ್ದಣ ಈ ಮೇಲಿನ ವಚನ ಹೇಳಿದ್ದು ಕಂಡುಬರುತ್ತದೆ.

---

147 ಬಸವಣ್ಣನವರ ವಚನ ಸಂ.೧ ಸಂ. ಎಮ್.ಎಮ್.ಕಲಬುರ್ಗಿ.

ಕೃಷಿ ಪರಿಸರದಲ್ಲಿ ಪ್ರತಿಯೊಂದು ಹುಳುಗಳನ್ನು ತಿಂದು ಬದುಕುವ ಪ್ರಾಣಿ, ಹುಳು, ಪಕ್ಷಿಗಳು, ಇವೆಲ್ಲ ರೈತನ ಮಿತ್ರರೇ ಆಗಿವೆ. ಇವತ್ತಿನ ರೈತರು ಬಳಸುತ್ತಿರುವ ಕ್ರಿಮಿ ನಾಶಕ, ಕಳೆನಾಶಕಗಳಿಗೆ ಸಿಂಪಡಿಸಿದ ಔಷಧಿಗಳಿಂದ ಭೂಮಿಯಲ್ಲಿರುವ ಅದೆಷ್ಟೋ ಹುಳುಗಳು ಹೇಳ ಹೆಸರಿಲ್ಲದೆ ಸಾಯುತ್ತಿವೆ. ಹೀಗೆ ಕೃಷಿಗೆ ಸಹಾಯವಾದ ಹುಳುಗಳು ಸತ್ತಾಗ ಸಸ್ಯಕ್ಕೆ ತಗಲುವ ಕೀಟಗಳ ಸಂಖ್ಯೆ ತಾನೇ ತಾನಾಗಿ ಹೆಚ್ಚಾಗುತ್ತವೆ. ಹೀಗಾದಾಗ ಕೃಷಿ ಕ್ಷೇತ್ರಕ್ಕೆ ಹೊಡೆತಬೀಳುತ್ತದೆ.

ಕೃಷಿ ಪರಿಸರವನ್ನು ಉಳಿಸಿಕೊಳ್ಳಬೇಕಾದರೆ, ಕೃಷಿ ಕ್ಷೇತ್ರದಲ್ಲಿ ಸಂಪೂರ್ಣವಾಗಿ ಗಿಡಮೂಲಿಕೆಯ ಕೀಟನಾಶಕಗಳನ್ನೇ ಬಳಸಬೇಕಿದೆ. ಈ ಕುರಿತು ಕೃಷಿ ಕೇಂದ್ರದವರು ಕೂಡ ಪ್ರಚಾರ ಮಾಡುತ್ತಿದ್ದಾರೆ. ಮತ್ತು ರೈತರೆ ಸ್ವತಃ ಈ ನಿಟ್ಟಿನಲ್ಲಿ ಪ್ರಯೋಗಿಸುತ್ತಿದ್ದಾರೆ. ಬೇವಿನ ಬೀಜ ಎಲೆ, ಇಲ್ಲವೆ ಎಣ್ಣೆ ಅಲಲ್ಲಿ ಕೀಟನಾಶಕವಾಗಿ ಬಳಸುತ್ತಿದ್ದಾರೆ.

ಪಟ್ಟಣ ಪ್ರದೇಶಕ್ಕೆ ಹೊಂದಿಕೊಂಡ ಕೆಲ ಹಳ್ಳಿಗರು ಹೆಸರು, ಉದ್ದು, ತರಕಾರಿಗಳು ಹಾಕುತ್ತಾರೆ. ಇಲ್ಲಿ ತಮಗೆ ಎಷ್ಟು ಆದಾಯ ಬಂದಿದೆ ಅನ್ನುವದಕ್ಕಿಂತಲೂ ಹೆಚ್ಚಾಗಿ ಆಯಾ ಬಳ್ಳಿಯಿಂದ ಉದುರಿದ ಎಲೆ ಗಿಡದ ದಂಡು ಸಾವಯವ ಗೊಬ್ಬರವಾಗುತ್ತದೆ ಎಂಬ ಉದ್ದೇಶದ ಜೊತೆಗೆ ಇಂತಹ ಭೂಮಿಯಲ್ಲಿ ಬೆಳೆದ ಬೆಳೆ ಒಳ್ಳೆ ಬೀಜ ತುಂಬಿಕೊಳ್ಳುತ್ತದೆ.

ಇಂದಿನ ದಿನಗಳಲ್ಲಿ ಕೀಟನಾಶಕಕ್ಕೆ ರಾಸಾಯನಿಕಗಳನ್ನೇ ಅತಿ ಹೆಚ್ಚಾಗಿ ಬಳಸುತ್ತಿದ್ದಾರೆ. ಆದರೆ ಈ ಪೀಡೆನಾಶಕ ಸರ್ವನಾಶವಾಗಿ ಪರಿಣಾಮ ಬೀರುತ್ತದೆ.

ಕೃಷಿ ಉತ್ಪನ್ನಗಳು ಹೆಚ್ಚಿಸಲೆಂದು ಅದೆಷ್ಟೋ ಬಗೆಯ ಪೀಡೆನಾಶಕ ಕೀಟನಾಶಕ ಮಾರುಕಟ್ಟೆಗೆ ಬಂದಿವೆ. ಆದರೆ ಈ ಕೀಟನಾಶಕಗಳು ಸಿಂಪರಿಸಿದ ಹೊಸದರಲ್ಲಿ ಕೆಲವಷ್ಟು ಕೀಟಗಳು ಸತ್ತವು ಕೆಲವು ಬದುಕಿದವು. ಕ್ರಮೇಣ ಈ ಕೀಟಗಳುಕೂಡ ವಿಷ ಸೇವಿಸಿ ಬದುಕುತ್ತಿವೆ. ಎಂದ ಮೇಲೆ ಇಡೀ ಜೀವ ಜಾಲದಲ್ಲಿ ರೈತನು ಸಿಂಪರಿಸಿದ ವಿಷ ಸ್ವಲ್ಪ ಸ್ವಲ್ಪವಾಗಿಯೂ ಎಲ್ಲರ ದೇಹ ಹೊಕ್ಕುಬಿಟ್ಟಿದೆ.

ಇದನ್ನು ಗಮನಿಸಿದ ಅದೆಷ್ಟೋ ಕಂಪನಿಗಳು ಇನ್ನಷ್ಟು ಶಕ್ತಿಶಾಲಿ ಕೀಟನಾಶಕ ತಯಾರು ಮಾಡಿ ಮಾರುಕಟ್ಟೆಗೆ ಬಿಟ್ಟರು. ಹೀಗೆ ಬಿಟ ಕೀಟನಾಶಕದಿಂದ ಕೀಟಗಳಷ್ಟೇ ಅಲ್ಲ ಅದೆಷ್ಟೋ ಪ್ರಾಣಿ ಪಕ್ಷಿಗಳೂ ಅಸುನೀಗಿದವು. ನಾವು ದಿನನಿತ್ಯ ಬಳಸುವ ತರಕಾರಿ, ಹಣ್ಣು-ಹಂಪಲು, ಮೀನು ಹಾಲು ಅಷ್ಟೇ ಅಲ್ಲ ಹಾಲುಣಿಸುವ ತಾಯಿ ಮೊಲೆಯಾಲ್ಲೂ ವಿಷ.

ಪುನಃ ಕೃಷಿ ಪರಿಸರದಲ್ಲಿ ಪ್ರತಿಪ್ರಾಣಿ ಪಕ್ಷಿಗಳನ್ನು ರೈತ ಸಾಕಬೇಕಾಗಿದೆ. ಕೃಷಿ ಕ್ಷೇತ್ರದಲ್ಲಿ ದನಗಳೊಂದಿಗೆ ಕುರಿಗಳನ್ನು ಸಾಕಬೇಕಿದೆ. ದನಗಳ ಸಗಣಿ ಗಂಜಳ ಕುರಿಗಳ ಹಿಕ್ಕೆ ಮೂತ್ರ, ಇವು ಹೊಲದ ಫಲವತ್ತೆಯ ಹೆಚ್ಚಿಸುವಲ್ಲಿ ಸಹಕಾರಿಯಾಗಿ ಇವುಗಳೊಂದಿಗೆ ಕೋಳಿ ಸಾಕಾಣಿಕೆ, ದನಗಳಿಗೆ, ಎತ್ತುಗಳಿಗೆ ಕೆಲಸಾರಿ ಉಣ್ಣಿ (ದನಗಳ ಹೇನು) ಮೆತ್ತಿಕೊಳ್ಳುತ್ತವೆ. ಇಂಥ ಸಂಧರ್ಭದಲ್ಲಿ ಕೋಳಿಗಳ ಆಹಾರ ಧಾನ್ಯ ಮತ್ತು ಕೀಟಗಳೇ ಇದರಿಂದ ರೈತರ ಕೊಟ್ಟಿಗೆ ಸ್ವಚ್ಛವಾಗಿಡುವುದು ಕೋಳಿಗಳ ಕೆಲಸ ಹೊಲದ ಫಲವತ್ತತೆ ಕುರಿಗಳ ಕೆಲಸ, ಅಂತರ್ಜಲ ಹೆಚ್ಚಿಸುವದು ಮರ ಗಿಡಗಳ ಕೆಲಸ, ಹೀಗಾದಾಗ, ರೈತ ಸ್ವಚ್ಛ ಸುಂದರ ಕೃಷಿ ಪರಿಸರವನ್ನು ತನ್ನದಾಗಿಸಿಕೊಳ್ಳಬೇಕು.

ಇಂದು ಗ್ರಾಮೀಣ ಮಹಿಳೆಯರು ಕೂಡ ಹೊಗೆ ರಹಿತ ಅಡುಗೆಮನೆಯನ್ನು ಇಷ್ಟಪಡುತ್ತಾರೆ. ಇದಕ್ಕೂ ಕೂಡ ಬಹಳ ಸರಳವಾದ ಉಪಾಯ. ದನಗಳ ಸಗಣಿ ಗೊಬ್ಬರ ಗ್ಯಾಸ ತಯಾರಿಕೆಯಲ್ಲಿ ಬಳಸುವುದು. ಹೊಲದಲ್ಲಿ ಬೆಳೆದ ತೊಗರಿ ಕಟ್ಟಿಗೆ ಹೊಟ್ಟು, ಇವುಗಳಿಂದ ಹೊಲದ ಅಲ್ಲಲ್ಲಿ ತೆಗ್ಗು ತೋಡಿ ಕಟ್ಟಿಗೆ, ಹೊಟ್ಟು ಸಗಣಿ, ಇವುಗಳು ಹಾಕಿ ಮೇಲೆ ಮಣ್ಣು ಮುಚ್ಚಿ ಒಂದು ಮಳೆಗಾಲ ಬಿಡಬೇಕಷ್ಟೆ ಹೀಗೆ ಬಿಟ್ಟ ಮೇಲೆ ಇಡೀ ತಮ್ಮ ಹೊಲಕ್ಕಾಗುವಷ್ಟು ಸಾವಯವ ಗೊಬ್ಬರ ತಯಾರಾಗುತ್ತದೆ. ಇದರೊಂದಿಗೆ ಹೊಗೆ ರಹಿತ ಅಡುಗೆ ಮನೆ, ರಾಸಾಯನಿಕ ರಹಿತ ಬೆಳೆ, ಆರೋಗ್ಯವಂತ ರಾಷ್ಟ್ರ ನಿರ್ಮಾಣವಾಗುವಲ್ಲಿ ಯಾವುದೇ ಸಂದೇಹವಿಲ್ಲ.

ಕೃಷಿ ಪರಿಸರಕ್ಕೆ ಸಂಬಂಧಿಸಿದಂತೆ ಅಲ್ಲಮನ ವಚನವೊಂದು ಹೀಗೆ ಹೇಳುತ್ತದೆ.

ಬೆವಸಾಯವ ಮಾಡಿ ಮನೆಯ ಬೀಯಕ್ಕೆ ಬತ್ತವಿಲ್ಲದಿರ್ದಡೆ,
ಆ ಬೇವಸಾಯದ ಘೋರವೇತಕಯ್ಯಾ?
ಕ್ರಯವಿಕ್ರಯವ ಮಾಡಿ ಮನೆಯ ಸಂಚನಡೆಯದನ್ನಕ್ಕ
ಅಕ್ರಯ ವಿಕ್ರಯದ ಘೋರವೆತಕಯ್ಯಾ?
ಒಡೆಯನನ್ನೋಲೈಸಿ ತನುವಿಂಗೆ ಅಷ್ಟಭೋಗವ ಪಡೆಯದಿರ್ದಡೆ
ಆ ಓಲಗದ ಘೋರವೇತಕಯ್ಯಾ?
ಭಕ್ತನಾಗಿ ಭವಂ ನಾಸ್ತಿಯಾಗದಿರ್ದಡೆ,
ಆ ಉಪದೇಶವ ಕೊಟ್ಟ ಗುರು, ಕೊಂಡಶಿಷ್ಯ,
ಇವರಿಬ್ಬರ ಮನೆಯಲ್ಲಿ ಮಾರಿಹೋಗಲಿ,
ಗುಹೇಶ್ವರನೆಂಬವನತ್ತಲೆ ಹೋಗಲಿ[೧೪೮]

[148] ಅಲ್ಲಮ ಪ್ರಭುದೇವರ ವಚನ ಸಂ.-೨ ಸಂ.ಡಾ.ಬಿ.ವ್ಹಿ.ಮಲ್ಲಾಪೂರ, ವಚನ ಸಂ.೬೫, ಪು.ಸಂ.೨೩

ಕೃಷಿ ಪರಿಸರ ಕುರಿತ ಅಲ್ಲಮನು ಹೀಗೆ ಚಿಂತಿಸಲು ಕಾರಣ ರೈತನು ಕಷ್ಟಪಟ್ಟು ವ್ಯವಸಾಯವ ಮಾಡುವುದು ತನಗಾಗಿ ತನ್ನ ಕುಟುಂಬಕ್ಕಾಗಿ ಮೊದಲು ತನ್ನ ಹಸಿವು ನೀಗಿದ ಮೇಲೆ ಇನ್ನೊಬ್ಬರಿಗೆ ಮಾರಾಟ ಮಾಡುವ ವಿಷಯ. ಆದರೆ ಇವತ್ತಿನ ರೈತನ ಪರಿಸ್ಥಿತಿ ಆತನೆ ದುಡಿದ ಬೆಳೆದ ಧಾನ್ಯ ಆತನ ಕೈಗೆ ನಿಲುಕುತ್ತಿಲ್ಲ. ಕಾರಣ ಈತನು ಬೆಳೆದ ಧಾನ್ಯಗಳ ಮಾರಾಟದಲ್ಲಿ ಮಧ್ಯವರ್ತಿಗಳ ಪ್ರವೇಶ. ಹೀಗಾದಾಗ ರೈತನ ಸ್ಥಿತಿ ದುಸ್ತರವಾಗುತ್ತದೆ. ಅಂದರೆ ಜಾಗತೀಕ ಉದಾರೀಕರಣ ಚಿಂತನೆಯಿಂದ ವ್ಯವಸಾಯ ಕೂಡ ಹೊರತಾದುದಲ್ಲ ಎಂಬುದು ಗೊತ್ತಾಗುತ್ತದೆ.

ಅನೇಕ ಬುರಾಷ್ಟ್ರೀಯ ಸಂಸ್ಥೆಗಳು ಒಂದು ಒಂದು ಸೋಗಿನಲ್ಲಿ ನಮ್ಮ ವ್ಯವಸಾಯ ಕ್ಷೇತ್ರದಲ್ಲಿ ನುಸುಳಿಕೊಂಡಿವೆ. ಬೀಜ, ಗೊಬ್ಬರ, ಸಸ್ಯ ಸಂರಕ್ಷಣಾ, ರಾಸಾಯನಿಕ ತಯಾರಿಕೆ, ಇವುಗಳ ತಯಾರಿಕೆ ಮತ್ತು ಸರಬರಾಜಿನಲ್ಲಿ ಇವುಗಳ ಪಾತ್ರ ಗಣನೀಯ. ಆಧುನಿಕ ತಂತ್ರಜ್ಞಾನ ಅಳವಡಿಕೆಯಿಂದ ಕಂಪನಿಗಳಿಗೆ ಲಾಭ, ಇದರಿಂದ ರೈತನಿಗೆ ಕಣ್ಣೀರು ಸುರಿಸುವ ಹೀನಾಯ ಸ್ಥಿತಿ. ಇದಕ್ಕೆ ಕಾರಣ ವ್ಯಾಪಾರೋದ್ಯಮ ಯಾವುದೇ ಇರಬಹುದು, ಅದರ ಮೂಲ ಉದ್ದೇಶ ಕಡಿಮೆ ಬೆಲೆಗೆ ಕೊಂಡು, ಇಲ್ಲವೇ ತಯಾರಿಸಿ, ಅಧಿಕ ಬೆಲೆಗೆ ಮಾರಿ ಹೆಚ್ಚು ಲಾಭ ಗಳಿಸುವುದೇ ಆಗಿದೆ. ಇಂಥವರ ಕಪಿಮುಷ್ಠಿಯಿಂದ ಹಣಕಾಸು ಸಂಸ್ಥೆಗಳು ಸರಕಾರಗಳು ಹೊರಬರಬೇಕಿದೆ.

ಇಂದು ನಾವು ಕೃಷಿ ಪರಿಸರ, ಉಳಿಸಿಕೊಳ್ಳಬೇಕಾದರೆ, ಪುನಃ ಗ್ರಾಮೀಣ ಕಸಬುಗಳು ಉಳಿಸಬೇಕಾಗಿದೆ. ಕೃಷಿ ಕೇಂದ್ರವಾದ ಪಶುಸಂಗೋಪಣೆ, ಒಕ್ಕಲುತನ, ನೇಕಾರ, ಸಿಂಪಿಗ, ಕುಂಬಾರಿಕೆ, ಕಂಬಾರಿಕೆ, ಬಡಿಗತನ, ಗಾಣಿಗ, ಇವೆಲ್ಲ ಮರುಕಳಿಸಬೇಕಾದರೆ, ಸಿದ್ಧ ಆಹಾರದಿಂದ ಹೊರಬರಬೇಕಾಗಿದೆ. ಅಂದರೆ ನಮ್ಮ ಮನೆಯ ಧಾನ್ಯಗಳಾದ ಅದರಲ್ಲೂ ಎಣ್ಣೆ ಧಾನ್ಯಗಳಾದ ಕುಸುಬೆ, ಪುಂಡಿ, ಇವುಗಳು ಗಾಣ ಹಿಡಿಸಿದಾಗ ಮನೆಯ ದನಗಳಿಗೆ ಪೌಷ್ಠಿಕಾಂಶ ಹಿಂಡಿ ದೊರೆಯುತ್ತದೆ. ನಾರು ಕೃಷಿ ಸಲಕರಣೆಗೆ ಉಪಯುಕ್ತ. ಮನೆಯ ಎಣ್ಣೆ ದೇಹಕ್ಕೆ ಅತೀ ಉತ್ತಮ. ಇದರ ಶ್ರಮವೇನೋ ಹೆಚ್ಚಿನದೆ ಆದರೆ, ಇದನ್ನೇ ನಂಬಿದವರಿಗೊಂದು ಉದ್ಯೋಗ, ಕೃಷಿಯಲ್ಲಿ ಹೊಸ ಹೆಜ್ಜೆ, ಇದರೊಂದಿಗೆ ನಮ್ಮತನವನ್ನು ನಾವು ಉಳಿಸಿಕೊಳ್ಳುವಲ್ಲಿ ಒಂದು ಅಭೂತಪೂರ್ವ ಸಾಧನೆ.

ಅಧ್ಯಾಯ - ೧೦

ಖನಿಜ ಸಂಪತ್ತು - ಪರಿಸರ

ಅಧ್ಯಾಯ – ೧೦

ಖನಿಜ ಸಂಪತ್ತು – ಪರಿಸರ

ಹಿನ್ನೆಲೆ :

ಮನುಷ್ಯ ಬದುಕಿನ ನಾಗರಿಕ ಚರಿತ್ರೆಯನ್ನು ಕಟ್ಟಿಕೊಡುವ ಖನಿಜಗಳಾದ ಲೋಹ, ತಾಮ್ರ, ಮೊದಲಾದವು ನಾಗರಿಕತೆಯ ಮೆಟ್ಟಿಲುಗಳೆಂದೆ ಕರೆಸಿಕೊಂಡಿವೆ. ವೈಜ್ಞಾನಿಕ ತಿಳುವಳಿಕೆ ಇಲ್ಲದ ಕಾಲದಿಂದಲೂ ಬಳಕೆಯಾಗುತ್ತಿದ್ದ ಖನಿಜಗಳ ಅವಿಷ್ಕಾರ ಮಾನವನ ನಾಗರಿಕತೆ ಮೈಲಿಗಲ್ಲೆಂದು ಹೇಳಬಹುದು. ಆಧುನಿಕತೆ ಎನ್ನುವುದು ಮಾನವನು ಬಳಸುವ ಖನಿಜಗಳ ಅವಳಂಬನೆಯಿಂದ ಎಂದು ಬೇರೆ ಹೇಳಬೇಕಾಗಿಲ್ಲ ಖನಿಜಗಳೇ ಅಯಾದೇಶದ ಪ್ರಗತಿಯನ್ನು ತಂತ್ರಜ್ಞಾನವನ್ನು ನಿರ್ಧರಿಸುತ್ತವೆ. ಹಾಗಾಗಿಯೇ ಮನುಷ್ಯ ನಾಗರಿಕತೆಯ ವಿಕಾಸವನ್ನು ಹಿತ್ತಾಳೆಯುಗ, ಕಬ್ಬಿಣಯುಗ ಎಂದೆಲ್ಲ ಗುರುತಿಸುತ್ತವೆ. ಅಡುಗೆ ಮನೆ ಪಾತ್ರೆಯಿಂದ ಆಕಾಶದ ವಿಮಾನಗಳ ವರೆಗೆ ಅಂತರಿಕ್ಷದಲ್ಲಿ ಉಡಾವಣೆ ಆಗುವ ಉಪಗ್ರಹಗಳವರೆಗೆ ಲೋಹ ಇಂದು ಜೀವನದ ಅವಿಭಾಜ್ಯ ಅಂಗ. ಮನುಷ್ಯ ಬದುಕಿನ ಎಲ್ಲ ಆಯಾಮಗಳ ಸಹಭಾಗಿತ್ವ ಪಡೆದ ಖನಿಜಗಳು 'ಪರಿಸರ' ಮೂಲದಿಂದ ಬಂದವು ಪರಿಸರ ವಿನಾಶಕ್ಕೆ ಖನಿಜ ಮೂಲಗಳಾದ ಗಣಿಗಾರಿಕೆ ಕಾರಣವಾಗಿದೆ. ಆದರೆ ಖನಿಜ ಸಂಪತ್ತಿನ ಮತ್ತು ಅವುಗಳ ಮಿತಬಳಕೆಯ ಜೀವಪರ ಕಾಳಜಿ ಸರಳ ಬದುಕಿನಿಂದ ಸಾಧ್ಯವೆಂಬುದು ವಚನಕಾರರ ನಿಲುವಾಗಿತ್ತು. ಆದ್ದರಿಂದ ಖನಿಜ ಸಂಪತ್ತಿನ ಕುರಿತ ಅಧ್ಯಯನ ಪ್ರಸ್ತುತ. ಏಕೆಂದರೆ ಖನಿಜಗಳು ನಮ್ಮ ದೇಹಕ್ಕೆ ಒಂದು ಪ್ರಮಾಣದಲ್ಲಿ ಅಗತ್ಯವಾಗಿದ್ದು ಕೆಲ ರೋಗ ನಿರೋಧಕ ಶಕ್ತಿ ಪಡೆದರೆ ಕೆಲವು ಬುದ್ಧಿ ಮನಸ್ಸು ವಿವೇಕವನ್ನು ಚುರುಕಗೊಳಿಸುವ ಸಾಮರ್ಥ್ಯ ಪಡೆದಿದೆ. ಅವರ ಇವುಗಳ ಅತಿಯಾದ ಬಳಕೆಯಿಂದ ಪರಿಸರ ಹಾನಿಯಾಗಿ ಜೀವನ ವಿಧಾನದ ಮೇಲೆ ಬಲವಾದ ಪರಿಣಾಮವು ಬೀರಲಿದೆ.

ಖನಿಜ ಪರಿಸರ: ಅರ್ಥ :

ಆಧುನಿಕ ಜೀವನ ಶೈಲಿಯ ಅನಿವಾರ್ಯ ವಸ್ತುಗಳಲ್ಲಿ ಒಂದಾದ ಖನಿಜಗಳೆ ಮಹತ್ವದು. ಖಣಿ ಎಂಬ ಸಂಸ್ಕೃತ ಮೂಲದಿಂದ ಬಂದ "ಖನಿ" ಎಂಬ ಪದಕ್ಕೆ ಲೋಹ, ರತ್ನ, ಮೊದಲಾದವುಗಳ ಉತ್ಪತಿಸ್ಥಾನ. ಗಣಿ, ಆಕರ[೧೪೯] ಹೀಗೆ ನೈಸರ್ಗಿಕವಾಗಿ ಲಭಿಸುವ ನಿರ್ಧಿಷ್ಟವಾದ ರಾಸಾಯನಿಕ ಸೂತ್ರವಿರುವ ಒಂದು ಪದಾರ್ಥ 'ಮಿನರಲ್'[೧೫೦] ಎಂಬುದಕ್ಕೆ ಸಂವಾದಿ ಪದ ಖನಿಜ ವಾಗಿದೆ ಗಣಿಯಲ್ಲಿ ಹುಟ್ಟಿದ್ದು ಎಂಬ ಅರ್ಥವಿದೆ.

ಖನಿಜವೆಂದರೆ "ಭೂಮಿಯಲ್ಲಿ ಸಹಜವಾಗಿ ದೊರೆಯುವ ಮತ್ತು ಒಂದು ಸ್ಥಿರವಾದ ಹಾಗೂ ವಿಶಿಷ್ಟವಾದ ಗುಣಗಳನ್ನು ಹೊಂದಿರುವ ಯಾವುದೇ ಅಜೈವಿಕ ವಸ್ತುವನ್ನು ಖನಿಜ ಎನ್ನಬಹುದು. ಚಿನ್ನ, ಬೆಳ್ಳಿ, ಪ್ಲಾಟಿನಂ, ತಾಮ್ರ, ಕಬ್ಬಿಣ, ಸೀಸ್, ತವರ, ಸತು, ಮಾಂಗನೇಸ್, ಮೊದಲಾದವನ್ನು ಲೋಹ ಖನಿಜಗಳೆಂದೂ ಸುಣ್ಣದ ಕಲ್ಲು, ಮರಳು, ಮುಂತಾದವು ಅಲೋಹ ಖನಿಜಗಳೆಂದು ಖನಿಜ ಶಾಸ್ತ್ರಜ್ಞರು ವಿಂಗಡಿಸಿದ್ದಾರೆ. ಕಟ್ಟಡದ ಕಲ್ಲುಗಳು ಅಮೃತಶಿಲೆ ನವರತ್ನಗಳು ಅಭರಣಗಳಿಗೆ ಬಳಸುವ ಇತರ ಲೋಹಗಳೂ ಖನಿಜದ ವ್ಯಾಪ್ತಿಯಲ್ಲಿ ಬರುತ್ತವೆ.[೧೫೧] ಹೀಗೆ ನೈಸರ್ಗಿಕವಾಗಿ ಲಭಿಸುವ ನಿರ್ದಿಷ್ಟವಾದ ರಾಸಾಯನಿಕ ಸೂತ್ರವಿರುವ ಒಂದು ಪದಾರ್ಥ ಮಿನರಲ್ ಅನುಕೂಲ ಸನ್ನಿವೇಶದಲ್ಲಿ ಮಾತೃಶಿಲಾ ದ್ರವದಿಂದ ರೂಪಗೊಂಡಾಗ ಖನಿಜ ಉತ್ತಮ ಆಕಾರವನ್ನು ತಳಿಯುತ್ತವೆ.[೧೫೨]

ಅಪಾರ ಪ್ರಮಾಣದಲ್ಲಿ ಬಳಕೆಯಾಗುವ ವೈವಿಧ್ಯಮಯವಾದ ಖನಿಜಗಳು ಮತ್ತು ಅವುಗಳ ಗುಣಧರ್ಮ ಕುರಿತು ಅನೇಕರು ಚಿಂತಿಸುವಂತೆ ವಚನಕಾರರು ಚಿಂತಿಸಿದ್ದಾರೆ.

ಒಂದು ಕಾಲದಲ್ಲಿ ಭೂಮಿಯ ಮೇಲೆ ಮನುಷ್ಯನ ಗುರುತೇ ಇರಲಿಲ್ಲ. ಇದಕ್ಕೂ ಹಿಂದೆ, ಬಹಳ ಹಿಂದೆ ಬ್ರಹ್ಮಾಂಡದಲ್ಲಿ ಭೂಮಿಯ ಒಂದಿಷ್ಟು ಗುರುತೇ ಇರಲಿಲ್ಲ. ಈ ವಿಷಯ ಕುರಿತು ಹಿಂದೆ ಚರ್ಚಿಸಿದ್ದೇವೆ. ಇಷ್ಟೆಲ್ಲ ಆದ ಮೇಲೆ ಮನುಷ್ಯ ಎನಿಸಿಕೊಳ್ಳಬೇಕಾದರೆ, ಎರಡು ಕೈಗಳು ಸಹ ಕೆಲಸ ಮಾಡಬೇಕಾದರೆ ಆತ ಮೊದಲು ತಿಳಿದುಕೊಂಡ ಭೂಮಿಯನ್ನು ಹೇಗೆ ಜಯಿಸಬೇಕೆಂಬುದು

---

149 ಕನ್ನಡ ನಿಘಂಟು ಸಂ.೨ ಕ.ಸಾ.ಪ., ಬೆಂಗಳೂರು-೧೯೭೬, ಪು.ಸಂ.೨೩.೨೩.

150 ಸಂಕ್ಷೀಪ್ತ ಕನ್ನಡ-ಇಂಗ್ಲೀಷ ನಿಘಂಟು, ಕ.ಸಾ.ಪ., ಬೆಂಗಳೂರು-೨೦೦೪, ಪು.ಸಂ.೪೦೯.

151 ಖನಿಜ ಜಾನಪದ – ಡಾ. ಕೆ.ಆರ್. ಸಂಧ್ಯಾರಡ್ಡಿ, ಜಾನಪದ ಆಯಾಮಗಳು – ಸಂ.ಡಾ. ಬಸವರಾಜ ಸಬರದ, ಪು.ಸಂ೧೧೪

152 ಕನ್ನಡ ವಿಶ್ವಕೋಶ ಸಿ.ಡಿ. ಮೈಸೂರು ವಿಶ್ವವಿದ್ಯಾಲಯ, ಮೈಸೂರು-೨೦೦೬

ಇದರಿಂದಾಗಿಯೇ ಮನುಷ್ಯ ಪಶು ಜೀವನವನ್ನು ಮರೆತ, ಹಾಗಾದರೆ ಪಶುಗಳಿಗೆ ಶ್ರಮ ಮಾಡುವುದು ತಿಳಿದಿಲ್ಲವೆ? ಏಕಿಲ್ಲ ಎತ್ತು ಗಾಣ ಸುತ್ತುವುದಿಲ್ಲವೆ, ಕತ್ತೆ ಭಾರ ಹೊರುವುದಿಲ್ಲವೇ? ಕಮ್ಮಾರ ಸುತ್ತಿಗೆಯಿಂದ ಬಡಿಯುವುದು ಅಥವಾ ಶಿಕಾರಿ ಬಿಲ್ಲಿಗೆ ಬಾಣ ಹೂಡಿ ಬಿಡುವುದು, ವ್ಯತ್ಯಾಸವಷ್ಟು ಮನುಷ್ಯನಿಗೆ ಒಳ್ಳೆಯದಾವುದೆಂದು ತಿಳಿದು ಕೆಲಸ ಮಾಡುತ್ತಾನೆ.

ಬೇರೆ ಪ್ರಾಣಿಗಳಿಗೂ ಮನುಷ್ಯನಿಗೂ ಇಲ್ಲಿಯೇ ಅಂತರವಿದೆ. ಬೇರೆ ಪ್ರಾಣಿಗಳೆಲ್ಲ ಭೂಮಿಯ ಮೇಲೆಯೇ ಆಹಾರ ವಿಚಾರವಾಗಿ ಅವಲಂಬಿಸಿವೆ. ಆಹಾರ ಸಿಕ್ಕಲ್ಲಿ ಮಾತ್ರ ತಿನ್ನುತ್ತವೆ. ಇಲ್ಲದಿದ್ದರೆ ಇಲ್ಲ. ಆದರೆ ಮನುಷ್ಯನ ವಿಚಾರ ಹಾಗಲ್ಲ. ಪೃಥ್ವಿಯೊಂದಿಗೆ ಅವನ ಹೋರಾಟ ಈತ ತನಗೆ ಬೇಕಾದುದೆಲ್ಲವೂ ಈ ಭೂಮಿಯಿಂದ ಪಡೆದೇ ತೀರುತ್ತೇನೆ ಎನ್ನುವ ಪಣತೊಟ್ಟಿರುವಂತೆ ಅವನ ಹೋರಾಟ. ಹೀಗಾಗಿ ಭೂಮಿಯ ಒಡಲನ್ನು ಬಗೆದು ಬೆಳೆತರೆಸುತ್ತಾನೆ. ಬಂಡೆ ಸೀಳಿ ರಸ್ತೆ ಮಾಡುತ್ತಾನೆ. ಭೂಗರ್ಭವನ್ನು ಬಗೆದು ಆದೆಷ್ಟು ತರಹದ ಖನಿಜಾಂಶವನ್ನು ಪಡೆದ ಇನ್ನೂ ಪಡೆಯುತ್ತಾನೆ.

ಇವತ್ತಿನ ಚಂದ್ರಯಾನವಾಗಿರಬಹುದು, ಮಂಗಳದ ಅಂಗಳದಲ್ಲಿ ನೀರು ಹರಿದಿವೆ ಅನ್ನುವಂತಹದ್ದಾಗಿರಬಹುದು. ಆಗಸದಲ್ಲಿನ ವಿಮಾನ ಹಾರಾಟ ಆಗಿರಬಹುದು. ಇವೆಲ್ಲ ಹೇಗೆ ಯಾವಾಗ ಸಾಧ್ಯವಾಯಿತೆಂಬುದು ನೋಡಿದಾಗ ಮನುಷ್ಯನಿಗೆ ಅದರಲ್ಲಿರುವ ಅಪಾರ ಆಸಕ್ತಿಯಿಂದ ಹೇಗೆ ಮನುಷ್ಯನು ವಾತಾವರಣದ ನಿಯಮಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಿದನೋ ಮತ್ತು ಈ ಶೋಧದಲ್ಲಿ ತೊಡಗಿದನೋ ಅಂದೇ ಆಕಾಶವನ್ನು ಜಯಿಸಿದಂತೆ. ಮೇಲೆ ಹೇಳಿದಂತೆ ಮನುಷ್ಯ ಎಷ್ಟು ಚೆನ್ನಾಗಿ ಪೃಥ್ವಿಯ ನಿಯಮಗಳನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳುತ್ತಾನೋ ಅಷ್ಟೇ ಚೆನ್ನಾಗಿ ಭೂಮಿ ಜಯಿಸಲು ಸಾಧ್ಯವಾಗುತ್ತದೆ. ಇದರ ಬಗ್ಗೆ ಒಂದಿಷ್ಟು ಇಣುಕು ನೋಟ ಬೀರುವುದಾದರೆ ಮನುಷ್ಯ ತಾನು ಬದುಕುವುದಕ್ಕಾಗಿ ಕೈಯಲ್ಲಿ ಆಯುಧ ಹಿಡಿದುಕೊಂಡೇ ಹೋರಾಟ ನಡೆಸಿದ್ದಾನೆ. ಅವನ ಕೈಯಲ್ಲಿದ್ದ ಆಯುಧಗಳೂ ಅಭಿವೃದ್ಧಿ ಅವನನ್ನು ಎಲ್ಲಿಂದ ಎಲ್ಲಿಗೆ ಕೊಂಡೊಯ್ದಿದೆ ಎನ್ನುವುದನ್ನು ನೊಡಬಹುದಾದರೆ ಯಾವಾಗ ಪಶು ಸಮಾಜವನ್ನು ಹಿಂದೆ ಹಾಕಿ ಮುಂದುವರೆಯಲು ಆರಂಬಿಸಿದನೋ ಆಗ ಅವನು ಪಶುಗಳಿಗಿಂತ ಹೆಚ್ಚೇನೂ ಮುಂದುವರೆದಿರಲಿಲ್ಲ. ಆಗ ಕಾಡಿನಲ್ಲೇ ವಾಸ, ಅಲ್ಲಿಯೇ ಗೆಡ್ಡೆ ಗೆಣಸುಗಳನ್ನು ಹುಡುಕಿಕೊಂಡು ಹೊಟ್ಟೆ ತುಂಬಿಸಿಕೊಳ್ಳುವ ಪ್ರಯತ್ನ, ಏಕೆಂದರೆ ಅವನ ಕೈಯಲ್ಲಿದ್ದ ಆಯುಧದ ಗೆಡ್ಡೆ ಗೆಣಸುಗಳನ್ನು ಅಗೆದು. ತೆಗೆಯಲು ಬಿಟ್ಟರೆ ಬೇರೆವರನ್ನೂ ಬಾರದಷ್ಟು ಮೊಂಡಾಗಿ ಒರಟಾಗಿತ್ತು ಇದಕ್ಕೆ ನಾವು 'ವನಾವಸ್ಥೆ' ಎಂದು

ಕರೆಯುತ್ತೇವೆ. ಇದು ಮನುಷ್ಯನ ಎಲ್ಲಕ್ಕಿಂತ ಕೆಳಗಿನ ಸ್ಥಿತಿ, ಇಂತಹ ಸ್ಥಿತಿಯಲ್ಲಿ ಅವನ ಅತಿ ಮುಖ್ಯ ಅವಿಷ್ಕಾರವೆಂದರೆ ಮಾತನಾಡಲು ಕಲಿತ್ತಿದ್ದು, ಈ ವಿಷಯ ಜಟಿಲವೆಂದೆ ಹೇಳಬೇಕು.

ಮನವುಷ್ಯನ ಪೂರ್ವ ಪುರುಷರಿಂದ ಶಿರವಿನ್ಯಾಸ ಬದಲಾಗುತ್ತಾ ಆಗುತ್ತಾ ಕೈಗಳು ಮೂಡಲಾರಂಭಿಸಿದ ಕಾಲದಿಂದ ಮತ್ತು ಅದೇ ಕಾರಣದಿಂದ ಅವನು ಶರೀರದಲ್ಲಿ ಅನೇಕ ಬದಲಾವಣೆಗಳು ಆಗಲು ಪ್ರಾರಂಭವಾದವು. ಇನ್ನೂ ಕೈ ಮಾಡದೇ ಇದ್ದಾಗ ಅವನು ತನ್ನ ಕೈಯಿಂದ ಮಾಡುವ ಅನೇಕ ಕೆಲಸ ದವಡೆಯಿಂದ ಮಾಡಬೇಕಾತ್ತಿತ್ತು. ಮರದಿಂದ ಹಣ್ಣು ಕಿತ್ತು ತಿನ್ನುವುದರಿಂದ ಮೇಲೆ ದವಡೆಯ ಕೆಲಸ ಕಡಿಮೆಯಾಗಲು ಪ್ರಾರಂಭವಾಯ್ತು. ಹೀಗಾಗೆ ದವಡೆಯ ಕೆಲಸ ಕಡಿಮೆಯಾದಂತೆ ದವಡೆ ಕೂಡ ಸಣ್ಣದಾಗುತ್ತಾ ಬಂತು. ದವಡೆ ಸಣ್ಣದಾದಂತೆ ತಲೆ ಬುರುಡೆಯಲ್ಲಿ ಸ್ಥಳಾವಕಾಶ ಹೆಚ್ಚಾಯಿತು. ಇದರಿಂದ ಮನುಷ್ಯನ ಮಿದುಳಿನ ಮೂಲಕ ಆಲೋಚನೆಗಳು, ಚಿಂತನೆಗಳು ಸಾದ್ಯವಾದಂತೆ ಅದು ಬೆಳೆಯಲು ಸಾದ್ಯವಾಯಿತು.

ಮನುಷ್ಯನ ಮೆದುಳು ಬೆಳೆದಂತೆ ಬೇರೆ ಬೇರೆ ಬಗೆಯ ಕೆಲಸಗಳನ್ನು ಕೈಯಿಂದ ಮಾಡಲು, ಹೊಸ ಬಗೆಯ ಆಲೋಚನೆ ಚಿಂತನೆ ಮಾಡಲು, ಮೆದುಳು ಮತ್ತಿಷ್ಟು ಜಟಿಲ ಮತ್ತು ಉನ್ನತವಾದ ರಚನಾ ವಿನ್ಯಾಸ ಪಡೆದುಕೊಂಡಿತು. ಮನುಷ್ಯನ ಜೊತೆಗೆ ಪೂರ್ವಪುರುಷರಾದ ಕಾಡು ಮನುಷ್ಯ ಚಿಂತಿಸಲು ಸಾಧ್ಯವಾಗುವುದನ್ನು ಮನುಷ್ಯ ಚಿಂತಿಸಲು ಕಲಿತ ಮೆದುಳಿನ ಜೊತೆಗೆ ಕೈಯ ಉನ್ನತಿಯೂ ಆಯಿತು. ಮೆದುಳಿನ ಉನ್ನತಿಯ ಜೊತೆ ಜೊತೆಗೆ ಅರ್ಥ ವ್ಯಾಪಕ ಸ್ಪಷ್ಟಗೊಳ್ಳಲು ಪ್ರಾರಂಭವಾಯಿತು. ಇಂತಹ ವಿಚಾರಗಳೂ ಒಬ್ಬರಿಂದ ಗುಂಪಿನ ಅನೇಕರಿಗೆ ಸುಲಭವಾಗಿ ತಿಳಿಯುತ್ತಾ ಬಂತು

ಅರಿಯದವರೊಡನೆ ಸಂಗವ ಮಾಡಿದಡೆ
ಕಲ್ಲಹೊಯ್ದು ಕಿಡಿಯ ತೆಗೆದುಕೊಂಬಂತೆ
ಬಲ್ಲವರೊಡನೆ ಸಂಗವ ಮಾಡಿದಡೆ
ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ.
ಚನ್ನಮಲ್ಲಿಕಾರ್ಜುನಯ್ಯಾ ನಿಮ್ಮ ಶರಣರ ಸಂಗವ ಮಾಡಿದಡೆ
ಕರ್ಪುರದ ಗಿರಿಯನುರಿಕೊಂಬಂತೆ”[೧೫೩]

[153] ಅಕ್ಕಮಹಾದೇವಿ ವಚನ – ಶಿವಶರಣೆಯರ ವ.ಸಂ.೫, ಸಂ.ಡಾ.ವೀರಣ್ಣ ರಾಜೂರ್, ವ.ಸಂ.೩೬, ಪು.ಸಂ.೧೫.

ಇನ್ನು ಮನುಷ್ಯನಿಗೆ ಆಹಾರದ ವಿಷಯದಲ್ಲಿ ಹೋರಾಡಬೇಕಲ್ಲ, ಆಗ ಕಲ್ಲನ್ನು ಬಳಸುತ್ತಾ ಬಳಸುತ್ತಾ ಮನುಷ್ಯ ಆಹಾರಾದಿಯಾಗಿ ಕಲ್ಲಿನ ಆಯುದ್ಧ ಮತ್ತು ಬೆಂಕಿ ಕಂಡು ಹಿಡಿದ ಈ ಕಲ್ಲಿನಿಂದ ನೆಲವನ್ನು ಅಗೆದು ಗೆಡ್ಡೆ ಗೆಣಸು ತಿನ್ನಲು ಜೊತೆಗೆ ಒಂದು ಕಲ್ಲನ್ನು ಇನ್ನೊಂದು ಕಲ್ಲಿಗೆ ಉಜ್ಜಿದರೆ ಬೆಂಕಿಯ ಕಿಡಿ ಬರುತ್ತಿತ್ತು. ಆ ಕಿಡಿ ಒಣಗಿದ ಎಲೆಯ ಮೇಲೆ ಬಿದ್ದರೆ ಧಗಧಗನೆ ಉರಿವ ಬೆಂಕಿಯಾಗುತ್ತಿತ್ತು. ಈ ರೀತಿ ಕಂಡು ಹಿಡಿದ. ಬೆಂಕಿಯಲ್ಲಿ ಮೀನನ್ನು ಶಿಕಾರಿ ಮಾಡಿದ ಪ್ರಾಣಿಗಳನ್ನು ಸುಟ್ಟು ತಿನ್ನುವುದನ್ನು ಕಲಿತ.

ಏತನ್ಮಧ್ಯೆ ಬೇಟೆಯಾಡಲು ಮನುಷ್ಯ ಭಲ್ಲೆ ಮತ್ತು ದೊಣ್ಣೆಗಳನ್ನು ತಯಾರಿಸುವುದನ್ನು ಕಲಿತ ಈ ಆವಿಷ್ಕಾರಗಳಿಂದ ಮನುಷ್ಯ ಆಹಾರ ವಿಷಯವಾಗಿ, ಶೀತದಿಂದ ಕಾಪಾಡಿಕೊಳ್ಳಲು, ಕಾಡಿನಲ್ಲಿ ಒಂದೆಡೆ ಇರಬೇಕಾಗಿಲ್ಲ. ಹೀಗಾಗಿ ಆತ ಅಲೆಮಾರಿ ಜೀವನ ಪ್ರಾರಂಭಿಸಿದನು. ನದಿ ದಂಡೆಯವರೆಗೆ ಅಥವಾ ಈ ಕಾಡಿನಿಂದ ಆ ಕಾಡಿಗೆ, ಈ ಪ್ರದೇಶ ಬಿಟ್ಟು ಆ ಪ್ರದೇಶಕ್ಕೆ ಒಂದೆಡೆಯಿಂದ ಮತ್ತೊಂದೆಡೆಗೆ ಸಾವಿರಾರು ವರ್ಷಗಳವರೆಗೆ ವಲಸೆ ಹೋಗುತ್ತಿದ್ದ ಮನುಷ್ಯ ಕುಲಗಳು ಅಲ್ಲಲ್ಲಿ ಕಲ್ಲಿನ ಆಯುಧಗಳು ಭೂಮಿಯ ಮೇಲೆ ಬಿದ್ದಿವೆ. ಉತ್ಖನ್ನದಿಂದ ಈಗಲೂ ದೊರೆಯುತ್ತವೆ. ಇದಕ್ಕೆ ವನಾವಸ್ತೆಯ ನಮತರದ ಸ್ಥಿತಿ ಎನ್ನುತ್ತಾರೆ.

ಇದರ ನಂತರ ಮನುಷ್ಯ ಆವಿಷ್ಕರಿಸಿದ್ದು ಬಿಲ್ಲು-ಬಾಣ, ಕಾಡಿನ ಅವಸ್ಥೆಯಲ್ಲಿ ಕ್ರಮೇಣ ಅಲೆದಾಟ ಬಿಟ್ಟು ಒಂದೆಡೆ ಬೀಡು ಬಿಟ್ಟು ಲೆಕ್ಕವಿಡುವ ಪ್ರಯತ್ನ ಪ್ರಾರಂಭವಾಯಿತು. ಸಹಜವಾಗಿಯೇ ಈಗಿನ ಗ್ರಾಮಗಳಿಗೆ ಹೋಲಿಸಿದರೆ ಆಗಿನ ಕಾಲದ ಗ್ರಾಮಗಳು ಅನಾಗರಿಕ ಎನ್ನಿಸುತ್ತಿದ್ದವು. ಜೊತೆಗೆ ಅವರು ಬಳಸುವ ಆಯುಧ ಮತ್ತಷ್ಟು ಹರಿತವು ನಾಜೂಕು ಆಗಲಾರಂಬಿಸಿದವು.

ಈಗ ನಾವು ಮಾತನಾಡುತ್ತಿರುವುದು ಪೃಥ್ವಿ ಜಯಿಸುವ ಬಗೆ ಆದಿ ಮನುಷ್ಯನಿಗೆ ಆಯುಧವಾಗಿ ಮೊಂಡುಮೊಂಡಾದ ಕಲ್ಲಿನ ಆಯುದ್ಧಗಳಿದ್ದವು. ಒಂದು ಆಯುಧದಿಂದ ಒಬ್ಬ ವ್ಯಕ್ತಿ ಎಷ್ಟೇ ಶ್ರಮ ವಹಿಸಿದರೂ ಕೂಡ ಆತನೊಬ್ಬನ ಹೊಟ್ಟೆಗೆ ಮಾತ್ರ ಸಾಕಾಗುತ್ತಿತ್ತು. ಹೀಗಿರುವಾಗ ಪೃಥ್ವಿಜಯಿಸುವುದಾಗಲಿ ಹೆಚ್ಚಿನ ಆಹಾರ ಸಂಗ್ರಹಣೆ ಎಲ್ಲಿ ಸಾಧ್ಯ. ಒಂದು ವೇಳೆ ಇಂದಿನ ಟ್ರ್ಯಾಕ್ಟರ್ ನೇಗಿಲಿನಿಂದ ಭೂಮಿ ಹದ ಮಾಡುವುದಾದರೆ ಅದರ ಮಾತೆ ಬೇರೆ. ಇಂತಹ ಸಂದರ್ಭದಲ್ಲಿ ಹೆಚ್ಚು ವಸ್ತುಗಳನ್ನು ದಿನಪೂರ್ತಿ ಕೆಲಸ ಮಾಡಿದರೂ ಎಷ್ಟು ನೆಲವನ್ನು ಅಗಿಯಬಲ್ಲ ಅಷ್ಟೋ ಇಷ್ಟೋ

[illegible]

ಮಾತ್ರ. ಹೀಗಾಗಿ ಆಧುನಿಕ ಸಾಮಾಗ್ರಿ ಉನ್ನತವಾದಷ್ಟು ಕೆಲಸ ಕಾರ್ಯಗಳು ಸುಲಭ ಹೀಗಿದ್ದಾಗ ಆತನ ದಿಗ್ವಿಜಯಗಳಿಗೆ ಹೋರಾಟಕ್ಕೆ ಕೊನೆಯೇ ಇಲ್ಲ.

ಕ್ರಮೇಣ ವ್ಯವಸಾಯ ಮಾಡುವುದನ್ನು ಕಲಿತನು. ಜೊತೆಗೆ ಪಶು ಸಾಗಾಣಿಕೆ ಒಂದಷ್ಟು ಕಾಲ ಕಳೆದಂತೆ ಕಬ್ಬಿಣ ಕರಗಿಸುವುದನ್ನು ಕಲಿತುಕೊಂಡ. ಸ್ವತಃ ಈ ಹಿಂದೆ ಕಟ್ಟಿಗೆಯ ನೇಗಿಲಿನಿಂದ ಹೊಲ ಉಳಲು ಪ್ರಾರಂಭಿಸಿದವನು ಈಗ ಕಬ್ಬಿಣದ ನೇಗಿಲಿನಿಂದ ಉಳುವುದು ಪ್ರಾರಂಭವಾಯಿತು. ಮನುಷ್ಯನ ಇಡೀ ಬದುಕನ್ನು ಗಮನಿಸಿದಾಗ ಭೂಮಿ ಆಗಸದಷ್ಟೇ ಅಂತರ ಉಂಟಾಯಿತೆಂಬೇ ಹೇಳಬೇಕು. ಆತ ಮೊದಲು ಸಂಗ್ರಹಿಸಿದ್ದಕ್ಕೂ ಈಗ ಸಂಗ್ರಹಿಸುತ್ತಿರುವುದಕ್ಕೂ ಸಹಜವಾಗಿಯೇ ವ್ಯತ್ಯಾಸವಾಯಿತು. ಮನುಷ್ಯ ಅಳವಡಿಸಿಕೊಂಡ ಪಶುಪಾಲನೆ ಮತ್ತು ವ್ಯವಸಾಯಗಳು ಅಭಿವೃದ್ಧಿ ಪಥದಲ್ಲಿ ಮಹತ್ತರವಾದ ಮೈಲುಗಲ್ಲುಗಳಾದವು.

ನಮಗೆ ನಿಸರ್ಗವು ಕೊಡ ಮಾಡಿದ ಲೋಹ ಕಬ್ಬಿಣ, ಪ್ರಪಂಚದಾದ್ಯಂತ ಬೃಹತ್ ಪ್ರಮಾಣದಲ್ಲಿ ದೊರೆಯುತ್ತದೆ. ಜೊತೆಗೆ ಅತಿ ಹೆಚ್ಚಿನ ಬಳಕೆ ಕೂಡ ಮಾಡುತ್ತಿದ್ದಾರೆ. ಕಬ್ಬಿಣ ಮಣ್ಣಿನಲ್ಲಿ ಅಷ್ಟೇ ಅಲ್ಲ ಕಲ್ಲಿನಲ್ಲೂ ಸಹ ಕಬ್ಬಿಣದ ಅದಿರು ಇರುತ್ತದೆ. ಈ ಕಬ್ಬಿಣ ವ್ಯವಸ್ಥಿತವಾಗಿ ಕರಗಿಸಿ, ಹಿಗ್ಗಿಸಿ, ಕುಗ್ಗಿಸಿ, ಬಾಗಿ ಬಳಕುವಂತೆ ಮಾಡಿ ಬಳಸುತ್ತಾರೆ. ಹೊಲಿಯುವ ಸೂಜಿಯಿಂದ ಹಿಡಿದು ಇಂದಿನ ಕ್ಷಿಪಣಿಗಳವರೆಗೂ ಕಬ್ಬಿಣ ಬಳಸುತ್ತಿದ್ದಾರೆ. ಕಬ್ಬಿಣದೊಳಗಿನ ಇಂಗಾಲಾಂಶ ಕಡಿಮೆ ಮಾಡುತ್ತಾರೆ. ಆಗ ಅದು ಇನ್ನಷ್ಟು ಗಟ್ಟಿಯಾಗುತ್ತದೆ. ಆಗ ಅದುವೇ 'ಉಕ್ಕು' ಆಗಿ ಮಾರ್ಪಾಡಾಗುತ್ತದೆ. ಈ ಉಕ್ಕು ಅಥವಾ ಕಬ್ಬಿಣ ಮನುಕುಲಕ್ಕೆ ನೀಡಿದ ಕೊಡುಗೆ ಅಷ್ಟಿಷ್ಟಲ್ಲ ಇದು ಅವಶ್ಯಕವಾಗಿ ಬೇಕೆ ಬೇಕು ಎಂಬುದು ವಚನಕಾರ್ತಿ ಅಕ್ಕಮಹಾದೇವಿ ಹೀಗೆ ಹೇಳಿದ್ದಾಳೆ.

ನಾಗರೀಕತೆ ಬೆಳೆದಂತೆ ಹಿಂದಿನ ಮಾನವ ಬಿಲ್ಲು-ಭರ್ಚಿ, ಮರದ ನೇಗಿಲು ಕ್ರಮೇಣ ಇಲ್ಲವಾಗುತ್ತ ಕಬ್ಬಿಣದ ಉಪಕರಣ ಬಳಸುತ್ತಾ ಬಂದಿರುವುದು ಅಕ್ಕ ಬಹಲ ಸ್ವಾರಸ್ಯವಾಗಿ ಜೊತೆಗೆ ಇಡೀ ಜಗತ್ತಿಗೆ ಆಹಾರವನ್ನೊದಗಿಸುವ ರೈತನ ಬಗ್ಗೆ ಆತನು ಬಳಸುವ ಉಪಕರಣಗಳ ಬಗ್ಗೆ ಹೀಗೆ ಹೇಳಿದ್ದಾಳೆ.

ರೈತರಿಗೆ ಬದುಕಿನುದ್ದಕ್ಕೂ ಆಹಾರವೊದಗಿಸುವ ಕೃಷಿ ಉತ್ಪನ್ನಗಳಾದ ನೇಗಿಲು ತಯಾರಿಕೆಯಲ್ಲಿ ಕಬ್ಬಿನ ಬಳಸುತ್ತಾರೆ. ನೇಗಿಲ ಹಲ್ಲು ಕುಂಟೆಗೆ ಜೋಡಿಸುತ್ತಾರೆ. ಅದಕ್ಕೆ ಮಿಣಿಯನ್ನು ಜೋಡಿಸುತ್ತಾರೆ. ಎತ್ತುಗಳ ಕೊರಳಿಗೆ ಹೂಡಿ ನೇಗಿಲ ಸಾತು ಹೂಡುತ್ತಾರೆ. ನೇಗಿಲು

ಹೂಡುವುದರಿಂದ ಭೂಮಿಯ ಮೇಲ್ಭಾಗದ ಮಣ್ಣು ಸೂರ್ಯನ ಕಿರಣಗಳಿಂದ ಸುಟ್ಟ ಮಣ್ಣು ಒಳಹೋಗಿ ನೆಲದಾಳದ ಮಣ್ಣು ಮೇಲೆ ಬರುತ್ತದೆ. ಕೃಷಿ ಕೆಲಸಗಳಲ್ಲಿ ಸ್ವಲ್ಪ ಕಷ್ಟದ ಕೆಲಸವೆಂದರೆ ಈ ನೇಗಿಲು ಹೊಡೆಯುವುದು.

ಸ್ಥೂಲವೆಂಬ ದಿಂಡಿಗೆ ಶ್ರೀದೇವರೆಂಬ ತಾಳನಟ್ಟು ಹಿಂದೆ ನೇಗಿಲಿನ ಬಗ್ಗೆ ಹೇಳಿದ ಅಕ್ಕ ಈ ಮೇಲೆ 'ಗಳಾ'ದ ಬಗ್ಗೆ ಸಂಬಂಧಿಸಿದ್ದಾದರೆ ತಾಳ ಗಳ್ಯಾಕ್ಕೆ ಸಂಬಂಧಿಸಿದ್ದಾಗಿದೆ. ಈ ತಾಳು ಬಿತ್ತುವಾಗ ಅದರ ಹಿಂದೆಯೇ ಇನ್ನೊಂದು ಗಳಾದ ಸಾಲು ಕಲಿಸಲು ಅಂದರೆ (ಬಿತ್ತಿದ ಬೀಜ ಪಕ್ಷಿಗಳಿಗೆ ಸಿಗದಂತೆ ಭೂಮಿಯೊಳಕ್ಕೆ ಇಳಿಸುವ ಕ್ರೀಯೆ) ತಾಳಕ್ಕೆ ಎರಡು ಬಂದೂಕಿನ ತುದಿಯಂತೆ ಕಬ್ಬಿಣದ ಕೊಳವೆಗಳಿರುತ್ತವೆ. ಇವುಗಳಿಗೆ ಜೋಡಿಸಿ ಮೇಲೆ ಮಿಣಿಯನ್ನು ಬಿಗಿದು ಬಿತ್ತುತ್ತಾರೆ. ಬಿತ್ತಿದ ನಂತರ ಕಳೆ ತೆಗೆಯಲು ಮತ್ತು ಬೆಳೆ ಮೇಲೆ ಬರುವ ಕ್ರೀಯೆ, ನಂತರ ಭತ್ತ ತುಂಬಿ ಕೊಯ್ಲಿಗೆ ಬರುತ್ತದೆ.

ಈ ರೀತಿ ಕೊಯ್ಲಿಗೆ ಬಂದ ಬೆಳೆ ಕಟಾವು ಮಾಡಲು ಇಂದು ಆಧುನಿಕ ಯಂತ್ರಗಳೇನೋ ಬಂದಿವೆ. ಆದರೆ ಇವುಗಳಿಂದ ಕಟಾವು ಮಾಡಿದರೆ ಮೂರು ದಿನ ಹಿಡಿಯುವ ಸಮಯ ಮೂರೆ ಗಂಟೆಯಲ್ಲಿ ಮುಗಿಯುತ್ತದೆ. ಆದರೆ ಮುಂದೆ ಬಿತ್ತುವಾಗ ಧಾನ್ಯದ ಮೂಗು ಕಡಿದು ನಾಟದೇ ಇರುವ ಸಾಧ್ಯತೆ ಹೆಚ್ಚು ಇದನ್ನು ಗಮನದಲ್ಲಿಟ್ಟುಕೊಂಡ ವಚನಕಾರರು ಕುಡುಗೋಲಿನಿಂದ ಕೊಯ್ಯಬೇಕೆಂದು ಹೇಳುತ್ತಾರೆ. ಈ ರೀತಿ ಕುಡುಗೋಲಿನಿಂದ ಕೊಯ್ದು ಕಣದ ನಿರ್ಮಾಣ ಮಾಡಿ ಹಂಸವೆಂಬ ಎತ್ತುಗಳಿಂದ ಹಂತಿ ಹೊಡಿಯಬೇಕು ಎಂದು ಹೇಳುತ್ತಾಳೆ ಅಕ್ಕ.

'ಹಂತಿ' ಹೊಡಯುವುದರಿಂದ ಎತ್ತುಗಳು ತಿರುಗುತ್ತಾ ಮೂತ್ರ (ಗ್ವಾತಾ) ಸಗಣಿಯಿಂದ ನಿಸರ್ಗದತ್ತವಾಗಿಯೇ ಹಂತಿಯಲ್ಲಿ (ಕಣದಲ್ಲಿ) ಇದ್ದ ಭತ್ತಕ್ಕೆ ಯಾವುದೇ ರೀತಿ ಹುಳುಗಳ ಭಾದೆ ಇರುವುದಿಲ್ಲವೆನ್ನುತ್ತಾಳೆ.

ಹೀಗೆ ರಾಶಿಯಾದ ಮೇಲೆ 'ಕಣಕೆ'ಯ ಭಣಿವೆಯೊಟ್ಟಿ ಎರಡೂ ಮೈಗೆ ಹೆಂಟೆ ಪೇರಿಸಬೇಕು. ಇಲ್ಲದೇ ಹೋದರೇ ನಿಸರ್ಗ ಕೆಸಾರಿ ವೇಗದ ಗಾಳಿ ಬೀಸುತ್ತದೆ. ನಮ್ಮ ಊಟ ನಮ್ಮ ಕೈಗೆ ಸಿಕ್ಕ ಮೇಲೆ ಬಿಟ್ಟರೆ ಹೇಗೆ ಅದಕ್ಕೆ ದಿನಗಳು ಆಹಾರವಾದ ಹೊಟ್ಟು ಕಣಕೆಗೆ ಭಣಿವೆ ಹಾಕಿ ವರ್ಷದ ಮೇವು ತಯಾರಿಸಿಕೊಟ್ಟುಕೊಂಡು ನಿರ್ಮಲ ಮನಸ್ಸಿನಿಂದ ಜೀವನ ಸಾಗಿಸು ಎನ್ನುತ್ತಾಳೆ ಅಕ್ಕ.

[illegible]

ಈ ರೀತಿ ಬದುಕುವ ರೈತನ ಮುಖದ ಮೇಲೆ ಸೂರ್ಯನಷ್ಟೇ ಪ್ರಕಾಶಭರಿತವಾಗುವುದೆಂದು ಹೇಳಿ, ರೈತನಿಗೆ ಕಬ್ಬುನದೊಂದಿಗಿರುವ ಸಂಬಂಧ ತಿಳಿಸಿದ್ದಾಳೆ.

ಒಂದು ಕಾಲದಲ್ಲಿ ಮನುಷ್ಯ ಹುಚ್ಚನಂತಿದ್ದು, ಕಾಡಿನಲ್ಲೆಲ್ಲಾ ಸುತ್ತಾಡಿ ಒರಟು ಆಯುದ್ಧಗಳಿಂದ ಗಡ್ಡೆ ಗೆಣಸುಗಳನ್ನು ಹುಡುಕಿ ಹೇಗೋ ಹಾಗೆ ಬದುಕುವ ಪ್ರಯತ್ನ, ಹೀಗೆ ಬದುಕನ್ನು ಆರಂಭಿಸಿದ್ದು, ಕ್ರಮೇಣ ಬದುಕಲು ಎಷ್ಟು ಬೇಕೋ ಅದಕ್ಕಿಂತ ಹೆಚ್ಚಿನ ಬೆಳೆ ಬೆಳೆಯಲಾರಂಭಿಸಿದ. ಹೆಚ್ಚಿನದು ಮನೆಯಲ್ಲಿ ಸಂಗ್ರಹಿಸಿಡುವುದನ್ನು ಕಲಿತ. ಜೀವನ ಶೈಲಿ ತಂತಾನೆ ಬದಲಾಯಿತು. ಸಾಮಾನ್ಯವಾಗಿಯೇ ಇವರಿಂದ ಬೇರೆ ಬೇರೆ ಕೆಲಸಗಳೆಡೆಗೆ ಮನುಷ್ಯ ತನ್ನ ಮನಸ್ಸನ್ನು ಹರಿಬಿಡಲು ಸಾಧ್ಯವಾಯಿತು.

ಪ್ರಾಚೀನ ಭಾರತದ ಹಲವು ಶಾಸ್ತ್ರಜ್ಞರು ಶಾಸ್ತ್ರೀಯ ಅನ್ವೇಷಣೆಯಲ್ಲಿ ಪ್ರಯೋಗದ ಮಹತ್ವವನ್ನು ಎತ್ತಿ ಹಿಡಿದರು. ಆಯುರ್ವೇದ ಶಾಖೆಯಲ್ಲಿ ಚಿಕಿತ್ಸೆ, ನಿಧಾನ, ಶಸ್ತ್ರಕ್ರಿಯೆ, ಮೊದಲಾದವನ್ನು ರೂಢಿಸಿಕೊಳ್ಳಬೇಕಾದರೆ ಪ್ರಯೋಗದಿಂದ ಶರೀರದ ವಿವಿಧ ಅಂಗಗಳ ಜ್ಞಾನವನ್ನು ಪಡೆಯುವುದು ಅತ್ಯವಶ್ಯಕವೆಂದು ಸಶ್ರುತನ ಒತ್ತಿ ಹೇಳಿದ್ದಾನೆ. ಶವದ ಭೇಧವನ್ನು ಇದಕ್ಕಾಗಿಯೋ ಅವನು ಪುರಸ್ಕರಿಸಿರುವುದು.

ಪ್ರಾಚೀನ ಕಾಲದಲ್ಲಿ ಸೂತ್ರ ರೂಪದಿಂದ ಗ್ರಂಥವನ್ನು ಬರೆದು ಗುರುವಿನ ಮುಖಾಂತರ ಹೆಚ್ಚಿನ ಜ್ಞಾನ ಪಡೆಯುತ್ತಿದ್ದರು. ಇವತ್ತಿನ ವಿಜ್ಞಾನಗಳಲ್ಲಿ ಇಂದು ಮಾನವ ಶರೀರದ ಅಧ್ಯಯನಮಾಡುವಂತೆ ಪ್ರಾಚೀನ ಕಾಲದಲ್ಲೂ ಕೂಡ ಶವ ವಿಚ್ಛೇದನೆ ಮಾಡುತ್ತಿದ್ದರು. ಶವ ವಿಚ್ಛೇದನೆ ಮಾಡತಕ್ಕ ಪರಂಪರಾಭ್ಯಾಸವೂ ನಷ್ಟವಾದ ಕಾರಣ ಶರೀರಾಂಗ ಪ್ರತ್ಯಮಗಳ ಜ್ಞಾನವೂ ಕಡಿಮೆಯಾಗುತ್ತಾ ಬಂತು.

"ಮಾತ್ರಯುಕ್ತಃ ಕ್ಯಾಚಿನ್ನಾಸ್ತಿ ಸಂಪ್ರದಾಯ ನಚ ಕ್ವಚಿತ್ ॥
ತೇನ ಸಿದ್ಧಿರ್ನ ತತ್ರಾಸ್ತಿ ರಸೇ ವ್ಯಾಧಿ ರಸಾಯನೇ ॥
ವೈದ್ಯೇ ವಾದೇ ಪ್ರಯೋಗೇ ಚ ತಸ್ಮಾಪ್ಯತೇಳೀ ಮಾಯಾ ಕೃತಃ[೧೫೪]

[154] ಭಾರತೀಯ ವಿಜ್ಞಾನದ ಹಾದಿ, ಜಿ.ರಾಮಕೃಷ್ಣ, ಪ್ರಸಾರಾಂಗ, ಕ.ವಿ.ವಿ. ಹಂಪಿ. ಪು.ಸಂ.೨೦೧.

ಇಲ್ಲಿ ಯಶೋಧರನು ಸ್ವತಃ ತಾನೇ ಕೈಕೊಂಡ ಪ್ರಯೋಗಗಳಿಂದ ತಿಳಿದು ಬಂದ ರಸಾಯನಿಕ ಕ್ರಿಯೆಗಳನ್ನು ಬಿಟ್ಟು ಬೇರೆನನ್ನೂ ತನ್ನ ಗ್ರಂಥದಲ್ಲಿ ಸೇರಿಸಿಲ್ಲವೆಂದು ಹೇಳಿದ್ದಾನೆ. ರಸರತ್ನ ಸಮುಚ್ಚಯ ಎಂಬ ಗ್ರಂಥದಲ್ಲಿ ರಾಮಚಂದ್ರ ಪ್ರಯೋಗಶಾಲೆಯ ವಿವರಗಳನ್ನೆಲ್ಲ ಕೊಡುತ್ತಾನೆ. ಅದರ ಆವರಣ ಹೇಗಿರಬೇಕು, ಅಲ್ಲಿ ಅಗತ್ಯವಾದ ಉಪಕರಣಗಳೇನು? ಯಾವ ಯಾವ ವನಸ್ಪತಿಗಳು ಬೆಳೆಸಬೇಕ, ರಸಾಯನ ಶಾಸ್ತ್ರದ ಪರಿಭಾಷೆ, ಪ್ರಯೋಗಶಾಲೆಯ ಯಂತ್ರಗಳು ಮತ್ತು ಪ್ರಾಯೋಗಿಕ ಅವಶ್ಯಕತೆಗಳನ್ನು ಸಹ ಇಲ್ಲಿ ಸವಿಸ್ತಾರವಾಗಿ ವರ್ಣಿಸಲಾಗಿದೆ. ರಸಾಯನ ಶಾಸ್ತ್ರದಿಂದ ಭಿನ್ನವಾದ ರಸಾಯನ ಎಂಬ ಒಂದು ಶಾಖೆಯು ಬೆಳೆದು ಇಲ್ಲಸಲ್ಲದ ಸಾಧನೆಗಳನ್ನು ತನ್ನದೆಂದು ವಾದಿಸ ಹೊರಟಿತು. ಅಮರತ್ವವನ್ನು ಕೂಡ ರಸಾಯನದಿಂದ ಪಡೆಯುಬಹುದಾಗಿದೆ ಎಂದು ಪ್ರಚಾರವಾಯಿತು. ಯುರೋಪಿನಲ್ಲಿ 'ಅಕ್ಕೀಇ' ಎಂಬುವುದು ಭಾರತದಲ್ಲಿ ರಸಾಯನವಾಗಿ ಪ್ರಚುರವಾಯಿತು. ಯಾವುದೇ ಲೋಹವನ್ನು ಚಿನ್ನಾಗಿಸಬಹುದೆಂದು ಕೂಡ ವಾದಿಸಿದರು. ಅಷ್ಟೇ ಅಲ್ಲ ಜನ ಮೃತ್ಯು ಚರಾ ಮುಂತಾದ ವ್ಯಾದಿಗಳನ್ನು ಮೀರಿ ನಿಲ್ಲಬಹುದೆಂದು ಬಿರುದು ಪ್ರಚಾರ ಪಡೆಯಿತು. ಇದಕ್ಕೆಲ್ಲ ಶಿವನೇ ದೇವತೆಯಾದ, ಗುರುವಾದ, ಇದಕ್ಕೆ ಗೂಢವಿದ್ಯೆ ಎಂದು ಈಗಲೂ ಪ್ರಸಿದ್ಧಿಯಲ್ಲಿದೆ. ರಸಾಯನ ವಿದ್ಯೆಯು ವಿಷಮ ಸ್ವರೂಪವನ್ನು ತಿಳಿಯಬೇಕಾದರೆ ಡಾ॥ ಸೈಯದ ಹುಸೇನಿ ನಸರ್ ಅವರ ಪ್ರಕಾರ ಚರಕಸಂಹಿತೆಯಲ್ಲಿ ಆಯುರ್ವೆದದ ಎಲ್ಲ ಸಿದ್ದೌಷಧಿಗಳನ್ನು ಸಾಮಾನ್ಯವಾಗಿ ರಸಾಯನವೆಂದು ಕರೆಯಲಾಗಿದೆ. ಇಂದು ನಾವೆಲ್ಲ ಬಳಸುವ ಚ್ಯವನ್‌ಫ್ರಾಶ್‌ವು ಒಂದು ರಸಾಯನ ಅದರ ತಾರಿಕೆ ಮತ್ತು ಪರಿಣಾಮಗಳ ಬಗ್ಗೆ ಚರಕಸಂಹಿತೆ ಹೇಳುತ್ತವೆ. ಎದೆನೋವು, ಹೃದ್ರೋಗ, ಕೆಮ್ಮು ಶ್ವಾಸಕ್ಕೆ ಸಂಬಂಧಿಸಿದ ತೊಂದರೆಗಳು ಇತ್ಯಾದಿಗಳು ವಾಸಿಯಾಗುತ್ತವೆ. ಇನ್ನೂ ಅಬಾಲವೃದ್ಧರಿಗೂ ಲವಲವಿಕೆ, ಶಕ್ತಿ ಕೊಡುತ್ತದೆ ಎನ್ನುತ್ತದೆ. ಚರಕ ಸಂಹಿತೆ.

ಇಷ್ಟಲ್ಲದೆ ಕಬ್ಬಿಣ, ಚಿನ್ನ ಮೊದಲದ ಖನಿಜಗಳಿಂದಲೂ ರಸಾಯನ ತಯಾರಿಸುವುದುಂಟೆಂದು ಚರಕಸಂಹಿತೆ ಹೇಳುತ್ತದೆ. ನೆಲ್ಲಿಕಾಯಿಯಲ್ಲಿ ಕಬ್ಬಿಣದಂಶ ಇರುವುದರಿಂದಲೇ ಹೆಚ್ಚಾಗಿ ಬಳಕೆಯಲ್ಲಿದೆ. ಆದ್ದರಿಂದಲೇ ಮೂಲಿಕೆ ಮತ್ತು ಫಲಗಳೊಂದಿಗೆ ಈ ಖನಿಜಾಂಶಗಳು ಬೆರೆಸಲ್ಪಡುತ್ತವೆ. ಈ ಮೇಲಿನ ರಸಾಯನಕ್ಕೆ ಸಮಾನವಾಗಿ ಶಿಲಾಚತು ಎಂಬುದು ಪ್ರಶಂಸೆಗೆ ಪಾತ್ರವಾಗಿದೆ. ಬೆಟ್ಟ-ಗುಡ್ಡಗಳಲ್ಲಿಯ ಕಲ್ಲುಗಳಲ್ಲಿ ಚಿನ್ನ, ಬೆಳ್ಳಿ, ತಾಮ್ರ, ಕಬ್ಬಿಣದ ಅದಿರನ್ನು ಹೊಂದಿರುತ್ತವೆ. ಅಂತಹ ಕಲ್ಲುಗಳಿಂದ ಶಿಲಾಜತು ಹೋಮತ್ರದಂತೆ ಅದು ಗೋಮೂತ್ರದಂತಹ ವಾಸನೆಯುಳ್ಳದಂತೆ ಮತ್ತು ಅದರ ಸೇವನೆಯಿಂದ ವೀರ್ಯಾವಂತನಾಗುತ್ತಾನಂತೆ.

“ಪಾಕಿಸ್ತಾನದ ಚಿತ್ರಾಲ್ ಎಂಬಲ್ಲಿಂದ ಉತ್ಖನನ ಶಾಸ್ತ್ರ ಬೇರೊಬ್ಬರುತನಗಾಗಿ ಶಿಲಾಜತುವಿನ ನಮೂನೆಯನ್ನು ತಂದುಕೊಟ್ಟಿದ್ದರಿಂದ ಹೇಳುವ ಮೆಹದೀಹಸನ್ ಅದರ ರಚನೆ ಮತ್ತು ಲಕ್ಷಣಗಳನ್ನು ರಸಾಯನಿಕ ಪ್ರಯೋಗಗಳ ಮೂಲಕ ಹಸುವಿನ ಗಂಟಲಂತೆ ಇರಲಿಲ್ಲವೆಂದು ಹೇಳಿದ್ದಾನೆ. ಹನ್ನೊಂದನೆಯ ಶತಮಾನದ ಆದಿಭಾಗದಲ್ಲಿ ಭಾರತಕ್ಕೆ ಬಂದ ಅಲ್-ಬಿರೂನಿ ಭಾರತದಲ್ಲಿ ಪ್ರಚಲಿತವಾಗಿದ್ದ ರಸಾಯನಿಕ ತಂತ್ರವನ್ನು ಗಮನಿಸಿ ವಿಜ್ಞಾನ ಮತ್ತು ವಿಜ್ಞಾನದ ಸೋಗಿನಲ್ಲಿ ಮೆರೆಯುವ ತಂತ್ರಗಳ ನಡುವಣ ವ್ಯತ್ಯಾಸವನ್ನು ಬಯಲಿಗೆಳೆದಿದ್ದಾನೆ.”[೧೫೫] ರಸಾಯನ ತಂತ್ರವು ವಿಜ್ಞಾನದ ಸೋಗಿನಲ್ಲಿ ಮರೆಯುವ ತಂತ್ರವೆಂದು ಅವನ ನಿಷ್ಕೃಷ್ಟ ಅಭಿಪ್ರಾಯ. ಅದೇನೋ ಜನರ ನಡುವೆ ವ್ಯಾಪಕವಾಗಿ ಮನ್ನಣೆ ಪಡೆದಿದ್ದ ಜ್ಞಾನರಾಶಿಯಾಗಿರಲಿಲ್ಲವೆಂದು ಹೇಳಿದ್ದಾನೆ. ಸಂಪತ್ತಿನ ಆಸೆಗಾಗಿ ಜೋತುಬಿದ್ದರೆಂದು ಅವನ ಅಭಿಪ್ರಾಯ.

ಆಲ್-ಬಿರೋನಿ ಕಾಲಕ್ಕೆ ರಸಾಯನ ಪ್ರಸಿದ್ಧಿಯಲ್ಲಿತ್ತು. ರಸಾಯನಕ್ಕೆ ಚಿನ್ನದ ಅರ್ಥ ಕೊಡಲಾಗಿದೆ. ಪ್ರಾಚೀನ ಭಾರತೀಯ ವಿಜ್ಞಾನದ ಅನೇಕ ಗ್ರಂಥಗಳು ರಸಾಯನದ ಶ್ರೇಷ್ಠತೆಯನ್ನು ಬಹುವಾಗಿ ಎತ್ತಿ ಹಿಡಿದಿವೆ. ವೈದ್ಯಕೀಯ ಮತ್ತು ರಸಾಯನ ಶಾಸ್ತ್ರಗಳೆರಡಕ್ಕೂ ಸಾಮಾನ್ಯವಾಗಿ ಅನ್ವಯಿಸುವ ಒಂದು ವಿಶೇಷ ಪ್ರಕ್ರಿಯೆಯು ‘ರಸ’ ಅಥವಾ ಪಾದರಸಕ್ಕೆ ಸಂಬಂಧಿಸಿದ್ದು, ಅದೆಷ್ಟೋ ಪ್ರಾಚೀನವಲ್ಲದ ಗ್ರಂಥವೆಂಬುದನ್ನು ಸೂಚಿಸುತ್ತದೆ. ಅವರು ರಸಹೃದಯ ರಸಪ್ರಕಾಶ ಸುಧಾಕರ, ರಸರತ್ನಾಕರ, ರಸರತ್ನಪ್ರದೀಪ, ರಸರತ್ನಸಮುಚ್ಛಯ ರಸಾರ್ಣವ, ರಸಸಾರ, ಸರಾಯನಾಧಿಕಾರ, ರಸಾಯನತಂತ್ರ, ರಸೇಂದ್ರಚಿಂತಾಮಣಿ, ಇತ್ಯಾದಿ ಗ್ರಂಥಗಳೂ.

ಪ್ರಾಚೀನ ಭಾರತ ವಿದ್ಯಾಸಂಸ್ಥೆಗಳಲ್ಲಿ ವೈದ್ಯಕೀಯ ಶಿಕ್ಷಣವು ಒಂದು ಪ್ರಮುಖ ಸ್ಥಾನ ಹೊಂದಿತ್ತೆಂದು ಎಲ್ಲರಿಗೂ ತಿಳಿದಿದೆ. ವೈದ್ಯಕೀಯಕ್ಕಿರುವಂತೆ ರಸಾಯನಕ್ಕೆ ‘ದ ಈಘ್’ ಚರಿತ್ರೆಯಲ್ಲ. ರಸಾಯನವೆಂಬುದು ವೈದ್ಯಕೀಯ ಒಂದು ಭಾಗವಾಗಿದ್ದಿತ್ತೇ ವಿನಃ ನಾವೀಗ ತಿಳಿಯುವ ರಸಾಯನ ಶಾಸ್ತ್ರವಾಗಿ ಪರಿಣಮಿಸಿರಲಿಲ್ಲ. ದೀರ್ಘವಾದ ಆಯಸ್ಸು ಸ್ಮೃತಿ ಶಕ್ತಿ ಯೌವ್ವನ, ಇತ್ಯಾದಿಗಳಿಗೆ ಕೊಡಲಾಗುತ್ತಿದ್ದ ಔಷಧಿಗೆ ಆ ಹೆಸರಿತ್ತು ಕ್ರಮೇಣ ಪಾದರಸದಿಂದ ನಡೆಯುವ ಕ್ರೀಯೆಗಳಿಗೆ ಈ ಹೆಸರು ಬಂತು. ಕೆಲ ತಾಂತ್ರಿಕ ಆಚರಣೆಯಲ್ಲಿ ಇದು ಪ್ರಖ್ಯಾತವಾಗಿತ್ತು. ತಂತ್ರವಿದ್ಯೆಗೂ ರಸಾಯನಕ್ಕೂ ಎಲ್ಲಿಯ ನಂಟು ಆಶ್ಚರ್ಯವು ಸಹಜವಾಗಿದೆ. ರಸಾಯನ ಗ್ರಂಥ ಇದಕ್ಕೆ ಸಮುಜಾಯಿಸಿ ಕೊಡುತ್ತಿದೆ.

---

[155] ಭಾರತೀಯ ವಿಜ್ಞಾನದ ಹಾದಿ, ಜಿ.ರಾಮಕೃಷ್ಣ, ಪ್ರಸಾರಾಂಗ, ಕ.ವಿ.ವಿ. ಹಂಪಿ. ಪು.ಸಂ.೨೦೩.

ಶರೀರವನ್ನು ಪಾದರಸ ಔಷಧಿಗಳಿಂದ ಪೋಷಿಸಿ ಚಿರಕಾಲ ಬಾಳುವಂತೆ ಮಾಡಬೇಕು. ರಸಹೃದಯದಲ್ಲಿ ಬರುವ ಕಥೆಯೊಂದು ಬರುತ್ತದೆ. ಹರ ಮತ್ತು ಗೌರಿಯರ ಪೃಷ್ಪಾತೀತ ಸಂಯೋಗದಿಂದ ಪಾದರಸ ಉತ್ಪತ್ತಿಯಾಗಿದೆಯೆಂದು ನಂಬಿಕೆ. ಪಾದರಸದಿಂದ ದಿವ್ಯ ಶರೀರವನ್ನು ಪಡೆಯುವುದಕ್ಕೆ ರಸೇಶ್ವರ ಸಿದ್ಧಾಂತದಲ್ಲಿ ಮಹೇಶ್ವರಾದಿಯಾಗಿ ದೇವತೆಗಳು, ಶುಕ್ರಾಚಾರ್ಯದಿ ದಾನವರು, ವಾಲಖಿಲ್ಯಾದಿಮುನಿಗಳು, ಸೋಮೇಶ್ವರಾದಿ ರಾಜರು, ಗೋವಿಂದ ವಾಗ್ಭಟ ಕಪಿ, ವಯಾಲಿ ಮುಂತಾದವರೆಲ್ಲ ರಸಾಯನದ ಪಾಚುಗಳಂತೆ ಪಾದರಸದಿಂದ ತಮ್ಮ ಶರೀರ ಪಾವನಗೊಳಿಸುವರು.

ಹನ್ನೊಂದನೆಯ ಶತಮಾನದ ನಂತರ ಈ ಶಾಸ್ತ್ರವು ಎಷ್ಟು ವ್ಯಾಪಕವಾಗಿ ಬೆಳೆಯಿತೆಂದರೆ ಮಾಧವಾಚಾರ್ಯನು ತನ್ನ 'ಸರ್ವದರ್ಶನ ಸಂಗ್ರಹ' ದಲ್ಲಿ ಒಂದು ಅಧ್ಯಾಯ 'ರಸೇಶ್ವರ' ದರ್ಶನ[೧೫೬] ಬಗ್ಗೆ ವಿವರಿಸಿ, ಅನೇಕ ಗ್ರಂಥಗಳಿಂದ ರಸಾಯನ ಬಗ್ಗೆ ಉಲ್ಲೇಖಿಸಿದ್ದಾನೆ. ಈ ಗ್ರಂಥದಲ್ಲಿ ಬಹಳಷ್ಟು ವಿಷಯಗಳು ಶಿವ-ಪಾರ್ವತಿಯರ ನಡುವಣ ಸಂಭಾಷಣೆ ರೂಪದಲ್ಲಿ ನಿರೂಪಿತವಾಗಿದೆ. ಹಾಗೆಯೇ ರಸಾಯನ ಶಾಸ್ತ್ರಕ್ಕೆ ಅಗತ್ಯವಾದ ವಸ್ತುಗಳು, ಅದು ಬರಿಯ ಸ್ಪರ್ಶದಿಂದ ಉಂಟಾಗುವ ಬಣ್ಣ. ಆದುದರಿಂದ ಲೋಹವನ್ನು ಹೇಗೆ ಬೇರ್ಪಡಿಸಬೇಕೆಂದು ವಿಧಾನ ಇವೆಲ್ಲ 'ರಸಾರ್ಣವ' ಎಂಬ ಗ್ರಂಥದಲ್ಲಿ ವಿವರಿಸುತ್ತದೆ.

'ರಸವರ್ಣವ' ಗ್ರಂಥದಲ್ಲಿ ಬರುವ ಪರಿಕರಗಳೆಂದರೆ ರಸಗೂ, ಉಪರಸಗಳು, ಖನಿಜ, ಜೊತೆಗೆ ಕಬ್ಬಿಣದ ಉಪಕರಣಗಳೂ, ಕಲ್ಲಿನ ಒರಳು-ಗುಂಡು, ಊದುವ ಕೊಳವೆ, ಹಸುವಿನ ಸಗಣೆ, ಉರುವಲು ಸೌದೆ, ಕಬ್ಬಿಣದ ವಿವಿಧ ಉಪಕರಣಗಳು, ಕಬ್ಬಿಣ ಪಾತ್ರೆಗಳು ಲೋಹದ ಕಲ್ಲುಗಳು ತಕ್ಕಡಿ, ಬೆಂಚಿನ ಹಾಗೂ ಕಬ್ಬಿಣದ ಕೊಳವೆಗಳೂ, ಕೊಬ್ಬು, ಆಮ್ಲ, ಷೌರಿ, ಲವಣ ಇಷ್ಟೆಲ್ಲ ಇಟ್ಟುಕೊಂಡು ರಸಾಯನಿಕ ಪ್ರಯೋಗವನ್ನು ಆರಂಭಿಸಿದರು. ಯಾವ ಮೂಲಿಕೆಯಾಗಲಿ, ಔಷಧಿಗಳಾಗಲಿ ಇಲ್ಲವೆ ಕೇವಲ ಉಪಕರಣಗಳು ಸಹಾಯದಿಂದ ಪಾದರಸ ಭಂಜಿಸಿ ಬಣ್ಣ ಬದಲಾಯಿಸಲು ಸಾಧ್ಯವಿದೆ. ಜೊತೆಗೆ ಲೋಹಗಳನ್ನು ಕೂಡ ಜ್ವಾಲೆಯಲ್ಲಿ ಹಿಡಿದಾಗ ಯಾವ ಲೋಹವೆಂಬುದು ಕಂಡು ಹಿಡಿಯಬಹುದು. ತಾಮ್ರದ ಜ್ವಾಲೆ ನೀಲಿಯಾಗುತ್ತದೆ. ತವರದ್ದ ಪಾರಿವಾಳ ಬಣ್ಣ, ಸೀಸದ್ದು ಮಾಸಲು

---

[156] ಭಾರತೀಯ ವಿಜ್ಞಾನದ ಹಾದಿ, ಜಿ.ರಾಮಕೃಷ್ಣ, ಪ್ರಸಾರಾಂಗ, ಕ.ವಿ.ವಿ. ಹಂಪಿ. ಪು.ಸಂ.೨೦೯.

ಬಣ್ಣ ಕಬ್ಬಿಣದ್ದು ಕಂದು ಹಳದಿ, ಶುದ್ಧವಾದ ಖನಿಜವನ್ನು ಮೂಸೆಯಲ್ಲಿ ಕರಗಿಸಿದರೆ ಅದರಿಂದ ಕಿಡಿಯಾಗಿರಲಿ ಶಬ್ದವಾಗಲಿ ಬರುವುದಿಲ್ಲ.

ಇದರಿಂದ ನಮಗೆ ಗೊತ್ತಾಗುತ್ತದೆ ಪ್ರಾಚೀನರು ಪ್ರಯೋಗವಿಜ್ಞಾನದ ಬಗ್ಗೆ ತಿಳಿದಿದ್ದರೆಂದು ಅಷ್ಟೇ ಅಲ್ಲ ಅವರು ರಸಾಯನವಿದ್ಯೆ ಗೊಪ್ಯವಾಗಿಯೇ ಇಡುತ್ತಿದ್ದರು. ಇಲ್ಲದಿದ್ದರೆ ಅದರ ಪರಿಣಾಮ ಕಳೆದು ಹೋಗುತ್ತದೆ ಎಂದು ನಂಬಿದ್ದರು.

ಹನ್ನೊಂದನೇ ಶತಮಾನದ ಆದಿಭಾಗದಲ್ಲಿದ್ದ ಚಕ್ರಪಾಣಿಯು ತನ್ನ ವೈದ್ಯ ವಿಜ್ಞಾನ ಗ್ರಂಥದಲ್ಲಿ ರಸಪ್ರಕಟಿಕಾ ಎಂಬ ಔಷಧನ್ನು ಸ್ವತಃ ಸಿದ್ಧಪಡಿಸಿದ್ದಾಗಿ ಹೇಳಿದ್ದಾನೆ.[೧೫೭] ಇದು ಪಾದರಸ ಒಂದು ಉತ್ಪನ್ನ ಯುರೋಪಿನಲ್ಲಿ ಪಾದರಸವನ್ನು ಔಷಧ ರೂಪದಲ್ಲಿ ಪರಿಚಯಿಸಿದವನು ಪಾರಸೆಲ್ಸಸ್ ಎಂಬುವವನು. ಇದನ್ನು ಕಂಡ ಫ್ರಾನ್ಸಿಸ್ ಪ್ರತಿನಿಧಿ ಸಭೆ ಸದಸ್ಯರು ಮತ್ತು ವೈದ್ಯರ ತಂಡ ಅವನಿಗೆ ಛಿಮಾರಿ ಹಾಕಿದ್ದರಿಂದ ಸ್ವತಃ ಬರೆದದ್ದಕ್ಕೂ ಇನ್ಯಾರೋ ಬರೆದು ತಂದುಕೊಟ್ಟಾಗ ಹೆಸರು ಹಾಕಿಕೊಳ್ಳುವುದಕ್ಕೂ ವ್ಯತ್ಯಾಸ ಇರೋದಿಲ್ಲವೆ ! ಹಾಗೆಯೇ ಸ್ವಿಟ್ಜರ್ಲೆಂಡಿನ ವ್ಯಕ್ತಿಯೊಬ್ಬ ರಸ ಸಿದ್ಧಾಂತ ಬಗ್ಗೆ ಬಾಸೆಲ್ ಎಂಬಲ್ಲಿ ಉಪನ್ಯಾಸ ನೀಡಬೇಕಾದರೆ ಅಲ್ಲಿ ಗ್ರೀಸ್‌ನ ಗಾಲೆನ ಮತ್ತು ಅರಬ್ಬಿ ದೇಶದ ಅವಿಸೆನ್ನ ಎಂಬುವವರ ಕೃತಿಗಳಿಗೆ ಬೆಂಕಿ ಹಚ್ಚಿದನಂತೆ. ಮೇಲಿನ ವಿಷಯ ಎಲ್ಲ ಕಡೆಯಲ್ಲೂ ಸಾಮಾನ್ಯ ಇಷ್ಟು ಮಾತ್ರ ನಂಬಲೇಬೇಕು, ಪಾದರಸದ ಪ್ರಯೋಗವನ್ನು ಪ್ರಾಚೀನ ಭಾರತೀಯರು ಅರಬರಿಂದ ಕಲ್ಲಿತದ್ದಲ್ಲ. ಕಾರಣವಿಷ್ಟೇ ಅರಬರಿಗೆ ಪಾದರಸವೆಂದರೆ ವಿಪರೀತ ಹೆದರಿಕೆ. ಅಲ್ಲಿಯ ತಲೀಫ್ ಶರೀಫ್ ಎಂಬುವನೊಬ್ಬ ಪಾದರಸದಿಂದ ದೂರವಿರಿ ಎಂದು ಎಚ್ಚರಿಕೆ ಕೊಟ್ಟಿದ್ದನಂತೆ ![೧೫೮]

ಈ ಮೇಲಿನ ಹೇಳಿಕೆಗೆ ಭೀನವಾಗಿ ಪ್ರಾಚೀನ ಭಾರತದ ರಾಸಾಯನಿಕ ಪ್ರಯೋಗಗಳ ಪಾಶ್ಚಾತ್ಯ ದೇಶಗಳೆ ಖ್ಯಾತಿಯನ್ನು ಗಳಿಸಿದ್ದವು. ಆದ್ದರಿಂದ ಖನಿಜವನ್ನು ಪಡೆಯುವ ಲೋಹವಿದ್ಯೆಯಲ್ಲಿ ದೊರೆತ ಯಶಕಂಡು ವಿದೇಶಗಳಲೆಲ್ಲ ಶ್ಲಾಘಿಸುತ್ತಿದ್ದಾರೆ.

ಡಮಾಸ್ಕಿಸ್‌ನಲ್ಲಿಯೇ ಕತ್ತಿಗಳ (ಖಡ್ಗ)ನ್ನ ಶ್ರೇಷ್ಠವೆಂದು ಹೊಗಳುವಾಗ ಭಾರತದಲ್ಲಿಯ ತಯಾರಾದ ಉಕ್ಕಿನಿಂದಲೇ ಆಯುದ್ಧ ತಯಾರಾಗುತ್ತಿದ್ದವೆಂಬ ಹೆಗ್ಗಳಿಕೆ ಭಾರತಕ್ಕೆ, ಒಂದು ಸಾವಿರ

---

[157] ಭಾರತೀಯ ವಿಜ್ಞಾನದ ಹಾದಿ, ಜಿ.ರಾಮಕೃಷ್ಣ, ಪ್ರಸಾರಾಂಗ, ಕ.ವಿ.ವಿ. ಹಂಪಿ. ಪು.ಸಂ.೨೦೯.
[158] ಭಾರತೀಯ ವಿಜ್ಞಾನದ ಹಾದಿ, ಜಿ.ರಾಮಕೃಷ್ಣ, ಪ್ರಸಾರಾಂಗ, ಕ.ವಿ.ವಿ. ಹಂಪಿ. ಪು.ಸಂ.೨೧೦.

ಆರುನೂರು ವರ್ಷಗಳ ಹಳೆಯದಾದ ದೆಹಲಿಯ ಕುತುಬ ಮಿನಾರ್ ಬಳಿ ತುಕ್ಕು ಹಿಡಿಯದ ಕಂಬವೊಂದಿದೆ. ಅದೊಂದೆಯಲ್ಲ, ಅಂತಹ ಅದೆಷ್ಟೋ ಅದ್ಭುತಗಳು ಅದೆಷ್ಟೋ ಇವೆ.

'ರಸರತ್ನ ಸಮುಚ್ಛಿಯಲ್ಲಿ' ವಿವರಿಸಲಾಗಿರುವಂತೆ 'ರಸಕ' ಎಂಬ ಅದುರಿನಿಂದ ಸತುವನ್ನು ಶೋಧಿಸಿ ತೆಗೆಯುವ ವಿಧಾನ ವಿವರಿಸಿದ್ದಾನೆ. ಆದರೆ ಈ ಕೆಲಸ ಎಂದಿನಿಂದ ಪ್ರಾರಂಭವಾಯಿತೆಂದು ಖಚಿತವಾಗಿ ಹೇಳಲು ಬರುವುದಿಲ್ಲ. ಆದರೂ ಕ್ರಿ.ಪೂ. ಎರಡನೇ ಶತಮಾನದಷ್ಟು ಹಿಂದಿನದೆಂದು ಒಂದು ಅಂದಾಜು.

ಪ್ರಾಚೀನ ಸಂಸ್ಕೃತಿಯಾದ ಹರಪ್ಪ ಸಂಸ್ಕೃತಿಯ ಕಾಲದಲ್ಲಿ ಬಣ್ಣದ ಮಡಕೆಗಳು ಭಾರತದಲ್ಲಿ ತಯಾರಿಸುತ್ತಿದ್ದರು. ಇದು ನಮಗೆ ಇತಿಹಾಸದಿಂದ ತಿಳಿದು ಬರುತ್ತದೆ. ಈ ರೀತಿ ಮಾಸದಿ ರಾಮಬಣ್ಣ ತಯಾರಿಸಲು ಎಂತಹ ರಸಾಯನ ಶಾಸ್ತ್ರ ಕಂಡು ಹಿಡಿದಿದ್ದನು. ಅವರು ಅದಕ್ಕೆ ರಸಾಯನ ಶಾಸ್ತ್ರವೆಂದು ಕರೆದಿದ್ದರೆ ನಮಗಂತೂ ಗೊತ್ತಿರದ ವಿಷಯ. ಆಭ್ರಕ ಮತ್ತು ಕಬ್ಬಿಣದ ಅಂಶಗಳು, ಮಣ್ಣಲೇ ಇದ್ದುವೆಂದು ಭಾವಿಸಿದರೂ ಬೇರೇನೊ ಕ್ರಮದಿಂದ ಬಣ್ಣಗಳನ್ನು ಪಡೆದಿರಬಹುದು ನಿರ್ಮಿತವಾದ ಅದೇ ಸಂದರ್ಭದಲ್ಲಿ ಹರಪ್ಪ ನಗರದ ಕರಕುಶಲ ಕರ್ಮಿಗಳು ತಾಮ್ರ, ಕಂಚು, ಸೀಸ, ಬೆಳ್ಳಿ ಮತ್ತು ಚಿನ್ನಗಳನ್ನು ತಿಳಿದಿದ್ದರು. ಅಷ್ಟಲ್ಲದೆ ಈ ಎಲ್ಲ ಲೋಹಗಳು ಬಳಸುತ್ತಿದ್ದರೆಂಬುದಕ್ಕೆ ಅಲ್ಲಿ ದೊರೆತ ಮೂರ್ತಿಗಳೇ ಸಾಕ್ಷಿ ಪುರಾವೆಗಳು. ಸಿಂಧೂ ಕಣಿವೆಯ ನಾಗರಿಕರು ಬಳಸುತ್ತಿದ್ದ ಚಿನ್ನ ಮೆದುವಾದದ್ದು, ಅಂದರೆ ಚಿನ್ನದಲ್ಲಿ ಬೆಳ್ಳಿಯ ಮಿಶ್ರಣವಿತ್ತಂತೆ. ಚಿನ್ನ-ಬೆಳ್ಳಿ ಮಿಶ್ರಿತವಾದಾಗ ಅವೆರಡನ್ನೂ ಬೇರ್ಪಡಿಸಿಲ್ಲ. ಈ ಚಿನ್ನ ಮೈಸೂರಿನ ಗಣಿಗಳಿಂದ ಪಡೆದಿರಬೇಕೆಂದು ಅಂದಾಜು ಇವತ್ತಿಗೂ ಕೂಡ ಮೈಸೂರು ಚಿನ್ನದ ಬಣ್ಣ ಹಳದಿ ಬಣ್ಣವಿರದೆ ಸ್ವಲ್ಪ ಬಿಳಿ ಬಣ್ಣಕ್ಕೆ ತಿರುಗಿರುತ್ತದೆ. ಮೊಹೆಂಜೋದಾರೋನಲ್ಲಿ ದೊರಕಿರುವ ನಾಟ್ಯ ಮೂರ್ತಿ ಕಂಚಿನದ್ದಾಗಿದ್ದು, ಅದೊಂದು ಅಚ್ಚು ತೆಗೆದ ಮೂರ್ತಿಯಾಗಿದ್ದು, ಇದರಿಂದ ಅವರಿಗೆ ಅಚ್ಚು ತೆಗೆಯುವುದು ಕಾಯಕ ತಿಳಿದಿತ್ತೆಂದು ಕಂಡು ಬರುತ್ತದೆ. ಆದರೆ ಇವರಿಗೆ ಕಬ್ಬಿಣ ತಿಳಿದಿರಲಿಲ್ಲವೆಂಬುದೇ ಒಂದು ಆಶ್ಚರ್ಯ.

ಗ್ರೀಸಿನ ಇತಿಹಾಸಕಾರ ಹೆರೋಡೋಟಿಸ್ ಕ್ರಿ.ಪೂ. ಐದನೇ ಶತಮಾನದಲ್ಲಿ ಪರ್ಷಿಯಾದ ಸೈನ್ಯದಲ್ಲಿದ್ದ ಭಾರತೀಯರು ಕಬ್ಬಿಣದ ಚೂಪನ್ನು ಬಾಣಗಳೀಗೆ ಅಳವಡಿಸಿಕೊಂಡಿದ್ದರೆಂಬು ಹೇಳಿದ್ದಾನೆ. ಭಾರತದ ಉಕ್ಕಿನಿಂದ ಮಾಡಲಾಗಿದ್ದ ಎರಡು ದೊಡ್ಡ ಕತ್ತಿಗಳನ್ನ ಪರ್ಷಿಯಾದ ರಾಜನ

ಆಸ್ಥಾನದಲ್ಲಿ ತಾನು ಪಡೆದಿದ್ದುದಾಗಿ ಕ್ತೆಸಿಯಾಸ್ ಎಂಬುವವನು ಹೇಳಿದ್ದಾನೆ. ಚಿತ್ರದುರ್ಗದ ಸುತ್ತಮುತ್ತ ಪ್ರಾಚೀನ ಕಾಲದಲ್ಲಿ ಕಬ್ಬಿಣದ ಅದುರನ್ನು ಶುದ್ಧ ಮಾಡಿ ಕಬ್ಬಿಣ ಮತ್ತು ಉಕ್ಕು ತಯಾರಿಸುವಂತಹ ಅನೇಕ ಚಿಕ್ಕ ಚಿಕ್ಕ ಕುಲುಮೆಗಳಾದವು ಎಂದು ಹೇಳಲಾಗಿದೆ. ಇನ್ನೂ ಹೆಚ್ಚಿನ ಹೆಚ್ಚಿನ ಮಾಹಿತಿಗೆ ಸಂಶೋಧನೆಗಳಾಗಬೇಕಾಗಿದೆ.

ಕೌಟಿಲ್ಯನು 'ಅರ್ಥಶಾಸ್ತ್ರದಲ್ಲಿ' ಚಿನ್ನ ಬೆಳ್ಳಿ, ಮುಂತಾದ ಲೋಹಗಳ ಬಗ್ಗೆ ಮತ್ತು ಆಭರಣಗಳ ಪ್ರಸ್ತಾಪ ಮಾಡಿದ್ದಾನೆ. ಇಲ್ಲಿ ಚರ್ಚೆಗೆ ತೆಗೆದುಕೊಂಡ ವಿಷಯಗಳು ಅನೇಕ ಇವೆ. ಆಯುರ್ವೇಧ, ಧನುವೆದ, ರಸವಾದ, ಸಂಗೀತ, ನೃತ್ಯಕಲೆ ಇತ್ಯಾದಿ ಭೂಗರ್ಭಶಾಸ್ತ್ರ, ರತ್ನಪರೀಕ್ಷೆ, ಅಶ್ವವಿದ್ಯೆ, ಗಟವಿದ್ಯ ಮುಂತಾದವು ಈ ಗ್ರಂಥ ನಿರೂಪಿಸುತ್ತದೆ. ಅಷ್ಟೇ ಅಲ್ಲ ಕೌಟಿಲ್ಯನ ಪ್ರಕಾರ ಮಾನವ ಮತ್ತು ಸಮಾಜದ ಭವ್ಯ ನಿರ್ಮಾಣ ದೇವರ ಕೈಯಲ್ಲಿ ಇಲ್ಲ. ದೈವದ ಕೈಯಲ್ಲಿ ಇಲ್ಲ ನಕ್ಷತ್ರದ ಕೈಯಲ್ಲಿ ಇಲ್ಲ. ಆದರೆ ಅದು ಮಾನವನ ಹಿಡಿತದಲ್ಲಿಯೇ ಇದೆ ಎನ್ನುತ್ತಾನೆ.

ವಿಜ್ಞಾನದ ಪದ್ಧತಿಯ ಬಗ್ಗೆ ಈ ಗ್ರಂಥದಲ್ಲಿ ಹೇಳಿಲ್ಲ. ಆದರೆ ವಿಜ್ಞಾನದ ನಾನಾ ಶಾಖೆಗಳ ಬಗ್ಗೆ, ಮಾಹಿತಿ ಒದಗಿಸಿದ್ದಾನೆ. ದೇಶದ ಯಾವ ಯಾವ ಭಾಗಗಳಲ್ಲಿ ಏನೇನು ದೊರೆಯುತ್ತದೆ ಮತ್ತು ಅವುಗಳಲ್ಲಿ ಉತ್ಕೃಷ್ಟವಾದವು ಯಾವುವು, ಮುಂತಾದ ವಿಷಯಗಳನ್ನು ಕುರಿತಂತೆ ವಿವರಿಸಿದ್ದಾನೆ. ಕೋಶಾಧಿಕಾರಿಯೂ ಕೋಶಕ್ಕೆ ಬರುವ ರತ್ನಗಳನ್ನು ಶ್ರೇಷ್ಠ ಅಥವಾ ಸಾಧಾರಣ ಪದಾರ್ಥಗಳನ್ನು ಅಭಿಜ್ಞರ ಸಮ್ಮುಖದಲ್ಲಿ ತೆಗೆದುಕೊಳ್ಳವದು[೧೫೯] ಮುತ್ತುಗಳಲ್ಲೂ ಕೂಡ ವಿಧಗಳು ಹೇಳುತ್ತಾನೆ. ತಾಮ್ರಪರ್ಣಿ ನದಿಯಲ್ಲಿ ದೊರೆತದ್ದು, ಪಾಂಡ್ಯದೇಶದ ಮಲಯಕೋಡಿ ಎಂಬ ಬೆಟ್ಟದಲ್ಲಿ ದೊರೆತದ್ದು, ಪಾಶ-ಕೌಲೆಯ ಮತ್ತು ಕೂಲದೇಶಗಳಲ್ಲಿ ದೊರೆತದ್ದು ಚೂರ್ಣ ನದಿಯಲ್ಲಿ ದೊರೆತದ್ದು, ಮಹೇಂದ್ರಪರ್ವತದಲ್ಲಿ ಸಿಕ್ಕಿದ್ದು, ಕರ್ದಮನದಿಯಲ್ಲಿ ಮತ್ತು ಹಿಮಾಲಯ ಪ್ರದೇಶದಲ್ಲಿ ದೊರೆತ್ತದೆಂದು ವಿಂಗಡಿಸಿದ್ದಾನೆ. ಕಪ್ಪೆ ಚಿಪ್ಪು, ಶಂಖ ಇವುಗಳೂ ಕೂಡ ಮುತ್ತಿನ ಮೂಲಗಳು, ಇದರಲ್ಲೂ ಅನೇಕ ವಿಧಗಳು ಮಸೂರದಂತಿರುವುದು, ಮೂರು ಕಲ್ಲುಗಳುಳ್ಳದ್ದು ಅಮೆಯಂತಿರುವುದು, ಅರ್ಧಚಂದ್ರಕಾರದ್ದು, ಅನೇಕ ಪದರುಗಳುಳ್ಳದ್ದು, ಮೇಲೆ ಒರಟಾದದ್ದು, ಕೆದರಿರುವುದು, ಚುಕ್ಕೆಗಳುಳ್ಳದ್ದು, ಇತ್ಯಾದಿ ಇವೆಲ್ಲ ಕೆಳದರ್ಜೆಯವು.

[159] ಭಾರತೀಯ ವಿಜ್ಞಾನದ ಹಾದಿ, ಜಿ.ರಾಮಕೃಷ್ಣ, ಪ್ರಸಾರಾಂಗ, ಕ.ವಿ.ವಿ. ಹಂಪಿ. ಪು.ಸಂ.೨೧೦.

ರತ್ನಗಳ ಬಗ್ಗೆ ಕೂಡ ಕೌಟಿಲ್ಯ ಹೇಳಿದ್ದಾನೆ, ವಿದರ್ಭದೇಶದಲ್ಲಿ ದೊರೆತವು, ಕೋಸಲದೇಶದಲ್ಲಿ ತಾಮ್ರ, ಕೌರವ ದೇಶದಲ್ಲಿ ದೊರೆತವು, ವೇದೋತ್ಕಟವೆಂಬ ಚಿಪ್ಪದಲ್ಲಿ ದೊರೆತದ್ದು, ಮಣಿಮಂತ ಪರ್ವತದ್ಲಲಿ ದೊರೆತವು, ಕಳಿಂಗ ದೇಶದಲ್ಲಿ ದೊರೆತವು, ಇವಿಷ್ಟು ಒಂದು ಬಗೆಯ ವಜ್ರವಾದರೆ, ಇನ್ನು ಕೆಲವು ಕಡೆ ಅವುಗಳ ಸ್ಥಾನ, ಗಣಿಗಳು, ನದಿಗಳು ಮತ್ತು ಇತರ ಸ್ಥಳಗಳು ವಜ್ರದ ಮೂಲಸ್ಥಾನಗಳು, ಅವುಗಳ ಬಣ್ಣ ಬೆಕ್ಕಿನ ಕಣ್ಣಿನಂತೆ, ಗೋಮೂತ್ರದಂತಹ ಬಣ್ಣ, ಸ್ಫಟಿಕದಂತೆ ಮತ್ತು ದಪ್ಪ ಭಾರ, ಗಟ್ಟಿ ಸಮಕೋನ ಹೊಂದಿರುತ್ತವೆ.

"ಅರ್ಥಶಾಸ್ತ್ರ"ದಲ್ಲಿ ಮುಂದುವರಿದು ಚಿನ್ನದ ಅದಿರುಗಳ ವಿವಿಧ ಬಣ್ಣಗಳು ಹಾಗೂ ಯಾವ ದ್ರವ ಬೆರೆತುಕೊಳ್ಳುತ್ತದೆ ಎಂಬುದು ಹೇಳುತ್ತಾನೆ. ಚಿನ್ನವಷ್ಟೇ ಅಲ್ಲ, ಬೆಳ್ಳಿಯ ತಾಮ್ರದ ಕಬ್ಬಿಣದ ಅದಿರುಗಳ ಬಗ್ಗೆಯೂ ಅದಿರಿನಿಂದ ಲೋಹಪಡೆಯುವ ಪದ್ಧತಿ ಅದಿರುಗಳು ಹೆಚ್ಚು ತೂಕವಾಗಿದ್ದಷ್ಟು ಅವುಗಳಲ್ಲಿ ಹೆಚ್ಚು ಪ್ರಮಾಣದ ಲೋಹವಿರುತ್ತದೆ. ಎಂದಿದ್ದಾನೆ. ಇಷ್ಟಕ್ಕೆ ಸುಮ್ಮನಾಗದೆ ಲೋಹದ ಶುದ್ಧಿಕರಣ ಕುರಿತು, ಇಷ್ಟಕ್ಕೆ ಸುಮ್ಮನಾಗದೆ ಲೋಹದ ಶುದ್ಧೀಕರಣ ಕುರಿತು ಹೇಳುತ್ತಾನೆ. ಗೋವಿನ ಹುಲ್ಲು, ಕೊಂಬುಳ್ಳ ಪುಡಿಯಿಂದ ಲೋಹ ಉಜ್ಜಿ ಲೋಹ ತೊಳೆಯಬಹುದು. ಬೆಟ್ಟದ ಇಳಿಜಾರು ಪ್ರದೇಶದಲ್ಲಿ ದೊರೆತ ತಾಮ್ರದ ಅದಿರುಗಳು ಲೋಹವಾಗಿದ್ದು, ಮೃದುವೂ, ಕಪ್ಪು ಹಳದಿ ಅಥವಾ ಕೆಂಪು ಬಣ್ಣದಿರುತ್ತದೆ. ತವರು ಸುಟ್ಟ ಬೂದಿಯ ಬಣ್ಣದ್ದಾಗಿರುತ್ತದೆಂದು ಹೇಳಿ ಕಬ್ಬಿಣದ ಅದಿರು ಕಿತ್ತಳೆ ಹಣ್ಣಿನ ಬಣ್ಣ, ಇಲ್ಲವೆ ಮುಸುಕು, ಕೆಂಪು, ಬಣ್ಣದಲ್ಲಿ ಇರುತ್ತವೆ ಎನ್ನುತ್ತಾನೆ.

ಗಣಿಗಳ ಉತ್ಪನ್ನವನ್ನು ಅವಶ್ಯವಾದ ಪ್ರಯೋಜನಗಳಿಗೆ ಉಪಯೋಗಿಸಬಹುದು. ಗಣಿಗಳಿಂದ ತಯಾರಿಸಿದ ವಸ್ತುಗಳ ವ್ಯಾಪಾರವನ್ನು ಕೇಂದ್ರಿಕರಿಸಿ, ಆ ಸ್ಥಳದಿಂದ ಬೇರೆಡೆಗೆ ಆ ಬಗೆಯ ವಸ್ತುಗಳನ್ನು ತಯಾರಿಸುವವರಿಗೂ, ಮಾರುವವರಿಗೂ, ಕೊಳ್ಳುವವರಿಗೂ ಶಿಕ್ಷೆ ವಿಧಿಸಬೇಕೆನ್ನುತ್ತಾನೆ. ಇಲ್ಲವೆ ಕಳುವಿನ, ಆರೋಪ ಇರುವವರಿಗೆ ಅಂತ್ಯದ ದುಪ್ಪಟ್ಟು ಬೆಲೆ, ದಂಡ ವಿಧಿಸಬೇಕೆನ್ನುತ್ತಾನೆ. ಈ ಮೇಲಿನ ವಿಷಯ ಇಂದು ನೆನಪಿನಲ್ಲಿಟ್ಟುಕೊಳ್ಳುವುದು ಉತ್ತಮ, ಇವತ್ತಿನ ವಿದೇಶಿ ಬಂಡವಾಳದ ಮಾಂತ್ರಿಕತೆಗೆ ಮಾರು ಹೋಗುತ್ತಿರುವ ಸಮಕಾಲೀನ ಸನ್ನಿವೇಶದಲ್ಲಿಯೂ ಈ ಮಾತುಗಳು ಸತ್ವವಾಗಿವೆ.

ಖನಿಜ ಸಂಪತ್ತಿನ ಬಳಕೆ ಯಾರಿಗಾಗಿ, ಹೇಗೆ ಬಳಕೆಯಾಗುತ್ತದೆಂಬುದನ್ನು ಗಣನೆಗೆ ತೆಗೆದುಕೊಳ್ಳದೆ ಕೇವಲ ತಂತ್ರಜ್ಞಾನದ ಅಮಲಿನಲ್ಲಿ ಮಾತನಾಡುವ ನಮ್ಮ ಇಂದಿನ ಜನತೆಗೆ ಒಂದು ಕೊಡ ನೀರು ಹಾಕಿ ಎಚ್ಚರಿಸಿದಂತಿದೆ.

ಚಿನ್ನವನ್ನು ಅದಿರಿನಿಂದ ಬೇರ್ಪಡಿಸಿ ಶುದ್ಧ ಮಾಡುವ ವಿಧಾನವನ್ನು ವಿವರಿಸುತ್ತಾ ಶುದ್ಧವಾದ ಚಿನ್ನವನ್ನು ಪತ್ತೆ ಹಚ್ಚುವ ಕ್ರಮಗಳನ್ನು ಇಲ್ಲಿ ವಿವರಿಸುತ್ತಾನೆ. ಒಡವೆಗಳನ್ನು ತಯಾರು ಮಾಡಬೇಕಾದರೆ ಅದಕ್ಕೆ ಬೆರಕೆ ಅವಶ್ಯವಾಗಿ ಬೇಕಾಗುತ್ತದೆ. ವಿವಿಧ ವಿನ್ಯಾಸದ ಆಭರಣಕ್ಕೆ ಬೆರಕೆ ಇಲ್ಲದೆ ವಿನ್ಯಾಸವಾಗಲು ಸಾಧ್ಯವಿಲ್ಲ. ಹೀಗಾದ ಮಾತ್ರಕ್ಕೆ ಬೇಕಾದಷ್ಟು ಹಾಕಿ ಬೆರಿಕೆ ಮಾಡುವಂತಿಲ್ಲ ಚಿನ್ನ ಪ್ರಮಾಣ ಹಾಗೂ ಬೆರಕೆ ಮಾಡಬೇಕಾದರೆ ಅದರದ್ದೇ ಅದೊಂದು ಪ್ರಮಾಣ ಇರುತ್ತದೆ. ಇಷ್ಟಕ್ಕೆ ಸುಮ್ಮನಾಗದೆ ಟಂಕಸಾಲೆಯ ಕಾರ್ಯವಿಧಾನ ಕೂಡ ಹೇಳುತ್ತಾನೆ.

ಜೊತೆಗೆ ಸುಮ್ಮನಾಗದ ಕೌಟಿಲ್ಯ ಅಕ್ಕಸಾಲಿಗ ಅಕ್ಕನ ಬಂಗಾರ ಕೊಡ ಬಿಡುವುದಿಲ್ಲವೆಂಬುದು ಸಾಬೀತು ಮಾಡಿ ತೋರಿಸುತ್ತಾನೆ. ಪ್ರತಿಯೊಬ್ಬ ಅಕ್ಕಸಾಲಿಗ ಚಿನ್ನವನ್ನು ಕದಿಯಲಿಕ್ಕೆ ಉಪಯೋಗಿಸುವ ಮಾರ್ಗ ಈ ರೀತಿ ಹೇಳುತ್ತಾನೆ. ಕಾಯಿಸುವ ಮೂಸೆಯಲ್ಲಿ ಲೋಹದ ಚೂರನ್ನು ಒಳಗೆ ಇಟ್ಟು, ಲೋಹದೋಸದೊಡನೆ ಚಿಮ್ಮುಟ ಇಕ್ಕಳಗಳ ಸಹಾಯದಿಂದ ಲೋಹದ ಚೂರುಗಳನ್ನು ಬಳಿಗಾರ (ಬೆಳ್ಳಿ), ತಾಮ್ರ ಮುಂತಾದವುಗಳನ್ನು ಚಿನ್ನದಲ್ಲಿ ಬೆರೆಸಿ, ಅಕ್ಕಸಾಲಿಗನ ಕೈಚಳಕದಲ್ಲಿ ಎಲ್ಲವೂ ರೂಪು ಪಡೆದು ಇಡೀ ಹೆಣ್ಣು ಪ್ರಪಂಚವನ್ನೇ ಹುಚ್ಚೇಳುವಂತೆ ಮಾಡುತ್ತಾನೆ. ಇನ್ನು ಚಿನ್ನದಲ್ಲಿಯೂ ಅದೆಷ್ಟೋ ಪ್ರಕಾರಗಳನ್ನು ಹೇಳುತ್ತಾನೆ. ಕ್ಯಾಡ್ಬರಿ, ಬಿಸ್ಕತ್ತು, ಸಿಕ್ನ ಇತ್ಯಾದಿ ಈ ಅಕ್ಕಸಾಲಿಗನ ಕೈಯಲ್ಲಿ ಏನೇನೂ ಇಲ್ಲ; ಆದರೂ ಎಲ್ಲವೂ ಇದೆ ಎಂಬುದಂತೂ ಸತ್ಯ.

ಗ್ರಾಹಕರು ಆಭರಣ ಮಾಡುವಾಗ ಅವನ ಇದುರಿಗೆ ಕುಳಿತರೂ ಕುಡ ಶುದ್ಧ ಚಿನ್ನ ನಮ್ಮೆದುರೇ ಮೇಲೆತ್ತಿ ಕೆಳಗಾಕಿ ಬದಿಗೊತ್ತಿ ಕಾಯಿಸಿ ಆರಿಸಿ ಬಡಿಯುವಾಗ ಆತನ ಕೈ ಚಳಕ ಸಮ್ಮನಿರಲಾರದು.

ಇನ್ನೂ ಚಿನ್ನದ ತೂಕ ನಾವು ಪ್ರತಿದಿನ ತರಕಾರಿ ಖರೀದಿಗೆಂದೇ ಹೋದಾಗ ತೂಕ ಬಹಳ ಸರಿಯಾದ ತೂಗಿದರೆ ಆ ತರಕಾರಿಯವನಿಗೆ ಏನು ಬಂಗಾರ ತೂಗಕತ್ತೀದಿ ಎಂದು ಅನ್ನುತ್ತೇವೆ. ನಿಜವಾಗಿಯೂ ಚಿನ್ನ ತೂಗುವಾಗ ಒಂದಿಷ್ಟು ಇರುಬಿಡೆಂದು ಹೆಚ್ಚು ಹಾಕಿ ತೂಗುವಂತಿಲ್ಲ. ಹೀಗೇನಾದರೂ ಬೀಗರು ನೆಂಟರೆಂದು ಕೈ ಬಿಟ್ಟರೆ ಆತ ಆ ಸ್ಥಳ ಬಿಟ್ಟು ದೇವಸ್ಥಾನದ ಹತ್ತಿರ ಭಿಕ್ಷೆ ಬೇಡಬೇಕಾದಿತು. ಇದರ ತೂಕಕ್ಕೆ ಒಂದು ವೈಶಿಷ್ಟ್ಯವಿದೆ. ಅದೇನೆಂದರೆ ಹವಾನಿಯಂತ್ರಿಸಿ ತೂಗಬೇಕು. ಇನ್ನೂ ಇಲೆಕ್ಟ್ರಾನಿಕ್ ತಕ್ಕಡಿಗಳು ಬಂದಿವೆ. ಇಲ್ಲಿ ಏನೇನೂ ಆಗದಂತೆ ಸರಿಯಾದ ರೀತಿಯಲ್ಲಿ ತೂಕ ಕೊಡುತ್ತದೆ. ಅದೇನೇ ಇರಲಿ ಚಿನ್ನ ಚಿನ್ನವಲ್ಲವೆ !

[illegible]

[illegible]

[illegible]

[illegible]

ಭೂಮಿಯ ಮೇಲೆ ಸಿಗುವ ನಾಲ್ಕನೇ ಅತೀ ಹೆಚ್ಚು ಲೋಹ ಕಬ್ಬಿಣ. ಬೆಳ್ಳಿಯಂತೆ ಹೊಳಪುಳ್ಳ ಲೋಹವಾದ ಕಬ್ಬಿಣ ಎಲ್ಲಾ ಲೋಹಗಳಲ್ಲೂ ಅತ್ಯಂತ ಭಾರವಾದ ಲೋಹ ಇದಾಗಿದೆ. ತಾಂತ್ರಿಕವಾಗಿ ಬಳಸಬಹುದಾದ ಕಬ್ಬಿಣದ ಅದಿರಿನಲ್ಲಿ ಬಳಸಲು ಯೋಗ್ಯವಾದ ಲೋಹದ ಪ್ರಮಾಣ ಕೇವಲ ಶೇಕಡ ೨೫ ರಿಂದ ೭೦ ಮಾತ್ರ ಪಿಗ್ ಆಯರ್ನ್‌ನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಿಲಿಕಾನ್, ರಂಜಕ ಮತ್ತು ಗಂಧಕ ಇರುವುದರಿಂದ ಅವುಗಳನ್ನು ತಟುವಿಕೆಗೆ ಒಳಪಡುವ ಕಬ್ಬಿಣವನ್ನು ವಿವರಿಸಲು ರಾಟ್ ಕಬ್ಬಿಣ ಎಂದು ಕರೆಯುತ್ತೇವೆ[೧೬೦]

ಪ್ರಾಚೀನ ಸಂಸ್ಕೃತಿಯಲ್ಲಿ ಕಬ್ಬಿಣದ ಪಾತ್ರ ಬಹಳ ಕಡಿಮೆ. ಕಬ್ಬಿಣವನ್ನು ಕರಗಿಸಿ ಅಚ್ಚಿನಲ್ಲಿ ತಯಾರಿಸಿ, ವಸ್ತುವೊಂದಕ್ಕೆ ಉದಾಹರಣೆಯಾಗಿ ಕ್ರಿ.ಪೂ. ೩ನೇ ಶತಮಾನದಷ್ಟು ಹಿಂದಿನ ಒಂದು ಚೂರಿ ದೊರೆತಿದೆ. ಉತ್ತರ ಟರ್ಕಿಯ ಅಲಾಕ್ ಹುಯುರ್, ನಾಗರಿಕತೆಯ ಅವಶೇಷಗಳ ಅಡಿಯಲ್ಲಿ ಈ ಚೂರಿ ಸಿಕ್ಕಿತು. ಇದಾದ ೮೦೦ ವರ್ಷಗಳ ನಂತರ ಏಷ್ಯಯಾ ಮೈನಕನ್ ಪೂರ್ವ ಭಾಗಗಳಲ್ಲಿ ವಾಸವಾಗಿದ್ದ ಹಿಟ್ಟೈಡಿಸ್ ಎಂಬ ಇಂಡೋ ಜರ್ಮನ್ ಜನಾಂಗ ತಾಮ್ರ ಮತ್ತು ಹಿತ್ತಾಳೆಯ ಬದಲಾಗಿ ಕಬ್ಬಿಣವನ್ನು ಬಳಸಲು ಪ್ರಾರಂಭಿಸಿದರು.[೧೬೧]

ಕ್ರಿ.ಪೂ. ೧೪೦೦ ರಲ್ಲಿ ಅರ್ಮೇನಿಯಾನ ಕಮ್ಮಾರರು ಕಬ್ಬಿಣವನ್ನು ಹೆಚ್ಚು ಉಪಯುಕ್ತವಾಗಿ ಬಗ್ಗಿಸುವ ಒಂದು ಹೊಸ ವಿಧಾನವನ್ನು ಕಂಡು ಹಿಡಿದರು.[೧೬೨] ಕಬ್ಬಿಣದ ಬಳಕೆಯ ಯಶಸ್ವಿಕತೆ ಪ್ರಾರಂಭವಾದದ್ದೇ ಇಲ್ಲಿ. ಬೆಂಕಿಯಲ್ಲಿ ಕಬ್ಬಿಣವನ್ನು ಕೆಂಪಗೆ ಕಾಯಿಸಿ, ತಕ್ಷಣ ನೀರಿನಲ್ಲಿ ತೋಯಿಸುವುದರಿಂದ ಅದು ಹೆಚ್ಚು ಗಟ್ಟಿಗೊಳ್ಳುತ್ತದೆ. ಮತ್ತು ತಟಸ್ಥ ಆಕಾರದಲ್ಲಿ ಉಳಿಯುತ್ತದೆ ಎಂಬುದನ್ನು ಕಂಡು ಹಿಡಿದರು.

ಕ್ರಿ.ಪೂ. ೧೦೦೦ ದಿಂದ ಕಬ್ಬಿಣದ ಸಂಶೋಧೆಯ ಜೊತೆಗೆ ಅನೇಕ ಬಗೆಯ ಪ್ರಾಚೀನ ಉಳುಹುಗಳ ಬೆಳವಣಿಗೆಗೂ ನಾಂದಿ ಹಾಡಿದರು. ಕ್ರಿ.ಪೂ. ೬ನೇ ಶತಮಾನದಲ್ಲಿ ಗ್ರೀಕರು ಕಬ್ಬಿಣವನ್ನು ಬಳಸಿ”[೧೫] ಆಯುದ್ಧಗಳನ್ನು ತಯಾರಿಸಿದರು. ಆಲ್ಪ್ ಮತ್ತುದನೂಬೆ ಪ್ರಾಂತ್ಯದಲ್ಲಿ “ಸೆಲ್ಟ ಜನಾಂಗ” ತಾವು ಅಪ್ರತಿಮ ಕಮ್ಮಾರರು ಎಂಬುದನ್ನು ಉಕ್ಕಿನ ಖಡ್ಗಗಳನ್ನು ತಯಾರಿಸಿ ಸಾಬೀತುಪಡಿಸಿದರು.

---

[160] ಭಾರತೀಯ ವಿಜ್ಞಾನದ ಹಾದಿ, ಜಿ.ರಾಮಕೃಷ್ಣ, ಪ್ರಸಾರಾಂಗ, ಕ.ವಿ.ವಿ. ಹಂಪಿ. ಪು.ಸಂ.೨೧೦.
[161] ಭಾರತೀಯ ವಿಜ್ಞಾನದ ಹಾದಿ, ಜಿ.ರಾಮಕೃಷ್ಣ, ಪ್ರಸಾರಾಂಗ, ಕ.ವಿ.ವಿ. ಹಂಪಿ. ಪು.ಸಂ.೨೧೦.
[162] ಭಾರತೀಯ ವಿಜ್ಞಾನದ ಹಾದಿ, ಜಿ.ರಾಮಕೃಷ್ಣ, ಪ್ರಸಾರಾಂಗ, ಕ.ವಿ.ವಿ. ಹಂಪಿ. ಪು.ಸಂ.೨೧೦.

ಎಲ್ಲಾದ್ವೀಪದ ಮೇಲೆ ರೋಮನ್ನರು ತಮ್ಮ ಮೊದಲ ಕುಲುಮೆಯನ್ನು ಕಟ್ಟಿದರು. ಈ ಕುಲುಮೆಯಲ್ಲಿನ ಪಟ್ಟಡೆಯಲ್ಲಿ ಎಡ್ರಸ್ಕನ್ ಕಮ್ಮಾರರು ಕಬ್ಬಿಣವನ್ನು ಬಡಿಯುತ್ತಿದ್ದರು.

ರೋಮನ್ ಸಾಮ್ರಾಜ್ಯದ ಸಾಮರ್ಥ್ಯ ಕಬ್ಬಿಣದಿಂದ ತಯಾರಿಸಿದ ಈ ಉಕ್ಕಿನ ಆಯುದ್ಧಗಳು ಮತ್ತು ಉಪಕರಣಗಳನ್ನು ಅವಲಂಬಿಸಿತ್ತು. ಬೇರೆ ಬೇರೆ ರೀತಿಯ ಕಬ್ಬಿಣ ಮತ್ತು ಉಕ್ಕುಗಳನ್ನು ಬೇರೆ ಬೇರೆ ಪ್ರಮಾಣದಲ್ಲಿ ಸೇರಿಸಿ ಹೊಸ ಮಿಶ್ರಲೋಹ ತಯಾರಿಸಿದರು. ಡಮಸೀನ್ ಸ್ಟೀಲ್ ಎಂದು ಕರೆಯಲಾದ ಈ ಲೋಹ ಅನೇಕ ಆಕರ್ಷಕ ವಸ್ತುಗಳ ತಯಾರಿಕೆಯಲ್ಲಿ ಹೊಸ ಆಧ್ಯಾಯ ಹಾಡಿತು. ತಾಮ್ರ ಅಥವಾ ಸತುವಿಗೆ ಹೋಲಿಸಿದರೆ ಕಬ್ಬಿಣದ ಅದಿರು ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತಿದ್ದರಿಂದ ಅದರ ಬಳಕೆ ಹೆಚ್ಚೂ ವ್ಯಾಪಕವಾಗುತ್ತಾ ಹೋಯಿತು. ಕ್ರಿ.ಪೂ. ೨ನೇ ಶತಮಾನದ ಹೊತ್ತಿಗೆ ದೈನಂದಿನ ಬದುಕು ಕಬ್ಬಿಣವಿಲ್ಲದೆ ಸಾಧ್ಯವೆ ಇಲ್ಲ ಎನ್ನುವಂತಾಯಿತು.

ಈಗ ಮನ್‌ಚಿಂಗ್ ಎಂದು ಕರೆಯಲಾಗುವ ಆಗ ದನುಚಿ ಪ್ರಾಂತ್ಯದ ಒಪ್ಪಿಡಮ್ ಪಟ್ಟಣದಲ್ಲಿ ಆಯುದ್ಧಗಳು ಮತ್ತು ಎಲ್ಲಾ ಬಗೆಯ ಉಪಕರಣಗಳು ದೊರೆತಿವೆ. ಕೊಡಲಿ, ಚಿಮುಟ, ಕತ್ತರಿ, ಅರ, ಗಾಲಿಗಳೂ, ಮೊಳೆಗಳು ಮತ್ತು ಸೂಜಿಗಳು ಇವೆಲ್ಲವೂ ದೊರೆತವು. ಆಗಿನ ರೋಮನ್ ಕಮ್ಮಾರ'ರು, ಸೃಜಿಸಿದ ವಸ್ತುಗಳು ಬಹಳ ವಿಶಿಷ್ಟ ಮತ್ತು ಪರಿಣಾಮಕಾರಿಯಾಗಿದ್ದವು.

ಕಬ್ಬಿಣವನ್ನು ಕರಗಿಸಿ ಶುದ್ಧೀಕರಿಸುವ ಕುಲುಮೆಯನ್ನು ಮೊದಲು ೧೪ನೇ ಶತಮಾನದಲ್ಲಿ ನಿರ್ಮಿಸಲಾಯಿತು. ೧೭೬೦ರಲ್ಲಿ ಶುದ್ಧೀಕರಣ ತಂತ್ರಜ್ಞಾನ ಅಭಿವೃದ್ಧಿಯಾಗುವ ತನಕ ಈ ಬೃಹತ್ ಕುಲುಮೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿರಲಿಲ್ಲ.

ಇದಾದ ನಂತರ ಕಬ್ಬಿಣದ ಉತ್ಪಾದನೆ ತಾರಕಕ್ಕೇರಿತು. ೧೮ನೇ ಶತಮಾನದಲ್ಲಿ ಕಬ್ಬಿಣ ಮತ್ತು ಉಕ್ಕಿನ ವಸ್ತುಗಳು ಕೆ.ಜಿ. ಅಥವಾ ಪೌಂಡ್‌ಗಳ ಲೆಕ್ಕದಲ್ಲಿ ಉತ್ಪತ್ತಿಯಾಗುತ್ತಿದ್ದರೆ ೧೯ನೇ ಶತಮಾನದಲ್ಲಿ ಟನ್ ಲೆಕ್ಕದಲ್ಲಿ ಉತ್ಪಾದನೆಯಾಗಲು ಪ್ರಾರಂಭವಾಯಿತು. ಕೋಟೆಯೊಳಗೆ ಕಬ್ಬಿಣದ ಬಳಕೆ ಹೆಚ್ಚಿದಂತೆ ೧೯ ಮತ್ತು ೨೦ನೇ ಶತಮಾನಗಳಲ್ಲಿ ಕೈಗಾರಿಕೆಗಳಲ್ಲಿ ಕಬ್ಬಿಣದ ಬಳಕೆ ಆಧುನಿಕ ಯುಗದ ಪ್ರಾರಂಭಕ್ಕೆ ನಾಂದಿ ಹಾಡಿತು. ಹಾಗೆಯೇ ಅಚ್ಚಾದ ರೈಲು ಹಳಿಗಳು ಕೂಡ ಬಳಕೆಗೆ ಬಂದವು.

ಕಬ್ಬಿಣ, ಪ್ರಕೃತಿಯ ಒಂದು ಅಪರೂಪದ ಕೊಡುಗೆ, ಸಾವಿರಾರು ವರ್ಷಗಳ ಕಾಲ ಸೈನ್ಯದ ಸಾಮರ್ಥ್ಯ ಹೆಚ್ಚು ಅವಲಂಬಿಸಿದ್ದು ಕಬ್ಬಿಣದಿಂದ ತಯಾರಿಸಿದ ಆಯುಧ್ಧಗಳ ಖನಿಜ ಸಂಪತ್ತಿನ ಬಗ್ಗೆ ಮರ-ಗಿಡಗಳೂ ಕೂಡ ರಹಸ್ಯ ಹೊರಹಾಕುತ್ತವಂತೆ. ಮರಗಿಡಗಳು ಭೂಗರ್ಭದಲ್ಲಿ ಅಡಗಿರುವ ರಹಸ್ಯಗಳನ್ನು ಹೊರ ಹಾಕುತ್ತವೆಯೆಂದು ದೃಢಪಟ್ಟಿದೆ. ಒಂದು ಪ್ರದೇಶದಲ್ಲಿ ಬೆಳೆಯುವ ಸಸ್ಯಪ್ರಕಾರಗಳಿಂದ ಅಲ್ಲಿ ದೊರೆಯುವ ಖನಿಜ ಸಂಪತ್ತನ್ನು ನಿರ್ಧರಿಸಲಾಗುತ್ತದೆ.

ಕೆನಡಾದ ವಿಜ್ಞಾನಿಗಳು ಬ್ರಿಟಿಷ್ ಕೊಲಂಬಿಯಾ ಪರ್ವತದ ಕೆಲವೊಂದು ಭಾರತವನ್ನು ಪ್ರಯೋಗಕ್ಕಾಗಿ ಆಯ್ದುಕೊಂಡರು. ಅಲ್ಲಿ ಬೆಳೆಯುವ ನಾನಾ ಬಗೆಯ ಸಸ್ಯಗಳನ್ನು ಬೇರು ಸಹಿತ ಕಿತ್ತು ಪ್ರಯೋಗ ಶಾಲೆಗೆ ತಂದರು. ಸಸ್ಯಗಳನ್ನು ಕತ್ತರಿಸಿ ಬೇರು ಮತ್ತು ಕೊಂಬೆಗಳನ್ನು ಬೇರೆ ಬೇರೆಯಾಗಿಟ್ಟು ಒಣಗಿಸಿದರಂತೆ. ನಂತರ ಬೇರು, ಕಾಂಡ ಮತ್ತು ಎಲೆಗಳನ್ನು ಬೆರೆ ಬೇರೆಯಾಗಿಯೇ ಸುಟ್ಟು, ಬೂದಿಯನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದರು.

ಆಗ ಕಾಂಡ ಮತ್ತು ಎಲೆಗಳಲ್ಲಿ ದೊರೆತ ಬೂದಿಯಲ್ಲಿ ಬಂಗಾರದ ಅಂಶ ಗಣನೀಯ ಪ್ರಮಾಣದಲ್ಲಿರಲಿಲ್ಲ. ಬೇರಿನಿಂದ ದೊರೆತ ಬೂದಿಯಲ್ಲಿ ಬಂಗಾರದ ಅಂಶ ಹೆಚ್ಚಿನ ಪ್ರಮಾಣದಲ್ಲಿತ್ತು. ಮರಗಿಡಗಳ ಬೇರುಗಳ ಭೂಮಿಯಲ್ಲಿ ಆಳವಾಗಿ ಇಳಿದು ಹೋಗುವುದರಿಂದ ಆ ಭಾಗದಲ್ಲಿ ಭೂಮಿಯಲ್ಲಿ ಆಳವಾಗಿ ಅಗೆಯುತ್ತಾ ಹೋದಂತೆ ಅಲ್ಲಿ ಬಂಗಾರದ ಅದಿರು ದೊರೆಯುವುದೆಂದು ಇದರಿಂದ ನಿರ್ಧರಿಸಲಾಯಿತು.

ಯುರೇನಿಯಂ ಅದಿರು ಹೆಚ್ಚಿನ ಪ್ರಮಾಣದಲ್ಲಿ ದೊರೆಯುವ ಪ್ರದೇಶದಲ್ಲಿ ಗಂಧಕ ಸಹ ಹೆಚ್ಚಿನ ಪ್ರಮಾಣದಲ್ಲಿ ಸಿಗುತ್ತದೆ. ಸಸ್ಯ ಪ್ರಪಂಚಲ್ಲಿ ಕೇವಲ ನಾಲ್ಕು ಬಗೆಯ ಸಸ್ಯಗಳು ಮಾತ್ರ ಗಂಧಕವನ್ನು ಹೀರಿಕೊಂಡು ಬೆಳೆಯುತ್ತವೆ. ಒಂದು ನಿರ್ಧಿಷ್ಟ ಪ್ರದೇಶದಲ್ಲಿ ಈ ನಾಲ್ಕು ಬಗೆಯ ಮರಗಳ ಬೆಳವಣಿಗೆ ಮಾತ್ರ ಹೆಚ್ಚಾಗಿದ್ದರೆ ಆ ಭಾಗದಲ್ಲಿ ಯುರೇನಿಯಂ ಅದಿರು ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತದೆ ಎಂದು ಅರ್ಥ.

ಅರಿಜೋನಾದ ಸ್ಯಾನ್ ಮ್ಯಾನುವಲ್ ಎಂಬಲ್ಲಿ ಎರಡು ವಿಧವಾದ ಓಕ್ ಮರಗಳು ಸಮೃದ್ಧವಾಗಿ ಬೆಳೆದಿದ್ದು, ಸಂಶೋಧಕರ ಗಮನ ಸೆಳೆಯಿತು. ಸಸ್ಯ ಶಾಸ್ತ್ರದ ಪ್ರಕಾರ ತಾಮ್ರದ ಅಂಶ ದೊರೆಯುವಲ್ಲಿ. ಮಾತ್ರ ಓಕ್ ಮರಗಳು ಇಷ್ಟು ಸಮೃದ್ಧವಾಗಿ ಬೆಳೆಯುಬಲ್ಲವು. ಆದುದರಿಂದ ಸ್ಯಾನ್

ಮ್ಯಾನುವೆಲ್ ಪ್ರದೇಶದಲ್ಲಿ ತಾಮ್ರದ ಅದಿರು ದೊರೆಯುತ್ತದೆಂದು ನಿರ್ಧರಿಸಿದರು. ಇಂದು ಅರಿಜೋನಾದಲ್ಲಿ ಸ್ಯಾನಮ್ಯಾನುವೆಲ್ ಗಣಿಯು ಅತ್ಯಂತ ಸಮೃದ್ಧ ತಾಮ್ರದ ಗಣಿಯೆಂದು ಹೆಸರು ಪಡೆದಿದೆ.

ಯಾವುದೇ ಪ್ರದೇಶದಲ್ಲಿ ಯಾವುದೇನಿಕ್ಷೇಪ ಅಸ್ತಿತ್ವ ಅರಿಯಬೇಕಾದರೆ ಆ ಪ್ರದೇಶದ ಕಲ್ಲು, ಮಣ್ಣುಗಳನ್ನು ಪರೀಕ್ಷಿಸಿ, ಪ್ರಯೋಗಳಿಗೆಂದು ಭೂಮಿಯನ್ನು ಅಗೆಯಬೇಕಾದರೆ ತುಂಬಾ ಹಣ ಹಾಗೂ ಸಮಯ ವೆಚ್ಚವಾಗುತ್ತದಯಲ್ಲವೇ? ಭೂ ಸಸ್ಯ ಶಾಸ್ತ್ರ ಈ ವೆಚ್ಚವನ್ನು ಉಳಿತಾಯ ಮಾಡುತ್ತದೆ. ಈ ರೀತಿ ಅನೇಕ ವಿವಿಧ ಖನಿಜಗಳ ಪತ್ತೆಗೆ ಸಸ್ಯಗಳೂ ತುಂಬಾ ಉಪಯುಕ್ತವಾಗಿವೆ.

ಪ್ರಾಚೀನ ಭಾರತದ ಹಲವು ಶಾಸ್ತ್ರಜ್ಞರು ಶಾಸ್ತ್ರೀಯ ಅನ್ವೇಷಣೆಯಲ್ಲಿ ಪ್ರಯೋಗದ ಮಹತ್ವವನ್ನು ಎತ್ತಿ ಹಿಡಿದರು. ಆಯುರ್ವೇದ ಶಾಖೆಯಲ್ಲಿ ಚಿಕಿತ್ಸೆ, ನಿಧಾನ, ಶಸ್ತ್ರಕ್ರೀಯೆ ಮೊದಲಾದವರನ್ನು ರೂಢಿಸಿಕೊಳ್ಳಬೇಕಾದರೆ.

ಖನಿಜಗಳು ಮತ್ತು ವಚನಕಾರರು.

ಖನಿಜ ಸಂಪತ್ತಿಗೆ ಮೂಲ (ತಳ) 'ಮಣ್ಣೇ' ಆಗಿದೆ. ಆದ್ದರಿಂದ ಭೂಮಿಯಲ್ಲಿರುವ ಎಲ್ಲ ಖನಿಜಗಳ ಕುರಿತು ಬಸವಣ್ಣನ ವಚನವೊಂದು, ಹೀಗೆ ಅರ್ಥೈಸಬಹುದು. "ಮಡಕೆಯ ಮಾಡುವಡೆ ಮಣ್ಣೇಮೊದಲು"[18] ಅಂದರೆ ಯಾವ ಯಾವ ಕಚ್ಚಾಪದಾರ್ಥದಿಂದ ಏನೇನು ತಯಾರಿಸಬಹುದು ಎಂಬುದನ್ನು ಹೀಗೆ ಹೇಳಿದ್ದಾರೆ.

ಮಡಿಕೆ ಮಾಡಲು ಮಣ್ಣೇ ಬೇಕು, ನಮ್ಮ ಪ್ರಾಚೀನಕಾಲದ ಜನ ಮಣ್ಣಿನ ಪಾತ್ರೆಯಲ್ಲಿಯೇ ಹಾಲು ಮೊಸರು ಜೊತೆಗೆ ತುಪ್ಪ ಕೂಡ ಮಡಕೆಯಲ್ಲಿಯೇ ಶೇಖರಿಸಿಡುತ್ತಿದ್ದರು. ಆ ಮಡಿಕೆಗಳು ಮುಕ್ಕಾದರೂ ಹಾಗೆಯೇ ಬಳಸುತ್ತಿದ್ದರು. ಕಾರಣ ಹೊಸಮಡಕೆ ಉಪಯೋಗುಸುವುದಾದರೆ ಒಂದು ತಿಂಗಳವರೆಗೆ ಆ ಮಡಿಕೆ ಹಾಲು ಮೊಸರು ತುಪ್ಪ ಕುಡಿಯುವುದೆಂದು ಹಳೆಯದಾದಷ್ಟು ಶುದ್ಧವಾಗುವುದೆಂದು ತಿಳಿದಿದ್ದರು.

"ತೊಡಿಗೆಯ ಮಾಡುವಡೇ ಹೊನ್ನೇ ಮೊದಲು"[೧೬೩] ಇವತ್ತಿನ ದಿನಗಳಲ್ಲಿ ಆಭರಣಗಳ ತಯಾರಿಕೆಗೆ ಎಲ್ಲ ಲೋಹಗಳು ಬಳಸುತ್ತೇವೆ. ಇದು ಇಂದಿನ ಎಲ್ಲ ಯುವತಿಯರಿಗೆ ಬಹಳ ಆಕರ್ಷಿಸುತ್ತವೆ. ಆದರೆ ಪ್ರಾಚೀನ ಕಾಲದಲ್ಲೂ ಕೂಡ ಆಭರಣಕ್ಕೆ ಬಹಳ ಬೇಡಿಕೆ ಇತ್ತು. ಹಿಂದಿನ ಕಾಲದಲ್ಲಿ ಹೆಣ್ಣುಮಕ್ಕಳು ಉಡುತ್ತಿದ್ದ ಸೀರೆಗಳಲ್ಲಿ ಕೂಡ ಚಿನ್ನ ಬೆಳ್ಳಿಯ ಎಳೆಗಳು ಹಾಕಿ ನೇಯುತ್ತಿದ್ದರು. ಆಗಿನ ಕಾಲದಲ್ಲಿ ಸೀರೆಗಳನ್ನು ಮಾರಿ ಅದೆಷ್ಟೋ ಜನರು ವಿದ್ಯಾಭ್ಯಾಸಕ್ಕೆ ಹಣ ತೆಗೆದುಕೊಂಡವರಿದ್ದಾರೆ.

ವಚನಕಾರರು ಚಿನ್ನ ಇಷ್ಟಪಡಲಿಲ್ಲ. ಮಣ್ಣನನ್ನು ಇಷ್ಟಪಟ್ಟರು. ಕಾರಣ ಚಿನ್ನದಿಂದ ಮತ್ತೆ ಉಳ್ಳವ-ಇದಲ್ಲದವರೆಂಬ ವರ್ಗ ಸೃಷ್ಟಿಯಾಗುತ್ತವೆ. ವಚನಕಾರರ ಮೂಲ ಧ್ಯೇಯ ಈ ತಾರತಮ್ಯ ಹೋಗಲಾಡಿಸುವದೇ ಆಗಿದೆ. ಮತ್ತು ಭೂಮಿಯ ಹೊಟ್ಟೆ ಅಗೆದು ಚಿನ್ನ ತೆಗೆಯುವುದರೊಂದಿಗೆ ಅದು ಶುದ್ಧ ಮಾಡಬೇಕಾದರೆ ಪರಿಸರದ ಮೇಲೆ ಪರಿಣಾಮ ಬೀರುತ್ತದೆ ಎಂದು ವಚನಕಾರರಿಗೆ ಗೊತ್ತಿತ್ತು. ಆದರೂ ಮಣ್ಣನ್ನು ಇಷ್ಟಪಟ್ಟರು. ಕಾರಣ ಕೃಷಿಕ್ಷೇತ್ರಕ್ಕೆ ಉತ್ತೇಜನ ಕೊಡಬೇಕೆಂದು ಮತ್ತು ಇಡಿ ಕೋಟಿ ಜನರ ಹೊಟ್ಟೆಗೆ ಆಹಾರ ಒದಗಿಸುವ ಉದ್ದೇಶದಿಂದ.

ಪ್ರಾಚೀನ ಕಾಲದಲ್ಲಿ ಆಭರಣಕ್ಕೆ ರಾಜರಾಣಿಯರೂ ತುಂಬಾ ಇಷ್ಟಪಡುತ್ತಿದ್ದರು. ಇದನ್ನು ಗಮನಿಸುವುದಾದರೆ ಬೇಲೂರಿನಲ್ಲಿ ಹೊಯ್ಸಳರ ಕಾಲದ ಒಂದು ಕಂಬದ ಮೇಲೆ ತುಂಬೆಲ್ಲ ಬಳೆಗಳ ವಿವಿಧ ವಿನ್ಯಾಸ ನೋಡಬಹುದು. ಬಸವಣ್ಣ ಮುಂದಿನ ವಚನದಲ್ಲಿ "ಕೋಡಗವ ಪರುಷ ಮುಟ್ಟಲು" ಮಂಗನಿಗೇನು ಗೊತ್ತು ಮಾಣಿಕ್ಯದ ಬೆಲೆ ಎಂಬ ಮಾತು ಎಲ್ಲರಿಗೂ ಗೊತ್ತು. ಪುರುಷದಿಂದ ಮುಟ್ಟಿದ್ದೆಲ್ಲ ಚಿನ್ನವಾಗಬಹುದು. ಆದರೆ ಎಲ್ಲವೂ ಚಿನ್ನವಾದರೆ ಹೇಗೆ. ಅದರಿಂದ ಜನಸಾಮಾನ್ಯರ ಬದುಕು ಸಾಧ್ಯವೇ ಅದು ತಿನ್ನಲುಬಾರದು. ಆದರೆ ಅದನ್ನು ಮಾರಿ ಬೇಕಾದ ಪದಾರ್ಥಕೊಳ್ಳಬಹುದು. ಬೇಕಾದ ಪದಾರ್ಥವೆಂದರೆ ಮತ್ತೆ ಅನ್ನ-ಅರಿವೆ. ಅನ್ನಕ್ಕೆ ಪುನಃ ಕೃಷಿ ಅವಲಂಬನೆ. ಅರಿವೆಗೆ-ಹತ್ತಿ, ನೂಲಿನ ಕೃಷಿ ವಚನಕಾರರು ಮೈಮುರಿದು ದುಡಿಯುವದನ್ನು ಕಲಿಸಿಕೊಟ್ಟರು ಅವರು ಹೇಗೆ ದುಡಿದರು ಎಂಬುದಕ್ಕೆ "ತನುವ ತೋಂಟವ ಮಾಡಿ ಮನವಗುದ್ದಲಿ ಮಾಡಿ" ಕೃಷಿ ಚಟುವಟಿಕೆ ಪ್ರಾರಂಭ ಮಾಡಬೇಕಾದರೆ ಮೊದಲು ಹೊಲ ಹಸನು ಮಾಡಬೇಕು. ಕಳೆ-ಕಸ ರೆಂಟೆ ಕುಂಟೆಯಿಂದ ಹೊಲ ಹಸನಾಗಿ ಮಾಡಿ ಒಳ್ಳೆಯ ಬೀಜ ಬಿತ್ತಿದಾಗ ಒಳ್ಳೆಯ ಬೆಲೆ ಬರಲು ಸಾಧ್ಯ.

---

[163] ಬಸವಣ್ಣನವರ ವಚನ ಸಂ.೧ ಸಂ. ಎಮ್.ಎಮ್.ಕಲಬುರ್ಗಿ.

ವಚನಗಳಲ್ಲಿ ಕಬ್ಬಿಣ :

"ಕುಂಬಳದ ಕಾಯಿಗೆ ಕಬ್ಬುನದ ಕಟ್ಟುಕಟ್ಟೊಡೆ"[164] ಕುಂಬಳದ ಮಿಡಿಗೆ ಕಬ್ಬುನದ ಕಟ್ಟು ಕಟ್ಟಿದರೆ ಅದು ಮೈಚಾಚಿ ಬೆಳೆಯಲು ಹೇಗೆ ಸಾಧ್ಯ ಅದು ಕೊಳೆತು ನಾರುತ್ತದೆ. ಕುಂಬಳ ಎಷ್ಟು ನಾಜೂಕಾದ ಕಾಯಿಯೆಂಬುದಕ್ಕೆ ಬಲಿತ ಕುಂಬಳಕಾಯಿ ಕೂಡ ಬಳ್ಳಿಯಿಂದ ಬೇರ್ಪಡಿಸಿ ಬಂದರೆ ಮುಚ್ಚಿಟ್ಟರೆ ಅದು ಕೊಳೆತು ನಾರುತ್ತದೆ. ಇನ್ನೊಂದು ವಚನದಲ್ಲಿ ಹೀಗೆ ಹೇಳುತ್ತಾನೆ. "ಅಳೆವುತ್ತ ಅಳೆವುತ್ತ ಬಳಲುವರಲ್ಲದೆ, ಕೊಳಗ ಬಳಲುವುದೆ" ನಮ್ಮಲ್ಲಿ ಕೊಳಗ (ಸೇರು)ದಿಂದ ದವಸ ಧಾನ್ಯ ಅಳೆಯುತ್ತಾರೆ. ಸೇರು, ಆರಣ, ಒಮ್ಮನ, ಇಮ್ಮನ ಹೀಗೆ ಅಳೆಯುತ್ತಾ ಅಳೆಯುತ್ತಾ ಅಳೆಯುವವರಿಗೆ ಆಯಾಸವಾಗುತ್ತದೆ. ವಿನಃ ಸೇರಿಗೆ ಆಯಾಸ ಬಳಲಿಕೆಯಾಗುತ್ತದೆಯೇ ನಡೆವುತ್ತ ನಡೆವುತ್ತ ಕಾಲು ನೋಯುತ್ತದೆ ವಿನಃ ಶರೀರ ಸವೆಯುವುದೆ?

ಶ್ರಮವ ಮಾಡುತ್ತ ಮಾಡುತ್ತ ದೇಹ ಬಳಲುತ್ತಿದೆಯಲ್ಲದೆ ಶ್ರಮಕ್ಕೆ ಪೂರಕವಾದ ವಸ್ತು ಆಯುಧ ಬಳಲುವುದೇ ? ಇದರೊಂದಿಗೆ ಭೂಮಿಯಲ್ಲೆಲ್ಲ ಖನಿಜವೇ ಇದೆ. ತೆಗೆಯುವ ಮಾನವರೇ ಆಯಾಸಪಡುತ್ತಾರೆ. ಆದರೆ ಭೂಮಿಯ ಒಡಲನ್ನು ಬಗೆದು ಬೇಕಾಬಿಟ್ಟಿ ಬಳಸದೇ ಅವಶ್ಯವಿದ್ದಲ್ಲಿ ಮಾತ್ರ ಬಳಸಬೇಕು.

ಪ್ರಾಚೀನ ಕಾಲದಿಂದಲೂ ಖನಿಜಗಳಿಂದ ತಯಾರಾದ ಪ್ರತಿಯೊಂದು ವಸ್ತುಗಳನ್ನು ಪೂಜಿಸುತ್ತಾ ಬಂದಿದ್ದಾರೆ. ಕಾರಣ ಪೂಜಿಸುವುದರ ಮುಖಾಂತರ ಖನಿಜವನ್ನು ಹಾಳುಗೆಡುಹುದೇ ಜೋಪಾನವಾಗಿಡುವುದು ಹೇಳಿಕೊಂಡು ಬಂದಂತಿದೆ. ಕಬ್ಬಿಣದಿಂದ ಮತ್ತು ಕಂಚಿನಿಂದ ತಯಾರಿಸಿದ ಈ ಕೊಳಗಕ್ಕೆ ನಮ್ಮಲ್ಲಿ ವಿಶೇಷವಾದ ಸ್ಥಾನವಿದೆ. ರೈತ'ರು, ವ್ಯಾಪಾರಿಗಳು ಪ್ರತಿ ಅಮವಾಸ್ಯೆ, ಹಬ್ಬ ಹರಿದಿನಗಳಂದು ಪೂಜೆ ಮಾಡುತ್ತಾರೆ. ಜೊತೆಗೆ ಕೊಳಗಳಲ್ಲಿ ಧಾನ್ಯ ಅಳೆದ ಮೇಲೆ ಎರಡೇ ರಾಶಿಯಾದರೂ ಕೊಳಗದಲ್ಲಿ ಹಾಕಿಡುತ್ತಾರೆ? ಧಾನ್ಯ ಅಳೆದು ಕೊಳಗ' ಬರಿದಾಗಿಟ್ಟರೆ ಮನೆಯ ದವಸ ಧಾನ್ಯ ಬರಿದಾಗುತ್ತದೆಂಬ ನಂಬಿಕೆಯೊಂದಿದೆ ಹಳ್ಳಿಗರಲ್ಲಿ.

---

[164] ಬಸವಣ್ಣನವರ ವಚನ ಸಂ.೧ ಸಂ. ಎಮ್.ಎಮ್.ಕಲಬುರ್ಗಿ, ವ.ಸಂ.೯೨, ಪು.ಸಂ.೨೬.

"ಕಬ್ಬುನದ ಗುಂಡಿಗೆಯಲ್ಲಿ (ರಸದ) ಭಂಡವ ತುಂಬಿ"[89] ಎಂಬ ಮಾತನ್ನು ಗಮನಿಸಿದರೆ ವಚನಕಾರರಿಗೆ ಲೋಹಗಳ ಬಗ್ಗೆ ಪರಿಜ್ಞಾನ ಇರುವುದು ಗೊತ್ತಾಗುತ್ತದೆ.! ಕಬ್ಬಿಣದ ಕೊಡದಲ್ಲಿ ರಸದ ಭಂಡ ಅಂದರೆ ಯಾವುದೇ ರೀತಿಯ ಪದಾರ್ಥ ಅಂದರೆ ಚಿನ್ನ ಬೆರಿಸಿದರೆ ಅದು ಬೆರೆತುಕೊಳ್ಳತ್ತದೆಯೋ! ಕಬ್ಬಿಣದೊಂದಿಗೆ ಚಿನ್ನ, ತಾಮ್ರ, ಕಂಚು ಇಂತಹ ಯಾವ ಲೋಹವೂ ಬೆರೆಯುವುದಿಲ್ಲ. ಹಾಗೇನಾದರೂ ಬೆರೆತರೆ ಅದು ಕಬ್ಬಿಣದ' ಪಾತ್ರೆಯಲ್ಲಿ 'ಸುರೆ ತುಂಬಿದಂತೆ' ಅಂದರೆ ಅದು ವಿಷವಾಗುತ್ತದೆ.

ಆದರೆ ಪ್ರಾಚೀನ ಕಾಲದಿಂದಲೂ ಹೈನುಗಾರಿಕೆಯಲ್ಲಿ ಒಂದೂರಿನಿಂದ ಇನ್ನೊಂದೂರಿಗೆ ಹಾಲು ಮಾರಾಟಗಾರರೂ ಕಬ್ಬಿಣದ ತೆಳು ತಗಡುಗಳಿಂದ ನಿರ್ಮಿಸಿದ 'ಕೊಡ'ಗಳನ್ನೇ ಬಳಸುತ್ತಾರೆ. ತಾಮ್ರ ಹಿತ್ತಾಳೆ ಪ್ರಾತ್ರೆಗಳು ಹೆಚ್ಚಾಗಿ ಉಪಯೋಗಿಸುತ್ತಿರಲಿಲ್ಲ. ಕಾರಣ ಆ ಲೋಹ ಬಹಳ ಬೆಲೆಬಾಳುವುದೆಂದಿರಬಹುದು ! ಮತ್ತು ತಾಮ್ರ-ಹಿತ್ತಾಳೆ ಪಾತ್ರೆಗಳಿಗೆ ಬಿಳಿಲೋಹ (ಜರ್ಮನ್) ದ ಕಲಾಯಿ ಮಾಡಿದರೆ ಮಾತ್ರ ಹಾಲು ಪಾಕ (ಬೆಲ್ಲದ), ಮೊಸರು, ಇದರಲ್ಲಿಡಲು ಬರುತ್ತದೆ. ಇಲ್ಲದಿದ್ದರೆ ವಿಷವಾಗುತ್ತದೆ (ಕಿಲುಮು). ಆದ್ದರಿಂದ ಇವತ್ತಿಗೂ ಕೂಡ ಕಬ್ಬುನದ ಕೊಡ (ಗುಂಡಿಗೆ)ಗಳು ಹೆಚ್ಚಾಗಿ ನಮ್ಮ ಕೃಷಿಕರು ಬಳಸುತ್ತಾರೆ.

ಮುಂದುವರೆದು ಅಲ್ಲಮ ಚಿನ್ನ ಮತ್ತು ಕಬ್ಬಿಣಕ್ಕಿರುವ ವ್ಯತ್ಯಾಸ ಹೇಳುತ್ತಾನೆ. 'ಹೊನ್ನು ತೂಗುವ ತಕ್ಕಡಿಯಲ್ಲಿ ಒಂದು ಕಡೆ ಹೊನ್ನು, ಇನ್ನೊಂದು ಕಡೆ ಆ ಹೊನ್ನಿಗೆ ಸಮತೂಕದ ಕಲ್ಲು ತೂಗಿದರೆ ಎರಡೂ ಸಮ ಅಂದ ಮಾತ್ರಕ್ಕೆ ಆ ಕಲ್ಲು ಹೊನ್ನಿಂಗೆ ಬೆಲೆಯಲ್ಲಿ ಸಮನಾಗದು. ಕಲ್ಲು ಕಲ್ಲೆ ! ಹೊನ್ನು ಹೊನ್ನೇ !.

ಅಂದರೆ ಹೆಣ್ಣು ಮಕ್ಕಳಿಗೆಲ್ಲ ಇಷ್ಟವಾದ ಹಳದಿಲೋಹ (ಚಿನ್ನ)ಕ್ಕೆ ಯಾವ ಲೋಹವೂ ಸಮನಾಗಲು ಸಾಧ್ಯವಿಲ್ಲ' ಅಂದರೆ ಅತಿ ಹೆಚ್ಚಿನ ಜನ ಬಳಸುತ್ತಾರೆ. ಮಧ್ಯಮ ಮೇಲ್ವರ್ಗ ವೆನ್ನದೇ ಅವರವರ ಯೋಗ್ಯತೆಗೆ ತಕ್ಕ ಹಾಗೆ ಆಭರಣಗಳು ತಯಾರಿಸಿ ಹಾಕಿಕೊಳ್ಳುತ್ತಾರೆ. ಆದರೇ ಪ್ರಾಚೀನ ಕಾಲದಿಂದಲೂ ಆಭರಣಗಳು ಬಳಸುತ್ತಾರೆ. ಅಂದು ಹೆಚ್ಚಾಗಿ ಪಂಚಲೋಹದ ಆಭರಣಗಳೇ ಇದ್ದವು. ಇಂದು ಶ್ರೀಮಂತ ಜನ 'ಪ್ಲಾಟಿನಂ' ನಂತಹ ಅತಿ ಹೆಚ್ಚಿನ ಬೆಲೆಯುಳ್ಳ ಆಭರಣ ಭರಿಸುತ್ತಾರೆ. ಇಂತಹ ಜನರನ್ನು ಕಂಡ ವಚನಕಾರರು ಮಣ್ಣನ್ನು ಪ್ರೀತಿಸಿದರು, ಪೂಜಿಸಿದರು. ಆದರೆ ಹೊನ್ನನ್ನಲ್ಲ. ಹೊನ್ನು ಹೊರತೆಗೆಯಬೇಕಾದರೆ ಅದೆಷ್ಟೋ ಭೂಮಿಯ ಹೊಟ್ಟೆ ಬಗಿಯಬೇಕಲ್ಲವೆ !

ವಚನಗಳಲ್ಲಿ ಚಿನ್ನ :

"ಪರುಷ ಮುಟ್ಟಿದ ಬಳಿಕ ಕಬ್ಬುನವಾಗಹದು ನೋಡಾ"[೧೬೫] ಕಬ್ಬಿಣಕ್ಕೆ ಒಂದು ಸಲ ಸ್ಪರ್ಶಮಣಿ ಮುಟ್ಟಿದ ಮೇಲೆ ಕಬ್ಬಿಣವು ಬಂಗಾರವಾದದ್ದು ಪುನಃ ಆ ಬಂಗಾರವು ಕಬ್ಬಿಣವಾಗಲಾರದು. ಕಬ್ಬುನ ಚಿನ್ನವೆಂದೂ ಆಗದು. ಆದರೂ ವಚನಕಾರರು ಹೀಗೆ ಹೇಳಲು ಕಾರಣ ಅಜ್ಞಾನಿಯಾದವನೊಮ್ಮೆ ಒಳ್ಳೆಯವನಾದರೆ ಆತ ಎಂತಹ ಪರಿಸ್ಥಿತಿಯಲ್ಲೂ ತನ್ನ ಮೊದಲಿನ ಗುಣ ಹೊರಹಾಕಬಾರದೆಂದು ಅವರ ಅಭಿಪ್ರಾಯವಾಗಿತ್ತು. ಇದಕ್ಕೆ ಹೊಂದಿಕೆಯಾಗುವಂತೆಯೋ- "ಕರಗಿಸಿ ಎನ್ನಮನದ ಕಾಳಿಕೆಯ ಕಳೆಯಯ್ಯಾ ಒರೆಗೆ ಬಣ್ಣಕ್ಕೆ ತಂದೆನ್ನ ಪುಟವನ್ನಿಕ್ಕಿ ನೋಡಯ್ಯಾ"[೧೬೬] ಭೂಮಿಯಿಂದ ಮಣ್ಣಮರೆಯಲ್ಲಿದ್ದ ಚಿನ್ನ ಹೊರತರಬೇಕಾದರೆ ಅದೆಷ್ಟು ಕಷ್ಟ ಅಲ್ಲವೇ ?

ಅಪ್ಪಟ್ಟ ಪುಟವಿಟ್ಟ ಚಿನ್ನವಾಗಬೇಕಾದರೆ ಶುಚಿಗೊಳಿಸಿ ಬೆಂಕಿಯಲ್ಲಿ ಹಾಕಿದರೆ ಅದು ಕಪ್ಪಾಗಬಾರದು ಶುದ್ಧವಾಗಿಯೇ ಇರಬೇಕು. ಅಷ್ಟು ಪರಿಶುದ್ಧ ಮನಸ್ಸನ್ನು ಕರುಣಿಸೆಂದು ಹೇಳುತ್ತಾನೆ. ಜೊತೆಗೆ ಅಪ್ಪಟ ಹಳದಿ ಬಣ್ಣದಾಗಿಸು (ಒರೆ) ವಂತೆ ಕೇಳಿ ಪುನಃ ಕಾಸಿ ಬಡಿದು ಒಡವೆ ಮಾಡಿದಾಗ ಶರಣದ ಆಸೆಯಂತೆ ಕೂಡಲಸಂಗಮದೇವನ ಕಾಲಲ್ಲಿ 'ಪೆಂಡೆ'ಯನು ಮಾಡಿ ತೊಟ್ಟುಕೊಂಡಾಗ ಭಕ್ತರ, ಶಿವಶರಣರ ಭಕ್ತಿ ಸಾರ್ಥಕವೆನ್ನುತ್ತಾರೆ.

ಪೆಂಡ ಅನ್ನುವ ಪದ ನೋಡಿದಾಗ ವಚನಕಾರರಿಗೂ ಒಡವೆಗಳ ಬಗ್ಗೆ ಮತ್ತು ಸೌಂದರ್ಯ ಪ್ರಜ್ಞೆ ಇತ್ತೆನ್ನುವುದಕ್ಕೆ ಇದೊಂದೇ ಪದ ಸಾಕು. ಪೆಂಡೆ ಬಳಸಿದ್ದು ವಚನಕಾರ ಬಸವಣ್ಣ ! ಅಂದರೆ ಬಸವಣ್ಣ ಮಂತ್ರಿಯಾಗಿದ್ದನಲ್ಲ ! ಪೆಂಡೆ ತೊಟ್ಟರೆ ಅದೊಂದು ಘನತೆ ಅದಕ್ಕೆಂದೇ ಇರಬೇಕು "ತಾನು ಕೂಡಲಸಂಗಮದೇವನ 'ಬಲಗಾಲ ಪೆಂಡೆ'ಯಾಗಬೇಕೆಂದಿದ್ದಾನೆ"[೧೬೭]

ರತ್ನಾಕರವರ್ಣಿಯು ಭರತೇಶನ್ನು ವರ್ಣಿಸುವಾಗ 'ಎಡಗೈ ಮುಲಗಿನ ಮೇಲೂರಿ ಪೆಂಡೆಯ ಬಲಗಾಲ ಗದ್ದುಗೆಯ ಮೇಲೊಮ್ಮೆ ನೆಲದ ಮೇಲೊಮ್ಮೆ ಇಡುವ ವರ್ಣನೆ ಬರುತ್ತದೆ. ಅಂದರೆ ಅರಸು ಮನೆತನದವರು, ಮಂತ್ರಿವರ್ಯರು ಹಾಕಿಕೊಳ್ಳುವ ಪೆಂಡೆ ಬಸವಣ್ಣನೂ ಹಾಕಿಕೊಂಡಿದ್ದಕ್ಕೆ ಈ ವಚನವೇ ಸಾಕ್ಷಿ.

---

[165] ಬಸವಣ್ಣನವರ ವಚನ ಸಂ.೧ ಸಂ. ಎಮ್.ಎಮ್.ಕಲಬುರ್ಗಿ, ವ.ಸಂ.೧೩೭, ಪು.ಸಂ.೩೬.
[166] ಬಸವಣ್ಣನವರ ವಚನ ಸಂ.೧ ಸಂ. ಎಮ್.ಎಮ್.ಕಲಬುರ್ಗಿ, ವ.ಸಂ.೨೫೧, ಪು.ಸಂ.೬೨.

ಈ ಮೇಲಿನಂತೆ ವೈಭೋಗದಿಂದ ಬದುಕಬೇಕಾದರೆ, ಕೂಡಲಸಂಗಮನ ದಯೆ ಬೇಕು ಎಂಬುದನ್ನು ಆತನೂ ಒಪ್ಪಿಕೊಳ್ಳುತ್ತಾನೆ. 'ಕಾಣಬಹುದೆ ಪರುಷದ ಗಿರಿ ಅಂಧ ಕಂಗೆ ?

'ಗುಲಬರ್ಗಾ ಜಿಲ್ಲೆಯಲ್ಲಿ ವಜ್ರದ ನಿಕ್ಷೇಪ ಪತ್ತೆ" ![೧೬೭] ಇಂತಹ ನಿಕ್ಷೇಪಗಳು ದೊರೆಯುವುದರೊಮದಿಗೆ ಮನುಷ್ಯ ಅತಿ ಸ್ವಾರ್ಥನಾಗುವಲ್ಲಿ ಎರಡಿಲ್ಲ. ಇದೆಲ್ಲ ದೊರೆಯಬೇಕಾದರೇ ಆತ ಅದೃಷ್ಟನೇ ಎನ್ನುತ್ತಾನೆ ಬಸವಣ್ಣ.

ಅಂಧಕನಾದವಂಗೆ ಪರುಷದಗಿರಿ ಕಾಣುತ್ತದೆಯೇ ಕಣ್ಣಿದ್ದವರು ನೋಡಿ ಸಂತೋಷಗೊಂಡು ಅನುಭವಿಸುತ್ತಾನೆ. ನಮ್ಮಲ್ಲಿ ಆರ್ಥಿಕವಾಗಿ ಎಲ್ಲರೂ ಸಮಾನರಿಲ್ಲ. ಸೃಷ್ಟಿಯಲ್ಲಿ ಎಲ್ಲರೂ ಒಂದೇ ರೀತಿಯಲ್ಲೂ ಇಲ್ಲ ಇದನ್ನು ಹೀಗೆ ಹೇಳಿದ್ದಾನೆ. ಹೆಜ್ಜೆ ಹೆಜ್ಜೆಗೂ ಯಶಸ್ಸು ಸಿಗುವುದು ಕಷ್ಟಪಟ್ಟು ದುಡಿದವನಿಗೆ ಮಾತ್ರ. ಆತನಿಗೆ ಅದೃಷ್ಟವಂತನೆಂದು ಹೇಳುತ್ತಾನೆ. ದರಿದ್ರಂಗೆ ಒಂದು ಕೊಪ್ಪರಿಗೆ ಹೊನ್ನು ಸಿಗುವುದೇ ? ಹೊನ್ನ ಹುಳುವ ಕಂಡು ನರಿಬಾಲ ಹುಣ್ಣಮಾಡಿಕೊಂಡಂತೆ ! ಮಿಂಚುಹುಳ ತನ್ನ ಬಾಲ ಮಿಣಕಿಸುತ್ತಾ ಓಡಾಡುವುದ ಕಂಡು ನರಿ ತನ್ನ ಬಾಲವನ್ನು ಆಡಿಸುತ್ತ ತಿರುತಿರುಗಿ ನೋಡಿಕೊಂಡರೆ ಬಾಲ ನೋವಾಗದೆ ಇರುತ್ತದೆಯೇ. ಆದ್ದರಿಂದ ಶ್ರಮದೊಂದಿಗೆ ಅದೃಷ್ಟವೂ ಆತನ ಬೆನ್ನ ಹಿಂದಿರಬೇಕೆಂದು ಹೇಳುತ್ತಾನೆ.

ಅಕ್ಕಮ್ಮ ಕೂಡ ಖನಿಜ ಸಂಪತ್ತಿನ ಬಗ್ಗೆ ಹೀಗೆ ಹೇಳಿದ್ದಾಳೆ. "ಚಿನ್ನ ಒಡೆದಡೆ ಕರಗಿದಡೆ ರೂಪಪ್ಪುದಲ್ಲದೆ, ಮುತ್ತು ಒಡೆದು ಕರಗಿದಡೆ ರೂಪಪ್ಪುದೆ"[೧೬೮] ಚಿನ್ನವನ್ನು ಸಂಪೂರ್ಣವಾಗಿ ಕರಗಿಸಿಟ್ಟರೆ ಅದನ್ನು ಮತ್ತೆ ಹೊಸ ರೂಪ ಕೊಡಬಹುದು. ಮುತ್ತನ್ನು ಒಡೆದು ಕರಗಿಸಿ ರೂಪ ಕೊಡಲು ಬರುವುದೆ ? ಎಲ್ಲ ಲೋಹಗಳಲ್ಲೇ ಚಿನ್ನ ಅದೆಷ್ಟು ಬೆಂಕಿಯಲ್ಲಿಟ್ಟು ಕಾಯಿಸಿದರೇ ಕಾಯ್ದ ಚಿನ್ನ ಅದು ತನ್ನ ರೂಪವೇ ಬಿಡುವುದಿಲ್ಲ. ಕಾದಷ್ಟು ಶುದ್ಧತೆ ಪಡೆಯುತ್ತದೆ. ಚಿಕ್ಕ ಚಿಕ್ಕ ತುಂಡಾಗಿ ಕತ್ತರಿಸಿದರೆ ಅದು ಪುನಃ ಒಂದಾಗುತ್ತದೆ. ಆದರೆ ಮುತ್ತು ಒಡೆದರೆ ಒಂದಾಗಲು ಸಾಧ್ಯವಿಲ್ಲ.

ನೀಲಾಂಬಿಕೆಯ ಈ ವಚನವೊಂದರಲ್ಲಿ ಲೋಹಗಳಲ್ಲೆಲ್ಲ ಎಲ್ಲ ಲೋಹ ಅಷ್ಟೇ ಮಹತ್ವೆಂದು ಹೇಳಿದ್ದಾಳೆ. ಮಂಗಳ ಸೂತ್ರವೇ ಕಟ್ಟಲು ಆ ಮಂಗಳಸೂತ್ರಕ್ಕೆ ಮಣಿಯ ಪವಣಿಸಲು ಇದು ನೋಡಿದಾಗ ವಚನಕಾರರು ಎಷ್ಟೊಂದು ಸರಳ ಅರ್ಥಪೂರ್ಣ ದಾಂಪತ್ಯ ಜೀವನ ನಡೆಸಿದರೆಂದು

---

167 ಪ್ರಜಾವಾಣಿ ದಿನಾಂಕ ೨೨.೦೧.೨೦೧೦

168 ಅಕ್ಕಮ್ಮನ ವಚನ ಸಂ.೪೦೫, ಶಿವಶರಣೆಯರ ವ.ಸಂ.೫, ಸಂ.ಡಾ.ವೀರಣ್ಣ ರಾಜೂರ್, ಪು.ಸಂ.೧೨೯.

ತಿಳಿದುಬರುತ್ತದೆ. ಪ್ರಾಚೀನ ಕಾಲದಿಂದಲೂ ಮದುವೆಯ ಸಮಾರಂಭಗಳಲ್ಲಿ ವಧುವಿಗೆ ವರರನಿಂದ ಮಂಗಳಸೂತ್ರ ಕಟ್ಟಿಸುತ್ತಾರೆ. ಪ್ರಾಚೀನಕಾಲದಲ್ಲಿ ಇದು ಪಂಚಲೋಹಗಳಿಂದ ಮಿಶ್ರಿತವಾದಂತಹದ್ದಾಗಿತ್ತು.

ಇನ್ನೊಂದು ರೀತಿ ವೈಜ್ಞಾನಿಕ ದೃಷ್ಟಿಯಿಂದ ನೋಡುವುದಾದರೆ ಈ ಪಂಚಲೋಹದಿಂದ ದೇಹದ ರಕ್ತದೊತ್ತಡ ಕಡಿಮೆಯಾಗುತ್ತದೆ. ಮಾನಸಿಕ ಖಿನ್ನತೆ ದೂರವಾಗುತ್ತದೆ. ಇದನ್ನೆ ಮುಂದುವರೆದು ಮೋಳಿಗೆ ಮಹಾದೇವಿಯು ವಚನದಲ್ಲಿ ಹೀಗೆ ಹೇಳಿದ್ದಾಳೆ.

"ಹೇಮದ ಬೆಂಬಳಿಯ ಸ್ವರೂಪದಂತೆ.
ಗ್ರಾಮದ ಬೆಂಬಳಿಯ ಬಟ್ಟೆಯಂತೆ
ಹೇಮದ ಸ್ವರೂಪಗಳಿದು ಸವರೂಪವಡಗಿದಲ್ಲಿ
ಕುಶಚಿತ್ರವೆಲ್ಲಿದ್ದಿತು?
ಬಟ್ಟೆಯಮೆಟ್ಟಿ ಹೋಗಿ ಪ್ರನರಪಿಯಾಗಿ ತಿರುಗಿದಲ್ಲಿ
ಊರ ಬಾಗಿಲ ಬಟ್ಟೆಯ ಒಂದರಲ್ಲಿ ಹೋಗಬೇಕು
ಇದು ಧೈರ್ಯಕ್ಕೆ ಕೊಟ್ಟ ಇಷ್ಟು
ಆ ಇಷ್ಟ ಚಿತ್ರದಲ್ಲಿ ಅಚ್ಚೊತ್ತಿದ ಮತ್ತ. ಆ ನಿಶ್ಚಯ ಉಭಯದ ತಿಳಿದಲ್ಲಿ
ಕಾಯಕ್ಕೆ ಕೈಲಾಸವೆಂಬುದಿಲ್ಲ, ಭಾವಕ್ಕೆ ಬಯಲೆಂಬುದಿಲ್ಲ
ಅನಿಲನಲ್ಲಿ ಅರತ ದ್ರವ್ಯದಂತೆ ಅದು ಅಮೂರ್ತಿಭಾವ
ಎನ್ನಯ್ಯಪ್ರೀಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನಲ್ಲಿ"[೧೬೯]

ನೆಲದ ಮರೆಯಲ್ಲಿರುವ ಚಿನ್ನಕ್ಕೆ ಯಾವ ಸ್ವರೂಪ ಇರಲು ಸಾಧ್ಯ ಒಂದು ವೇಳೆ ಮಣ್ಣಿನಿಂದ ತೆಗೆದ ಚಿನ್ನಕ್ಕೆ ಚಲುವಾದ ರೂಪಕೊಡಬೇಕೆಂದರೂ ಅದು ಪುನಃ ಅನಿಲದ ಸ್ಪರ್ಶವಾದರೆ ಎಲ್ಲಿ ಹೋಯಿತು ಆ ರೂಪ ಅದಮತ್ತೆ ಮೊದಲಿನ ರಪವೇ ಹೊಂದಿರುವುದು.

ಒಂದು ವೇಳೆ ಭೂಮಿಯ ಒಡಲನ್ನು ಬಗೆಯದೇ ಅದನ್ನು ಹೊರತೆಗೆದು ಹಾಳೂಗೆಡುವುದು ಬಿಟ್ಟು ಅದು ಎಲ್ಲಿ ಹುಟ್ಟಿದೆಯೋ ಅದಕ್ಕೆ ಅಲ್ಲಿಯೇ ಭೂಗರ್ಭದಲ್ಲಿಯೇ ಬೆಳೆಯಲು ಬಿಟ್ಟು. ಈ ರೀತಿ ಖನಿಜ ಮಣ್ಣು ಬಗೆದು ತೆಗೆಯದೆ ಅಲ್ಲಿಯೇ ನೆಲದ ಮರೆಯಲ್ಲಿದ್ದರೂ ಒಂದಿಷ್ಟು ಖನಿಜ ನಮ್ಮ ಪ್ರಜ್ಞಾವಂತಿಕೆಯಿಂದ ಒಂದಿಷ್ಟು ಬಳಸಿದಂತಾಗುವುದು ಅದುವೇ ಅಮೂರ್ತ ಭಾವ ಎಲ್ಲಿರುವದೋ ಯಾವ ರೂಪದಲ್ಲಿದೆಯೇ ಅಲ್ಲಿಯ ನೋಡಿ ಪುನಃ ತಣಿಸಿಕೊಳ್ಳು ಎನ್ನುತ್ತಾಳೆ ಮಹಾದೇವಿಯಮ್ಮ.

---

[169] ಮೋಳಗಿ ಮಹಾದೇವಿ ವಚನ ಸಂ.೯೫೫, ಶಿವಶರಣೆಯರ ವ.ಸಂ.೫, ಸಂ.ಡಾ.ವೀರಣ್ಣ ರಾಜೂರ್, ಪು.ಸಂ.೩೦೬.

ವಚನಗಳಲ್ಲಿ ಅರಗು :

ಖನಿಜ ಸಂಪತ್ತಿನಲ್ಲಿ ಅರಗು ಕೂಡ ಬಹುಮುಖ್ಯ ಉಬ್ಬು ಆಭರಣ ತಯಾರಿಕೆಯಲ್ಲಿ ಅತಿ ಹೆಚ್ಚಾಗಿ ಬಳಸುತ್ತಾರೆ. ಆಭರಣಗಳಲ್ಲಿ ಅರಗಿನ ಬಳಕೆ ವಚನಕಾರರಿಗೆ ಪರಿಚಯವಿತ್ತೆಂದು ಈ ಕೆಳಗಿನ ವಚನಗಳಿಂದ ತಿಳಿದುಬರುತ್ತದೆ. "ಅರಗಿನ ಪುತ್ಥಳಿಯ ನುರಿಯ ನಾಲಿಗೆ ಹೊಯಿದು ಮಾತಾಡುವ ಸರಸಬೇಡ"

ಅರಗಿನ ಗೊಂಬೆಗೆ ಉರಿಯ ನಾಲಗೆಯನ್ನು ಹಚ್ಚಿದರೆ ಅದು ಕರಗದೆ ಇರಲು ಸಾಧ್ಯವೇ ಇಂತಹ ಉರಿಯ ನಾಲಿಗೆ ಹೊಂದಿದ್ದು ಅರಗಿನ ಪುತ್ಥಳಿ ಹಿಡಿದರೆ ಕರಗಿ ಸೋರುತ್ತದೆ. ಬೆಣ್ಣೆಯ ವಿನಾಯಕಂಗೆ ಅವನಿದಿರು ಕೆಂಡದುಂಡೆಯ ಮಾಡಿ ನೈವಿದ್ಯ ಮಾಡಿಟ್ಟರೆ ಕರಗದೆ ಬಿಡುತ್ತದೆಯೇ. ಅದರೊಂದಿಗೆ ಬೆಣ್ಣೆ ಅಷ್ಟೇ ಅಲ್ಲ ಅದರ ಬಾಯೊಳಗಿದ್ದ ಹಲ್ಲುಕೂಡ ಬಿದ್ದುಹೋಗುತ್ತವೆಂದು ಶರಣರು ಹೇಳುತ್ತಾರೆ.

ಹಾಗೆಯೇ ಅರಗು ನೋಟಕ್ಕೆ ಬಿರುಸಾಗಿ ಗಟ್ಟಿಯಾಗಿ ಕಂಡರೂ ಕೂಡ ಉರಿಯ ಸ್ಪಷ್ಟದಿಂದ ತನಗರಿವಿಲ್ಲದಂತೆ ಕರಗಿ ಬಿಡುತ್ತದೆ. ಆದ್ದರಿಂದಲೇ ಆಭರಣಗಳ ತಯಾರಿಕೆಯಲ್ಲಿ ಆಕಾರಕೊಡಲು ಅರಗು ಬಳಕೆಯಲ್ಲಿದೆ. ಇತ್ತೀಚಿನ ದಿನಗಳಲ್ಲಿ 'ಫ್ಯಾಶನ್ ಗಾಗಿ' ಅರಗಿಸದೇ ಆದ ವಿವಿಧ ಬಗೆಯ ಆಭರಣಗಳು ತಯಾರಾಗುತ್ತಿವೆ.

ಇನ್ನೊಂದು ಬಸವಣ್ಣನ ವಚನನೋಡುವುದಾದರೆ ಆಲಿಕಲ್ಲ ಹರಳಿನಂತೆ, ಅರಗಿನ ಪುತ್ಥಳಿಯಂತೆ, ಮಳೆನಕ್ಷತ್ರಗಳ ಬಗ್ಗೆ ಎಲ್ಲರಿಗೂ ಗೊತ್ತಿದ್ದೆ ಇದೆ. ಜೂನ್ ತಿಂಗಳ ಏಳನೇ ತಾರೀಖಿನಂದು ಮಿರ್ಗಾಮಳೆ ಪ್ರವೇಶ ಮಾಡುವುದು. ಎಲ್ಲರಿಗೂ ಗೊತ್ತೇ ಇದೆ. ಈ ಸಂದರ್ಭದಲ್ಲಿ ಬಿದ್ದಮಳೆಗೆ ಆಲಿಕಲ್ಲು ಹೆಚ್ಚಾಗಿ ಬೀಳುತ್ತವೆ. ೧೯೯೮-೯೯ರಲ್ಲಿ ಬಿದ್ದ ಮಳೆಗೆ ಚಿತ್ತಾಪೂರ, ಚಿಂಚೋಳಿ, ಸೇಡಂ ಈ ಕಡೆ ಹೆಬ್ಬಂಡೆಯಂತಹ ಆಲಿಕಲ್ಲು ಬಿದ್ದದ್ದು ಸುದ್ದಿಯಲ್ಲಿತ್ತು. ಜೊತೆಗೆ ರಾತ್ರಿ ವೇಳೆಗೆ ಬಿದ್ದ ಆಲಿಕಲ್ಲು ಮುಂಜಾನೆಯವರೆಗೂ ಕರಗದೆ ಹಾಗೆಯೇ ಇದ್ದು ಅಕ್ಕಪಕ್ಕದ ಹಳ್ಳಿಯ ಜನ ಕುತೋಹಲದಿಂದ ನೊಡಿಬಾದಿದ್ದರು.

ಜಲದ ಮಂಟಪದ ಮೇಲೆ ಉರಿಯ ಚಪ್ಪರವನ್ನಿಕ್ಕಿ.
ಆಲಿಕಲ್ಲು ಹಸೆಯ ಹಾಸಿ ಬಾಸಿಂಗವ ಕಟ್ಟಿ
ಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ ಗಂಡ ಬಂದು ಮದುವೆಯಾದನು
ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ
ಚನ್ನಮಲ್ಲಿಕಾರ್ಜುನೆಂಬ ಗಂಡಂಗೆನ್ನ
ಮದುವೆಯ ಮಡಿದರೆಲೆ ಅವ್ವಾ"[೧೭೦]

ವಚನಕಾರರು ಹೇಳುವಂತೆ ಆಲಿಕಲ್ಲ ಹರಳಿನಂತೆ ಅರಗಿನ ಪುತ್ಥಳಿಯಂತೆ ಮನಸ್ಸು ಕರಗಬೇಕೆಂದು ಹೇಳುತ್ತಾರೆ. ಇವೆರಡೂ ಖನಿಜಗಳು ನೋಡಲು ಕಠೋರವಾಗಿದ್ದು ಅಷ್ಟೇ ಮೃದುವಾದವುಗಳು. ಆದರೆ ನಮ್ಮ ಮನಸ್ಸುಗಳು ಹೀಗೇಕಿಲ್ಲ ! ನೋವಿನಲ್ಲಿದ್ದವರನ್ನು ಕಂಡಾಗ ಕರಗಬೇಕು. ಅಣ್ಣ ಹೀಗೆ ಹೇಳುತ್ತಾನೆ. ಮನುಷ್ಯನಿಗೆ ದುಃಖದಲ್ಲಿ ಯಾವ ರೀತಿ ಜಲಬಿಂದು ಜಾರುತ್ತವೆಯೇ ಹಾಗೆಯೇ ಸುಖದಲ್ಲೂ ಜಲ ಬಿಂದುಗಳು ಉದುರಬೇಕು.

ವಚನಗಳಲ್ಲಿ ನವರತ್ನ :

ಅಕ್ಕಮಹಾದೇವಿ ಅಕ್ಕ ತನ್ನ ವಚನಗಳಲ್ಲಿ ನವರತ್ನಗಳ ಕುರಿತು ಮಾತನಾಡಿದ್ದಾಳೆ. "ಮುತ್ತು ನೀರಲ್ಲಾಯಿತು. ವಾರಿಕಲ್ಲು ನೀರಲ್ಲಾಯಿತು, ಉಪ್ಪು ಕರಗಿತು"[೧೭೧]

ಈ ವಚನವನ್ನು ನೋಡಿದರೆ ಹೆಚ್ಚಿನ ಖನಿಜ ಸಂಪತ್ತು ಸಮುದ್ರದಲ್ಲೇ ಉತ್ಪತ್ತಿಯಾದವೆಂದು ಅಕ್ಕ ಹೇಳುತ್ತಾಳೆ.

ಮುತ್ತು ನೀರಿನಿಂದಲೇ ಉತ್ಪತ್ತಿಯಾಗುತ್ತದೆ. ವಾರಿಕಲ್ಲು (ಸಮುದ್ರದಲ್ಲಿರುವ ಹೊಳಪುಳ್ಳ ಕಲ್ಲು) ಕೂಡ ಸಮುದ್ರದಲ್ಲಿಯೇ ನೀರಿನಿಂದ ಸವೆದು ಸವೆದು ಹೊಳಪಾಗಿ ಕಾಣುತ್ತದೆ. ಉಪ್ಪು ಕೂಡ ಇದಕ್ಕೆ ಹೊರತಾಗಿಲ್ಲ. ಮದ್ರಾಸ್, ಪಾಂಡಿಚೆರಿಯಂತಹ ಸಮುದ್ರ ತಟಗಳಲ್ಲಿ ಇಂತಹ ಮುತ್ತು, ಬಣ್ಣ ಬಣ್ಣದ ಸರಗಳು ಮಾರಾಟಕ್ಕೆ ಕಂಡುಬರುತ್ತವೆ. ಇನ್ನೂ ಉಪ್ಪು ಸಮುದ್ರದ ತಟದಲ್ಲಿ ಸಲಿಕೆಯಿಂದ ದಂಡೆಗೆ ಒಯ್ದು ಕಲೆಹಾಕಿ ಮೀನು ಸಂಸ್ಕರಣಕ್ಕೆ ಈ ಉಪ್ಪು ಹೆಚ್ಚಾಗಿ ಬಳಸುತ್ತಾರೆ.

[170] ಅಕ್ಕಮಹಾದೇವಿ ವಚನ – ಶಿವಶರಣೆಯರ ವ.ಸಂ.೫, ಸಂ.ಡಾ.ವೀರಣ್ಣ ರಾಜೂರ್, ವ.ಸಂ.೧೭೬, ಪು.ಸಂ.೫೫.

[171] ಅಕ್ಕಮಹಾದೇವಿ ವಚನ – ಶಿವಶರಣೆಯರ ವ.ಸಂ.೫, ಸಂ.ಡಾ.ವೀರಣ್ಣ ರಾಜೂರ್, ವ.ಸಂ.೨೮೦, ಪು.ಸಂ.೮೭

ಉಪ್ಪು ಕರಗಿತ್ತು, ವಾರಿಕಲ್ಲು ಕರಗಿತ್ತು ಎನ್ನುತ್ತಾಳೆ ಅಕ್ಕ ! ತೇಲುವ ಉಪ್ಪು ದಂಡೆಗೆ ತಂದು ಹಾಕುತ್ತಾರೆ. ಅಲೆಗಳು ಬಂದು ಅಪ್ಪಳಿಸಿ ಅದೆಲ್ಲ ಮತ್ತೆ ಕರಗುತ್ತದೆ. ವಾರಿಕ್ಲು ಕೂಡ ಕರುಗತ್ತದೆ. ಸಮುದ್ರದ ನೀರು ಹರಿಯುವಿಕೆಯಿಂದ ಬಂಡೆಗಳೇ ಸವೆದು, ಬಿಸಿಲಿಗೆ ಥಳ, ಥಳ ಹೊಳೆಯುತ್ತಿವೆ. ಇದಕ್ಕೆ ಉದಾಹರಣೆಯಾಗಿ ರಾಮೇಶ್ವರಂ, ಮಂತ್ರಾಲಯದ ಹತ್ತಿರ ತುಂಗ-ಭದ್ರೆ ಹರಿದು ಕಲ್ಲುಗಳು ಸವೆದಿವೆ. ಜೋಗದ ಕೆಲಭಾಗದ ಕಲ್ಲುಗಳು ಇಲ್ಲೆಲ್ಲ ರಭಸದಿಂದ ನೀರು ಹರಿದು ಕಲ್ಲುಗಳೆಲ್ಲ ಸವೆದಿದ್ದು ಕಾಣುತ್ತೇವೆ. ಇಲ್ಲೆಲ್ಲ ಈಗ ತಿಪ್ಪೆಗುಂಡಿಯಾಗಿದ್ದಂತೂ ನಿಜ.

ಉಪ್ಪು ವಾರಿಕಲ್ಲು ಕರಗಿದ್ದುಂಟು ಮುತ್ತು ಕರಗಿದ್ದು ಉಂಟೆ ? ಎಂದು ಅಕ್ಕ ಪ್ರಶ್ನೆ ಮಾಡುತ್ತಾಳೆ. ಹೇಗೆ ಮುತ್ತು ಕರಗುವುದಿಲ್ಲವೋ ಹಾಗೆಯೇ ಮನುಷ್ಯ ಪ್ರಕೃತಿಯಲ್ಲವೂ ತನ್ನ ಹಿಡಿತದಲ್ಲಿಟ್ಟೂ ಹದಗೆಡಿಸುತ್ತಿದ್ದಾನೆ. ನಿಸರ್ಗದತ್ತವಾಗಿ ಏನು ಇರುವುದೋ ಅದನ್ನು ಹಾಗೆಯೇ ಸ್ವೀಕರಿಸಬೇಕು. ಅದಕ್ಕೆ ಶುದ್ಧಿಕರಿಸುವ ನೆಪದಲ್ಲಿ ಪರಿಸರದ ಮೇಲೆ ಅಪಾರವಾದ ಪರಿಣಾಮ ಬೀರುವುದು ಬೇಡವೆನ್ನುತ್ತಾಳೆ ಅಕ್ಕ.

ಹಡಪದ ಲಿಂಗಮ್ಮನ ವಚನವೊಂದು ಹೀಗೆ ಹೇಳುತ್ತದೆ "ಮಾಣಿಕವ ಕಂಡವರು ತೋರುವರೆ ಅಯ್ಯಾ' ಮುತ್ತು ಕಂಡವರು ಅಪ್ಪಿಕೊಂಬರಲ್ಲದೆ?"[೧೭೨]

ಲಿಂಗಮ್ಮನು ವಚನದಲ್ಲಿ ಇವತ್ತಿನದ್ದನ್ನೂ ಕುರಿತು ಚಿಂತನೆ ನಡೆಸಿದ್ದಾಳೆ. ವಚನಕಾರರು ಮುಂಬರುವ ದಿನಗಳಲ್ಲಿ ಚಿನ್ನ ಅದರಲ್ಲೂ ಶ್ರೀಮಂತ ಜನರ ಆವರ್ತನೆ ಕುರಿತು ಲಿಂಗಮ್ಮ ವ್ಯಕ್ತಪಡಿಸಿದ್ದು ಕಂಡು ಬರುತ್ತದೆ.

ಮಾಣಿಕವ ಕಂಡವರು ತೋರುವರೇ ಅಯ್ಯ. ಶ್ರೀಮಂತ ಜನ ತಮ್ಮಲ್ಲಿರುವ 'ಹಣ' ಇನ್ನೊಬ್ಬರಿಗೆ ತೋರಿಸುತ್ತಾರೆಯೇ ಖಂಡಿತಾ ಇಲ್ಲ ! ಮುತ್ತು-ರತ್ನ ಬಚ್ಚಿಡುವವರಲ್ಲದೇ ಬಿಚ್ಚಿಟ್ಟು ತೋರುವುರೇ ಇಲ್ಲವೇ ಇಲ್ಲ. ಮುತ್ತು-ಮಾಣಿಕ್ಯದ ಬೆಲೆ ಎಂತಹ ಹೆಡ್ಡನಿಗೂ ಗೊತ್ತಾಗುತ್ತದೆ.

[172] ಹಡಪದ ಅಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮನ ವಚನ, ಶಿವಶರಣೆಯರ ವ.ಸಂ.೫, ಸಂ.ಡಾ.ವೀರಣ್ಣ ರಾಜೂರ್, ವಚನ ಸಂ.೨೩ ಪು.ಸಂ.೩೩೧.

ಅಂದರೆ ಎಲ್ಲರಿಗೂ ಗೊತ್ತಾದರೆ ಅದರ ಹಣವೇನು ? ಎಲ್ಲಿಂದ ಕಬಳಿಸಿದ್ದು, ಲೋಕಾಯುಕ್ತರ ದಾಳಿ ಇತ್ಯಾದಿಗಳಿಗೆ ಹೆದರಿ ಇದ್ದ ಸಂಪತ್ತು ತೋರಿಸುವರೇ ಖಂಡಿತ ಇಲ್ಲ ! ಇಂತಹ ಹುಚ್ಚು ಸಾಹಸಕ್ಕೆ ಯಾರೂ ಕೈ ಹಾಕುವುದಿಲ್ಲ.

ನಮ್ಮ ಹಳೆಯ ಕಾಲದ ಮನೆಗಳಲ್ಲಿ ಮನೆಯೊಡೆಯರಾದವರು ತಮ್ಮ ಸಂಪತ್ತನ್ನೆಲ್ಲ ತಾಮ್ರದ-ಕಂಚಿನ ಪಾತ್ರೆಗಳಲ್ಲಿ (ಕೊಡಗಳಲ್ಲಿ) ಹಾಕಿ ನೆಲದಲ್ಲಿ ಹುಗಿದಿಡುತ್ತಿದ್ದರು. ಹಾಗೆ ಮಾಡಲು ಅಂದು ಇಂದಿನ ಕಾಲದಂತೆ ಬ್ಯಾಂಕುಗಳಲ್ಲಿ ಲಾಕರಗಳು ಇರಲಿಲ್ಲ. ಅವರು ಮುಂದಿನ ಪೀಳಿಗೆಗಳು ಹಣಕ್ಕಾಗಿ ಪರದಾಡಬಾರದೆಂದು ಆ ರೀತಿ ನೆಲದಲ್ಲಿ ಹೂಳಿಡುತ್ತಿದ್ದರು. ಆದರೆ ಕಾಲ ಕ್ರಮೇಣ ಸಾಯುವಕಾಲ ಸಮಿಪಿಸಿದರೂ ಆ ಹಣದ ಬಗ್ಗೆ ಯಾರಿಗೂ ಹೇಳುತ್ತಿರಲಿಲ್ಲ. ಹೀಗೆ ಹೂತಿಟ್ಟು ಸತ್ತುಬಿಡುತ್ತಿದ್ದರು. ಮುಂದೆ ಎಷ್ಟೋ ದಿನಗಳ ನಂತರ ಮನೆ ಬಿದ್ದಾಗಾ ಇಲ್ಲವೇ ಬೀಳಿಸಿದಾಗೋ ಅಗೆದು ತೆಗೆಯುವಾಗ ಸಂಪತ್ತು ಸಿಗುತ್ತಿತ್ತು. ಹೀಗೆ ಸಿಕ್ಕ ಸಂಪತ್ತು ಯಾರಿಗೂ ತೊತ್ತಾಗದಂತೆ ಮತ್ತೆ ಬಚ್ಚಿಡುತ್ತಿದ್ದರು.

ಹೀಗೆ ಶ್ರೀಮಂತರು ತಾವು ಶ್ರೀಮಂತರೆಂದು ತೋರಿಸಿಕೊಳ್ಳುತ್ತಿರಲಿಲ್ಲ. ಇದಕ್ಕೆ ಕಾರಣ ಹಲವಾರಿರಬಹುದು. ಅದೆಷ್ಟೋ ಮನೆಗಳಲ್ಲಿ ಆಳುಗಳ ಕೈಗೆ ಸಿಕ್ಕ ಇಂತಹ ನಿಧಿ ಊರಲ್ಲೆಲ್ಲ ಸಾರಿಬರುವರೆಂದು ಅಂತಹ ಆಳುಗಳಿಗೆ ನಿಧಿ ಸಿಕ್ಕ ಸ್ಥಳದಲ್ಲಿಯೇ ಅವರಿಗೆ ಹೂತುಬಿಡುವಂತಹದ್ದು ಈಗ ಇತಿಹಾಸ !

ಅಕ್ಕನು ಕೂಡ ಆಭರಣ ತೊಟ್ಟಿದ್ದಳು ಎಂಬುದಕ್ಕೆ ಆಕೆಯ ವಚನ ಉದಾಹರಣೆಯಾಗಿದೆ. ಚಿನದಲ್ಲಿ ಕ'ಲಬೆರಕೆಯಾದರೆ ವೈವಿಧ್ಯಮಯ ಆಭರಣ ತಯಾರಿಸಲು ಸಾಧ್ಯ. ಮನುಷ್ಯನ ಮನದಲ್ಲಿ ಕಲಬೆರಕೆಯಾದರೆ ಹೇಗೆ ಎಂದು ಆಕೆಗೆ ಕಳಕಳಿ. "ಸಾವಿರ ಹೊನ್ನಿಂಗೆ ಸಾದಕೊಂಡ"[೧೭೩] ಈ ವಚನ ನೋಡಿದಾಗ ಅದೆಷ್ಟು ಅರ್ಥಪೂರ್ಣವಚನವೆಂದು ತಿಳಿದುಬರುತ್ತದೆ. ನಮ್ಮ ಜನಪದ ಭಾಷೆಯ ಪ್ರಕಾರ ಕೈಗೆ ಸಿಕ್ಕಿದ್ದು ಬಾಯಿಗೆ ಬರಲಿಲ್ಲವೆನ್ನುತ್ತಾರೆ.

ಸಾವಿರಗಟ್ಟಲೇ ರೂಪಾಯಿ ಕೊಟ್ಟು ಚಿನ್ನ ಖರೀದಿಸಿದರೆ ಅದರಲ್ಲಿ ಬೆರಕೆ ಇದ್ದರೆ ಏನು ಪ್ರಯೋಜನ ಇದಕ್ಕೆ ಸಮಾಧಾನ ಪಟ್ಟುಕೊಳ್ಳಬೇಕಾದರೇ ಬೆರಕೆ ಇದ್ದರೆ ಮಾತ್ರ ಆಭರಣ

---

[173] ಅಮುಗೆ ರಾಯಮ್ಮನ ವಚನಗಳು –ಶಿವಶರಣೆಯರ ವ.ಸಂ.೫, ಸಂ.ಡಾ.ವೀರಣ್ಣ ರಾಜೂರ್, ವ.ಸಂ.೬೦, ಪು.ಸಂ.೧೮೩.

ತಯಾರಿಸಲು ಸಾಧ್ಯವೆಂಬ ಸಮಾಧಾನ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ರತ್ನವ ಖರೀದಿಸಿದರೆ ಅಷ್ಟೊಂದು ಇಷ್ಟವಾದ ರತ್ನ ಪರಿಕ್ಷಕನ ಹತ್ತಿರ ಕೊಂಡೊಯ್ದರೆ ಇದು ರತ್ನವೆ ಅಲ್ಲವೆಂದರೆ ? ಅಂದರೆ ಈ ಪ್ರಕೃತಿಯಲ್ಲಿ ಒಂದರಿಂದ ಇನ್ನೊಂದಕ್ಕೆ ಬೆಲೆಯಿದೆ. ರತ್ನದಿಂದ ಚಿನ್ನಕ್ಕೆ ಚಿನ್ನದಿಂದ ರತ್ನಕ್ಕೆ. ರತ್ನಕ್ಕೆ ಚಿನ್ನದಕಟ್ಟು ಕೂಡಿಸಿದರೆ ಎರಡಕ್ಕೂ ಬೆಲೆ.

ಅಮುಗೆ ರಾಯಮ್ಮನ ವಚನವೊಂದು ನೋಡುವುದಾದರೆ ಇಪ್ಪತ್ತೊಂದನೆಯ ಶತಮಾನವನ್ನು ದೃಷ್ಟಿಯಲ್ಲಿಟ್ಟುಕೊಂಡು ವಚನ ರಚನೆ ಮಾಡಿದಂತೆ ಕಂಡುಬರುತ್ತದೆ. "ತೊಗಲ ಬೊಕ್ಕಣದಲ್ಲಿ ಪಾಷಾಣವ ಕಟ್ಟುವರಲ್ಲದೆ ಪರುಷವ ಕಟ್ಟುವರೆ?"೩೪ ಅಂದರೆ ಪಾಲಿಥಿನ್ ಚೀಲಗಳು ಮಾರುಕಟ್ಟೆಯ ತುಂಬೆಲ್ಲ ರಾರಾಜಿಸುತ್ತಿವೆ. ಯಾವುದೇ ವಸ್ತು ಕೊಂಡುಕೊಂಡರೂ ಕೂಡ ಅದರೊಂದಿಗೆ ಪ್ಲಾಸ್ಟಿಕ್ ಚೀಲ ಮನೆ ಸೇರುತ್ತದೆ. ತಂದ ಸಾಮಾನು ತೆಗೆದು ಎಲ್ಲೆಂದರಲ್ಲಿ ಈ ಚೀಲಗಳು ಎಸೆಯುತ್ತೇವೆ. ಇವು ಕೊಳೆಯುವ ಪದಾರ್ಥವಂತೂ ಅಲ್ಲ.

ಇಂದಿನ ಯುವಕರನ್ನು ಆಕರ್ಷಿಸುತ್ತಿರುವ 'ಕೋಕಾಕೋಲ' ಬಾಟಲಿ ಪ್ಲಾಸ್ಟಿಕ್ಕಿನವೇ. ರಾಯಮ್ಮನ ಪ್ರಕಾರ ಈ ಪಾನಿಯಗಳು ತೊಗಲು ಬೊಕ್ಕಣವೆಂದೇ ಹೇಳಬೇಕು. ಇದರಲ್ಲಿರುವುದು ಕೂಡಾ "ಪಾಷಾಣ' ಇಂತವುಗಳಲ್ಲಿ ವಿಷ ಪದಾರ್ಥವೇ ಕಟ್ಟುತ್ತಾರೆ ವಿನಃ ಪರುಷ ಕಟ್ಟುವರೆ ?

"ಮಣ್ಣ ಹರವಿಯಲ್ಲಿ 'ಸುರೆ' ತುಂಬುವರಲ್ಲದೆ ರತ್ನವ ತುಂಬುವರೆ?" ಮಣ್ಣ ಹರಿವಿಯಲ್ಲಿ ತುಂಬ ಪ್ರಾಚೀನಕಾಲದಿಂದಲೂ ಕಾಣುತ್ತೇವೆ. ಮೊನ್ನೆ ಮೊನ್ನೆ ವರೆಗೂ 'ನಾರಿನಿಂದ ನೆಲುವು' ಮಾಡಿ ಅದರಲ್ಲಿ ಗಡಿಗೆಯಿಟ್ಟು ಸೇಂಧಿಗಿಡಕ್ಕೆ ಕೊಡಲಿಯಿಂದ ಕಡಿದು ಆ ಜಾಗದಲ್ಲಿ ಈ ಮಣ್ಣ ಹರವಿ ಕಟ್ಟಿ ಬಿಡುತ್ತಿದ್ದರು. ಈ ಮರದಿಂದ ರಾತ್ರಿ ಇಡಿ ಸಿಂಧಿ ಸೋರಿ ಹರವಿ ತುಂಬುತ್ತಿತ್ತು. ಇಂತಹ ಹರವಿಯಲ್ಲಿ ಸುರೆಬಿಟ್ಟು ಹೊನ್ನು ತುಂಬಲು ಹೇಗೆ ಸಾಧ್ಯ.

ಆದರೂ ಪ್ರಾಚೀನ ಕಾಲದಲ್ಲಿ ಬ್ಯಾಂಕುಗಳು ಇರಲಿಲ್ಲ. ಆಗ ಬಹಳ ಜನ ರತ್ನ ತುಂಬಲು ತಾಮ್ರ, ಹಿತ್ತಾಳೆ, ಕಂಚು ಇಂತಹ ಕೊಡಗಳನ್ನು ಬಳಸುತ್ತಿದ್ದರು. ಕಾರಣ ಇಂತಹ ಪಾತ್ರೆಗಳಲ್ಲಿಟ್ಟ ಚಿನ್ನ ಅಥವಾ ನಾಣ್ಯಗಳು ಸುಸ್ಥಿತಿಯಲ್ಲಿರುತ್ತಿದ್ದವು.

ಉರಿಲಿಂಗ ಪೆದ್ದಿಗಳ ಒಂದು ವಚನ ನೋಡುವುದಾದರೆ ರತ್ನಗಳ ಬಗ್ಗೆ ಹೀಗೆ ಹೇಳುತ್ತಾರೆ. "ವೃತವೆಂಬುದು ನಾಯಕ ರತ್ನ ವೃತವೆಂಬುದು ಸುಪ್ಪಾಸಿಯ ಮುತ್ತು"

ಅಂದರೆ ವೃತವೆಂಬುದು ರತ್ನಗಳಲ್ಲಿಯೇ ಶ್ರೇಷ್ಠವಾದುದ್ದು ವಜ್ರ. ಎಲ್ಲ ರತ್ನಗಳಲ್ಲಿ ಹೆಚ್ಚಿನ ಹೊಳಪಿರುವುದು. ಗಾಢವಾದ ಕತ್ತಲೆಯಲ್ಲೂ ತನ್ನ ಇರುವನ್ನು ಸೂಚಿಸುತ್ತದೆ. ಹಾಗೆಯೇ ಚಿನ್ನವೆಂದ ಮೇಲೆ ಎಲ್ಲ ಒಂದೇ ತೆರನಾಗಿರುವುದಿಲ್ಲ ಕಲಬೆರಕೆಯಾಗಿರುತ್ತದೆ.

'ವೃತವೆಂಬುದು ಸುಪ್ಪಾಣಿಯ ಮುತ್ತು' ಸ್ವಾತಿ ಮಳೆ ಸುರಿದಾಗ ಚಿಪ್ಪಿನಲ್ಲಿ ಬಿದ್ದ ಮಳೆಹನಿ ಮುತ್ತಾಗುತ್ತೆ. ಆದರೆ ಇತ್ತೀಚಿನ ದಿನಗಳಲ್ಲಿ ಮುತ್ತಿನ ಕೃಷಿ ಕೂಡ ಆರಂಭಿಸಿದ್ದಾರೆ. ಅಷ್ಟೇ ಅಲ್ಲ ಮುತ್ತಿನಲ್ಲೂ ಅದೆಷ್ಟೋ ಬಗೆಗಳಿವೆ. ಪರಿಸರವನ್ನು ಹಾಳುಮಾಡದಂತೆ ನವರತ್ನಗಳು ಹೊರ ತೆಗೆಯಬೇಕು.

ಇತ್ತೀಚಿನ ದಿನಗಳಲ್ಲಿ 'ಫ್ಯಾಶನ್' ಗಾಗಿ ಎಲ್ಲರ ಕೈಗೆ ನಿಲುಕುವಂತಹವು ನವರತ್ನಗಳು.

ಭೂಮಿ ನಿನ್ನದಲ್ಲ ಹೇಮ ನಿನ್ನದಲ್ಲ
ಕಾಮಿ ನಿನ್ನವಳಲ್ಲ
ಅವು ಜಗಕ್ಕಿಕ್ಕಿದ ವಿಧಿ
ನಿಮ್ಮ ಬಡವೆ ಎಂಬುದು ಜ್ಞಾನರತ್ನ
ಅಂತಪ್ಪ ದಿವ್ಯರತ್ನವ ಕೆಡುಗುಡದೆ
ಆ ರತ್ನವ ನೀನು ಅಲಂಕರಿಸಿದೆಯಾದೊಡೆ
ನಮ್ಮ ಗುಹೇಶ್ವರ ಲಿಂಗಲದ್ಲಿ
ನಿನ್ನಿಂದ ಬಿಟ್ಟಿ ಸಿರಿವಂತರಿಲ್ಲ ಕಾಣಮನವೆ[೧೭೪]

ಇವತ್ತು ನಾವು ಏನನ್ನು ಹೇಳಬೇಕು ಅಂತಾಯಿದ್ದೇವೋ ಅದನ್ನು ಬಹಳ ಸರಳವಾದ ಭಾಷೆಯಲ್ಲಿ ಎಲ್ಲರಿಗೂ ತಿಳಿಯುವಂತೆ ಇದೆಲ್ಲವೂ ನಮ್ಮದೇ ಎಂದು ತಿಳಿದು ಬಳಸಿ ಬಿಸಾಡುವವರಿಗೆ ಎಷ್ಟೊಂದು ಮಾರ್ಮಿಕವಾದ ಉತ್ತರ ಅಲ್ಲಮನು ಕೊಟ್ಟಿದ್ದಾನೆ.

---

[174] ಅಲ್ಲಮ ಪ್ರಭುದೇವರ ವಚನ ಸಂ.-೨ ಸಂ.ಡಾ.ಬಿ.ವ್ಹಿ.ಮಲ್ಲಾಪೂರ, ವಚನ ಸಂ.೧೪೩೩, ಪು ಸಂ.೪೨೬.

ಮನುಷ್ಯ ತನ್ನ ಅಲೆಮಾರಿ ಜೀವನದಲ್ಲಿಯೇ ಮನುಷ್ಯನಾಗಿ ಬದುಕಿದ್ದ. ಏಕೆಂದರೆ ನಿಸರ್ಗದ ಪ್ರತಿಯೊಂದನ್ನು ತನ್ನ ಬದುಕಿನ ಭಾಗವೆಂದೇ ಕಂಡುಕೊಂಡಿದ್ದ. ಹಾಗಾಗಿ ಕೂಡಿಡುವ ಪದ್ಧತಿ ಇರಲಿಲ್ಲ. ಹಂಚಿ ಉಂಬುವ ಸ್ವಭಾವ ಅವನದಾಗಿತ್ತು. ಎಂದು ನಾಗರಿಕತೆ ಪ್ರಾರಂಭವಾಯಿತೋ ಅಂದಿನಿಂದ ಇಂದಿನವರೆಗೂ ನಿಸರ್ಗದ ಮೇಲೆ ಅತ್ಯಾಚಾರ ವಾಗುತ್ತಲೇ ಇದೆ. ಇದನ್ನು ಪರಿಸರವಾದಿಗಳು ಎಷ್ಟೇ ಖಂಡನೆ ಮಾಡಿದರು ಕೂಡ ಇನ್ನು ನಮ್ಮ ಜನತೆಗೆ ಪ್ರಜ್ಞೆ ಮುಡುತ್ತಿಲ್ಲ.

ನಿಸರ್ಗದ ಸಂಪತ್ತು ಪ್ರತಿಯೊಬ್ಬರಿಗೂ ಸಿಗಬೇಕು. ಅಂದರೆ ನಮ್ಮ ಬದುಕಿಗೆ ಪೂರಕವಾಗುವಷ್ಟು ನಾವು ಬಳಸಬೇಕು. ನಿಸರ್ಗವನ್ನು ನಮ್ಮ ದೇಹದ ಭಾಗವಾಗಿಯೇ ನೋಡಬೇಕಗಿದೆ ದೇಹದಲ್ಲಿ ಒಂದು ಅಂಗದ ಕೊರತೆಯಾದರೂ ಅದು ಪರಿಪೂರ್ಣ ಶರೀರವಾಗುವುದಿಲ್ಲವೋ ಹಾಗೆಯೇ ನಿಸರ್ಗ ಕೂಡ.

ಭೂಮಿಯಿಂದ ಚಿನ್ನ ತೆಗೆದು ಶುದ್ಧೀಕರಿಸಿ ಆಭರಣ ಮಾಡಿ ತೊಡೊವುದರಿಂದಲೇ ಜ್ಞಾನಿ ಎನ್ನುವುದಿಲ್ಲ, ಜ್ಞಾನವೆಂಬುವುದು ಶುದ್ಧ ನಿಸರ್ಗನಮ್ಮದನ್ನಾಗಿ ಮಾಡಿಕೊಂಡವನೇ ನಿಜವಾದ ಜ್ಞಾನಿ, ಅದುವೆ ಜ್ಞಾನರತ್ನ ಶುದ್ಧ ಪರಿಸರ ಇಡೀ ಜಗತ್ತಿನ 'ವಡವೆ' ಯಾಗಿ ಕಂಗೊಳಿಸುತ್ತದೆ ಎಂದು ವಚನಕಾರ ಅಭಿಪ್ರಾಯ.

******

ಅಧ್ಯಾಯ–೧೧

ಸಮಾರೋಪ

ಅಧ್ಯಾಯ-೧೧

ಸಮಾರೋಪ

ಭಾರತೀಯ ಚಾರಿತ್ರಿಕ ಬೆಳವಣಿಗೆಯಲ್ಲಿ ಹತ್ತಾರು ಚಳುವಳಿಗಳು ಆಗಿಹೋಗಿದ್ದರು, ವಚನ ಚಳುವಳಿಗೆ ಇವತ್ತಿಗೂ ಮಸುಕು ಬಂದಿಲ್ಲ. ಅದಕ್ಕೆ ಮುಖ್ಯ ಕಾರಣ ಆ ಚಳುವಳಿ ತಳೆದ ಜೀವ ಕಾರುಣ್ಯದ ನಿಲುವು, ಮತ್ತು ಎಲ್ಲಾ ಸಮುದಾಯದ ಮನುಷ್ಯರ ಬದುಕಿನ ಒಟ್ಟು ಆಯಾಮಗಳ ಚಿಂತನೆ. ಅಂಥದರಲ್ಲಿ ವಚನಕಾರರ ಪರಿಸರ ಕಾಳಜಿ ಕೂಡಾ ಒಂದಾಗಿದೆ. ಹಾಗಂತ ಇಡೀ ಚಳುವಳಿಯನ್ನು ಇಲ್ಲಿ ದಾಖಲಿಸಲಾಗಿದೆ ಎಂದಿಲ್ಲ. ಕಾಲ ಮತ್ತು ನನ್ನ ಅಧ್ಯಯನದ ಮಿತಿಯಿಂದ ಸಾಧ್ಯವಾದಷ್ಟು ಹೇಳುವ ಪ್ರಯತ್ನ ಮಾಡಲಾಗಿದ್ದು, ಹೀಗೊಂದು ಶೋಧಕ್ಕೆ ಇದು ಆರಂಭವೆಂದು ಹೇಳಬಹುದು. ವಚನ ಚಳುವಳಿಯ ಪ್ರಾಮುಖ್ಯತೆ ಇರುವುದು ಅದರ ಸಮಷ್ಟಿ ಪ್ರಜ್ಞೆಯಲ್ಲಿ ಇಲ್ಲಿ ಕಾರ್ಮಿಕರಿದ್ದಾರೆ, ಮಹಿಳೆಯರಿದ್ದಾರೆ, ವಯಸ್ಕರಿದ್ದಾರೆ, ಹೀಗೆ ಅಬಾಲವೃದ್ಧರವರೆಗೆ ಎಲ್ಲರೂ ಜ್ಞಾನಿಗಳಾಗಿದ್ದಾರೆ, ಸ್ವಾತಂತ್ರ್ಯ, ಸಮತೆ, ಸಹೋದರತ್ವದ ವಿಶ್ವಮಾನವ ಪ್ರಜ್ಞೆ ಇದೆ. ಷಟ್‌ಸ್ಥಲ, ಪಂಚಾಚಾರ, ಅಷ್ಟಾವರಣಗಳಂತ ತಾತ್ವಿಕ ಸಿದ್ಧಾಂತಗಳೀವೆ, ಕಾಯಕ, ದಾಸೋಹ, ಅರಿವು ಆಚರಣೆಗಳಿವೆ. ಇವೆಲ್ಲವನ್ನು ಗಮನಿಸಿದಾಗ ಮೇಲ್ನೋಟಕ್ಕೆ ಇದು ಧಾರ್ಮಿಕ ಚಳವಳಿ ಎಂದೆನಿಸುತ್ತದೆ. ವಾಸ್ತವ ಹಾಗಲ್ಲ. ಧಾರ್ಮಿಕ ಉದ್ದೇಶಕ್ಕಾಗಿ ಅದು ಹುಟ್ಟಲಿಲ್ಲ. ಬದುಕಿನ ಮೂಲಧಾತುವಾದ ಆರ್ಥಿಕ ಬದುಕಿನ ಆಯಾಮಗಳನ್ನು ಅವಲಂಬಿಸಿ ರೂಪತಳೆದ ಚಳುವಳಿಯಾಗಿರುವುದರಿಂದ ಧಾರ್ಮಿಕತೆಯ ಚೌಕಟ್ಟನ್ನು ಮೀರಿದ ಚಳವಳಿಯಾಗಿದೆ. ಚಾತುರ್ವರ್ಣ್ಯವನ್ನು ಪೋಷಿಸುವ ಭಯ ಮೂಲದ ಧರ್ಮದ ಬದಲಿಗೆ ಎಲ್ಲರನ್ನು ಸಮನಾಗಿ ನೋಡುವ ದಯ ಮೂಲದ ಧರ್ಮವನ್ನು ಧರ್ಮವೆಂದು ಕರೆದರು. ದೇವರು, ಪುರ್ನಜನ್ಮ, ಪಾಪ-ಪುಣ್ಯ, ಸ್ವರ್ಗ-ನರಕಗಳ ಮುಖಾಂತರ ಮೋಸದಿಂದ ಗಳಿಸುವ ಅರ್ಥಕ್ಕೆ ಬದಲಾಗಿ ಶ್ರಮದಿಂದ ಬಂದಿದ್ದು ಲಿಂಗಾರ್ಪಿತಕ್ಕೆ ಯೋಗ್ಯವಾಗುವ ಅರ್ಥವಾಯಿತು. ಇಂದ್ರೀಯ ತೃಷೆಯನ್ನು ಹೆಚ್ಚಿಸುವ ಕಾಮವು, ಲಿಂಗ ಜಂಗಮಕ್ಕೆ ಹಾತೊರೆಯುವ ಬಯಕೆಯಾಗಿತ್ತು. ಸತ್ತ ಮೇಲೆ ಕಾಣದ ಲೋಕದಲ್ಲಿ

ಕಾಣುವ ಮೋಕ್ಷವು ಇದ್ದಾಗಲೆ ದುಃಖವನ್ನು ಮರೆಸುವ ಸುಖವನ್ನು ಸಹಿಸುವ ದಾರಿಯಾಯಿತು. ಹುಟ್ಟುವ ಆಸೆಗಳನ್ನು ಗೆಲ್ಲುವ ಮರಣದ ಭಯದಲ್ಲಿ ಸಾಯುತ್ತಲೆ ಬದುಕುವುದನ್ನು ಹಿಂದೆ ಹಾಕಿದಾಗ ಜನನ ಮರಣವನ್ನು ಗೆದ್ದ ಸುಖವು ಮೋಕ್ಷದ ಹಾದಿಯಾಯಿತು. ಆದ್ದರಿಂದ ಈ ನೆಲದ ಬದುಕು ಹಸನಾಗಬೇಕಾದರೆ ಆ ಲೋಕದ ಪರಿಹಾರಗಳು ಗೌಣವಾದವು ಇಲ್ಲಿ ಕಳೆದು ಕೊಂಡಿದ್ದನ್ನು ಇಲ್ಲಿಯೇ ಹುಡುಕಿ ಕೊಳ್ಳುವ ಮಾರ್ಗವನ್ನು ಅವರು ಧಾರ್ಮಿಕ ಆವರಣಗಳ ಮುಖಾಂತರ ನೀಡಿದರು.

ಬಸವ ಚಳವಳಿ ಬಸವ, ಅಲ್ಲಮ, ಅಕ್ಕ, ಮೊದಲಾದ ಶ್ರಮ ಜೀವಿಗಳು ಸೇರಿ ನಡೆಸಿದ ಒಂದು ಪರಿಪೂರ್ಣ ಚಳವಳಿ. ಕೇಳಸ್ಥರಕ್ಕೆ ಬರುತ್ತಲೆ ಹೊಸ ತತ್ವ ಸಿದ್ಧಾಂತಗಳು ಹುಟ್ಟಿಕೊಳ್ಳುವುದು ಸಾಮಾನ್ಯ. ಇದು ತತ್ವ ಶಾಸ್ತ್ರದಿಂದ ಹಸಿವನ್ನು ನಿಗಿಸುವುದನ್ನು ತಿಳಿಸಿಕೊಡದೆ, ಹಸಿವಿನಿಂದ ಬಯಲವರೆಗೆ, ಅಂದರೆ ಕಾಯಕದಿಂದ ತತ್ವಜ್ಞಾನ ತಿಳಿಸುವ ಪ್ರಾಯೋಗಿಕ ಚಳವಳಿಯಾಗಿದೆ. ಹಲವಾರು ಬುದ್ಧಿಜೀವಿಗಳು ಒಂದೆಡೆ ಸೇರಿ ತಮಗೆ ತಾವೇ ನಾಯಕರಾಗಿ ತಾತ್ವಿಕ ವೈವಿಧ್ಯತೆಗಳ ಮೂಲಕ ಸಮಷ್ಠಿ ಪ್ರಜ್ಞೆಯ ಸಾವಯವ ಸಮ ಸಂಯೋಜನೆ ರೂಪಿಸಿದ ಪ್ರತಿಫಲ ಬಸವ ಚಳುವಳಿ. ಅದು ಮನುಷ್ಯ ಬದುಕಿನ ಜೀವ ಕೇಂದ್ರಿತ ಚಳುವಳಿಯಾಗಿರುವುದರಿಂದ ಮನುಷ್ಯರಿರುವವರೆಗೆ ಅದು ನಿರಂತರ ಪ್ರಸ್ತುತ, ಹಾಗಾಗಿ ಬಸವ ಚಳುವಳಿ ಅದು ಯುಗದ ಚಳುವಳಿಯೂ ಹೌದು ಎಂಬ ನೆಲೆಯಲ್ಲಿ ಚರ್ಚಿಸಲಾಗಿದೆ. ಮನುಷ್ಯರ ಸುಖ ಅಡಗಿದ್ದು ಸ್ವಾತಂತ್ರ್ಯದಲ್ಲಿ ಅದು ನಿಜವಾದ ಸಮತೆ ಬಂದಾಗ ಮಾತ್ರ ಸಾಧ್ಯ. ಈ ಸ್ವಾಂತಂತ್ರ್ಯ ಸಮತೆಗಳೇ ಪರಿಸರ ಸಮತೋಲನಾ ಕಾಪಾಡುವ ಮೂಲ ಶಕ್ತಿಗಳಾಗಿವೆ. ಸ್ವಾಂತಂತ್ರ್ಯ ಸಮತೆಯಿಂದ ಖಾಸಗಿ ಆಸ್ತಿ ನಿರ್ನಾಮವಾಗುವುದು. ಅದರಿಂದ ಮನುಷ್ಯರ ವಸ್ತು ವ್ಯಾಮೋಹ ಇಲ್ಲವಾಗುತ್ತದೆ. ವಸ್ತು ವ್ಯಾಮೋಹ ಇಲ್ಲದಿದ್ದರೆ ಸರಳ ಸಾತ್ವಿಕ ಬದುಕು ಸಾಧ್ಯ. ಅದು ಹಿಂಸೆಯನ್ನು ತೊರೆದು ಶಾಂತಿ ಮತ್ತು ಪ್ರೀತಿಯ ಬದುಕನ್ನು ಕಟ್ಟಿಕೊಡುತ್ತದೆ. ಈಗಾದಾಗ ಶುದ್ಧ ಪರಿಸರ ಇರಲು ಸಾಧ್ಯ.

ಖಾಸಗಿ ಆಸ್ತಿ :

ವಚನಕಾರರ 'ಕಾಯಕ' ನಿಷ್ಠೆ, ಅದರ ಸಾಫಲ್ಯದ ದಾಸೋಹತತ್ವ ಖಾಸಗಿ ಆಸ್ತಿಯನ್ನು ನಿರಾಕರಿಸುತ್ತವೆ. ಅಹಂನಿರಸನವನ್ನು ಕಲಿಸಿಕೊಡುವ ಈ ತತ್ವಗಳು ಮನುಷ್ಯ-ಮನುಷ್ಯರ ಮಧ್ಯೆ ಇರುವ ಎಲ್ಲ ಮೇಲು-ಕೀಳಿನ ಅಡ್ಡ ಗೋಡೆಗಳನ್ನು ಆ ಕೆಲಸವನ್ನು ವಚನಕಾರರ ಬದುಕು ಸಮರ್ಥವಾಗಿ ನಿರ್ವಹಿಸಿದ್ದು ಸರಳ ಬದುಕಿನ ಮೂಲಕ 'ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದರೆ

ಅದು ಕೂಡಲ ಸಂಗಮನಲ್ಲದೇ ಬೇರೆ ಯಾರೂ ಅಲ್ಲ' ಎಂದು ಹೇಳುವ ಮನಸ್ಸು ಖಾಸಗಿ ಒಡೆತನದ ವಿರೋಧಿ ನಿಲುವು ಆಗಿದೆ.

ವಸ್ತು ಮೋಹ :

ಇವತ್ತಿನ ದಿನಗಳಲ್ಲಿ ನಿಸರ್ಗದ ಎಲ್ಲ ರಹಸ್ಯ ಭೇಧಿಸಿದ್ದೇವೆ. ಅದು ನಮಗೆ ವಿರುದ್ಧವಾದ ಪ್ರತಿಕ್ರೀಯೆ ಕೊಡುತ್ತಿದೆ. ವಸ್ತುಗಳ ಮೇಲಿನ ಮೋಹ, ಮನಸ್ಸುಗಳಲ್ಲಿ ತುಂಬಿದ ವಿಷ ಹೊರ ಪ್ರಪಂಚಕ್ಕೆ ಕಕ್ಕಿಬಿಡುತ್ತಿದ್ದೇವೆ. ಅಂದರೆ ಹೆಚ್ಚು ಹೆಚ್ಚು ವಸ್ತುಗಳ ಬೇಡಿಕೆಯಾದಂತೆ ಉತ್ಪಾದನೆ ಕೂಡಾ ಹೆಚ್ಚಾಗುತ್ತದೆ. ಹೀಗಾದಾಗ ಕಾರ್ಖಾನೆಗಳಿಂದ ವಿಷಯುಕ್ತ ಪದಾರ್ಥ ನಿಸರ್ಗಕ್ಕೆ ಸೇರುತ್ತದೆ. ಇದಕ್ಕೆ ಕಾರಣ ನಾವು ಭೋಗ ವಸ್ತುಗಳಲ್ಲಿ ಸಂತೋಷ ಹುಡುಕುತ್ತಿದ್ದೇವೆ ವಿನಃ ನಿಸರ್ಗದೊಂದಿಗೆ ಮನುಷ್ಯ-ಮನುಷ್ಯರ ಮಧ್ಯಯೇ ಸಂತೋಷ ಇರುವುದು ನಮಗಿನ್ನೂ ಗೊತ್ತಾಗುತ್ತಲೇ ಇಲ್ಲ.

ಆನೆಯ ನೇರಿಕೊಂಡು ಹೋದಿರೇ ನೀವು ... ಸತ್ಯದ ನಿಲುವನರಿಯದೆ ಹೋದಿರಲ್ಲ ಎಂದು ಕೇಳುವ ಮೂಲಕ ಬಸವಣ್ಣ ಇವತ್ತು ನಾವು ಎಂತಹ ಸಂದಿಗ್ದ ಪರಿಸ್ಥಿತಿಯಲ್ಲಿ ಬಂದು ತಲುಪಿದ್ದೇವೆ ಎಂಬುದರ ಸಂಪೂರ್ಣ ಅರಿವು ಮಾಡಿಕೊಡುತ್ತಾನೆ.

ಬಸವಣ್ಣನ ಈ ಮಾತಿನಲ್ಲಿ ಶ್ರೀಮಂತ ಸಹೋದರರು ನೀವು ಭೋಗಕ್ಕಾಗಿ ಆನೆ, ಕುದುರೆಯನ್ನೇರಿಕೊಂಡು ಹೋಗುತ್ತಿದ್ದೀರಿ. ಅಂದರೆ ಇವತ್ತಿನ ದ್ವೀಚಕ್ರವಾಹನ, ನಾಲ್ಕು ಚಕ್ರದ ವಾಹಾನಗಳಿಗೆ ಶ್ರೀಮಂತರು ಪ್ರಯಾಣಿಸುತ್ತಾರೆ.

ಹಣೆಯ ಮೇಲೆ ಕುಂಕುಮ, ಮೈಯಲ್ಲಿ ಘಂ ಎನ್ನುವ ತೈಲ, ಮರುಗ, ಮಲ್ಲಿಗೆ, ಸಂಪಗೆ, ಈ ರೀತಿಯ ಸುಗಂಧ ದ್ರವ್ಯ ಒಂದಿಷ್ಟು ಹಚ್ಚಿಕೊಂಡು ಹೋಗುವ ಶ್ರೀಮಂತ ಜನರಿಗೆ ನಿಸರ್ಗದಲ್ಲಿ ಅದೆಷ್ಟೋ ಕೊರತೆಯಾಗುತ್ತಿದೆ, ನಿಸರ್ಗವನ್ನು ಬಳಸಿ ಬಿಸಾಡುವ ಪ್ರವೃತ್ತಿಗೆ ಇಳಿದಿದ್ದೇವೆ. ಅಂಥದ್ದರಲ್ಲಿ ಹೀಗೆ ಕಾರಲ್ಲಿ ಓಡಾಡುವ ವಿಮಾನಗಳಲ್ಲಿ ಹಾರಾಡುವವರಿಗೆಯಾವುದರ ಅರಿವು ಇರುವುದೇ ಇಲ್ಲವೆನ್ನುತ್ತಾನೆ ಬಸವಣ್ಣ.

ಏಕೆಂದರೆ ಯಾವ ವ್ಯಕ್ತಿ ಜನಸಾಮಾನ್ಯರೊಂದಿಗೆ ಬೆರೆಯುತ್ತಾನೋ ಆತನಿಗೆ ಪ್ರತಿಯೊಂದರ ಅರಿವಿರುತ್ತದೆ. ಹೀಗೆ ರೈತರನ್ನು ಬಡವರನ್ನು ಕಾರ್ಮಿಕರನ್ನು ಕಂಡರೆ ಅವರನ್ನು ಶಾಪಗ್ರಸ್ಥರಂತೆ

ಕಾಣುವ ಈ ಶ್ರೀಮಂತ ಸಮುದಾಯಕ್ಕೆ ಹಣದ ವ್ಯಾಮೋಹವೇ ತುಂಬಿ ತುಳುಕಾಡುತ್ತಿರುತ್ತದೆ. ಹೀಗಿರುವಾಗ ಸತ್ರಯದ ನಿಲುವನ್ನರಿಯಲು ಹೇಗೆ ಸಾಧ್ಯ ? ಹೀಗೆ ನಾವು ವರ್ತಿಸುತ್ತಿದ್ದರೆ. ನಿಸರ್ಗವೂ ಕೂಡ ತನ್ನ ಪ್ರಾಬಲ್ಯ ತೋರಿಸಿಯೇ ತೋರಿಸುತ್ತದೆ ಎಂಬುದು ಪ್ರತಿಯೊಬ್ಬರೂ ಅರಿತು ಬಾಳಬೇಕು ಎಂಬ ಕಿವಿಮಾತು ಕೊಟ್ಟಿದ್ದಾರೆ.

ಹಿಂಸೆ :

ಆಧುನಿಕ ಜಗತ್ತು ಹಲವಾರು ತಲ್ಲಣ ಹಿಂಸೆಗಳಿಗೆ ತೆರೆದುಕೊಂಡಿದೆ. ಬಹುಮುಖ್ಯವಾಗಿ ವಸ್ತುವ್ಯಾಮೋಹದ ದಾಸ್ಯಕ್ಕೆ ಒಳಗಾಗಿದೆ. ಇದರಿಂದ ಜೀವ ಸಂಬಂಧ, ಜೀವನ ಪ್ರೀತಿಗಿಂತ ವಸ್ತು ಸಂಬಂಧ, ವಸ್ತುಗಳ ಮೇಲಿನ ಪ್ರೀತಿ ಹೆಚ್ಚಾಗಿದೆ. ಇದು ಆಸ್ತಿ ಸಂಗ್ರಹದ ಭಾಗವಾಗಿ ಜೀವವಿರೋಧಿ ನಿಲುವನ್ನು ತಾಳಿದೆ. ಇದನ್ನು ವಚನಕಾರರು ತಮ್ಮ ಚಳುವಳಿಯ ಮೂಲಕ ಸಾರಸಗಟಾಗಿ ತಿರಸ್ಕರಿಸಿದರು ಮತ್ತು ಸಕಲ ಜೀವರಾಶಿಗಳಲ್ಲಿ ದಯ ತೋರುವ ಮೂಲಕ ಹಿಂಸೆ ನಿರಾಕರಿಸಿದ ವಚನ ಚಳುವಳಿ ಇಂದಿಗೂ ಪ್ರಸ್ತುತ.

ಪರಿಸರ ಮತ್ತು ನಾವು :

ಉತ್ತಮ ಬೆಳೆ ನೀಡಿ ಸದಾಕಾಲ ರೈತನ ಕುಟುಂಬದ ಜತೆಗೆ ಜಗತ್ತಿನ ಜನರನ್ನೇ ಸಲುಹಿಕೊಂಡು ಬಂದಿರುವ ಭೂತಾಯಿಗೆ ಬಂಜೆತನ ಉಂಟಾದರೆ ? ಇಷ್ಟು ವರ್ಷಗಳ ಕಾಲ ಉತ್ತಮವಾದ ಫಸಲು ಕೊಟ್ಟು ಭೂಮಿ ಈಗ ಬೆಳೆ ಬೆಳೆಯುತ್ತಿಲ್ಲ. ಆಚಷ್ಟು ಬೆಳೆದು ಹೊಟ್ಟೆ ತುಂಬಿಕೊಳ್ಳುತ್ತಿದ್ದ ರೈತ ಈಗ ಕಂಗಾಲಾಗಿದ್ದಾನೆ. ಜೀವನಾಧಾರವಿದ್ದ ಭೂಮಿ ಅನ್ನವೇ ಬೆಳೆಯದಿದ್ದರೆ ಮುಂದೆ ಗತಿ ಏನು ? ಕೃಷಿಯನ್ನೇ ನಂಬಿಕೊಂಡು ಬದುಕುತ್ತಿರುವ ರೈತ ಕುಟುಂಬಗಳ ಪಾಡೇನು ?

ನಗರೀಕರಣದ ಹೆಚ್ಚಳದಿಂದಾಗಿ ಕೃಷಿಭೂಮಿ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಅವೈಜ್ಞಾನಿಕ ನೀರಿನ ಬಳಕೆಯಿಂದಾಗಿ ಭೂಮಿ ಸವುಳಾಗುತ್ತಿದೆ. ಇಳುವಳಿ ಕುಂಠಿತಗೊಳ್ಳುತ್ತಿದೆ. ಆಹಾರ ಧಾನ್ಯಗಳ ಬೆಲೆ ಹೆಚ್ಚಾಗುತ್ತಿವೆ.

ಇನ್ನೂ ಎಲ್ಲರನ್ನೂ ಆಕರ್ಷಿಸುತ್ತಿರುವ ಪ್ಲಾಸ್ಟಿಕ್ಗೆ ಒಂದು ಮಾಯಾವಿ ಗುಣವಿದೆ. ಮೇಲ್ನೋಟಕ್ಕೆ ಪ್ಲಾಸ್ಟಿಕ್ ಎಂದರೂ ಕೂಡ ಹೊಸ ಹೊಸ ರೂಪದಲ್ಲಿ ವಿಶೇಷವಾಗಿ ಫ್ಯಾಶನ್

ಲೋಕದ ತರುಣಿಯರ ಸೌಂದರ್ಯ ವರ್ಧಕಗಳಿಂದ ಹಿಡಿದು ಮಗುವಿಗೆ ಹಾಲು ಕುಡಿಸುವ ಬಾಟಲಿಗಳವರೆಗೂ ಪ್ಲಾಸ್ಟಿಕನದೇ ಕಾರುಬಾರು.

ಕಳೆದ ಸುಮಾರು ವರ್ಷಗಳಿಂದ ಹಿಡಿದು ಮನುಷ್ಯನ ಪರಿಸರವನ್ನು ಅತ್ಯಂತ ಗಾಢವಾಗಿ ಆವರಿಸಿದ ವಸ್ತು ಎಂದರೆ ಪ್ಲಾಸ್ಟಿಕ್ ಈ ಅವಧಿಯಲ್ಲಿ ಔಷಧ ಉದ್ಯಮಕ್ಕೆ ಮತ್ತು ವೈದ್ಯಕೀಯ ರಂಗಕ್ಕೆ ಅತಿ ಹೆಚ್ಚು ಅದಾಯ ಕೊಡುತ್ತಿರುವದೇ ಪ್ಲಾಸ್ಟಿಕ್ ! ಅತಿ ಶೀಘ್ರವಾಗಿ ಕ್ಯಾನ್ಸರ್ ರೋಗ ಬೆಳೆಯುವಲ್ಲಿ ಪ್ಲಾಸ್ಟಿಕ್‌ನಲ್ಲಿರುವ 'ನಾನಿಲ್ಫಿನಾಲ್' ಹೆಸರಿನ ರಾಸಾಯನಿಕ ಗುಣವೇ ಕಾರಣ. ಪ್ಲಾಸ್ಟಿಕ್ ನೊಂದಿಗೆ ಕೈಜೋಡಿಸಿರುವ ಡಿ.ಡಿ.ಟಿ. ಇವತ್ತಿನ ರೈತರು ಉಪಯೋಗಿಸುವ ಕೀಟನಾಶಕ ಎಂಡೋಸಲ್ಫಾನ್, ಎನಾಮೆಲ್ ಪೇಂಟ್. ಅಷ್ಟೇ ಏಕೆ ನಾವಿಂದು ಬಳಸುವ ಬಿಳಿ ಕೂದಲುಕರಿಮಾಡುವಲ್ಲಿ ಬಳಸುವ ಬಣ್ಣ ಕೂಡ ಹೊರತಾಗಿಲ್ಲ.

ಈಮೇಲಿನವುಗಳ ಬಗ್ಗೆ ಜನಜಾಗ್ರತಿ ಮೂಡಿಸಬೇಕಾದರೆ ಕೇವಲ ಸಂಘ ಸಂಸ್ಥೆಗಳಿಂದಷ್ಟೇ ಅಲ್ಲ ಸರ್ಕಾರದ ಜವಾಬ್ದಾರಿ ಕೂಡ ಇದೆ. ಶಾಲಾ ಪಠ್ಯ ಪುಸ್ತಕಗಳಲ್ಲಿ ಪರಿಸರದ ಬಗ್ಗೆ ರೈತರು ಬಳಸುವ ಮಿಥೆನ್, ಎಂಡೋಸಲ್ಪಾನ್‌ಗಳ ಬಗ್ಗೆ ಪಾಠಗಳಿರಬೇಕು. ಒಮ್ಮೆ ಪ್ಲಾಸ್ಟಿಕ್ ಬಳಸಿದರೆ ಮತ್ತೊಮ್ಮೆ ಬಳಸಲೇಬಾರದು. ಇದರೊಂದಿಗೆ ಒಂದು ಪ್ರಶ್ನೆ ಉದ್ಭವಾಗುವುದಂತು ಸತ್ಯ ಏನೆಂದರೆ, ಈ ಕಂಪನಿಗಳೆಲ್ಲ ಮುಚ್ಚಿದರೆ ಹೇಗೆ ? ಅದೇಷ್ಟೋ ಜನರಿಗೆ ಉದ್ಯೋಗ ಕಲ್ಪಿಸಿಕೊಟ್ಟಿದೆ. ನಂತರ ಇವರೆಲ್ಲ ದಿಕ್ಕುಗಾಣದ ಹಾಗಾಗುತ್ತಾರಲ್ಲ ಎಂಬ ವಿಚಾರ ಸಾಮಾನ್ಯ . ಹೀಗಿರುವಾಗ ಇವರನ್ನೆಲ್ಲ ಪ್ಲಾಸ್ಟಿಕ್ ಉದ್ಯಮದಿಂದ ಹಸಿರು ಉದ್ಯಮಕ್ಕೆ ಸೇರಿಸಬೇಕು.

ಮುಂದುವರಿದ ಶ್ರೀಮಂತ ರಾಷ್ಟ್ರಗಳು ತಾವು ಬಳಸಿದ ಕಚಡಾ ಪದಾರ್ಥ ನೆಲದಲ್ಲಿ ತೆಗ್ಗು ತೋಡಿ ಹೂಳಿಬಿಡುತ್ತಾರೆ. ನಮ್ಮಲ್ಲಿ ಮಾತ್ರ ಗಾಳಿಯಲ್ಲಿ ಎಲ್ಲೆಂದರಲ್ಲಿ ತೇಲಾಡುತ್ತಿರುತ್ತವೆ. ಇದಕ್ಕೆ ಪರ್ಯಾಯವಾಗಿ ಬಟ್ಟೆಚೀಲಗಳು ನಾರಿನ ಚೀಲ ಬಳಸುವುದು ಉತ್ತಮ. ಕೃಷಿಯಲ್ಲಿ ಪುನಃ ಘುಂಡಿ, ಸಣಮು, ನಾಗಿಣಿಘಡಿ, ಬೆಳೆಯಬೇಕು. ನಾರಿನ ಚೀಲಗಳಿಗೆ ಬಾಳೆಗಿಡದ ನಾರು, ಅಡಿಕೆ ಹಾಳೆಗಳಂತಹ ನೈಸರ್ಗಿವಾದ ಅವಶ್ಯಕ ವಸ್ತು ಬೆಳೆಯಬೇಕು. ಇದರಿಂದ ಗುಡಿಕೈಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಈಗೀಗ ಮಾತ್ರ ದಪ್ಪ ಕಾಗದದ ಚೀಲಗಳ ತಯಾರಿಕಾ ಘಟಕಗಳು ಪ್ರಾರಂಭವಾಗಿವೆ ಸಂತೋಷದ ಸಂಗತಿ ಆದರೂ ಇವತ್ತಿನ ಎಲ್ಲ ಕಂಪನಿಗಳು ಸಂಪೂರ್ಣವಾಗಿ ಪರಿಸರಕ್ಕೆ ಮಾರಕವಾಗುವ ವಸ್ತುಗಳನ್ನೇ ಬಳಸುವುದು ಕೊಂಚ ಮಟ್ಟಿಗಾದರೂ ಕೈ ಬಿಡಲೇಬೇಕು.

ಇಜಿಪ್ಟಿನ ನಾಗರಿಕತೆ ಬಹುತೇಕ ಪ್ರದೇಶ ವ್ಯವಸಾಯಕ್ಕೆಂದೆ ನಿರ್ಮಿಸಿರುವ ಬ್ರಹತ್ ಕಾಲುವೆಯಲ್ಲಿ ನೀರು ಹರಿಯುತ್ತಾ ಇದ್ದುದ್ದರಿಮದ ಕಾಲುವೆ ದಂಡೆಯಲ್ಲಿನ ಹೊಲಗಳು ಹಚ್ಚ ಹಸುರಿನಿಂದ ತೂಗುತ್ತಿದ್ದಂತಹ ಕಾಲವೊಂದಿತ್ತು. ವಾಸ್ತವದಲ್ಲಿ ಇಜಿಪ್ಟಿನ ಬಹುತೇಕ ಪ್ರದೇಶ ಮರಭೂಮಿ !

ಅಂದರೆ ಭೂಮಿಗೆ ಹೆಚ್ಚು ನೀರು ಹಾಯಿಸಿದಷ್ಟು ಫಲವತ್ತಾದ ಬೆಳೆ ಬರುತ್ತದೆಂಬುದು ಸುಳ್ಳು. ಹೀಗಾದರೆ ಅದು ಸವುಳುಪ್ರದೇಶವಾಗುತ್ತದೆ. ಹೊಲ ಗದ್ದೆಗಳಿಗೆ ಹಿತಮಿತ ನೀರು ಹಾಯಿಸಬೇಕು. ಜೊತೆಗೆ ರೈತರು ಪ್ರತಿ ವರ್ಷಒಂದೇ ರೀತಿಯ ಬೆಳೆ ಹಾಕುವುದರಿಂದ ಇವತ್ತು ಎಲ್ಲ ರೈತರು ರಸಗೊಬ್ಬರ ಬಳಸುತ್ತಿರುವುದರಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗುತ್ತಿದೆ. ಕ್ರಮೇಣ ಮಣ್ಣಿನ ಬಣ್ಣ ಬದಲಾವಣೆಯಾಗುತ್ತಲಿದೆ.

ನಿಸರ್ಗ ವ್ಯವಸ್ಥೆಯಲ್ಲಿ ಸಜೀವ ಇಂದ್ರಿಯಗಳು ಮತ್ತು ನಿರ್ಜೀವ ಅವಯವ ಅವಶೇಷಗಳಿಗೆ ಬೆಳೆಯೇ ಅನ್ನಚಕ್ರದ ಕೊಂಡಿ. ನಮ್ಮ ದನ ಕರು, ಎತ್ತುಗಳು ವ್ಯವಸಾಯಕ್ಕೆ ಪೂರಕ. ಅವುಗಳ ಸಗಣಿ–ಗ್ವಾತ (ಗಂಜಲು) ಭೂಮಿಗೆ ಬಿಡುತ್ತವೆ. ಅಥವಾ ಕುರಿ ಕೂಡಿಸುವುದು ಇದು ಉತ್ತಮ ನೈಸರ್ಗಿಕ ಪೌಷ್ಟಿಕಾಂಶ. ಹೀಗೆ ಮಾಡಿದಾಗ ಭೂಮಿಯಿಂದ ಹೊರಬಂದ ಪೌಷ್ಟಿಕಾಂಶ ಮತ್ತೆ ಭೂಮಿಗೆ ಸೇರಿಸುವ ಕ್ರೀಯೆ. ಹೀಗೆ ಭೂಮಿಗೆ ಬಿದ್ದ ಪೌಷ್ಟಿಕಾಂಶ ನಾವು ಬೆಳೆದ ಬೆಳೆಗಳು ಪುನಃ ಪಡೆದುಕೊಳ್ಳುತ್ತೇವೆ.

ಸೃಷ್ಟಿಯಲ್ಲಿ ಪ್ರತಿಯೊಂದು ಜೀವಿಗೂ ಅನ್ನದ ವ್ಯವಸ್ಥೆ ನಿಸರ್ಗವೇ ಕಲ್ಪಿಸಿದೆ. ಹಾಗೆಯೇನಿಸರ್ಗದ ಪ್ರತಿಯೊಂದು ಜೀವಿಯ ಅಳಿವು ಇನ್ನೊಂದು ಜೀವಿಗೆ ಆಹಾರವಾಗುತ್ತದೆ. ಇವೆಲ್ಲವೂ ನಿಸರ್ಗಕ್ಕೆ ಪೂರಕವಾಗಿ ಒಂದನ್ನೊಂದು ಅವಲಂಬಿಸಿವೆ. ಗಿಡ–ಮರಗಳ ಅವಶೇಷಗಳನ್ನು ತಿಂದು ಬಾಳುವ ಜೀವಿಗಳು ಸತ್ತಮೇಲೆ ಅವೆಲ್ಲ ಗಿಡಮರಗಳಿಗೆ ಪುನಃ ಪೋಷಕಾಂಶಗಳಾಗಿ ಲಭಿಸುತ್ತವೆ.

ಮಂಗಳ ಗ್ರಹ ಚಂದ್ರನ ಬಗ್ಗೆ ತಲೆಕೆಡಿಸಿಕೊಂಡಿದ್ದೇವೆ. ಏನಃ ನಮ್ಮ ಮನೆಯಲ್ಲಿ ತುಂಬಿಕೊಂಡ ಕಸದ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ನಮ್ಮ ಮನೆಯ ಕಸವೆಲ್ಲ ತೆಗೆದು ಇನ್ನೊಬ್ಬರ ಮನೆಯ ಅಂಗಳದಲ್ಲಿ ಹಾಕುತ್ತೇವೆ. ಪುನಃ ಅದು ಇನ್ನೊಬ್ಬರ ಮನೆಯಲ್ಲಿ ಬೀಳುತ್ತದೆ ಎಂಬ ಪ್ರಜ್ಞೆಯೇ ಮೂಡುತ್ತಿಲ್ಲ.

ನಿಸರ್ಗ ನಮಗೆ ಅಪೂರ್ವವಾದ ಕೊಡುಗೆ ನೀಡಿದರೂ ಕೂಡ ನಾವುಕೈಯಾರೆ ಹಾಳು ಮಾಡಿಕೊಳ್ಳುತ್ತಿದ್ದೇವೆ. ಇದಕ್ಕೆ ಕಾರಣ ಮನುಷ್ಯ ಭೋಗ ಜೀವನ, ಇದರಿಂದಾಗಿ ಬರಗಾಲ ಇಲ್ಲವೆ ಅತಿಯಾದ ಮಳೆ. ಇದರ ಮೇಲೆ ತೀರದ ಸಾಲ ಇದರಿಮದ ರೈತರ ಆತ್ಮಹತ್ಯೆ ರಾಜಸ್ಥಾನದಂತಹ ಮರುಳುಗಾಡಿನಲ್ಲಿ ಕಾಳೆಗ್ರಾಮ ಪ್ರದೇಶದಲ್ಲಿ ಐದು ನದಿಗಳು ಪ್ರತಿ ವರ್ಷ ಪೂರ್ತಿ ಹರಿಯುವಂತೆ ಮಾಡಿದ್ದಾರೆ. ಕಾರಣ ಬಿದ್ದಮಳೆ ಅಂತರ್ಜಲವಾಗುವಂತೆ ಮಾಡಿದ್ದಾರೆ.

ಪ್ರತಿಯೊಬ್ಬರ ಕರ್ತವ್ಯವೆಂದರೆ ಬಿದ್ದ ಮಳೆ ನೀರು ಇಂಗುವಂತೆ ಮಾಡುವುದು. ಈ ಪ್ರಜ್ಞೆ ಎಲ್ಲರಲ್ಲಿ ಬರಬೇಕು. ಹೀಗಾಗಬೇಕಾದರೆ ಜಾಗ್ರತ ಅಭಿಯಾನ ಆರಂಭಿಸಬೇಕು. ಇದಕ್ಕೆ ರಾಜಕಾರಣಿಗಳು, ಸರ್ಕಾರದ ಮೇಲೆ ಭಾರ ಹಾಕಲೇಬಾರದು. ಕಾರಣ ಗ್ರಾಮೀಣ ಪ್ರದೇಶದ ಸಮದ್ಯ ಅವರಿಗೆ ಗೊತ್ತಾಗುವುದು ಕೇವಲ ಚುನಾವಣೆ ಸಂದರ್ಭದಲ್ಲಿ ಮಾತ್ರ.

ಬಹಳ ಸಣ್ಣ ವಿಷಯ ನೋಡೊದಾದ್ರೆ ಬಹುರಾಷ್ಟ್ರೀಯಕಂಪನಿಗಳು ನಮ್ಮ ದೇಶಕ್ಕೆ ಲಗ್ಗೆ ಇಟ್ಟಿವೆ. ಆದರೆ ಅವುಗಳು ಉತ್ಪಾದಿಸುವ ಉತ್ಪನ್ನ ತೊಗಳಲೆ ಬೇಕೆಮಬ ಒತ್ತಾಡ ಇರಲಿಲ್ಲವಲ್ಲ. ಒಂದು ವೇಲೆ ಈ ಉತ್ಪನ್ನಗಳಿಲ್ಲದೆ ನಾವು ಬದುಕಲು ಸಾದ್ಯವೇ ಇಲ್ಲವೆಮದರೆ ಕುಳ್ಳಬಹುದು. ಆದರೆ ನೀರು ಹಾಗಲ್ಲ. ನಮ್ಮ ಬದುಕೇ ನಿಂತಿರುವುದು ನೀರಿನ ಮೇಲೆ.

ರಾಸಾಯನಿಕಗಳನ್ನು ಉತ್ಪಾದಿಸುವ ಕಾರ್ಖಾನೆ ಮಾಲಿಕನಿಗೂ ಕುಡ ವಿಷಯುಕ್ತ ಗಾಳಿ, ನೀರಿನ ಅವಶ್ಯಕತೆ ಇದೆ. ನಮಗಾಗಿ ನಾವು, ನಾಳಿನ ಪೀಳಿಗೆಗಾಗಿ ಹಸಿರು ಕ್ರಾಂತಿ ಆರಂಭಿಸಲೇಬೇಕು.

ಇಡೀ ವಿಶ್ವದ ವ್ಯಾಪಾರ ವಹಿವಾಟುಗಳನ್ನು ಬಹುರಾಷ್ಟ್ರೀಯ ಕಂಪನಿಗಳ ಮೂಲಕ ಅಮೇರಿಕ ನಿಯಂತ್ರಿಸುತ್ತದೆ. ಒಂದು ಕಾಲದಲ್ಲಿ ಅಮೇರಿಕಾ ಇಡೀ ಜಗತ್ತನ್ನೇ ಹೆದರಿಸುವತ್ತ ಅಗಿತ್ತು. ಅದಕ್ಕೆ ಪ್ರತಿಕ್ರೀಯಿಸಿದ ಸದ್ದಾಂ ಹುಸೇನನ ಗತಿ ನೆನಪಿರಬೇಕಲ್ಲ. ಆದರೆ ನಾವು ಯಾರನ್ನೂ ಹೆದರಬೇಕುಲ್ಲ. ನಮ್ಮಲ್ಲಿ ಕೃಷಿ ಕ್ಷೇತ್ರಕ್ಕೆ ಪೂರಕ ಪ್ರೇರಕವಾಗುವ ಸಗಣಿ-ಗಂಜಳ (ಗ್ವಾತ) ಎರಡು ದೊಡ್ಡ ಅಸ್ತ್ರ. ಇವೆರಡನ್ನಿಟ್ಟುಕೊಂಡು ಕೃಷಿಯಲ್ಲಿ ರಸಾಯನಿಕಗಳಿಲ್ಲದೇ ಅಪೂರ್ವ ಕ್ರಾಂತಿ ಮಾಡಬಲ್ಲೇವು. ಇವತ್ತು ಕೂಡ ಬಿತ್ತುವಾಗ ನಮ್ಮ ಜನರು ಗ್ವಾತದಿಮದಲೇ ಬೀಜೋಪಚಾರ ಮಾಡುತ್ತಾರೆ. ಬೀಜ ಹುಸಿ ಹೋಗುವುದಿಲ್ಲವೆಂಬುದು ಸತ್ಯ.

ನಿಸರ್ಗದ ಕೂಸಾದ ಮಾನವ ಆದಿಕಾಲದಿಂದಲೂ ನಿಸರ್ಗದೊಂದಿಗೆ ತನ್ನ ಸ್ಥಾನ ಭದ್ರಪಡಿಸಿಕೊಳ್ಳಲು ಹೋರಾಡುತ್ತ ನಿಸರ್ಗಕ್ಕೆ ಶರಣಾಗತನಾಗಿದ್ದಾನೆ. ಆದಿಮಾನವನಿಗೆ ನಿಸರ್ಗವೇ ತನ್ನ ಬದುಕಿನ ಭಾಗವಾಗಿತ್ತೆಂದು ಹೇಳಬಹುದು. ನಿಸರ್ಗದಿಂದ ಅಪಾರ ಸಂತೋಷ ಪಡೆದುಕೊಂಡಿದ್ದ ಗಿಡ–ಮರ ಸಸ್ಯ ನದಿ ಬೆಟ್ಟ ಹಳ್ಳ–ಕೊಳ್ಳ ಇವುಗಳೊಮದಿಗೆ ತನ್ನ ಬದುಕನ್ನು ಕಂಡುಕೊಂಡಿದ್ದನು. ಒಮ್ಮೊಮ್ಮೆ ಪ್ರಕೃತಿ ಮುನಿಸಿಕೊಂಡಾಗ ಬೆಚ್ಚಿಬಿದ್ದು, ಮತ್ತೊಮ್ಮೆ, ಮತ್ತೊಮ್ಮೆ ಇದೊಂದು ಅಭೂತಪೂರ್ವ ಸಂಪತ್ತೆಂದು ಸರಳವಾಗಿ ಸ್ವೀಕರಿಸತೊಡಗಿದ.

ಕ್ರಮೇಣ ಮರದ ತೊಗಟೆಗಳಿಂದ ಶರಿರವನ್ನು ನಿಸರ್ಗ ಪ್ರತಿಕ್ರೀಯಿಸುವ ಚಳಿ–ಮಳೆ, ಗಾಳಿಗಳಿಂದ ರಕ್ಷಿಸಿಕೊಂಡು ಆಹಾರಕ್ಕಾಗಿ ಬೇಟೆಯಾಡಿ ಮಾಂಸದಿಂದ ಹಸಿವು ಹಿಂಗಿಸಿಕೊಳ್ಳತೊಡಗಿದ. ಹೀಗೆ ಬದಲಾಗುತ್ತಾ ನಿಸರ್ಗದತ್ತವಾಗಿ ಬೆಳೆಯುವ ಗೆಡ್ಡೆ–ಗೆಣಸು, ತನ್ನ ಹಸಿವಿಗೆ ಉತ್ತಮ ಆಹಾರವೆಂದು ತಿಳಿದು ಮಾಂಸಹಾರದಿಂದ ಸಸ್ಯಾಹಾರದತ್ತ ತಾನಾಗಿಯೇ ವಾಲತೊಡಗಿದ. ಸ್ಯಾಹಾರಿಗಳ ಗುಣಧ,ರ್ಮಗಳ ಪ್ರಯೋಗಕ್ಕೆ ತನ್ನನ್ನೇ ಪ್ರಯೋಗಿಸಿಕೊಂಡು ರುಚಿ ನೊಡಿ ತನಗೆ ಆಹಾರಕ್ಕಾಗಿ ಹಸಿವನ್ನು ಹಿಂಗಿಸಲು ಸಸ್ಯಗಳನ್ನೇ ಕೆಲವು ಹಸಿರೂಪದಲ್ಲಿ ಇನ್ನು ಕೆಲವು ಬೇಯಿಸಿ ತಿನ್ನಬೇಕೆಂಬುದನ್ನು ತಿಳಿದುಕೊಂಡ. ಈ ಮೂಲಕ ಸಸ್ಯಗಳ ಮತ್ತು ತನ್ನ ಆಹಾರವಾಗಿ ಕಂಡ.

ಇನ್ನೂ ಜನಪದರಲ್ಲಿ ಮತ್ತು ವೈದ್ಯ ಪದ್ಧತಿಯಲ್ಲಿ ಸಸ್ಯದ ಮಹತ್ವ ಕುರಿತು ಹೇಳಲಾಗಿದೆ. ಹೀಗೆ ಸಸ್ಯ ಕಿತ್ತು ತರುವಾಗ ಸೊಪ್ಪು ತರುವಲ್ಲಿ ಕೃಷಿ ಕೆಲಸದಲ್ಲಿ ತೊಡಗಿದ್ದಾಗ ಮೈಗೆ ಹುಳು–ಹುಪ್ಪಡಿ ಕಡಿದರೆ, ಇಲ್ಲವೆ ಸಸ್ಯಗಳೇ ಮೈಗೆ ಪರಚಿದರೆ ಋತುಮಾನಗಳಿಗನುಗುಣವಾಗಿ ವ್ಯತ್ಯಾಸದಿಮದ ಅನಾರೋಗ್ಯಕ್ಕೆ ಒಳಗಾದರೆ ಬಂಜೆತನ ಇವು ಮನುಷ್ಯರಿಗಾದರೆ, ದನಕರುಗಳಿಗೂ ಮೇಯಲಿಕ್ಕೆ ಹೋದ ಸಂದರ್ಭದಲ್ಲಿ ಹಾವು ಕಡಿತ, ತಿನ್ನಬಾರದ ಕೆಲ ಸಸ್ಯತಿಂದಾಗ, ಬಾಯಲ್ಲಿ ಜೊಲ್ಲು ಬಿಡುತ್ತಾ ಮಂಕುಬಡಿದಂತೆ ಕೂಡುತ್ತಿದ್ದವು. ಇವುಗಳಿಗೆಲ್ಲ ಅಂದರೆ ಮನುಷ್ಯನಿಂದ ಹಿಡಿದು ಸಾಕುಪ್ರಾಣಿ ಪಕ್ಷಿಗಳಿಗೆಲ್ಲ ಸಸ್ಯಗಳು ಮರಗಳ ಬೇರು, ತೊಗಟೆ, ಎಲೆ ಉಪಯೊಗಿಸಿ ಔಷಧಿಗಳು ತಯಾರಿಸುತ್ತಿದ್ದರು. ಈ ಔಷಧ ತಯಾರಿಸಿ ಸಸ್ಯ ಹೆಸರು ಅವರು ಹೇಳುತ್ತಿರಲಿಲ್ಲ. ಸಸ್ಯದ ಹೆಸರು ಹೇಳಿದರೆ ಅತೀ ಶೀಗ್ರವಾಗಿ ಬೇನೆ ಕಡಿಮೆಯಾಗುವುದಿಲ್ಲವೆಂದು ನಮಬಿಕೆಯಿಮದ ಈ ಸಸ್ಯ ಜನಪದ ಆದಿಮಾನವನಿಂದ ಇವತ್ತಿನವರೆಗೂ ಔಷಧಿಯಾಗಿ ಕೆಲಸ ಮಾಡುತ್ತಿದೆ.

ಪ್ರಾಚೀನ ಕಾಲದಿಂದ, ವಚನಕಾರರಿಂದ, ಇವತ್ತಿನವರೆಗೆ ಸಸ್ಯೌಷಧಿಯಾಗಿ ಹಲ-ಕೆಲ ಸಸ್ಯ, ಮರ ಬಳ್ಳಿಗಳು ಬಳಸುತ್ತಾ ಬಂದಿದ್ದಾರೆ.

ಆದಿ ಮಾನವನಿಂದ ಹಿಡಿದು ಇವತ್ತಿನ ಗ್ರಾಮೀಣ ಜನರವರೆಗೆ ಯಾವುದೇ ಒಂದು ಸಸ್ಯ ಔಷಧಕ್ಕಾಗಿ ಬೇಕಾದರೆ, ಅದರ ಅನುಮತಿ ಪಡೆದೇ ಆ ಸಸ್ಯಕ್ಕೆ ಕ್ಷಮೆ ಕೇಳಿ ಕಿತ್ತುತ್ತಾರೆ ಜೊತೆಗೆ ನಿನ್ನಿಂದ ಇನ್ನೊಂದು ಜಿವ ಉಳಿಯಲಿ ಎಂದು ಹೇಳಯೋ ಸಸ್ಯಕಿತ್ತು ತರುತ್ತಾರೆ ಅಂದರೆ ಅತಿ ಅವಶ್ಯವಿದ್ದರೂ ಕೂಡ ಒಂದು ಸಸ್ಯ ಕಿತ್ತುವುದು ಅಪರಾಧ. ಹಿಂಸೆಯೆಂದೆ ಜನ ನಂಬಿದ್ದರು. ಆದರೆ ಇವತ್ತಿನ ದಿನಗಳಲ್ಲಿ ಅದೆಷ್ಟೋ ಸಸ್ಯ ಗಿಡ ಬಳ್ಳಿಗಳ ಮಾರಣ ಹೋಮವೇನಡೆದಿರುವುದು ದುರಂತದತ್ತ ಕೊಂಡೊಯ್ಯುವುದೇ ಆಗಿದೆ.

ಈ ಕ್ಷಣದಿಂದಲೇ ಸಸ್ಯಮರ ಬಳ್ಳಿಗಳ ಮಾರಣ ಹೋಮ ನಿಲ್ಲಿಸಿದರೆ ಉತ್ತಮ ಇಲ್ಲದೇಹೋದರೆ ಇಡೀ ಜೀವಜಾಲದ ಮಾರನ ಹೋಮವಾದೀತು ಈ ಕ್ಷಣದಿಂದಲೇ ಎಚ್ಚೆತ್ತುಕೊಳ್ಳೋಣ.

ಬಸವಣ್ಣನ ವಚನವೊಂದು ನೋಡುವುದಾದರೆ ;

ಹಸಿದು ಎಕ್ಕೆಯ ಕಾಯ ಮೆಲಬಹುದೆ?
ನೀರಡಿಸಿ ವಿಷ ಕುಡಿಯಬಹುದೆ?
ಸುಣ್ಣದ, ತಯ್ಯಲ[ದ] ಬಣ್ಣವೊಂದೆ ಎಂದಡೆ
ನಂಟುತನಕ್ಕೆ ಉಣಬಹುದೆ?
ಲಿಂಗಸಾರಾಯ ಸಜ್ಜನರಲ್ಲದವರ
ಕೂಡಲಸಂಗಮದೇವರೆಂತೊಲಿವ?

ಇಪ್ಪತ್ತೊಂದನೆ ಶತಮಾನದ ಪ್ರತಿಯೊಂದು ಆಗು ಹೋಗುಗಳಿಗೆ ಹನ್ನೆರಡನೆಯ ಶತಮಾನದಲ್ಲೆ ವಚನಕಾರರು ಚಿಂತಿಸಿದ್ದರು ಎಂಬುದಕ್ಕೆ ಈ ಮೇಲಿನ ವಚನವೇ ಸಾಕ್ಷಿ.

ಸಾಯುವಂತಹ ಹಸಿವಾದರೂ ಕೂಡ ಎಕ್ಕೆಕಾಯಿ ತಿನ್ನಲು ಸಾಧ್ಯವೆ? ಖಂಡಿತವಾಗಿಯೂ ಇಲ್ಲ. ಇಲ್ಲಿ ಎಕ್ಕೆಕಾಯಿ ಎಂಬುದಕ್ಕೆ ವಚನಕಾರರು ಕಲಬೆರಕೆ ಆಹಾರ ಎಂಬ ಅರ್ಥ ಕೊಟ್ಟಿದ್ದಾರೆ. ಇವತ್ತಿನ ದಿನಗಳಲ್ಲಿ ಪ್ರತಿಯೊಂದು ವಿಷಯುಕ್ತ ಆಹಾರ ಸೇವಿಸುತ್ತಿದ್ದೇವೆ. ಅದು ಊಟದ ಮೂಲಕ ಆಗಿರಬಹುದು ಇಲ್ಲವೆ ಗೊತ್ತಿರದ ರೀತಿಯಲ್ಲಿ ಗಾಳಿಯ ಮುಖಾಂತರ ಆಗಿರಬಹುದು. ದಿನನಿತ್ಯ ನಾವು ಒಂದು ಹೊತ್ತಿನ ಊಟ ಬಿಡುತ್ತೇವೆ ಏನಃ ಸೊಳ್ಳೆ ಓಡಿಸುವ ಸ್ಪ್ರೇಯಿಂದ ಸೊಳ್ಳೆಯನ್ನೋಡಿಸಿದ್ದೇವೆ ಎಂದು ಮಲಗುತ್ತೇವೆ. ಸೊಳ್ಳೆ ಸಾಯುತ್ತವೆ ಎಂದ ಮೇಲೆ ವಿಷ ನಮ್ಮ ದೇಹದಲ್ಲಿ ಒಂದಿಷ್ಟಾದರೂ ಸೇರುತ್ತಿರಬೇಕಲ್ಲ !

ಹೀಗೆಯೇ ರಸಾಯನಿಕವಾಗಿ ಬಳಸುತ್ತಿದ್ದ ವಿಷವೆಂದೇ ಹೇಳುವ ಡಿ.ಡಿ.ಟಿ ಲೋಕಕ್ಕೆ ಕ್ರಿಮಿ ಕೀಟ ಕೊಲ್ಲುವುದೆಂದು ತಿಳಿದು ಕೃಷಿ ಕ್ಷೇತ್ರದಲ್ಲಿ ಜಗಜ್ಜಾಹೀರಾಯಿತು. ಬೇಳೆ ಯಾವುದೇ ಇರಲಿ ಔಷಧ, ಕೀಟನಾಶಕವಾಗಿ ಇದು ಹೆಚ್ಚಾಗಿ ಕೃಷಿ ಕ್ಷೇತ್ರದಲ್ಲಿ ಬಳಸುವ ಕೀಟನಾಶಕ ಇದಾಗಿತ್ತು. ಹೀಗೆ ಸಸ್ಯಕ್ಕೆ ಸಿಂಪಡಿಸಿದ ಡಿ.ಡಿ.ಟಿ. ಇಡೀ ಜೀವಜಾಲದ ಮೇಲಲ್ಲ ತನ್ನ ಇರುಪಿಕೆ ತೋರಿಸಿತು.

ಡಿ.ಡಿ.ಟಿ. ಕೀಟನಾಶಕ ಸಸ್ಯಗಳಿಗೆ ಹೋಗಿ ಮಳೆ ಬಂದು ನೀರಿಗೆ ಸೇರಿ ನೀರಿನಿಂದ ಮೀನಿನ ಹೊಟ್ಟೆ ಸೇರಿ ಮೀನಿನಿಂದ ಈ ಕೀಟನಾಶಕದ ಅಂಶ ವಿಸರ್ಜಿಸದೆ ಮೀನು ಸೇವಿಸಿದ ಅದೆಷ್ಟೋ ಮಹಿಳೆಯರ ಹೊಟ್ಟೆ ಸೇರಿ ಕೊನೆಗೆ ಡಿ.ಡಿ.ಟಿ. ಹಾಲುಣಿಸುವ ತಾಯಂದಿರ ಎದೆಹಾಲಿಗೂ ಸೇರಿ, ಮುಂದೆ ಮಕ್ಕಳಿಗೂ ಕೂಡ. ಇದು ಸಂಶೋಧನೆಯಿಂದ ಕವಿವಲ ಡಿ.ಡಿ.ಟಿ. ಒಂದರ ಬಗ್ಗೆ ಗೊತ್ತಾಯಿತು. ಆದರೆ ಇಂದು ನಾವು ಪ್ರತಿ ಸೆಕೆಂಡಿಗೂ ಕೂಡ ವಿಷಗಾಳಿಯನ್ನೇ ಸೇವಿಸುತ್ತಿದ್ದೇವೆ.

ನೀರಡಿಸಿ ವಿಷವ ಕುಡಿಯಬಹುದೆ? ನೀರಡಿಸಿ ವಿಷ ಕುಡಿಯಬಹುದೆ? ಇವತ್ತಿನ ತಂಪು ಪಾನಿಯಗಳನ್ನು ಕೂಡ ಮಾತನಾಡಿದ್ದಾರೆ. ವಚನದಲ್ಲಿ ಆಕರ್ಶಕವಾಗಿ ತೋರಿಸುವ ಜಾಹಿರಾತುಗಳು ಇಂದಿನ ಯುವಪೀಳಿಗೆಯನ್ನು ಆಕರ್ಶಿಸುತ್ತಿವೆ. ಇದು ನೀರಡಿಸಿ ವಿಷ ಕುಡಿಯದೆ ಇನ್ನೇನು ? ಎಂಬ ಪ್ರಶ್ನೆ ವಚನಕಾರರದು.

. ಸುಣ್ಣ ಮತ್ತು ಹಾಲು ನೋಡಲು ಎರಡರ ಬಣ್ಣ ಒಂದೇ! ಹಾಗೆಂದು ಸುಣ್ಣದ ನೀರು ಕುಡಿಯಲು ಸಾಧ್ಯವೆ? ಸುಣ್ಣದ ತಯ್ಯಲು. ಬಣ್ಣವೊಂದೆ ಎಂದಡೆ ನಂಟುತನಕ್ಕೆ ಉಣ್ಣಬಹುದೆ? ಅಂತರರಾಷ್ಟ್ರೀಯ ಕಂಪನಿಗಳು ಎಲ್ಲೆಂದರಲ್ಲಿ ತಲೆಯೆತ್ತಿ ವಿಷ ಪಾನಿಯ, ವಿಷಯುಕ್ತ ಹವಾಮಾನ ಸೃಷ್ಟಿಸುತ್ತಿರವಾಗ ಈ ಕಂಪನಿಗಳ ಮೇಲ ಯಾವುದೇ ರೀತಿ ಕ್ರಮ ಕೈಗೊಳ್ಳದೇ ಅವುಗಳೊಂದಿಗೆ ನಾವು ಕೈ ಜೋಡಿಸುತ್ತಿದ್ದೇವೆ. ಅಂದರೆ ನಮ್ಮ ಶವಸಂಸ್ಕಾರಕ್ಕೆ ನಮ್ಮ ಗೋರಿ ನಾವೇ ತೋಡಿಕೊಳ್ಳುತ್ತಿದ್ದೇವೆ, ಎಂತಹ ವಿಪರ್ಯಾಸ !

ಬಸವಣ್ಣನ ಇನ್ನೊಂದು ವಚನ ನೋಡುವುದಾದರೆ ಇಡೀ ಜೀವಜಾಲವೇ ಹೇಗೆ ಅಲ್ಲೋಲ ಕಲ್ಲೋಲವಾಗುವುದೆಂಬ ಕಲ್ಪನೆ, ಸತ್ಯಾಸತ್ಯತೆಗಳು ವಚನಕಾರರಿಗೆ ಗೊತ್ತಾಗಿದ್ದವು.

ಒಲೆ ಹತ್ತಿ ಉರಿದಡೆ
ನಿಲಬಹುದಲ್ಲದೆ
ಧರೆ ಹತ್ತಿ ಉರಿದಡೆ

ನಿಲಲುಬಾರದು
ಏರಿ ನೀರುಂಬಡೆ
ಬೇಲಿ ಕೇಯ್ಯ ಮೇವಡೆ
ನಾರಿ ತನ್ನ ಮನೆಯಲ್ಲಿ ಕಳುವಡೆ
ತಾಯಿ ಮಲೆವಾಲು ನಂಜಾಗಿ ಕೊಲುವಡೆ
ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ

ವಚನಕಾರರಿಗೆ ಅದೆಂತಹ ಮುಂಧಾಲೋಚನೆಯಲ್ಲವೇ? ಅನ್ನ ಬೇಯಿಸಿಕೊಂಡ ಒಲೆ ಉರಿಯುತ್ತಿದ್ದರೆ ಆರಿಸಬಹುದು. ಏಕೆಂದರೆ ಅದು ನಮಗೆ ನಿಲುಕುವಷ್ಟೇ ಅಂತರದಲ್ಲಿದೆ. ಧರೆ ಹತ್ತಿ ಉರಿದಡೆ ನಿಲಲುಬಾರದು. ಇವತ್ತಿನ ದಿನಗಳಲ್ಲಿ ಮಂಗಳನ ಅಂಕಣದಲ್ಲಿ ನೀರು ಹರಿದದ್ದು ಕಂಡುಕೊಂಡಿದ್ದೇವೆ. ಚಂದ್ರಲೋಕಕ್ಕೆ ಹೋಗಿ ಬಂದಿದ್ದೇವೆ ಬಾಹ್ಯಾಕಾಶದಲ್ಲಿ ಏನಾಗುತ್ತಿದೆ ಎಂಬುದು ಕಂಡುಕೊಳ್ಳುತ್ತಿದ್ದೇವೆ ವಿನಃ ನಮ್ಮ ಮನೆಯಲ್ಲಿ ಏನಾಗುತ್ತದೆ ಎಂಬುದರ ಕಲ್ಪನೆಯೇ ನಮ್ಮಲ್ಲಿ ಮೂಡುತ್ತಿಲ್ಲ. ಅಣುಬಾಂಬುಗಳ ಯುದ್ಧವೇನಾದರೂ ಆದರೆ ಇಡೀ ದರೆಯೇ ಹತ್ತಿ ಉರಿಯುತ್ತದೆ. ಏರಿ ನೀರುಂಬಡೆ ಬಾವಿಯಿಂದ ನೀರು ಸೇದುವಾಗ ಸೇದಿದ ನೀರು ಏತವೇಕುಡಿದುಬಿಟ್ಟರೆ? ದನಗಳ ಬಾಯಿಂದ ರಕ್ಷಿಸಲು ಹೊಲಕ್ಕೆ ಬೇಲಿ ಹಾಕಿದಾಗ ಆ ಬೇಲಿಯೇ ಇಡೀ ಸಸ್ಯವನ್ನು ಮೆದ್ದಡೆ ಹೆಣ್ಣಾದವಳ ಮನೆಯ ಎಲ್ಲ ಜವಾಬ್ದಾರಿ ಹೊರಬೇಕು. ಅಂಥದ್ದರಲ್ಲಿ ತಾನೇ ಕಳ್ಳತನ ಮಾಡಿದರೆ ಮನೆ ಮನೆಯಾಗಿರಲು ಹೇಗೆ ಸಾಧ್ಯ. ತಾಯಿಯ ಹಾಲೆ ನಂಜಾದರ ಹೇಗೆ ? ಇವತ್ತಿನ ದಿನಗಳಲ್ಲಿ ಪ್ರತಿಯೊಂದು ವಿಷವಾಗಿಯೇ ಪರಿಣಮಿಸುತ್ತಿದೆ. ನಮ್ಮ ಬದುಕಿನಲ್ಲಿ ಸಂತೋಷ ಸಿಗುತ್ತದೆ ಎಂದು ತಿಳಿದು ಭೋಗವಸ್ತುಗಳಿಂದ ನಮಗೆ ಸಂತೋಷ ಸಿಗುತ್ತದೆಂದು ತಿಳಿದು ನಮಗೆ ಹುಚ್ಚು ಹಇಡಿಸಲೆಂದೇ ಬಂದ ಅಂತರ್‌ರಾಷ್ಟ್ರೀಯ ಉತ್ಪಾದನಾ ಕಾರ್ಖಾನೆಗಳು ಅಲ್ಲಿಂದ ಕೊಂಡು ತಂದು ಮನೆಯನ್ನೆಲ್ಲ ತುಂಬಿ ಮಾನವೀಯ ಸಂಬಂಧಗಳನ್ನೆಲ್ಲ ಕಡಿದುಕೊಂಡು ನೆಮ್ಮದಿ ಕಳೆದುಕೊಂಡು. ಕಳೆದ ನೆಮ್ಮದಿ ಈ ಭೋಗವಸ್ತುಗಳಲ್ಲಿ ಹುಡುಕುತ್ತಿದ್ದೇವೆ.

ಇಡೀ ನಿಸರ್ಗವೇ ನಮ್ಮ ಅಧೀನತೆಗೆ ತೆಗೆದುಕೊಂಡಿದ್ದೇವೆ. ಆದರೆ ಒಂದೇ ಒಂದು ಅಣುಬಾಂಬಿನಂತಹ ಅಣುಬಾಂಬನಿಂದ ಇಡೀ ಮನುಕುಲವೇ ನಾಶವಾಗುವುದೆಂಬ ಕಲ್ಪನೆ ನಮಗಿನ್ನು ಬಂದಿಲ್ಲ. ಇಡೀ ನಿಸರ್ಗವೇ ಬುಡಮೇಲಾದರೆ, ಸುನಾಮಿಯಾಗಿರಬಹುದು, ಚಂಡಮಾರುತ ಇಲ್ಲವೆ ಭೀಕರ ಭೂಕಂಪ ಇವುಗಳ ಬಗ್ಗ ವಚನಕಾರರು ಚಿಂತನೆ ನಡೆಸಿರುವುದು ನೋಡಿದರೆ, ಇವತ್ತಿನ ಸಂದಿಗ್ಧ ಪರಿಸ್ಥಿತಿ ವಚನಕಾರರಿಗೆ ಅಂದೆ ಗೊತ್ತಾದಂತೆ ಇತ್ತು ಎನ್ನುವುದಕ್ಕೆ ಇಷ್ಟು ಸಾಕಲ್ಲವೆ !

ಅನುಬಂಧ

ಗ್ರಂಥ ಋಣ

ಗ್ರಂಥ ಋಣ

ರಾಮಕೃಷ್ಣ ಜಿ –ಭಾರತೀಯ ವಿಜ್ಞಾನದ ಹಾದಿ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಅಮರೇಶ ನುಗಡೋಣಿ –ಬಸವಣ್ಣನವರ ವಚನಗಳು, ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಹಿರೇಮಠ ಆರ್.ಸಿ. – ಮಹಾಯಾತ್ರೆ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪುಟ್ಟ ಸ್ವಾಮಿ ಕೃಪಾಕರ ಸೇನಾನಿ. – ಜೀವಜಾಲ, ಹಸಿರು ಪ್ರಕಾಶನ.

ದೇವಿಪ್ರಸಾದ ಚಟ್ಟೋಪಾಧ್ಯಾಯ – ಇದು ಮುಗಿಯದ ಕಥೆ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು.

ದೇವಿಪ್ರಸಾದ ಚಟ್ಟೋಪಾಧ್ಯಾಯ – ದರ್ಶನ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ನಾಗೇಶ ಹೆಗಡೆ –ಪ್ರತಿ ದಿನ ಪರಿಸರ ದಿನ.

ಅಮೀರ ಅಹ್ಮದ್ ಟಿ.ಎಮ್. – ನಮ್ಮ ಪರಿಸರ, ಶ್ರೀಮತಿ ಎಸ್.ಎಮ್.ಫೆಹಮಿದಾ ಬೇಗಮ್, ಬೆಂಗಳೂರು.

ರಾಜೇಂದ್ರ ಚೆನ್ನಿ (ಸಂ.) – ಜಾಗತೀಕರಣ ಒಂದು ಸಮಗ್ರ ಮಂಥನ

ಮಹೇಶನ್ ಮ. – ಜಾಗತೀಕರಣ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ನಾವಲಗಿ ಸಿ.ಕೆ. –ಶರಣ ಸಾಹಿತ್ಯ ಮತ್ತು ಜಾನಪದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

ಶರ್ಮ. ಆರ್.ಎಸ್ –.ಪ್ರಾಚೀನ ಭಾರತದಲ್ಲಿ ಶೂದ್ರರು, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಆನಂದ ಸ್ವಾಮಿ. –ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ, ಸುಭಾಷ ಪಾಳೇಕಾರ., ಅಗ್ನಿ ಪ್ರಕಾಶನ, ಬೆಂಗಳೂರು.

ಚಂದ್ರಶೇಖರ ವಿ. ನಂಗಲಿ. – ಕಾಡು ಮತ್ತು ತೋಪು, ಲೋಹಿಯಾ ಪ್ರಕಾಶನ, ಬಳ್ಳಾರಿ.

ಶಿವರಾಮಯ್ಯ ಪಿ. – ಅಕ್ಷರ ಕಿರಣ ಮಾಲಿಕೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಸ್ವಾಮಿ ಬಿ.ಜಿ.ಎಲ್. –ಸಸ್ಯ ಪುರಾಣ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ನಂಜನ್ನವರ ಎಸ್.ಎಸ್ – ಜ್ವಾಲಾಮುಖಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಕಲಬುರ್ಗಿ ಎಮ್.ಎಮ್.(ಸಂ) – ಬಸವಣ್ಣನವರ ವಚನ ಸಂಪುಟ–೧, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಮಲ್ಲಾಪೂರ ಬಿ.ವ್ಹಿ. (ಸಂ) – ಅಲ್ಲಮ ಪ್ರಭುದೇವರ ವಚನ ಸಂಪುಟ–೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಮಲ್ಲಾಪೂರ ಬಿ.ವ್ಹಿ. (ಸಂ) – ಚೆನ್ನಬಸವಣ್ಣನವರ ವಚನ ಸಂಪುಟ–೩, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ವಿದ್ಯಾಶಂಕರ ಎಸ್. (ಸಂ) – ಸಿದ್ದರಾಮೇಶ್ವರ ವಚನ ಸಂಪುಟ–೪, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ವೀರಣ್ಣ ರಾಜೂರ. (ಸಂ) – ಶಿವಶರಣೆಯರ ವಚನ ಸಂಪುಟ–೫, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಕಲಬುರ್ಗಿ ಎಮ್.ಎಮ್.(ಸಂ) – ಸಂಕೀರ್ಣ ವಚನ ಸಂಪುಟ–೧, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ವಿದ್ಯಾಶಂಕರ ಎಸ್.(ಸಂ) – ಸಂಕೀರ್ಣ ವಚನ ಸಂಪುಟ–೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಹಿರೇಮಠ ಬಿ.ಆರ್. (ಸಂ) – ಸಂಕೀರ್ಣ ವಚನ ಸಂಪುಟ–೩, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಹಿರೇಮಠ ಬಿ.ಆರ್. (ಸಂ) – ಸಂಕೀರ್ಣ ವಚನ ಸಂಪುಟ–೪, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ನಾಗಭೂಷಣಸ್ವಾಮಿ ಓ.ಎಸ್. – ವಚನ ಸಾವಿರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಂಜಾನ ದರ್ಗಾ – ಬಸವ ಪ್ರಜ್ಞೆ, ಲೋಹಿಯಾ ಪ್ರಕಾಶನ, ಬಳ್ಳಾರಿ.

ಕೃಷ್ಣಮೂರ್ತಿ ಕೆ. –

ಮಹೇಶನ – ಜಾಗತೀಕರಣ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಜಗದೀಶ ಕೊಪ್ಪ ಎನ್. – ಜಾಗತೀಕರಣ ಮತ್ತು ಗ್ರಾಮಭಾರತ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ರೇಖಾ ಬನ್ನಾಡಿ – ವಿಜ್ಞಾನ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ನಾಗೇಶ ಹೆಗಡೆ – ಪರಿಸರ ಮಾಲಿನ್ಯ

ವೀರಣ್ಣ ಸಿ. – ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ, ಸಂಪುಟ–೧ ಪ್ರಾಚೀನ ಸಾಹಿತ್ಯ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಶಿವರುದ್ರಪ್ಪ ಜಿ.ಎಸ್.(ಪ್ರ.ಸಂ.) – ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ–೩, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು.

ನಿರಂಜನ ಆರಾಧ್ಯ ಎಚ್.ಎಸ್. – ಪರಿಸರ ಅಧ್ಯಯನ, ಪೃಥ್ವಿ ಪ್ರಕಾಶನ, ತುಮಕೂರು.

ಪಾಟೀಲ್ ಎಸ್.ಎಸ್. (ಸಂ) – ವಚನಗಳಲ್ಲಿ ವೈದ್ಯ – ವಿಜ್ಞಾನ

ವೀರಣ್ಣ ರಾಜೂರ – ವಚನಗಳಲ್ಲಿ ವಿಜ್ಞಾನ, ಬಸವೇಶ್ವರ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಭೈರಪ್ಪ ಕೆ. – ಪರಿಸರ ಪ್ರಜ್ಞೆ

ಮೊಗಳ್ಳಿ ಗಣೇಶ – ದಲಿತರು ಮತ್ತು ಜಾಗತೀಕರಣ, ಕರ್ನಾಟಕ ವಿಶ್ವವಿದ್ಯಾಲಯ, ಹಂಪಿ.

ಶಾಂತರೆಡ್ಡಿ ವ್ಹಿ. – ಹೈದ್ರಾಬಾದ ಕರ್ನಾಟಕದ ಕೃಷಿಗೊಂದು ಕೈಪಿಡಿ, ಕೊತ್ತಲ ಬಸವೇಶ್ವರ ಶಿಕ್ಷಣ ಸಂಸ್ಥೆ, ಸೇಡಂ.

ತಿಪ್ಪೇರುದ್ರಸ್ವಾಮಿ ಎಚ್. – ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ, ಮೈಸೂರು.

ಬಸವರಾಜ ಸಬರದ (ಸಂ) – ಜಾನಪದ ಆಯಾಮಗಳ ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

ಜಯದೇವ ಜಿ.ಎಸ್. – ಪರಿಸರದ ಸ್ವರೂಪ ಇಂದ್ರ ಪ್ರಸ್ಥಾ ಪ್ರಕಾಶನ, ಬೆಂಗಳೂರು.

ಕೃಷ್ಣ ಪ್ರಸಾದ – ಬೀಜ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಕೃಷ್ಣ ಪ್ರಸಾದ – ಬೀಜ, ಅರಣ್ಯ, ಮಣ್ಣು ಮತ್ತು ನೀರು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಮೂರೂರು ಚಂದ್ರ – ಪ್ರ ಪಂಚ ಪರಿಸರ, ಮಧುಚಂದ್ರ ಪ್ರಕಾಶನ, ಬೆಂಗಳೂರು.

ಕೃಷ್ಣಾನಂದ ಕಾಮತ್ – ಸಸ್ಯಪರಿಸರ,

049327

AKSHARA GRANTHALAYA
ACC.NO. 049327